


ವಿಜಯನಗರ ಅಧ್ಯಯನ

ಸಂಪುಟ-೨೨

ಸಂಪಾದಕರು | ಟಿ. ವೆಂಕಟೇಶ್
ಡಾ. ಆರ್. ಗೋಪಾಲ್

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
2020

ವಿಜಯನಗರ ಅಧ್ಯಯನ

ಸಂಪುಟ - ೨೨

ಸಂಪಾದಕರು

ಟಿ. ವೆಂಕಟೇಶ್

ಡಾ. ಆರ್. ಗೋಪಾಲ್

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ವಸ್ತುಪ್ರದರ್ಶನ ಆವರಣ, ಮೈಸೂರು – 570 010

2020

VIJAYANAGARA ADHYAYANA (Vol. 22)
Edited by T. Venkatesh & Dr. R. Gopal, Published by The Commissioner, Department of Archaeology, Museums and Heritage, Mysore - 570 010

First Impression : 2020

Pages : xii+242=254

No. of Copies : 500

Price : Rs. 250/-

Paper Used : 80 GSM Maplitho

Book Size : 1/4 Crown

Cover Page & Layout Design :
G.V. Dhananjaya

Printed at :
LK Press Inc
Bangalore 562 123
Mobile : 8762966760

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – 560 001

ಸಂಖ್ಯೆ : ಮುಮಂ/ಮಾಕಾ/260/2020

ದಿನಾಂಕ : 07-03-2020

ಸಂದೇಶ

ಭಾರತದ ಇತಿಹಾಸದಲ್ಲಿ ವೈಭವದಿಂದ ಮೆರೆದ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯು ಸುವರ್ಣಯುಗವಾಗಿದೆ. ಈ ಸಾಮ್ರಾಜ್ಯದ ಕೀರ್ತಿಯು ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಿಗೂ ಹಬ್ಬಿತ್ತು. ಅನೇಕ ಜನ ವಿದೇಶಿ ಪ್ರವಾಸಿಗರು ಈ ಮಹಾನ್ ಸಾಮ್ರಾಜ್ಯವನ್ನು ಸಂದರ್ಶಿಸಿ, ಇದರ ಬಗೆಗೆ ಕಥನಗಳನ್ನು ಬರೆದಿದ್ದಾರೆ. ಈ ಕಥನಗಳಲ್ಲಿ ವಿಜಯನಗರದ ಸೈನ್ಯಪದ್ಧತಿ, ಸಂಸ್ಕೃತಿ, ಲಲಿತ ಕಲೆಗಳಾದ ಸಂಗೀತ, ಚಿತ್ರಕಲೆ ಇತ್ಯಾದಿಗಳ ಭವ್ಯವಾದ ಚಿತ್ರಣವಿದೆ. ಇಂತಹ ಚಿತ್ರಣವು ವಿಜಯನಗರ ಸಾಮ್ರಾಜ್ಯದ ಇತಿಹಾಸ ಮುಂತಾದವುಗಳ ಬಗೆಗಿನ ಅಧ್ಯಯನಕ್ಕೆ ಮುನ್ನುಡಿಯಾಗಿದೆ. ಇಂತಹ ಅಧ್ಯಯನದ ಆಶಯವನ್ನೇ ಕರ್ನಾಟಕ ಸರ್ಕಾರವು ಮುಂದುವರೆಸಿಕೊಂಡು ಬರುತ್ತಿದೆ.

ಶತಮಾನದ ಹಿಂದೆಯೇ ಬ್ರಿಟಿಷ್ ಅಧಿಕಾರಿಗಳು ಮತ್ತು ಇತರ ಆಸಕ್ತ ವ್ಯಕ್ತಿಗಳು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಹಂಪಿಯ ಸ್ಮಾರಕಗಳು, ಶಾಸನಗಳು, ಶಿಲ್ಪಗಳು ಮುಂತಾದ ಅವಶೇಷಗಳ ವಿವರಗಳನ್ನು ತಮ್ಮ ಬರಹಗಳಲ್ಲಿ ದಾಖಲಿಸಿದ್ದಾರೆ. ಇದರೊಂದಿಗೆ ಪುರಾತತ್ವ ಶೋಧಕರು ಮತ್ತು ಪುರಾತತ್ವ ಇಲಾಖೆಯು ಕೂಡ ಸತತವಾಗಿ ಸಂರಕ್ಷಣಾ ಕಾರ್ಯವನ್ನು, ಶೋಧನೆಗಳನ್ನು ಮುಂದುವರೆಸಿಕೊಂಡು ಬರುತ್ತಿದೆ. ಇಂತಹ ಹಲವು ದೃಷ್ಟಿಕೋನಗಳ ಫಲವಾಗಿ ಹಂಪಿಯು ವಿಶ್ವಪರಂಪರೆಯ ತಾಣವಾಗಿ ಇಡಿಯ ವಿಶ್ವದ ಸೆಳೆದಿದೆ.

ಕರ್ನಾಟಕ ಸರ್ಕಾರದ ಪುರಾತತ್ತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯು ಕಳೆದ ಇಪ್ಪತ್ತನಾಲ್ಕು ವರ್ಷಗಳಿಂದ 'ವಿಜಯನಗರ ಅಧ್ಯಯನ' ಎಂಬ ಹೆಸರಿನಲ್ಲಿ ವಿಚಾರ ಸಂಕಿರಣವನ್ನು ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯವಾಗಿದೆ. ಇಲ್ಲಿ ಸಂಶೋಧಕರಿಂದ ಮಂಡಿತವಾದ ಸಂಪ್ರಬಂಧಗಳನ್ನು ಸಂಕಲಿಸಿ, ವಿಜಯನಗರ ಅಧ್ಯಯನ ಎಂಬ ಹೆಸರಿನಲ್ಲಿ, ಗ್ರಂಥರೂಪದಲ್ಲಿ ಪ್ರತಿವರ್ಷವೂ ಪ್ರಕಟಿಸಲಾಗುತ್ತಿದೆ. ಇದರಿಂದ ವಿಜಯನಗರ ಸಾಮ್ರಾಜ್ಯದ ಅಧ್ಯಯನವು ಮತ್ತಷ್ಟು ಹೊಸಶೋಧಗಳನ್ನು ಕಾಣುತ್ತಿರುವುದು ಕರ್ನಾಟಕಕ್ಕೆ ಹೆಮ್ಮೆಯ ವಿಷಯವಾಗಿದೆ.

ವಿಜಯನಗರ ಸಾಮ್ರಾಜ್ಯದ ಆಡಳಿತವಿದ್ದ, ಭಾರತ ದೇಶದ ಇತರ ರಾಜ್ಯಗಳಲ್ಲಿ ಬಹುಶಃ ಕಾಣದಂತಹ ಈ ಬಗೆಯ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ನಮ್ಮ ರಾಜ್ಯದ ಪುರಾತತ್ತ್ವ ಇಲಾಖೆ ನಡೆಸಿಕೊಂಡು ಬರುತ್ತಿರುವುದು ಪ್ರಶಂಸೆಗೆ ಅರ್ಹವಾಗಿದೆ. ಇದಕ್ಕಾಗಿ ಪುರಾತತ್ತ್ವ ಇಲಾಖೆಯ ಆಯುಕ್ತರಾದ ಶ್ರೀ ಟಿ. ವೆಂಕಟೇಶ್ ಅವರಿಗೂ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರಿಗೂ ಇಲಾಖೆಯ ಸಿಬ್ಬಂದಿ ವರ್ಗದವರಿಗೂ ಹಾಗೂ ಈ ಸಂಪುಟ ಪ್ರಕಟವಾಗಲು ಕಾರಣರಾದ ಸಂಶೋಧಕ ವಿದ್ವಾಂಸರಿಗೂ ಅಭಿನಂದನೆಗಳು ಸಲ್ಲುತ್ತವೆ.

ಈಗ ಪ್ರಕಟವಾಗಿರುವ ವಿಜಯನಗರ ಅಧ್ಯಯನ, ಸಂಪುಟ-22 ಎಂಬ ಈ ಸಂಪುಟವನ್ನು ಇತಿಹಾಸಜ್ಞರು, ಅಧ್ಯಯನಶೀಲರು ಹಾಗೂ ಆಸಕ್ತ ಓದುಗರು ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಸಿ.ಟಿ. ರವಿ
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ,
ಸಕ್ಕರೆ ಸಚಿವರು ಹಾಗೂ ಚಿಕ್ಕಮಗಳೂರು
ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ : 344, 3ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂರವಾಣಿ : 080–2225 1568
2203 3426
ಇ–ಮೇಲ್ : ctrtourism@gmail.com

ಸಂಖ್ಯೆ : ಪ್ರಕಸಂಸಸ/1726/2020

ದಿನಾಂಕ : 10–03–2020

ಸಂದೇಶ

ಇಂದು ವಿಶ್ವಪರಂಪರೆಯ ತಾಣವಾಗಿರುವ ವಿಜಯನಗರದ ರಾಜಧಾನಿಯಾಗಿದ್ದ ಹಂಪಿಯು ಸಮಕಾಲಿನ ಪ್ರಪಂಚದ ಇತಿಹಾಸದಲ್ಲಿ ತನ್ನದೇ ಆದ ಸ್ಥಾನಮಾನವನ್ನು ಉಳಿಸಿಕೊಂಡಿದೆ. ಅಂದಿನ ಕಾಲಮಾನದಲ್ಲಿ, ವಿಜಯನಗರ ಸಾಮ್ರಾಜ್ಯದ ಕೀರ್ತಿ ಕೇವಲ ಭಾರತದಲ್ಲಿ ಮಾತ್ರವಲ್ಲದೆ ದೂರ ದೂರದವರೆಗೂ ಅಂದರೆ ಮಧ್ಯ ಏಷಿಯಾ, ಶ್ರೀಲಂಕಾ ಮೊದಲಾದ ಬಹುದೂರದ ರಾಷ್ಟ್ರಗಳವರೆಗೂ ಹಬ್ಬಿತ್ತು. ವಿಜಯನಗರದ ಬೇರೆ ಬೇರೆ ಅರಸರ ಕಾಲದಲ್ಲಿ ಸಂದರ್ಶಿಸಿದ ಪ್ರವಾಸಿಗರು ಈ ಸಾಮ್ರಾಜ್ಯದ ವೈಭವ, ಕಲೆ, ಸಂಪ್ರದಾಯ, ಹಬ್ಬ, ಹರಿದಿನಗಳು, ರಾಜನ ವ್ಯಕ್ತಿತ್ವ, ಆಡಳಿತ ಕ್ರಮ, ಸೈನ್ಯ ಅದರ ಚಲನವಲನಗಳು ಇತ್ಯಾದಿ ಹತ್ತು ಹಲವು ವಿಷಯಗಳ ವಿವರಗಳನ್ನು ದಾಖಲಿಸಿದ್ದಾರೆ. ಇಂದಿಗೂ ಈ ಸಾಮ್ರಾಜ್ಯದ ಅಧ್ಯಯನ ಅವಿರತವಾಗಿ ಸಾಗಿರುವುದು ಅದರ ವ್ಯಾಪ್ತಿ ಮತ್ತು ಪ್ರಾಮುಖ್ಯತೆಗಳನ್ನು ಮನಗಾಣಿಸುತ್ತಿದೆ.

ಒಂದು ಶತಮಾನದ ಹಿಂದೆ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬ್ರಿಟೀಷ್ ಆಡಳಿತಾಧಿಕಾರಿಗಳು ಹಂಪಿಯ ಸ್ಮಾರಕಗಳನ್ನು ದಾಖಲಾತಿ ಮಾಡುವುದರೊಂದಿಗೆ ಅವುಗಳ ಸಂರಕ್ಷಣಾ ಕಾರ್ಯಗಳನ್ನೂ ಸಹ ಮಾಡಿದುದರ ಫಲದಿಂದಲೇ ಹಂಪಿಯು ವಿಶ್ವಪರಂಪರ ತಾಣವಾಗಿ ವಿಶ್ವದ ಗಮನ ಸೆಳೆಯುವಂತಾಗಿದೆ.

ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದ ಇಲಾಖೆಗಳಲ್ಲಿ ಒಂದಾದ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಕಳೆದ ಇಪ್ಪತ್ತೆರಡು ವರ್ಷಗಳಿಂದ ವಿಜಯನಗರ ಅಧ್ಯಯನ ಮಾಲಿಕೆಯ ವಿಚಾರ ಸಂಕಿರಣಗಳನ್ನು ಆಯೋಜಿಸಿಕೊಂಡು ಬರುತ್ತಿದೆಯಲ್ಲದೆ, ಆ ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಸಂಪ್ರಬಂಧಗಳನ್ನು ಗ್ರಂಥರೂಪದಲ್ಲಿ ಸಂಪಾದಿಸಿ, ಅದನ್ನು ನಿರಂತರವಾಗಿ ಹೊರತರುತ್ತಿರುವುದು ಹೆಮ್ಮೆಯ ಸಂಗತಿ.

ಈ ಬಗೆಯ ಸಂಶೋಧನ ಕಾರ್ಯವು ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿದ್ದ ಇತರ ರಾಜ್ಯಗಳಲ್ಲಿ ಅಷ್ಟಾಗಿ ನೆರವೇರಿರುವಂತೆ ಕಾಣುತ್ತಿಲ್ಲ. ಅದನ್ನು ನಮ್ಮ ಇಲಾಖೆ ಸಾಧ್ಯವಾಗಿಸಿ ತೋರಿಸಿರುವುದು ಪ್ರಶಂಶನೀಯ ಅಂಶ. ಇದಕ್ಕಾಗಿ ವಿಶೇಷವಾಗಿ ವಿಚಾರ ಸಂಕಿರಣದ ಆಯೋಜಕರಾದ ಟಿ. ವೆಂಕಟೇಶ್, ಆಯುಕ್ತರು ಅವರಿಗೂ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರಿಗೂ ಮತ್ತು ಸಿಬ್ಬಂದಿ ವರ್ಗದವರಿಗೂ ಹಾಗೂ ಸಂಪುಟದ ಎಲ್ಲಾ ಸಂಪಾದಕರುಗಳನ್ನು ಅಭಿನಂದಿಸುತ್ತೇನೆ.

ಈ ಸಂಪುಟವನ್ನು ಓದುಗರು ಹಾಗೂ ಇತಿಹಾಸಜ್ಞರು ಮತ್ತು ಅಧ್ಯಯನಾಸಕ್ತರು ಆದರದಿಂದ ಸ್ವಾಗತಿಸುತ್ತಾರೆಂದು ಭಾವಿಸಿದ್ದೇವೆ.

(ಸಿ.ಟಿ. ರವಿ)

ಪ್ರಸ್ತಾವನೆ

ವಿಜಯನಗರ ಸಾಮ್ರಾಜ್ಯದ ಬಗೆಗಿನ ಶಾಸ್ತ್ರೀಯ ಅಧ್ಯಯನವು ಪ್ರಾರಂಭವಾಗಿ ಒಂದು ಶತಮಾನದ ಮೇಲಾಗಿದ್ದರೂ ಇನ್ನೂ ಪುಟಿಯುತ್ತಿರುವ ಚಿಲುಮೆಯಂತೆ ಅಧ್ಯಯನಗಳು ನಡೆಯುತ್ತಲೇ ಇರುವುದು ವಿಶೇಷವಾಗಿ ಪರಿಗಣಿಸಬೇಕಾದ ಅಂಶವಾಗಿದೆ. ಈ ಅಧ್ಯಯನಗಳಲ್ಲಿ ಬಹುತೇಕವು ಪ್ರಕಟವಾಗಿದ್ದು, ಆ ಮಹಾನ್ ಸಾಮ್ರಾಜ್ಯದ ರಾಜಕೀಯ, ಆರ್ಥಿಕತೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಭವ್ಯ ಪರಿಚಯವನ್ನು ಮಾಡಿಕೊಡುತ್ತದೆ. ಇಂತಹ ಮಹಾನ್ ಸಾಮ್ರಾಜ್ಯದ ಅವಶೇಷಗಳು, ಸ್ಮಾರಕಗಳು ಅನೇಕ ಚದರ ಕಿಲೋಮೀಟರ್‌ಗಳಷ್ಟು ಪ್ರದೇಶದಲ್ಲಿ ಹರಡಿವೆ. ಇವುಗಳ ಸಂರಕ್ಷಣಾ ಕಾರ್ಯವನ್ನು ಭಾರತೀಯ ಪುರಾತತ್ತ್ವ ಇಲಾಖೆಯ ಜೊತೆಗೆ ಕರ್ನಾಟಕ ರಾಜ್ಯದ ಪುರಾತತ್ತ್ವ ಇಲಾಖೆಯು 1979ರಲ್ಲಿ ಪ್ರಾರಂಭಿಸಿತು. ಈ ಯೋಜನೆಯ ಅಂಗವಾಗಿ ನಡೆದ/ನಡೆಯುತ್ತಿರುವ ಕಾರ್ಯಗಳು ವಿಶ್ವಸಮುದಾಯದ ಗಮನವನ್ನು ಸೆಳೆದು ಹಂಪೆಯು ವಿಶ್ವಪಾರಂಪರಿಕ ಸ್ಥಳವಾಗಿ ಗುರುತಿಸಲ್ಪಟ್ಟಿದೆ.

ಕರ್ನಾಟಕ ಸರ್ಕಾರದ ವತಿಯಿಂದ ಪ್ರತಿ ವರ್ಷವು ಹಂಪಿ ಉತ್ಸವ ನಡೆಯುತ್ತಿರುವುದು ಗಮನಾರ್ಹವಾದ ಅಂಶವಾಗಿದೆ. ಇದರ ಅಂಗವಾಗಿ ನಮ್ಮ ಪುರಾತತ್ವ ಇಲಾಖೆಯ ವತಿಯಿಂದ 1994–95ನೆಯ ಸಾಲಿನಿಂದ ವರ್ಷ ವರ್ಷವೂ ವಿಜಯನಗರ ಅಧ್ಯಯನವೆಂಬ ಹೆಸರಿನಲ್ಲಿ ವಿಚಾರಸಂಕಿರಣಗಳನ್ನು ಯಶಸ್ವಿಯಾಗಿ, ಹಂಪೆಯಲ್ಲಿಯೇ ನಡೆಸಿಕೊಂಡು ಬರಲಾಗುತ್ತಿದೆ. ಈ ವಿಚಾರಸಂಕಿರಣಗಳು ಕೆಲವೊಮ್ಮೆ ಬದಲಾದ ವೇಳಾಪಟ್ಟಿಗಳಲ್ಲಿ ನಿರಂತರವಾಗಿ ನಡೆದು, ಆಯಾ ವರ್ಷಗಳಲ್ಲಿ ಸಂಶೋಧಕರಿಂದ ಮಂಡನೆಯಾದ ಸಂಪ್ರಬಂಧಗಳು, ಮರುವರ್ಷದ ಉತ್ಸವದ ಸಮಯದಲ್ಲಿ ಪುಸ್ತಕ ರೂಪದಲ್ಲಿ, ವಿಜಯನಗರ ಅಧ್ಯಯನವೆಂಬ ಹೆಸರಿನಲ್ಲಿ ಪ್ರಕಟವಾಗುತ್ತಿದೆ. ಇದರಲ್ಲಿನ ಸಂಪ್ರಬಂಧಗಳು ಶಾಸನಗಳು, ನಾಣ್ಯಗಳು, ವಾಸ್ತುಶಿಲ್ಪ, ಶಿಲ್ಪಕಲೆ, ಸಾಹಿತ್ಯ ಮುಂತಾದ ವಿಷಯಗಳನ್ನು ಕುರಿತದ್ದಾಗಿವೆ.

ಪ್ರಸ್ತುತ ಪ್ರಕಟವಾಗುತ್ತಿರುವ ವಿಜಯನಗರ ಅಧ್ಯಯನ, ಸಂಪುಟ–22 ರಲ್ಲಿ ಮೇಲಿನ ಹಲವು ವಿಷಯಗಳನ್ನು ಒಳಕೊಂಡಿರುವ ಅನೇಕ ಸಂಪ್ರಬಂಧಗಳಿವೆ. ಕೆಲವು ಸಂಪ್ರಬಂಧಗಳಲ್ಲಿ ಅನೇಕ ಪ್ರಮುಖವಾದ ಹೊಸ ಶೋಧಗಳು ದಾಖಲಾಗಿರುವುದನ್ನು ಗಮನಿಸಬಹುದಾಗಿದೆ. ಸಂಶೋಧಕರು ನೀಡಿರುವ ಸಂಪ್ರಬಂಧಗಳಲ್ಲಿರುವ ಕೆಲವೊಂದು ಅನಗತ್ಯವೆನಿಸುವಂತಹ ವಿವರಗಳನ್ನು ಇಲ್ಲಿ ತಕ್ಕಮಟ್ಟಿಗೆ ಸರಿಪಡಿಸಲಾಗಿದೆ. ಇಂತಹ ಸಂಪುಟವನ್ನು ಸಂಪಾದಿಸಿ ಹೊರತರುವಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ಹಲವರು ಸಂಶೋಧಕ ವಿದ್ವಾಂಸರುಗಳು ತಮ್ಮ ಅಮೂಲ್ಯ ನೆರವನ್ನು ನೀಡಿರುತ್ತಾರೆ. ಜೊತೆಗೆ ಉಪನಿರ್ದೇಶಕರ ಕಚೇರಿ, ಕಮಲಾಪುರ (ಹಂಪೆ), ಇಲ್ಲಿನ ಸಿಬ್ಬಂದಿ ವರ್ಗದವರು ಹಾಗೂ ಕೇಂದ್ರ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಕೂಡ ಅಮೂಲ್ಯ ಸಹಕಾರವನ್ನು ನೀಡಿರುತ್ತಾರೆ. ವಸ್ತುಸಂಗ್ರಹಾಲಯಗಳ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರು ಈ ಸಂಪುಟದ ಸಂಪಾದಕತ್ವದ ಹೊಣೆಯನ್ನು ಹೊತ್ತುಕೊಂಡು ಅಚ್ಚುಕಟ್ಟಾಗಿ ನಿಭಾಯಿಸಿರುತ್ತಾರೆ ಮತ್ತು ಈ ಸಂಪುಟವು ಹೊರಬರುವಲ್ಲಿ ಬಹಳವಾಗಿ ಶ್ರಮಿಸಿರುತ್ತಾರೆ. ಈ ಪುಸ್ತಕದ ಮುದ್ರಣದ ಕಾರ್ಯವನ್ನು ಎಲ್.ಕೆ. ಪ್ರೆಸ್ ಇಂಕ್ ವಹಿಸಿಕೊಂಡು ಸುಂದರವಾಗಿ, ಮುದ್ರಿಸಿ ಕೊಟ್ಟಿರುತ್ತಾರೆ. ಇವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ, ಈ ಗ್ರಂಥವನ್ನು ಎಲ್ಲರೂ ಆದರದಿಂದ ಸ್ವಾಗತಿಸುತ್ತಾರೆಂದು ಆಶಿಸಲಾಗಿದೆ.

– **ಶ್ರೀ ಟಿ. ವೆಂಕಟೇಶ್** ಕೆ.ಎ.ಎಸ್.
ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

ಪರಿವಿಡಿ

22ನೇ ವಿಜಯನಗರ ಅಧ್ಯಯನ ವಿಚಾರ ಸಂಕಿರಣ ಸಮ್ಮೇಳನದ ಅಧ್ಯಕ್ಷ ಭಾಷಣ

– ಡಾ. ಆರ್.ಎಮ್. ಷಡಕ್ಷರಯ್ಯ

ಪ್ರಸ್ತುತ ವರ್ಷದ ಹಂಪಿ ಉತ್ಸವದ ಸಂದರ್ಭದಲ್ಲಿ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವಿಜಯನಗರ ಅಧ್ಯಯನ ಕುರಿತು ಏರ್ಪಡಿಸಿದ 22ನೇ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಹೊಸಪೇಟೆಯ ಶಾಸಕರಾದ ಶ್ರೀ ಆನಂದಸಿಂಗ್ ಅವರೇ, ಅತಿಥಿಗಳಾದ ಹಂಪೆಯ ಪಟ್ಟಣ ಪಂಚಾಯತಿ ಅಧ್ಯಕ್ಷರೇ, ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರಾ ಇಲಾಖೆಯ ಉಪನಿರ್ದೇಶಕರಾದ ಡಾ. ವಾಸುದೇವ ಅವರೇ, ಯುವಮಿತ್ರ ಶ್ರೀ ಮಂಜನಾಯ್ಕ ಅವರೇ ಮತ್ತು ಇನ್ನಿತರ ಗಣ್ಯಮಾನ್ಯರೆ. ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ವಿದ್ವಾಂಸರೇ, ಸಂಶೋಧಕರೇ, ವಿದ್ಯಾರ್ಥಿಗಳೇ, ಮಿತ್ರರೇ ಮತ್ತು ಸಾರ್ವಜನಿಕರೇ ನನ್ನ ಧರ್ಮಪತ್ನಿ ಡಾ. ಸೌಭಾಗ್ಯ ಅವರೇ, ನನ್ನ ಸೊಸೆ ಶ್ರೀಮತಿ ಶುಭಾ ಸಂದೀಪ ಅವರೇ, ನಿಮಗೆಲ್ಲ ನನ್ನ ನಮಸ್ಕಾರಗಳು. ಇಂದಿನ 22ನೇ ವಿಚಾರ ಸಂಕಿರಣಕ್ಕೆ ನನ್ನನ್ನು ಸರ್ವಾಧ್ಯಕ್ಷರನ್ನಾಗಿ ನೇಮಿಸಿದ್ದು ನನಗೆ ಅತೀವ ಸಂತೋಷವಾಗಿದೆ. ಅದಕ್ಕಾಗಿ ನಿಮಗೆ, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರಿಗೆ, ನಿರ್ದೇಶಕರಾದ (ವಸ್ತುಸಂಗ್ರಹಾಲಯಗಳು) ಡಾ. ಆರ್. ಗೋಪಾಲ, ಉಪನಿರ್ದೇಶಕ ಶ್ರೀ ಶಿವಪ್ಪ, ಡಾ. ವಾಸುದೇವ, ಡಾ. ಮಂಜನಾಯ್ಕ ಅವರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಇದಕ್ಕೆ ಈ ಕೆಳಗಿನ ಕೆಲವು ಕಾರಣಗಳು ಹಿನ್ನೆಲೆ ಆಗಿರಬಹುದು. ನನ್ನ ಪುರಾತತ್ವ ಕಾರ್ಯವು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ., ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ಹಾಗೂ ಸ್ನಾತಕೋತ್ತರ ಡಿಪ್ಲೊಮಾ ಇನ್ ಎಪಿಗ್ರಫಿ ತರಗತಿಗಳನ್ನು ಮುಗಿಸಿದ ಬಳಿಕ ಹಂಪಿಯಿಂದಲೇ ನನ್ನ ಸೇವೆಯು 1976ರಿಂದ ಆರಂಭವಾಯಿತು. ಆ ಬಳಿಕ ಗುಲ್ಬರ್ಗಾ ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಅಂದಿನಿಂದ ಇಂದಿನವರೆಗೆ ಕನ್ನಡ ನಾಡಿನಲ್ಲಿ ಇತಿಹಾಸ ಮತ್ತು ಪುರಾತತ್ವ ಕ್ಷೇತ್ರಕಾರ್ಯದಲ್ಲಿ ಸಂಶೋಧನೆ, ಉತ್ಖನನ, ಅನ್ವೇಷಣೆ, ಅಧ್ಯಯನ, ಪ್ರಕಟಣೆ, ವಸ್ತುಸಂಗ್ರಹಾಲಯ ನಿರ್ವಹಣೆ, ಆಡಳಿತ ಅನುಭವ, ಬೋಧನೆ, ವಿದೇಶಗಳಲ್ಲಿ ಪಡೆದ ತರಬೇತಿ ಮುಂತಾದ ಸುಮಾರು 42 ವರ್ಷಗಳ ಯಶಸ್ವಿ ಸೇವೆ ಒಂದೆಡೆ ಇದೆ. ಇತಿಹಾಸ ಪೂರ್ವ ಕಾಲದಿಂದ ವಿಜಯನಗರೋತ್ತರ ಕಾಲಾವಧಿಯವರೆಗಿನ ಪುರಾತತ್ವ, ಸ್ಮಾರಕ, ನೆಲೆ, ಶಿಲ್ಪ, ಶಾಸನ, ನಾಣ್ಯ, ಪುರಾವೆಗಳ ಶೋಧನೆ, ಅಧ್ಯಯನ ಇನ್ನೊಂದೆಡೆ ಇದೆ. ಈ ಹಿಂದೆ ಈ ವಿಭಾಗವು ನೇಮಿಸಿದ ರಾಜ್ಯಮಟ್ಟದ ತಮ್ಮ ಎರಡು ಪ್ರತಿಷ್ಠಿತ ಸಮಿತಿಗಳಲ್ಲಿ ಒಬ್ಬ ಸದಸ್ಯನಾಗಿ ಸೇವೆಸಲ್ಲಿಸಿದ್ದು, ಕದಂಬರ ಮತ್ತೊಂದು ರಾಜಧಾನಿಯಾದ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಹಲಸಿಯಲ್ಲಿ ಈ ವಿಭಾಗದ ಸಹಯೋಗದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ 2005–08ರವರೆಗೆ ನಿರ್ದೇಶಕನಾಗಿ ಉತ್ಖನನ ನಡೆಸಿದ್ದು ಮತ್ತು ನಿವೃತ್ತನಾದ ಬಳಿಕ ಈ ವಿಭಾಗದ ವತಿಯಿಂದ ಹಾವೇರಿ ಜಿಲ್ಲೆಯ ಹಾನಗಲ್ಲಿನ ಕುಂತಿದಿಬ್ಬ ಉತ್ಖನನವನ್ನು ನಡೆಸಿದ್ದು ಮತ್ತೊಂದೆಡೆ ಇದೆ.

ಕಳೆದ 21 ವರ್ಷಗಳಲ್ಲಿ ಈ ವಿಭಾಗವು ಏರ್ಪಡಿಸಿದ 21 ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳಲ್ಲಿ 20 ವರ್ಷಗಳ 20 ಸಂಪುಟಗಳು ಪ್ರತಿವರ್ಷ ಒಂದರಂತೆ ನಿಗದಿತ ಸಮಯದಲ್ಲಿ ಹೊರತರಲಾಗಿದೆ. ವಿಜಯನಗರ ಚರಿತ್ರೆಗೆ ಸೀಮಿತವಾದ ಈ ಸಂಪುಟಗಳಲ್ಲಿ ಹಲವಾರು ನನ್ನ ಲೇಖನಗಳಿವೆ. ಈ ಸಂಪುಟಗಳಲ್ಲಿ ಅನೇಕ ಹೊಸ ಹೊಸ ವಿಷಯಗಳು ಹೊರಬಂದಿರುವುದು ಗಮನಾರ್ಹ ಸಂಗತಿಯಾಗಿದೆ. ಅದರಲ್ಲಿನ ಸಂಶೋಧನ ಲೇಖನಗಳನ್ನು ಅನೇಕ ಹಿರಿ–ಕಿರಿಯ ಸಂಶೋಧಕರು ಬರೆದಿರುವರು. ಕೆಲವು ವಿಚಾರ ಸಂಕಿರಣಗಳ ಸರ್ವಾಧ್ಯಕ್ಷರ ಭಾಷಣಗಳಿವೆ. ಹೆಚ್ಚಿನ ಈ ಸಂಪುಟಗಳನ್ನು ಡಾ. ಆರ್. ಗೋಪಾಲ ಅವರು ಇನ್ನಿತರರ ಜೊತೆಯಲ್ಲಿ ಸಂಪಾದಿಸಿದ್ದು ಗಮನಾರ್ಹ ಕೆಲಸವಾಗಿದೆ. ಇಲ್ಲಿಯವರೆಗೆ ಈ ವಿಷಯದ ಬಗ್ಗೆ ಸಾಕಷ್ಟು ಶ್ರಮಪಟ್ಟು ಏರ್ಪಡಿಸಿದ ವಿಚಾರಸಂಕಿರಣಕ್ಕೆ ಈ ಲೇಖನಗಳು ನ್ಯಾಯವನ್ನು ಒದಗಿಸಿವೆ. ಅದಕ್ಕಾಗಿ ಲೇಖಕರಿಗೆ ಮತ್ತು ಸರ್ವಾಧ್ಯಕ್ಷರ ಮತ್ತು ಈ ವಿಭಾಗದ ಎಲ್ಲಾ ಅಧಿಕಾರಿ ಮಿತ್ರರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ನಾನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ವಿಭಾಗದಲ್ಲಿ ಎಂ.ಎ. ಮತ್ತು ಡಿಪ್ಲೋಮಾ ಇನ್ ಎಫಿಗ್ರಾಫಿ ತರಗತಿಗಳನ್ನು 1976 ರಲ್ಲಿ ಮುಗಿಸಿದ ಬಳಿಕ ಮೊಟ್ಟ ಮೊದಲ ನನ್ನ ಸೇವೆಯು ಆರಂಭವಾಗಿದ್ದು ಹಂಪಿಯಲ್ಲಿ ನಡೆಯುತ್ತಿದ್ದ ಕೇಂದ್ರ ಪುರಾತತ್ವ ಸರ್ವೇಕ್ಷಣಾ ವಿಭಾಗದ ಉತ್ಖನನದಿಂದ ಆಗಿನ ಈ ವಿಭಾಗದ ಅಧೀಕ್ಷಕರಾಗಿದ್ದ ಹೆಸರಾಂತ ವಿದ್ವಾಂಸ ಡಾ. ಎಸ್.ಆರ್. ರಾವ್ ಅವರು ಇದರಲ್ಲಿ ಸೇವೆ ಸಲ್ಲಿಸಲು ಅವಕಾಶವನ್ನು ಕಲ್ಪಿಸಿದರು. ಅಲ್ಲಿಯ ಉತ್ಖನನದಲ್ಲಿ ತಾತ್ಕಾಲಿಕವಾಗಿ ಸೈಟ್ ಸುಪರ್‌ವೈಸರ್ ಆಗಿ 1976–77 ರ ಅವಧಿಯಲ್ಲಿ ಸೇವೆಗೈದ ನೆನಪೇ ನನಗೆ ಈಗ ಬರುತ್ತಿದೆ. ಈ ಸೇವೆಯ ನೆಪದಿಂದ ಅನೇಕ ಹಿರಿ–ಕಿರಿಯ ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಯವರು ಪರಿಚಯವಾದರು. ಅವರಲ್ಲಿ ಡಾ. ಕೆ.ಪಿ. ಪೂಣಚ್ಚ, ಡಾ. ಎಸ್.ಕೆ.ಜೋಷಿ, ಶ್ರೀ ರಾಯಚೂರ, ಶ್ರೀ ಶಂಕರ, ಶ್ರೀ ಕೇಶವ, ಶ್ರೀ ಗಂಗಾಧರ, ಶ್ರೀ ಓಂಕಾರ ಮುಂತಾದವರು ಪ್ರಮುಖರು. ರಜೆ ದಿನ ರವಿವಾರದಲ್ಲಿ ಅಥವಾ ಇನ್ನಿತರ ಸರ್ಕಾರಿ ರಜಾ ದಿನಗಳಲ್ಲಿ ಹಂಪೆ ಮತ್ತು ಉಜ್ಜಯಿನಿಗಳಲ್ಲಿ ಸರ್ವೇಕ್ಷಣೆ ಕಾರ್ಯವನ್ನು ಕೈಗೊಳ್ಳುತ್ತಿದ್ದೆನು. ಅಲ್ಲಿನ ದೇವಾಲಯ, ಕೋಟೆ, ಶಾಸನ ಮತ್ತು ಶಿಲ್ಪಗಳನ್ನು ಇನ್ನಿತರ ಸ್ಮಾರಕಗಳನ್ನು ಹಾಗೂ ಇತಿಹಾಸಪೂರ್ವದ ನೆಲೆಗಳನ್ನು ಹುಡುಕಿ ಅಧ್ಯಯನ ನಡೆಸುತ್ತಿದ್ದೆನು. ಈ ಕಾರಣದಿಂದ ಇತಿಹಾಸ ಮತ್ತು ಪುರಾತತ್ವ ವಿಷಯದ ಬಗ್ಗೆ ನನಗೆ ಇನ್ನೂ ಹೆಚ್ಚು ಒಲವು ಮೂಡಲು ಸಾಧ್ಯವಾಯಿತು.

ನನ್ನ ಮನೆದೇವರಾದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಉಜ್ಜಯಿನಿ ಶ್ರೀ ಮರುಳಸಿದ್ದೇಶ್ವರ ದೇವಾಲಯದ ದರ್ಶನಕ್ಕೆ ಪದೇ ಪದೇ ಹೋದಾಗ. ಅಲ್ಲೊಂದು ಪ್ರಕಟಿತ ಶಾಸನವನ್ನು ಪ್ರತಿ ತೆಗೆದು ಅದನ್ನು ಓದಿದೆನು. ಅದರ ಪಾಠವನ್ನು ಪ್ರಕಟಿತ ಕೃತಿಯಲ್ಲಿ ಪರಿಶೀಲಿಸಿದಾಗ ಅರ್ಧಕ್ಕಿಂತ ಹೆಚ್ಚಿನ ಭಾಗವುಅದು ಒಡೆದಿದೆ ಎಂದು ವರದಿಯಾಗಿತ್ತು. ಒಟ್ಟಾರೆ ಅಲ್ಲಿನ 1268ರಿಂದ 1565ರವರೆಗಿನ ಶಾಸನಗಳಿಂದ ಈ ದೇವಾಲಯದ ಮೂಲ ಹೆಸರು ಮಲ್ಲಿಕಾರ್ಜುನ ಎಂದು ಉಲ್ಲೇಖಿಸಿದ್ದು ಆಶ್ಚರ್ಯವೆನಿಸಿತು. ಅದರಲ್ಲಿನ ವಾಸ್ತು ಶಿಲ್ಪಕಲೆಯ ಅಧ್ಯಯನವನ್ನು ಕೈಗೊಂಡಾಗ ಅದರಲ್ಲಿನ ಅನೇಕ ಶೈವ ಯತಿ ಶಿಲ್ಪಗಳು ವಿಶಿಷ್ಟವಿರುವುದು ನನಗೆ ಇನ್ನೂ ಹೆಚ್ಚು ಕುತೂಹಲವನ್ನು ಕೆರಳಿಸಿದವು. ಈ ನನ್ನ ಅಧ್ಯಯನದ ವರದಿ, ಶಾಸನಗಳ ಪ್ರತಿ, ಓದಿದ ಪಾಠಗಳನ್ನು ತೆಗೆದುಕೊಂಡು ಮೈಸೂರಿಗೆ ನಡೆದೆನು. ಆಗ ಅಲ್ಲಿನ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳ ವಿಭಾಗದಲ್ಲಿ ನಿರ್ದೇಶಕರಾಗಿದ್ದ ಡಾ. ಎಂ.ಎಸ್. ನಾಗರಾಜರಾವ್ ಅವರು ನನಗೆ ಅರಮನೆಯಲ್ಲಿ ತಾತ್ಕಾಲಿಕವಾಗಿ ದಸರಾ ಹಬ್ಬದ ಗೈಡ್ ಲಕ್ಚರ್ ಆಗಿ ನೇಮಿಸಿಕೊಂಡರು. ಅದು ಮುಗಿದ ಬಳಿಕ ಧಾರವಾಡಕ್ಕೆ ಆಗಮಿಸಿ ಗುರುಗಳಾದ ಡಾ. ಎಸ್.ಹೆಚ್. ರಿತ್ತಿ ಅವರಿಗೆ ಉಜ್ಜಯಿನಿಯ ದೇವಾಲಯದಲ್ಲಿನ ಅರ್ಧಮರ್ಧ ಪ್ರಕಟವಾದ ಶಾಸನದ ಪ್ರತಿ ಮತ್ತು ನಾನು ಓದಿದ ಅದರ ಸಂಪೂರ್ಣ ಪಾಠವನ್ನು ತೋರಿಸಿದೆನು. ಆ ಕಾರ್ಯವನ್ನು ನೋಡಿ ಅವರು ಸಂತೋಷ ಪಟ್ಟರು. ಈ ಕಾರಣದಿಂದ ಅವರು ತಮ್ಮ ವಿಭಾಗದಲ್ಲಿನ ಐಸಿಹೆಚ್‌ಆರ್ ಯೋಜನೆಯಲ್ಲಿ ತಾತ್ಕಾಲಿಕವಾಗಿ ಸಂಶೋಧನ ಅಭ್ಯರ್ಥಿಯೆಂದು ನೇಮಿಸಿಕೊಂಡರು. ಅದರ ಪ್ರಕಾರ ನಾನು ಶಾಸನಗಳ ಸರ್ವೇಕ್ಷಣೆಯನ್ನು ಬೀದರ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ 1978ರಲ್ಲಿ ನಿರ್ವಹಿಸಿ ಅನೇಕ ಹೊಸ ಶಾಸನಗಳನ್ನು, ದೇವಾಲಯಗಳನ್ನು, ಶಿಲ್ಪಗಳನ್ನಲ್ಲದೆ

ಇತಿಹಾಸ ಪೂರ್ವದ ಹಲವಾರು ನೆಲೆಗಳನ್ನು ಶೋಧಿಸಿದೆನು. ಈ ಶೋಧನೆಗಳು ವಿಭಾಗದ ಗುರುಗಳಾದ ಡಾ. ಅ. ಸುಂದರ ಮತ್ತು ಡಾ. (ಶ್ರೀಮತಿ) ಎಸ್. ಎಲ್. ಶಾಂತಕುಮಾರಿ ಮತ್ತು ಡಾ. ಬಿ.ಕೆ. ಗುರುರಾಜರಾವ್ ಅವರಿಗೆ ಮಹತ್ವವೆನಿಸಿದವು. ಕೊನೆಗೆ ಬೀದರ ಜಿಲ್ಲೆಯ ಪುರಾತತ್ವ ಎಂಬ ವಿಷಯದ ಬಗ್ಗೆ ಪಿಎಚ್.ಡಿ. ಸಂಶೋಧನೆ ಕೈಕೊಳ್ಳಲು ಗುರುಗಳಾದ ಡಾ. ಅ. ಸುಂದರ ಅವರ ಮಾರ್ಗದರ್ಶನದಲ್ಲಿ ನೊಂದಣಿ ಆಯಿತು. ಈ ಕಾರ್ಯಕ್ಕೆ ದೆಹಲಿಯ ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವತಿಯಿಂದ ಈ ವಿಭಾಗದಿಂದಲೇ ಪಿಹೆಚ್.ಡಿ. ಸಂಶೋಧನೆಯನ್ನು ಮಾಡಲು ಶಿಷ್ಯವೇತನವನ್ನು ಮಂಜೂರು ಮಾಡಿಸಿದರು. ಅಲ್ಲಿಂದಲೇ ನನ್ನ ವ್ಯವಸ್ಥಿತ ಮತ್ತು ನಿರ್ದಿಷ್ಟ ಪುರಾತತ್ವ ಸರ್ವೇಕ್ಷಣ, ಅಧ್ಯಯನ, ಪ್ರಕಟಣಾ ಕಾರ್ಯ ಆರಂಭವಾದವು. ಈ ಅಭಿರುಚಿಯಿಂದಾಗಿ ಇಲ್ಲಿಯವರೆಗೆ ನಾನು 3560 ಕ್ಕೂ ಹೆಚ್ಚಿನ ಸಂಖ್ಯೆಯ ಹಳ್ಳಿಗಳ ಪುರಾತತ್ವ ಕ್ಷೇತ್ರಕಾರ್ಯವನ್ನು ನಡೆಸಿ ನೂರಾರು ಇತಿಹಾಸಪೂರ್ವ ನೆಲೆಗಳನ್ನು, ಇತಿಹಾಸ ಕಾಲದ ನೆಲೆಗಳನ್ನು, ದೇವಾಲಯ, ಶಾಸನ, ಶಿಲ್ಪ ಮುಂತಾದ ಪುರಾವೆಗಳನ್ನು ಬೆಳಕಿಗೆ ತರಲು ಸಾಧ್ಯವಾಯಿತು. ನನ್ನ ಶಿಷ್ಯವೇತನ ಮಧ್ಯದಲ್ಲಿ ವರ್ಷಗಟ್ಟಲೆ ತಡೆಗಟ್ಟಿದ್ದರಿಂದ ಆಗ ನಾನು ಅನೇಕ ರೀತಿಯಲ್ಲಿ ತೊಂದರೆಗೆ ಒಳಗಾದೆನು. ಆ ಸಂದರ್ಭದಲ್ಲಿ ಗುರುಗಳಾದ ಡಾ. ಅ. ಸುಂದರ ಅವರು ಧೈರ್ಯ ತುಂಬಿ ತನುಮನ ಧನದಿಂದ ಸಹಾಯ ಮಾಡಿದರು. ಇದಲ್ಲದೆ ತಂದೆ-ತಾಯಿಗಳು ಮತ್ತು ಮಿತ್ರರಾದ ಶ್ರೀ ಎಂ. ಎ. ಜವಳಿ ಹಾಗೂ ಶ್ರೀ ಎಂ. ಎಂ. ಸತ್ಯಪ್ರಕಾಶ ನನ್ನ ಸಹಾಯಕ್ಕೆ ನಿಂತರು. ಈ ಹಿನ್ನೆಲೆಯಿಂದ 1985ರಲ್ಲಿ ಪಿಎಚ್.ಡಿ. ಪದವಿಯನ್ನು ಮುಗಿಸಿದೆನು. ಅಲ್ಲಿಂದ ಇಲ್ಲಿಯವರೆಗೂ ಇತಿಹಾಸ ಮತ್ತು ಪುರಾತತ್ವ ಕ್ಷೇತ್ರದಲ್ಲಿ ಸಂಶೋಧಕನಾಗಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಅಧ್ಯಾಪಕನಾಗಿ (1985-88) ಬಳಿಕ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ 1988ರಿಂದ 2012ರವರೆಗೆ ಇತಿಹಾಸ ಮತ್ತು ಪುರಾತತ್ವದ ರೀಡರ್ ಬಳಿಕ 1997ರಿಂದ ಪ್ರಾಧ್ಯಾಪಕನಾಗಿ ಹಾಗೂ 18 ವರ್ಷಗಳ ಕಾಲ ಈ ಸಂಸ್ಥೆಯ ಪ್ರಭಾರಿ ನಿರ್ದೇಶಕನಾಗಿ ಸೇವೆ ಸಲ್ಲಿಸಿದ ತೃಪ್ತಿ ನನಗಿದೆ.

ಇದೇ ವಿಭಾಗವು ಏರ್ಪಡಿಸಿದ ಜಿಲ್ಲಾವಾರು ಇತಿಹಾಸ ಮತ್ತು ಪುರಾತತ್ವ ವಿಚಾರ ಸಂಕಿರಣಗಳಲ್ಲಿ ಸುಮಾರು 16 ಜಿಲ್ಲೆಗಳ ಸ್ಮಾರಕ ಪುರಾವೆಗಳ ಅಧ್ಯಯನವನ್ನು ಪ್ರಕಟಿಸಿದ್ದು ಮತ್ತು ವಿಜಯನಗರ ಅಧ್ಯಯನ ಸಂಪುಟಗಳಲ್ಲೂ ನನ್ನ ಲೇಖನಗಳು ಪ್ರಕಟವಾಗಿದ್ದು ಸಂತಸ ತಂದಿವೆ.

ಈ ರೀತಿ ಅನುಭವಗಳುಳ್ಳ ನನಗೆ ಪ್ರಸ್ತುತ ವಿಚಾರ ಸಂಕಿರಣದಲ್ಲಿ ಒಬ್ಬ ಸರ್ವಾಧ್ಯಕ್ಷನಾಗಿ ವಿಜಯನಗರ ಚರಿತ್ರೆಯ ಯಾವ ವಿಷಯದ ಬಗ್ಗೆ ಪರಿಚಯಿಸಲು ಒತ್ತು ನೀಡಬೇಕೆಂಬ ಚಿಂತನೆ ನನ್ನಲ್ಲಿ ನಡೆಯಿತು. ಕೊನೆಗೆ ನನಗೆ ಅರಿವಾಗಿದ್ದು ನನ್ನ ಮತ್ತು ಇನ್ನಿತರರ ಇತ್ತೀಚಿನ ದಶಕಗಳಲ್ಲಿ ನಡೆದ ವಿಜಯನಗರ ಸಂಶೋಧನೆಗಳು ಮಹತ್ವವೆನಿಸಿದವು. ಇವುಗಳು ನೂತನ ಯುವ ಇತಿಹಾಸಕರರಿಗೆ ಮಾರ್ಗದರ್ಶನವಾಗುತ್ತವೆಂದು ಭಾವಿಸಿ ಈ ಕೆಳಗಿನ ವಿಷಯಗಳನ್ನು ಪುರಾತತ್ವ ಹಿನ್ನೆಲೆಯಲ್ಲಿ ಅವಲೋಕಿಸಿದ್ದೇನೆ.

1. ರಾಜಕೀಯ ಚರಿತ್ರೆಯಲ್ಲಿ ವಂಶಗಳ ಬದಲಾವಣೆ :

ವಿಜಯನಗರ ಸಾಮ್ರಾಜ್ಯವನ್ನು ನಾಲ್ಕು ಮನೆತನಗಳು ಒಂದರ ನಂತರ ಒಂದರಂತೆ ಅದರ ಸಿಂಹಾಸನವನ್ನು ಕಿತ್ತುಕೊಂಡು ಆಳ್ವಿಕೆ ನಡೆಸಿದವು. ಪ್ರಾಚೀನ ರಾಜಕೀಯ ಚರಿತ್ರೆ ಮತ್ತು ಪರಂಪರೆಯಲ್ಲಿ ಒಂದೊಂದು ಸಾಮ್ರಾಜ್ಯವನ್ನು ಒಂದೊಂದು ರಾಜ ಮನೆತನದವರೇ ಆಳಿದ್ದು ಕಾಣುವುದು. ಆದರೆ ವಿಜಯನಗರ ಸಾಮ್ರಾಜ್ಯದಲ್ಲಿ ನಾಲ್ಕು ಮನೆತನಗಳ ಆಳ್ವಿಕೆಗಳು ಒಳಗೊಂಡಿವೆ. ಮೊದಲನೆಯವರು ಹರಿಯರ-ಬುಕ್ಕ ಸಹೋದರರ ಸಂಗಮವಂಶದವರೆನ್ನಲಾಗಿದೆ. ಇವರನ್ನು ಸೋಲಿಸಿ ಆಳಿದವರು ಸಾಳುವ ವಂಶದವರು. ಇವರನ್ನು ಸೋಲಿಸಿ ಆಳಿದವರು ತುಳುವ ವಂಶದವರು. ಇವರ ಆಳ್ವಿಕೆಯು ಅಂತ್ಯವಾದಾಗ ಅರವೀಡು ವಂಶದವರು ಆಳ್ವಿಕೆಯನ್ನು ನಡೆಸಿದರು. ವಿಜಯನಗರ ಹೆಸರಿಡುವಿಕೆಯಲ್ಲಿ ಒಬ್ಬರಿಗೊಬ್ಬರು ಸಂಬಂಧವೇ ಇಲ್ಲ ಎಂಬುದು ಗಮನಾರ್ಹ. ಇವರಲ್ಲಿ ಸಂಗಮರು, ಸಾಳುವರು ಮತ್ತು ತುಳುವರು ಮೂಲತಃ ಕರಾವಳಿಯಿಂದ ಶಿವಮೊಗ್ಗ ಪ್ರದೇಶದ ವ್ಯಾಪ್ತಿಯಲ್ಲಿದ್ದವರೆಂಬ ಅಭಿಪ್ರಾಯಗಳಿವೆ. ಆದರೆ ಈ ಬಗ್ಗೆ ಸ್ಪಷ್ಟನೆ ಇಲ್ಲದಿದ್ದರೂ ಅವರೆಲ್ಲ ಬಹುತೇಕ ಈ ಭಾಗದವರೆಂಬುದನ್ನು ಸಮ್ಮತಿಸಬಹುದು.

ಈ ಮನೆತನದಲ್ಲೇ ಸಿಂಹಾಸವನ್ನೇರಲು ಕೆಲವರು ತಮ್ಮ ಬಂಧುಗಳನ್ನೇ ಕೊಂದರೆಂಬ ಆರೋಪಗಳು ಪೆರಿಸ್ತ, ನುನಿಜ್, ಪೂಯೆಸ್ ಹಾಗೂ ಇತರರ ಬರವಣಿಗೆಗಳಲ್ಲಿವೆ. ಆದರೆ ಸಮಕಾಲೀನ ಶಾಸನಗಳು ಮಾತ್ರ ಈ ಮಾಹಿತಿಗಳನ್ನು ಹೇಳಿಲ್ಲವೆಂಬ ಚಿಂತನೆಗಳಿವೆ. ಉದಾಹರಣೆಗೆ 2ನೇ ಬುಕ್ಕನು 2ನೇ ಹರಿಹರನ ಸಾವಿನ ನಂತರ ಪಟ್ಟವೇರಿದನು. ಆದರೆ ಆತನನ್ನು ಆತನ ಸಹೋದರ 2ನೇ ವಿರೂಪಾಕ್ಷನನ್ನು ಕೊಂದು ಪಟ್ಟವೇರಿದನೆನ್ನುವರು. ಈ ವಿಷಯ ತದನಂತರದ ಕಾಲದ ಕೃತಿಯೊಂದರಲ್ಲಿ ಬಂದಿರುವುದರಿಂದ ಇದು ಚಾರಿತ್ರಿಕ ಕೃತಿ ಅಲ್ಲವೆನ್ನುವರು. ಮಲ್ಲಿಕಾರ್ಜುನನ ಸಾವಿನ ನಂತರ 3ನೇ ವಿರೂಪಾಕ್ಷ ಪಟ್ಟವೇರಿದನೆನ್ನುವರು. ಆದರೆ ಕೆಲವರು 3ನೇ ವಿರೂಪಾಕ್ಷನು ಸಿಂಹಾಸನಕ್ಕಾಗಿ ಕ್ರಾಂತಿ ಮಾಡಿಸಿದನು ಎನ್ನುವರು. ಮಲ್ಲಿಕಾರ್ಜುನನು ಆತನ ಸಂಬಂಧಿಕರನ್ನು ಕೊಲೆ ಮಾಡಿಸಲು ಪ್ರಯತ್ನಿಸಿದನೆನ್ನುವರು. ಸಾಳುವ ನರಸಿಂಹನು ಸಿಂಹಾಸನವೇರಲು ಆತನ ನಂಬಿಕೆಯ ಭಂಟ ನರಸನಾಯಕನ ಅರಮನೆಗೆ ಹೋಗುವಾಗ ಬಂದವರನ್ನೆಲ್ಲ ಕೊಂದು ಹಾಕಿದನೆನ್ನುವರು. ನರಸನಾಯಕನು ಸಾಳುವ 2ನೇ ನರಸಿಂಹನಾಯಕನನ್ನು ದೂಡಿ ಆತನ ಇಬ್ಬರು ಕಿರಿಯ ಪುತ್ರರನ್ನು ಕೊಂದನು. ಇದಲ್ಲದೆ ನರಸನಾಯಕನು ಸಾಳುವ ನರಸಿಂಹನನ್ನೇ ಅಂತ್ಯಗೊಳಿಸಿದನೆನ್ನುವರು.

ಒಂದು ಕಥೆಯಲ್ಲಿ ಕೃಷ್ಣದೇವರಾಯನನ್ನು ಕುರುಡನನ್ನಾಗಿ ಮಾಡಿ ಆತನ ಮಗನನ್ನು ಸಿಂಹಾಸನದ ಮೇಲೆ ಕೂಡಿಸಲು ಆತನ ಹಿರಿಯ ಸಹೋದರನ ಸಂಚಿತ್ತೆನ್ನುವರು. ಆಗ ಮಂತ್ರಿ ಸಾಳುವ ತಿಮ್ಮನು ರಾಯನನ್ನು ಈ ಸನ್ನಿವೇಶದಿಂದ ರಕ್ಷಿಸಿದನೆನ್ನಲಾಗಿದೆ. ಮುಂದೆ ಕೃಷ್ಣದೇವರಾಯನ ಕಿರಿಯ ಮಗ ತಿರುಮಲನಿಗೆ ವಿಷಪ್ರಾಷನ ಮಾಡಿ ಸಾಯಿಸಿದರೆನ್ನಲಾಗಿದೆ. ಆ ಬಳಿಕ ಕೃಷ್ಣದೇವರಾಯನ ಅಳಿಯ ರಾಮರಾಯನು ಕೃಷ್ಣದೇವರಾಯ ಸಾವನ್ನಪ್ಪಿದ ಬಳಿಕ ಅಚ್ಯುತರಾಯ ಮತ್ತು ಸದಾಶಿವರಾಯರ ಆಳ್ವಿಕೆಯಲ್ಲಿ ಅವರನ್ನು ತನ್ನ ಕೈಗೊಂಬೆಗಳನ್ನಾಗಿ ಮಾಡಿಕೊಂಡು ಕ್ರಮೇಣ ಪ್ರಭಲನಾಗಿ ರಾಜ್ಯದ ಆಂತರಿಕ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಸದಾಶಿವರಾಯನಂತೂ ಆತನ ಕೈವಶದಲ್ಲೇ ಕೊನೆಯವರೆಗೂ ಇದ್ದನು (ನುನಿಜ್). ರಕ್ಕಸತಂಗಡಿ ಯುದ್ಧದಲ್ಲಿ ರಾಮರಾಯನು ಕೊಲೆಯಾದ ಬಳಿಕ ಆತನ ಸಹೋದರ ತಿರುಮಲರಾಯನು ಆಡಳಿತವನ್ನು ತನ್ನ ಕೈವಶಮಾಡಿಕೊಂಡನು. ಆತನು ವಿಜಯನಗರದಿಂದ ಕೈವಶವಾಗಿದ್ದ ಸದಾಶಿವರಾಯ ಮತ್ತು ಇತರರನ್ನು, ಹೇರಳ ಸಂಪತ್ತು ತೆಗೆದುಕೊಂಡು ಪೆನುಗೊಂಡಕ್ಕೆ ಸಾಗಿದ ಮಾಹಿತಿಯಿದೆ. ಈ ಹಿನ್ನೆಲೆಯಲ್ಲಿ ಈಗ ಪ್ರಕಟವಾಗಿರುವ ಶಾಸನಗಳ ಕೃತಿಗಳನ್ನು ಪ್ರಮುಖವಾಗಿ ಬಳಸಿ ಕೊಂಡು ವಿಜಯನಗರ ಕಾಲದ ರಾಜಕೀಯ ಸ್ಥಿತ್ಯಂತರವನ್ನು ಪುನಃರಚಿಸುವ ಅವಶ್ಯಕತೆ ಇದೆ.

2. ವಿಜಯನಗರ ಸಾಮ್ರಾಜ್ಯದ ಹೆಸರು ಯಾವಾಗ ಬಂದಿತು

ಸಂಗಮ ಸಹೋದರರು ವಿಜಯನಗರ ಸಾಮ್ರಾಜ್ಯವನ್ನು 1336ರಲ್ಲಿ ನಿರ್ಧಿಷ್ಟವಾಗಿ ಸ್ಥಾಪನೆ ಮಾಡಲಿಲ್ಲವೆಂಬುದು ಈಗ ನಿರ್ವಿವಾದದ ಸಂಗತಿಯಾಗುತ್ತದೆ. ಅಂದರೆ ಹರಿಹರ–ಬುಕ್ಕ ಸಹೋದರರು 1346 ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರೆಂಬುದನ್ನು ಬಹುತೇಕ ವಿದ್ವಾಂಸರು ಒಪ್ಪಿಕೊಳ್ಳುವರು. ಆದರೆ ಈ ಸಾಮ್ರಾಜ್ಯದ ಹೆಸರು ವಿಜಯನಗರ ಎಂಬ ಹೆಸರು ಶಾಸನಗಳಲ್ಲಿ ಯಾವ ಅವಧಿಯಿಂದ ಬಳಕೆಯಲ್ಲಿ ಬಂದಿತು ಮತ್ತು ವಿಜಯನಗರ ಎಂಬ ಹೆಸರನ್ನು ಏಕೆ ಇಡಲಾಯಿತೆಂಬುದುಚರ್ಚಾವಿಷಯವಾಗಿದೆ. ಬಹುತೇಕರು ಸಂಗಮ ಸಹೋದರರು 1336 ಅಥವಾ 1346ರಲ್ಲಿ ಹಂಪೆ/ ಆನೆಗುಂದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರೆನ್ನುವರು.ಅದಕ್ಕೆ ಸಂಗಮ ಸಹೋದರರು ವೋರಂಗಲ್ಲಿನಲ್ಲಿ ಕಾಕತೀಯರ ಆಸ್ಥಾನದಲ್ಲಿ ಭಂಡಾರಿಗಳಾಗಿದ್ದರೆಂಬ ಒಂದು ಐತಿಹ್ಯ ನೀಡುವರು. ಇದನ್ನು ಸಮರ್ಥಿಸಲು ಕಾಲಮಾನದ ಉಲ್ಲೇಖವಿಲ್ಲದ ಹಳೇಬೀಡಿನ ಶಾಸನವನ್ನು ನೀಡಿದ್ದಾರೆ. ಆದರೆ ಅಲ್ಲಿ ದಾನ ನೀಡಿದ ದೇವಾಲಯವು ವೋರಂಗಲ್ಲಿನ ವೀರಭದ್ರದೇವರೆಂದಿದೆ ಮತ್ತು ಅಲ್ಲಿ ಹೇಳಿದ ಶ್ರೀ ವೀರ ಹರಿಹರ ಮಹಾರಾಯರು ಮೊದಲು ವೋರಂಗಲ್ಲದಲ್ಲಿದ್ದರೆಂದು ಹೇಳಿಲ್ಲ. ಆದ್ದರಿಂದ ಅವರು ಓರಂಗಲ್ಲಿನಲ್ಲಿದ್ದರೆಂದು ಹೇಗೆ ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆಂದು ಹೇಳಲಾಗಿದೆ. (ಮಧ್ಯಕಾಲೀನ ಕರ್ನಾಟಕ, ಪು. 43–41). ಎರಡನೆಯ ವಿಷಯ ಆ ಶಾಸನದಲ್ಲಿ ಕಾಲಮಾನದ ಉಲ್ಲೇಖವಿಲ್ಲ. ಆ ಶಾಸನ ಸಿಕ್ಕ ಸ್ಥಳ ಬೇಲೂರು ಅದು ಓರಂಗಲ್ಲಿನಲ್ಲಿಲ್ಲ. ಹರಿಹರ ಬುಕ್ಕರನ್ನು ಹಕ್ಕ–

ಬುಕ್ಕರೆಂದು 1357ರ ರುದ್ರಪಟ್ಟಣ ಶಾಸನ ಹೇಳಿದೆ (ಎಕೆ 71, ಅರಕಲಗೂಡು) ಸಮಕಾಲೀನ ಶಾಸನಗಳನ್ನು ಪರಿಶೀಲಿಸಿದಾಗ ಅದರಲ್ಲಿ 1346ರ ಅವಧಿಯಲ್ಲಿ 'ವಿಜಯನಗರ'ದ ಹೆಸರು ಕಂಡುಬಂದಿಲ್ಲ.

ಈ ಅವಧಿಯವರೆಗಿನ ಹರಿಹರ-ಬುಕ್ಕ ಸಹೋದರರು ಬೆಳವಣಿಗೆಯ ಚಿತ್ರಣವನ್ನು ನೋಡೋಣ. ಮೊದಲು ವೀರಕಂಪಣವೊಡೆಯರು ಬರುವರು. ಇವರು ಕೋಲಾರ ತಾಲೂಕಿನ ವಾನರಾಸಿಯಲ್ಲಿ ಬಹುತೇಕ 1313 ಫೆಬ್ರವರಿ 1ರಲ್ಲಿದ್ದನು ಅಥವಾ 1372 ಅಥವಾ 1374ರಲ್ಲಿ ಕಾಣುವರಂತೆ. ಬುಕ್ಕನ ಮಗ ಎರಡನೇ ಕಂಪಣ 1353ರಲ್ಲಿ ಹರಿಯಪ್ಪ ವೊಡೆಯರ ಮಗ ಸಾವಣವೊಡೆಯನಿದ್ದನು (ಲಕ್ಷ್ಮೇಶ್ವರ ಶಾಸನ). ಆದರೆ ಕೆಲವರು ಹರಿಹರನಿಗೆ ಗಂಡು ಮಕ್ಕಳೇ ಇರಲಿಲ್ಲವೆಂದಿದ್ದಾರೆ. ಆ ಬಳಿಕ ಹರಿಹರನ ತಮ್ಮ ಮುದ್ದಪ್ಪನು 1327ರಲ್ಲಿ ಕಾಣುವನು. ಮತ್ತೆ ಆತನು 1387 ಕಾಣುವನು. ಅಂದರೆ ಎರಡನೇ ಹರಿಹರನುಮುಂದೆ ವೀರ ಬುಕ್ಕಣೊಡೆಯ 1333ರಲ್ಲಿ ಕಾಣುವನು. ಈತನು 1351-52ರಲ್ಲಿ ಪೃಥ್ವೀರಾಜ್ಯವಾಳುತ್ತಿದ್ದನೆಂದು ಹೇಳಲಾಗಿದೆ.

ಸಂಗಮ ಸಹೋದರರ ಆಡಳಿತವನ್ನು ಗಮನಿಸಿದಾಗ ಅವರು ಮೊದಲು ಮಹಾಮಂಡಳೇಶ್ವರರಾಗಿ ಉತ್ತರ ಕರ್ನಾಟಕದ ಬಾದಾಮಿ ಬಿಟ್ಟು ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಭಾಗಗಳಲ್ಲಿ ತಲಾ ಒಬ್ಬರು ಅಥವಾ ಜೊತೆಯಲ್ಲಿದ್ದು ಅಧಿಕಾರ ನಡೆಸುತ್ತಿದ್ದರು. ಅವರು ಪಶ್ಚಿಮ ಕರಾವಳಿ ಭಾಗಗಳಲ್ಲಿನ ಮಂಗಳೂರು, ಬಾರಕೂರು, ಗುತ್ತಿ, ದಕ್ಷಿಣ ಕರ್ನಾಟಕದ ಸಾಗರ ಭಾಗ, ನೆಲಮಂಗಲ, ಹಾಸನ, ಮಂಡ್ಯ ಮತ್ತು ನೆರೆಯ ದಕ್ಷಿಣದ ಕೆಲ ರಾಜ್ಯಗಳಲ್ಲೇ ಅವರ ಅಧಿಕಾರ ಗೋಚರಿಸುವುದು. ವಿರಳವಾಗಿ ಬಾದಾಮಿ (1340ರಲ್ಲಿ)ಯಲ್ಲಿ ಕಾಣುವದು.

ಹರಿಹರನು ಪೂರ್ವ ಪಶ್ಚಿಮ ಸಮುದ್ರದ ಮಧ್ಯದ ಭೂಮಿಯನ್ನು ಗೆದ್ದುದಕ್ಕಾಗಿ ಜಯೋತ್ಸವವನ್ನು ಆಚರಿಸಲು ಶೃಂಗೇರಿಗೆ ತನ್ನ ಸಹೋದರರ ಸಂಗಡ ಬಂದು ದಾನ ನೀಡಿದನು. ಆಗ ಅಲ್ಲಿ ಭಾರತೀತೀರ್ಥರು ಇದ್ದರು. ಅವರಿಂದ ಭಾರತಿತೀರ್ಥರುದಾನ ಪಡೆದರು. 1355ರಲ್ಲಿ ಭಾರತೀತೀರ್ಥರು ಇಹಲೋಕ ತ್ಯಜಿಸಿದರು. ಶೃಂಗೇರಿಯಲ್ಲಿ ಈ ಸಹೋದರರು 1346ರಲ್ಲಿ ವಿಜಯೋತ್ಸವವನ್ನು (ಎ.ಕೆ.4, ತೀರ್ಥಹಳ್ಳಿ-154, ಚಟ್ನೆಕೊಡಗಿ) ಆಚರಿಸಿಕೊಂಡಾಗ ಹರಿಹರನು ಪಟ್ಟ ಕಟ್ಟಿಕೊಂಡನೆನ್ನಲಾಗಿದೆ(ಶೃಂಗೇರಿ ಶಾಸನ). ಈ ವಿಜಯೋತ್ಸವವೇ ವಿಜಯನಗರ ಎಂಬ ಹೆಸರು ಬಂದಿತೆಂದು ಕು.ಅಪರ್ಣ ಅವರ ಅಭಿಪ್ರಾಯ ಪಟ್ಟಿದ್ದಾರೆ.ಆದರೆ ಈ ವಿಜಯೋತ್ಸವಕ್ಕೂ ಮತ್ತು ವಿಜಯನಗರ ರಾಜ್ಯದ ಹೆಸರಿಗೂ ಸಮಾನ ಅರ್ಥ ಬರುವುದಿಲ್ಲ. ಏಕೆಂದರೆ ವಿಜಯನಗರ ಹೆಸರಿನಲ್ಲಿ ವಿಜಯ ಮತ್ತು ನಗರ ಶಬ್ದಗಳಿದ್ದರೆ ವಿಜಯೋತ್ಸವದಲ್ಲಿ ವಿಜಯ ಮತ್ತು ಉತ್ಸವ ಶಬ್ದಗಳಿವೆ. ನಗರ ಎಂದರೆ ದೊಡ್ಡ ಗಾತ್ರದ ಹೆಚ್ಚಿನ ಜನಸಂಖ್ಯೆಯುಳ್ಳ ವಿಸ್ತಾರವಾದ ಊರು/ಸ್ಥಳವಾಗಿದೆ.ಆದರೆ ಸಂಗಮ ಸಹೋದರರು ಯಾವ ರಾಜ್ಯವನ್ನು ಕಟ್ಟಿದರೆಂಬುದಾಗಲೀ ಅಥವಾ ವಿಜಯನಗರ ರಾಜ್ಯವನ್ನು ಸ್ಥಾಪಿಸಿದರೆಂಬುದಾಗಲೀ ಶೃಂಗೇರಿಯ 1346 ರ ಶಾಸನದಲ್ಲಿ ಹೇಳಿಲ್ಲ. ಮುಂದೆ 12 ವರ್ಷಗಳ ತರುವಾಯ ಹೊರಡಿಸಿದ 1358ರ ಶಾಸನದಲ್ಲಿ "ಅಭಿನವ ವಿಜಯರಾಜ್ಯ"ದ ಹೆಸರು ಮೊದಲು ಬಂದಿದೆ (ಎ.ಕೆ. 8 (ಪ) ಆಲೂರು 14, ಕಣ್ಣಾಗಲ).ಆ ಬಳಿಕ 1379ರಲ್ಲಿನ ಶಾಸನದಲ್ಲಿ"ವಿಜಯಾಭಿದಾನ ನಗರಿ" ಎಂದು ಕರೆಯಲಾಗಿದೆ (ಕ.ವಿ.ಶಾ.ಸಂ.III, ಹೊಸಪೇಟೆ 53 (ಹಂಪೆ)).ಮುಂದೆ 1374ರಲ್ಲಿ ಇದನ್ನು ವಿಜಯನಗರಿ ಎಂದು ಕರೆಯಲಾಗಿದೆ (ಎ.ಕೆ. 9. ನೆಲಮಂಗಲ 53, ಮುದ್ದಲಿಂಗನಹಳ್ಳಿ).ಶ್ರೀ ವಿದ್ಯಾರಣ್ಯರು ಪರಿಪೂರ್ಣರಾದಾಗ ಪಂಪಾಕ್ಷೇತ್ರದಲ್ಲಿ ವಿರೂಪಾಕ್ಷ ದೇವರ ಸಾನಿಧ್ಯದಲ್ಲಿ ಹರಿಹರನು ದಾನ ನೀಡಿದ್ದು ಕಾಣುತ್ತದೆ (ಎ.ಕೆ. 10 (ಆರ್) ಶೃಂಗೇರಿ 32). 1358ರ ನಂತರದ ಶಾಸನಗಳಲ್ಲಿ ಹರಿಹರನು ವಿದ್ಯಾರಣ್ಯರ ಹೆಸರಿನಲ್ಲಿ ವಿದ್ಯಾನಗರವನ್ನು ಕಟ್ಟಿಸಿದ ಉಲ್ಲೇಖವಿದೆ (ಎ.ಕೆ. 11, ಹಿರೇಗುಂಮಾರ 45). 1365ರಲ್ಲಿ ವಿದ್ಯಾರಣ್ಯತೀರ್ಥರು ಪರಿಪೂರ್ಣರಾಗಿದ್ದಾರೆ. ಇದರಿಂದ ಹರಿಹರ ಬುಕ್ಕ ಸಹೋದರರು ತಮ್ಮ ರಾಜ್ಯವನ್ನು ಸ್ಥಾಪಿಸಿದಾಗ ಅದರ ಹೆಸರನ್ನು ಏನು ಇಟ್ಟಿದ್ದರೆಂಬುದು ಶಾಸನಗಳಲ್ಲಿ ತಿಳಿದಿಲ್ಲ. ಸುಮಾರು 10 ವರ್ಷದಲ್ಲಿ ಅಥವಾ ಮುಂದೆ 41 ವರ್ಷ ಕಳೆದ ಬಳಿಕ 1377ರಲ್ಲಿ ಅಥವಾ ಅದರ ಮೊದಲು ಇವರು ಹಂಪೆಯ ಪರಿಸರದಲ್ಲಿ ನೆಲೆಯೂರಿದ್ದಾರೆ. ಈ ಕುಲದಲ್ಲಿ ಹೆಬಸೂರು ಶಾಸನದಿಂದ ಪಂಪಾಪುರಿ ಪರಿಸರೇ ಭವಸಂಗಮಾಖ್ಯದ ಉಲ್ಲೇಖವನ್ನು ಪಿ.ಬಿ. ದೇಸಾಯಿ ಅವರು

ನೀಡಿದ್ದಾರೆ(ಎ ಹಿಸ್ಟರಿ ಆಫ್ ಕರ್ನಾಟಕ, ಪು. 327). ಆದರೆ 19ರ ಅಕ್ಟೋಬರ 1352ರ ಹೊತ್ತಿಗೆ ಮೊದಲನೇ ಹರಿಹರನು ಹಂಪೆಯ ಭಾಗವನ್ನು ಕುರುಕ್ಷೇತ್ರ ವಿದ್ಯಾನಗರ ಹೆಸರಿನಿಂದ ಆಳುತ್ತಿದ್ದನೆಂದು ವರದಿಯಾಗಿದೆ (ಎಆರ್‌ಐಇ 1925-26, 8). ವಿಜಯನಗರ ಹೆಸರಿನ ಪ್ರಾಚೀನ ಉಲ್ಲೇಖದಲ್ಲೂ ಶಾಸನಗಳಲ್ಲಿ ಈ ರೀತಿಯ ದ್ವಂದ್ವ ಮಾಹಿತಿಗಳಿರುವುದು ತಿಳಿದುಬರುತ್ತದೆ.

ಹರಿಹರ-ಬುಕ್ಕ ಸಹೋದರರ ಬೆಳವಣಿಗೆಯನ್ನು ಗಮನಿಸಿದಾಗ ಮೊದಲು ಅವರುಆಡಳಿತ ನಡೆಸಿದ ರಾಜ್ಯಗಳೆಲ್ಲಾ ದಕ್ಷಿಣ ಕರ್ನಾಟಕ ಮತ್ತು ಪಶ್ಚಿಮ ಕರಾವಳಿಗಳ ಕಡೆಯಲ್ಲೇ ಕಾಣುತ್ತವೆ. ಆ ಬಳಿಕ ಅವರು 1366ರ ಹೊತ್ತಿಗೆ ಹಸ್ತಿನಾವತಿಯಲ್ಲಿ 1368ಕ್ಕೆ ಆನೆಗುಂದಿಯಲ್ಲಿ ಕಾಣುವರು (ಅಪರ್ಣ, ಸಂಗಮರ ದೇವಾಲಯಗಳು, ಪು. 12). 1377ರ ಸುಮಾರಿಗೆ ವಿಜಯನಗರಿಯಲ್ಲಿ ಮೊದಲನೇ ದೇವರಾಯನಿಗೆ ಸ್ಥಿರ ಪಟ್ಟಾಭಿಷೇಕವಾಗಿದೆ.ಈ ಮನೆತನದಲ್ಲಿ ಅರಸನಾದವನಿಗೆ ಸ್ಥಿರಪಟ್ಟ ಕಟ್ಟಿದ್ದು ಈ ಕಾಲದಲ್ಲಿ ಇದೇ ಮೊದಲಾಗಿದೆ. ಈ ಎಲ್ಲಾ ವಿವರಣೆಗಳಿಂದ ಮೊದಲನೇ ಹರಿಹರನು ಆಡಳಿತ ನಡೆಸುವ ಆರಂಭಿಕ ಕಾಲದಲ್ಲಿ ಆತನ ರಾಜ್ಯದ ಹೆಸರು ವಿಜಯನಗರ ಎಂದು ಕರೆದಿದ್ದು ಯಾವ ಕಾಲಮಾನ ಉಲ್ಲೇಖವಿರುವ ಶಾಸನಗಳಿಂದ ಕಾಣುವುದಿಲ್ಲ. ಇದನ್ನು ಗಮನಿಸಿದರೆ ಸಂಗಮ ಸಹೋದರರು ತಮ್ಮ ರಾಜ್ಯದ ಸ್ಥಿರ ಆಡಳಿತ ಅದರ ಬೆಳವಣಿಗೆಯಲ್ಲಿ ನಂಬಿಕೆ ಬಂದ ಬಳಿಕವೇ ತಮ್ಮ ಸಾಮ್ರಾಜ್ಯದ ಹೆಸರನ್ನು ವಿಜಯನಗರ ಎಂದು ಕೊಟ್ಟಿರಬೇಕು.

ಹರಿಹರ-ಬುಕ್ಕ ಸಹೋದರರ ಆಡಳಿತ ಪೂರ್ವದಲ್ಲಿ ಹಂಪೆ ಪ್ರದೇಶದ ರಾಜಕೀಯ ಚರಿತ್ರೆಯನ್ನು ಪರಾಮರ್ಶಿಸಿದಾಗ 1326ರ ಮೊದಲು ಕುಮಾರರಾಮನ ಮನೆತನದ ಆಳ್ವಿಕೆಯು ಅಲ್ಲಿದ್ದುದು ತಿಳಿಯುತ್ತದೆ. ಅವರಿಗೂ ಮತ್ತು ಕುಮಾರರಾಮರಿಗೆ ಯಾವ ಸಂಬಂಧವಿದ್ದುದು ಕಾಣುವುದಿಲ್ಲ. ಈ ಅವಧಿಯಲ್ಲಿ ದೆಹಲಿಯ ಅಲ್ಲಾವುದ್ದೀನ್ ಖಿಲ್ಜಿ, ಮಲ್ಲಿಕಾಫರ್, ಮೊಹ್ಮದಬಿನ್ ತುಘಲಕ್ ಅವರ ದಾಳಿಯಿಂದಾಗಿ ದಕ್ಷಿಣ ಭಾರತ ತತ್ತರಿಸಿತು. ಅಲ್ಲಿನ ಪ್ರಮುಖ ಮೂರು ಅರಸು ಮನೆತನಗಳು ತಮ್ಮ ಸ್ಥಾನವನ್ನು ಒಂದರ ನಂತರ ಒಂದರಂತೆ ಕಳೆದುಕೊಂಡವು. ಅದರಲ್ಲಿ ಒಂದಾದ ಹೊಯ್ಸಳರ ಅರಸ 3ನೇ ಬಲ್ಲಾಳನು 1342ರವರೆಗೆ ತನ್ನ ಆಳ್ವಿಕೆಯ ಅಸ್ತಿತ್ವವನ್ನು ಭದ್ರವಾಗಿ ಉಳಿಸಿ ರಕ್ಷಿಸಿಕೊಂಡಿದ್ದನು. ಈ ಶತಮಾನದ ಆರಂಭದಲ್ಲಿ ಕಂಪಿಲರು ಸೇವುಣರ ಅಧೀನದಲ್ಲಿ ಅಧಿಕಾರಿ ಆಗಿದ್ದರು. ಅವರು ಹೊಯ್ಸಳರ ಅಧಿಕಾರಿಗಳ ವಿರುದ್ಧ ಯುದ್ಧ ಮಾಡಿ ಜಯವನ್ನು ಗಳಿಸಿ ಸ್ವತಂತ್ರವಾಗಿ ಆಡಳಿತವನ್ನು ನಡೆಸುತ್ತಿದ್ದರು. ಆದರೂ ಸಹ 3ನೇ ಬಲ್ಲಾಳನು ಸುಮಾರು 1337ರ ಸುಮಾರಿಗೆ ಉತ್ತರದಲ್ಲಿ ದಿಗ್ವಿಜಯ ಸಾಧಿಸಿದನೆಂಬ ಬಿರುದುಳ್ಳವನಾಗಿದ್ದಾನೆ. ಆತನು ಆಗ ಯಾರ ಜೊತೆ ಯುದ್ಧ ಮಾಡಿ ಜಯಗಳಿಸಿದ್ದು ತಿಳಿದಿಲ್ಲ. ಉತ್ತರದ ದಿಗ್ವಿಜಯದ ವಿಷಯವನ್ನು ಚಾಮರಾಜನಗರ ಜಿಲ್ಲೆಯ ನರಸಮಂಗಲ ಶಾಸನ ತಿಳಿಸುತ್ತದೆ. ಆದರೆ ಈ ಅವಧಿಯಲ್ಲಿ ಈತನು ಉತ್ತರದಲ್ಲಿ ದಿಗ್ವಿಜಯಗಳಿಸಿದ ಬಗ್ಗೆ ಬೇರಾವ ದಾಖಲೆಗಳೂ ಕಂಡುಬಂದಿಲ್ಲ. ಹೀಗಾಗಿ ಈ ಬಿರುದು ಸತ್ಯವೆಂದು ಒಪ್ಪಿಕೊಳ್ಳಲು ಅನುಮಾನ ಬರುತ್ತದೆ. ಆ ಬಳಿಕ ಈತನು 1342ರಲ್ಲಿ ಕೊಲೆಗೀಡಾದನು. ಮುಂದೆ ಈತನ ಮಗ 4ನೇ ಬಲ್ಲಾಳನು 1343 ರಲ್ಲಿ ಹೊಯ್ಸಳ ಸಿಂಹಾಸನವನ್ನೇರಿದನು. ಆದರೆ ಈತನು ನಾಲ್ಕೇ ವರ್ಷದಲ್ಲಿ ಅಂದರೆ 1346ರಲ್ಲಿ ಗತಿಸಿದನು. ದುರ್ಬಲನಾಗಿದ್ದ ಈತನು ಮಡಿದ ತಕ್ಷಣವೇ ರಾಜ್ಯದಲ್ಲಿ ಅರಾಜಕತೆ ಸಹಜವಾಗಿ ನಿರ್ಮಾಣವಾಗಿದೆ. ಆಗದಕ್ಷಿಣ ಕರ್ನಾಟಕದಲ್ಲಿ ಬಲಿಷ್ಠ ಮಹಾಮಂಡಳೇಶ್ವರರಾಗಿ ಆಡಳಿತ ನಡೆಸುತ್ತಿದ್ದವರು ಹರಿಹರ-ಬುಕ್ಕ ಸಹೋದರರು. ಇವರು ಹೊಯ್ಸಳ 3ನೇ ಬಲ್ಲಾಳನ ಮಹಾಮಂಡಳೇಶ್ವರರಾಗಿದ್ದರೆನ್ನುವರು. ಅದಕ್ಕೆ ಯಾವ ದಾಖಲೆಗಳಿಲ್ಲ. ಆದರೆ ಈ ಅವಧಿಯ ಶಾಸನಗಳಲ್ಲಿ ಹೊಯ್ಸಳ 3ನೇ ಬಲ್ಲಾಳ ಮತ್ತು ಸಂಗಮ ಸಹೋದರರೀರ್ವರ ನಡುವಿನ ಸಂಬಂಧವನ್ನು ತಿಳಿಸುವ ಯಾವ ಶಾಸನ ಉಲ್ಲೇಖಗಳು ತಿಳಿದಿಲ್ಲವೆಂದು ಡಾ. ಎಸ್. ರಾಜಶೇಖರ ಅವರು ತಮ್ಮ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ. ಆದರೆ ಎಫ್.ಟಿ. ಹಳ್ಳಿಕೇರಿಯವರು ತಮ್ಮ ಲೇಖನದಲ್ಲಿ ಮೊದಲನೇ ಹರಿಹರನು ಹೊಯ್ಸಳ 3ನೇ ಬಲ್ಲಾಳನ ಸಾಮಂತ ಅಧಿಕಾರಿ ಆಗಿದ್ದನೆಂದು ವಿವರಿಸಿರುವರು. ಇನ್ನು ಕೆಲವರು ಹೊಯ್ಸಳರ ಅಥವಾ ಓರಂಗಲ್ಲಿನ ಕಾಕತೀಯ ರಾಜಧಾನಿಯಾಗಿದ್ದದೋರಸಮುದ್ರದಲ್ಲಿ ಹರಿಹರನು ಬಂಡಾರಿ ಆಗಿದ್ದ ಎನ್ನುವರು. ಈ ವಿವರಗಳೆಲ್ಲಾ ಆನಂತರದ ಕಾಲದ ಸಾಹಿತ್ತಿಕ ಉಲ್ಲೇಖಗಳಾಗಿವೆ.

ಶೃಂಗೇರಿಯಲ್ಲಿ ಇವರ ಪಟ್ಟಬಂದೋತ್ಸವ 1346ರಲ್ಲಿ 'ವಿಜಯೋತ್ಸವ' ನಡೆಯಿತು. 1346ರಿಂದ ಹರಿಹರನ ಆಳ್ವಿಕೆ ಆರಂಭವಾಗಿದೆ.ಮಾರನೇ ವರ್ಷವೇ 1347ರಲ್ಲಿ ಬಹಮನಿ ಸಾಮ್ರಾಜ್ಯ ಗುಲ್ಬರ್ಗಾದಲ್ಲಿ ಸ್ಥಾಪನೆ ಆಗಿದೆ. 1354-55ರ ಹೊತ್ತಿಗೆ 'ತುರುಕದಳವು' ಕರ್ನಾಟಕದಲ್ಲಿ ಇರಲಿಲ್ಲವೆಂಬ ಉಲ್ಲೇಖವಿದೆ. ಈ ಬೆಳವಣಿಗೆಯನ್ನು ನೋಡಿದರೆ, ಹೊಯ್ಸಳ ವಂಶದ ಕುಡಿಗಳು ಯಾರೂ ಇಲ್ಲದಾಗ 1346ರಲ್ಲಿ ಈ ಭಾಗದಲ್ಲಿ ಬಲಿಷ್ಠ ಮಹಾಮಂಡಳೇಶ್ವರರಾಗಿದ್ದವರು ಈ ಸಹೋದರರು. ತಮ್ಮ ಸ್ವತಂತ್ರ ರಾಜ್ಯ ಸ್ಥಾಪನೆಗಾಗಿ ಅವರು ತಮ್ಮ ಅಳಿಯ ಬಲ್ಲಪದಣ್ಣನಾಯಕ, ಕುಮಾರ ಸೋಮಣ್ಣೊಡೆಯರು ಒಟ್ಟಾಗಿ ಶೃಂಗೇರಿಯ ಮಠಕ್ಕೆ ಹೋಗಿರಬೇಕು. ಅಲ್ಲಿದ್ದ ಭಾರತೀತೀರ್ಥರ ಸಾನಿಧ್ಯದಲ್ಲಿ ಒಂಬತ್ತು ಹಳ್ಳಿಗಳನ್ನು ಅಲ್ಲಿನ ಪರಿಚಾರಕ ಬ್ರಾಹ್ಮಣರಿಗೆ 1346 ಮಾರ್ಚ್ 9ರಂದು ದಾನನೀಡಿದರು. ಆ ಬಳಿಕವೇ ಶೃಂಗೇರಿ ಮಠದ ಪ್ರೋತ್ಸಾಹದಿಂದ ತಮ್ಮದೇ ಆದ ಸ್ವತಂತ್ರ ರಾಜ್ಯದ ಸ್ಥಾಪನೆ ಮತ್ತು ಆಳ್ವಿಕೆಗೆ ಪೀಠಿಕೆ ಹಾಕಿರಬೇಕೆನಿಸುತ್ತದೆ. ತದನಂತರವೇ ಈ ಸಹೋದರರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿರಬೇಕು ಹಾಗೂ ಆ ಪೂರ್ವದಲ್ಲೇ ತಮ್ಮ ಸ್ವತಂತ್ರ ಆಳ್ವಿಕೆಯನ್ನು ಆರಂಭಿಸಿರಬೇಕೆಂದು ತರ್ಕಿಸಬಹುದು.

3. ಆನೆಗೊಂದಿಯು ಮೊದಲು ವಿಜಯನಗರದ ರಾಜಧಾನಿ ಆಗಿದ್ದಿತೇ?

ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮಾಡಿದ ಕೀರ್ತಿಯು ಹರಿಹರ-ಬುಕ್ಕ ಸಹೋದರರಿಗೇ ಸಲ್ಲುತ್ತದೆ. ಈ ಸಾಮ್ರಾಜ್ಯದ ರಾಜಧಾನಿಯಾಗಿ ಮೊದಲು ಆನೆಗುಂದಿಯನ್ನು ಆಯ್ಕೆ ಮಾಡಲಾಗಿದ್ದಿತೆ? ಎಂಬುದನ್ನು ಇಲ್ಲಿ ಚಿಂತಿಸಲಾಗಿದೆ.

ಅನೇಕರು ಸಂಗಮ ಮನೆತನದ ಹರಿಹರ ಬುಕ್ಕ ಸಹೋದರರು ಸ್ಥಾಪಿಸಿದ ವಿಜಯನಗರ ಸಾಮ್ರಾಜ್ಯಕ್ಕೆ ಆನೆಗುಂದಿಯನ್ನು ಮೊದಲು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೆಂದು ಹೇಳಿದ್ದಾರೆ. ಆನೆಗುಂದಿಯನ್ನು ನಾಗುಂದಿಯಮ್ ಅಥವಾ ಸೇನಾಗುಂದಿಯಮ್ ಎಂದು ವಿದೇಶಿಯರ ಬರವಣಿಗೆಯಲ್ಲಿ ನುನಿಜ್ ಮತ್ತು ಡೆಮಿಂಗೋ ಪಯೇಸ್ ಅವರ ಹೇಳಿಕೆಗಳು ಪ್ರಮುಖ ಕಾರಣವಾಗಿವೆ. ಆನೆಗುಂದಿಯನ್ನು ವಿಜಯನಗರದ ಮಾತೃಸ್ಥಾನವೆಂದು ನುನಿಜ್ ಹೇಳಿದ್ದಾರೆ. ನುನಿಜ್ ಅವರ ಹೇಳಿಕೆಯು ಆನಂತರದ ಕಾಲದ್ದಾಗಿದೆ. 1349ರ ಶಾಸನದ ಪ್ರಕಾರ ಆನೆಗುಂದಿಯನ್ನು ಭಾಷ್ಕರ ಕ್ಷೇತ್ರ ದಕ್ಷಿಣ ವಾರಣಾಸಿ ಹಸ್ತಿನಾಪುರ ಎಂದು ಕರೆಯಲಾಗಿದೆ. (ಕವಿಶಾಸ: ಕೊಪ್ಪಳ ಜಿಲ್ಲೆ ಶಾಸನಗಳು, ಗಂಗಾವತಿ ತಾ.ಶಾ. 28). ವಿಜಯನಗರದ ಅರಸರು ತಮ್ಮ ಸೈನ್ಯದ ಆನೆಗಳನ್ನು ಆನೆಗೊಂದಿಯಲ್ಲಿ ಇರಿಸುತ್ತಿದ್ದರೆಂದೂ ಹೇಳುವರು. ಕೃಷ್ಣದೇವರಾಯನು ತನ್ನ ಮಗನಿಗೆ ವಿಷ ಕೊಟ್ಟವರನ್ನು ಆನೆಗುಂದಿಯ ಸೆರೆಮನೆಯಲ್ಲಿಟ್ಟಿದ್ದು ಕಾಣುತ್ತದೆ.

ಆನೆಗುಂದಿಯನ್ನು ಹರಿಹರ ಬುಕ್ಕ ಸಹೋದರರು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದರೆಂಬ ವಿಷಯವು 16ನೇ ಶತಮಾನ ಮತ್ತು ತದನಂತರದ ಕಾಲದ ಕೃತಿಗಳಾದ ರಾಜಕಾಲನಿರ್ಣಯ, ವಿದ್ಯಾರಣ್ಯ ಕಾಲಜ್ಞಾನ ಮುಂತಾದ ಸಾಹಿತ್ಯಗಳಲ್ಲಿ ಹೇಳಲಾಗಿದೆ. (ವಿಜಯನಗರ ಅಧ್ಯಯನ ಮಾಲೆ-3, ಪು. 18) ಆದರೆ ಈ ಕಥೆಯು ಐತಿಹಾಸಿಕ ಸತ್ಯವೆಂದು ಬಹುತೇಕರು ಸಮ್ಮತಿಸಿಲ್ಲ. ಈ ಕಥೆಯಲ್ಲಿ ಹರಿಹರ ಬುಕ್ಕ ಸಹೋದರರು, ಮೊದಲು ವಾರಂಗಲ್ ಕಾಕತೀಯ ಪ್ರತಾಪರುದ್ರನ ಮಂತ್ರಿ ಮತ್ತು ಕೋಶಾಧಿಕಾರಿಗಳಾಗಿ ಅನುಕ್ರಮವಾಗಿ ಸೇವೆ ಸಲ್ಲಿಸುತ್ತಿದ್ದರು. ಕಾಕತೀಯರನ್ನು ದೆಹಲಿಯ ಸುಲ್ತಾನರು ಸೋಲಿಸಿದಾಗ ಅವರು ಕಂಪಿಲ/ಆನೆಗುಂದಿ ಪ್ರದೇಶಕ್ಕೆ ಅಧಿಕಾರಿಗಳಾಗಿ ನೇಮಕಗೊಂಡರು. ಮುಂದೆ ಮುಸ್ಲಿಮರ ಆಕ್ರಮಣಕ್ಕೆ ಇವರು ತುತ್ತಾದಾಗ ಈರ್ವರನ್ನು ಬಂಧಿಸಿ ದೆಹಲಿಗೆ ಕರೆದೊಯ್ಯಲಾಯಿತು. ಅಲ್ಲಿ ಅವರು ಕೆಲ ಕಾಲ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದನ್ನು ಮನಗಂಡು ಅವರನ್ನು ಕಂಪಿಲ-ಆನೆಗುಂದಿ ಪ್ರಾಂತಕ್ಕೆ ಆಡಳಿತಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಆ ಬಳಿಕ ಅವರು ದೆಹಲಿ ಸುಲ್ತಾನರ ಸಂಪರ್ಕವನ್ನು ಕಡಿದುಕೊಂಡು ಸ್ವತಂತ್ರರಾಗಿ ತಮ್ಮದೇ ಆದ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡ ಸ್ಥಳವೇ ವಿಜಯನಗರ ಎನ್ನುವರು. (ಕರ್ನಾಟಕ ಚರಿತ್ರೆ ಮಾಲೆ-3, ಪು. 18) ಆದರೆ ಈ ಯಾವ ಸಂಗತಿಗಳು ಸಮಕಾಲೀನ ಶಾಸನಗಳಲ್ಲಿ ಉಲ್ಲೇಖವಾಗಿಲ್ಲ.

ಕೃಷ್ಣದೇವರಾಯನು ಆಳುವಾಗ ಆತನ ಮಂತ್ರಿ ಸಾಳ್ವ ತಿಮ್ಮ ಹಾಗೂ ಆತನ ಮಕ್ಕಳು ಮತ್ತು ಯಲಹಂಕದ ನಾಡಪ್ರಭು ಕೆಂಪೇಗೌಡ ಮುಂತಾದ ಪ್ರಮುಖರ ವಿಷಯಗಳುಅಲ್ಲಿ ಕಾಣುತ್ತವೆ. ಆಗ ಕೃಷ್ಣದೇವರಾಯನ ಮಗ ತಿರುಮಲನಿಗೆ

ವಿಷಪ್ರಾಶನ ಮಾಡಿಸಿ ಹತ್ಯೆಗೈಯ್ಯಲಾಯಿತು. ಈ ಕೃತ್ಯಕ್ಕಾಗಿ ಸಾಳ್ವ ತಿಮ್ಮ ಮತ್ತು ಆತನ ಮಕ್ಕಳಾದ ತಿಮ್ಮದಂಡನಾಯಕ ಮತ್ತು ಗುಂಡರಾಜರನ್ನು ಆನೆಗುಂದಿಯ ಸೆರೆಮನೆಯಲ್ಲಿಡಲಾಯಿತು. ಮೂರು ವರ್ಷಗಳ ನಂತರ ಹಿರಿಯ ಮಗ ತಿಮ್ಮನು ಸೆರೆಮನೆಯಿಂದ ತಪ್ಪಿಸಿಕೊಂಡು ಕೊಂಡವೀಡುಗೆ ಪಲಾಯನಗೊಂಡನು. ಅಲ್ಲಿ ಅವನನ್ನು ಹುಡುಕಿ ಬಂಧಿಸಿ ಅಲ್ಲಿಂದ ಅವನನ್ನು ಹಿಡಿದು ತಂದು ತಂದೆ ಮಕ್ಕಳ ಕಣ್ಣು ಕೀಳಿಸಿ ಆನೆಗುಂದಿ ಸೆರೆಮನೆಯಲ್ಲಿಟ್ಟರು. ಆಗ ಅಲ್ಲಿ ಅವರು ಮರಣ ಹೊಂದಿದರೆನ್ನುವರು. ಮತ್ತೊಂದು ಸಂದರ್ಭದಲ್ಲಿ ಕೆಂಪೇಗೌಡನು ಭೈರವೇಶ್ವರ ನಾಣ್ಯಗಳನ್ನು ಟಂಕಿಸಿದ್ದನ್ನು ತಿಳಿದ ರಾಮರಾಯನು ಅವನನ್ನು ಬಂಧಿಸಿ ಆನೆಗುಂದಿಯ ಸೆರೆಮನೆಯಲ್ಲಿಟ್ಟನು. ಐದು ವರ್ಷ (1559–65) ಸೆರೆಮನೆಯಲ್ಲಿದ್ದ ಕೆಂಪೇಗೌಡನು ಬಾರೀ ದಂಡ ತೆತ್ತು ಅಲ್ಲಿಂದ ಬಿಡುಗಡೆ ಹೊಂದಿದನು. ಮೂರನೇ ಸಂದರ್ಭ– 1565ರಲ್ಲಿ ರಕ್ಕಸತಂಗಡಿ ಕದನದಲ್ಲಿ ವಿಜಯನಗರ ಪತನವಾಯಿತು. ಆ ಬಳಿಕ ಶತ್ರು ಸೈನ್ಯವು ಆನೆಗುಂದಿ ಮೂಲಕವೇ ರಾಜಧಾನಿ ವಿಜಯನಗರದ ಮೂಲಕ ಆಕ್ರಮಣ ಮಾಡಿರಬಹುದೆಂಬ ವಾದವಿದೆ. ಅದರಲ್ಲಿ ಸುಲ್ತಾನರ ಸೈನ್ಯವು ಸಂಗಾಪುರದ ಕಣಿವೆ ಆಂಜನೇಯದ್ವಾರದ ಮೂಲಕ ಆನೆಗುಂದಿಗೆ ಪ್ರವೇಶಿಸಿ ಅವರು ಅಲ್ಲೇ ಬೀಡು ಬಿಟ್ಟರು. ಅಲ್ಲಿಂದ ಅವರು ರಾಮರಾಯ ಕಟ್ಟಿಸಿದ ಸೇತುವೆ ಮತ್ತು ತೆಪ್ಪದ ಮೂಲಕ ವಿಜಯನಗರ ತಲುಪಿ ಅದನ್ನು ಧ್ವಂಸ ಮಾಡಿದರೆನ್ನುವರು. ಆದರೆ ಆನೆಗುಂದಿಯನ್ನು ಅವರು ಹಾನಿ ಮಾಡಲಿಲ್ಲವೆಂಬ ಅಭಿಪ್ರಾಯವಿದೆ. ಇದರಿಂದ ಆನೆಗುಂದಿಯಲ್ಲಿ ಈ ಕಾಲ ಮತ್ತು ಈ ಕಾಲಪೂರ್ವದಲ್ಲಿ ಭದ್ರವಾದ ಕೋಟೆಯಿದ್ದುದು ತಿಳಿದಿದೆ. ಅಲ್ಲಿ ಫಿರಂಗಿ ಮುಂತಾದ ವಸ್ತುಗಳು ಅಲ್ಲಿನ ಕೋಟೆಯನ್ನು ದುರಸ್ತಿ ಮಾಡುವಾಗ ರಾಜ್ಯ ಪುರಾತತ್ವ ವಿಭಾಗದವರು ಶೋಧಿಸಿದ್ದಾರೆ. ಆದರೆ ಈ ಸ್ಥಳವನ್ನು ರಾಜಧಾನಿಯನ್ನಾಗಿ ಆಯ್ಕೆ ಮಾಡಿಕೊಂಡು ಅಲ್ಲಿ ಕೋಟೆಯನ್ನು ಕಟ್ಟಿಸಿದ ದಾಖಲೆಗಳು ಮಾತ್ರ ಕಂಡುಬಂದಿಲ್ಲ.

ಪಟ್ಟಾಭಿಷೇಕ : ಪಾರ್ಥಿವ ಸಂವತ್ಸರದ ಪಾಲ್ಗುಣ 'ಗುರುವಾರ' (9–3–1346)ರಂದು ಹರಿಹರನು ತನ್ನ ತಮ್ಮಂದಿರು (ಅಳಿಯ) ಹರಿಹರನ ಅಳಿಯ ಮತ್ತು ಹೊಯ್ಸಳ ಬಲ್ಲಾಳನ ಸೋದರಳಿಯ ವಲ್ಲಪದಣ್ಣನಾಯಕ ಮತ್ತು ಕುಮಾರ ಸೋಮಣ್ಣೊಡೆಯರು ಶೃಂಗೇರಿಯ ಶ್ರೀಮಠಕ್ಕೆ ಬೇಟಿ ನೀಡಿ ಅಲ್ಲಿನ ಪರಿಚಾರಕ ಬ್ರಾಹ್ಮಣರಿಗೆ ಒಂಬತ್ತು ಹಳ್ಳಿಗಳನ್ನು ದಾನ ನೀಡಿದ್ದಾರೆ. (ಎಕ11, (ಪ) ಶೃಂಗೇರಿ1, 1346). ಆ ಹೊತ್ತಿಗೆ ಮೊದಲೇ ಹರಿಹರನು ಪೂರ್ವ ಪಶ್ಚಿಮ ಸಮುದ್ರಗಳ ನಡುವಿನ ಭೂಮಿಯನ್ನು ಗೆದ್ದು ಅದರ ಒಡೆಯನಾಗಿ ಬಿರುದು ಪಡೆದಿದ್ದ. ಅದೂ ಸಹ ಚರ್ಚಾ ವಿಷಯವಾಗಿದೆ. ಅಲ್ಲಿಯ ಯತಿಗಳ ಸಾನಿಧ್ಯ ಮತ್ತು ಆಶೀರ್ವಾದ ಪಡೆದು ತಮ್ಮ ವಿಜಯೋತ್ಸವ ಮತ್ತು ಪಟ್ಟಾಭಿಷೇಕದ ಹಬ್ಬವನ್ನು ಆಚರಿಸಿದರು (ಅಪರ್ಣ : ಸಂಗಮರ ದೇವಾಲಯಗಳು, ಪು. 8–9). ಅವರ ಪಟ್ಟಾಭಿಷೇಕವು ನಡೆದದ್ದು ಶೃಂಗೇರಿಯಲ್ಲೇ.

ಹೀಗಾಗಿ ಹರಿಹರ–ಬುಕ್ಕ ಸಹೋದರರು ಆಡಳಿತದ ಬೆಳವಣಿಗೆಯಲ್ಲಿ ಮತ್ತು ಪಟ್ಟಾಭಿಷೇಕ ಇನ್ನಿತರ ವಿವರಣೆಗಳಿಂದ ಎಲ್ಲಿಯೂ ಆನೆಗುಂದಿಯು ಮೊದಲು ವಿಜಯನಗರದ ರಾಜಧಾನಿಯಾಗಿ ಕರೆಸಿಕೊಂಡಿದ್ದು ತಿಳಿಯುವುದಿಲ್ಲ.

4. ಸಂಗಮರ ಆಳ್ವಿಕೆಯ ಆರಂಭ :

ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದ ಹರಿಹರ ಬುಕ್ಕ ಸಹೋದರರ ಬೆಳವಣಿಗೆಯನ್ನು ಅವಲೋಕಿಸಿದಾಗ ಅವರು ಐವರು ಸಹೋದರರಿದ್ದುದು ತಿಳಿಯುತ್ತದೆ. ಮೊದಲನೇ ಹರಿಹರನು ಕೋಲಾರದಿಂದ (1313?), ನಂಜನಗೂಡಿನಿಂದ (1327), ಸಾಗರ–ಗುತ್ತಿ ಕಡೆಗಳಿಂದ, ನೆಲಮಂಗಲದ ಕುಕ್ಕಲ ನಾಡಿನಿಂದ (ಯೋಗೀಶ್ವರಪ್ಪ : ನಾಯಕತನ ಪದ್ಧತಿ, ಪು. 181) ಮತ್ತು ಕೆಲವೊಮ್ಮೆ ತಾನೊಬ್ಬ ಸಹೋದರರ ಜೊತೆ ಜಂಟಿಯಾಗಿಯೂ ಆಡಳಿತ ನಡೆಸಿದ್ದು ತಿಳಿದಿದೆ. ಬುಕ್ಕನು ಬಾರಕೂರ ಇನ್ನಿತರ ಕಡೆಗಳಿಂದ; ಕಂಪಣನು ನೆಲ್ಲೂರಿನಿಂದ; ಮಾರಪ್ಪನು ಚಂದ್ರಗುತ್ತಿಯಿಂದ ಆಡಳಿತ ನಡೆಸುತ್ತಿದ್ದರು. ಮುದ್ದಪ ಬೇಗನೆ ತೀರಿಕೊಂಡನು. ಮಾರಪನು ತನ್ನ ತಂದೆ ಸಂಗಮನ ಹೆಸರಿನಲ್ಲಿ ಸಂಗಮುಪುರ ಮತ್ತು ಮಾರಪಪುರ ಕಟ್ಟಿಸಿದರು. (ಎಕೆ. VIII ಸೊರಬ 375, ಕಾತವಳ್ಳಿ ಅಗ್ರಹಾರ ತಾಮ್ರಶಾಸನ–1347). ಸಂಗಮರ ಮಗ ಕಂಪನು ಬೇಗ ತೀರಿಕೊಂಡಾಗ (ಅಪರ್ಣ : ಸಂಗಮರ ಕಾಲದ ದೇವಾಲಯಗಳು) ಕಂಪಿಲರಾಯನು ಸೋಲನ್ನು ಅನುಭವಿಸಿದನು. ಸಂಗಮನ ತಂದೆ ಬುಕ್ಕನೆನ್ನಲಾಗಿದೆ. (ಎ.ಕೆ. 4, (ಪ) ಚಾಮರಾಜನಗರ, 148 (ಹೊಮ್ಮ) 1380) ಇವರು ಸ್ವತಂತ್ರರಾಗಿ

ಆಡಳಿತ ಆರಂಭಿಸಿದಾಗ ದಕ್ಷಿಣ ಭಾರತದಲ್ಲಿ ಸಮಕಾಲೀನವಾಗಿ ದೇವಗಿರಿಯ ಸೇವುಣರು, ಕಾಕತೀಯರು, ಆಂಧ್ರದ ರೆಡ್ಡಿಗಳು, ಹೊಯ್ಸಳರು, ಮಧುರೆ ಪಾಂಡ್ಯರು ಇವರ ಆಳ್ವಿಕೆ ಪ್ರಮುಖವಾಗಿತ್ತು.

ಸೇವುಣರು ಮತ್ತು ಹೊಯ್ಸಳರು ಹಾಗೂ ಕಾಕತೀಯ ಮತ್ತು ಸೇವುಣರ ನಡುವೆ ನಿರಂತರ ಕಾದಾಟಗಳು ನಡೆಯುತ್ತಿದ್ದವು. ಇವರೆಲ್ಲರಲ್ಲಿನ ಅನೈಕ್ಯತೆಯ ಪರಿಣಾಮ ಪರಕೀಯರಾದ ಅಲ್ಲಾವುದ್ದೀನ್ ಖಿಲ್ಜಿ, ಮಲಿಕಾಫರ್-ಮೊಹಮದ್ ಬಿನ್ ತುಘಲಕ್ ಇವರ ದಾಳಿಗೆತಮ್ಮ ಅರಸೊತ್ತಿಗೆಗಳನ್ನು ಕಳೆದುಕೊಳ್ಳಬೇಕಾಯಿತು. ಆನಂತರ ಹೊಯ್ಸಳರ ಮೇಲೆ ಮೊದಲು ಅವರು ದಾಳಿ ಮಾಡಿ ಅಪಾರ ಹಾನಿಯನ್ನುಂಟು ಮಾಡಿದರು. ಆದರೂ ಸಹ 3ನೇ ಬಲ್ಲಾಳನು ತನ್ನ ರಾಜ್ಯವನ್ನು 1342 ರವರೆಗೆ ಉಳಿಸಿಕೊಂಡಿದ್ದನು. ಮುಂದೆ ಆತನ ಮಗ 3 ವರ್ಷಗಳ ಕಾಲ ಆಳ್ವಿಕೆಯ ಜವಾಬ್ದಾರಿ ಹೊತ್ತು ಮರಣ ಹೊಂದಿದನು (1342-1346).

ಈ ಅವಧಿಯಲ್ಲಿ ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ಮುಸ್ಲಿಮರು ತಮ್ಮ ಅಧಿಕಾರಿಗಳನ್ನು ಅಲ್ಲಲ್ಲಿ ನೇಮಿಸಿದರು. ತಮ್ಮ ಧಾರ್ಮಿಕ ಕೇಂದ್ರಗಳನ್ನು ಸ್ಥಾಪಿಸಿ ಊರು ಊರುಗಳಲ್ಲಿ ಮಸೀದಿಗಳನ್ನು ನಿರ್ಮಿಸಿದರು.

ಈ ಅವಧಿಯಲ್ಲಿ ಮೊದಲನೇ ಹರಿಹರನು ಮಹಾಮಂಡಳೇಶ್ವರನಾಗಿದ್ದನು. 1339ರಿಂದ ಅವನು ಪೃಥ್ವೀರಾಜ್ಯವನ್ನು ಆಳುತ್ತಿದ್ದನೆಂದು ಶಾಸನಗಳು ತಿಳಿಸುತ್ತವೆ. ಅದು ಅತ್ಯಂತ ಪ್ರಾಚೀನವಾಗಿದೆ. 1340ರಲ್ಲಿ ಆತನು ಬಾದಾಮಿ ಭಾಗದಲ್ಲೂ ಮಹಾಮಂಡಳೇಶ್ವರನಾಗಿದ್ದನು. ಅಲ್ಲಿ ಆತನು ಕೋಟೆಯನ್ನು ಕಟ್ಟಿಸಿದನು. ಬಳಿಕ 1341 ರಿಂದ 1345 ರವರೆಗೆ ಹರಿಹರ-ಬುಕ್ಕ ಸಹೋದರರು ಮಂಗಳೂರು, ಸಾದಲಿ, ಮುಳುವಾಯಿ ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದ್ದರು. ಈ ಭಾಗವನ್ನು 'ಕಂಪಣರಾಜ್ಯ'ವೆನ್ನುವರು. 1351ರ ನಂತರ ಇವರು ಮಂಡ್ಯ, ಮೈಸೂರು, ಹಾಸನಗಳಲ್ಲಿದ್ದರು. (ಅಪರ್ಣ : ಸಂಗಮರ ದೇವಾಲಯಗಳು, ಪು. 12). ಈ ಎಲ್ಲಾ ಭಾಗಗಳು ಮೂಲತಃ ಹೊಯ್ಸಳ ರಾಜ್ಯದ ಭಾಗಗಳೇ ಆಗಿವೆ.

ಮುಂದೆ 1366 ರಲ್ಲಿ ಸಂಗಮರು ಹಸ್ತಿನಾವತಿಯಲ್ಲಿ ನಂತರ 1368ರವರೆಗೆ ಆನೆಗುಂದಿಯಲ್ಲಿ ಇದ್ದರು. ಆ ಬಳಿಕವೇ ಸಂಗಮರು ವಿಜಯನಗರಕ್ಕೆ ಬಂದಿರಬಹುದೆಂದು ಅಪರ್ಣ ಅವರ ಅಭಿಪ್ರಾಯ. (ಅಪರ್ಣ : ಸಂಗಮರ ಕಾಲದ ದೇವಾಲಯಗಳು, ಪು. 12).

ಒಂದನೇ ದೇವರಾಯನು 1377ರಲ್ಲಿ ವಿಜಯನಗರಿಯಲ್ಲಿ ಸ್ಥಿರಪಟ್ಟಾಭಿಷೇಕವಾಗಿ ಆಳುತ್ತಿದ್ದನು (ಹೆಬಸೂರು ತಾಮ್ರಪಟ ಶಾಸನ, ಎಕೆ5, ಕೃಷ್ಣರಾಜನಗರ, 77). 2ನೇ ದೇವರಾಯನು ಆಳುವಾಗ 1439ರಲ್ಲಿ ಈತನ ಅಧಿಕಾರಿ ಕಟಿಗೆಯ ಅಹಮದ್‌ಖಾನ್ ಎಂಬುವನು ಆನೆಗುಂದಿಯಲ್ಲಿ ಧರ್ಮಶಾಲೆಯನ್ನು ರಾಜನಿಗೆ ಪುಣ್ಯವಾಗಲೆಂದು ಕಟ್ಟಿಸಿದ್ದಾನೆ. ಈ ಎಲ್ಲಾ ವಿವರಣೆಗಳಿಂದ ಹರಿಹರ-ಬುಕ್ಕ ಸಹೋದರರು ಮಹಾಮಂಡಳೇಶ್ವರರಾಗಿ ಕರಾವಳಿ, ದಕ್ಷಿಣ ಕರ್ನಾಟಕದಲ್ಲಿ ಆಡಳಿತ ನಡೆಸಿದ್ದು ತಿಳಿಯುತ್ತದೆ. ಹೀಗಾಗಿ ಅವರು ಮೊದಲು ಕಾಕತೀಯರ ಅಧೀನದಲ್ಲಿ ಇದ್ದರೆಂಬುದಾಗಲೀ ಅಥವಾ ಹಂಪೆಯ ಭಾಗದಲ್ಲಿ ಇದ್ದರೆಂಬುದನ್ನು ಒಪ್ಪುವುದು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಸಹೋದರರು ತದನಂತರ ಕಾಲದ ದಾಖಲೆಯಲ್ಲಿ ಇವರು ಸಂಗಮ ವಂಶದವರೆಂದು ಗುರುತಿಸಿಕೊಂಡಿದ್ದಾರೆ.

ಸಂಗಮ ವಂಶಸ್ಥರು ಮೂಲತಃ ಹನ್ಮಕುಂದೆ/ವಾರುಂಗಲ್ಲ ಕಡೆಯವರೇ ಅಥವಾ ಕರ್ನಾಟಕದವರೇ ಎಂಬುದನ್ನು ಅವರು ಹೆಚ್ಚು ಚರ್ಚಿಸಲು ಹೋಗುವುದಿಲ್ಲ. ಸಂಗಮ ಎಂಬ ಹೆಸರು ವ್ಯಕ್ತಿಯದೇ ಎಂಬುದನ್ನು ಅವಲೋಕಿಸಿದಾಗ ಸಂಗಮ ಒಬ್ಬ ವ್ಯಕ್ತಿ. ಈತನು ಹರಿಹರ, ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಅವರ ತಂದೆ. ಆದರೆ ಈತನ ವಂಶದ ವಿವರಗಳಿಲ್ಲ. ತದನಂತರ ಕಾಲದಲ್ಲಿ ಸಂಗಮನ ವಂಶದ ವಿವರಗಳಿವೆ. ಇವರೆಲ್ಲರ ಹೆಸರುಗಳನ್ನು ಅವಲೋಕಿಸಿದಾಗ ಅವರ ಹೆಸರುಗಳ ಕೊನೆಯಲ್ಲಿ 'ಒಡೆಯ' ಎಂಬ ಶಬ್ದ ಜೋಡಣೆಯಾಗಿದೆ. ಈ ಒಡೆಯ ಹೆಸರಿನವರು ಹೆಚ್ಚಾಗಿ ಮಂಗಳೂರು-ಕರಾವಳಿ-ಶಿವಮೊಗ್ಗಪ್ರದೇಶಗಳಲ್ಲಿ ಕಾಣುವರು. ಈ ಒಡೆಯ ಶಬ್ದ ತದನಂತರ ಕಾಲದಲ್ಲಿನ ಚರಿತ್ರೆಯಲ್ಲಿ ಕಾಣುವ ಸಂಗಮನಿಗೆ ಇರುವುದಿಲ್ಲ.

ಈ ಸಹೋದರರು ವಿವಿಧ ಭಾಗಗಳಲ್ಲಿ ಮಹಾಮಂಡಳೇಶ್ವರರಾಗಿ ಆಡಳಿತ ನಡೆಸುತ್ತಿದ್ದರು. ಕೆಲವೊಮ್ಮೆ ಜಂಟಿಯಾಗಿ ಆಡಳಿತ ನಡೆಸಿದರು. ಈ ಕುರಿತ ವಿವರಗಳು ಅನೇಕ ಶಾಸನಗಳಲ್ಲಿವೆ. ಆ ಯಾವ ಶಾಸನಗಳಲ್ಲಿ ಈ ಐವರು ಸಂಗಮನ ಮಕ್ಕಳೆಂದು ಪ್ರಸ್ತಾಪಿಸಿಲ್ಲ. ಸಂಗಮ ಎಂಬ ಹೆಸರು 1380ರ ಶಾಸನದಲ್ಲಿ ಮೊದಲು ಕಂಡಿದೆ (ಮಂಡ್ಯ ಜಿಲ್ಲೆಯ ಬೀಚೇನಹಳ್ಳಿಯ ಶಾಸನದಲ್ಲಿದೆ.) ಆದರೆ ಅದು ತದನಂತರ ಕಾಲದ ಶಾಸನವಾಗಿದೆ. ಕುಮಾರವ್ಯಾಸನು ಕಲಿಯುಗದಲ್ಲಿದ್ದ ಕಂಪನದ ಮಹತ್ವವನ್ನು ವಿವರಿಸಿದ್ದಾನೆ. ಬಾದಾಮಿಯ ತಟ್ಟುಕೋಟೆಯ ಶಾಸನದಲ್ಲಿ ಹರಿಹರನ ಆಳ್ವಿಕೆಯು ಪಶ್ಚಿಮ–ಪೂರ್ವ ಸಮುದ್ರಾಧಿಪತಿ ಎನ್ನಲಾಗಿದೆ (ಐ.ಎ. 10, 1881, ಬೀಳಗಿ ನಂ. 87, ಪು. 63–1340). ಮುಂದೆ ಸಾಮ್ರಾಜ್ಯ ಸ್ಥಾಪನೆ ಆದ ಬಳಿಕ 1361 ರಲ್ಲಿ ಸಂಗಮರು ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಸಮುದ್ರಾಧಿಪತಿ ಎನಿಸಿದ್ದಾರೆ (ಎ.ಕೆ. 10, ಕೋಲಾರ 34, (ಚಿಕ್ಕಪುರ).

ಸಂಗಮರನ್ನು ಕಲ್ಯಾಣ ಚಾಳುಕ್ಯಾನ್ವಯರೆಂದು ಕರೆಯಲಾಗಿದೆ (ಎ.ಕೆ. 9 (ಪ) ಪಸ್ತಾವನೆಯಲ್ಲಿದೆ) ಅಥವಾ ಇವರು ಕೇಶಿರಾಜನ ವಂಶಸ್ಥರೆಂದಿದ್ದಾರೆ. ಸಂಗಮ ಸಹೋದರರಲ್ಲಿ ಕಂಪಣ (ಅಪರ್ಣ ಅದೇ, ಪು. 31) ಮುದ್ದಪ ಬೇಗ ತೀರಿಕೊಂಡರು. ಮಾರಪನು 1347ರ ಶಾಸನದಲ್ಲಿ (ಎಂಎಆರ್. 1929, ಸೊರಬ 90, ಹೆಜ್ಜೆ ತಾಮ್ರ ಶಾಸನ) ಒಂದು ತಾಮ್ರ ಶಾಸನದಲ್ಲಿ ಮಾರಪನು ತನ್ನ ತಂದೆ ಸಂಗಮನ ಹೆಸರಿನಲ್ಲಿ ಸಂಗಮಪುರ ಮತ್ತು ತನ್ನ ಹೆಸರಿನ ಮಾರಪುರವನ್ನು ಕಟ್ಟಿಸಿದನು (ಎ.ಕೆ. 8, ಸೊರಬ, 375, ಕಾತವಳ್ಳಿ ಅಗ್ರಹಾರ). ಆದರೆ ಅದರಲ್ಲಿ ಆತನ ಇನ್ನಿತರ ಸಹೋದರರ ಹೆಸರುಗಳಿಲ್ಲ. ಈ ದಾಖಲೆಯೇ ಪ್ರಶ್ನಾದಾಯಕವಾಗಿ ಉಳಿದಿದೆ. 1330(?)ರ ಹೆಮ್ಮದ ಶಾಸನ (ಚಾಮರಾಜನಗರ ಜಿಲ್ಲೆ)ದಲ್ಲಿ ಸಂಗಮನ ತಂದೆ ಬುಕ್ಕ (?) ಎನ್ನಲಾಗಿದೆ. ಈ ಶಾಸನದ ಕಾಲಮಾನ ಇನ್ನೂ ಸ್ಪಷ್ಟವಾಗಿ ನಿರ್ಧರಿಸಿದ್ದು ಕಾಣುವುದಿಲ್ಲ.

ಈ ಎಲ್ಲಾ ಕಾರಣಗಳಿಂದ ಸಂಗಮ ಎಂಬ ಹೆಸರು ವಿಜಯನಗರ ಶಾಸನಗಳಲ್ಲಿ ಕಾಣುತ್ತದೆ. ಶಾಸನಗಳ ಅಧ್ಯಯನದಿಂದ ಸಂಗಮ ಹೆಸರು ಒಬ್ಬ ವ್ಯಕ್ತಿಯದೇ ಅಥವಾ ನದಿ ನೀರಿನ ಹೆಸರೇ ಎಂಬುದು ಇನ್ನೂ ವಾದಗ್ರಸ್ಥ ವಿಷಯವಾಗಿದೆ.

5. ಪುರಾತತ್ವದಲ್ಲಿ ಹಂಪೆ :

ಭಾರತೀಯ ಚರಿತ್ರೆಯಲ್ಲಿ ಇಂದಿನ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಿರುಹಾಳು ಗ್ರಾಮ ಅನೇಕ ಭಕ್ತರ ಬೀಡಾದಹಂಪೆಯು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದಿದೆ. ಆ ಸ್ಥಳವು ವಿಜಯನಗರ ಸಾಮ್ರಾಜ್ಯದ ಮೂರು ಅರಸು ಮನೆತನಗಳು ನೀಡಿದ ಬಹುದೊಡ್ಡ ಕೊಡುಗೆಗಳನ್ನು ಕಂಡಿದೆ ಈ ಮನೆತನಗಳ ಏಳುಬೀಳುಗಳನ್ನು ವೀಕ್ಷಿಸಿದೆ. ಇವುಗಳ ಬೆಳವಣಿಗೆ ಮತ್ತು ಕೊಡುಗೆಗಳನ್ನು ಅನುಲಕ್ಷಿಸಿದಾಗ ಅಲ್ಲಿ ಏಕತೆ–ಐಕ್ಯತೆಯಿಂದ ಸ್ಥಿರ ಸರ್ಕಾರವನ್ನು ದೀರ್ಘಕಾಲ ಮೂರು ಮನೆತನಗಳು ತಮ್ಮ ತಮ್ಮ ಬುದ್ಧಿಶಕ್ತಿ ಸಾಮರ್ಥ್ಯ ಮತ್ತು ಚತುರತೆಯಿಂದ ರೂಪಿಸಿಕೊಂಡಿದ್ದು ತಿಳಿಯುತ್ತದೆ. ಅದರ ಫಲದಿಂದ ತಮ್ಮ ಸಾಮ್ರಾಜ್ಯದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಮತ್ತು ವಾಸ್ತು–ಶಿಲ್ಪಕಲೆಗಳ ಅಭಿವೃದ್ಧಿಯು ನಡೆದದ್ದು ಗೋಚರಿಸುತ್ತದೆ. ಈ ಕಾಲಘಟ್ಟದಲ್ಲಿ ಮುಸ್ಲಿಂ ಸುಲ್ತಾನರೇ ವಿಜಯನಗರ ಅರಸರ ಪರಮ ವೈರಿಗಳಾಗಿದ್ದರು. ಅವರು ರಾಜಕೀಯವಾಗಿ ಬೆಳೆಯುವ ದೃಷ್ಟಿಯಿಂದ ನಡೆದದಾಳಿಗಳಿಂದ ಹೇರಳ ಪ್ರಮಾಣದ ಪ್ರಾಣಹಾನಿ ಸಂಭವಿಸಿತು. ಆಸ್ತಿ–ಪಾಸ್ತಿಗಳು, ಸ್ಮಾರಕ ಶಿಲ್ಪಗಳು ನಾಶವಾದವು. ಆದರೂ ಸಹ ಹಿಂದೂ–ಮುಸ್ಲಿಂ, ಕ್ರೈಸ್ತ ಬಾಂಧವರು ಈ ಕಾಲಾವಧಿಯಿಂದ ಪರಸ್ಪರ ಹೊಂದಾಣಿಕೆ ಮಾಡಿಕೊಂಡು ನೆಮ್ಮದಿಯಿಂದ ಜೀವನ ನಡೆಸಿದರು. ವಿಜಯನಗರ ಕಾಲಾವಧಿಯಲ್ಲಿ ಮತ್ತು ಅದರ ಪತನಾನಂತರ ಹಿಂದೂ–ಮುಸ್ಲಿಂ ಈರ್ವರ ನಡುವೆ ಅಲ್ಲಲ್ಲಿ ತೀಕ್ಷ್ಣಕರವಾದ ವೈಮನಸ್ಸು, ದಾಳಿಗಳು ಮತ್ತು ದೌರ್ಜನ್ಯಗಳು ನಡೆದವು. ಅದೇನೇ ಇದ್ದರೂ ನಮ್ಮ ದೇಶದ ಹಳ್ಳಿ–ಹಳ್ಳಿಗಳಲ್ಲಿ ಈರ್ವರು ಸಹಬಾಳ್ವೆಯಿಂದಸಹಕಾರದಿಂದ ಬಾಳುತ್ತಿರುವುದು ನಮ್ಮ ಸಂಸ್ಕೃತಿಯ ಹಿರಿಮೆ ಎನಿಸಿದೆ.

ವಿಜಯನಗರದ ದೀರ್ಘ ಕಾಲ ರಾಜಧಾನಿಯಾಗಿ ಮೆರೆದ ಹಂಪಿಯು ಕುಂತಳ ಮಂಡಳದ ಬಲ್ಲಕುಂದೆ ನಾಡಿನ ದೊರೆನಾಡಿನಲ್ಲಿ ಸೇರಿದ್ದಿತು. ಈ ಸ್ಥಳವು ವಿದ್ಯಾನಗರ, ಹಂಪಿ ಎಂದು ಖ್ಯಾತಿ ಪಡೆದಿತ್ತು. ಅಲ್ಲಿ ಕೃಷ್ಣಾಪುರ, ಅಚ್ಯುತರಾಯಪುರ,

ವಿಠಲಾಪುರ, ವರರಾಜಮ್ಮ ಪಟ್ಟಣ, (ಪೆನುಗೊಂಡ ದ್ವಾರ ಹತ್ತಿರ), ಕಡೆರಾಮಪುರ, ಸಾಲೆವೆ ರಾಮಲ ಮಡರಾಯಪುರ (ಅನಂತಶಯನ ಗುಡಿ), ನಾಗಲಾದೇವಿಪುರ, ತಿರುಮಲದೇವಿ ಪಟ್ಟಣ (ಹೊಸಪೇಟೆ)ಗಳು ಪ್ರಮುಖವಾಗಿ ಒಳಗೊಂಡಿದ್ದವು. ಈ ಪ್ರಸಿದ್ಧ ಪ್ರಾಚೀನ ನಗರದ ಕೆಲ ವೈಶಿಷ್ಟ್ಯತೆಗಳನ್ನು ಪುರಾತತ್ವ ಹಿನ್ನೆಲೆಯಲ್ಲಿ ಅವಲೋಕಿಸಲಾಗಿದೆ.

ಹಂಪಿಯ ತುಂಗಭದ್ರಾ ನದಿಯ ವಿರೂಪಾಕ್ಷ ದೇವಾಲಯದ ಸುತ್ತಣ ಪ್ರದೇಶವನ್ನು ಪಂಪಾತೀರ್ಥ–ಪಂಪಾಕ್ಷೇತ್ರವೆನ್ನುವರು. ಈ ಸ್ಥಳಕ್ಕೆ ಪಂಪಾಪುರ, ಪಂಪಾಪಟ್ಟಣವೆನ್ನುವರು. ಅಲ್ಲಿನ ಅಧಿದೈವ ವಿರೂಪಾಕ್ಷನ ಜಾತ್ರೆಯ ಫಲಪೂಜೆಯು ಅಲ್ಲಿನ ಚಕ್ರತೀರ್ಥದ ಬಳಿ ನಡೆಯುತ್ತಿರುವುದು ವಿಶೇಷವೆನಿಸಿದೆ. ಪಂಪ ಮಹಾತ್ಮೆಯಲ್ಲಿ ಹಂಪಿಯ ಸುತ್ತಳತೆ 100 ಚದರು ಮೈಲಿಯಿದೆ ಎಂದು ಉಲ್ಲೇಖಿಸಿದೆ. ನಿಕೊಲೊಕೊಂತಿಯ (1420) ಬರವಣಿಗೆಯಲ್ಲಿ ಹಂಪಿ ನಗರವು ಅರವತ್ತು ಮೈಲು ಸುತ್ತಳತೆಯಿತ್ತೆನ್ನಲಾಗಿದೆ. ಅಬ್ದುಲ್ ರಜಾಕನ ಪ್ರಕಾರ ವಿಜಯನಗರ ರಾಜ್ಯವು ಉತ್ತರ–ದಕ್ಷಿಣಕ್ಕೆ ಸಿಲೋನ್‌ನಿಂದ ಗುಲ್ಬರ್ಗವರೆಗೆ ಮತ್ತು ಪೂರ್ವ ಮತ್ತು ಪಶ್ಚಿಮದವರೆಗೆ, ಬೆಂಗಾಲದಿಂದ ಮಲಬಾರ ಪ್ರದೇಶದವರೆಗೆ ಹಬ್ಬಿತ್ತು. ಈ ಪ್ರದೇಶವನ್ನು ನೋಡಲು 20 ವರ್ಷ ಬೇಕೆನ್ನಲಾಗಿದೆ. ರಷ್ಯಾದ ಪ್ರವಾಸಿ ನಿಕಟಿನ್ (1468), ಪೋರ್ತುಗೀಜ ಪ್ರವಾಸಿ ಡೂರಟೆಬಾರಬೋಸ (1518) ಮತ್ತು ಡೊಮಿಂಗೋ ಪಯೇಸ್ (1520) ಇನ್ನಿತರರ ಬರವಣಿಗೆಗಳು ಹಂಪೆಯ ವಿಜಯನಗರ ಕಾಲದ ಇತಿಹಾಸವನ್ನು ಉಲ್ಲೇಖಿಸುತ್ತವಿದೇಶಿಯರು ಈ ನಗರ, ಅದರ ವಿಸ್ತಾರ, ಕೋಟೆ, ಬಜಾರ್, ಅಂಗಡಿ, ಅರಮನೆ, ಸುಂದರ ಕಟ್ಟಡ, ದಿವಾನಾಹ ಬನಾಹೆ, ದ್ವಾರ ಬಾಗಿಲು, ಕಾಲುವೆ, ದೇವಾಲಯ ಇವುಗಳಲ್ಲದೆ ಆ ಕಾಲದ ಸಮಾಜ, ಹಬ್ಬ, ವಿವಿಧ ವೃತ್ತಿ, ಮಾರುವ ವಸ್ತುಗಳು ಮುಂತಾದ ಮಾಹಿತಿಗಳನ್ನು ಒದಗಿಸುತ್ತಾರೆ. ಈ ನಗರದ ಭೌಗೋಳಿಕ ಪರಿಸರ, ಮಹತ್ವದ ಪವಿತ್ರ ಸ್ಥಳಗಳು, ದೇವಾಲಯಗಳು ಅವುಗಳಿಗೆ ಹೊಂದಿದ ಪರಂಪರೆಗಳು ವಿಶೇಷವೆನಿಸಿವೆ.

ವಿಜಯನಗರವು ಹರಿಹರನ ಕಾವ್ಯಗಳಲ್ಲಿ ಪೂರ್ವಕ್ಕೆ ಕಿನ್ನಾರೇಶ್ವರ, ಪಶ್ಚಿಮಕ್ಕೆ ಸೋಮನಾಥೇಶ್ವರ (ಶಿವಪುರ ಹತ್ತಿರ), ಉತ್ತರಕ್ಕೆ ವಾಣಿ ಭದ್ರೇಶ್ವರ (ಗಂಗಿವರ) ಮತ್ತು ದಕ್ಷಿಣಕ್ಕೆ ಜಂಭುಕೇಶ್ವರ (ಹೊಸಪೇಟೆ ಹತ್ತಿರ) ವರೆಗೆ ವಿಸ್ತರಿಸಿತ್ತೆನ್ನಲಾಗಿದೆ. ರಾಘವಾಂಕನ ಹರಿಶ್ಚಂದ್ರ ಕಾವ್ಯಗಳಲ್ಲಿ ಹಂಪೆಯ ವರ್ಣನೆಯಿದೆ. ವಿಜಯನಗರ ಅರಸರು ಕ್ರಿಶ್ಚಿಯನ್ನರನ್ನು ಮತ್ತು ಮಹಮ್ಮದರನ್ನು ಗೌರವಿಸಿದರು. 2ನೇ ದೇವರಾಯನ ಅಧಿಕಾರಿ ಶ್ರೀಪಾದಸೇನನು ಕಟಿಗೆಯ ಅಹಮದಖಾನ್‌ನಾಗಿದ್ದನು.

ಲಕ್ಕಣ ದಂಡೇಶನು ವಿರೂಪಾಕ್ಷ ಕ್ಷೇತ್ರವನ್ನು ಕಾಶಿಗಿಂತಲೂ ಇಮ್ಮಡಿ ಶ್ರೇಷ್ಠವಾಗಿದ್ದಿತೆಂದಿದ್ದಾನೆ (ಶಿವತತ್ವ ಚಿಂತಾಮಣಿ 38, 244). ಚಂದ್ರಕವಿಯು ವಿರೂಪಾಕ್ಷಾಸ್ಥಾನವರ್ಣನಂ ಕಾವ್ಯ ರಚಿಸಿದ್ದಾನೆ. 1366 ರಲ್ಲಿ ವಿರೂಪಣ, ನಂತರ ಬಸವೆಯ ದಂಡನಾಯಕರ ಕಾಲದಲ್ಲಿ ಹಂಪೆಯ ವಿರೂಪಾಕ್ಷನಿಗೆ ದಾನ ನೀಡಲಾಗಿದೆ. ಮುಂದೆ 1377 (ಹೆಬಸೂರು), 1378 (ಹುಲಿಕೆರೆ) ಆನಂತರ ವಿರೂಪಾಕ್ಷನೇ ಸಾಕ್ಷಾತ್ ಕುಲಪರಮದೈವ ಎಂದು ಹೇಳಲಾಗಿದೆ. ವಿರೂಪಾಕ್ಷ ಸಂಗಮರಿಗೆ ಕುಲದೈವವಾಗಿದ್ದನು (2ನೇ ಹರಿಹರನ ಕಾಲದಲ್ಲಿ). ಶ್ರೀ ವಿರೂಪಾಕ್ಷ ಸೀಮೆಯನ್ನು ನಗರದ ನೆಲೆವೀಡು ಎನ್ನಲಾಗಿದೆ (ಎ.ಕೆ. 7, ಶಿವಮೊಗ್ಗ 30, (1413?) (ಬೆಂಕೀಪುರ).

ಶ್ರೀನಿವಾಸಪುರ ತಾಲ್ಲೂಕಿನ ಹೊಂದಲಿಯ ಶಾಸನದಲ್ಲಿ 2ನೇ ಹರಿಹರನು ವಿಜಯನಗರಿಯಲ್ಲಿ ವಿರೂಪಾಕ್ಷ ದೇವರ ಕರುಣದಲ್ಲಿ... ವಿವರವಿದೆ (ಎ.ಕೆ. 10, ಗೌರಿಬಿದನುರು 68 –ನಗರೆ). ವಿರೂಪಾಕ್ಷನು ಹೇಮಕೂಟದಲ್ಲಿ ಅವತಾರವೆತ್ತಿದನೆನ್ನಲಾಗಿದೆ.

ದಕ್ಷಿಣ ಭಾರತದಲ್ಲಿ ಕನ್ನಡ, ತೆಲುಗು, ತಮಿಳು ಮತ್ತು ಸಂಸ್ಕೃತ ಭಾಷೆಗಳು ವಿಜಯನಗರ ಕಾಲದಲ್ಲಿ ಬೆಳವಣಿಗೆ ಹೊಂದಿದವು. ಇದರಿಂದ ಅನೇಕ ಸಾಹಿತ್ತಿಕ ಕೃತಿಗಳು ರಚನೆ ಆದವು. ವಿಭಿನ್ನ ಧರ್ಮಗಳ ಬೆಳವಣಿಗೆಗೆ ನೀಡಿದಷ್ಟು ಪ್ರೋತ್ಸಾಹವನ್ನು ಈ ಎಲ್ಲಾ ಭಾಷೆಯ ಜನರಿಗೆ ನೀಡಲಾಗಿದೆ.

1199ರಲ್ಲೇ ಸಿಂಧರ ಸೈನ್ಯವು ಹಂಪೆಯ ರಕ್ಷಣೆಗಾಗಿ ಮಾತಂಗ ಪರ್ವತದ ಬಳಿ ತಮ್ಮ ಸೈನ್ಯವನ್ನೇ ಇಟ್ಟಿದ್ದಿತು. ಈ ವಿಷಯವನ್ನು ಹಂಪೆಯ ಶಾಸನವೊಂದು ವಿವರಿಸಿದೆ. ಇದರಿಂದ 12ನೇ ಶತಮಾನದವಷ್ಟೊತ್ತಿಗೆ ಹಂಪೆಯು ಒಂದು ಮಹತ್ವದ ಸಾಮಾಜಿಕ–ಧಾರ್ಮಿಕ ಸ್ಥಳವಾಗಿದ್ದುದು ತಿಳಿಯುತ್ತದೆ.

ಹೊಯ್ಸಳರ ಆಳ್ವಿಕೆಯ ಅವನತಿ ನಂತರ ದಕ್ಷಿಣ ಭಾರತದ ಕರ್ನಾಟಕದಲ್ಲಿ ಸ್ಥಾಪನೆ ಆದ ಹಿಂದೂ ಸಾಮ್ರಾಜ್ಯವೆಂದರೆ ವಿಜಯನಗರ. ಈ ಸಾಮ್ರಾಜ್ಯದ ಆಡಳಿತವನ್ನು ನಾಲ್ಕು ವಂಶಸ್ಥರು ನಡೆಸಿದರು. ಅವರು ಸಂಗಮ (1346–1485), ಸಾಳುವ (1485–1503), ತುಳುವ (1503–1570) ಮತ್ತು ಅರವೀಡು (1570–1672) ಮನೆತನಗಳು. ವಿಜಯನಗರ ಸಾಮ್ರಾಜ್ಯಕ್ಕೆ ಸೀಮಿತವಾಗಿ ಇಲ್ಲಿಯವರೆಗೆ ಸುಮಾರು 7000 ಶಾಸನಗಳು ಹೊರಬಂದಿವೆ ಎನ್ನುವರು. ಅದರಲ್ಲಿ ಅದರ ಅರ್ಧದಷ್ಟು ಕನ್ನಡದಲ್ಲಿ, 2000 ಕ್ಕೂ ಹೆಚ್ಚು ತಮಿಳಿನಲ್ಲಿ, 150ಕ್ಕೂ ಹೆಚ್ಚು ತೆಲುಗಿನಲ್ಲಿ ಮತ್ತು ಇನ್ನಿತರವುಗಳು ಸಂಸ್ಕೃತದಲ್ಲಿವೆ. ಹೇರಳ ಸಾಹಿತ್ತಿಕ ಆಕರಗಳು ಹೊರಬಂದಿವೆ. ಅದರಲ್ಲಿ ವಿದೇಶಿಯರ ಬರವಣಿಗೆಗಳು ವಿಶೇಷವೆನಿಸಿವೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಹಂಪಿ ಪರಿಸರದ ಚರಿತ್ರೆಯನ್ನು ಅವಲೋಕಿಸಿದಾಗ ಇತಿಹಾಸಪೂರ್ವ ಕಾಲದಿಂದ ಕಾಣುತ್ತದೆ.ಅದರಲ್ಲಿ ಮಧ್ಯಶಿಲಾಯುಗದ ವರ್ಣಚಿತ್ರಗಳು, ನೂತನ ತಾಮ್ರ ಶಿಲಾಯುಗ ನೆಲೆ, (ಮಸಲಯ್ಯನ ಗುಡ್ಡ) ಕಬ್ಬಿಣ–ಬೃಹತ್ ಶಿಲಾಯುಗ ನೆಲೆ–ಚಿತ್ರಗಳು ಮುಖ್ಯವಾಗಿವೆ. ಅವುಗಳ ಪುರಾವೆಗಳು ವೈವಿಧ್ಯಮಯವಾಗಿವೆ. ಮುಂದೆ ಶಾತವಾಹನ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಳಚೂರಿ, ಹೊಯ್ಸಳ ಮತ್ತು ಸೇವುಣರ ಆಳ್ವಿಕೆಯ ಕಾಲದವರೆಗಿನ ಹಲವಾರು ಪುರಾವೆಗಳು ಹಂಪಿಯಲ್ಲಿವೆ. ಅಲ್ಲಿ ಸಿಕ್ಕ ಒಂದನೇ ಶತಮಾನದ ದತ್ತಿ ಶಾಸನದಲ್ಲಿ 'ಉತ್ತರಸ್ ಪುಟಸ್ ದೇನಮ್' ಎಂದಿದೆ. ಅಲ್ಲಿ ಈ ಕಾಲದ ಬೌದ್ಧಸ್ತೂಪದ ಶಿಲ್ಪಕಲಾಪಟ್ಟಿಕೆಗಳೂ ಸಿಕ್ಕಿವೆ. ಬಾದಾಮಿ ಚಾಲುಕ್ಯ ದೊರೆ ವಿನಯಾದಿತ್ಯನ ಆಳ್ವಿಕೆಯ ಕಾಲದ ತಾಮ್ರಪಟ ಶಾಸನದಲ್ಲಿ (ಕ್ರಿ.ಶ. 689) ಪಂಪಾತೀರ್ಥದ ಉಲ್ಲೇಖವಿದೆ. ಅಲ್ಲಿನ ಒಂದು ದೇವಾಲಯವು ಸು. ಕ್ರಿ.ಶ. 8ನೇ ಶತಮಾನದ್ದಾಗಿದೆ. ವಿರೂಪಾಕ್ಷ, ಹಂಪಾದೇವಿ ಮುಂತಾದ ದೇವರ ಹೆಸರುಗಳನ್ನು 1199ರ ಕುರುಗೋಡು ಶಾಸನ ಹೇಳಿದೆ. ಕಳಚೂರಿ ಅರಸ 2ನೇ ಬಿಜ್ಜಳನು ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಮಹಾದಾನ ನೀಡಿದ್ದಾನೆ. ವಿಜಯನಗರ ಪೂರ್ವದಲ್ಲಿ ಹಂಪೆಯನ್ನು ರಕ್ಷಣೆ ಮಾಡಿದವರಲ್ಲಿ ಸಿಂಗೆಯನಾಯಕ, ಕಂಪಿಲರಾಯ, ಕುಮಾರ ರಾಮನಾಥರು ಪ್ರಮುಖರು. ಹರಿಹರ ಮತ್ತು ರಾಘವಾಂಕರ ಜನ್ಮಸ್ಥಳವೇ ಹಂಪಿ.

ಪರಂಪರೆಯನ್ನು ವೀಕ್ಷಿಸಿದಾಗ ಆನೆಗುಂದಿಯ ಅರಸರು ವಿರೂಪಾಕ್ಷದೇವರ ರಥೋತ್ಸವ ಸಂದರ್ಭದಲ್ಲಿ ಹಂಪಿಗೆ ಬಂದು ಉಳಿಯುವರು. 1336/1346ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಿಂದ ಅಂತ್ಯದವರೆಗಿನ (1565) ರಾಜಕೀಯ ಚರಿತ್ರೆಯಲ್ಲಿ ದಕ್ಷಿಣ ಭಾರತದ ವೈವಿಧ್ಯಮಯ ಸಾಂಸ್ಕೃತಿಕ ಚರಿತ್ರೆಯ ಬೆಳವಣಿಗೆಯನ್ನು ಕಾಣುತ್ತೇವೆ. ಅದರಲ್ಲಿ ವಿಭಿನ್ನ ಮತಧರ್ಮದ ದೇವಾಲಯಗಳು, ಬಸದಿಗಳು, ಮಠಗಳು ಇತ್ಯಾದಿ ಸ್ಮಾರಕಗಳು ಮತ್ತು ಶಿಲ್ಪಗಳಿವೆ.

ಕೋಟೆ, ಧರ್ಮಶಾಲೆ–ಛತ್ರ ಇತ್ಯಾದಿಗಳು :

ವಿಜಯನಗರ ಕಾಲದಲ್ಲಿ ಛತ್ರಗಳ ನಿರ್ಮಾಣಕ್ಕೆ ಹೆಚ್ಚು ಮಹತ್ವ ಕೊಡಲಾಗಿದೆ. ಆರುನೂರಕ್ಕೂ ಹೆಚ್ಚು ಕಂಬವುಳ್ಳ ಒಂದು ದೊಡ್ಡ ಛತ್ರವಿದೆ. ಅದು ಉದ್ದಾನ ವೀರಭದ್ರ ದೇವಾಲಯದ ಹತ್ತಿರವಿದೆ ಎಂದು ಗುರ್ತಿಸುವರು. ಇದನ್ನು ಹಿರಿಯ ಕಾಲುವೆ ಛತ್ರವೆನ್ನಲಾಗಿದೆ.ಈ ಛತ್ರಗಳಲ್ಲಿ ಕೆಲವುಗಳು ರಾಮಾನುಜಕೂಟಗಳಾಗಿವೆ. ಈ ರಾಮಾನುಜ ಛತ್ರಗಳು ಶ್ರೀ ವೈಷ್ಣವರಿಗೆ ಊಟ–ವಸತಿಗಳಿಗೆ ಸೀಮಿತವಾಗಿದ್ದವು(ಎಸ್.ಐ.ಐ. 4, ಸಂ. 280, 9–2, ಪು. 564). 15 ಅಂಕಣವುಳ್ಳ ಧರ್ಮಶಾಲೆಯನ್ನು ಆಯತಾಕಾರವಾಗಿ ಅಲ್ಲಿ ನಿರ್ಮಿಸಲಾಗಿದೆ (1439).ಅಲ್ಲಿನ ಒಂದು ಬಾವಿಯನ್ನು 2ನೇ ದೇವರಾಯನಿಗೆ ಪುಣ್ಯವಾಗಲೆಂದು ಅಹಮದ್‌ಖಾನ್ ಕಟ್ಟಿಸಿದ್ದಾನೆ (ಎಸ್.ಐ.ಐ. 9, ಭಾಗ–2, 447).

ಕೋಟೆ :

ವಿಜಯನಗರದ ರಾಜಧಾನಿಯಾಗಿದ್ದ ಹಂಪಿಯ ರಕ್ಷಣೆಗಾಗಿ ಬಲಾಢ್ಯ ಕೋಟೆಯನ್ನು ನಿರ್ಮಿಸಲಾಗಿತ್ತು. ಅದಕ್ಕೆ ಎಂಟು ಸುತ್ತಿನ ಕೋಟೆಯಿದೆ ಎಂದು ಹಲವರು ಉಲ್ಲೇಖಿಸಿದ್ದಾರೆ. ಈಗ ಕಾಣುವುದು ಕೇವಲ ನಾಲ್ಕು ಸುತ್ತಿನ ಕೋಟೆಗೋಡೆ. ಉಳಿದವು ಅಲ್ಲಿರುವ ಭೌಗೋಳಿಕ ಸನ್ನಿವೇಶದಿಂದ ನೆಲ, ಜಲ ಮತ್ತು ಗಿರಿಗಳನ್ನು ಕೂಡಿಸಿರಬೇಕೆಂಬ ಅಭಿಪ್ರಾಯಗಳಿವೆ. ಹಂಪಿ ಪರಿಸರದಲ್ಲಿ ಅನೇಕ ಬಾಗಿಲುಗಳಿದ್ದವು. ಅವುಗಳಲ್ಲಿ ಸಿಂಘಾರದ ಹೆಬ್ಬಾಗಿಲು, ಬೇಟೆಕಾರರ

ಹೆಬ್ಬಾಗಿಲು, ಗುಮ್ಮಟದ ಹೆಬ್ಬಾಗಿಲು, ಕೋಟೆಶಂಕರ ದೇವರ ಬಾಗಿಲು, ಭೀಮನ ಹೆಬ್ಬಾಗಿಲು, ಸೋಮವಾರದ ಬಾಗಿಲು, ಉದಯಗಿರಿ ಬಾಗಿಲು, ಹರೆಶಂಕರ ಬಾಗಿಲು, ಪೆನುಗೊಂಡ ಬಾಗಿಲು–1, ಪೆನುಗೊಂಡ ಬಾಗಿಲು–2ಗಳು ಮುಖ್ಯವಾಗಿವೆ. ಅವುಗಳನ್ನು ಡಾ. ಎಂ. ಕೊಟ್ರೇಶ ಅವರು ಗುರುತಿಸಿದ್ದಾರೆ (ವಿಜಯನಗರ ಅಧ್ಯಯನ, 2005, ಪು. 136–52). ಈ ಅವಧಿಯಲ್ಲಿ ನಿರ್ಮಿಸಿದ ಬಹುತೇಕ ಸ್ಮಾರಕಗಳು ಮತ್ತು ನೀಡಿದ ದತ್ತಿದಾನಗಳು ರಾಜ/ಅಧಿಕಾರಿ/ ತಂದೆತಾಯಿಗಳಿಗೆ ಮತ್ತು ಇನ್ನಿತರರಿಗೆ ಪುಣ್ಯವಾಗಲೆನ್ನಲಾಗಿದೆ.

ಹಂಪೆಯ ಭೌಗೋಲಿಕ ಪ್ರದೇಶದಲ್ಲಿ ನಿರಂತರವಾಗಿ ಹರಿಯುವ ತುಂಗಭದ್ರಾ ನದಿ ಪರಿಸರದಲ್ಲಿ ವಿಶಾಲವಾದ ಶಿಲೆಯ ಏರಿಳಿತವುಳ್ಳ ಐದು ಗುಡ್ಡ/ಪರ್ವತಗಳಿವೆ. ಅವುಗಳಲ್ಲಿ ಹೇಮಕೂಟ, ಮಾತಂಗ, ಮಾಲ್ಯವಂತ, ಋಷ್ಯವಂತ ಪ್ರಮುಖವಾಗಿವೆ. ಈ ಗುಡ್ಡ/ಪರ್ವತಗಳ ಶಿಲೆಯನ್ನೇ ಈ ಅವಧಿಯಲ್ಲಿ ಅನೇಕ ಸ್ಮಾರಕಗಳನ್ನು ಕಟ್ಟಲು ಬಳಸಲಾಗಿದೆ.

ಈ ಹಂಪೆಯಲ್ಲಿನ ತೀರ್ಥವನ್ನು ಹಂಪಾತೀರ್ಥ, ಪಂಪಾ ತೀರ್ಥ, ಪಂಪಾಕ್ಷೇತ್ರ ತೀರ್ಥವೆನ್ನಲಾಗಿದೆ. ಅವುಗಳಲ್ಲಿ ಶ್ರೀ ಮೈಲಾರದೇವರ ತೀರ್ಥ, ಶ್ರೀ ಮಲ್ಯವಂತ ತೀರ್ಥ, ಸಾಲಿಗ್ರಾಮ ತೀರ್ಥ, ಶ್ರೀ ಪಾಪವಿನಾಶಿಯ ತೀರ್ಥ, ಭವನಾಶಿ ತೀರ್ಥ, ಶ್ರೀ ಶ್ರೀರುಣವಿಮೋಚನ ತೀರ್ಥ, ಶ್ರಿ ಚಕ್ರತೀರ್ಥ ಮುಂತಾದವುಗಳಿದ್ದುದನ್ನು ಪರಿಚಯಿಸಿದ್ದಾರೆ. ಹಂಪಿಯಲ್ಲಿ ಹಲವಾರು ತೇರುಬೀದಿಗಳಿದ್ದವು. ಅವುಗಳಲ್ಲಿ ತೇರುಬೀದಿ, ಕೃಷ್ಣಾಪುರ ಅದರ ತೇರುಬೀದಿ, ಅದರ ಪೇಟೆ, ಅಚ್ಯುತಾಪುರ ಅದರ ತೇರುಬೀದಿ, ಬದಿಗೆ ಅಂಗಡಿ, ಮಂಟಪಗಳು (ಅಚ್ಯುತರಾಯ ಪೇಟೆ), ವಿಠಲಾಪುರ– ಅದರ ತೇರುಬೀದಿ, ವಿರೂಪಾಕ್ಷ ತೇರುಬೀದಿಗಳು ಮುಖ್ಯವೆನಿಸಿವೆ. ಅಲ್ಲಿನ ಪಟ್ಟಣಗಳಲ್ಲಿ ವರದರಾಜಮ್ಮನ ಪಟ್ಟಣ, ಸೋಮಲಾಪುರ, ಕಡೆರಾಮಪುರ, ತಿರುಮಲ ಮಹಾರಯಪುರ, ನಾಗಳಾದೇವಿ ಅಗ್ರಹಾರ, ತಿರುಮಲ ದೇವಿಯಮ್ಮನವರ ಪಟ್ಟಣಗಳು ಮುಖ್ಯವೆನಿಸಿವೆ.

ದ್ವಾರಬಾಗಿಲುಗಳು : ಅಲ್ಲಿನ ಅನೇಕ ದೇವಾಲಯಗಳಿಗೆ ದ್ವಾರಬಾಗಿಲುಗಳಿದ್ದವು. ಅವುಗಳಲ್ಲಿ ಕೋಟೆಶಂಕರ ದೇವರ ಬಾಗಿಲು, ಜಡೆಯಶಂಕರ ದೇವರ ಬಾಗಿಲು, ಜಡೆಯ ಶಂಕರ ದೇವರ ದಿಡ್ಡಿ, ಸಿಂಗಾರದ ಹೆಬ್ಬಾಗಿಲು, ಸೋಮವಾರದ ಬಾಗಿಲು, ಅರೆಶಂಕರ ಬಾಗಿಲು, ಬೇಟೆಕಾರರ ಹೆಬ್ಬಾಗಿಲು, ಸ್ವಾಮಿದೇವರ ಬಾಗಿಲು ಉಪ್ಪರಿಗೆ ಬಾಗಿಲು, ಉದಯಗಿರಿ ಬಾಗಿಲು, ಕೊಠಾರದ ಬಾಗಿಲು, ಹೂವಿನ ಬಾಗಿಲು ಮತ್ತು ಪೆನುಕೊಂಡೆ ಬಾಗಿಲುಗಳಿದ್ದವು. ಇವುಗಳನ್ನು ಶ್ರೀಮತಿ ವಿನೋದ ಪಾಟೀಲ ಅವರು ತಮ್ಮ ಅಧ್ಯಯನದಲ್ಲಿ ಪರಿಚಯಿಸಿದ್ದಾರೆ (ವಿಜಯನಗರ ಅಧ್ಯಯನ –12, 2007, ಪು. 125–141).

ಇವುಗಳಲ್ಲದೆ ಪಾನಂ–ಸುಪಾರಿ ರಸ್ತೆಯಲ್ಲಿ ಅಡಿಕೆ ಮತ್ತು ಎಲೆ ಮಾರುತ್ತಿದ್ದರು. ಅಲ್ಲಿ ಏಳು ಅಂಕಣಗಳುಳ್ಳ ಅಂಗಡಿ ಮತ್ತು (1557) ಗಮನಿಸುವ ಅಂಶವೆಂದರೆ ಕೃಷ್ಣಾಪುರ ಮತ್ತು ಅಚ್ಯುತಾಪುರ ತೇರು ಬದಿಯಲ್ಲಿರುವ ಪ್ರತಿಯೊಂದು ಅಂಗಡಿಯಿಂದ ಒಂದು ಕಾಸನ್ನು ಸಂಗ್ರಹಿಸಿ ಅದನ್ನು ಮುದ್ದು ವೀರಣ್ಣ (ಉದ್ದಾನ ವೀರಭದ್ರ) ದೇವರ ಪೂಜೆಗೆ ಕೊಡುತ್ತಿದ್ದರೆನ್ನಲಾಗಿದೆ(ವಿಪಿಆರ್. 1985, 1983–84, ಪು. 96–100; 1991. 1984–87, ಪು. 191–94, ಎಸ್.ಐ.ಐ. 4, ಸಂ. 266).

ವಿರೂಪಾಕ್ಷ ದೇವರನ್ನು ಪಂಪಾಪತಿಯೆಂದು ಈ ದೇವರ ಪ್ರದೇಶವನ್ನು ಹಂಪೆ ಎಂದೂ/ಪಂಪಾಕ್ಷೇತ್ರವೆಂದು ಈ ದೇವಾಲಯದ ಎದುರಿನ ಬೀದಿಯನ್ನು ತೇರುಬೀದಿ ಎಂದು ಅದರ ದಕ್ಷಿಣ ಭಾಗವನ್ನು ಕೃಷ್ಣಾಪುರವೆಂದು, ಅದರ ಎದುರಿನ ಬೀದಿಯನ್ನು ಬಾಲಕೃಷ್ಣನ ತೇರುಬೀದಿ ಎಂದೂ ಅದರ ಪಾರ್ಶ್ವದಲ್ಲಿನ ಮಂಟಪ ಶಿಲಾಮಂಟಪಗಳೆಂದು ಶಾಸನಗಳು ಉಲ್ಲೇಖಿಸಿವೆ. ಮಂಟಪವೊಂದು ಒಬ್ಬ ವ್ಯಾಪಾರಿಯ ಅಂಗಡಿಯಾಗಿದ್ದಿತೆನ್ನಲಾಗಿದೆ. ಅದನ್ನು ಲಕುಮರಸನಾಯಕನ ಅಂಗಡಿ ಎನ್ನಲಾಗಿದೆ. ಈ ದೇವಾಲಯಗಳ ಎದುರಿನ ಗುಡ್ಡವನ್ನು ಮಾತಂಗ ಪರ್ವತವೆನ್ನುವರು. ಅದರ ಪೂರ್ವದಲ್ಲಿ ತಿರುವೆಂಗಳನಾಥ ದೇವಾಲಯವಿದೆ. (1534) ಅದರ ಎದುರು ತೇರುಬೀದಿಯಿದೆ. ಬೀದಿ ಬದಿಗಳಲ್ಲಿ ಅಂಗಡಿಯ ಮಂಟಪಗಳಿವೆ. ಆ ಬೀದಿಯ ಹತ್ತಿರ ಅಚ್ಯುತರಾಯ ದೇವಸ್ಥಾನವಿದೆ. ಅದರ ಎದುರು ಬೀದಿಯ ಬದಿಗಳಲ್ಲಿ ಅಂಗಡಿ

ಮಂಟಪಗಳ ಸಾಲಿದೆ. ಈ ಭಾಗವನ್ನು ಅಚ್ಯುತಪುರವೆನ್ನುವರು. ಅಚ್ಯುತರಾಯಪುರ ಈಶಾನ್ಯಕ್ಕೆ ವಿಠಲದೇವಸ್ಥಾನವಿದ್ದು ಆ ಪ್ರದೇಶವನ್ನು ವಿಠಲಾಪುರ ಎಂದು ಕರೆಯುವರು. ಈ ದೇವಾಲಯದ ಉತ್ತರಕ್ಕೆ ತುಂಗಭದ್ರ ನದಿ, ಅದನ್ನು ದಾಟಿದ ಭಾಗವೇ ಆನೆಗುಂದಿ. ಹಂಪೆಯ/ವಿಜಯನಗರ ದಕ್ಷಿಣಕ್ಕೆ ಕಮಲಾಪುರವಿದೆ. ಈ ಪಟ್ಟಣದ ಆಗ್ನೇಯಕ್ಕೆ ಅಚ್ಯುತರಾಯನ ಪತ್ನಿಯ ಹೆಸರಿನ ವರದರಾಜಮ್ಮನ ಪುರವಿದೆ. ಅದರ ಪೂರ್ವದಲ್ಲಿ ರಘುನಾಥ ದೇವಾಲಯವಿದೆ (1540). ಪಶ್ಚಿಮಕ್ಕೆ ಕಡಿರಾಮಪುರ/ಕಡೆರಾಮಪುರವಿದೆ. ಕಮಲಾಪುರದಿಂದ ಹೊಸಪೇಟೆಗೆ ಹೋಗುವ ದಾರಿ ಬದಿಗೆ ಬೃಹತ್ ಅನಂತಶಯನ ಗುಡಿಯಿದೆ. ಅದನ್ನು ಕೃಷ್ಣದೇವರಾಯನ ಮಗ ತಿರುಮಲೆಮಹಾರಾಯನು ಕಟ್ಟಿಸಿದನಂತೆ. ಅದರ ಉತ್ತರದಲ್ಲಿ ನಾಗೇನಹಳ್ಳಿಯಿದೆ. ಅದರ ದಕ್ಷಿಣಕ್ಕೆ ಹೊಸಪೇಟೆಯಿದೆ. ಆ ಭಾಗವೇ ಕೃಷ್ಣದೇವರಾಯನ ರಾಣಿ ತಿರುಮಲದೇವಿಯ ಹೆಸರಿನಲ್ಲಿ ಕಟ್ಟಿಸಿದ ತಿರುಮಲ ದೇವಿಯಮ್ಮನವರ ಪಟ್ಟಣವಾಗಿದೆ. (1531) ಅದರ ಹತ್ತಿರ ವೀರಭದ್ರನ ಗುಡಿಯಿದೆ.

ತುಂಗಭದ್ರಾ ತೀರದಲ್ಲಿ ನಾಗಲಾಪುರಕ್ಕೆ ಹತ್ತಿರ 3 ಕಿ.ಮೀ. ದೂರ ಚಿತ್ರವಾಟಿಕಾ ಎಂಬ ಉದ್ಯಾನವಿತ್ತು ಅದನ್ನು ಕೃಷ್ಣದೇವರಾಯನು ತನ್ನ ಪಟ್ಟದರಾಣಿ ತಿರುಮಲದೇವಿಗಾಗಿ ನಿರ್ಮಿಸಿದ್ದು ವಿಶೇಷವೆನಿಸಿದೆ. ಈ ರಾಣಿಯ ಪುತ್ರ ತಿರುಮಲನು ಶ್ರೀರಂಗಪಟ್ಟಣದಲ್ಲಿ ಜನಿಸಿದನು. ತಿರುಮಲನು ತನ್ನ ಆರನೇ ವಯಸ್ಸಿನಲ್ಲಿ ವಿಷಪ್ರಾಷನದಿಂದ ಮಡಿದಾಗ ದುಃಖತಪ್ತನಾಗಿ ಹಾಸಿಗೆ ಹಿಡಿದ ಕೃಷ್ಣದೇವರಾಯನು 1530 ರಲ್ಲಿ ಮರಣ ಹೊಂದಿದನು.

ಹಂಪೆಯಲ್ಲಿನ ಮಹತ್ವದ ಸ್ಮಾರಕಗಳಲ್ಲಿ ಎರಡು ಅರಮನೆಗಳು, (ಇತ್ತೀಚಿನ ಉತ್ಖನನದಲ್ಲಿ ಸಿಕ್ಕಿವೆ) ಅದರ ಆವರಣ ಪಶ್ಚಿಮಕ್ಕೆ ಟಂಕಶಾಲೆ ಮತ್ತು ಅಲ್ಲೊಂದು ಅರಮನೆ, ಅದರ ಉತ್ತರಕ್ಕೆ ದಂಡನಾಯಕ ಕೋಟೆ ಮತ್ತು ಈಶಾನ್ಯಕ್ಕೆ ಜನಾನಾದ ಕೋಟೆ, ಅಲ್ಲಿ ರಾಜಪ್ರಾಂಗಣವಿತ್ತು. ಟಂಕಶಾಲೆ ಪೂರ್ವಕ್ಕೆ ಹಜಾರರಾಮ ದೇವಾಲಯ, ಪೂರ್ವಕ್ಕೆ ಮುಖ ಮಾಡಿದೆ. ಈ ಭಾಗದಲ್ಲಿ ಮಹಾನವಮಿ ದಿಬ್ಬ, ಪಬ್ಲಿಕ್ ಆಡಿಯನ್ಸ್ ಹಾಲ್, ಅದರ ಮುಂದೆ ಜನಾನಾ ಆವರಣ, ಕಾವಲುಗಾರರ ಗೋಪುರಗಳು, ಆನೆಸಾಲುಗಳ ಕೊಠಡಿಗಳು, ಕಮಲ್‌ಮಹಲ್ ಮುಂತಾದ ಮಹತ್ವದ ಸ್ಮಾರಕಗಳಿವೆ.

ನೀರು ಸರಬರಾಜು : ಹಂಪೆಯಲ್ಲಿನ ವಿಸ್ತಾರವಾದ ಅರಮನೆ ಆವರಣ (ರಾಜಪ್ರಾಂಗಣ)ವು ವಿಜಯನಗರ ಅರಸರ ವಾಸತಾಣವಾಗಿದೆ. ಆ ಭಾಗಕ್ಕೆ ನೀರು ಸರಬರಾಜು ವ್ಯವಸ್ಥೆಗೆ ಹೆಚ್ಚು ಮಹತ್ವವನ್ನು ಕೊಡಲಾಗಿದ್ದಿತು. ಆದರೆ ಅಲ್ಲಿನ ಇನ್ನಿತರ ಭಾಗಗಳಿಗೆ ನೀರು ಸರಬರಾಜು ವ್ಯವಸ್ಥೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿರಲಿಲ್ಲ. ಹಂಪೆಯಲ್ಲಿ ಹರಿಯುವ ಹಿರಿಯ ಕಾಲುವೆ (ತುರ್ತು ಕಾಲುವೆ) ನೀರು ಭೂಪತಿ ಕೆರೆಗೆ ಹರಿಯುತ್ತಿತ್ತು. ಈ ಕೆರೆಯ ನೀರನ್ನು ತಿರುವೆಂಗಳನಾಥ (ಅಚ್ಯುತರಾಯ) ದೇವಾಲಯಕ್ಕೆ ಮತ್ತು ಅದರ ಬದಿಗಳಿಗೆ ಹರಿಸಲಾಗುತ್ತಿತ್ತು. ಕೆಲವು ನಾಡಬಾವಿಗಳಿದ್ದವು. (ಅದಕ್ಕೆ ಮೆಟ್ಟಿಲುಗಳಿದ್ದವು) ಇನ್ನು ಕೆಲವು ಕಪಿಲೆಯ ಬಾವಿಗಳಿದ್ದವು. ಇದಕ್ಕೆ ಒಂದು ದೊಡ್ಡ ಶಿಲಾಕಂಬವನ್ನು ನೆಟ್ಟು ಅದರ ಮೇಲಿನ 'ಯು' ಆಕಾರದ ಪಟ್ಟಿಕೆಗೆ ಹೊಂದಿ ಕಬ್ಬಿಣದ ಪಟ್ಟಿ(ಗಾಲಿ)ಯನ್ನು ಜೋಡಿಸಿ ಅದರ ಮೇಲೆ ಹಗ್ಗವನ್ನು ಬಾವಿಗೆ ಇಳಿಬಿಟ್ಟು ಅದಕ್ಕೆ ಚರ್ಮದ ಚೀಲ ಅಥವಾ ಪಾತ್ರೆಗಳನ್ನು ಕಟ್ಟುತ್ತಿದ್ದರು. ಅದನ್ನು ಬಾವಿಯಲ್ಲಿ ಇಳಿಬಿಟ್ಟು ಮುಳುಗಿಸಿ ನೀರನ್ನು ತುಂಬುತ್ತಿದ್ದರು. ಆ ಬಳಿಕ ಆ ಹಗ್ಗದ ಮತ್ತೊಂದು ತುದಿಯನ್ನು ಎತ್ತುಗಳ ನೊಗಕ್ಕೆ ಕಟ್ಟಿ ಎಳೆಸಿದಾಗ ನೀರು ತುಂಬಿದ ಚೀಲ/ಪಾತ್ರೆ ಮೇಲೆ ಬರುತ್ತಿತ್ತು. ಅದರ ನೀರನ್ನು ನಿಗದಿತ ಸ್ಥಳಕ್ಕೆ ಬಿಡುವ ವ್ಯವಸ್ಥೆಯನ್ನು ಕಲ್ಪಿಸುತ್ತಿದ್ದರೆನ್ನಲಾಗಿದೆ. ಇಂತಹದೊಂದು ಶಿಲಾಕಂಬ ಇತ್ತೀಚೆಗೆ ರಾಣೆಬೆನ್ನೂರ ತಾಲೂಕಿನ ಹೂಲಿಹಳ್ಳದಲ್ಲಿ ಪತ್ತೆ ಆಗಿದೆ. ಅದರಲ್ಲಿನ ಶಾಸನವನ್ನು ಡಾ. ಮನ್ವಾಚಾರಿ ಅವರು ಪತ್ತೆ ಹಚ್ಚಿ ಪತ್ರಿಕೆಯಲ್ಲಿ ವರದಿ ಮಾಡಿದ್ದರು. ಆ ಬಳಿಕ ಆ ಶಾಸನವನ್ನು ನಾನು ಮತ್ತು ಡಾ. ಪಿ.ಕೆ. ಪತ್ತಾರ ಅವರು ಈ ಶಾಸನವನ್ನು ಓದಿ ಈ ಶಾಸನದ ಸ್ತಂಬದ ಮಹತ್ವವನ್ನು ಅರಿತು ಅದನ್ನು ಪತ್ರಿಕೆಯಲ್ಲಿ ವರದಿ ಮಾಡಿದೆವು. ಈ ಕಂಬವನ್ನು ಬಾವಿಯಲ್ಲಿನ ನೀರನ್ನು ಮೇಲಕ್ಕೆತ್ತಲು ಬಳಸಿರಬೇಕೆಂದು ಅರಿತೆವು. ಇಂತಹ ಕಂಬಗಳನ್ನು ಬಾವಿಗಳ ಒಂದು ಅಂಚಿನಲ್ಲಿ ನಿಲ್ಲಿಸಿ ಅದಕ್ಕೆ ರಾಟೆಯನ್ನು ಹೊಂದಿಸುತ್ತಿದ್ದರು. ಈ ಕಂಬಕ್ಕೆ ಹೊಂದಿಸಲು ಬಾವಿಯಲ್ಲಿ ಎರಡು ಕಲ್ಲುಗಳನ್ನು ಕೂಡಿಸುತ್ತಿದ್ದರು. ಕೆಲವೆಡೆಗಳಲ್ಲಿ ನೀರಿನ ಚಿಲುಮೆಗಳನ್ನು ಬಳಸುತ್ತಿದ್ದರು. ನಿತ್ಯ ಬಳಕೆಗೆ ಕಾಲುವೆ ನೀರನ್ನು ಬಳಸುತ್ತಿದ್ದರು. ರಾಜಪ್ರಾಂಗಣದಲ್ಲಿ ನೀರನ್ನು ಸಣ್ಣ ಕೊಳವೆಗಳ ಮೂಲಕ ಹರಿಸಲಾಗುತ್ತಿತ್ತು. ಶಿಲಾಕಂಬಗಳನ್ನು ಆಸರೆ ಮಾಡಿಕೊಂಡು ಅದರ ಮೇಲೆ ತಗ್ಗುಳ್ಳ

ಉದ್ದುದ್ದ ಹಲಗೆಗಳ ಮುಖಾಂತರ ನೀರನ್ನು ಕಾಲುವೆಯಿಂದ ಹರಿಸುತ್ತಿದ್ದರು. ಆ ನೀರನ್ನು ಅನೇಕ ನೀರಿನ ತೊಟ್ಟಿಗಳಲ್ಲಿ ಸಂಗ್ರಹಿಸುತ್ತಿದ್ದರು. ಹಂಪಿಯಲ್ಲಿ ನೀರಿನ ಪುಷ್ಕರಣಿಯೊಂದು ಉತ್ಖನನದಲ್ಲಿ ಸಿಕ್ಕಿದೆ. ಈ ವಿವರಗಳಿಂದ ಈ ಅವಧಿಯಲ್ಲಿ ಹಂಪಿ ಒಂದು ನಗರವಾಗಿದ್ದು ತಿಳಿಯುತ್ತದೆ. ಅಲ್ಲಿನ ಅರಮನೆ ಪರಿಸರದ ನೀರು ಪೂರೈಕೆ ವ್ಯವಸ್ಥೆಯ ಕೆಲವು ವಿಷಯಗಳು ತಿಳಿದು ಬರುತ್ತವೆ. ಸಾಮಾನ್ಯರ ಮನೆಗಳಿಗೆ ನೀರಿನ ಪೂರೈಕೆ ವ್ಯವಸ್ಥೆ ಆ ಅವಧಿಯಲ್ಲಿ ಹೇಗೆ ಇತ್ತೆಂಬುದನ್ನು ಗುರುತಿಸುವ ಪ್ರಯತ್ನ ನಡೆಯಬೇಕಾಗಿದೆ.

ವಿಜಯನಗರ ಕಾಲಾವಧಿಯಲ್ಲಿ ಅನೇಕ ನಗರ/ಪಟ್ಟಣಗಳು ಸಾಂಸ್ಕೃತಿಕವಾಗಿ ಹೆಚ್ಚು ಪ್ರಸಿದ್ಧಿಯಲ್ಲಿದ್ದವು. ಹೀಗಾಗಿ ಅಂತಹ ಸ್ಥಳಗಳಲ್ಲಿನ ಸಾಂಸ್ಕೃತಿಕ ಪುರಾವೆಗಳನ್ನು ಹಂಪಿಯಂತೆ ಪರಿಚಯಿಸುವ ಪ್ರಯತ್ನ ನಡೆಯಬೇಕಾಗಿದೆ.

ಈ ಅವಧಿಯ ಸ್ಮಾರಕ ಕಟ್ಟಡಗಳಲ್ಲಿ ದೇವಾಲಯಗಳಿಗೆ ಸೇರ್ಪಡೆ ಆದ ಭಾಗಗಳಲ್ಲಿ ವಿಶಾಲವಾದ ಮಂಟಪಗಳು, ರಂಗಮಂಟಪ, ರಾಮಾನುಜ ಕೂಟ, ಬಾಗಿಲು, ತೋರಣ, ಬಲಿಪೀಠ, ಸೋಪಾನ, ಶಿಖರ, ಉಪ್ಪರಿಗೆ, ಚಿನ್ನದ ಕಲಶ, ಉಪ್ಪರಿಗೆಗೆ ತಾಮ್ರದ ಕವಚ, ಪ್ರಾಕಾರ ಗೋಡೆ, ಗೋಪುರಗಳು, ದೀಪದ ಕಂಬ, ದೀಪಮಾಲೆ ಕಂಬ, ಬ್ರಹ್ಮಕಂಬ, ಮಾನಸ್ತಂಭ (ಜೈನ), ಗರುಡಗಂಬ, ನಂದಿಕಂಬ, ಮಂಟಪ, ಕಲ್ಯಾಣಮಂಟಪ, ಸುಕನಾಶಿ, ನವರಂಗ, ಸಂಧ್ಯಾಮಂಟಪ, ಪಾಕಶಾಲೆ, ಯಾಗದ ಶಾಲೆ (ಅಪರೂಪ–ಬೇಲೂರು ಚನ್ನಕೇಶವ ದೇವಾಲಯ) ಉಯ್ಯಾಲೆ ಮಂಟಪ, ಪಡಸಾಲೆ, ತೋರಣ, ಬಲಿಪೀಠ, ಬಾಗಿಲು, ಸೋಪಾನ, ವೀರೇಶ್ವರ ಬಿಂಬ, ಶೈವ(ಶಿವಲಿಂಗ), ವೈಷ್ಣವ ಬಿಂಬ (ಕೇಶವ), ಮಹಾಗಣಪತಿ, ದೇವಿಯ ಬಿಂಬ, ಬೆಟ್ಟದ ಗುಹೆಯಲ್ಲಿ ಮಹಾಗಣಪತಿ, ಮಠಗಳು/ಛತ್ರ ಮುಂತಾದವುಗಳು ಕಾಣುತ್ತವೆ. ಅವುಗಳು ಆಗಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ ಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳು ಇತಿಹಾಸ ತಜ್ಞರಿಗೆ ಮತ್ತು ಜನಸಾಮಾನ್ಯರಿಗೆ ಹೆಚ್ಚು ಕುತೂಹಲವನ್ನು ಮೂಡಿಸಿವೆ.

ವಿಜಯನಗರ ಹಂಪೆಯ ಪರಿಸರದಲ್ಲಿ ಅನೇಕ ಮಠ ಮಾನ್ಯಗಳಿದ್ದವು. ಅವುಗಳಲ್ಲಿ ಮಹಂತಿನ ಮಠ, ಕರಿಯ ಸಿದ್ದಪ್ಪನ ಮಠ, ಪರಮೇಶ್ವರ ಮಠ(ಬೆಟ್ಟದ ಮೇಲೆ ಗುಹೆಯುಳ್ಳ ಮಠ), ಗುಹೇಶ್ವರ ಆಶ್ರಮ, ಶಿವಯೋಗಿ ದೇವರ ಗುಹೆ, ಬೊಮ್ಮದೇವರ ಗುಹೆ ಮುಂತಾದವುಗಳಿವೆ. ಮುಸ್ಲಿಂ ಜನಸಮುದಾಯದವರಿಗಿದ್ದ ಒಂದು ಛತ್ರವನ್ನು ಧರ್ಮಶಾಲೆ ಎಂದು ಕರೆದಿದ್ದಾರೆ (1439). ಈ ಛತ್ರಕ್ಕೆ 15 ಅಂಕಣಗಳಿವೆ.

ಈ ಪ್ರದೇಶದಲ್ಲಿ ಅನೇಕ ಬಾವಿ/ಪುಷ್ಕರಣಿಗಳಿವೆ. ಕೆಲ ಬಾವಿಗೆ ಮೊಗಶಾಲೆಗಳಿವೆ. ಕೆಲವು ಬಾವಿಗಳ ತಳಭಾಗದಲ್ಲಿ ಚೌಕಾಕಾರವಾಗಿದ್ದು ಅದರ ಮೇಲಿನ ಭಾಗವು ಅಷ್ಟಾಕೃತಿಯಲ್ಲಿವೆ. ಅಲ್ಲಿ ಅನೇಕ ಕಾಲುವೆಗಳು ಮತ್ತು ಕೆರೆಗಳಿವೆ. ಒಂದನ್ನು ಅಗಸರ ಕಾಲುವೆ ಎನ್ನಲಾಗಿದೆ. ಒಂದು ಬಾವಿಯನ್ನು ಅಗಸರ ಬಾವಿ ಎನ್ನಲಾಗಿತ್ತು. ಇನ್ನಿತರ ಬಾವಿಗಳಲ್ಲಿ ಬೆನಕನ ಬಾವಿ, ಅರೆಶಂಕರ ಬಾವಿ, ಅಶ್ವತ್ಥ ಬಾವಿ, ಮಹಾದೇವಿಯಕ್ಕನ ಬಾವಿ, ಒರತೆಯ ಕೊಂಡ, ಲಿಂಗ ಬಾವಿ, ರಂಗನಾಥ ಬಾವಿ ಇನ್ನಿತರ ಬಾವಿ ಎಂದು ಕರೆಯಲಾಗಿತ್ತು. (ವಿಪಿಆರ್, 1984–87 ಸಂ. 73).

ಒಟ್ಟಾರೆ ಹಂಪೆ ಪರಿಸರದಲ್ಲಿನ ದೇವಾಲಯಗಳನ್ನು, ಪಟ್ಟಣಗಳನ್ನು, ಹೆಬ್ಬಾಗಿಲುಗಳನ್ನು, ಬುರುಜುಗಳನ್ನು, ರಸ್ತೆ, ಪೇಟೆ, ಅಂಗಡಿ, ಮಠಗಳು, ಆಶ್ರಮಗಳು, ಛತ್ರಗಳು, ಕೆರೆ, ಕಾಲುವೆ, ಬಾವಿ ಮುಂತಾದ ಸ್ಮಾರಕಗಳನ್ನು ಡಾ. ಸಿ.ಎಸ್. ಪಾಟೀಲ, ಶ್ರೀಮತಿ ವಿನೋದ ಪಾಟೀಲ, ಡಾ. ಕೊಟ್ರೇಶ, ಡಾ. ಟಿ.ಎಂ. ಮಂಜುನಾಥಯ್ಯ, ಡಾ. ರವೀಂದ್ರನಾಥ, ಡಾ. ಶಿವರುದ್ರಸ್ವಾಮಿ, ಡಾ. ಬಾಲಸುಬ್ರಮಣ್ಯಂ ಮುಂತಾದವರು ಪರಿಚಯಿಸಿರುವರು.

6. ಕುಮಾರರಾಮ ಒಬ್ಬ ದೈವೀಪುರುಷ ವ್ಯಕ್ತಿ !

ಕುಮಾರರಾಮನ ಅಜ್ಜ ಸಿಂಗನಾಯಕನು ಹಂಪೆ–ಕಂಪಲಿ ಪ್ರದೇಶದ ಕುಮ್ಮಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದನು. ಸಿಂಗನಾಯಕನ ಮಗ ವೀರಕಂಪಿಲನನ್ನುಖಂಡೆರಾಯ ಎಂದು ಕರೆಯುತ್ತಿದ್ದರು. ಆತನು ಸೇವುಣ ರಾಮಚಂದ್ರನ ಅಧಿಕಾರಿಯಾಗಿದ್ದನು. ಈತನು ಹೊಯ್ಸಳ 3ನೇ ವೀರಬಲ್ಲಾಳನ ಸೈನ್ಯದ ವಿರುದ್ಧ ಹೋರಾಡಿ ಸೋಮಯ್ಯನೆಂಬ

ದಂಡನಾಯಕನನ್ನು ಕೊಂದಿದ್ದನು. ಮುಂದೆ ಈತನು ತನ್ನ ತಂದೆ ಮತ್ತು ತಾಯಿ ಹಾಗೂ ಪರುಮೆಯ ನಾಯಕರ ಹೆಸರುಗಳಲ್ಲಿ ಹಂಪೆ ಬಳಿಯ ಹೇಮಕೂಟ ಗುಡ್ಡದ ಮೇಲೆ ತ್ರಿಕೂಟ ದೇವಾಲಯವನ್ನು ಪ್ರತಿಷ್ಠಾಪಿಸಿದನು (ಎ.ಆರ್.ಐ.ಇ. 1934–35, ನಂ. ಬಿ. 353).

ಮುಮ್ಮಡಿ ಸಿಂಗೆಯನಾಯಕ ಮತ್ತು ಮಾರಾನಾಯಕಿಯ ಮಗನೇ ಕಂಪಿಲರಾಯ. ಈತನ ಮಗನೇ ಕುಮಾರರಾಮ. ಇವರ ಆಳ್ವಿಕೆಯು ಕ್ರಿ.ಶ. 1226 ರಿಂದ 1325 ಇದ್ದಿತು. ಕಂಪಿಲರಾಯನು ಶ್ರೀ ಸಂಗಮೇಶ್ವರ ದೇವರ ಭಕ್ತ. ಈತನ ಮಂತ್ರಿ ಬೈಚಪ್ಪ ನಾಯಕ. ಈತನ ಚಾರಿತ್ರಿಕ ವಿಷಯಗಳು ಕುಮಾರ ರಾಮನಾಥ ಚರಿತಗಳು, ಕೈಫಿಯತ್ತುಗಳು ಮತ್ತು ಶಾಸನಗಳಲ್ಲಿವೆ. ಇವರು ಸೇವಣರ ಅಧಿಕಾರಿಗಳಾಗಿ ಆಡಳಿತ ನಡೆಸಿದರು. ಹೊಯ್ಸಳರ ವಿರುದ್ಧ ಕಾದಾಡಿದರು (1276–77, 1281, 1300, 1303, 1325) (ಹುಳಿಯೇರಿ ಯುದ್ಧ). ಕಂಪಿಲರಾಯನ ಕುಮ್ಮಟದ ರಾಜಧಾನಿಯಾಗಿದ್ದ ಹಂಪೆಯನ್ನು ವೀರ ಬುಕ್ಕರಾಯನು ವಿಜಯನಗರ ಪಟ್ಟಣವೆಂದು ಕರೆಯಲಾಗಿದೆ (ವಿಪಿಆರ್ 1982–83, ಶಾಸನ ನಂ. 23). ಇವರ ಆಳ್ವಿಕೆಯು ಕರ್ನಾಟಕದಲ್ಲಿ ಬಳ್ಳಾರಿ, ತುಮಕೂರು, ರಾಯಚೂರು, ಕೊಪ್ಪಳ, ಬಾಗಲಕೋಟೆ, ಹಳೆಯ ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲ ಪ್ರದೇಶ ಹಾಗೂ ಆಂಧ್ರಪ್ರದೇಶದ ರಾಯದುರ್ಗ, ಅನಂತಪುರ ಪ್ರದೇಶಗಳವರೆಗೆ ವ್ಯಾಪಿಸಿತ್ತು.

ಇಬನ್ ಬತೂತನು, ಕುಮ್ಮಟದ ನಿರ್ಣಾಯಕ ಯುದ್ಧದಲ್ಲಿ ಕಂಪಿಲಕುಮಾರ ರಾಮನಾಥರು ಸೋತ ಬಳಿಕ ಅವರ ಸಮೀಪದ ಐದು ಜನ ಬಂಧುಗಳನ್ನು ಮತ್ತು ಒಬ್ಬ ಮಂತ್ರಿಯನ್ನು ಸೆರೆ ಹಿಡಿದು ಸುಲ್ತಾನನ ಸೈನಿಕರು ದೆಹಲಿಗೆ ಕರೆದೊಯ್ದರು. ಅವರು ಸುಲ್ತಾನರ ಪ್ರೀತಿ ಗಳಿಸಿ ಅಲ್ಲಿಂದ ಬಿಡುಗಡೆಗೊಂಡು ಹಂಪಿ ಪರಿಸರದಲ್ಲಿ ಅಧಿಕಾರಿಗಳಾದರು. ಅವರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರೆನ್ನಲಾಗಿದೆ. ಇವರೇ ಅಲ್ಲಿ ಸಂಗಮ ವಂಶದ ಐದು ಮಂದಿ ಸಹೋದರರಾದ ಹರಿಹರ, ಕಂಪಣ್ಣ, ಬುಕ್ಕ, ಮಾರಪ್ಪ ಮತ್ತು ಮುದ್ದಪ ಎನ್ನುವರು. ಈ ಸಹೋದರರು ಈ ಬೈಚಯ ದಂಡನಾಯಕನ ನೇತೃತ್ವದಲ್ಲಿ ವಿಜಯನಗರ ಸ್ಥಾಪನೆ ಮಾಡಿದರಂತೆ! (ಇಂಡಿಯನ್ ಎಂಟಿಕ್ವಾರಿ 45, ಪು. 140, ಸೌಥ್ ಇಂಡಿಯನ್ ಪೊಲಿಟಿ, ಪು. 308) ಇದು ಒಂದೆಡೆ ಕಾಣುತ್ತದೆ. ಆನೆಗೊಂದಿಯಲ್ಲಿ 1371ರ ಬಾಚಣಯನ ನಿಶಿಧಿಯಿದೆ (ಕ.ವಿ.ವಿ. ಶಾ.ಸಂ. 2, ಗಂಗಾವತಿ. ತಾ. 45, ಟಿ.ಎಂ. ಮಂಜುನಾಥ, ಮಹಾಮಂತ್ರಿ ಬೈಚಯ ದಂಡನಾಯಕ, ವಿಜಯನಗರ ಅಧ್ಯಯನ, 2004, ಪು. 303–313).

ಕಂಪಿಲ ಮತ್ತು ಆತನ ಮಗ ಕುಮಾರರಾಮರು ಸಗರದ (ಯಾದಗಿರಿ ಜಿಲ್ಲೆ) ಮುಸ್ಲಿಂ ರಾಜ್ಯಪಾಲ ಬವುವುದ್ದೀನ್‌ನಿಗೆ ರಕ್ಷಣೆ ನೀಡಲು ಹೋಗಿ ಅವರೇ ಹತರಾದರು. ಅಂದರೆ ಸಗರ ಬಹುವುದ್ದೀನ್‌ನು ದೆಹಲಿ ಸುಲ್ತಾನನ ವಿರುದ್ಧ ದಂಗೆಯೆದ್ದಿದ್ದನು. ಆ ಸಂದರ್ಭದಲ್ಲಿ ಅವನಿಗೆ ಕಂಪಿಲ ಮತ್ತು ಕುಮಾರರಾಮರು ಸಂರಕ್ಷಣೆ ನೀಡಿದ್ದ ವಿಷಯವನ್ನರಿತು ದೆಹಲಿ ಸಉಲ್ತಾನನ ಸೈನ್ಯವು ಇವರ ಮೇಲೆ ದಾಳಿ ಮಾಡಿತು. ಆಗ ಕಂಪಿಲ ಮತ್ತು ಕುಮಾರರಾಮರು ತಮ್ಮ ಸೈನ್ಯದೊಂದಿಗೆ ಧೈರ್ಯ ಮತ್ತು ಸಾಹಸದಿಂದ ಹೋರಾಡಿ ಮುಸ್ಲಿಂರ ಪಡೆಯನ್ನು ಹಾಳುಮಾಡಿ ತಮ್ಮ ಪ್ರಾಣವನ್ನು ಕಳೆದುಕೊಂಡರು. ಅದಕ್ಕೆ ಬಹುವುದ್ದೀನ ಹೊಯ್ಸಳ 3ನೇ ಬಲ್ಲಾಳನಲ್ಲಿ ರಕ್ಷಣೆ ಪಡೆಯಲು ಹೋದನು. ಆಗ ಆತನು ಅವನಿಗೆ ಸಹಕಾರ ರಕ್ಷಣೆ ನೀಡಲಿಲ್ಲ. ಹೀಗಾಗಿ ಬಹವುದ್ದೀನ್‌ನನ್ನು ಮುಸ್ಲಿಂ ಸೈನ್ಯವು ಕೊಂದುಹಾಕಿತು. ಬಹುತೇಕ ಇಂತಹ ಸನ್ನಿವೇಶದಲ್ಲಿ ಕಂಪಿಲನ ಮಂತ್ರಿ ಬೈಯಚಪ್ಪನು ತುರುಕರ ಸೈನ್ಯ ದಳವು ದೋರಸಮುದ್ರಕ್ಕೆ ಎತ್ತಿ ಬಂದಾಗ ಆತನೂ ಸಹ ಅವರ ವಿರುದ್ಧ ಕಾದಾಡಿ ಪ್ರಾಣ ಕಳೆದುಕೊಂಡನು. ಆತನ ನೆನಪಿಗಾಗಿ ವೀರಗಲ್ಲನ್ನು ಹಾಸನ ಜಿಲ್ಲೆಯ ರುದ್ದ ಗ್ರಾಮದಲ್ಲಿ ನಿಲ್ಲಿಸಲಾಯಿತು. ಈ ವಿವರಣೆಗಳಲ್ಲಿ ಧೈರ್ಯ ಸಾಹಸದಿಂದ ಮುಸ್ಲಿಂ ದಳದ ವಿರುದ್ಧ ಹೋರಾಡಿ ಮಡಿದ ಕಂಪಿಲದೇವ ಮತ್ತು ಕುಮಾರರಾಮರ ಬಗ್ಗೆ ಸಾರ್ವತ್ರಿಕವಾಗಿ ಸಹಾನುಭೂತಿ ನಾಡಿನೆಲ್ಲೆಡೆ ಸಾಹಿತ್ಯದ ಮೂಲಕ ಹಬ್ಬಿತು. ಕ್ರಮೇಣವಾಗಿ ಕುಮಾರರಾಮನು ಪ್ರಸಿದ್ಧಿಗೆ ಬಂದಿರಬೇಕು. ಈ ಕುಮಾರ ರಾಮನನ್ನು ರಾಮನಾಥನೆಂದು ಕರೆಯಲಾಗಿದೆ. ಆತನ ಒಂದು ಶಾಸನದ ಪ್ರಕಾರ ಈತನ ತ್ಯಾಗಕ್ಕೆ ಮೆಚ್ಚಿ 1408 ರಿಂದ ಈತನ ಹೆಸರಿನ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲಿಂದ ಆತನ ಶಿಲ್ಪವನ್ನು ಆರಾಧಿಸುವ ಪರಂಪರೆ ಹುಟ್ಟಿತು. ಹೀಗಾಗಿ ಈತನ ಶಿಲ್ಪಗಳನ್ನು

ಸಂಗೂರು, ಬಿದರಕಟ್ಟೆ, ಸಿಡೆನೂರು (ಹಾವೇರಿ ಜಿಲ್ಲೆ), ವೀರಾಪೂರ, ಗದಗ ಜಿಲ್ಲೆಯ ಶಿರುಂಜಿ, ಲಕ್ಷ್ಮೇಶ್ವರ ಮುಂತಾದ ಕಡೆಗಳಲ್ಲಿ ನೆಡಲಾಗಿದೆ. ಇದೇರೀತಿಯಲ್ಲಿ ಮುಂದೆ ಬ್ರಿಟಿಷರ ವಿರುದ್ಧ ಕಾದಾಡಿ ಮಡಿದ ಸಂಗೊಳ್ಳಿ ರಾಯಣ್ಣನ ದೇವಾಲಯದ ಆರಾಧನೆ ನೆನಪಾಗುತ್ತದೆ.

ನಂಜುಂಡಕವಿ ರಚಿಸಿದ ಕುಮಾರ ಸಾಂಗತ್ಯದಲ್ಲಿ ಕುಮಾರರಾಮನ ಸಾಹಸದ ವಿಷಯಗಳಿವೆ.ಕುಮಾರ ರಾಮನಾಥನ ಪ್ರತಾಪವಾಗಿ ಅಂಬುಗೂಡಾಗಿ ಸ್ವರ್ಗವ ಸೂರೆಗೊಂಡನೆನ್ನಲಾಗಿದೆ. ಮಲ್ಲರಸನಾಯಕನು ಈ ರಾಮನಾತನ ಶಿಲ್ಪವನ್ನು ಮಾಡಿಸಿದನು. ಈ ಶಿಲ್ಪದಲ್ಲಿ ಕುಮಾರರಾಮನು ಕುದುರೆ ಏರಿ ಕುಳಿತಿದ್ದಾನೆ. (1475) ಬಿದರಕಟ್ಟೆಯ ಶಾಸನದಲ್ಲಿ ಕುಮಾರರಾಮನಾಥನ ಹೆಸರಿದೆ (ಬಿದರಕಟ್ಟೆ, ಬ್ಯಾಡಗಿ ತಾಲೂಕು, ಹಾವೇರಿ ಜಿಲ್ಲೆ, ಎಆರ್ಎಸ್ಐಐ 1939–40, ಬ್ಯಾಡಗಿ 402).ಇದರಿಂದ ಜನಮನದಲ್ಲಿ ಕುಮಾರರಾಮನು 14ನೇ ಶತಮಾನದ ಅಂತ್ಯದಿಂದ ಸಾರ್ವಜನಿಕರ ಒಬ್ಬ ಆರಾಧನಾ ದೈವನಾದಂತೆ ಕಾಣುತ್ತದೆ.

ವಿಜಯನಗರ ಚರಿತ್ರೆಯಲ್ಲಿ ಕಾಣುವ ಮೂರು ಮನೆತನಗಳಲ್ಲಿನ ಅನೇಕ ಅರಸರು ತಮ್ಮ ಸಾಮ್ರಾಜ್ಯದ ಸಂರಕ್ಷಣೆ, ಬೆಳವಣಿಗೆಗೆ ಅಪಾರ ಕೊಡುಗೆಯನ್ನು ಸಲ್ಲಿಸಿದ್ದಾರೆ. ಕುಮಾರರಾಮನಿಗೆ ದೇವರ ಪರಿಕಲ್ಪನೆ ನೀಡಿದಷ್ಟು ವಿಜಯನಗರದ ಯಾವ ಅರಸರಿಗೆ/ ಅಧಿಕಾರಿವರ್ಗದವರಿಗೆ ನೀಡಿದ್ದು ಕಾಣುವುದಿಲ್ಲ. ಆದರೆ ಅನೇಕ ಅರಸರ ಭಾವಶಿಲ್ಪಗಳನ್ನು ನಿರ್ಮಿಸಿ ದೇವಾಲಯಗಳಲ್ಲಿ ದಾಸರನ್ನಾಗಿ ನಿಲ್ಲಿಸಿದ ಮತ್ತು ಅರಸರ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿದ ಉದಾಹರಣೆಗಳಿವೆ.

ಮತ್ತೊಂದು ಸಂಗತಿ ಎಂದರೆ ಕುಮಾರ ರಾಮನು ಯುದ್ಧದಲ್ಲಿ ಮಡಿದ ವಿಷಯ ತಿಳಿದು ಆತನ ಅನೇಕ ಪತ್ನಿಯರು ಮಡಿ ಉಡಿಯಿಂದ ಚಿತಾಪ್ರವೇಶ ಮಾಡಿದರು. ಆತನ ಜೊತೆ ಯುದ್ಧ ಮಾಡಿದ ಅನೇಕ ಸೈನಿಕರು ಪ್ರಾಣಾರ್ಪಣೆ ಮಾಡಿಕೊಂಡರು. ಆಗ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಅನಿಲಗೋಡಿನಲ್ಲಿ ಕುಮಾರ ರಾಮನ ಐವರು ಪತ್ನಿಯರು ಸತಿಹೋದರು. ಅವರ ಸ್ಮರಣಾರ್ಥ ಆ ಊರಿನಲ್ಲಿ ಅವರ ಗುಡಿಯನ್ನು ಕಟ್ಟಲಾಗಿದೆ. ಅಲ್ಲಿ ಪ್ರತಿವರ್ಷ ಬಂಡಿಹಬ್ಬವನ್ನು ಆಚರಿಸುವರು. ಈ ಬಗ್ಗೆ ಇನ್ನೂ ಹೆಚ್ಚಿನ ವೈವಿಧ್ಯಮಯ ಸಂಗತಿಗಳು ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ ಅದರಲ್ಲೂ ಕರಾವಳಿ ಪ್ರದೇಶದಲ್ಲಿ ಕಂಡುಬರುವುದು ಗಮನೀಯ ಸಂಗತಿಯಾಗಿದೆ.

ಕುಮಾರರಾಮನ ಗುಡಿ : ವಿಜಯನಗರ ಆರಂಭಿಕ ಅವಧಿಯಲ್ಲಿ ಮುಸ್ಲಿಂ ಸುಲ್ತಾನರ ವಿರುದ್ಧ ಹೋರಾಡಿ ಮಡಿದವರ ಗುಡಿಗಳಿವೆ. ಅದರಲ್ಲಿ ಕುಮಾರರಾಮನ ಗುಡಿ ವಿಶೇಷವೆನಿಸಿದೆ. ಬಹುತೇಕ ಕುಮಾರರಾಮನ ಹೆಸರಿನ ಗುಡಿಗಳು 1408 ರಿಂದ ಕಂಡುಬರುತ್ತವೆ. ರಾಮಘಡದ 1527ರ ಶಾಸನದಲ್ಲಿ (ನಂ. 519) ಅನೇಕ ಮಹತ್ವದ ಸಂಗತಿಗಳಿದ್ದು ಅದರಲ್ಲಿ ಕಂಪಿಲರಾಯನ ಮಗ ರಾಮನಾಥ ಒಡೆಯ (ಕುಮಾರರಾಮ)ನ ನೆನಪಿಗಾಗಿ ಹೊಸಮಲೆದುರ್ಗದಲ್ಲಿ ರಾಮನಾಥ ದೇವರ ದೇವಾಲಯವನ್ನು ಕಟ್ಟಿಸಿದ ವಿಷಯ ವಿಶೇಷವಾಗಿದೆ. ಈ ಮಾಹಿತಿಯಿಂದ ಹೊಸಮಲೆದುರ್ಗವು 14ನೇ ಶತಮಾನದ ಆರಂಭದಲ್ಲಿ ಕಂಪಿಲರಾಯನ ರಾಜಧಾನಿ ಆಗಿದ್ದು ತಿಳಿಯುತ್ತದೆ. ರಾಮನಾಥನು 3ನೇ ಸಿಂಗನ ಮಗ ಖಂಡೆರಾಯ ಕಂಪಿಲರಾಯ ಮತ್ತು ಆತನ ರಾಣಿ ವೀರಗುಜಲಹರಿಹರದೇವಿ. ಕುಮಾರರಾಮನ ಶಿಲ್ಪಗಳು ವಿವಿದೆಡೆಗಳಲ್ಲಿರುವುದನ್ನು ಅನೇಕ ಸಂಶೋಧಕರು ಬೆಳಕಿಗೆ ತಂದಿರುವರು. ಹೆಚ್ಚಿನ ಸಂಶೋಧನೆಯಿಂದ ಇನ್ನೂ ಹಲವಾರು ಈತನ ಶಿಲ್ಪಗಳು ಮತ್ತು ಗುಡಿಗಳು ಹೊರಬರುವ ಸಾಧ್ಯತೆಯಿದೆ.

7. ಬಿಷ್ಟಪ್ಪಯ್ಯ ಗೋಪುರ :

ಹಂಪೆಯ ವಿರೂಪಾಕ್ಷ ದೇವಾಲಯದ ನಿರ್ಮಾಣ ಅದರ ವಿಸ್ತರಣೆ ಮತ್ತು ಜೀರ್ಣೋದ್ಧಾರದ ಬಗ್ಗೆ ಅನೇಕ ಚಾರಿತ್ರಿಕ ಸಂಗತಿಗಳು ಹೆಣೆದುಕೊಂಡಿವೆ. ವಿರೂಪಾಕ್ಷ ದೇವಾಲಯದ ಪ್ರವೇಶ ಗೋಪುರದ ನಿರ್ಮಾಣ ಕುರಿತು ಕೆಲವು ಭಿನ್ನಾಭಿಪ್ರಾಯಗಳಿವೆ. ಈ ವಿಷಯವನ್ನು ಇಲ್ಲಿ ಪರಾಮರ್ಶಿಸಲಾಗಿದೆ. ಈ ದೇವಾಲಯದ ಪ್ರವೇಶ ಗೋಪುರವನ್ನು ಹಿರಿಯ/ದೊಡ್ಡಗೋಪುರವೆಂದು ಕರೆಯಲಾಗಿದೆ. ಇದನ್ನು ಸಂಗಮ ವಂಶದ ಎರಡನೇ ದೇವರಾಯನು(1423–46)

ನಿರ್ಮಿಸಿದನು. ಈ ವಿಷಯವು 2ನೇ ದೇವರಾಯನ ಆಸ್ಥಾನ ಪಂಡಿತ, ಆತನ ಮಂತ್ರಿ, ಸಾಮ್ರಾಜ್ಯದ ಮುಳಬಾಗಿಲು, ಟೇಕಲ್, ಬಾರಕೂರು ಮತ್ತು ಮಧುರೈ ಪ್ರಾಂತಗಳ ಅಧಿಕಾರಿಯು ತನ್ನ ಕೃತಿ ಶಿವತತ್ವ ಚಿಂತಾಮಣಿಯಲ್ಲಿ ಉಲ್ಲೇಖಿಸಿದ್ದಾನೆ. ಅದರಲ್ಲಿ ಈತನು ವಿರೂಪಾಕ್ಷ ದೇವಾಲಯದ ಪ್ರಾಕಾರ, ಗೋಪುರ, ಕೊಳ, ರಥ, ಪಥಗಳನ್ನು ನಿರ್ಮಿಸಿದ ವಿವರಣೆಗಳಿವೆ. ರಸ್ತೆ ಬದಿಗಳಲ್ಲಿ ವೃಕ್ಷಗಳನ್ನು ನೆಟ್ಟನು. ರಥಗಳನ್ನು ಮಾಡಿಸಿ ವಿರೂಪಾಕ್ಷ, ಪಂಪಾಂಬಿಕೆ ಮತ್ತು ಗಣಾಧಿಪತಿ ದೇವರುಗಳಿಗೆ ಅರ್ಪಿಸಿದನೆಂದು ಹೇಳಲಾಗಿದೆ. ಈ ಕೃತಿಯನ್ನು ಎಸ್. ಬಸಪ್ಪ ಅವರು ಸಂಪಾದಿಸಿದ್ದಾರೆ (1960 ಪು. 3825).

ಮುಂದೆ ತುಳುವಂಶದ ಕೃಷ್ಣದೇವರಾಯನು ವಿರೂಪಾಕ್ಷ ದೇವಾಲಯ ಸಂಕೀರ್ಣದಲ್ಲಿ ಹಲವಾರು ಕಟ್ಟಡಗಳನ್ನು ಕಟ್ಟಿಸಿದನು. ಕೆಲವುಗಳನ್ನು ಜೀರ್ಣೋದ್ಧಾರಗೊಳಿಸಿದ ಸಂಗತಿಗಳು ಆತನ 1513ರ ಶಾಸನದಿಂದ ತಿಳಿದಿದೆ. ಈ ದೇವಾಲಯದಲ್ಲಿ ಮಹಾ ರಂಗಮಂಟಪ ಮತ್ತು ಗೋಪುರವನ್ನು ಜೀರ್ಣೋದ್ಧಾರಗೊಳಿಸಿದನು. ಈ ವಿವರಗಳುಳ್ಳ ಶಾಸನವು ವಿರೂಪಾಕ್ಷ ದೇವಾಲಯದಲ್ಲಿದೆ (ಎ.ಆರ್.ಎಸ್.ಐ. 1889, 29; ಎಸ್.ಐ.ಐ. 4, 258). ಆಗ ಕೃಷ್ಣದೇವರಾಯನಿಗೆ ಪಟ್ಟಾಭಿಷೇಕವಾಗಿದೆ. ಈ ಕಾರಣಕ್ಕಾಗಿ ಇವುಗಳಲ್ಲದೆ ಅರಸನು ವಿರೂಪಾಕ್ಷ ದೇವರಿಗೆ ಸಿಂಗನಾಯಕನ ಹಳ್ಳಿಯನ್ನು ದತ್ತಿ ನೀಡಿದನು. ಇದಲ್ಲದೆ ಈ ದೇವರಿಗೆ ಒಂಭತ್ತು ಹರಳುಳ್ಳ ಚಿನ್ನದ ಕಮಲ, ನಾಗಾಭರಣ, ಒಂದು ಚಿನ್ನದ ಚೆಂಬು ಮತ್ತು 24 ಬೆಳ್ಳಿಯ ದೀಪಗಳನ್ನು ದಾನ ನೀಡಿದನು (ಎ.ಆರ್.ಐ. 1889, ನಂ. 29, ಎ.ಇ. 1, ಪು. 361 ಮತ್ತು ಎಸ್.ಐ.ಐ. 4, ನಂ. 258).

ಆದರೆ ವಿರೂಪಾಕ್ಷ ದೇವಾಲಯದ ಪ್ರವೇಶಗೋಪುರವನ್ನು ಬಿಷ್ಟಪ್ಪಯ್ಯ ಕಟ್ಟಿಸಿದನೆಂಬ ವಿವರಗಳು ಆರ್.ಎಸ್.ಪಂಚಮುಖಿ ಅವರು ಸಂಪಾದಿಸಿದ ವಿರೂಪಾಕ್ಷ ವಸಂತೋತ್ಸವ ಚಂಪು ಕೃತಿಯಲ್ಲಿದೆ (1953). ಬಿಷ್ಟಪ್ಪಯ್ಯ ಅವರು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ವಿಠಲಾಪುರದವರು ಇವರನ್ನುಮತ್ತು ಈಗಿನ ಅವರ ಮನೆತನದವರನ್ನು ಮಹಾಪುರುಷರೆಂದು ಹೇಳುವರು. ಹಂಪೆ ವಿರೂಪಾಕ್ಷ ದೇವಾಲಯದ ಹಿರಿಯ ಗೋಪುರವನ್ನು ಬಿಷ್ಟಪ್ಪಯ್ಯನು ತನ್ನ ಹೆಂಡತಿ ಲಕ್ಷ್ಮಾಂಬೆಯನ್ನು ಬಲಿಕೊಟ್ಟು ಕಟ್ಟಿಸಿದನೆನ್ನುವರು. ಈ ಕಟ್ಟಡದ ನಿರ್ಮಾಣದ ಕಾಲ ಸು. ಕ್ರಿ.ಶ. 1660–94 ಎನ್ನಲಾಗಿದೆ (ವಿಜಯನಗರ ಅಧ್ಯಯನ ಸಂ. 14, ಪು. 370–81, 2010). ಈ ಬಗ್ಗೆ ಅಧ್ಯಯನ ನಡೆಸಿದ ಇವರ ವಂಶಸ್ಥರಾದ ವಸುಂಧರ ದೇಸಾಯಿ ಅವರು ಮಹಾಪುರುಷ ಬಿಷ್ಟಪ್ಪಯ್ಯನವರು (1608–98) ಬಹುಮುಖ ಪ್ರತಿಭೆಯುಳ್ಳವರೆಂದು "ಶ್ರೀ ಬಿಷ್ಟಪ್ಪಯ್ಯ ಮಹಾಪ್ತಕುಕ್ಷ" ಎಂಬ ಲೇಖನದಲ್ಲಿ ವಿವರಿಸಿರುವರು (ವಿಜಯನಗರ ಅಧ್ಯಯಯನ, ಸಂ.13, ಪು. 475–484).

ಈ ಗೋಪುರವು 165 ಅಡಿ ಎತ್ತರವಿದೆ. ಹತ್ತು ಅಂತಸ್ತುಗಳಿವೆ. ತಳಪಾಯದಲ್ಲಿ ಎರಡು ಅಂತಸ್ತುಗಳನ್ನು ಶಿಲೆಯಿಂದ ಮತ್ತು ಉಳಿದ ಮೇಲಿನ ಭಾಗವನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಿದ್ದಾಗಿದೆ. ಗೋಪುರದ ಪ್ರತಿಯೊಂದು ಅಂತಸ್ತಿನ ಗೋಡೆಗಳಲ್ಲಿ ವಿಭಿನ್ನ ಗಾರೆ ಶಿಲ್ಪಗಳನ್ನು ನಿರ್ಮಿಸಿ ಅವುಗಳಿಗೆ ವಿಭಿನ್ನ ಬಣ್ಣಗಳನ್ನು ಲೇಪಿಸಿದ್ದರಿಂದ ಅವುಗಳು ಬಹು ಸುಂದರವಾಗಿ ಕಾಣುತ್ತವೆ. ಒಟ್ಟಾರೆ ಈ ಗೋಪುರದ ನಿರ್ಮಾಣ ಸಂಗಮ ವಂಶದ 2ನೇ ದೇವರಾಯನ ಕಾಲದಲ್ಲಿ (1423–46) ಆಗಿದ್ದು ಆ ಬಳಿಕ ಕೃಷ್ಣರಾಯನು 1513 ರಲ್ಲಿ ಜೀರ್ಣೋದ್ಧಾರಗೊಳಿಸಿದನು. ಮುಂದೆ 1660–94 ರಲ್ಲಿ ಬಿಷ್ಟಪ್ಪಯ್ಯ ಅವರು ಬಹುತೇಕ ಈ ದೇವಾಲಯದ ಮಹಾ ಗೋಪುರವನ್ನು ಪುನರ್ ನಿರ್ಮಾಣ ಮಾಡಿರ ಬಹುದು. ಈ ಗೋಪುರದ ಸಮಗ್ರ ವಾಸ್ತು ಶಿಲ್ಪಕಲೆಯ ಅಧ್ಯಯನವನ್ನು ನಡೆಸಿದರೆ ಈ ಗೋಪುರದ ನಿರ್ಮಾಣದ ಆರಂಭ ಮತ್ತು ಪುನರ್ ನಿರ್ಮಾಣದ ಮಾಹಿತಿಗಳು ಸ್ಪಷ್ಟವಾಗುತ್ತವೆ. ಸಂಗಮ ವಂಶದ 2ನೇ ದೇವರಾಯನ ಕಾಲದ ಗೋಪುರದ ಲಕ್ಷಣ (1423–40), ಕೃಷ್ಣದೇವರಾಯನ ಕಾಲದಲ್ಲಿ ನಡೆದದುರಸ್ಥಿ ಲಕ್ಷಣ (1513), ಮತ್ತು ಬಿಷ್ಟಪ್ಪಯ್ಯ ಮಹಾಪುರುಷರು (1660–90) ಕಟ್ಟಿಸಿದ ಲಕ್ಷಣಗಳು ಸ್ಪಷ್ಟವಾಗುತ್ತವೆ. ಆದರೆ ಕು. ಅಪರ್ಣ ಅವರ ಸಂಗಮರ ದೇವಾಲಯಗಳ ಕೃತಿಯಲ್ಲಿ ವಾಸ್ತುಶಿಲ್ಪ ಕಲೆಯ ಮಾಹಿತಿ ಇರುವುದಿಲ್ಲ.

8. ಅರವೀಡು ಮನೆತನ

ವಿಜಯನಗರದ ಅರವೀಡು ಮನೆತನದ ರಾಜಕೀಯ ಚರಿತ್ರೆಯು ವಿಜಯನಗರ ಪತನದ ಬಳಿಕವೇ ಆರಂಭವಾಯಿತು. ಆ ಮೊದಲು ಈ ಮನೆತನವು ಅಷ್ಟು ಪ್ರಸಿದ್ಧಿಗೆ ಬಂದಿರಲಿಲ್ಲ. ಸದಾಶಿವರಾಯನು ಪಟ್ಟಕ್ಕೆ ಬಂದಾಗಿನಿಂದ ಅದರ

ಬೆಳವಣಿಗೆ ಕಾಣುವುದು. ಸುಮಾರು 100 ವರ್ಷಗಳ ಕಾಲ (1565-1665) ಈ ಮನೆತನವು ಅಸ್ತಿತ್ವದಲ್ಲಿತ್ತು. ಆ ಬಳಿಕ ತನ್ನ ಮಹತ್ವವನ್ನು ಮುಂದೆ ಕಳೆದುಕೊಂಡಿತು. ಈ ಮನೆತನದ ಹುಟ್ಟು ಬೆಳವಣಿಗೆಯ ಚರಿತ್ರೆಯನ್ನು ಗಮನಿಸಿದರೆ ಅದರ ರಾಜಧಾನಿಗಳು ನಾಲ್ಕೈದು ಕಡೆಗಳಿಗೆ ಬದಲಾವಣೆ ಆಗಿದ್ದು ತಿಳಿಯುತ್ತದೆ. ಅವುಗಳು ಆನೆಗೊಂದಿ, ಪೆನುಗೊಂಡ, ಚಂದ್ರಗಿರಿ, ವೆಲ್ಲೂರು ಮತ್ತು ಬೇಲೂರು. ಅರವೀಡು ವಂಶದ ಆರಂಭವು 1545 ರಿಂದ ಕಾಣುತ್ತದೆ. ಹಂಪೆಯ ವಿಠಲೇಶ್ವರ ದೇವರ ಮಹಾ ಅರಸ ಮಹಾಮಂಡಳೇಶ್ವರ ತಿಮ್ಮನ ಮಗ ಅಳಿಯ ರಾಮರಾಯನಿಂದ ಅರವೀಡು ವಂಶ ಉಗಮವಾಗಿದೆ. ತಿಮ್ಮನ ಸಹೋದರ ಶ್ರೀರಂಗನಿಗೆ ಮೂವರು ಮಕ್ಕಳು. ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರದ ರಾಮರಾಯನ ಕೊಲೆ ಆಯಿತು. ಈ ಯುದ್ಧದ ಬಳಿಕ ವಿಜಯನಗರ ಸೋಲನ್ನು ಪಡೆಯಿತು(1565). ಆ ಕ್ಲಿಷ್ಟ ಸನ್ನಿವೇಶದಲ್ಲಿ ವಿಜಯನಗರದಲ್ಲಿದ್ದ ರಾಮರಾಯನ ತಮ್ಮ ತಿರುಮಲನು ಮುಸ್ಲಿಂ ಸೈನ್ಯದ ವಿರುದ್ಧ ಯುದ್ಧ ಮಾಡದೇ ಹಂಪೆಯಲ್ಲಿದ್ದ ರಾಣಿವಾಸದವರನ್ನು, 150 ಆನೆಗಳ ಮೇಲೆ ಸಂಪತ್ತನ್ನು ಏರಿಸಿ ಚಂದ್ರಗಿರಿಗೆ ವರ್ಗಾವಣೆ ಮಾಡಿದನು (ಕರ್ನಾಟಕ ಚರಿತ್ರೆ : 1977, ಪು. 318). ಅರವೀಡು ವಂಶದ ಒಂದು ಶಾಖೆಯು ಮೊದಲು ಆನೆಗೊಂದಿಯಲ್ಲಿತ್ತು. ಅದು 1580 ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರಭುತ್ವವನ್ನು ಹೊಂದಿತ್ತು. ಆನೆಗೊಂದಿಯಲ್ಲಿ ಆಳುತ್ತಿದ್ದ ಇವನ ಕಾರ್ಯಕರ್ತ ಬಾಗುಳಿಯ ಮಾಚಿನಾಯಕನ ಮಗ ಮಾದಿನಾಯಕ ಕೊಟ್ಟೂರು ಸೀಮೆಯ ಅಧಿಕಾರಿ ಆಗಿದ್ದನು. ಆಗ ಆತನು ಅಲ್ಲಿನ ಕುರುಬರಿಗೆ ಕುಡಿಗೆರೆ ಗ್ರಾಮವನ್ನು ದಾನ ನೀಡಿದನು. (ಕೊಟ್ಟೂರು ಶಾಸನ). ಮುಂದೆ ಐದು ವರ್ಷ ಹಂಪೆಗೆ ಮರಳಿ ಬರಲು ಪ್ರಯತ್ನಿಸಿ ವಿಫಲನಾದನು. ಮುಂದೆ ಈ ಮನೆತನದವರು ಮೂರು ಗುಂಪುಗಳಾಗಿ ವಿಂಗಡಣೆಯಾಗಿದ್ದರು. ಆ ಗುಂಪುಗಳು ಸದಾಶಿವರಾಯನ ಗುಂಪು, ತಿರುಮಲನ ಗುಂಪು ಮತ್ತು ರಾಮರಾಯನ ಮಕ್ಕಳ ಗುಂಪು ಆಗಿದ್ದವು. ಇವರು ಪರಸ್ಪರ ನಿರಂತರವಾಗಿ ಘರ್ಷಣೆ ಮಾಡಿಕೊಳ್ಳುತ್ತಿದ್ದರು. ಇವರ ರಾಜಧಾನಿಯನ್ನು ಎರಡು ಸಲ ಬಹಮನಿಯವರು ಕೈವಶಪಡಿಸಿ ಕೊಂಡಿದ್ದರು. ಹೀಗಾಗಿ 1570 ರ ಹೊತ್ತಿಗೆ ತಿರುಮಲನು ಪೆನುಗೊಂಡೆಯಲ್ಲಿ ಪಟ್ಟ ಕಟ್ಟಿಸಿಕೊಂಡನು.

ಹೊಯ್ಸಳ 3ನೇ ಬಲ್ಲಾಳನ ಆಳ್ವಿಕೆಯಲ್ಲಿ ರಾಜ್ಯದ ಮುಖ್ಯಸ್ಥಳವಾಗಿತ್ತು ಪೆನುಗೊಂಡ. ಆಗ ಆತನ ಮಂತ್ರಿಯ ಅಳಿಯ ಮಾಚೆಯ ದಂಡನಾಯಕ ಪೆನುಗೊಂಡದಿಂದ 1320 ರಲ್ಲಿ ಪೆನುಗೊಂಡ ರಾಜ್ಯವನ್ನು ಆಳುತ್ತಿದ್ದನು. (ಎಸ್.ಐ.ಐ. 9, ಭಾಗ-1, ನಂ. 354) ಮುಂದೆ ಮಾಚೆಯನ ಮಗ ಗಂಗಿದೇವನು 1349 ರಲ್ಲಿ ಅದರ ಅಧಿಕಾರವನ್ನು ನೋಡಿಕೊಳ್ಳುತ್ತಿದ್ದನು. ಹೊಯ್ಸಳರ ಆಳ್ವಿಕೆಯು ಅಂತ್ಯವಾದ ಬಳಿಕ ವಿಜಯನಗರ ಅರಸ ಮೊದಲನೇ ಬುಕ್ಕನು ತನ್ನ ಮಗನಾದ ವಿರುಪಣ್ಣ ಒಡೆಯನಿಗೆ ಪೆನುಗೊಂಡದ ಆಡಳಿತವನ್ನು ನೋಡಿಕೊಳ್ಳಲು ಕೊಟ್ಟನು.

ಮಧುಗಿರಿಯಿಂದ ಪೆನುಗೊಂಡ ಅರಸರ ಆಳ್ವಿಕೆಯು 1418 ರಿಂದ ಆರಂಭವಾಯಿತು. (ಎಕ 12, ಮಧುಗಿರಿ 20). ಇವರ ಆಳ್ವಿಕೆಯನ್ನು 1437 ರ ಪಾವಗಡ ಶಾಸನ ತಿಳಿಸುತ್ತದೆ. (ಎಕೆ 12, ಮಧುಗಿರಿ 64) ಆ ಬಳಿಕ 1495, 1500, 1509, 1510, 1512, 1515, 1530, 1537, 1539, 1540, 1543, 1544, 1550, 1554, 1557, 1569ರ ವರೆಗೆ ಆಳ್ವಿಕೆ ಇತ್ತು. ಅದನ್ನು ತುಮಕೂರು ಜಿಲ್ಲೆಯ ಶಾಸನಗಳು ತಿಳಿಸುತ್ತವೆ. ಈ ವಿವರಣೆಗಳನ್ನಲ್ಲದೆ ಅವರ ಮಹಾಮಂಡಳೇಶ್ವರರ ಇನ್ನಿತರ ಮಾಹಿತಿಗಳನ್ನು ಡಾ. ಡಿ.ಎಸ್. ಯೋಗೀಶ್ವರಪ್ಪ ಅವರು ಬರೆದ ಲೇಖನದಲ್ಲಿದೆ. (ವಿಜಯನಗರ ಅಧ್ಯಯನ 2010, ವಿಜಯನಗರ ಸಾಮ್ರಾಜ್ಯದ ಪೆನುಗೊಂಡೆ ರಾಜ್ಯ ಮತ್ತು ಅದರ ಮಹಾಮಂಡಳೇಶ್ವರರು, ಪು. 233-243)

ಆ ಬಳಿಕ ತಿರುಮಲನ ಮಕ್ಕಳಾದ ಒಂದನೇ ಶ್ರೀರಂಗ ಮತ್ತು ಒಂದನೇ ವೆಂಕಟಪತಿಯರು ಪೆನುಗೊಂಡದ ಆಳ್ವಿಕೆಯನ್ನು ನಡೆಸಿದರು. ವಿಜಾಪುರದ ಆದಿಲ್‌ಷಾಹಿಗಳು 1592 ರಲ್ಲಿ ನಡೆಸಿದ ಯುದ್ಧಗಳಿಂದ ಅವರು ತಮ್ಮ ರಾಜಧಾನಿಯನ್ನು ಪೆನುಗೊಂಡದಿಂದ ಚಂದ್ರಗಿರಿಗೆ ವರ್ಗಾಯಿಸಿದರು. ಆ ಬಳಿಕ ಅವರು ತಮ್ಮ ರಾಜಧಾನಿಯನ್ನು ವೆಲ್ಲೂರಿಗೆ ಬದಲಿಸಿದರು. ಅಲ್ಲಿಂದ ಶ್ರೀರಂಗ, ರಾಮದೇವರಾಯ ಮತ್ತು 3ನೇ ವೆಂಕಟಪತಿ ರಾಜ್ಯವಾಳಿದರು. 3ನೇ ಶ್ರೀರಂಗನಿಗೆ 1649ರಲ್ಲಿ ಪಟ್ಟಭಿಷೇಕವಾಯಿತು. ಈತನನ್ನು ಆಗ ವಿಜಾಪುರ ಮತ್ತು ಗೋಲ್ಕೊಂಡ ಷಾಹಿ ಸುಲ್ತಾನರು ಸೋಲಿಸಿದರು. ಈ ಘಟನೆ ನಡೆದ ಬಳಿಕ ಈತನು ಅಧಿಕಾರ ಹೀನನಾದನು. ಆ ಸ್ಥಿತಿಯಲ್ಲಿದ್ದಾಗ ಮೈಸೂರಿನ ಕಂಠೀರವ

ನರಸಿಂಹ ರಾಜ ಒಡೆಯರು ಆತನಿಗೆ ಸಹಾಯ ನೀಡಿದರು. ಹೀಗಾಗಿ ಅವನು ಮುಂದೆ ವೆಲ್ಲೂರನ್ನು ಪುನಃ ಗಳಿಸಿದನು. ಈತನು ಆಗ ಗುಪ್ತವಾಗಿ ಗೋಲ್ಕೊಂಡದ ವೀರ ಜುಮ್ಲಾನನನ್ನು ತನ್ನ ಸೈನ್ಯಾಧಿಕಾರಿಯನ್ನಾಗಿ ನೇಮಿಸಿಕೊಂಡನು. ಈ ಕಾರಣಕ್ಕಾಗಿ 1654ರಲ್ಲಿ ಈತನನ್ನು ವಿಜಾಪುರ ಆದಿಲ್‌ಷಾಹಿಗಳು ಸೋಲಿಸಿದರು. ಮುಂದೆ ಈತನಿಗೆ ಸುಲ್ತಾನನು ಸಹಾನು ಭೂತಿಯನ್ನು ತೋರಿಸಿ (ಶ್ರೀರಂಗನಿಗೆ) ತನ್ನ ಸ್ವಾಧೀನದಲ್ಲಿದ್ದ ಚಂದ್ರಗಿರಿಯನ್ನು ಬಿಟ್ಟು ಕೊಟ್ಟನು. ಇದು ಆತನ ರಾಜತಂತ್ರವೆಂದೇ ಒಪ್ಪಿಕೊಳ್ಳಬೇಕು. ಈತನು 1656 ರಿಂದ ಆಳುವಾಗ ತಿರುಪತಿಯನ್ನು ತನ್ನ ಅಧೀನಕ್ಕೆ ಪಡೆದು ಕೊಂಡನು. ಆ ಬಳಿಕ ಚಂದ್ರಗಿರಿ ಭಾಗವು ಶ್ರೀರಂಗನ ಕೈಯಿಂದ ತಪ್ಪಿ ಹೋಯಿತು. ಏಕೆಂದರೆ ಆಗ ಸಾಮಂತರು ಈತನಿಗೆ ನೆರವನ್ನು ನೀಡಲಿಲ್ಲ. ಎರಡನೇ ಸಲ ಅಧಿಕಾರ ಹೀನನಾದ ಬಳಿಕ ಆತನು ಕೆಲಕಾಲ 1658 ರಲ್ಲಿ ಶ್ರೀರಂಗ ಪಟ್ಟಣದ ಕಂಠೀರವ ನರಸರಾಜರ ಆಶ್ರಯದಲ್ಲಿದ್ದನು. ಆಗ 1665 ರಲ್ಲಿ ಆದಿಲ್‌ಷಾಹಿ ಸುಲ್ತಾನ ಗತಿಸಿದನು. ಆ ಸಂದರ್ಭದಲ್ಲಿ ಬೇಲೂರನ್ನು ಕೆಳದಿ ನಾಯಕ ವೆಂಕಟಾದ್ರಿನಾಯಕ ಜಯಿಸಿದನು. ಮುಂದೆ ಕೆಳದಿ ಶಿವಪ್ಪನಾಯಕನು ಬೇಲೂರನ್ನು 3ನೇ ಶ್ರೀರಂಗನಿಗೆ ಬಿಟ್ಟು ಕೊಟ್ಟನು. ಅಲ್ಲಿಂದ ಈತನು 1659 ರಿಂದ 1670 ರವರೆಗೆ 11 ವರ್ಷ ಬೇಲೂರಿನಿಂದ ಆಳ್ವಿಕೆ ನಡೆಸಿದನು. ಕೆಳದಿ ಶಿವಪ್ಪನಾಯಕನ ನಂತರ 1665ರಲ್ಲಿ ಬಂದ ಸೋಮಶೇಖರನಾಯಕನು ಬೇಲೂರಿನ ಮೇಲೆ ದಾಳಿ ಮಾಡಿದನು. ಅದೇ ವರ್ಷ ದೇವರಾಜನು ಬೇಲೂರನ್ನು ಆಕ್ರಮಿಸಿದನು. ಇದರಿಂದ ಅರವೀಡು ವಂಶದವರ ಆಳ್ವಿಕೆಯು ಅಂತ್ಯವಾಯಿತು.

ಈ ಎಲ್ಲಾ ಸ್ಥೂಲ ಕಥಾನಕ ಅಂಶಗಳಿಂದ ವಿಜಯನಗರದ ಅರವೀಡು ಮನೆತನದವರು ಸುಮಾರು 100 ವರ್ಷಗಳ ಕಾಲ ಏನೆಲ್ಲಾ ಸಮಸ್ಯೆಗಳು ಬಂದರೂ ಅವುಗಳನ್ನು ನಿಭಾಯಿಸಿ ಆಡಳಿತ ನಡೆಸಿದ್ದು ತಿಳಿಯುತ್ತದೆ. ವಿಜಯನಗರ ಪತನಗೊಂಡ ಬಳಿಕ ಅವರು ಪೆನುಗೊಂಡ, ಚಂದ್ರಗಿರಿ, ವೆಲ್ಲೂರು ಮತ್ತು ಬೇಲೂರುಗಳನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು.ಅದರಲ್ಲಿ ಮೂರು ರಾಜಧಾನಿಗಳು ಆಂಧ್ರಪ್ರದೇಶದಲ್ಲಿದ್ದರೆ, ಒಂದು ಮಾತ್ರ ಕರ್ನಾಟಕದ ಹಾಸನ ಜಿಲ್ಲೆಯಲ್ಲಿದೆ. ಇವರ ಬೆಳವಣಿಗೆಯಲ್ಲಿ ಅನೇಕ ರಾಜಕೀಯ ಬದಲಾವಣೆಗಳಾಗಿವೆ. ಮುಖ್ಯವಾಗಿ ಬಹಮನಿ, ಆದಿಲ್‌ಷಾಹಿ ಮತ್ತು ಗೋಲ್ಕೊಂಡಶಾಹಿ ಮನೆತನಗಳು ಒಂದೆಡೆಯಿದ್ದರೆ, ಇನ್ನೊಂದೆಡೆ ಮೈಸೂರು ಅರಸರು, ಕೆಳದಿ ಅರಸರು ಕಾಣುವರು. ಸಮಕಾಲೀನವಾಗಿ ಆಂಧ್ರದಲ್ಲಿದ್ದ ರೆಡ್ಡಿಗಳ ಅಸ್ಥಿತ್ವ ಮತ್ತು ಆಳ್ವಿಕೆಯ ಪ್ರಭಾವ ಮತ್ತು ಸಂಬಂಧಗಳು ಸರಿಯಾಗಿ ತಿಳಿಯುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಕಾಲಘಟ್ಟದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಚಿತ್ರಣವನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿ ಅದರ ಇತಿಹಾಸವನ್ನು ಕಟ್ಟಿಕೊಡುವ ಅವಶ್ಯಕತೆಯಿದೆ. ಈಗಾಗಲೇ ಕೆಲವು ಮಹಾಪ್ರಬಂಧಗಳು ಮತ್ತು ಲೇಖನಗಳು ವಿವಿಧ ವಿಶ್ವವಿದ್ಯಾಲಯಗಳಿಂದ ಮತ್ತು ರಾಜ್ಯ ಪುರಾತತ್ವ ಇಲಾಖೆಯ ವರದಿಗಳಲ್ಲಿ ಪ್ರಕಟವಾಗಿವೆ. ವಿಜಯನಗರ ಶಾಸನಗಳ ಒಂದು ಕೃತಿಯ ಪ್ರಸ್ತಾವನೆಯಲ್ಲೂ ಅರವೀಡು ವಂಶದವರ ಸ್ಥೂಲ ವಿವರಣೆಗಳಿವೆ. ಆದರೆ ಹೊಸ ಲೇಖನಗಳ ಅಂಶಗಳು ಮತ್ತು ಅನೇಕ ಮಹಾ ಪ್ರಬಂಧಗಳಲ್ಲಿನ ವಿವರಣೆಗಳು ಒಂದೆಡೆ ಬರಬೇಕಾಗಿದೆ.

ಬನವಾಸಿಯಲ್ಲಿ ಅರವೀಡು ಅರಸರ ಚಿತ್ರಗಳು: ಬನವಾಸಿಯ 1552ರ ಜುಲೈ 22 ರ ಶಾಸನವು ವಿಜಯನಗರದ ಅರವೀಡು ವಂಶದ ರಂಗಾರಾಜಯ್ಯನು ವಿದ್ಯಾಗಿರಿಯಿಂದ ಆಳುವಾಗ ಆತನ ಮಕ್ಕಳಾದ ರಾಮರಾಜಯ್ಯ, ತಿರುಮಲರಾಜಯ್ಯ ಮತ್ತು ವೆಂಕಟಾದ್ರಿರಾಜಯ್ಯರು ಚಂದ್ರಗುತ್ತಿ ದುರ್ಗದಿಂದ ಮಹಾಮಂಡಳೇಶ್ವರರಾಗಿ ಆಡಳಿತ ನಡೆಸುತ್ತಿದ್ದರು. ಆಗ ಅವರ ಆದೇಶದ ಮೇರೆಗೆ ಊಳಿಗ(ರೈತ)ದ ಪಡುಮಪ್ಪನು ಬನವಾಸಿಯ ಮಧುಕೇಶ್ವರ ದೇವಾಲಯದ ಸಮುಚ್ಛಯದಲ್ಲಿ ಎರಡು ರಂಗಮಂಟಪಗಳನ್ನು ಪಾರ್ವತಿಗುಡಿಗೆ ಮತ್ತು ನರಸಿಂಹ ಗುಡಿಗಳಿಗೆ ಕಟ್ಟಿಸಿದನು. ಅಲ್ಲಿ ಆದಿತ್ಯ ನವಗ್ರಹಗಳಿವೆ. ಅಲ್ಲಿನ ಶಾಸನದಲ್ಲಿ ಈ ಅರವೀಡು ಕುಟುಂಬದವರನ್ನು ತಂದೆ ಮತ್ತು ಮೂವರು ಮಕ್ಕಳು ಹಾಗೂ ಕೃಷಿಕರ ರೇಖಾಚಿತ್ರಗಳಿರುವುದನ್ನು ಡಾ. ಹೆಚ್.ಆರ್. ರಘುನಾಥಭಟ್ ಅವರು ತೋರಿಸಿದ್ದಾರೆ. ಈ ತಂದೆ ಮಕ್ಕಳು ಅಲ್ಲಿನ ನರಸಿಂಹ ದೇವರ ಕಡೆಗೆ ಮುಖಮಾಡಿ ಕೈಮುಗಿದು ನಿಂತಿದ್ದಾರೆ. ಆ ಬಳಿಕ ಕೃಷಿಕನ ಚಿತ್ರವಿದೆ. ಇದರಿಂದ ವಿಜಯನಗರ ಪತನಗೊಳ್ಳುವ ಮೊದಲು ಅರವೀಡು ಮನೆತನದ ಚರಿತ್ರೆಯನ್ನು ಸರಿಯಾಗಿ ಕಟ್ಟಿಕೊಡಬೇಕಾಗಿದೆ. ಈ ಅವಧಿಯಲ್ಲಿ ಬನವಾಸಿಗೂ ಮತ್ತು ಅರವೀಡು ಮನೆತನದವರಿಗೆ 1552 ರಲ್ಲಿ ಸಂಪರ್ಕವಿದ್ದುದು ತಿಳಿಯುತ್ತದೆ.

9. ಧಾರ್ಮಿಕ ಪರಿಸರ

ಈ ಅವಧಿಯಲ್ಲಿ ಪ್ರಾಚೀನ ಪರಂಪರೆಯ ಎಲ್ಲಾ ಪ್ರಮುಖ ಧರ್ಮಗಳಾದ ಶೈವ, ವೀರಶೈವ, ವೈಷ್ಣವ, ಜೈನ ಮತ್ತು ಶಾಕ್ತ ಮತಗಳು ಪ್ರಸಿದ್ಧಿಯಲ್ಲಿದ್ದವು. ಜೊತೆಯಲ್ಲಿ ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮಗಳು ಅಸ್ತಿತ್ವಕ್ಕೆ ಬಂದವು. ಗೋವಾ–ಪೋರ್ಚುಗೀಜರ ಕಡೆಯಿಂದ ಕ್ರಿಶ್ಚಿಯನ್ ಮತವು ಕರಾವಳಿ ಭಾಗದಲ್ಲಿ (ಯಲ್ಲೂರು, ಪುತ್ತಗೆ ಭಾಗ) ಹಬ್ಬಿತು. ಗೋವೆಯ ಕೊಂಕಣಿ ಕ್ರಿಶ್ಚಿಯನ್ನರು ಪೋರ್ಚುಗೀಜರಿಂದ ಕಿರುಕುಳಕ್ಕೆ ಒಳಗಾದಾಗ ಅವರಿಗೆ ಕರಾವಳಿ ಪ್ರದೇಶವನ್ನು ಬಿಟ್ಟುಕೊಟ್ಟರು. (ಕರ್ನಾಟಕ ಚರಿತ್ರೆಮಾಲೆ–3, ಪು. 17) ಕರಾವಳಿ ಪ್ರದೇಶದಲ್ಲಿ ಪೋರ್ಚುಗೀಸ್, ಡಚ್ಚರು ಮತ್ತು ಇಂಗ್ಲಿಷರ ವಾಣಿಜ್ಯೋದ್ಯಮ ಅಸ್ತಿತ್ವದಲಿತ್ತು. ಈ ಅವಧಿಯಲ್ಲಿನ ಕೆಳದಿ–ಡಚ್ಚರ ನಡುವಿನ ಸಂಬಂಧದ ಮಾಹಿತಿಗಳಿವೆ. ಭಟ್ಕಳದ ವೀರಗಲ್ಲು ಶಾಸನದಲ್ಲಿ ಭಟ್ಕಳ ರಾಣಿಯು ಪೋರ್ಚುಗೀಜ ಸೈನ್ಯದ ವಿರುದ್ಧ ಕಾದಾಡುವ ದೃಶ್ಯವಿದೆ. ಅವರ ವೇಷಭೂಷಣದ ವೈಶಿಷ್ಟ್ಯತೆಗಳಲ್ಲಿ ಪೋರ್ಚುಗೀಜ ಸೈನ್ಯದವರು ತಲೆಗೆ ಟೋಪಿಗಳನ್ನು ಧರಿಸಿರುವರು. 1498 ರಲ್ಲಿ ಪೋರ್ಚುಗೀಜರು ಕಾರವಾರ ಸಮೀಪದ ಅಂಜಡೀವಕ್ಕೆ ಆಗಮಿಸಿ ಕ್ರಾಂತಿಮಾಡಿದರಂತೆ. 1662 ರಲ್ಲಿ ಕೆಳದಿ ಅರಸರನ್ನು ಡಚ್ ವೈಸರಾಯ್ ಉಡುಗೆಗಳನ್ನು ನೀಡಿ ಗೌರವಿಸಿ ಬಸ್ರೂರಿನಲ್ಲಿ ಅಕ್ಕಿ ವ್ಯಾಪಾರದಲ್ಲಿ ತೊಡಗಿದರು. ಆಗ ಆತನು ಪೋರ್ಚುಗೀಜರನ್ನು ಹಿಂದಕ್ಕಟ್ಟಿದನು. ಈ ದಿಸೆಯಲ್ಲಿ ಇವರ ಚರಿತ್ರೆಯನ್ನು ಡಾ. ವಸಂತ ಮಾಧವ ಇನ್ನಿತರರು ಅಧ್ಯಯನ ಮಾಡಿರುವರು.

ವಿಜಯನಗರದ 2ನೇ ದೇವರಾಯನು ಮತ್ತು ಕೃಷ್ಣದೇವರಾಯರು ತಾವು ಕುಳಿತುಕೊಳ್ಳುತ್ತಿದ್ದ ಸಿಂಹಾಸನದ ಬಳಿ ಮುಸ್ಲಿಂ ಮತದವರ ಪವಿತ್ರ ಖುರಾನ್ ಗ್ರಂಥವನ್ನೇ ಇಟ್ಟಿದ್ದರಂತೆ. (ಕರ್ನಾಟಕ ಚರಿತ್ರೆ ಮಾಲೆ3 ಪು. 13) ಮಸೀದಿಗಳನ್ನು ಕಟ್ಟಲು ಸಹಕಾರ ನೀಡಿದ್ದಾರೆ. ಹಂಪಿ ಪ್ರದೇಶದಲ್ಲಿ (ಕ.ವಿ.ಶಾ.ಸಂ. III ಹೊಸಪೇಟೆ, 310 (ಹಂಪೆ)) ಇಬ್ಬರು ಸೇರಿ 1420 ರಲ್ಲಿ ಮಸೀದಿಯನ್ನು ಕಟ್ಟಿದರು. ಅನೇಕ ಮುಸ್ಲಿಂ ಮತದವರನ್ನು ವಿಜಯನಗರದ ಸೈನ್ಯ ಮತ್ತು ಆಡಳಿತದಲ್ಲಿ ನೇಮಿಸಿ ಕೊಂಡಿದ್ದರು. ಇದು ತಮ್ಮ ವಿಶಾಲ ಮನೋಭಾವನೆಯನ್ನು ವ್ಯಕ್ತಪಡಿಸುತ್ತದೆ.

ಶಾಕ್ತ ಪರಂಪರೆಯಲ್ಲಿ ಲಕ್ಷ್ಮೀದೇವಿ, ಶಾರದೆ, ದುರ್ಗಾ ಪರಮೇಶ್ವರಿ, ಏಕನಾಥ ದೇವಿ, ಎಲ್ಲಮ್ಮ (ಚೌಡೇಶ್ವರಿ), ದುರ್ಗಿ, ಕಾಳಿ, ಪಾರ್ವತಿ, ಬನದದೇವಿ, ವಾಚಾರಮ್ಮ, ಕುಕನೂರಿನ ಮಹಾಮಯಾದೇವಿ, ಅಲ್ಲಿ ಜೇಷ್ಠಾ ದೇವಿ, ಭದ್ರಕಾಳಿ, ಜೇಷ್ಠ ಕಾಳಿಕಾ, ಜೇಷ್ಠ ಮಹಾಲಕ್ಷ್ಮಿ ಮುಂತಾದ ದೇವತೆಗಳು ಕಾಣುವರು. ಎಲ್ಲಮ್ಮ ದೇವತೆಯು ಹಂಪಿಯಲ್ಲಿ ಮೊದಲು ಕಾಣುತ್ತಾಳೆ. ವಿಜಯನಗರದ ಸಂಗಮ ವಂಶದ ಅರಸ ಪ್ರೌಢದೇವರಾಯನ ಆಳ್ವಿಕೆಯಲ್ಲಿ ಹಂಪಿಯ ಪಟ್ಟಣದಲ್ಲಿನ ಎಲ್ಲಮ್ಮನಿಗೆ ಭೂದಾನ ನೀಡಲಾಗಿದೆ. ಇದನ್ನು ಅಲ್ಲಿಯ 1425ರ ಶಾಸನ ತಿಳಿಸುತ್ತದೆ. ಅದು ಮುಂದೆ ಹಿರಿಯ ಅರಮನೆಯ ಒಳಭಾಗದ ಸೋಗುಲವಾಡಿಯ ಶ್ರೀ ಎಲ್ಲಮ್ಮ ದೇವತೆಗೆ ರಾಮಾಪುರದ ಸೀಮೆಯಲ್ಲಿದ್ದ 10 ಕೊಳಗ ಗದ್ದೆಯನ್ನು ದಾನ ನೀಡಿದ ವಿವರಣೆಯಿದೆ. ಶಾಸನವನ್ನು ಪತ್ತೆಹಚ್ಚಿ ಅಧ್ಯಯನ ನಡೆಸಿದವರು ಡಾ. ಪರಮಶಿವಮೂರ್ತಿ. (ವಿಜಯನಗರ ಅಧ್ಯಯನ : 2004, ಪು. 274 ರಿಂದ 280) ಶೈವಮತದಲ್ಲಿ ಹಂಪೆಯ ವಿರೂಪಾಕ್ಷ ನಂತರ ಸೋಮೇಶ್ವರ, ಸೋಮನಾಥ, ಮಲ್ಲಿಕಾರ್ಜುನ, ರಾಮೇಶ್ವರ, ಮೈಲಾರ, ಭೈರವ, ವಿದ್ಯಾಶಂಕರ, ಕಳಸೇಶ್ವರ, ಕುಕ್ಕೆ ಸುಬ್ರಹ್ಮಣ್ಯ, ಕೋಟೇಶ್ವರ, ತ್ರಯಂಬಕೇಶ, ವಿನಾಯಕ, ಮಹಾಗಣಪತಿ, ನಂದಿ ಮುಂತಾದ ದೇವರು ಪ್ರಸಿದ್ಧಿಯಲ್ಲಿದ್ದರು. ಈ ಅವಧಿಯಲ್ಲೂ ಸ್ಥಾವರಲಿಂಗ ಆರಾಧನೆ ಪ್ರಸಿದ್ಧಿಯಲ್ಲಿತ್ತು. ಕೆಲವು ಮಠಗಳು ಇದ್ದವು. ವೀರಶೈವ ಮಠಗಳು ತಂಬುಲಗೆರೆಯ ಬಡಗಣಮಠ/ಜಗದಾರಾಧ್ಯರ ಶಿಷ್ಯರು (1365) ಬಸ್ರೂರಿನ ಕೋಟೆಯ ನಾಯಕಿತಿಯ ಮಠ(1350). ಬಸ್ರೂರಿನ ರುದ್ರಾಕ್ಷಿಒಡೆಯರ ಮಠ(1487), ಯೆಡೆಯೂರಿನ ಸಿದ್ಧಲಿಂಗ ಸ್ವಾಮಿಗಳ ಮಠ(1480), ಬಾಳೇಹಳ್ಳಿ ವೀರಭದ್ರದೇವರ ಮಠ(1369), ತಂಗಡಗಿ ಕಪ್ಪಡಿ ಸಂಗಮನಾಥನ ಜಂಗಮರ ಮಠ(1445), ಮಳಲಿ ಚೆನ್ನಯ್ಯನ ಮಠ(14ನೇ ಶತಮಾನ), ಗೊಡಚಿ ವೀರಭದ್ರ ಮಠ(14 ನೇ ಶತಮಾನ), ಬ್ಯಾಹಟ್ಟಿ ಪಂಚಾಕ್ಷರಿ ದೇವರ ಮಠ(15 ನೇ ಶತಮಾನ), ಗುಂಡ್ಲುಪೇಟೆ ಪುತ್ರನಪುರದ ಮಹಾ ಮಹಂತ್ತುಮಠ(15ನೇ ಶತಮಾನ), ನುರಗಂಬಳಿ ನಿರಾಸಿಮಠ (15ನೇ ಶತಮಾನ) ಮುಂತಾದವುಗಳಾಗಿವೆ. (ಅಪರ್ಣ:ಸಂಗಮರ ದೇವಾಲಯಗಳು, ಪು. 84–87, 210–220). ಮತ್ತೊಂದು ಸಂಗತಿಯೆಂದರೆ

ಸಂಗಮರ ಆರಾಧ್ಯ ದೈವನಾದ ವಿರೂಪಾಕ್ಷನ ಅಂಕಿತ ಹೆಸರನ್ನು ಬಿಟ್ಟು ಅವರು ಮುಂದೆ ವೆಂಕಟೇಶ್ವರ ಮತ್ತು ಶ್ರೀರಾಮರ ಹೆಸರನ್ನು ಬಳಕೆಗೆ ತಂದಿದ್ದು ಅವರ ಮನಸ್ಥಿತಿಯ ಬದಲಾವಣೆಯನ್ನು ಮತ್ತು ವೈಷ್ಣವ ಧರ್ಮಕ್ಕೆ ಪ್ರಾಶಸ್ತ್ಯ ನೀಡಿದ್ದು ತಿಳಿಯುತ್ತದೆ.

ಕೇವಲ 5–6 ವರ್ಷ ಆಳಿದ ಸಾಳುವ ನರಸಿಂಹನು ಶ್ರೀವೈಷ್ಣವನಾಗಿದ್ದರೂ ಈತನು ಮಾದ್ವಗುರು ಶ್ರೀಪಾದರಾಯರ ಭಕ್ತನಾಗಿದ್ದನು. ಕೆಲವು ದೇವಾಲಯಗಳು ವಿವಿಧ ಕಾರಣಗಳಿಂದ ಹಾಳಾಗಿವೆ. ಉದಾಹರಣೆಗೆ ಪರಕೀಯರ ದಾಳಿಯಿಂದ ಹಾಳಾದ ಉದಾಹರಣೆಗಳು ವಿಶೇಷ ಗಮನವನ್ನು ಸೆಳೆಯುತ್ತವೆ. ಅದರಲ್ಲಿ ಬೇಲೂರಿನ ಚನ್ನಕೇಶವ ದೇವಾಲಯ 1397 ರಲ್ಲಿ (?) (ಎ.ಕೆ. 9 (ಪ) ಬೇಲೂರು, 144) ತುರಕೆಯ ಗಂಗಳಲಾರನು ಬಂದು ದಾಳಿ ಮಾಡಿ ಅದನ್ನು ಸುಡಿಸಿದಾಗ ಆ ಗೊಪುರವನ್ನು ಪುನಃ ನಿರ್ಮಾಣ ಮಾಡಿ ಅದಕ್ಕೆ ಕಳಶ ಮತ್ತು ದೀಪದ ಕಂಬವನ್ನು ನೆಟ್ಟಿದ್ದು, ಈ ಗೋಪುರ ಬಿದ್ದು ಹೋದ ಬಳಿಕ ಅದನ್ನು ಕಟ್ಟಿಸಿದ್ದು ಹಾಗೂ ಸುಮಾರು ಒಂದು ನೂರು ವರ್ಷಗಳ ಹಿಂದೆ ಬೇಲೂರಿನ ಚೆನ್ನಕೇಶವ ದೇವಾಲಯಕ್ಕೆ ಇದ್ದ ಗೋಪುರವನ್ನು ವಿದೇಶಿಗರು ಛಾಯಾ ಚಿತ್ರ ತೆಗೆದ ದಾಖಲೆ ಮಹತ್ವವೆನಿಸಿದೆ. ಇದೇ ರೀತಿಯಲ್ಲಿ ಹಾಳಾದ ಕೆಲವು ದೇವಾಲಯಗಳನ್ನು ಜೀರ್ಣೋದ್ಧಾರ ಗೊಳಿಸಿದ್ದು ಕಾಣುತ್ತದೆ.

9. ಅ. ಶ್ರೀ ವೈಷ್ಣವ ಧರ್ಮ

ಶ್ರೀ ವೈಷ್ಣವ ಧರ್ಮವು ವಿಜಯನಗರ ಕಾಲದಲ್ಲಿ ಹೆಚ್ಚು ಬೆಳವಣಿಗೆ ಹೊಂದಿತು. ಈ ಅವಧಿಯ ದೇವಾಲಯಗಳ ಬಗ್ಗೆ ವಿವೇಚಿಸಿದಾಗ ಪ್ರಮುಖವಾಗಿ ತಿರುಪತಿಯ ನರಸಿಂಹ, ಅತ್ತಾವರದ ಗೋಪಿನಾಥ, ಬೇಲೂರಿನ ಚೆನ್ನಕೇಶವ (ಮೂಲತಃ ವಿಜಯನಾರಾಯಣ), ದಾಮೋದರ, ಜನಾರ್ಧನ, ನಾರಾಯಣ, ಮಾಧವ, ಮಧುಸೂದನ, ಲಕ್ಷ್ಮೀನಾರಾಯಣ, ಅವತಾರ ದೇವತೆಗಳಾದ ನರಸಿಂಹ, ರಾಮ, ಕೃಷ್ಣ (ಉಡುಪಿ ಕೃಷ್ಣ), ಶ್ರೀ ಕೃಷ್ಣ ಪಂಥದ ಗೋಪಿನಾಥ, ತಿರುಮಲೆನಾಥ, ಲಕ್ಷ್ಮೀಕಾಂತ, ರಂಗನಾಥ, ವರದರಾಜ, ವಿಠ್ಠಲ, ರಾಮಚಂದ್ರ, ರಘುನಾಥ, ಮಲ್ಯವಂತ, ಬಾಲಕೃಷ್ಣ, ಲಕ್ಷ್ಮೀನರಸಿಂಹ, ಅನಂತಶಯನ, ಅಹೋಬಲ ಇತ್ಯಾದಿ ದೇವಾಲಯಗಳು ಕಾಣುತ್ತವೆ. ಈ ಪರಂಪರೆಯ ಮಠಗಳೂ ಇದ್ದವು. ಅಲ್ಲಿ ಮಾಧ್ವ ಮತ್ತು ರಾಮಾನುಜರ ತತ್ವಸಿದ್ಧಾಂತಗಳ ಪ್ರಚಾರವಿತ್ತು. ಅದರಿಂದ ಈ ಮತದ ದೈವಗಳ ದೇವಾಲಯಗಳು, ಮಠಗಳು ಮತ್ತು ಛತ್ರಗಳು ನಿರ್ಮಾಣವಾಗಲು ಕಾರಣವಾಯಿತು. ಮಾಧ್ವ ಸಂಪ್ರದಾಯದಲ್ಲಿನ ನವ ಬೃಂದಾವನಗಳು ಆನೆಗುಂದಿಯಲ್ಲಿವೆ. ಯಂತ್ರೋದ್ಧಾರಕ ದೇವಾಲಯ ಶ್ರೀ ನರಸಿಂಹತೀರ್ಥ ಬೃಂದಾವನಗಳಿವೆ. ಈ ಮತ ಪ್ರಚಾರಕ ವರ್ಗದ ಯತಿಗಳಲ್ಲಿ ವ್ಯಾಸರಾಯರ ಪಾತ್ರ ಬಹುದೊಡ್ಡದು. ದಕ್ಷಿಣ ಕರ್ನಾಟಕದ ಅದರಲ್ಲೂ ಕರಾವಳಿ ಭಾಗಗಳಲ್ಲಿ ಸಂಗಮರ ಆಳ್ವಿಕೆಯಲ್ಲಿ ತಿರುವೆಂಗಳನಾಥ ದೇವಾಲಯಗಳು ಮತ್ತು ಆಳ್ವರ ಶಿಲ್ಪಗಳು ಕ್ರಮೇಣ ಆರಂಭವಾದವು. ತಿರುವೆಂಗಳನಾಥನು ತಿರುಪತಿಯ ವೆಂಕಟೇಶ್ವರನೇ ಆಗಿದ್ದಾನೆನ್ನುವರು. ಹಂಪಿಯಲ್ಲಿ ಅನೇಕ ಶ್ರೀವೈಷ್ಣವ ದೇವಾಲಯಗಳನ್ನು ಈ ಅವಧಿಯಲ್ಲಿ ಕಟ್ಟಲಾಗಿದೆ. ಈ ಮತದ ಅಲ್ಲಿನ ಪುರಾವೆಗಳ ಬಗ್ಗೆ ಬಾಲಸುಬ್ರಮಣ್ಯಂ (ವಿ6–6, ಪು. 109–110) ಅವರು ವ್ಯಾಸರಾಯ ಮತ್ತು ವಿಜಯನಗರ; ಲಕ್ಷ್ಮಣ ತೆಲಗಾವಿ (ವಿ. 6–14), ಪು. 340–369 ಅವರು ವಿಜಯನಗರ ಕಾಲದ ರಾಮಾನುಜ ಕೂಟಗಳು; ಸಿ.ಎಸ್. ವಾಸುದೇವನ್ ಅವರು ಹಂಪಿಯ ಶಾಸನಗಳಲ್ಲಿ ಆಳ್ವರರು (ವಿ.6–15, ಪು. 178–185) ಮತ್ತು ಪದ್ಮ ದೇಸಾಯಿ ಅವರು 'ಹಂಪಿ ಪರಿಸರದಲ್ಲಿ ವೈಷ್ಣವ ಧರ್ಮದ ಪ್ರಭಾವ (ವಿ. 6–18, ಪು. 138–140) ಕೆ. ಎಂ. ಸುರೇಶ ಅವರ ಹಂಪಿಯ ವಿಜಯನಗರ ಕಾಲದ ಶಿಲ್ಪ ಕಲೆಯ ಮಹಾಪ್ರಬಂಧ, ಡಾ. ಆರ್. ಗೋಪಾಲ ಅವರು ಸಂಪಾದಿಸಿದ 'ಜೈನಧರ್ಮ' ಕೃತಿ, ಕೃಷ್ಣದೇವರಾಯನ ಕಾಲದ ಸಾಂಸ್ಕೃತಿಕ ಚರಿತ್ರೆ ಹಾಗೂ ಇನ್ನಿತರ ಲೇಖನ, ಕೃತಿ, ಪಿಎಚ್.ಡಿ. ಮಹಾಪ್ರಬಂಧಗಳು ಮುಖ್ಯವಾಗಿವೆ.

ಹಂಪಿಯಲ್ಲಿನ ವಿಜಯನಗರ ಕಾಲದ ಅನೇಕ ಭವ್ಯವಾದ ಶ್ರೀವೈಷ್ಣವ ಸ್ಮಾರಕಗಳು ಭಗ್ನಗೊಂಡಿವೆ. ಆದರೆ ಶೈವ, ವೀರಶೈವ ಹಾಗೂ ವೈಷ್ಣವ ಮತದ ಕೋದಂಡರಾಮ, ರಾಮ ಮತ್ತು ಮಾಧ್ವ ಪರಂಪರೆಯ ಆಂಜನೇಯ ದೇವಾಲಯಗಳು ಯಾವುದೇ ಧಕ್ಕೆಯನ್ನು ಅನುಭವಿಸಿದ್ದು ಕಾಣುವುದಿಲ್ಲ. ಈ ಬಗ್ಗೆ ಪ್ರತ್ಯೇಕ ಚಿಂತನೆಯನ್ನು ಮಾಡಬೇಕಾಗಿದೆ.

ತಿರುಮಲನಾಥ, ವಿಠಲೇಶ್ವರ ಇತ್ಯಾದಿ ದೇವಾಲಯಗಳು : ಹಂಪಿಯ ವಿಠಲ ದೇವಾಲಯ ಅನೇಕ ದತ್ತಿಗಳನ್ನು ಪಡೆದಿದೆ. ಅಲ್ಲಿನ ಮಂಟಪದ ಒಂದು ಶಾಸನದಲ್ಲಿ ಗುಡ್ಡ– ಗಂಗಾವತಿ ಸೀಮೆಯ ಅಚ್ಯುತರಾಯ ಸಮುದ್ರದಲ್ಲಿ ಎರಡು ವೃತ್ತಿಗಳನ್ನು 75 ಘಟ್ಟಿ ವರಹಗಳಿಗೆ ಖರೀದಿಸಿ ವಿಠಲೇಶ್ವರ ದೇವಾಲಯದ ಲಕ್ಷ್ಮೀನಾರಾಯಣ ದೇವರ ಬಂಡಾರಕ್ಕೆ ಸಲ್ಲಿಸಿದ್ದು ಉಲ್ಲೇಖವಾಗಿದೆ. (ದಾನದಲ್ಲಿನ ವೃತ್ತಿಗಳನ್ನು ವಿವೇಚಿಸಿದಾಗ ಹಲವಾರು ವಿವರಣೆಗಳು ಈ ಅವಧಿಯಲ್ಲಿ ಕಾಣುತ್ತವೆ) (ಎಆರ್‌ಐಇ 1922–23, ನಂ. 703, ಎಸ್.ಐ.ಐ. 16, ನಂ. 141) ಮೂವರು ಬ್ರಾಹ್ಮಣರಿಂದ ಮೂರು ವೃತ್ತಿ ಭೂಮಿಯನ್ನು ಖರೀದಿಸಲಾಗಿದೆ. (1412 ಮಲಪನಗುಡಿ ಎಸ್.ಐ.ಐ. 9, ಭಾಗ2, ನಂ. 436) ಮಹಾಜನರ ಭೂಮಿಯನ್ನು 111 ವೃತ್ತಿಯಾಗಿ ವಿಭಾಗಿಸಲಾಗಿತ್ತು. (ಇ.ಸಿ. 11, ಡಿಜಿ. 23, ಹೆಚ್ಡಿ33– 2ನೇ ಮೊದಲನೇ ದೇವರಾಯ–ಹರಿಹರ) ಹಂಪೆಯಲ್ಲಿನ ವಿಠಲ ದೇವಾಲಯ(1408 ರ ಮೊದಲು)ವು ಹರಿಹರನ ಕಾಲದ್ದಲಿತ್ತು. ಅದು ತುಂಗಭದ್ರ ತೀರದಲ್ಲಿರುವ ವಿಠಲೇಶ್ವರ ದೇವಾಲಯ (ಸೂರಳಿ ಅಗ್ರಹಾರ ಶಾಸನ) ಮತ್ತು ಅದರ ರಂಗಮಂಟಪವು 1409ರ ಸಂಗಮರ ಕಾಲದ್ದಾಗಿದೆ. ಈ ದೇವರಿಗೆ 1463 ರ ಒಳಗೆ ದಾನ ನೀಡಲಾಗಿದೆ. ಈ ದೇವರನ್ನು ವಿಠಲ ದೇವನೆಂಬ ಹೆಸರಿನಿಂದ ಕರೆಯಲಾಗಿದೆ. ಮುಂದೆ ವಿಸ್ತಾರ ಸಂಕಿರಣಗಳುಳ್ಳ ಈ ದೇವಾಲಯವನ್ನು ಕೃಷ್ಣದೇವರಾಯ 1513 ರ ಆರಂಭದಲ್ಲಿ ನಿರ್ಮಾಣ ಮಾಡಿದನು. ಈ ಅರಸನ ಮಂತ್ರಿ ವಿಠಪ್ಪನೆಂಬುವನು ತುಂಗಭದ್ರ ತೀರದಲ್ಲಿನ ವಿಠಲೇಶ್ವರನಿಗೆ ದಾನ ನೀಡಿದ್ದಾನೆ. ಅಲ್ಲಿ 1445ರ ಕಾಲಾವಧಿಯಲ್ಲಿ ಲಕ್ಷ್ಮೀನಾರಾಯಣ ದೇವಾಲಯವೊಂದು ಇದ್ದಿತ್ತು. ಆಗ ವಿಠಲ ನಾರಾಯಣ ದೇವಾಲಯ ಒಂದು ಮುಳಬಾಗಿಲಿನಲ್ಲಿತ್ತು.

ಅವನಿಯಲ್ಲಿ ತಿರುವಿರಾಮೇಶ್ವರಂ ಉಡೈಯ ನಾಯನಾರ್ ದೇವಾಲಯವಿತ್ತು. (ಎ.ಕೆ. 10 ಮುಳಬಾಗಿಲು, 101, ತಂಬಿಹಳ್ಳಿ, 1440) ಮೊದಲನೇ ದೇವರಾಯನಿಗೆ ಶಾಶ್ವತ ಪುಣ್ಯಲೋಕ ಪ್ರೀತ್ಯರ್ಥವಾಗಿ ಅವನ ಮಗ 3ನೇ ಹರಿಹರನು 1422 ರಲ್ಲಿ ನಂಜನಗೂಡಿನ ನಂಜುಂಡೇಶ್ವರ ದೇವರಿಗೆ (ಎ.ಕೆ. 3 (ಪ) ಗುಂಡ್ಲುಪೇಟೆ 78, ಸೋಮನಹಳ್ಳಿ) ಬ್ರಾಹ್ಮಣರಿಗೆ ಮತ್ತು ಕನಕಗಿರಿಯ ವಿಜಯನಾಥ ದೇವರಿಗೆ ದಾನ ನೀಡಿದನು. ಮಾನ್ವಿ ತಾಲೂಕಿನ ಕಡಲೂರಿಗೆ ಬೆಟ್ಟಿ ನೀಡಿದಾಗ ಕೃಷ್ಣದೇವರಾಯನು (1521 ರಲ್ಲಿ) ತಿರುವೆಂಗಲನಾಥ ದೇವರಿಗೆ ರತ್ನಧೇನು ಗೋಸಹಸ್ರ ಮತ್ತು ಕನಕಸ್ವವನ್ನು ಆಚರಿಸುವಾಗ ತನ್ನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲಾದೇವಿಯ ಜೊತೆ ಮಾನುವೆ ಸೀಮೆಯ ಚಕಲಪರವಿಗಳಿಗೆ ದಾನ ನೀಡಿದರು. ಕೃಷ್ಣದೇವರಾಯನು ರಾಯಚೂರು ಜಿಲ್ಲೆಯ ಮಾನ್ವಿ ಕೋಟೆ ಮತ್ತು ರಾಯಚೂರನ್ನು ಜಯಿಸಿದನು. ಅಲಂಪುರ, ಹಾನಗಲ್ ಮತ್ತು ಮಾಗಡಿ ಕೋಟೆಗಳನ್ನು ಈತನು ಜಯಿಸಿ ದಾನ ನೀಡಿದನು. (ದಡ್ಡಲ ಶಾಸನ, ಎ.ಆರ್.ಐ.ಇ. 1962–63, ನಂ. 3515) ಬನವಾಸಿಯ ಗೋಪಿನಾಥ ಮತ್ತು ಮಧುಕೇಶ್ವರ ದೇವಾಲಯಗಳ ಹತ್ತಿರ ತಿರುಮಲ, ಕುಕನೂರಿನಲ್ಲಿನ ತಿರುಮಲನಾಥ ಮೂರ್ತಿ ಮುಂತಾದವುಗಳಿಗೆ ಕಳಶ ನಿಲ್ಲಿಸಿ ಆ ದೇವಾಲಯಗಳನ್ನು ಪುನರುತ್ಥಾನ ಮಾಡಿದನು. ತಿರುಮಲನಾಥ ಪುರದಲ್ಲಿ ತಿರುಮಲನಾಥ ದೇವಾಲಯವನ್ನು (1392) ನಿರ್ಮಾಣ ಮಾಡಲಾಯಿತು. ಆಲೂರು ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲೂಕಿನಲ್ಲಿದೆ. ಅದು ಮೊದಲ ಈ ದೇವರ ದೇವಾಲಯವಾಗಿದೆ. ಹಂಪೆಯಲ್ಲಿನ ನರಸಿಂಹ ದೇವಾಲಯವು ಈ ಮತದ ಮತ್ತೊಂದು ದೇವಾಲಯವಾಗಿದೆ.

ಹಂಪೆಯ ರಾಮಚಂದ್ರ ದೇವಾಲಯದ (ಹಜಾರರಾಮ) ಗೋಡೆಯ ಮೇಲೆ ರಾಮಚಂದ್ರನಪರಿವಾರದವರ ಚಿತ್ರಗಳಿವೆ. ಈ ದೇವಾಲಯವು ಸು. 1387ರ ಹೊತ್ತಿಗೆ ನಿರ್ಮಾಣವಾಗಿದೆ. ಸಂಗಮರ ಕಾಲದಲ್ಲಿ ಅನೇಕ ದೇವಾಲಯಗಳಿಗೆ ವಿಶಾಲವಾದ ಮಂಟಪಗಳನ್ನು ಸೇರಿಸಲಾಗಿದೆ. ಕುಷ್ಟಗಿ ತಾಲೂಕಿನ ಕನಕಗಿರಿಯಲ್ಲಿ ಕನಕಗಿರಿನಾಥನಿಗೆ ದತ್ತಿ ನೀಡಲಾಗಿದೆ. (1534 ಅಚ್ಯುತದೇವರಾಯ) ಈ ಪ್ರದೇಶವು ಈ ಅವಧಿಯಲ್ಲಿ ವಿಜಯನಗರದ ಅಧೀನದಲ್ಲಿತ್ತು. ಅಲ್ಲಿ ವರ್ಣದ ಪೌರಾಣಿಕ ಗೊಂಬೆ ಚಿತ್ರಗಳಿವೆ. 1556 ರಲ್ಲಿ ಸದಾಶಿವರಾಯನು ಅಳಿಯ ರಾಮರಾಯನ ವಿನಂತಿಯ ಮೇರೆಗೆ 31 ಹಳ್ಳಿಗಳನ್ನು ರಾಮಾನುಜರ ದೇವಾಲಯಗಳನ್ನಾಗಿ ಮಾಡಿಸಿ ಮತ್ತು ಆ ಸಂಸ್ಥೆಗಳನ್ನು ಅದಕ್ಕೆ ಕೊಡಿಸಿ ಶ್ರೀ ಪೆರಂಬೂದುರನಲ್ಲಿ ದಾನ ಕೊಟ್ಟನು.

ಈ ದಿಸೆಯಲ್ಲಿ ಹಂಪೆಯಲ್ಲಿನ ವಿಠ್ಠಲನ ದೇವಾಲಯವು ಒಂದು ಬೃಹತ್ ಕಟ್ಟಡವಾಗಿದೆ. ಅದೊಂದು ಈ ಮತದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವೂ ಆಗಿತ್ತು. ಕೃಷ್ಣದೇವರಾಯನು ವಿಠ್ಠಲ ದೇವಾಲಯಕ್ಕೆ 1516 ರಲ್ಲಿ ನೂರು ಕಂಬದ ಮಂಟಪವನ್ನು ಮಾಡಿಸಿದನು. (ಎಸ್. 339, ಭಾಗ 2, ನಂ. 570) ದೇವಾಲಯದ ಗೋಪುರಗಳನ್ನು 1513 ರಲ್ಲಿ ಕೃಷ್ಣದೇವರಾಯನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು ಕಟ್ಟಿಸಿದರು. ವಿಠ್ಠಲ ದೇವರಿಗೆ ಕೃಷ್ಣದೇವರಾಯನು ತನ್ನ ತಂದೆ ನರಸಣನಾಯಕವೊಡೆಯ ಮತ್ತು ತಾಯಿ ನಾಗಾಜಿದೇವಿ ಅಮ್ಮನವರಿಗೆ ಪುಣ್ಯವಾಗಲೆಂದು 1513 ಮಾರ್ಚ್ 11 ರಲ್ಲಿ ದಾನ ನೀಡಿದನು. (ಎ.ಅರ್.ಐ.ಇ. 1889, ನಂ. 44, ಎ.ಐ.ಐ. 4, ನಂ. 273).

ಆಳ್ವಾರರು :

ಆಳ್ವಾರರು ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಸು.ಕ್ರಿ.ಶ. 3ನೇ ಶತಮಾನದಿಂದ ಕ್ರಿ.ಶ. 9ನೇ ಶತಮಾನದವರೆಗೆ ನೆಲೆಸಿದವರು. ತಮಿಳುನಾಡಿನಲ್ಲಿ ಇವರು ಶ್ರೀ ಮಹಾವಿಷ್ಣು/ಶ್ರೀಮನ್ನಾರಾಯಣನ ದೈವತ್ವದಲ್ಲಿ ತಲ್ಲೀನರಾದವರು. ದೈವಾಂಶಸಂಭೂತರು ಅಥವಾ ಅವತಾರ ಪುರುಷರೆನಿಸಿದವರು. ಇವರು ತಮಿಳು ವೇದ ಋಷಿಗಳೆಂದು ಕರೆಸಿ ಕೊಂಡವರು. ಶ್ರೀ ವೈಷ್ಣವ ಮತದಲ್ಲಿ ಜೀವಾತ್ಮ ಮತ್ತು ಪರಮಾತ್ಮರು ಒಂದುಗೂಡಿರುವರು. ಅದು ವಿಷ್ಣುತತ್ವವನ್ನು ಹೊಂದಿದ ಶಿಷ್ಠಾದ್ವೈತದಲ್ಲಿ ಕಾಣುತ್ತದೆ. ಇದರಲ್ಲಿ ಶ್ರೀ ಆಳ್ವಾರರನ್ನು ಆರಾಧಿಸುವ ಪರಂಪರೆ ಹುಟ್ಟಿ ಕೊಂಡಿತು. ಅವರು ಶಿಲ್ಪ-ದೇವಾಲಯಗಳ ಮೂಲಕ ಚಾಲನೆಗೆ ತಂದವರು 11ನೆಯ ಶತಮಾನದಲ್ಲಿ ವಿಶಿಷ್ಠಾದ್ವೈತದಲ್ಲಿ ಆಚಾರ್ಯರಾಗಿ ಬಂದವರು ರಾಮಾನುಜಾಚಾರ್ಯರು (1044–1137). ಇವರು ವಿಷ್ಣು–ಆತನ ಅವತಾರ, ಶ್ರೀ ವಿಷ್ಣುವಿನ ವಿಷಯ–ಭಕ್ತಿಪಂಥ–ವಿಶಿಷ್ಠಾದ್ವೈತ ಸಿದ್ಧಾಂತಗಳ ಮಾಹಿತಿಗಳನ್ನು ಒಳಗೊಂಡ ದಿವ್ಯಪ್ರಬಂಧ ಗೀತೆಗಳನ್ನು ರಚಿಸಿ ಪ್ರಸಿದ್ಧಿ ಹೊಂದಿದರು. ಇವರ ಆರಾಧನ ಕೇಂದ್ರಗಳು ಪ್ರಮುಖವಾಗಿ ಮೊದಲು ಶ್ರೀರಂಗಂ, ತಿರುಮಲ, ಅಹೋಬಲಂ, ಶ್ರೀ ಪೆರಂಬದೂರ್, ತಿರುಪತಿ, ಕಂಚಿ ಮುಂತಾದ ಕಡೆಗಳಲ್ಲಿ ಅಸ್ತಿತ್ವಕ್ಕೆ ಬಂದವು. ಮುಂದೆ ಹಂಪಿ, ಮೇಲುಕೋಟೆ, ಕೊಣ್ಣೂರು, ರಂಗಸಮುದ್ರ, ನಾಗೇನಹಳ್ಳಿ ಮುಂತಾದ ಕಡೆಗಳಲ್ಲಿ ವಿಸ್ತರಿಸಿದವು. (ಪ್ರೊ. ಲಕ್ಷ್ಮಣ ತೆಲಗಾವಿ; ವಿಜಯನಗರ ಅಧ್ಯಯನ, 2010, ಪು. 340–42) ಒಟ್ಟು 12 ಆಳ್ವಾರರು ಇದ್ದುಅವರು ವಿವಿಧ ಜಾತಿಗಳಿಗೆ ಸೇರಿದ್ದಾರೆ. 12 ಆಳ್ವಾರರು ಪೊಯ್ ಹೈ ಆಳ್ವಾರ್, ಪೂದಾತ್ತಾಳ್ವಾರ್, ಪೇಯಾಳ್ವಾರ್, ತಿರುವುಳಿಸೈ ಆಳ್ವಾರ್, ನಮ್ಮಾಳ್ವಾರ್, ಮಧುರ ಕವಿಯಾಳ್ವಾರ್, ಕುಲಶೇಖರಾಳ್ವಾರ್, ಪೆರಿಯಾಳ್ವಾರ್, ಮಧುರ ಆಳ್ವಾರ್, ತೊಂಡರಡಿಪೂಡಿಯಾಳ್ವಾರ್, ತಿರುಪ್ಪಾಣಾಳ್ವಾರ್ ಮತ್ತು ತಿರುಮಂಗೈಯಾಳ್ವಾರ್‌ರ ಹೆಸರುಗಳಿವೆ. ಇವರಲ್ಲಿ ಅಂಡಾಳ್ ಆಳ್ವಾರ್ ಮಾತ್ರ ಮಹಿಳೆ ಆಗಿದ್ದಾರೆ.

ಈ ಅವಧಿಯಲ್ಲಿ ಅನೇಕ ಕಡೆಗಳಲ್ಲಿ ಶ್ರೀ ನಮ್ಮಾಳ್ವಾರ್ ದೇವಸ್ಥಾನಗಳು ನಿರ್ಮಾಣಗೊಂಡವು. ಹಂಪೆಯ ವಿಠಲಾಪುರದ ವಿಠಲನ ದೇವಾಲಯದ ಬಳಿಯಲ್ಲಿ ಈ ಅವಧಿಯಲ್ಲಿ 13 ದೇವಾಲಯಗಳು ನಿರ್ಮಾಣವಾದವು (?). ಅದರಲ್ಲಿ ಮುದುರ್ ಆಳ್ವಾರ್‌ರು ಅಂದರೆ ಮೊದಲ ಮೂವರು ಆಳ್ವಾರರಾದ ಪೊಯ್ ಹೈ ಆಳ್ವಾರ್, ಪೊದತ್ತಾಳ್ವಾರ್ ಮತ್ತು ಪೇಯಳ್ವಾರರ್ ಅಲ್ಲದೆ ನಮ್ಮಾಳ್ವಾರ್, ತಿರುಮಳಿಶೈಯಾಳ್ವಾರ್ ಮತ್ತು ರಾಮಾನುಜರು (1543 ಮತ್ತು 1559) ಕಾಣುವರು. ಅಲ್ಲಿನ ತಿರುಮಂಗೈಯಾಳ್ವಾರ್‌ರ ದೇವಾಲಯವು 1556 ರಲ್ಲಿ ನಿರ್ಮಾಣವಾಯಿತು. ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಶುಕನಾಶಿ, ಅಂತರಾಳ ಮತ್ತು ರಂಗಮಂಟಪಗಳಿದ್ದವು. ಈ ಆಳ್ವಾರ ದೇವಾಲಯಗಳಿಗೆ ಹೊಂದಿಯೇ ರಾಮಾನುಜ ಕೂಟಗಳೂ ಇದ್ದವು. ಅವುಗಳು ಶ್ರೀ ವೈಷ್ಣವರ ವಸತಿ–ಭೋಜನಾಲಯಗಳಾಗಿವೆ. ಇವುಗಳನ್ನು ತಿರುಪತಿಯಲ್ಲಿ ನಮ್ಮಳ್ವಾರ್ ರಾಮಾನುಜ ಕೂಟಗಳೆಂದು ಕರೆದಿದ್ದಾರೆ. (ಪ್ರೊ. ಲಕ್ಷ್ಮಣ ತೆಲಗಾವಿ ಅದೇ, ಪು. 360) ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಿದೆ. ಇದರಿಂದ ಶ್ರೀವೈಷ್ಣವರ ನೆಲೆಗಳಲ್ಲಿ ಸಾಮಾನ್ಯವಾಗಿ ಆಳ್ವಾರರ ದೇವಾಲಯ/ಶಿಲ್ಪಗಳು ಇರಲೇಬೇಕೆಂದು ತರ್ಕಿಸ ಬಹುದು.

ಆಳ್ವಾರ ಆರಾಧನೆಗೆ ಮಹತ್ವವನ್ನು ಕೊಟ್ಟವರು ಕೃಷ್ಣದೇವರಾಯ, ಅಚ್ಯುತ ದೇವರಾಯ, ಸದಾಶಿವರಾಯ, ರಾಮರಾಯ ಮತ್ತು ಆನಂತರದ ಅರವೀಡು ವಂಶದವರು ಮತ್ತು ಅವರ ಸಾಮಂತರು. ಹೀಗಾಗಿ ಇವರ ಶಿಲ್ಪಗಳು ಈ ಅವಧಿಯಲ್ಲಿ ಹಂಪಿಯಲ್ಲಿ ಒಂದೇ ಅಲ್ಲ ಆನೆಗುಂದಿ, ತಿರುಪತಿ, ಮೇಲುಕೋಟೆ, ಹಿರೆಮಗಳೂರು ಮುಂತಾದ ಸ್ಥಳಗಳಲ್ಲಿವೆ.

ಈ ಅವಧಿಯಲ್ಲಿ ಶ್ರೀವೈಷ್ಣವ ಧರ್ಮದ ಬೆಳವಣಿಗೆಗೆ ವೇದಾಂತ ದೇಶಿಕರು, ತಾತಾಚಾರ್ಯ ಮನೆತನದವರು ಮುಂತಾದವರು ಕಾರಣರಾಗಿದ್ದಾರೆ. ದಕ್ಷಿಣ ಭಾರತದಲ್ಲಿ ಅತಿ ಎತ್ತರವಾದ ಹಂಪಿಯ ಉಗ್ರನರಸಿಂಹನ ವಿಗ್ರಹ 33 ಅಡಿ ಎತ್ತರವಿದೆ. (8.9 ಮೀಟರ್)

ರಾಮಾನುಜರು ಆಳ್ವರ ಕೃತಿಗಳನ್ನು ಅಭ್ಯಾಸ ಮಾಡಿದರು. ಅವರು ಶ್ರೀರಂಗದಲ್ಲಿ ನೆಲೆಸಿದರು. ವೈಷ್ಣವ ಮತ ಪ್ರಚಾರವು 12 ಆಳ್ವರರಿಂದ ನಡೆಯಿತು. ಶ್ರೀ ವೈಷ್ಣವ ಧರ್ಮ ಸ್ಥಾಪಕ ರಾಮಾನುಜರನ್ನು ಒಬ್ಬ ಆಳ್ವಾರರೆಂದು ಎಲ್ಲಾ ವೈಷ್ಣವ ದೇವಾಲಯಗಳಲ್ಲಿ ಆರಾಧಿಸ ತೊಡಗಿದರು. ರಾಮಾನುಜರು ವಿಶಿಷ್ಠಾದ್ವೈತ ತತ್ವವನ್ನು ಪ್ರತಿಪಾದಿಸಿದರು. ಶಂಕರರು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು.

ವಿಠಲ ದೇವಾಲಯಗಳು :

ಹಂಪಿಯಲ್ಲಿ 1408 ರ ಒಳಗೆ ವಿಠಲ ದೇವಾಲಯವಿತ್ತು. ಅದು ರಂಗ ಮಂಟಪವನ್ನು ಹೊಂದಿತ್ತು. ಮುಂದೆ ಅದಕ್ಕೆ ವಿಸ್ತಾರ ಮಂಟಪವನ್ನು ಮತ್ತು ಸಂಕೀರ್ಣವನ್ನು 1513ರಲ್ಲಿ ನಿರ್ಮಾಣ ಮಾಡಲಾಯಿತು. ಅಚ್ಯುತರಾಯನು ಆಳುವಾಗ ಆತನ ಅಧಿಕಾರಿ ಗಂಧದ ತಿಪ್ಪಸೆಟ್ಟಿಯು ತಿರುಕ್ಕಚ್ಚಿನೆಂಬವನುವಿಠ್ಠಲ ದೇವಾಲಯ ಸಂಕೀರ್ಣದಲ್ಲಿ ಹದಿಮೂರು ಆಳ್ವರ ಮೂರ್ತಿಗಳನ್ನು ಅರಸ ಅಚ್ಚುತರಾಯನಿಗೆ ಪುಣ್ಯವಾಗಲೆಂದು ಸ್ಥಾಪಿಸಿದನು. (ಎಸ್.ಐ.ಐ. 9, ಭಾಗ.2, ನಂ. 566) ಹಂಪೆ ಪರಿಸರದಲ್ಲಿ ಸಿಕ್ಕ ಎಲ್ಲಾ ಈ ಆಳ್ವರರ ಶಿಲ್ಪಗಳು ಈಗ ಕಮಲಾಪುರದ ಎ.ಎಸ್.ಐ. ವಸ್ತು ಸಂಗ್ರಹಾಲಯದಲ್ಲಿವೆ.

ಹಂಪಿಯ ವಿಠ್ಠಲ ದೇವಾಲಯಕ್ಕೆ ಒಂದು ಬಂಡಾರವೇ ಇತ್ತು. (ಎಸ್.ಐ.ಐ. 9, ಭಾಗ.2, ನಂ. 570) ಅದರ ಹೆಸರು ಲಕ್ಷ್ಮೀ ನಾರಯಣ ಪೆರುಮಾಳ ಬಂಡಾರ. ಹೀಗಾಗಿ ಈ ವಿಠ್ಠಲ ದೇವಾಲಯದಲ್ಲಿ ತಿರುಮಲಗ್ಯೆ ಆಳ್ವರ ದೇವಾಲಯವನ್ನು 1556 ರಲ್ಲಿ ಸದಾಶಿವರಾಯನ ಮಹಾಮಂಡಳೇಶ್ವರ ರಾಮರಾಜನ ಕೊನೆಯ ತಮ್ಮ ದೇವಸಹ ಅರಸನ ಮಗ ಅವಬಲರಾಜು ಕಟ್ಟಿಸಿದನು. ಇದರಿಂದ ಈ ದೇವಾಲಯದಲ್ಲಿ ಆಳ್ವರ ಮೂರ್ತಿಗಳ ಪೂಜೆಗೆ ದೇವಾಲಯ ನಿರ್ಮಿಸಿದ್ದು ತಿಳಿಯುತ್ತದೆ. ವಿಜಯನಗರ ಸಾಮ್ರಾಜ್ಯದ ಹಲವೆಡೆಗಳಲ್ಲಿ ಅಹೋಬಲ ದೇವಾಲಯಗಳಿವೆ. ಅದರಲ್ಲಿ ಮುಂಡರಗಿ ತಾಲೂಕಿನ ಬರದೂರಿನಲ್ಲಿದೆ.

ತಿರುವೆಂಗಳನಾಥ ದೇವಾಲಯಗಳು : ತಿರುಪತಿಯ ತಿರುವೆಂಗಳನಾಥ ದೇವಾಲಯವು ಹಂಪಿಯ ವಿವಿಧ ಕಡೆಗಳಲ್ಲಿದ್ದವು. ಒಂದು ಹಂಪೆಯ ತಿರುಮಲ ದೇವಿಯರ ಪಟ್ಟಣದಲ್ಲಿತ್ತು. (ನಂ. 421) ಇನ್ನೊಂದು ತುಂಗಭದ್ರ ದಡದಲ್ಲಿತ್ತು.ಅದನ್ನು 1534 ರಲ್ಲಿ ಅಚ್ಯುತ ದೇವರಾಯನು ಆಳುವಾಗ ಸುಂಕರಾಜವೊಡೆಯರ ಮಗ ಮಹಾಮಂಡಳೇಶ್ವರ ಹಿರಿಯ ತಿಮ್ಮಲರಾಜ ಒಡೆಯನು ಕಟ್ಟಿಸಿದನು. (ವಿ.ಪ್ರ. 1983–84, ನಂ. 42) ಇನ್ನೊಂದು 1545 ರಲ್ಲಿ ತಿರಾವೆಂಗಳನಾಥ ದೇವಾಲಯವನ್ನು ಮತ್ತು ಛತ್ರದ ಹತ್ತಿರದ ಮುದುವೀರಣನ ದೇವಾಲಯಗಳನ್ನು ಸದಾಶಿವರಾಯನ ಆಳ್ವಿಕೆಯಲ್ಲಿ ರಾಜನಿಗೆ ಪುಣ್ಯವಾಗಲೆಂದು ದಳವಾಯಿ ಜಂಗಮಯ್ಯ ಕಟ್ಟಿಸಿದನು. (ನಂ. 234–235). ಏಕಕಾಲದಲ್ಲಿ ಶ್ರೀ ವೈಷ್ಣವ ಮತ್ತು ವೀರಶೈವ ದೇವಾಲಯಗಳನ್ನು ಈತನ ಅವಧಿಯಲ್ಲಿ ನಿರ್ಮಿಸಿದ್ದು ವಿಶೇಷವೆನಿಸಿದೆ.

ಶಿಲಾರಥಗಳು : ಹಂಪೆಯ ಕೆಲವು ಬೃಹತ್ ದೇವಾಲಯಗಳಿಗೆ ಪ್ರತ್ಯೇಕ ರಥಗಳಿದ್ದವು. ಅವುಗಳು ವಿಠ್ಠಲ, ತಿರುವೆಂಗಳನಾಥ, ಅಚ್ಯುತದೇವರ ದೇವಾಲಯಗಳ ರಥಗಳು ಮುಖ್ಯವಾಗಿವೆ. ಹಂಪೆಯ ವಿಠಲ ಮಂದಿರದ ಮುಂದೆ ಒಂದು ಬೃಹತ್ ಶಿಲಾರಥವಿದ್ದರೆ, ಅರವೀಡು ಮನೆತನದವರು ನಿರ್ಮಿಸಿದ ಶಿಲಾ ರಥ ಒಂದು ಆಂಧ್ರದಲ್ಲಿದೆ. ಈ ಎರಡು ಶಿಲಾರಥಗಳು ಅಪರೂಪದ್ದಾಗಿವೆ.

ಆರಾಧನ ದೈವಗಳು : ರಾಮಾನುಜರಿಂದ ಆರಂಭಗೊಂಡ ಶ್ರೀ ವೈಷ್ಣವ ಧರ್ಮವು ವಿಜಯನಗರ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ವಿಸ್ತಾರಗೊಂಡಿದೆ. ಶ್ರೀ ವೈಷ್ಣವ ಪಂಥದಲ್ಲಿ 'ತಿರುನಾಮ' ಎದ್ದು ಕಾಣುತ್ತದೆ. ಈ ಮತದ ಚಿನ್ಹೆಗಳಲ್ಲಿ ಶಂಖ

ಮತ್ತು ಚಕ್ರಗಳ ನಡುವೆ ತಿರುನಾಮಗಳ ರಚನೆ ಅನೇಕ ಕಡೆಗಳಲ್ಲಿವೆ. ಈ ಮತದಲ್ಲಿ ರಾಮ, ಕೋದಂಡರಾಮ, ಲಕ್ಷ್ಮಣ, ಸೀತೆ, ಆಂಜನೇಯರ ಆರಾಧನೆಯೂ ಹೆಚ್ಚಾಗಿದೆ. ಗಂಗಾವತಿ ತಾಲೂಕಿನ ಕನಕಗಿರಿ, ಗುಲಬರ್ಗಾ ಜಿಲ್ಲೆಯ ಸಗರ, ಯಾದಗಿರಿ ಇನ್ನಿತರ ಸ್ಥಳಗಳು ಈ ಮತದ ಪ್ರಸಿದ್ಧ ಕೇಂದ್ರಗಳಾಗಿದ್ದವು. ಅವುಗಳು ಬಹಮನಿ–ಆದಿಲ್‌ಷಾಹಿಗಳ ಅಧೀನದಲ್ಲಿದ್ದವು. ಶ್ರೀ ವೈಷ್ಣವ ಮತದ ಬೆಳವಣಿಗೆಗೆ ವಿಜಯನಗರದ ಅಧಿಕಾರಿಗಳಾದ ನಾಯಕರ ಕೊಡುಗೆ ಅಪಾರವಾಗಿದೆ.ಈ ಅವಧಿಯ ಕೋದಂಡರಾಮನ ಶಿಲ್ಪ ಯಾದಗಿರಿ ತಾಲೂಕಿನ ಗುರುಮಟಕಲ್ಲಿನಲ್ಲಿದೆ. ಅದೇ ರೀತಿಯಲ್ಲಿ ನೆರೆಯ ಆಂಧ್ರ ಮತ್ತು ದಕ್ಷಿಣ ಭಾರತದ ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಈ ಮತದ ದೇವಾಲಯಗಳಿವೆ. ಅನೇಕ ನಾಯಕ ಮನೆತನದವರು ಶ್ರೀ ವೈಷ್ಣವ ಧರ್ಮವನ್ನು ತಾವು ಪಾಲಿಸುವುದಲ್ಲದೆ ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಪ್ರಸಿದ್ಧಿಗೊಳಿಸಿದರು. ವಿಜಯನಗರದ ಕೊನೆಯ ಅರಸುಮನೆತನದವರಾದ ಅರವೀಡು ವಂಶದವರು ಶ್ರೀ ವೈಷ್ಣವಧರ್ಮದ ಬೆಳವಣಿಗೆಗೆ ಅಪಾರ ಪ್ರೋತ್ಸಾಹ ಮತ್ತು ಕೊಡುಗೆಯನ್ನು ನೀಡಿದರು.

ಕೃಷ್ಣದೇವರಾಯ, ಅಚ್ಯುತದೇವ, ಸದಾಶಿವರಾಯ ಮತ್ತು ರಾಮರಾಯರು ಶ್ರೀ ವೈಷ್ಣವಧರ್ಮದ ಬೆಳವಣಿಗೆಗೆ ಅಪಾರ ಪ್ರೋತ್ಸಾಹ ನೀಡಿದರು. ಕೃಷ್ಣದೇವರಾಯನು ವೈಷ್ಣವ ಮತ್ತು ಶೈವ ಧರ್ಮದ ಮಹತ್ವದ ಕೇಂದ್ರಗಳಿಗೆ ಬೆಟ್ಟಿ ನೀಡಿದನು. ಅದರಲ್ಲಿ ತಿರುಪತಿ, ಶ್ರೀಶೈಲಂ, ಕಾಳಹಸ್ತಿ, ಅಹೋಬಲಂ, ಶ್ರೀಕಾಕುಳಂ, ಅಮರಾವತಿ, ಸಿಂಹಾಚಲಂ, ಕಾಂಚಿಪುರಂ, ಶ್ರೀರಂಗಂ, ಕುಂಭಕೋಣಂ, ಸೇತು ರಾಮೇಶ್ವರಂ, ಧನುಶ್ಕೋಟಿ, ತಿರುಕೈಲೂರು ಮುಂತಾದವುಗಳು ಪ್ರಮುಖ ಸ್ಥಳಗಳಾಗಿವೆ.

ಮತ್ತೊಂದು ಮಹತ್ವದ ಸಂಗತಿಯೆಂದರೆ ಕೃಷ್ಣದೇವರಾಯನು ವೈರಿಗಳ ವಿರುದ್ಧ ಯುದ್ಧಕ್ಕೆ ಹೋಗುವ ಮೊದಲು ಮತ್ತು ಜಯ ಗಳಿಸಿದ ಬಳಿಕ ತಿರುಪತಿಗೆ ಹೋಗಿ ಶ್ರೀ ವೆಂಕಟೇಶ್ವರನ ಆಶೀರ್ವಾದ ಪಡೆಯುತ್ತಿದ್ದನು. ಜಯದ ಸಂತೋಷದ ಸಂದರ್ಭದಲ್ಲಿ ಹೇರಳ ಧನಕನಕಗಳನ್ನು ಶ್ರೀ ವೆಂಕಟೇಶ್ವರನಿಗೆ ದಾನ ನೀಡಿ ಮರಳಿ ಬರುತ್ತಿದ್ದರು.ಶ್ರೀ ವೆಂಕಟೇಶ್ವರನನ್ನು ಶ್ರೀನಿವಾಸ, ತಿರುವೆಂಗಳನಾಥ ಮುಂತಾಗಿ ಕರೆಯುತ್ತಿದ್ದರು. ಡಾ. ವಿರೂಪಾಕ್ಷ ಪೂಜಾರಹಳ್ಳಿ ಅವರು ತಿರುಪತಿಯ ಶ್ರೀ ವೆಂಕಟೇಶ್ವರನಿಗೆ ಶ್ರೀಕೃಷ್ಣದೇವರಾಯನು ಮಾಡಿದ ಧಾರ್ಮಿಕ ಸೇವೆ ಹಾಗೂ ತೀರ್ಥಯಾತ್ರೆಗಳ ವಿವರಗಳನ್ನು ನೀಡಿದ್ದಾರೆ. (ವಿಜಯನಗರ ಅಧ್ಯಯನ; 2013, ಪು. 20–29) ಅವರು ತಿರುಪತಿ ವೆಂಕಟೇಶ್ವರನಿಗೆ ಹೇರಳ ನೀಡಿದ ದತ್ತಿ ಕಾಣಿಕೆಗಳ ವಿವರಗಳು ವಿಶೇಷವೆನಿಸಿವೆ.

ತಿರುಪತಿ ಬೆಟ್ಟಿ : ಕೃಷ್ಣದೇವರಾಯನು ಆತನ ಚೈತ್ರಯಾತ್ರೆ ಮತ್ತು ತೀರ್ಥಯಾತ್ರೆಯಲ್ಲಿ ತಿರುಪತಿಗೆ ಬೆಟ್ಟಿ ನೀಡಿದನು. ತಿರುಪತಿ ವೆಂಕಟೇಶ್ವರ ದೇವಾಲಯದ ಗೋಪುರ ಮತ್ತು ಅದರಶಿಖರ(ವಿಮಾನ)ವನ್ನು ಜೀರ್ಣೋದ್ಧಾರ ಗೊಳಿಸಿದನು. ಪಟ್ಟಾಭಿಷೇಕವಾದ ನಾಲ್ಕು ವರ್ಷಗಳಲ್ಲಿ ಈತನು ತಿರುಪತಿಯ ಬೆಟ್ಟ ಹತ್ತಿ, ವೆಂಕಟೇಶ್ವರ ದೇವರ ಸೇವೆ ಮಾಡಿದನು. ಆಗ ತನ್ನ ರಾಣಿಯರಾದ ತಿರುಮಲಾಂಬೆ ಮತ್ತು ಚೆನ್ನಾದೇವಿಯರ ಜೊತೆ ತಿರುಪತಿ ವೆಂಕಟೇಶ್ವರನ ದರ್ಶನ ಮಾಡಿದನು. ಈತನು ತನ್ನ ಎರಡನೇ ಯಾತ್ರೆಯನ್ನು ತಿರುಪತಿಗೆ ದಿನಾಂಕ 2.5.1513ರಲ್ಲಿ ಮಾಡಿದನು. ಉದಯಗಿರಿ ಯುದ್ಧದ ಬಳಿಕ ತನ್ನ ಮೂರನೇ ಯಾತ್ರೆಯನ್ನು ದಿನಾಂಕ 13.6.1513 ರಲ್ಲಿ ತಂದೆ ನರಸಪ್ಪ ನಾಯಕವೊಡೆಯ ಮತ್ತು ತಾಯಿ ನಾಗಿಣಿ ಅಮ್ಮನವರಿಗೆ ಧರ್ಮವಾಗಲೆಂದು ಬೆಟ್ಟಿ ನೀಡಿ ದಾನ ನೀಡಿದನು. ನಾಲ್ಕನೇ ಯಾತ್ರೆಯನ್ನು ಉದಯಗಿರಿ ಪ್ರತಾಪರುದ್ರ ಗಜಪತಿಯನ್ನು ಸೋಲಿಸಿ ಮರಳುವಾಗ ದಿನಾಂಕ 6.7.1514 ರಲ್ಲಿ ತನ್ನ ರಾಣಿಯರ ಸಮೇತ ಈ ಸ್ಥಳಕ್ಕೆ ಬೆಟ್ಟಿ ನೀಡಿ ಈ ದೇವರಿಗೆ ಕನಕಾಭಿಷೇಕ ಮಾಡಿಸಿದ. ಉದಯಗಿರಿಯಿಂದ ತಂದ ಬಾಲಕೃಷ್ಣನ ವಿಗ್ರಹವನ್ನು ತಾನು ಹಂಪೆಯಲ್ಲಿ ಕಟ್ಟಿಸಿದ ಕೃಷ್ಣ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ. ಐದನೇ ಯಾತ್ರೆಯನ್ನು ಉದಯಗಿರಿದುರ್ಗವನ್ನು ಜಯಿಸಿ ತಿರುಮಲಕಾಂತರಾಯನನ್ನು ಸೆರೆಹಿಡಿದು ದಾರಿಯಲ್ಲಿ ಅನೇಕ ದುರ್ಗಗಳನ್ನು ಗೆದ್ದು ಅವರಿಗೆ ಕ್ಷಮಾದಾನ ಮಾಡಿ ತಿರುವೆಂಗಳನಾಥ ಸ್ವಾಮಿಗೆ ದಾನ ನೀಡಿದನು. ಆದರೆ ಆತನು ಕೆಲವೊಮ್ಮೆ ತಿರುಪತಿಗೆ ಹೋಗದೆ ದಾನ ನೀಡಿದ್ದಾನೆ. ಕಳಿಂಗ ದಿಗ್ವಿಜಯದ ಬಳಿಕ ಈತನು ಈ ಸ್ಥಳಕ್ಕೆ ಬೆಟ್ಟಿ ನೀಡಿ (2–6–1517) ದಾನ ನೀಡಿದನು.

ಈತನ ಅವಧಿಯಿಂದ ಸಾಮ್ರಾಜ್ಯದೆಲ್ಲೆಡೆಗಳಲ್ಲಿ ತಿರುವೆಂಗಳನಾಥ ಮತ್ತು ಬಾಲಕೃಷ್ಣರ ಮೂರ್ತಿಗಳನ್ನು ಹೆಚ್ಚಾಗಿ ಪ್ರತಿಷ್ಠಾಪಿಸುವ ಪರಂಪರೆ ಆರಂಭವಾಯಿತು. ಹತೋಟಿಯ (ಕೊಪ್ಪಳ ಜಿಲ್ಲೆ) ಬಾಲಕೃಷ್ಣ ಮೂರ್ತಿಯು ಕೃಷ್ಣರಾಯನ 1515 ರ ಕಾಲದ್ದು. ಕೃಷ್ಣರಾಯ ತನ್ನ ತಂದೆ-ತಾಯಿಯರಿಗೆ ಪುಣ್ಯವಾಗಲೆಂದೇ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿದನು. ಈ ಶಿಲ್ಪದಲ್ಲಿ ಬೆಣ್ಣೆ ಹಿಡಿದು ಅಂಬೆಗಾಲೂರಿ ಓಡಾಡುವ ಭಂಗಿಯಲ್ಲಿ ಬಾಲಕೃಷ್ಣನಿರುವನು.ಈತನ ಮೂರ್ತಿಗಳು ಅನೇಕ ಕಡೆಗಳಲ್ಲಿವೆ. ಹೂವಿನ ಹಡಗಲಿಯಲ್ಲಿರುವ ಈತನ ಮೂರ್ತಿ ಬಹು ಸುಂದರವಾಗಿದೆ. ಆದರೆ ಹಂಪಿ ಭಾಗದಲ್ಲಿ ಈ ಮೂರ್ತಿಗಳು ಕಡಿಮೆ ಪ್ರಮಾಣದಲ್ಲಿವೆ.

ಈತನ ರಾಣಿ ತಿರುಮಲಾಂಬೆಗೆ ಗಂಡುಮಗ ಹುಟ್ಟಿದನು. ಆ ಕಾರಣಕ್ಕೆ ಈ ದಂಪತಿಗಳು ದಿನಾಂಕ 10.10.1518 ರಲ್ಲಿ ತಿರುಪತಿಗೆ ಹೋಗಿ ದೇವರಿಗೆ ದಾನ ನೀಡಿದರು. ದೈವೀಕೃಪೆಯಲ್ಲಿ ಹುಟ್ಟಿದ ಈ ಮಗನಿಗೆ ತಿರುಮಲ ಎಂಬ ಹೆಸರನ್ನಿಟ್ಟನು.

ಏಳನೆಯ ಯಾತ್ರೆಯನ್ನು ದಿನಾಂಕ 17.2.1521 ರಲ್ಲಿ ತನ್ನ ರಾಣಿ ತಿರುಮಲಾಂಬೆಯ ಸಂಗಡ ಹೋಗಿ ಅಲ್ಲಿ ದೇವರಿಗೆ ದಾನ ಕೊಟ್ಟನು.ಕೃಷ್ಣದೇವರಾಯನ ಮಗ ತಿರುಮಲ ಜನನ, ಪಟ್ಟವಾದ ದಿನ ಮತ್ತು ಮರಣದ ವಿಷಯಗಳನ್ನು ಅನೇಕ ಕೃತಿ ಲೇಖನಗಳಲ್ಲಿ ಪೂರ್ಣವಾಗಿ ನೀಡಿಲ್ಲ. ಆದರೆ ಡಾ. ಕೆ.ಜಿ. ಗೋಪಾಲಕೃಷ್ಣರಾವ್ ಅವರು ತಮ್ಮ ಲೇಖನ 'ಚಕ್ರವರ್ತಿ ತಿರುಮಲನ ಜನನ ಮತ್ತು ಮರಣ- ಒಂದಿಷ್ಟು ಹೊಸ ವಿಚಾರಗಳ ಮಾಹಿತಿಗಳು ವಿಶೇಷವೆನಿಸಿದೆ. (ವಿಜಯನಗರ ಅಧ್ಯಯನಮಾಲೆ 2006, ಪು. 177-182) ಲೇಖಕರು ಈ ಕುರಿತು ಬಳಸಿದ ಶಾಸನ ಗುಂಡ್ಲುಪೇಟೆಯದು. ಅದರಲ್ಲಿ ತಿರುಮಲನ ಜನನದ ಕಾಲ 19-7-1518 ಎಂದಿದೆ. (ಇಲ್ಲಿ ಕೃಷ್ಣರಾಯನಿಗೆ ಪುತ್ರನು ಜನಿಸಿದಾಗ ಶ್ರೀರಂಗಪಟ್ಟಣವನ್ನು ಆಳುತ್ತಿದ್ದ ಗೋವಿಂದರಾಜನು ಅಲ್ಲಿ ದಾನ ನೀಡಿದ್ದಾನೆ. ಕೃಷ್ಣದೇವರಾಯನ ಪತ್ನಿ ತಿರುಮಲದೇವಿಯ ತಂದೆ ವೀರಪ್ಪೊಡೆಯ ದೊಡ್ಡ ನಾಡಿನ ಶಾಸನದಲ್ಲಿ ಕೃಷ್ಣರಾಯನು (ಮಗ ತಿರುಮಲ ಎನ್ನದೆ) 1524 ರಲ್ಲಿ ಮರಣವನ್ನಪ್ಪಿದ ನೆನ್ನಲಾಗಿದೆ. ತಿರುಮಲನ ಪಟ್ಟವಾದ ಸಂಗತಿ ಯಳಂದೂರು ಶಾಸನದಲ್ಲಿದೆ. (ಇಸಿ 4, 64) ಆದರೆ ಪಿರಿಯಾಪಟ್ಟಣದ 11-4-1524 ಶಾಸನದಲ್ಲಿ ತಿರುಮಲನಿಗೆ ಪಟ್ಟವಾದ ವಿಚಾರವಿದೆ. (ಇಸಿ4, 138) ತಿರುಮಲನಿಗೆ ಪಟ್ಟವಾಗಿ ಎಂಟು ತಿಂಗಳಲ್ಲಿಯೇ ಮರಣ ಹೊಂದಿದನೆಂದು ಪೋರ್ಚುಗೀಸ್ ಕುದುರೆ ವ್ಯಾಪಾರಿ ನ್ಯೂನಿಜ್ ಹೇಳಿದ್ದಾನೆ. ಮಾಗಡಿ ಶಾಸನದಿಂದ ಆತನು ಮರಣ ಹೊಂದಿದ್ದು 1524 ನವಂಬರ್/ಡಿಸೆಂಬರ್ ನಂತರವೆನ್ನುವರು. ವಿಶೇಷವೆಂದರೆ ತಿರುಮಲನು ತನ್ನ ಪಟ್ಟಾಭಿಷೇಕದ ಎಂಟು ತಿಂಗಳ ಆಯಾಸವನ್ನು ತಾಳಲಾರದೆ ಕೊನೆಯ ಉಸಿರನ್ನು ಎಳೆದನೆಂದಿರುವುದು. (ವಿಜಯನಗರ, ವಿ ಪಿಲಿಯೋಜಾ, 1977, ಪು. 206) ಇದಲ್ಲದೆ ತಿರುಮಲನು ತಾಯಿಯ ಗರ್ಭದಲ್ಲಿದ್ದಾಗ ಒಂಬತ್ತು ತಿಂಗಳು ಮೊದಲೇ ಈತ ಹುಟ್ಟಿದನೇ?. ಇದರಿಂದ ಆತ ಅನಾರೋಗ್ಯವಂತನಿದ್ದುದರಿಂದ ಆತನು ಬೇಗನೆ ಮರಣ ಹೊಂದಿರ ಬಹುದು.

ಆದರೆ ತಿರುಮಲನು ತನ್ನ ಆರನೇ ವಯಸ್ಸಿನಲ್ಲಿದ್ದಾಗ ವಿಷಪ್ರಾಷನದಿಂದ ಸಾವನ್ನಪ್ಪಿದನೆನ್ನಲಾಗಿದೆ.ಮಗನು ಈ ರೀತಿಯಲ್ಲಿ ಸಾವನ್ನಪ್ಪಿದಕ್ಕಾಗಿ ಕೃಷ್ಣದೇವರಾಯನು ಅತೀವ ದುಃಖಿತನಾದನು. 30 ವರ್ಷ ಮಂತ್ರಿ ಆಗಿದ್ದ ತನ್ನ ನೆಚ್ಚಿನ ಸಾಳುವ ತಿಮ್ಮಪ್ಪ ಮತ್ತು ಅವನ ಮಗನ ಬಗ್ಗೆ ಸಂಶಯಪಟ್ಟು ಅವರಿಗೆ ಶಿಕ್ಷೆ ನೀಡಿ ಆನೆಗುಂದಿಯ ಸೆರೆಮನೆಯಲ್ಲಿ ಬಂಧಿಸಿಟ್ಟನೆನ್ನುವರು.

ಕೃಷ್ಣದೇವರಾಯನಿಗೆ ಕುಹ್ಯಯೋಗ ಬಂದಾಗ ವ್ಯಾಸರಾಯರು ಆತನ ಆಪತ್ತನ್ನು ನಿವಾರಿಸಿದರು. ಈ ಕಾರಣನಿಮಿತ್ತ ವ್ಯಾಸರಾಯರು ಕೃಷ್ಣದೇವರಾಯನ ಸಿಂಹಾಸನದ ಮೇಲೆ ಮೂರುಮುಕ್ಕಾಲು ಗಂಟೆ ಕುಳಿತು ಆತನಿಗೆ ಬಂದ ಆಪತ್ತನ್ನು ಪರಿಹರಿಸಿದರು. ವ್ಯಾಸರಾಯರು ಮುಳುಬಾಗಿಲು ಶ್ರೀಪಾದರಾಜರ ಶಿಷ್ಯರು. ಇವರು ವಿಜಯನಗರದ ಆರು ಜನ ಅರಸರಿಗೆ ರಾಜಗುರುಗಳಾಗಿ/ಆಪ್ತರಾಗಿ/ಸಲಹೆಗಾರರಾಗಿ ಮಾರ್ಗದರ್ಶಕರಾಗಿ ಸೇವೆಗೈದರು.

ಮಗನ ಸಾವಿನ ಬಳಿಕ ಕೃಷ್ಣದೇವರಾಯನು ನೆಲ ಹಿಡಿದನು. ಆರೋಗ್ಯ ಹದಗೆಟ್ಟಿತು. ಆಗ ಹೆಸರಿಗೆ ರಾಜನಾಗಿ ರಾಜ್ಯದ ಜವಾಬ್ದಾರಿಯನ್ನು ತನ್ನ ತಮ್ಮ ಅಚ್ಯುತನಿಗೆ ಬಿಟ್ಟು ಕೊಟ್ಟನು. ಮುಂದೆ 1530 ರಲ್ಲಿ ಈತನು ಮರಣ ಹೊಂದಿದನು. ಆ ಬಳಿಕ ಅಚ್ಯುತನು ಅರಸನಾದನು.

ಕೃಷ್ಣದೇವರಾಯನ ಪಿರಿ ಅರಸಿ ತಿರುಮಲದೇವಿಯ ತಂದೆ ಹೆಸರಿನ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಈಕೆಯು ಶ್ರೀರಂಗ ಪಟ್ಟಣದ ಕುಮಾರ ವೀರಯ್ಯನವರ ಮಗಳೆಂದು ಅನೇಕರ ಅಭಿಪ್ರಾಯಪಟ್ಟಿದ್ದಾರೆ. ಕೃಷ್ಣದೇವರಾಯ ಉಮ್ಮತ್ತೂರನ್ನು ಜಯಿಸಿದ ಬಳಿಕ ಈ ಪ್ರಾಂತವನ್ನು ವೀರಯ್ಯ ಮತ್ತು ಕೆಂಪೇಗೌಡರಿಗೆ ಹಂಚಿದ. ಹೀಗಾಗಿ ವೀರಯ್ಯನೇ ತಿರುಮಲದೇವಿಯ ತಂದೆ ಎನ್ನುವರು. ಈಕೆಯ ಲಗ್ನವು 1510 ಅಥವಾ 1512 ರಲ್ಲಿ ಜರುಗಿರ ಬೇಕೆನ್ನುವರು. ಕೆಲವರು ಈಕೆಯು ಪ್ರತಾಪರುದ್ರನ ಮಗಳೆಂದು ಹೇಳಿದ್ದಾರೆ. ಕೆಲವರು ಈ ಲಗ್ನವು 1492-94 ರಲ್ಲಿ ನಡೆದಿರ ಬೇಕೆನ್ನುವರು. ಈ ಭಿನ್ನ ಅಭಿಪ್ರಾಯಗಳನ್ನು ಸರಿಯಾಗಿ ಪರಿಶೀಲಿಸ ಬೇಕಾಗಿದೆ.

ಕೃಷ್ಣದೇವರಾಯ ತನ್ನ ರಾಣಿ ತಿರುಮಲದೇವಿಗೆ ಹಂಪಿಯ ಹತ್ತಿರ ತುಂಗಭದ್ರಾ ತೀರದಲ್ಲಿ ಚಿತ್ರವಾಟಿಕೆ ಎಂಬ ಉದ್ಯಾನವನವನ್ನು ಕಟ್ಟಿಸಿದನು. ಈಕೆಯ ಪುತ್ರ ತಿರುಮಲನು ತನ್ನ ಆರನೇ ವಯಸ್ಸಿನಲ್ಲಿ ವಿಷಪ್ರಾಶನದಿಂದ ಮಡಿದನು. ಆಕೆಯ ಮಗಳು ತಿರುಮಲಾಂಬೆ ಅಳಿಯ ರಾಮರಾಯ. 1530 ರಲ್ಲಿ ಕೃಷ್ಣದೇವರಾಯನು ಮೃತನಾದಾಗಅರಸನ ಪತ್ನಿ ಸಹಗಮನಕ್ಕೆ ಪ್ರಯತ್ನಿಸದೇ 1542 ರವರೆಗೆ ಜೀವಂತವಾಗಿದ್ದಳು. (ಶ್ರೀನಿವಾಸ 2004, 'ತಿರುಮಲಾದೇವಿ', ವಿಜಯನಗರ ಅಧ್ಯಯನ, ಪು. 202-205) ಕೃಷ್ಣದೇವರಾಯನ ಈ ಎಲ್ಲಾ ಸಾಧನೆಗಳು ತನ್ನ ಆರಾಧ್ಯದೈವ ಮತ್ತು ಗುರುಗಳ ಅನುಗ್ರಹ ಮತ್ತು ಆಶೀರ್ವಾದವೇ ಆಗಿದೆ. ಆದರೆ ಆತನ ಮಗನ ಅಕಾಲಿಕ ಸಾವನ್ನು ತನ್ನ ಆರಾಧ್ಯ ದೇವರ ಕೃಪೆಯಿಂದ ರಕ್ಷಣೆ ಆಗದಿರುವುದು ನೋವಿನ ಸಂಗತಿಯಾಗಿದೆ.

ಆಂಜನೇಯ :

ಆಂಜನೇಯನನ್ನು ಹನುಮಂತನೆಂದು ಕರೆಯುವರು ವಿಜಯನಗರ ಆಳ್ವಿಕೆಯ ಕಾಲದಲ್ಲಿ ವೈಷ್ಣವ ಧರ್ಮದ ಮಾಧ್ವ ಪರಂಪರೆಯಲ್ಲಿ ಆಂಜನೇಯನ ಆರಾಧನೆಯು ಹೆಚ್ಚು ಪ್ರಸಿದ್ಧಿಗೆ ಬಂದರೆ, ಜೊತೆ ಜೊತೆಯಲ್ಲೇ ಸಮಕಾಲೀನವಾಗಿ ವೀರಶೈವ ಮತದವೀರಭದ್ರ ದೇವರ ಆರಾಧನೆಯೂ ಹೆಚ್ಚು ಬೆಳೆಯ ತೊಡಗಿತು. ಇದರಿಂದ ಅನೇಕ ಭವ್ಯವಾದ ಆಂಜನೇಯ ಮೂರ್ತಿಗಳು ರಚನೆ ಆದವು. ಹಂಪಿಯಲ್ಲಿಯೇ ವೈವಿಧ್ಯಮಯವಾದ ಹೇರಳ ಸಂಖ್ಯೆಯಲ್ಲಿ ಮಾರುತಿ ಮೂರ್ತಿಗಳನ್ನು ನಿಲ್ಲಿಸಲಾಯಿತು. ಹಂಪೆ ಪರಿಸರದ ಅನೇಕ ಆಂಜನೇಯ ಮೂರ್ತಿಗಳನ್ನು ಸಂಗ್ರಹಿಸಿ ಅವುಗಳನ್ನು ಕಮಲಾಪುರದ ಎಎಸ್‌ಐ ವಸ್ತುಸಂಗ್ರಹಾಲಯಗಳಲ್ಲಿ ಪ್ರದರ್ಶಿಸಲಾಗಿದೆ. ಆಂಜನೇಯನ ಆರಾಧನೆಗೆ ಹಂಪಿಯಲ್ಲಿ ವ್ಯಾಸರಾಯರ ಪ್ರಭಾವವೂ ಕಾರಣವಾಗಿದೆ. ಗದಗ ಜಿಲ್ಲೆಯ ಹಾಡಗೋಳಿಯಲ್ಲಿ ಈ ಕಾಲಾವಧಿಯ (ಎಸ್.ಐ.ಐ. 15, 251) ಮಾರುತಿಗುಡಿಯಿದೆ. ಈ ದೇವಾಲಯವನ್ನು ಕಟ್ಟಿಗೆಯ ತೊಲೆ ಕಂಬಗಳಿಂದ ನಿರ್ಮಿಸಲಾಗಿದೆ.ಹುಬ್ಬಳ್ಳಿ ತಾಲೂಕಿನ ಶಿರಗುಪ್ಪಿಯ ಶಾಸನವುಳ್ಳ ಮಾರುತಿ ಗುಡಿ ವಿಶೇಷವೆನಿಸಿದೆ ಮತ್ತು ಈ ಅವಧಿಯ ಪ್ರಥಮ ಕಟ್ಟಿಗೆಯ ದೇವಾಲಯವೆಂದು ನನ್ನ ಲೇಖನದಲ್ಲಿ ಸ್ಪಷ್ಟಪಡಿಸಿದ್ದೇನೆ. ಅದನ್ನು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಕಟ್ಟಿಗೆಯ ಕಂಬ,ತೊಲೆ, ಕದಗಳು, ಬಾಗಿಲು ಚೌಕಟ್ಟುಗಳನ್ನು ನಿರ್ಮಿಸಿದ್ದನ್ನು ನಾನು ಅಧ್ಯಯನ ಮಾಡಿ ಪ್ರಕಟಿಸಿರುವೆನು. ಅದರಲ್ಲಿನ ಕಟ್ಟಿಗೆಯ ತೊಲೆಯ ಮೇಲೆ ಬರೆದ ಕನ್ನಡ ಶಾಸನದಿಂದ ಈ ವಿಷಯವನ್ನು ಸ್ಪಷ್ಟಪಡಿಸಿರುವೆನು. ಈ ಅವಧಿಯ ದೇವಾಲಯದ ಸಮಗ್ರ ಕಟ್ಟಿಗೆಯ ಭಾಗಗಳನ್ನು ತೆಗೆದು ಹಾಕಲಾಗಿದೆ. ಅವುಗಳನ್ನು ಅಲ್ಲೊಂದು ಮನೆಯಲ್ಲಿ ಶೇಖರಿಸಿಡಲಾಗಿದೆ. ಈ ದೇವಾಲಯದಲ್ಲಿನ ಮಾರುತಿ ವಿಗ್ರಹಕ್ಕೆ ಜುಟ್ಟಿದೆ. ಸರಳ ವೇಷ ಭೂಷಣವಿದೆ. ಅಲ್ಲಿಯ ಶಾಸನದಿಂದ ಈ ಕಾಲಾವಧಿಯ ಈ ವಿಗ್ರಹದ ಲಕ್ಷಣವನ್ನು ಹೆಚ್ಚಿನ ಅಧ್ಯಯನಕ್ಕೆ ಬಳಲಸು ಸಹಾಯಕವೆನಿಸಿದೆ.2ನೇ ದೇವರಾಯನು ಆಳುವಾಗ 1434 ರಲ್ಲಿ ಹಂಪೆಯಲ್ಲಿನ ಒಂದು ಹನುಮಂತ ದೇವಾಲಯಕ್ಕೆ ಒಬ್ಬ ಪ್ರತ್ಯೇಕ ಅಧಿಕಾರಿಯನ್ನೇ ನೇಮಿಸಲಾಗಿತ್ತು. (ನಂ. 401). ಕೃಷ್ಣದೇವರಾಯನ ಆಳ್ವಿಕೆಯ ಮತ್ತು ಆನಂತರದ ಕಾಲಾವಧಿಯಲ್ಲಿ ನಿರ್ಮಿಸಿದ ಅನೇಕ ಮಾರುತಿ ದೇವಾಲಯಗಳು ವಿವಿಧ ಕಡೆಗಳಲ್ಲಿವೆ. ವಿಜಯನಗರ ಸಾಮ್ರಾಜ್ಯದ ಅಧಿಕಾರಿಯಾಗಿದ್ದ ಸೂರ್ಯವಂಶದ ವಲ್ಲಭರಾಯನು ಹನುಮಂತ ದೇವರ ಗುಡಿಯನ್ನು ಕಂಥಾಗಲ್ಲ ಅಂದರೆ ಇಂದಿನ ಕುಂದಗೋಳದಲ್ಲಿ ಸ್ಥಾಪಿಸಿದನು. ದೇವಾಲಯ ದುರಸ್ತಿಯಾಗಿದೆ. ಶಾಸನವಲ್ಲದೆ ಅಲ್ಲಿ ಈ ಅವಧಿಯ ಶಿಲ್ಪವಿದೆ. ಹಿರೇಕೆರೂರು ತಾಲೂಕಿನ ಗಂಗಾಪುರದ ಶಾಸನದಲ್ಲಿ ಅವಸರದ ಬಾಲಸಿಂಗೆಯ ನಾಯಕನ ಮಗ

ಕಲ್ಲಪನು ಗಂಗಾಪುರ ಊರನ್ನು ಸ್ಥಾಪಿಸಿ ಅಲ್ಲಿ ಹನುಮಂತ ದೇವರನ್ನು ಪ್ರತಿಷ್ಠಾಪಿಸಿದನು. ಅದರಲ್ಲಿ ಗಾಡಗೋಳಿ, ಗುತ್ತಿಗಮಾರ (1539 ರ ನಂತರದ್ದು), ಕುಂದಗೋಳ, ಕದರಮಂಡಲಗಿ, ಸಾತೇನಹಳ್ಳಿ, ಮುಂತಾದವುಗಳು ಮುಖ್ಯವಾಗಿವೆ.

ಹನುಮಂತನ ವಾಸಸ್ಥಳ ಹಂಪೆ ಪ್ರದೇಶದ ಕಿಷ್ಕಿಂದೆ ಎನ್ನುವರು. ಹನುಮಂತ ಮಾಧ್ವರಲ್ಲಿ ಶ್ರೀಮುಖ್ಯಪ್ರಾಣದೇವರು. ವಾಯುದೇವ ಅವತಾರ, ಶ್ರೀ ಭಾರತೀರಮಣ. ಹಂಪಿ ಬದಿಗಿನ ಆನೆಗುಂದಿಯಲ್ಲಿ ಮಾಧ್ವ ಪರಂಪರೆಯ ಶ್ರೀ ನರಹರಿತೀರ್ಥರ ಮಠ ಪರಂಪರೆಯಿದೆ. ಶ್ರೀ ನರಹರಿತೀರ್ಥರ ಬಳಿಕ ಶ್ರೀ ಪದ್ಮನಾಭತೀರ್ಥರು, ಶ್ರೀ ವಾಗೀಶ ತೀರ್ಥರು, ಶ್ರೀ ಕವೀಂದ್ರರು ಮತ್ತು ಶ್ರೀ ವ್ಯಾಸರಾಯರು ಈ ಎಲ್ಲಾ ಯತಿವರ್ಯರ ಬೃಂದಾವನಗಳು ಆನೆಗುಂದಿಯಲ್ಲಿವೆ. ಈ ಅವಧಿಯಲ್ಲಿ ಮಾಧ್ವ ತತ್ವವು ಹಂಪಿ ಪರಿಸರದಲ್ಲಿ ಗಟ್ಟಿಯಾಗಿ ನೆಲೆಯೂರಿತು. ಶ್ರೀ ವ್ಯಾಸರಾಯರೇ ಹನುಮ–ಭೀಮ–ಮಾಧ್ವರೂಪಿಯಾದ ಆಂಜನೇಯನನ್ನು ರೂಪಿಸಿದರೆನ್ನಲಾಗಿದೆ.

ಶಿಲ್ಪಗಳು :

ಆಂಜನೇಯ : ಈ ಅವಧಿಯಲ್ಲಿ ವಿವಿಧ ಮಾದರಿಯ ಆಂಜನೇಯ ಶಿಲ್ಪಗಳನ್ನು ತಯಾರಿಸಿ ಆರಾಧಿಸುವ ಪರಂಪರೆ ಹೆಚ್ಚಾಯಿತು. ಹನುಮಂತನ ಆರಾಧನಾ ಪರಂಪರೆಯು ಮಾಧ್ವ ಪರಂಪರೆಯಲ್ಲಿ ಪ್ರಸಿದ್ಧಿ ಪಡೆಯಿತು. ಪ್ರತಿಯೊಂದು ಊರಿನಲ್ಲಿ ಒಂದಾದರೂ ಹನುಮಂತನ ಗುಡಿ ಊರ ಹೊರಗಡೆ ಪ್ರತಿಷ್ಠಾಪಿಸಿದರೆ, ವೀರಭದ್ರನನ್ನು ವೀರಶೈವರು ತಮ್ಮ ವಾಸದ ಓಣಿಗಳಲ್ಲಿ ಆರಾಧಿಸಲು ಪ್ರತಿಷ್ಠಾಪಿಸಿದ್ದು ಉತ್ತರ ಕರ್ನಾಟಕದಲ್ಲಿ ಕಾಣುತ್ತದೆ.

ಹಂಪೆಯ ಚಕ್ರತೀರ್ಥದ ಬಳಿ ಯಂತ್ರೋದ್ಧಾರ ಆಂಜನೇಯನಿದ್ದಾನೆ.ಅಲ್ಲಿ ಚತುರ್ಭುಜ ಹನುಮಂತನ ಶಿಲ್ಪವಿದೆ. ಇನ್ನೊಂದೆಡೆಯಲ್ಲಿ ಹನುಮಂತನು ಸುಖಾಸನ ಭಂಗಿಯ ದಂಪತಿ ಶಿಲ್ಪವಿದೆ. ಅದು ಅಪರೂಪದ್ದಾಗಿದೆ. ಅದು ಗಂಗಾವತಿ ತಾಲೂಕಿನ ಚಿಣ್ಣೂರಿನಲ್ಲಿದೆ. ಅದು ಭಾರತೀರಮಣ ಮುಖ್ಯಪ್ರಾಣವೆನ್ನುವರು. ಕೆಲವೆಡೆ ಆಸನದಲ್ಲಿರುವ ಹನುಮಂತನ ಶಿಲ್ಪಗಳಿವೆ. (ಹಂಪಿಯ ವಿದ್ಯಾರಣ್ಯ ಮಠ) ಒಂದು ವೃತ್ತದಲ್ಲಿ ಒಂದರ ಮೇಲೊಂದರಂತೆ ಬಿಡಿಸಿದ ತ್ರಿಕೋನ ಮಾದರಿಯ ಯಂತ್ರದ ನಡುವೆ ಹನುಮಂತನನ್ನು ಧ್ಯಾನಮುದ್ರೆಯಲ್ಲಿ ಚಿತ್ರಿಸಲಾಗಿದೆ. ವೃತ್ತ ಸುತ್ತಲೂ ಕಪಿಗಳ ಚಿತ್ರಗಳಿವೆ. ಇದರಲ್ಲಿನ ಯಂತ್ರವೇ ದೈವೀಶಕ್ತಿ. ಶಿಲ್ಪರೂಪದಲ್ಲಿ ಹನುಮಂತನು ತನ್ನ ಮುಖವನ್ನು ಪಾರ್ಶ್ವಮುಖದಲ್ಲಿ ತೋರಿಸಲಾಗಿದೆ. ದೇಹ ಮುಂದೆ ಬಂದಿದೆ ಬಳ್ಳಿಯ/ಹಣ್ಣಿನ ಗೊಂಚಲ ಎಡಗೈಯಲ್ಲಿದೆ. ಬಲಗೈಯಲ್ಲಿ ಪರ್ವತವನ್ನು ಎತ್ತಿ ಹಿಡಿದಿದ್ದಾನೆ. ಬಾಲ ಮಾತ್ರ ತನ್ನ ಕೈ ಮತ್ತು ತಲೆಯ ಮೇಲೆ ಸುತ್ತು ಹಾಕಿ ಅದು ಎಡಭಾಗಕ್ಕೆ ಇಳಿಬಿಡಲಾಗಿದೆ. ವಸ್ತ್ರಾಭರಣ ಧಾರಿ. ಈ ಲಕ್ಷಣವುಳ್ಳ ಹನುಮಂತನನ್ನು ಶ್ರೀ ವ್ಯಾಸರಾಯರು ರಚಿಸಿದ ಚಿತ್ರಣವೆನ್ನುವರು.

ಬೆಳಕಿಗೆ ಬಂದ ಶಿಲ್ಪಗಳ ಲಕ್ಷಣಗಳನ್ನು ಗಮನಿಸಿದಾಗ ಚತುರ್ಭುಜಧಾರಿ ಹನುಮಂತನು ಕೈಗಳಲ್ಲಿ ಸಾಲಿಗ್ರಾಮ (ಮುಂದಿನ ಬಲಗೈ), ಗಧ (ಕೆಳಗಿನ ಹಡಗೈ), ಚಕ್ರ (ಹಿಂದಿನ ಬಲಗೈ) ಮತ್ತು ಶಂಖ (ಹಿಂದಿನ ಎಡಗೈ)ಗಳನ್ನು ಹಿಡಿದಿದ್ದಾನೆ. ಸಾಲಿಗ್ರಾಮ ವಿಷ್ಣುವಿನ ಒಂದು ಅಸ್ತ್ರವನ್ನಾಗಿ (?) ಹಿಡಿದಿರುವನು. (ಶಂಖ, ಚಕ್ರ, ಗಧೆ ಮತ್ತು ಸಾಲಿಗ್ರಾಮ) ಈ ಲಕ್ಷಣವು 8ನೇ ಶತಮಾನದ ಬಾದಾಮಿ ಚಾಲುಕ್ಯರ ಅವಧಿಯಲ್ಲಿ ಬಾದಾಮಿ ಮೂರನೇ ಗುಹಾಲಯದ ವಿಷ್ಣುವಿನಲ್ಲಿದೆ. ಇದು ಅಲ್ಲಿ ವಿಷ್ಣುವಿನ ಅಸ್ತ್ರದಲ್ಲಿ ಪದ್ಮದ ಬದಲು ಸಾಲಿಗ್ರಾಮ ಹಿಡಿದಿದ್ದರೆ, ಇಲ್ಲಿ ಹನುಮಂತನು ಅದನ್ನು ಹಿಡಿದಿದ್ದನ್ನು ತೋರಿಸಿದ್ದು ವಿರಳವೆನಿಸಿದೆ. ನವಬೃಂದಾವನ ಬಳಿಯ ಹನುಮಂತನ ಗುಡಿಯಲ್ಲಿ ಕುಳಿತ ಭಂಗಿಯ ಹನುಮಂತನ ಶಿಲ್ಪವೂ ಅಪರೂಪದ್ದಾಗಿದೆ. ಇಂಥದೊಂದು ಹಂಪಿಯ ಶ್ರೀ ವಿದ್ಯಾರಣ್ಯರ ಮಠದಲ್ಲಿದೆ. ಇಲ್ಲಿ ಕುಳಿತ ಹನುಮಂತನಿಗೆ ಮುಮ್ಮುಖವಿದೆ. ದ್ವಿಭುಜ ಕೈಗಳಲ್ಲಿ ಪುಸ್ತಕವಿದೆ. ಹಂಪಿಯಲ್ಲಿ ಹೇರಳ ಹನುಮಂತನ ಶಿಲ್ಪಗಳಿವೆ. ಅವುಗಳಲ್ಲಿ ಅನೇಕ ಶಿಲ್ಪಗಳು ಕಮಲಾಪುರದ ಕೇಂದ್ರ ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯದಲ್ಲಿವೆ.

ಸಾಲಿಗ್ರಾಮವು ಶಿವನ ಲಿಂಗವಾಗಿದ್ದು ಈ ಲಕ್ಷಣವು ವೀರಶೈವರ ಇಷ್ಟಲಿಂಗ ಪರಿಕಲ್ಪನೆಯನ್ನು ನೆನಪಿಸುತ್ತದೆ. ಚಕ್ರ ಶಂಖಗಳಿಂದ ಇದು ವೈಷ್ಣವರ ಮತ್ತು ವೀರಶೈವರ ಸಮ್ಮಿಳನದ ಪ್ರಯತ್ನ ವಿರಬಹುದು.

ಮಧ್ವಾಚಾರ್ಯರ ಪ್ರಭಾವದಿಂದ ಹನುಮಂತನ ಬಾಲದ ತುದಿಯಲ್ಲಿ ಗಂಟೆಯನ್ನು ಕಟ್ಟುವ ಪರಂಪರೆ ಶಿಲ್ಪದಲ್ಲಿ ಪ್ರಾರಂಭವಾಗಿದೆ. ಈ ರೀತಿಯ ಶಿಲ್ಪಗಳು ಅನೇಕ ಕಡೆಗಳಲ್ಲಿವೆ. ಕೆಲವು ಆಂಜನೇಯ ಶಿಲ್ಪಗಳಲ್ಲಿ ಆಂಜನೇಯನಿಗೆ ವಿವಿಧ ವಸ್ತ್ರಾಭರಣಗಳಿದ್ದು, ಬಾಲದ ತುದಿಯಲ್ಲಿ ಗಂಟೆಯನ್ನು ಕಟ್ಟಲಾಗಿದೆ. ತಲೆಗೆ ಕಿರೀಟವನ್ನು ಧರಿಸಲಾಗಿದೆ. ಹನುಮಂತನ ಬಲಬದಿಗೆ ವಾನರರಿಬ್ಬರು ಕಾದಾಡುತ್ತಿರುವುದನ್ನು ತೋರಿಸಲಾಗಿದೆ. ಅದರ ಕೆಳಗಡೆ ಕುಳಿತ ವಾನರನನ್ನು ಕಿರಿದಾಗಿ ಚಿತ್ರಿಸಲಾಗಿದೆ. ಈ ರೀತಿಯ ಶಿಲ್ಪವು ಬಳ್ಳಿಗಾವಿಯ ವಸ್ತುಸಂಗ್ರಹಾಲಯದ ಮುಂದಿದೆ. ಕೆಲವುಗಳು ಕಮಲಾಪುರದ ವಸ್ತುಸಂಗ್ರಹಾಲಯದ ಆವರಣದಲ್ಲಿವೆ. ಇವುಗಳು ಸಹ ಹದಿನಾರನೇ ಶತಮಾನಕ್ಕೆ ಸೇರಿದವುಗಳಾಗಿವೆ. ಇದರಿಂದ ಹನುಮಂತನಿಗೆ ತಲೆಯ ಮೇಲೆ ಜುಟ್ಟನ್ನು ತೋರಿಸಿದ ಮತ್ತು ಹನುಮಂತನ ತಲೆಗೆ ಕಿರೀಟಧಾರಣೆ ಮಾಡಿದ ಶಿಲ್ಪಗಳು ಈ ಅವಧಿಯಿಂದ ಕಂಡುಬರುತ್ತವೆ. ಆದರೂ ಸಹ ಈ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನವನ್ನು ಕೈಕೊಂಡರೆ ಶಿಲ್ಪದಲ್ಲಿ ಹನುಮಂತನ ಅನೇಕ ಹೊಸ ಅಂಶಗಳು ಹೊರ ಬರಬಹುದು.

ದಾಸರ ಕೊಡುಗೆ :

ವಿಜಯನಗರ ಕಾಲಾವಧಿಯಲ್ಲಿ ಶ್ರೀ ವೈಷ್ಣವ ಮತದ ಬೆಳವಣಿಗೆಗೆ ದಾಸರ ಹಾಡುಗಳು ಮತ್ತು ಅವರ ಸಾಹಿತ್ಯದಕೊಡುಗೆಗಳು ಕಾರಣವಾಗಿವೆ.ದಾಸರಲ್ಲಿ ಕನಕದಾಸ ಮತ್ತು ಪುರಂದರದಾಸರು ಮುಖ್ಯರೆನಿಸಿದ್ದಾರೆ. ಇವರು ಕೈಯಲ್ಲಿ ತಂಬೂರಿ ಹಿಡಿದು ಹಾಡನ್ನು ಹೇಳುತ್ತಾ ದೇಶ ಸಂಚಾರ ಮಾಡುತ್ತಿದ್ದರು. ಇದರಿಂದ ಈ ಮತದ ದೇವರು ಜನಸಾಮಾನ್ಯರಿಗೆ ಆಕರ್ಷಣೀಯವಾಗಲು ಕಾರಣವಾಯಿತು. ಈ ಅವಧಿಯ ಈ ರೀತಿ ಚಿತ್ರಗಳು ಹಾವನೂರು ಇತ್ಯಾದಿ ಕಡೆಗಳಲ್ಲಿವೆ.

ಈ ಎಲ್ಲಾ ಚಾರಿತ್ರಿಕ ಬೆಳವಣಿಗೆಯನ್ನು ಅನುಲಕ್ಷಿಸಿದಾಗ ದಕ್ಷಿಣ ಭಾರತದಲ್ಲಿ ಅದರಲ್ಲೂ ತಿರುಪತಿ, ಶ್ರೀರಂಗಪಟ್ಟಣ ಮುಂತಾದ ಸ್ಥಳಗಳಲ್ಲಿವಿಭಿನ್ನ ಧರ್ಮ ಮತ್ತು ದೇವಾಲಯಗಳನ್ನು ಅವಲೋಕಿಸಿದಾಗಶ್ರೀವೈಷ್ಣವ ಧರ್ಮ ಮತ್ತು ಅದರ ದೇವಾಲಯ ಶಿಲ್ಪಗಳು ವೈವಿಧ್ಯಮಯವಾಗಿ ಮತ್ತು ಹೆಚ್ಚಿನಸಂಖ್ಯೆಗಳಲ್ಲಿತ್ತು. ಶಿಲ್ಪ–ದೇವಾಲಯಗಳಲ್ಲಿಕೃಷ್ಣ, ಉಗ್ರನರಸಿಂಹ, ವಿಠಲ, ಅಚ್ಯುತರಾಯ, ಹಜಾರರಾಮ, ಕೋದಂಡರಾಮ, ಬೆಣ್ಣೆಕೃಷ್ಣ ಮುಂತಾದ ದೇವಾಲಯಗಳು, ಶಿಲ್ಪಗಳು, ಬೃಹದಾಕಾರದ ಶಿಲಾರಥ ಮುಂತಾದವುಗಳಿವೆ. ಹಂಪಿಯಲ್ಲಿನ ಉಗ್ರನರಸಿಂಹ, ಲಕ್ಷ್ಮೀನರಸಿಂಹ ಮತ್ತು ಕೋದಂಡರಾಮ ಶಿಲ್ಪಗಳು ಭವ್ಯವಾಗಿವೆ. ವಾಸ್ತುಶಿಲ್ಪ ಕಲೆಯಲ್ಲಿ ಶ್ರೀ ವೈಷ್ಣವ ಪರಂಪರೆಯಲ್ಲಿ ಹೆಚ್ಚಿನ ಸಿರಿತನ ಒಳಗೊಂಡಿದೆ. ಈ ಅವಧಿಯ ತಿರುವೆಂಗಳನಾಥ, ವೆಂಕಟೇಶ, ವಿಠಲರ ಶಿಲ್ಪಗಳನ್ನು ಪಟ್ಟಿಮಾಡಿ ಅಧ್ಯಯನ ಮಾಡಬೇಕಾಗಿದೆ. ಕೃಷ್ಣ, ತಿರುವೆಂಗಳನಾಥ, ವಿಠಲ, ಉಗ್ರನರಸಿಂಹ ಮತ್ತು ಅಚ್ಯುತ ದೇವರ ದೇವಾಲಯಗಳಿಗೆ ಹೆಚ್ಚು ವ್ಯವಸ್ಥೆಗಳನ್ನು ಕಲ್ಪಿಸಲಾಗಿತ್ತು. ಅಲ್ಲಿ ಒಂದು ಪ್ರತ್ಯೇಕ ಬಂಢಾರವಿದ್ದಿತು. ವಿಠಲ ದೇವಾಲಯದಲ್ಲಿ ಲಕ್ಷ್ಮೀ (ನಾರಾಯಣ) ಮತ್ತು ಆಳ್ವಾರರ ದೇವಾಲಯಗಳಿದ್ದುದು ಮತ್ತುಶ್ರೀ ವೈಷ್ಣವ ಮತದ ಪ್ರತ್ಯೇಕ ಮಠಗಳು ಈ ಅವಧಿಯಿಂದ ನಿರ್ಮಾಣವಾಗಿದ್ದು ವಿಶೇಷವೆನಿಸಿದೆ. ಆದರೆ ಹಂಪಿಯಲ್ಲಿನ ಶೈವ ದೇವಾಲಯುಗಳಲ್ಲಿ ಕೇವಲ ವಿರೂಪಾಕ್ಷ ದೇವಾಲಯ ಮಾತ್ರ ಭವ್ಯವಾಗಿ, ವಿಸ್ತಾರವಾಗಿ ಮತ್ತು ಬೃಹದಾಕಾರದಲ್ಲಿದೆ.ಹಂಪಿಯಲ್ಲಿನ ಶ್ರೀ ವೈಷ್ಣವ ಧರ್ಮದ ಪ್ರಚಾರ–ಬೆಳವಣಿಗೆಗೆ ವಿಜಯನಗರದ ಸಾಳುವ ಅರಸರು, ತುಳುವ ಅರಸರಲ್ಲಿ ಕೃಷ್ಣದೇವರಾಯ, ಅಚ್ಯುತದೇವರಾಯ, ಸದಾಶಿವರಾಯ, ರಾಮರಾಯರಲ್ಲದೆ, ಅನೇಕ ಯತಿವರ್ಯರು, ದಾಸರು ಮುಂತಾದವರ ಕೊಡುಗೆ ಪ್ರಮುಖವಾಗಿದೆ. ಈ ದೇವಾಲಯ ಮತ್ತು ಅದರ ಸಂಕೀರ್ಣದ ದೇವಾಲಯ ಕಟ್ಟಡಗಳು ಹಂಪೆಯ ದೇವಾಲಯಗಳಲ್ಲೇ ಅತ್ಯಂತ ಪ್ರಾಚೀನದ್ದಾಗಿದೆ. ಹಂಪೆಯ ಇನ್ನಿತರ ಧರ್ಮದ ದೇವಾಲಯ, ಬಸದಿ, ಮಠಮಾನ್ಯಗಳು ವಿಸ್ತಾರದಲ್ಲಿ, ಗಾತ್ರದಲ್ಲಿ ಮತ್ತು ವಾಸ್ತುಶಿಲ್ಪಕಲೆಯನ್ನು ಅವಲೋಕಿಸಿದಾಗ ಶ್ರೀವೈಷ್ಣವ ಧರ್ಮದ ದೇವಾಲಯಗಳು ಉನ್ನತ ಸ್ಥಾನದಲ್ಲಿರುವುದು ತಿಳಿಯುತ್ತದೆ. ಆದರೆ ರಾಜಧಾನಿ ಹಂಪಿ ಹೊರಗಡೆಯಲ್ಲಿ ವೀರಶೈವ ಮತ, ಶೈವ ಮತದ, ಶ್ರೀಶೈಲ, ಲಕ್ಷ್ಮೇಶ್ವರ, ಉಜ್ಜಯಿನಿ, ಮತ್ತು ಇನ್ನಿತರ ಕಡೆಗಳಲ್ಲಿನ ದೇವಾಲಯಗಳ ವಾಸ್ತುಶಿಲ್ಪಕಲೆಯಲ್ಲಿ ಭವ್ಯತೆ, ವಿಸ್ತಾರ ಗಾತ್ರ ಸ್ವಲ್ಪ ಮಟ್ಟಿಗೆ ಹೆಚ್ಚಿದೆ. ಹಂಪಿಯಲ್ಲಿ ಅನೇಕ ಶ್ರೀ ವೈಷ್ಣವ ಮತದ ಸ್ಮಾರಕ–ಶಿಲ್ಪಗಳು ಹೆಚ್ಚು ನಾಶವಾಗಿವೆ. ಇದನ್ನು ಗಮನಿಸಿದರೆ ಶೈವ, ವೈಷ್ಣವ, ವೀರಶೈವ ಮತ್ತು ಶ್ರೀ ವೈಷ್ಣವರ ನಡುವೆ ಏನಾದರೂ ಭಿನ್ನಾಭಿಪ್ರಾಯಗಳು ಉಂಟಾದವೇ ಎಂಬ ಅನುಮಾನ ಬರುತ್ತದೆ.

9. ಆ. ಜೈನಧರ್ಮ :

ಕರಾವಳಿ ಕಡೆಗೆ ಜೈನಧರ್ಮದ ವಲಸೆ : ಶಾಂತಿ-ಅಹಿಂಸಾ ಭೋದನಾ ತತ್ವಗಳನ್ನು ಹೊಂದಿದ ಜೈನಧರ್ಮವು ದೀರ್ಘಕಾಲ ರಾಜಾಶ್ರಯವನ್ನು ಪಡೆದಿತ್ತು. ಆದರೆ ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಅಂತ್ಯಭಾಗದಲ್ಲಿ ಕಳಚೂರಿಯರ ಆಳ್ವಿಕೆಯ ಅವಧಿಯಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಜೈನಧರ್ಮದ ಬೆಳವಣಿಗೆಗೆ ಅನೇಕ ತೊಂದರೆಗಳು ಎದುರಾದಂತೆ ಕಾಣುತ್ತದೆ. ಈ ಕಾಲದಲ್ಲಿ ಈ ಮತದ ಹೇರಳ ಬಸದಿಗಳು ನಾಶವಾಗಿವೆ. ಇಲ್ಲವೇ ಪರಿವರ್ತನೆ ಆಗಿವೆ. ಈ ಮತದ ಅನೇಕರು ಮತಾಂತರ ಗೊಂಡರು. ಅದಕ್ಕೆ ಆಳರಸರ ಪ್ರೋತ್ಸಾಹ ಕಾರಣವಾಗಿರ ಬಹುದು. ಈ ಕುರಿತು ಶಾಸನ ಸಾಹಿತ್ಯ ಮಹತ್ವದ ಅಂಶಗಳನ್ನು ಹೊರಗೆಡವುತ್ತದೆ. 12ನೇ ಶತಮಾನದಲ್ಲಿ ರಚನೆಯಾದ ಸಮಕಾಲೀನ ವಚನ ಸಾಹಿತ್ಯವನ್ನು ಗಮನಿಸಿದರೆ ವೈದಿಕ (ಬ್ರಾಹ್ಮಣರ)ಪರಂಪರೆಗಳನ್ನು ಖಂಡಿಸಿದ್ದು ಕಾಣುತ್ತದೆಂದು ಡಾ. ಎಂ. ಎಂ. ಕಲಬುರ್ಗಿ ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಪ್ರಭಾವವು ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿನ ಅನೇಕ ಕಡೆಗಳಲ್ಲಿ ಮತ್ತು ದಕ್ಷಿಣ ಮಹಾರಾಷ್ಟ್ರದಲ್ಲಿ ಅದು ಕಡಿಮೆ ಪ್ರಮಾಣದಲ್ಲಿ ಆಗಿರ ಬಹುದು. ಏಕೆಂದರೆ ಜೈನರ ಮೇಲೆ ಜೈನ ಸ್ಮಾರಕಗಳ ಮೇಲೆ ಹೆಚ್ಚಿನ ನಷ್ಟ ಆದಂತೆ ಕಾಣುವುದಿಲ್ಲ. ಈ ಅವಧಿಯಲ್ಲೂ ಈ ಭಾಗಗಳಲ್ಲಿನ ಈ ಮತದ ಬಸದಿಗಳಿಗೆ ದಾನ ನೀಡಲಾಗಿದೆ. ಮುಂದೆ ವಿಜಯನಗರ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಉತ್ತರ ಕರ್ನಾಟಕ ಸೇರಿ ಜೈನಧರ್ಮವು ಶಕ್ತಿಯುತವಾಗಿ ಬೆಳೆದಿದ್ದು ಕಾಣುವುದಿಲ್ಲ. ಅದಕ್ಕೆ ಆಳರಸರ ಪ್ರೋತ್ಸಾಹದಕೊರತೆ ಇರಬೇಕು. ಆದರೆ ಈ ಕಾಲಘಟ್ಟದಲ್ಲಿ ಈ ಮತದ ಅನೇಕ ಭವ್ಯವಾದ ಜೈನ ಶಿಲ್ಪಗಳು-ಸ್ಮಾರಕಗಳಾದ ಬಸದಿಗಳ ನಿರ್ಮಾಣವು ಹೆಚ್ಚಾಗಿ ಕರಾವಳಿ ಪ್ರದೇಶದಲ್ಲಿ ನಡೆದಿದ್ದು ಕಾಣುತ್ತದೆ. ಇಂಥಹ ಭವ್ಯ ಬಸದಿಗಳು-ಸ್ಮಾರಕಗಳು ಉತ್ತರ ಕರ್ನಾಟಕದಲ್ಲಿ ಕಡಿಮೆ ಪ್ರಮಾಣದಲ್ಲಿವೆ. ಉದಾಹರಣೆಗೆ: ದೇವರಾಯನು ಹಂಪೆಯಲ್ಲಿನ ತನ್ನ ಅರಮನೆಯ ಬದಿಯಲ್ಲಿ ಪಾರ್ಶ್ವನಾಥನ ಜಿನಾಲಯವನ್ನು ಕಟ್ಟಿಸಿದನು. ಮುಂದೆ ಅಲ್ಲಿ ಈ ಮತಕ್ಕೆ ಹೆಚ್ಚು ಪ್ರೋತ್ಸಾಹ ಸಿಕ್ಕ ಹಾಗೆ ಕಾಣುವುದಿಲ್ಲ. ಹಂಪೆಯಲ್ಲಿ ಕುಂಥು ಜಿನಾಲಯವನ್ನು 1386 ರಲ್ಲಿ ಇರುಗೊಪ್ಪ ದಂಡನಾಯಕ ಕಟ್ಟಿಸಿದನು. ಈಗ ಅದನ್ನು ಗಾಣಗಿತ್ತಿ ದೇವಾಲಯವೆಂದು ಕರೆಯುವರು. ಅದರ ಎದುರಿಗೆ ಮಾನಸ್ತಂಭವಿದೆ. ಶಾಸನವುಳ್ಳ ಒಂದು ಜೈನಮೂರ್ತಿಯು ಈಗ ಅಮೇರಿಕಾದಲ್ಲಿದೆ. ಆದರೆ ಹಂಪೆಯ ಹೊರಗಡೆ ಅದರಲ್ಲೂ ಕರಾವಳಿ ಭಾಗದಲ್ಲಿ ಮತ್ತು ದಕ್ಷಿಣ ಕರ್ನಾಟಕದಲ್ಲಿ ರಾಣಿ ಭೀಮಾದೇವಿಯು ಶ್ರವಣಬೆಳ್ಗೊಳದ ಬಸದಿಯಲ್ಲಿ ಶಾಂತಿನಾಥ ತೀರ್ಥಂಕರನ ಪ್ರತಿಮೆಯನ್ನು ಮಾಡಿಸಿ ನಿಲ್ಲಿಸಿದಳು. 1382 ರಲ್ಲಿ ತಿರುಪದುತ್ತಿ ಕುನ್ರಂನಲ್ಲಿ ತ್ರೈಲೋಕ್ಯನಾಥ ಬಸದಿಗೆ ಸಂಗೀತ ಮಂಟಪವನ್ನು ತನ್ನ ಗುರು ಪುಷ್ಪಸೇನನ ಆದೇಶದ ಮೇರೆಗೆ 1387 ರಲ್ಲಿ ನಿರ್ಮಿಸಿದನು. ಇದಲ್ಲದೆ ಈತನು ಶ್ರವಣ ಬೆಳಗೊಳದ ಗೊಮ್ಮಟೇಶ್ವರನಿಗೆ ಬೆಳಗೊಳ ಗ್ರಾಮವನ್ನು ದಾನ ಮಾಡಿದನು. ಕಾರ್ಕಳದಲ್ಲಿನ ಗೊಮ್ಮಟಮೂರ್ತಿಯು 45 ಅಡಿ 5 ಇಂಚು ಎತ್ತರವಿದೆ. ಅದನ್ನು ಪ್ರತಿಷ್ಠೆ ಮಾಡಿದವರು ವಿಜಯನಗರ ಅರಸ ಪ್ರೌಢದೇವರಾಯನ ಅಧಿಕಾರಿ ವೀರಪಾಂಡ್ಯನ ಆಸ್ಥಾನದಲ್ಲಿದ್ದ ಜೈನರ ನೇಮಿಚಂದ್ರ ಪಂಡಿತ ಈತನು-ಪರಧಾರಿಗಳನ್ನು ವಾಕ್ಯದಲ್ಲಿ ಸೋಲಿಸಿ ಜಯಪತ್ರ ಪಡೆದವನು.

ಮೂಡಬಿದಿರೆಯ ಬಹುದೊಡ್ಡ ತ್ರಿಭುವನ ಚೂಡಾಮಣಿ ಚೈತ್ಯಾಲಯದ ಶಿಖರಕ್ಕೆ ತಾಮ್ರದ ತಗಡಿನ ಹೊದಿಕೆಯನ್ನು 1429 ರಲ್ಲಿ ರಕ್ಷಣಾರ್ಥವಾಗಿ ಹೊದಿಸಲಾಗಿದೆ. (ಎಸ್.ಐ.ಐ. 7, 202) ಈ ರೀತಿಯ ಕಬ್ಬಿಣದ ತಗಡಿನ ಹೊದಿಕೆಯು ಅಮ್ಮಿನಬಾವಿಯ ಹಿರೇಮಠಕ್ಕಿದೆ. ಕಾರ್ಕಳದ ಚತುರ್ಮುಖ ಬಸದಿ, ಮೂಡಬಿದರಿಯ ಸಾವಿರ ಕಂಬ ಬಸದಿ ಮತ್ತು ಜೈನ ಮುನಿಗಳ ನಿಶಿಧಿ ಇನ್ನಿತರ ಸ್ಮಾರಕಗಳುಹಾಸನದಿಂದ ಕರಾವಳಿ ಪ್ರದೇಶದವರೆಗೆ ಹಬ್ಬಿವೆ. ಇದಕ್ಕೆ ಕಾರಣಗಳೇನು ಎಂಬುದರ ಬಗ್ಗೆ ವಿವೇಚಿಸಿದಾಗ ಈ ಪ್ರದೇಶದಲ್ಲಿ ಸ್ಥಳೀಯ ಸಾಮಂತರು, ಅರಸರು ಜೈನ ಧರ್ಮದ ಬೆಳವಣಿಗೆಗೆ ನೀಡಿದ ಅಪಾರ ಪ್ರೋತ್ಸಾಹ ಆಶ್ರಯವೇ ಆಗಿದೆ. ಹೈದ್ರಾಬಾದ್ ಕರ್ನಾಟಕದಲ್ಲಂತೂ ತೀರಾ ಕಡಿಮೆ. ಆದರೆ ಬಾಂಬೆ ಕರ್ನಾಟಕ ಭಾಗದಲ್ಲಿ ಅದರಲ್ಲಿ ಹಾವೇರಿ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಜೈನಮತದವರು ತಮ್ಮ ಅಸ್ತಿತ್ವವನ್ನು ಸ್ವಲ್ಪ ಹೆಚ್ಚಿನ ಮಟ್ಟದಲ್ಲಿಉಳಿಸಿಕೊಂಡಿದ್ದು ಕಾಣುತ್ತದೆ. ಉದಾಹರಣೆಗೆ ಲಕ್ಷ್ಮೇಶ್ವರ (ಗದಗ ಜಿಲ್ಲೆ), ಸಂಗೂರು ಪ್ರದೇಶ (ಹಾವೇರಿ ಜಿಲ್ಲೆ), ಭಟ್ಕಳ ಪ್ರದೇಶ (ಕಾರವಾರ ಜಿಲ್ಲೆ), ಬೆಳಗಾವಿ-ರಾಯಭಾಗ ಪ್ರದೇಶಗಳಲ್ಲಿ (ಬೆಳಗಾವಿ ಜಿಲ್ಲೆ) ಜೈನಧರ್ಮದ ಕೆಲವು ಅಂಶಗಳು ವಿಶೇಷವೆನಿಸಿವೆ.

ಈ ಅವಧಿಯಲ್ಲಿ ಜೈನಧರ್ಮದ ಬೆಳವಣಿಗೆ ಕುಂಠಿತವಾಗಿದೆ. ಆದರೆ ಕರಾವಳಿ ಪ್ರದೇಶದಲ್ಲಿನ ಜೈನ ಸ್ಮಾರಕಗಳು ವೈವಿಧ್ಯಮಯವಾಗಿವೆ. ಮೂಡಬಿದರೆ ಕರಾವಳಿ ಪ್ರದೇಶದ ಒಂದು ಅಪರೂಪದ ಪ್ರಸಿದ್ಧ ಜೈನ ಕೇಂದ್ರ. ಇಲ್ಲಿನ ಕೋಡಂಗಲ್ಲಿನ ಜೈನ ನಿಶಿಧಿ ಮಂಟಪಗಳು ವಿಶೇಷ ಗಮನವನ್ನು ಸೆಳೆಯುತ್ತವೆ. ಒಂದರಲ್ಲಿ ಚತುರಸ್ರಾಕಾರದ ಅಧಿಷ್ಠಾನದ ಮೇಲೆ ಎಂಟು ಕಂಬಗಳಿವೆ. ಅದಕ್ಕೆ ಛತ್ತಿದೆ. ಇದನ್ನು ನ್ಯಾಯಬಸದಿ ಎಂದು ಕರೆಯುವರು. ಇನ್ನೊಂದು ಚಂದ್ರಕೀರ್ತಿದೇವರು ಸನ್ಯಾಸವಿಧಿಯಿಂದ ಸ್ವರ್ಗಸ್ಥರಾದ ನಿಶಿದಿಯಿದೆ. ಈ ಯತಿಯು ಪಾರ್ಶ್ವನಾಥ ಮಹೇಂದ್ರ ಕೀರ್ತಿದೇವರ ಶಿಷ್ಯರು (1637) ಈ ಭಾಗದಲ್ಲಿ ಈ ಅವಧಿಯಲ್ಲಿ ಚೌಟರ ವಂಶದ 43 ಅರಸರ ಆಳ್ವಿಕೆಯಿತ್ತು. ಕೆಳದಿ ಹಿರಿಯ ವೆಂಕಟಪ್ಪನಾಯಕನು ಇಲ್ಲಿ ಕೋಟೆಯನ್ನು ನಿರ್ಮಿಸಿದನು. ಈ ಊರಿನ ಜೈನ ಮಠದಲ್ಲಿ ಸುಮಾರು 5000 ದಷ್ಟು ಹಸ್ತಪ್ರತಿಗಳಿವೆ. ಇಲ್ಲಿನ ಆರು ಜೈನ ಬಸದಿಗಳ ಮುಂದೆ ಮಾನಸ್ತಂಭಗಳಿವೆ.

ಮುಡಿಜಗಳು : ಅಪರೂಪವೆನಿಸಿದ ಜೈನ ಸ್ಮಾರಕಗಳಲ್ಲಿ ಇಲ್ಲಿನ ಮುಡಿಜಗಳಾಗಿವೆ. ಇವುಗಳು ಒಂದೆಡೆ ಮೂಡಬಿದರೆಯ ಬೆಟಕೇರಿ ರಸ್ತೆಯ ಬದಿಯಲ್ಲಿವೆ. ಇವುಗಳು ಬೌದ್ಧ ಪಗೋಡಗಳಂತಿವೆ. ತಲಾ ಒಂದಕ್ಕೆ ಚೌಕಾದ ಶಿಲೆಯ ಎತ್ತರದ ಅಧಿಷ್ಠಾನವಿದೆ. ಅವುಗಳ ಮೇಲೆ ಎತ್ತರವಾದ ಚೌಕಾದ ಗೋಡೆಗಳನ್ನು ಇಟ್ಟಿಗೆ–ಗಾರೆಯಿಂದ ಕಟ್ಟಲಾಗಿದೆ. ಇವುಗಳನ್ನು 'ಮಡಿಜ' ಎಂದು ಕರೆಯವರು. ಇವುಗಳನ್ನು ಈ ಹಿಂದೆ ನಾನೂ ಸಹ ಅಧ್ಯಯನ ಮಾಡಿದ್ದೇನೆ. (ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ) ಅವುಗಳಲ್ಲಿ ಎರಡಕ್ಕೆ ಶಾಸನಗಳಿವೆ. ಇಲ್ಲಿ ಸುಮಾರು 23 ಮಡಿಜಗಳಿದ್ದು ಅದರಲ್ಲಿ 2 ನಾಶವಾಗಿವೆ. ಒಂದರಲ್ಲಿ ಬ್ರಹ್ಮಚಾರಿ ಮಡೆದೇವರು ಸೆಟ್ಟಿಯವರಿಗೆ 'ಮಡಿಜ'ವನ್ನು ಕಟ್ಟಿಸಲಾಗಿದೆ ಎಂದು ಹೇಳಲಾಗಿದೆ. ಎರಡನೆಯದನ್ನು ಚಾರುಕೀರ್ತಿ ಪಂಡಿತ ಅಯ್ಯಗಳ ಶಿಷ್ಯರಾದ ವರ್ಧಮಾನ ಅಣ್ಣಗಳ ಶಿಷ್ಯ ಬಾಗಿಸೆಟ್ಟಿ ಬಳಿಯ ಯಳವೆಯ ಸೆಟ್ಟಿ ಕಟ್ಟಿಸಿದನು. ಮೂರನೆಯದನ್ನು ದೇಶೀಗಣದ ಪ್ರಭೆಂದುಯತಿಗೆ ಅವರ ಶಿಷ್ಯರು ಕಟ್ಟಿಸಿದ್ದಾರೆ. ಈ ಸ್ಮಾರಕಗಳ ಸುತ್ತ ಭಾರತೀಯ ಪುರಾತತ್ವ ಇಲಾಖೆಯು ರಕ್ಷಣಾ ಬೇಲಿಯನ್ನು ಕಟ್ಟಿಸಿದೆ. ಇವುಗಳನ್ನು ಸ್ಥೂಲವಾಗಿ ಸನ್ಮತಿಕುಮಾರ ಅವರು ಪರಿಚಯಿಸಿದ್ದಾರೆ. (ಸನ್ಮತಿಕುಮಾರ: 2018, ಇತಿಹಾಸದರ್ಶನ ಸಂ. 33, ಮೂಡಬಿದಿರೆಯ ವಿಶಿಷ್ಠ ಸ್ಮಾರಕಗಳು, ಪು. 522–525).

ಮಹಾಮಸ್ತಕಾಭಿಷೇಕ ಇತ್ಯಾದಿಗಳಿಗೆ ಹೆಚ್ಚಿನ ದಾನ ನೀಡಲಾಗಿದೆ : ಈ ಅವಧಿಯಲ್ಲಿ ಜೈನರ ಹೆಚ್ಚಿನ ಧಾರ್ಮಿಕ ಚಟುವಟಿಕೆಗಳು ದಕ್ಷಿಣ ಕರ್ನಾಟಕದಲ್ಲಿ ನಡೆದ ಉದಾಹರಣೆಗಳಿವೆ. ಶ್ರವಣಬೆಳಗೊಳವು ಆಗಲೂ ಜೈನರ ಒಂದು ಮಹತ್ವದ ಧಾರ್ಮಿಕ ಕೇಂದ್ರವಾಗಿತ್ತು. ಅಲ್ಲಿನ ಗೊಮ್ಮಟೇಶ್ವರನಿಗೆ 12 ವರ್ಷಕ್ಕೊಮ್ಮೆ ಮಸ್ತಕಾಭಿಷೇಕ ಆಚರಿಸುವುದು ವಿಜಯನಗರ ಕಾಲದಿಂದ ಆರಂಭವಾಗಿದೆ. 1398 ರಲ್ಲಿ ಗೊಮ್ಮಟೇಶ್ವರನಿಗೆ ಕ್ಷೀರಾಭಿಷೇಕವನ್ನು ಮಾಡಿದ್ದಾರೆ. ಜೈನಯತಿ ಸೂರಿಪಂಡಿತರು ಅದಕ್ಕೆ ಏಳು ಬಾರಿ ಅಭಿಷೇಕ ಮಾಡಿಸಿ ಜಗತ್ತಿನ ಪಾಪಗಳನ್ನು ಕಳೆದರು (ಎ.ಕ. 2 (ಪ) ಚನ್ನರಾಯಪಟ್ಟಣ, 59, ಮರನೂರು). ಅಷ್ಟೊತ್ತಿಗೆ ಅದು ಆರನೆ ಸಲವಾಗಿತ್ತೆನ್ನಲಾಗಿದೆ. 1326 ರಿಂದ ಆರಂಭವಾಯಿತೆಂದು ಲೆಕ್ಕ ಹಾಕುವರು. ಇದಲ್ಲದೆ 15ನೇ ಶತಮಾನದಿಂದ ಈ ಪರಂಪರೆಯು ವೈಭವಯುತವಾಗಿ ಮುಂದುವರಿದಿದೆ. ಹರಿಹರನ ಮಂತ್ರಿ ಇರುಗಪ್ಪನು ಈ ಮತದ ಬೆಳವಣಿಗೆಗೆ ಹೆಚ್ಚಿನ ನೆರವನ್ನು ನೀಡಿದ್ದಾನೆ. ಹಂಪಿ ಬಳಿಕ 1422 ರಲ್ಲಿ ಹೊಸದಾಗಿ ಬೆಳಗೊಳವನ್ನು ನಿರ್ಮಿಸಿ ಅಲ್ಲಿಯ ಉಪವನ, ಕೆರೆ ಮತ್ತು ಗೊಮ್ಮಟನಿಗೆ ದಾನ ನೀಡಿದ್ದಾನೆ. ಇದಲ್ಲದೆ ಮಸ್ತಕಾಭಿಷೇಕಕ್ಕೆ ಬಳಸುವ ವಸ್ತುಗಳಿಗೆ ಮತ್ತು ಸಿಬ್ಬಂದಿಗೆ ದಾನ ನೀಡಿದನು. ಬಸದಿಗಳಲ್ಲಿ ನಿತ್ಯವೂ ಅಷ್ಟವಿದಾರ್ಚನೆ ನಡೆಯಲು ಪ್ರೋತ್ಸಾಹ ನೀಡಿದ್ದಾನೆ. ನೀರು, ಗಂಧ, ಅಕ್ಷತೆ, ಪುಷ್ಪ, ಚರು/ನೈವೇದ್ಯ, ಧೂಪ, ದೀಪ ಮತ್ತು ಫಲಗಳೇ ಅಷ್ಟವಿದಾರ್ಚನೆ ಆಗಿವೆ. ಪಂಚಕಲ್ಯಾಣೋತ್ಸವವನ್ನು (ಗರ್ಭಾವತರಣ, ಜನನ, ದೀಕ್ಷೆ, ಕೈವಲ್ಯ ಮತ್ತು ತೀರ್ಥಂಕರ) ಬಸದಿ ನಿರ್ಮಾಣ, ಮೂರ್ತಿ ಪ್ರತಿಷ್ಠಾಪನೆ ಮುಂತಾದ ಸಂದರ್ಭಗಳಲ್ಲಿ ಈ ಹಬ್ಬವನ್ನು ಜೈನರು ಇಂದಿಗೂ ಆಚರಿಸುವರು. ಅಲ್ಲಿ (ಶ್ರವಣಬೆಳಗೊಳ) ಗೊಮ್ಮಟನ ಪಾದದ ಮುಂದೆ ರತ್ನತ್ರಯದ ನೋಂಪಿ ಉದ್ಯಾಪನೆಯನ್ನು, ಗಂಧಕುಟಿ ಪೂಜೆಯನ್ನು 1472 ರಲ್ಲಿ ಪಂಚಪರಮೇಷ್ಠಿಗಳಲ್ಲಿ ಚಕ್ರಪೂಜೆ, ಸಿದ್ಧಚಕ್ರ ಪೂಜೆ, ಮೃತ್ಯುಂಜಯ ಚಕ್ರಪೂಜೆ(ಎಕೆ. 7, ಸಾಗರ 60, ಮಿಡುವಣಿ, 1472)ಗಳು ನಡೆಯುತ್ತಿದ್ದವು.

ಮೂಡಬಿದರೆಯಲ್ಲಿ ಸರ್ವ ವ್ಯಾಧಿಯ ನಿವಾರಕನೆನಿಸಿದ ಚಂಡ್ರೋಗ್ರ ಪಾರ್ಶ್ವನಾಥ ದೇವರ ಬಸದಿ (1390)ಯ ನಂದಾದೀವಿಗೆಗೆ ದಾನವನ್ನು ನೀಡಲಾಗಿದೆ. ಕಾರ್ಕಳದ ತ್ರಿಭುವನ ಚೂಡಾಮಣಿ ಬಸದಿಯಲ್ಲಿ ಚಂದ್ರನಾಥನಿರುವನು. (ಎ.ಕೆ. 7, ಕಾರ್ಕಳ, 203, ಮೂಡಬಿದರಿ) ಈ ಬಸದಿಗೆ ನಗಿರೆಯ ಭೈರವದೇವ ವೊಡೆಯನಿಗೆ ರೋಗ ಹೆಚ್ಚಾದಾಗ ಪುಣ್ಯ ಪಡೆಯಲು ದಾನ ನೀಡಲಾಗಿದೆ. ಬಸದಿಯನ್ನು ನಿರ್ಮಿಸಿ ಅಲ್ಲಿ ಸುಮತಿ ತೀರ್ಥಂಕರರನ್ನು ಶ್ರುತಕೀರ್ತಿ ದೇವರು ಮುಕ್ತಿ ಹೊಂದಿದಾಗ ದಾನ ನೀಡಲಾಗಿದೆ.

ಮೂಡಬಿದಿರೆಯ ಸಾವಿರ ಕಂಬ ಬಸದಿ ಜೈನ ವಾಸ್ತು ಶಿಲ್ಪಕಲೆಯಲ್ಲಿ ಅಪರೂಪದ್ದು. ಇದನ್ನು ಹೊಸ ಬಸದಿ ಎಂದು ಕರೆಯುವರು. ಶಾಸನಗಳು ಇದನ್ನು ಚಂದ್ರನಾಥ ಬಸದಿ, ತ್ರಿಭುವನ ಚೂಡಾಮಣಿ ಬಸದಿ ಎಂದೂ ಕರೆದಿವೆ. 1429 ರಲ್ಲಿ ಸಂಗಮ ವಂಶದ ಎರಡನೇ ದೇವರಾಯನ (1424–46) ಆದೇಶದಂತೆ ಮಂಗಳೂರಿನ ರಾಜ್ಯಪಾಲ ದೇವರಾಜ ಒಡೆಯನು ನೀಡಿದ ದಾನದ ಸೀಮೆಯಲ್ಲಿ ಈ ಬಸದಿಯನ್ನು ನಿರ್ಮಿಸಲಾಗಿದೆ. ಬಸದಿ ನಿರ್ಮಾಣದಲ್ಲಿ ಚಂದ್ರಪ್ರಭ ದೇವರ ಪ್ರತಿಷ್ಠಾಪನೆ, 12 ಜಿನಭಕ್ತರು ನಿರ್ಮಿಸಿದ 12 ಭಾಗಗಳು ಮತ್ತು ಅದಕ್ಕೆ ತಾಮ್ರದ ತಗಡಿನ ಹೊದಿಕೆಯನ್ನು ಭೈರವನೃಪ ಮಾಡಿದ್ದು ಅದರ ಮುಂದುಗಡೆ ನಾಗಲದೇವಿಯು ಮಾನಸ್ತಂಭ ನಿಲ್ಲಿಸಿದ್ದು ತಿಳಿಸಿದೆ. ಗಂಧಕೂಟಗಳನ್ನು ಹಾಗೂ ಅನೇಕ ದತ್ತಿ ದಾನಗಳನ್ನು ಅದಕ್ಕೆ ನೀಡಲಾಗಿದೆ. ಸುಮಾರು ನಾಲ್ಕು ಸಲ ಈ ಬಸದಿ ಜೀರ್ಣೋದ್ಧಾರವಾಗಿದೆ. ಅದಕ್ಕೆ ಅಧಿಷ್ಠಾನ, ಭಿತ್ತಿ, ಶಿಖರ ಮತ್ತು ಕಲಶಗಳಿವೆ. ಪೂರ್ವಾಭಿಮುಖವಾಗಿದೆ. ಭೈರಾದೇವಿ ಮಂಟಪವು ನಕ್ಷತ್ರಾಕಾರದಲ್ಲಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಮಂಟಪ ಒಟ್ಟು ಮೂರು ಮಂಟಪಗಳಿದ್ದು ತ್ರಿತಲದಲ್ಲಿದೆ. ಅಧಿಷ್ಠಾನಕ್ಕೆ ಮಂಚ ಮಾದರಿ ಉಪಪೀಠವಿದ್ದು ಬಿತ್ತಿ ಸರಳವಾಗಿದೆ. ಮೇಲಿನ ಭಾಗದಲ್ಲಿ ಜಾಲಂದ್ರಗಳಿದ್ದು ಅವುಗಳ ಮೇಲೆ ಅಲ್ಲಲ್ಲಿ ತೀರ್ಥಂಕರರಿದ್ದಾರೆ. ಅಲ್ಲಿ ಎರಡು ಸಾಲಿನಲ್ಲಿ ಕಂಬಗಳ ಮೇಲೆ ಇಳಿಜಾರಾದ ಛತ್ತಿದೆ. ಸುಪಾರ್ಶ್ವನಾಥನನ್ನು ಪ್ರತಿಷ್ಠಾಪಿಸಲಾಗಿದೆ. ಎಡ ಮಂಟಪದಲ್ಲಿ 24 ತೀರ್ಥಂಕರರು, ಬಲಮಂಟಪದಲ್ಲಿ ಪಾರ್ಶ್ವನಾಥರಿದ್ದಾರೆ. ಎದುರಿಗೆ ಸಹಸ್ರಕೂಟವಿದೆ. ಅಲ್ಲಿನ ಚಂದ್ರನಾಥನ ಪಂಚಲೋಹದ ಶಿಲ್ಪ ದಕ್ಷಿಣ ಭಾರತದಲ್ಲೇ ಅತಿ ಎತ್ತರದ್ದೆನ್ನುವರು. ಅಂತರಾಳದಲ್ಲಿ 24 ತೀರ್ಥಂಕರ ಕಂಚಿನ ಮೂರ್ತಿಗಳು ಮತ್ತು ಕಂಚಿನ ಬಾಹುಬಲಿಯಿವೆ. ಅಲ್ಲಿನ ನಮಸ್ಕಾರ ಮಂಟಪದಲ್ಲಿನ ಕಂಬಗಳು ಗಂಗರ ಶೈಲಿಯಲ್ಲಿವೆ. ವಿತಾನ, ಕಂಬಗಳು ಅಲ್ಲಿವೆ. ರಂಗಮಂಟಪಕ್ಕೆ ಸೋಪಾನವುಳ್ಳ ಕಕ್ಷಾಸನ ಅಲ್ಲಲ್ಲಿವೆ. ಸರಳವಾದ ದ್ವಾರವಿದೆ. ಲಲಾಟದಲ್ಲಿ ಜಿನನಿದ್ದಾನೆ. ಕೆಲವು ಕಂಬಗಳಿಗೆ ಗೂಡು, ಅದರಲ್ಲಿ ಗಂಧರ್ವರು, ದಂಡ ಅಲಂಕೃತಗೊಂಡಿದೆ. ಅಧಿಷ್ಠಾನದ ಜಗತಿಯಲ್ಲಿ ಆನೆ ಇನ್ನಿತರ ಚಿತ್ರಗಳಿವೆ. ಇದು ಚಿತ್ರಾದೇವಿ ಮಂಟಪವಾಗಿದೆ. ವಿಶಾಲವಾದ ಭೈರಾದೇವಿ ಮಂಟಪದಲ್ಲಿ 24 ಕಂಬಗಳಿವೆ.

ಮಾನಸ್ತಂಭ : ಮಾನಸ್ತಂಭವು ಸಮವಸರಣ ಸಭೆಯ ಮುಂದೆ ಸ್ಥಾಪಿಸುವ ಯಕ್ಷರ ನೆಲೆಯಾದ ಕಂಬವಾಗಿದೆ. ಬಸದಿಗಳಲ್ಲಿ ಸಮವಸರಣ ಸಭೆ, ಅವರ್ಗ ಮುಂದೆ ಮಾನಸ್ತಂಭ ಸ್ಥಾಪಿಸುವುದು ಸಾಮಾನ್ಯ. ಅಂತೆಯೆ ಬ್ರಹ್ಮಯಕ್ಷನ ನೆಲೆಯಾಗಿ ಬಸದಿಗಳ ಮುಂದೆ ನಿಲ್ಲಿಸಿದ ಕಂಬಗಳನ್ನು ಬ್ರಹ್ಮಸ್ತಂಭಗಳೆನ್ನುವರು.

ಜೈನರೊಡನೆ ವೈಷ್ಣವರ ಸಂಘರ್ಷ : ದಕ್ಷಿಣ ಕರ್ನಾಟಕದ ಕಲ್ಯದಲ್ಲಿ ವೈಷ್ಣವರು ಜೈನರೊಡನೆ ಸಂಘರ್ಷ ಮಾಡಿದರು (ಕಲ್ಯ ಶಾಸನ). ಜೈನರು ಆಗ ತಮಗಾದ ಅನ್ಯಾಯವನ್ನು ವಿಜಯನಗರ ಅರಸ ಬುಕ್ಕನಿಗೆ ತಿಳಿಸಿದರು. ಇವರ ದೂರನ್ನು ಪಡೆದು ಆ ಬಳಿಕ ಅರಸನು ಈರ್ವರೂ ಒಬ್ಬರನ್ನೊಬ್ಬರು ಗೌರವದಿಂದ ಕಾಣುವಂತೆ ಮಾಡಿದ. ಬೇಲೂರಿನ ಶಾಸನದಲ್ಲಿ ಸರ್ವ ಧರ್ಮಗಳನ್ನು ಗೌರವದಿಂದ ಕಾಣವುದನ್ನು ತಿಳಿಸಲಾಗಿದೆ. ವೈಷ್ಣವ ಮತ್ತು ಜೈನರ ನಡುವೆ ನಡೆದ ಮತೀಯ ವೈಷಮ್ಯವನ್ನು ಬುಕ್ಕನು ಅಳಿಸಿ ಹಾಕಿ ಎರಡೂ ಕೋಮಿನವರನ್ನು ಸ್ನೇಹದಿಂದ ಬಾಳುವಂತೆ ಮಾಡಿದ್ದು ವಿಶೇಷವೆನಿಸಿದೆ. ಶ್ರವಣಬೆಳಗೊಳದ 1368ರ ಒಂದು ಶಾಸನ ಹೀಗೆ ವಿವರಿಸಿದೆ. (ಎ.ಕ.2 (ಹೊಸದು) ನಂ. 475) ಭವ್ಯರೆಂದು ಜೈನರು, ಭಕ್ತರೆಂದು ವೈಷ್ಣವರು ಕರೆಯುವರೆಂಬ ಕಾರಣಕ್ಕೆ ಈರ್ವ್ವರಲ್ಲಿ ಘರ್ಷಣೆ ನಡೆಯಿತು. ಈ ಧಾರ್ಮಿಕ ವಿವಾದದಲ್ಲಿ ವೈಷ್ಣವರು ಜೈನರ ಬಸದಿಗಳ ಮೇಲೆ ಹಾನಿ ಮಾಡಿದರು. ಜೈನರ ಮೇಲೆ ಹಲ್ಲೆ ಮಾಡಿದರು. ವೈಷ್ಣವರು ಈ ರೀತಿಯಲ್ಲಿ ಜೈನರಿಗೆ ಅನ್ಯಾಯ ಮಾಡುವುದನ್ನು ರಾಜ ಬುಕ್ಕವೊಡೆಯನಿಗೆ ದೂರಿತ್ತರು. ಆಗ ಬುಕ್ಕವೊಡೆಯರು ಈರ್ವ್ವರನ್ನು ಕರೆಸಿ

ಗೌಡ ಸಮಸ್ಥರ ಎದುರಿನಲ್ಲಿ ಚರ್ಚಿಸಿದರು. ಎರಡೂ ಮತಗಳ ನಡುವೆ ಬೇಧವಿಲ್ಲವೆಂದು ನಿರ್ಣಯಿಸಿದರು. ಈ ಕಾರಣಕ್ಕಾಗಿ ಈರ್ವ್ವರ ಕೈಯಲ್ಲಿ ಕೈಯ್ಯನಿಡಿಸಿ ಒಂದು ಗೂಡಿಸಿದರು. ಕೊನೆಯಲ್ಲಿ ಬೆಳಗೊಳದ ತೀರ್ಥದಲ್ಲಿನ ಜೈನರ ಮತ್ತು ಅವರ ಬಸದಿಗಳ ರಕ್ಷಣೆಯ ಜವಾಬ್ದಾರಿಯನ್ನು ವೈಷ್ಣವರಿಗೆ ನೋಡಿಕೊಳ್ಳ ಬೇಕೆಂದು ಮತ್ತು ಜೈನರ ಅಂಗರಕ್ಷೆಯ ಖರ್ಚು-ವೆಚ್ಚಕ್ಕೆ ಸಾಮ್ರಾಜ್ಯದಲ್ಲಿನ ಪ್ರತಿ ಜೈನರ ಮನೆಯಿಂದ ಹಣ ಒಂದನ್ನು ಸಂಗ್ರಹಿಸಬೇಕು. ಸಂಗ್ರಹಿಸಿದ ಹಣದಲ್ಲಿ 20 ಆಳುಗಳ ಖರ್ಚನ್ನು ನೋಡಿಕೊಳ್ಳ ಬೇಕೆಂಬ ನಿಯಮ ಹಾಕಿದನು. ಉಳಿದ ಹಣವನ್ನು ಜೈನ ಬಸದಿಗಳ ದುರಸ್ತಿಗೆ ಖರ್ಚು ಮಾಡಬೇಕೆಂದು ಸೂಚಿಸಿದನು. (ಎ.ಕೆ. 2 (ಹೊಸ) ನಂ. 475) ಈ ಮಹತ್ವದ ನಿರ್ಣಯವನ್ನು ಈ ವಿಷಯವನ್ನು ಅನೇಕರು ಪರಿಚಯಿಸಿದ್ದಾರೆ.

ಭೂದಾನ ನಷ್ಟಕ್ಕೆ ಪರಿಹಾರ : ಇಮ್ಮಡಿ ದೇವರಾಯನ ಕಾಲದಲ್ಲಿ (1424) ನೀಡಿದ ಭೂದಾನವು ನಷ್ಟವಾಗಿದ್ದಿತು. ಈ ವಿಷಯವನ್ನು ತಿಳಿದು ಕೃಷ್ಣದೇವರಾಯನು ಆಳುವಾಗ 1515ರಲ್ಲಿ ವರಾಂಗದ ನೇಮಿನಾಥ ಬಸದಿಗೆ ಶ್ರೀ ದೇವೇಂದ್ರಕೀರ್ತಿ ಭಟಾರಕರ ಜೊತೆ ಈ ಚಕ್ರವರ್ತಿಯು ಚರ್ಚಿಸಿದನು. ಆ ಬಳಿಕಈ ಸಮಸ್ಯೆಯನ್ನು ಸರಿಪಡಿಸಲು ಬಾರಕೂರು ರಾಜ್ಯಪಾಲ ರತ್ನಪ್ಪ ವೊಡೆಯನಿಗೆ ಆದೇಶ ನೀಡಿದನು. ಈ ವಿಷಯವನ್ನು ಮುದುರಾಡಿಯಸಾಮಂತ ಮನೆತನದವರು ತಿಳಿದು ಈ ಮನೆತನದ ಹಿರಿಯೊಡತಿ ಅಕ್ಕಮ್ಮ ಪೆರ್ಗಡತಿಗೆ ಪರಿತಪಿಸಿದರು. ಆಗ ಅವರು ಅಲ್ಲಿಯ ಕಾಡನ್ನು ಕಡಿಸಿದರು. ಅದರಲ್ಲಿನ ತೆಂಗು, ಮಾವು, ಹಲಸು ಮುಂತಾದ ಗಿಡಗಳನ್ನು ಹಾಗೆಯೇ ಉಳಿಸಿ ಅದನ್ನು ಮೂಲ ಹಕ್ಕಿನೊಂದಿಗೆ ನೇಮಿನಾಥ ದೇವರ ಪೂಜೆಗೆ ಮತ್ತು ಮಠಕ್ಕೆ ಆಕೆಯು ಬಿಟ್ಟುಕೊಟ್ಟಳು. ಈ ರೀತಿ ಮುಂದೆ ಆಗದಂತೆ ನೋಡಿಕೊಳ್ಳುವುದಾಗಿ ಅಕ್ಕಮ್ಮ ಭಾಷೆ ಕೊಟ್ಟಳೆಂಬುದು ವಿಶೇಷವಾಗಿದೆ. (ಎಸ್.ಐ.ಐ. 27, ನಂ. 164) ಈ ವಾಗ್ವಾದಕ್ಕೆ ಕಾರ್ಕಳದ ಅರಸ ಭೈರರಸವೊಡೆಯನು ಸಾಕ್ಷಿ ಹಾಕಿದನು.

9.ಇ. ವೀರಶೈವ/ಲಿಂಗಾಯತ ಮತದ ವೈವಿಧ್ಯತೆ :

ಬಸದಿ ಕಂಬದ ಚಿತ್ರ ಅಳಿಸಿ ಲಿಂಗಮುದ್ರ ಹಾಕಿದ್ದು : ಬಸ್ತಿಹಳ್ಳಿಯಲ್ಲಿ ಹುಚ್ಚಪ್ಪದೇವನು ಹಳೆಬೀಡಿನ ಪಾರ್ಶ್ವನಾಥ ಬಸದಿಯ ಕಂಬಗಳ ಮೇಲೆ ವೀರಶೈವ ಚಿಹ್ನೆಯನ್ನು ಹಾಕಿ ಮಾರುತ್ತಿದ್ದನು. ಈ ಕಾರಣಕ್ಕಾಗಿ ಅಲ್ಲಿ ಒಂದು ವ್ಯಾಜ್ಯವೇ ನಡೆಯಿತು. ಆಗ ವೆಂಕಟಾದ್ರಿ ನಾಯಕನು ಮಂತ್ರಿ ಕಾಳಪ್ಪಯ್ಯನ ಮಗ ಕೃಷ್ಣಪ್ಪಯ್ಯರು ಸೇರಿ ಈ ವ್ಯಾಜ್ಯವನ್ನು ಬಗೆಹರಿಸಿದರು. ವಿಜಯಪ್ಪನೆಂಬವನು ಲಿಂಗಮುದ್ರೆ ಚಿಹ್ನೆಗಳನ್ನು ಅಳಿಸಿ ಹಾಕಿದ ಘಟನೆ ನಡೆದಿದೆ.

ಭಾರತೀಯ ಮತ ಧರ್ಮಗಳ ಚರಿತ್ರೆಯಲ್ಲಿ ವೀರಶೈವ/ಲಿಂಗಾಯತ ಮತವೂ ಒಂದಾಗಿದೆ. ಈ ಮತದ ತತ್ವ ಸಿದ್ಧಾಂತಗಳಲ್ಲಿ ಅಷ್ಠಾವರಣ, ಷಠಸ್ಥಲ ಮತ್ತು ಪಂಚಾಚಾರಗಳು ಪ್ರಮುಖವೆನಿಸಿವೆ. ಆಚರಣೆಯಲ್ಲಿ ಇಷ್ಠಲಿಂಗ ಆರಾಧನೆಯು ಬಹುಮುಖ್ಯ ಪಾತ್ರ ವಹಿಸಿದೆ. ಈ ಮತದ ಆಕರ ಸಾಮಗ್ರಿಗಳಲ್ಲಿ ಸಾಹಿತ್ತಿಕ ಆಕರಗಳು ಹೆಚ್ಚಿನ ಪ್ರಮಾಣದಲ್ಲಿದ್ದರೆ ಪುರಾತತ್ವ ಆಕರದಲ್ಲಿ ಬರುವ ಶಾಸನ, ದೇವಾಲಯ, ಮಠ-ಮಾನ್ಯಗಳು ಮತ್ತು ಶಿಲ್ಪಗಳು ಕಡಿಮೆ ಪ್ರಮಾಣದಲ್ಲಿವೆ. ಈ ಆಕರಗಳನ್ನು ಬಳಸಿಕೊಂಡು ಅನೇಕರು ಲೇಖನ, ಕೃತಿಗಳನ್ನು ಬರೆದಿರುವರು. ಇವುಗಳ ಅಧ್ಯಯನದಿಂದ ಈ ಮತದ ಚರಿತ್ರೆಯು ತಕ್ಕಮಟ್ಟಿಗೆ ರಚನೆಯಾಗಿದೆ. ಅದರಲ್ಲೂ ಈ ಮತದ ಹಲವು ತತ್ವಾಚರಣೆಗಳ ಮಾಹಿತಿಗಳು, ಮಠ(ಟ), ದೇವಾಲಯ, ಶಿವಶರಣ/ಚತುರಾಚಾರ್ಯ-ಪಂಚಾಚಾರ್ಯರ ನೆಲೆಗಳು, ಹೆಸರುಗಳು ಇತ್ಯಾದಿ ತಿಳಿದಿವೆ. ವಚನ ಸಾಹಿತ್ಯವನ್ನು ಅವಲೋಕಿಸಿದಾಗ ಅಲ್ಲಿ ವೈದಿಕ ಪರಂಪರೆಯನ್ನು ಖಂಡಿಸಿದ್ದು ಒಂದೆಡೆ ಗೋಚರಿಸುತ್ತದೆ. ಈ ಅವಧಿಯ ವೀರಶೈವ ಸಾಹಿತ್ಯವನ್ನು ಸಮಕಾಲೀನ ಪುರಾತತ್ವ ಪುರಾವೆಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಹೇಳಿಕೊಳ್ಳುವಂತಹ ಹೊಂದಾಣಿಕೆಯ ಅಂಶಗಳು ವಿರಳವೆನಿಸಿವೆ. ಈ ಕಾಲ ಮತ್ತು ಈ ಕಾಲ ಪೂರ್ವದ ಶಾಸನಗಳನ್ನು ಪರಿಶೀಲಿಸಿದಾಗ ಈ ಮತದವರು ಜೈನರ ವಿರುದ್ಧ ನಡೆಸಿದ ವಿವಾದ, ಗಲಭೆಗಳು ಇತ್ಯಾದಿಗಳು ಕಾಣುತ್ತವೆ. ಈ ಅವಧಿಯಲ್ಲಿ ನೂರಾಒಂದು ವಿರಕ್ತರ ಕಾರ್ಯಾಚರಣೆಗಳು, ಪಂಚಗಣಾಧೀಶ್ವರರ ಪಾತ್ರ ಮತ್ತು ವೀರಶೈವ ಮತಕ್ಕೆ ಸೇರಿದ ಮಹೇಶ್ವರ ವರ್ಗದವರ ವಿಚಾರಗಳು ಕಾಣುವವು.

ಕಾಳಾಮುಖ, ಪಾಶುಪತ ಮತ್ತು ಮಹೇಶ್ವರರು ಶೈವ ಮತದಲ್ಲಿ ಕಾಣುವರು. 1164ರ ಬಳ್ಳಿಗಾವಿಯ ಕೇದಾರೇಶ್ವರ ಶಾಸನದಲ್ಲಿ ಯತಿ ಕೇದಾರಶಕ್ತಿಯು "ಯಾವನೇ ಆಗಲಿ, ಒಂದಾದರೂ ಲಿಂಗವನ್ನು ಸ್ಥಾಪಿಸಿದರೆ ಆಗಮಗಳಲ್ಲಿ ಹೇಳಿದ ಎಲ್ಲ ಬಗೆಯ ಶ್ರೇಯಸ್ಸುಗಳನ್ನು ಕೋಟಿಕೋಟಿ ಪಟ್ಟು ಪಡೆಯುವನು" ಎನ್ನಲಾಗಿದೆ. (ಇ.ಸಿ. 7, ಎಸ್.ಕೆ. 108) ಕಾಳಾಮುಖ ಯತಿ ಚಂದ್ರಭೂಷಣ ಪಂಡಿತ ದೇವನನ್ನು (ಗದಗಿನ 1192ರ ಶಾಸನ) ಚಲಿಸುವ ಲಿಂಗವೆನ್ನಲಾಗಿದೆ. ಇನ್ನೊಂದು ಶಾಸನದಲ್ಲಿ (ಹೊಂಬಳದ 1187 ರ) ಕಾಳಾಮುಖ ಯತಿ ರುದ್ರಶಕ್ತಿಯನ್ನು ಒಬ್ಬ ಜಂಗಮನೆಂದು ಕರೆಯಲಾಗಿದೆ. (ಎಸ್‌ಐಐ 15, ನಂ. 73 (1.50) ಸರ್ವೇಶ್ವರ ದೇವನೆಂಬ 1252ರ ಮುನವಳ್ಳಿಯ ಜಗದೀಶ್ವರ ದೇವಾಲಯದ ಕಾಳಾಮುಖ ಯತಿ ಒಬ್ಬ ಚಲಿಸುವ ಲಿಂಗದ ಅವತಾರ ಎನ್ನಲಾಗಿದೆ. ಶಾಸನಗಳಲ್ಲಿ ಮಾಹೇಶ್ವರರನ್ನು ಮಹೇಶ್ವರರು, ವೀರಮಹೇಶ್ವರ, ಮದನ ಮಹೇಶ್ವರ, ಸೌರ್ಯಮಹೇಶ್ವರ ಮುಂತಾಗಿ ಕರೆಯಲಾಗಿದೆ. ಪಾಶುಪತದವರು ಅಭಿನವ ಪಾಶುಪತರೆಂದು ಈ ಅವಧಿಪೂರ್ವದಲ್ಲಿದ್ದರು. ಈ ಮತದವರಿಂದಲೂ 12ನೇ ಶತಮಾನದಲ್ಲಿ ಜೈನರ ವಿರುದ್ಧ ಒಂದು ದೊಡ್ಡ ಸಮರವೇ ನಡೆಯಿತು. ಅದರಲ್ಲಿ ಅಬ್ಬಲೂರಿನ ಏಕಾಂತರಾಮಯ್ಯ, ಲಕ್ಷ್ಮೇಶ್ವರದ ಆದಯ್ಯ ಇನ್ನಿತರರ ಪಾತ್ರಗಳಿವೆ. ಅಲ್ಲಿ ಜೈನ ಬಸದಿಗಳನ್ನು ಪರಿವರ್ತಿಸಿ ಶಿವ ದೇವಾಲಯಗಳನ್ನಾಗಿ ನಿರ್ಮಿಸಲಾಗಿದೆ. ಅನೇಕ ಜೈನರನ್ನು ಮತಾಂತರಗೊಳಿಸಲಾಗಿದೆ. ಅದೇ ರೀತಿಯಲ್ಲಿ ದಕ್ಷಿಣದಲ್ಲಿ ಶ್ರೀ ವೈಷ್ಣವರು ಜೈನರ ಮೇಲೆ ನಡೆಸಿದ ಸಂಘರ್ಷಗಳು ಕಾಣುತ್ತವೆ. ಹೀಗಾಗಿ ಹೇರಳ ನಷ್ಟವನ್ನು ಆ ಸಮುದಾಯ ಅನುಭವಿಸಿದ್ದಿತು. ಈ ರೀತಿಯ ಪ್ರಯೋಗಗಳು ಬಹುತೇಕ ಕಳಚುರಿಯರ ಕಾಲದಿಂದ ವಿಜಯನಗರ ಕಾಲದವರೆಗೆ ಉತ್ತರ ಕರ್ನಾಟಕ– ಶ್ರೀಶೈಲ ಭಾಗಕ್ಕೆ ಸೇರಿ ವಿಸ್ತರಿಸಿವೆ. ಈ ಸಮರವು ವೈಷ್ಣವರಿಂದ ದಕ್ಷಿಣ ಕರ್ನಾಟಕದಲ್ಲಿ ಹೊಯ್ಸಳರ ಕಾಲಾವದಿಯಿಂದ ವಿಜಯನಗರ ಕಾಲದವರೆಗೆ ವಿಸ್ತರಿಸಿದಂತೆ ಕಾಣುತ್ತದೆ.

ಇನ್ನಿತರ ಮತ–ಧರ್ಮದವರಂತೆ ಧರ್ಮಾಚರಣೆಗಳನ್ನು, ತತ್ವಸಿದ್ಧಾಂತಗಳನ್ನು ಪ್ರಸಾರ ಮಾಡುವ ಕೇಂದ್ರಗಳಂತೆ ಈ ಮತದವರ ಪ್ರಚಾರ ಮಾಡುವ ತಂಗು/ವಾಸತಾಣಗಳು ಮಠ–ಮಾನ್ಯಗಳಾಗಿವೆ. ಈ ಮಠಗಳ ಸ್ಥಾನಾಚಾರ್ಯರೇ ಈ ಮತದ ತತ್ವ ಸಿದ್ಧಾಂತಗಳನ್ನು ಬೋಧಿಸುವ ಧರ್ಮಪ್ರವರ್ಧಕರಾಗಿರುವರು. ಈ ಮತದಲ್ಲಿ ಮುಖ್ಯವಾಗಿ ಎರಡು ವರ್ಗಗಳ ಜೋಡಣೆಯಿದೆ. ಮಠಗಳಲ್ಲೂ ಮುಖ್ಯವಾಗಿ ಎರಡು ಪಂಗಡಗಳಿವೆ. ಮಠಗಳಲ್ಲಿ ಗುರುಗಳಿರುವರು. ಒಂದರಲ್ಲಿನ ಮಠಗಳನ್ನು ಗುರುಮಠಗಳೆಂದು ಅವರನ್ನು ಷಟಸ್ಥಲದವರೆಂದು ಕರೆಯುವರು. ಇನ್ನೊಂದು ಮಠದವರನ್ನು ವಿರಕ್ತ ಮಠದವರೆಂದು ಕರೆಯುವರು. ಈ ಎರಡೂ ಮಠಗಳಿಗೆ ಗುರುಗಳನ್ನಾಗಿ/ಶ್ರೀಗಳನ್ನಾಗಿ ವೀರಶೈವ ಮತದ ಜಂಗಮ ವಟುಗಳನ್ನೇ ಸಾಮಾನ್ಯವಾಗಿ ನೇಮಕ ಮಾಡುವ ಪರಂಪರೆಯಿದೆ. ಅವರಲ್ಲಿ ವಿರಕ್ತ ಮಠದವರು ಬಸವಾದಿ ಶಿವಶರಣರ ಪರಂಪರೆಯನ್ನು ಬೋಧಿಸುವರು. ಹೊಸ ಹೊಸ ಆಶಯಗಳಿಂದ ಈ ಮತದ ಹಲವಾರು ಪಾರಂಪರಿಕ ಚಟುವಟಿಕೆಗಳಲ್ಲಿ ಸುಧಾರಣೆ/ಬದಲಾವಣೆ ಪ್ರಕ್ರಿಯೆಗಳು ನಡೆಯುತ್ತಿವೆ. ಪರಿವರ್ತನೆ ಜಗದ ನಿಯಮ. ಪರಿವರ್ತನೆಗಳು ದೀರ್ಘಕಾಲಾವಧಿಯ ನಂತರ ಪುನಃ ಹಿಂದಿನ ಪರಂಪರೆಗಳುಸಹಜವಾಗಿ ಮರುಕಳಿಸಲೂಬಹುದು.

ಒಂದು ಮಾತು ಇಲ್ಲಿ ನೆನಪಾಗುತ್ತದೆ. ಭಾರತದಲ್ಲಾದ ಪ್ರತಿಯೊಂದು ಮತಧರ್ಮದ ರಚನೆಯಲ್ಲಿ ಎರಡು ವರ್ಗಗಳ ಸಮ್ಮಿಲನವಿದೆ. ಒಂದು ಪುರೋಹಿತ್ಯ ಮಾಡುವವರು ಇನ್ನೊಂದು ಅದನ್ನು ಪಾಲನೆ ಮಾಡುವ ಶಿಷ್ಯರಿದ್ದಾರೆ. ಅದನ್ನು ಸಾಮಾಜಿಕ ಆಚರಣೆಯಲ್ಲಿ ಗುರು–ಶಿಷ್ಯರೆಂದೂ ಭಾವಿಸುವರು. ಆಧುನಿಕ ದೃಷ್ಟಿಯಲ್ಲಿ ಜಾತಿ–ಧರ್ಮರಹಿತ ಸಮಾಜ ನಿರ್ಮಾಣವಾಗಬೇಕು ಎಲ್ಲರೂ ಸರಿಸಮಾನರೆನಿಸಬೇಕು. ಇದನ್ನೇ ನಮ್ಮ ಸಂವಿಧಾನ ಹೇಳುತ್ತದೆ. ಸಮಾಜದಲ್ಲಿ ಸಮಾನತೆ ತರಲು ಏನೆಲ್ಲಾ ಕಾಯ್ದೆ–ಕಾನೂನು– ಪ್ರೋತ್ಸಾಹವನ್ನು ಸರ್ಕಾರವೂ ನೀಡುತ್ತಿದೆ. ಅದರ ಪ್ರಯೋಜನವನ್ನು ಸಕಲಮತ ಧರ್ಮೀಯರು ಪಡೆಯಲೆಂಬುದು ಎಲ್ಲರ ಆಶಯವೂ ಹೌದು. ಈ ಒತ್ತಾಸೆಯಿಂದ ಪರಿಶಿಷ್ಟರು, ಹಿಂದುಳಿದವರು, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರನ್ನೂ ಬಲಿಷ್ಠರನ್ನಾಗಿಸಬೇಕು. ಇದರಿಂದ ನಮ್ಮ ದೇಶದ ಸಮಾಜವನ್ನು ಉದ್ಧಾರಗೊಳಿಸಲು ನೆರವಾಗುತ್ತದೆ.

ಆದರೆ ಈಗ ಸಮಾಜದಲ್ಲಿ ಸರ್ಕಾರದ ಲಾಭ ಪಡೆದು ಯಾರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಲಿಷ್ಠರಾಗಿದ್ದಾರೋ ಅಂಥವರೂ ಸಹ ಪರಂಪರೆಗಳಿಗೆ ಮಾರು ಹೋಗುತ್ತಿರುವರು. ಹೊಸ ರೀತಿಯ ಬದುಕನ್ನು ಕಟ್ಟಿಕೊಂಡಿರುವವರು ತೀರ ಕಡಿಮೆ. ಇದು ಎಷ್ಟರಮಟ್ಟಿಗೆ ಸತ್ಯ ಎಂಬುದನ್ನು ಸರ್ಕಾರ ತೀಕ್ಷ್ಣವಾಗಿ ಪರಿಶೀಲಿಸಬೇಕು.ಅದಕ್ಕಾಗಿ ಲಾಭಪಡೆದವರ ಮನೆಗಳಲ್ಲಿ ದೇವರು/ಗುರುಗಳನ್ನು ದೂರ ಇಟ್ಟಿರುವರೋ ಅಥವಾ ತಮ್ಮ ವೈಯಕ್ತಿಕ–ಕೌಟುಂಬಿಕ ಬದುಕನ್ನು ಕಟ್ಟಿಕೊಳ್ಳಲು ಕುಂಡಲಿ–ಜಾತಕ ಭವಿಷ್ಯವನ್ನು ಕೇಳುವುದು ಮತ್ತು ಯಜ್ಞ–ಯಾಗ ಆಚರಣೆಗಳನ್ನು ನಡೆಸುವ ಕಡೆ ಒಲವು ತೋರಿಸಿರುವರೇ ಎಂಬುದನ್ನು ಪ್ರಯೋಗಾತ್ಮಕವಾಗಿ ಪರಿಶೀಲಸಬೇಕಾಗಿದೆ. ಈ ಬಗ್ಗೆ ಹೆಚ್ಚಿನ ಚಿಂತನೆ ನಡೆಯಲೆಂಬುದು ನನ್ನ ಆಶಯ.

ವೀರಶೈವ ಮತದಲ್ಲಿ ಮಹೇಶ್ವರಾಣಾ, (ಮಥುರಾ ಸ್ತಂಭ ಶಾಸನ), ರೇವಣಕಾ (ಆಂಧ್ರಪ್ರದೇಶ), ರೇವಣಕಾಲು, ಶಿವಮಂಡಲ (ಆಂಧ್ರಪ್ರದೇಶ), ಮಹೇಶ್ವರ ಮತಾನ್ (ಆಂಧ್ರಪ್ರದೇಶ), ಲಿಂಗೋದ್ಭವಂ (ಆಂಧ್ರಪ್ರದೇಶ), ಮಹೇಶ್ವರಧರ್ಮಂ (ಕೊಪ್ಪಳ ಜಿಲ್ಲೆಯ ಕಲ್ಲೂರ), ಲಿಂಗಕ್ಕೆ ಹಸ್ತೋದಕ (ವಿಜಾಪುರ ಜಿಲ್ಲೆ ಚೂರ್ಗಿ), ಶರಣೈಕ (ಸಿಂದಗಿಕಾ ಕಡ್ಲೆವಾಡ), ವಿಭೂತಿಗೌರ, ಶರಣಾ (ಬನವಾಸಿ), ಶ್ರೀಮದೇಶಿಕ ಷಟಸ್ಥಲ ಚಕ್ರವರ್ತಿ ವಿರಕ್ತ ಶಿಖಾಮಣಿ (ಹಾಸನ ಜಿಲ್ಲೆಯ ಹುಲಕುಂದ), ವೀರಶೈವಾಚಾರ (ಆಂಧ್ರ), ಶಿವದ್ರೋಹಿ, ಲಿಂಗದ್ರೋಹಿ, ಗುರುದ್ರೋಹಿ (ಆಂಧ್ರ), ಲಿಂಗಿಗಳಂ (1034 ಶಿಕಾರಿಪುರ ಶಾಸನ), ಲಿಂಗಮ–ನೀ–ಧರ್ಮವಂ (1113–ಶಿಕಾರಿಪುರ ತಾ. ಬಳ್ಳಿಗಾವಿ ಶಾಸನ), ಲಿಂಗಿ ಲಿಂಗಿ ಜನ ಸನ್ನಿಧಿಯೊಳ್ ಶಿವಾಗಮಗಳಂ ನಿರಂತರಂ, ಲಾಕುಳಾಗಮರು, ಅಸಂಖ್ಯಾತ ಮಹಾಗಣಂಗಳು (ಅರಸೀಕೆರೆ ಶಾಸನ), ಶಿವಧರ್ಮ (ಹಾಸನ ಜಿಲ್ಲೆಯ ಶಾಸನ) ಲಿಂಗಿದೆರಿಗೆ ಮುಂತಾದ ಹೆಸರುಗಳು ಕಾಣುತ್ತವೆ. ಈ ಹೆಸರುಗಳಿಂದ 12ನೇ ಶತಮಾನದ ಮೊದಲು ವೀರಶೈವದ ಹೆಸರಿಗಿಂತ ಈ ಮೇಲಿನ ವಿಭಿನ್ನ ಹೆಸರುಗಳು ಶಿವಮೊಗ್ಗ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದ್ದುದು ತಿಳಿಯುತ್ತದೆ.

ವಿಜಯನಗರ ಕಾಲದಲ್ಲಿನ ಈ ಮತದ ಬಗ್ಗೆ ಅನೇಕರು ಅಧ್ಯಯನ ಮಾಡಿದ್ದಾರೆ. ಹೊಸ ಹೊಸ ವಿಷಯಗಳನ್ನು ಹೊರ ತಂದಿರುವರು. ಈ ಮತದ ಆಕರಗಳಲ್ಲಿ ಕಾಣುವ ಸಾಂಸ್ಕೃತಿಕ ಪುರಾವೆಗಳನ್ನು ಸ್ಮಾರಕಗಳನ್ನು ವಾಸ್ತುಶಿಲ್ಪಕಲೆಯ ದೇವಾಲಯ–ಮಠ ಮಾನ್ಯಗಳನ್ನು ಅವಲೋಕಿಸಿದಾಗ ಅದರಲ್ಲಿ ಕೆಲವು ಕುತೂಹಲಕರ ಸಂಗತಿಗಳು ಹೊರಬಂದಿವೆ. ಅಂಥವುಗಳಲ್ಲಿ ಸಾಹಿತ್ತಿಕ ವಿಷಯಗಳನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ. ಅದರಲ್ಲಿ ಈ ಮತದ ದೇವರು–ದೇವಾಲಯ, ಮಠಗಳು, ಇಷ್ಟಲಿಂಗ ಪೂಜೆ, ವಾದ–ವಿವಾದ ಮುಂತಾದ ವಿಷಯಗಳು ಒಳಗೊಂಡಿವೆ.

ಸಾಹಿತ್ಯ : ವಿಜಯನಗರದ ನಾಲ್ಕು ಅರಸು ಮನೆತನಗಳಲ್ಲಿ ಸಂಗಮ ಮನೆತನದವರು ವೀರಶೈವ ಧರ್ಮದ ಬೆಳವಣಿಗೆಗೆ ನೀಡಿದಷ್ಟು ರಾಜಾಶ್ರಯವನ್ನು ಮತ್ತಾವ ಮನೆತನದವರು ನೀಡಿದ್ದು ಕಾಣುವುದಿಲ್ಲ. ಈ ಮನೆತನದಲ್ಲಿ ಪ್ರೌಢದೇವರಾಯನು ನೀಡಿದ ಪ್ರೋತ್ಸಾಹದ ಫಲವಾಗಿ ಆತನ ಅನೇಕ ದಂಡಾಧಿಪತಿಗಳು, ರಾಜ್ಯದಲ್ಲಿನ ಮಠಾಧಿಪತಿಗಳು, ಅನುಭಾವಿ ವಿರಕ್ತರು ವಚನ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿದರು. ನೂತನ ಸಾಹಿತ್ಯವನ್ನು ರಚನೆ ಮಾಡಿದರು. ಪ್ರೌಢದೇವರಾಯನ ಆಸ್ಥಾನದಲ್ಲಿದ್ದ ಮಹಾಪ್ರಧಾನಿ ಲಕ್ಕಣ ದಂಡೇಶನು ವೀರಶೈವ ಮತದವನಾಗಿದ್ದಾನೆ. ಅದರಲ್ಲಿ ಜಕ್ಕಣ ದಣ್ಣನಾಯಕನೂ ಸೇರಿದ್ದಾನೆ. 12ನೇ ಶತಮಾನದಲ್ಲಿ ಬಸವಾದಿ ಪ್ರಮಥರು ರಚಿಸಿದ ವಚನ ಸಾಹಿತ್ಯವು ವಿವಿದೆಡೆಗಳಲ್ಲಿ ಚದುರಿ ಹೋಗಿದ್ದವು. ಈ ಅವಧಿಯಲ್ಲಿ ಅಮರಗಣಂಗಳಿಂದ ಶಿವಜ್ಞಾನ ಪ್ರದೀಪಿಕಾ ಮತ್ತು ಶಿವಜ್ಞಾನ ಸಮುಚ್ಛಯ ಮುಂತಾದ ಕೃತಿಗಳು ರಚನೆ ಆದವು. ಮೂಲೆ ಗುಂಪಾಗಿದ್ದ ವಚನ ಸಾಹಿತ್ಯವನ್ನು ನೂರೊಂದು ವಿರಕ್ತರು ಸಂಗ್ರಹಿಸಿದರು. ಸಂಕಲನ ಮಾಡಿದರು. ಟೀಕೆ, ವ್ಯಾಖ್ಯಾನ ಮತ್ತು ಸಂಪಾದನೆಯನ್ನು ಮಾಡಿದರು. ಇದೊಂದು ಈ ಮತಕ್ಕೆ ದೊರೆತ ಸಂಗಮ ವಂಶದ ಅರಸರ ಬಹುದೊಡ್ಡ ಕೊಡುಗೆಯೆಂದು ಚಿಂತಕರು ಹೇಳುವರು.

ಚಾಮರಸನು ಈ ಅವಧಿಯಲ್ಲಿ (1430) ಪ್ರಭುಲಿಂಗ ಲೀಲೆ ಮುಂತಾದವುಗಳನ್ನು ರಚಿಸದನು. 101 ವಿರಕ್ತರು ಅವರಲ್ಲಿ ಕಲ್ಲುಮಠದ ಪ್ರಭುದೇವರೂ ಮತ್ತು ಮಗ್ಗೆಯ ಮಾರಿದೇವ ಮುಂತಾದವರು ಹಾಗೂ ತೋಂಟದ ಸಿದ್ಧಲಿಂಗ ಯತಿಗಳು, ವಿಜಯನಗರ ರಾಜಧಾನಿ ಹಂಪಿಯಲ್ಲಿದ್ದು ಈ ಮತವನ್ನು ಉದ್ಧಾರ ಮಾಡಲು ಕಾರಣರಾದರು. ಅಲ್ಲಲ್ಲಿ ಈ

ಮತದ ಯತಿವರ್ಯರೂ ಈ ಮತವನ್ನು ಬೋಧಿಸಿ ಜನರಲ್ಲಿ ಜಾಗೃತಿಯನ್ನು ಮೂಡಿಸಿದರು. ಮಹಾಲಿಂಗದೇವನು ಸಂಪಾದಿಸಿದ ಏಕೋತ್ತರ ಶತಸ್ಥಲ ಕೃತಿಯಲ್ಲಿ ನಾಲ್ಕು ಅಧ್ಯಾಯಗಳಿವೆ. (1475) ಜಕ್ಕಣಾಚಾರ್ಯನು ನೂರೊಂದು ಸ್ಥಲ ಕೃತಿಯನ್ನು ರಚಿಸಿದನು. ಈತನ ಈ ಕೃತಿಗೆ ಶ್ರೀ ಗಿರೀಂದ್ರ ಟೀಕೆ ಬರೆದನು. ಕುಮಾರ ಬಂಕನಾಥ ಪ್ರಭುದೇವರ ಷಟಸ್ಥಲ ಸಂಬಂಧಿಸಿ 694 ವಚನಗಳಿಗೆ ಟೀಕೆ ಬರೆದಿದ್ದಾನೆ. ಕಲ್ಲುಮಠದ ಪ್ರಭುದೇವನು ಲಿಂಗಲೀಲಾವಿಲಾಸ ಚಾರಿತ್ರ ಬರೆದನು. ಗುಬ್ಬಿಯ ಮಲ್ಲಣಾರ್ಯ(1430)ರು ಪುರಾಣಕಾರ ಇತ್ಯಾದಿ ಕೃತಿ ಬರೆದರು(?).ಪಂಚಗಣಾಧೀಶ್ವರರ ಕೊಡುಗೆಗಳು ಅಪಾರವೆನಿಸಿವೆ. ಅವರ ಸ್ಥಾನಗಳು ಇಂದು ಜಾಗೃತ ಸ್ಥಳಗಳಾಗಿವೆ. ಅವುಗಳು ಕೊಟ್ಟೂರಿನ ಬಸವೇಶ್ವರ (ಕೊಟ್ಟೂರೇಶ್ವರ), ನಾಯಕನಟ್ಟಿಯ ತಿಪ್ಪೇಸ್ವಾಮಿ, ಹರಪನಹಳ್ಳಿಯ ಕೆಂಪೇಶ, ಅರಸೀಕೆರೆಯ ಕೋಲಶಾಂತೇಶ ಮತ್ತು ಕೂಲಹಳ್ಳಿಯ ಮದ್ದಾನೇಶ್ವರರ ಮಠಗಳಾಗಿವೆ. ಅವುಗಳ ಹಬ್ಬ–ಉತ್ಸವಗಳಲ್ಲಿ ಹರಿಜನರು ಪಾಲ್ಗೊಳ್ಳುವುದು ವಿಶೇಷವೆನಿಸಿದೆ. ಸ್ವಲ್ಪ ಭಿನ್ನ ಆಚರಣೆ ಉಜ್ಜಯಿನಿ ಪೀಠದಲ್ಲೂ ಕಾಣುತ್ತದೆ.

ವೀರಶೈವ ಸಾಹಿತ್ಯದಲ್ಲಿ ಶಿವಯೋಗಿ ಶಿವಾಚಾರ್ಯರ ಸಿದ್ಧಾಂತ ಶಿಖಾಮಣಿಯು ವೀರಶೈವರ ಧರ್ಮಗ್ರಂಥವೆನಿಸಿದೆ. ಲಕ್ಕಣ ದಂಡೇಶನು ಶಿವತತ್ವ ಚಿಂತಾಮಣಿಯನ್ನು 1428 ರಲ್ಲಿ ರಚಿಸಿದನು. ವಿರೂಪಾಕ್ಷ ಪಂಡಿತನು ರಚಿಸಿದ 13 ಕೃತಿಗಳು ಮಹತ್ವದ್ದೆನಿಸಿವೆ. 1398 ರಲ್ಲಿ ಈತನು ಹಂಪಿಯ ಹೇಮಕೂಟದಲ್ಲಿ ವಿರೂಪಾಕ್ಷಸಿದ್ಧ ಶ್ರೀಪಾದ ಶ್ರೀವಲ್ಲಭ ದೇವಾಲಯವನ್ನು ಕಟ್ಟಿಸಿದನಂತೆ. ಮಹಾಲಿಂಗದೇವ, ಆದಯ್ಯ ಇನ್ನಿತರರು ಲಕ್ಷ್ಮೇಶ್ವರ (ಪುಲಿಗೆರೆ)ದವರಾಗಿದ್ದಾರೆ. ಇವರಲ್ಲದೆ ಇನ್ನಿತರ ವೀರಶೈವ ಯತಿಗಳು ಹಂಪಿಯಲ್ಲೇ ನೆಲಸಿ ತಮ್ಮ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿದರು. ಈ ಅವಧಿಯಲ್ಲೇ (14ನೇ ಶತಮಾನವೆನ್ನುವರು) ಬಸವ ಪುರಾಣ ಮೊದಲು ತೆಲುಗು ಭಾಷೆಯಲ್ಲಿ ನಂತರ ಕನ್ನಡ ಭಾಷೆಯಲ್ಲಿ ರಚನೆ ಆದವು. ಹೀಗೆ ರಾಜಾಶ್ರಯದಿಂದ ವೀರಶೈವ ಸಾಹಿತ್ಯ ರಚನೆ ಆಗಿದೆ. ಪ್ರಚಾರ ವರ್ಗದವರಾದ ಧರ್ಮ ಪ್ರವರ್ಥಕರಿಂದ ಈ ಮತದ ಆಚಾರ–ವಿಚಾರ, ತತ್ವ, ಸಿದ್ಧಾಂತಗಳು ಈ ಅವಧಿಯಲ್ಲಿ ಸ್ವಲ್ಪ ಸುಧಾರಣೆ ಆಗಿವೆ ಮತ್ತು ನಾನಾಕಡೆಗೆ ವಿಸ್ತರಿಸಲು ಸಾಧ್ಯವಾಗಿದೆ.

ಗದಗ ಜಿಲ್ಲೆಯ ಡಂಬಳವು ಎಡೆಯೂರಿನ ತೋಂಟದ ಸಿದ್ಧಲಿಂಗೇಶ್ವರ ಮಠವು ಆಧುನಿಕವಾಗಿ ಬಹುದೊಡ್ಡ ಹೆಸರನ್ನು ಗಳಿಸಿದೆ. ಆದಿಲ್‌ಷಾಹಿಗಳ ರಾಜಧಾನಿಯಾಗಿದ್ದ ವಿಜಾಪುರವು ಇಂದು ಜಿಲ್ಲಾ ಕೇಂದ್ರವಾಗಿದೆ. ಆಗ ಈ ಜಿಲ್ಲಾ ಪ್ರದೇಶವೂ ಆದಿಲ್‌ಷಾಹಿಗಳ ಅಧೀನದಲ್ಲಿತ್ತು. ಈ ಜಿಲ್ಲೆಯ ಸಿಂದಗಿಯು 14–16ನೇ ಶತಮಾನದಲ್ಲಿ ಈ ಯತಿಗಳ ಬಹುದೊಡ್ಡ ಕೇಂದ್ರವಾಗಿದ್ದಿತ್ತೆಂದರೆ ನಂಬಲು ಕಷ್ಟವಾಗುತ್ತದೆ. ಈ ವಿಷಯವು ಯಾವ ಸಾಹಿತ್ಯದಲ್ಲೂ ಉಲ್ಲೇಖವಾಗಿಲ್ಲ. ಅದೇ ರೀತಿಯಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕೂ ಸಹ ಆದಿಲ್‌ಷಾಹಿಗಳ ಅಧೀನಕ್ಕೆ ಸೇರಿತ್ತು. ಆಗ ಆ ತಾಲೂಕಿನ ಪುರವು ಸಹ ಈ ಮತದ ಮತ್ತೊಂದು ಬಹುದೊಡ್ಡ ಕೇಂದ್ರವಾಗಿತ್ತು. ಇನ್ನು ಶೈವ–ವೀರಶೈವ ಸಮ್ಮಿಳನದ ಕೇಂದ್ರವನ್ನಾಗಿ ಬೆಳೆಸಿದವರು ಓಹಿಲ. ಈತನ ಚರಿತ್ರೆಯು ವೀರಶೈವ ಸಾಹಿತ್ಯದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ.

ವಚನಗಳಲ್ಲಿ ವೀರಶೈವ/ಲಿಂಗಾಯತ ಮತದವರು ತಮ್ಮ ಪುಣ್ಯ ಪ್ರಾಪ್ತಿಗಾಗಿ ಸದ್ಗತಿ ಪಡೆಯಲು ಲಿಂಗಾರ್ಚನೆ, ಶಿವಾರ್ಚನೆ, ಜಂಗಮ ದಾಸೋಹ ಮುಂತಾದವುಗಳನ್ನು ಕೈಕೊಳ್ಳುವರೆಂದು ಸೂಚಿಸಲಾಗಿದೆ. ಇವರು ನಿಷ್ಠಾವಂತ ಶಿವಭಕ್ತರು. ತಮ್ಮ ಧರ್ಮಕ್ಕಾಗಿ ಪ್ರಾಣ ಕೊಡುವವರು. ಈ ಅವಧಿಯಲ್ಲಿ ಶೈವ ಧರ್ಮದ ಕೆಲವು ಆಚರಣೆಗಳು ಸುಧಾರಣೆ ಹೊಂದಿ ದೀರ್ಘಕಾಲ ರಾಜಶಕ್ತಿಯಿಲ್ಲದೆ ಕಂಗಾಲಾಗಿದ್ದ ವೀರಶೈವ ಮತವು ಕ್ರಮೇಣವಾಗಿ ಪ್ರಸಿದ್ಧಿ ಪಡೆಯಿತು. ಕೆಲವರು ವೀರಶೈವವೇ ಶೈವದ ಒಂದು ಶಾಖೆ ಎನ್ನುವರು. ಲಿಂಗಧಾರಣೆಯಿಂದ ಇವರನ್ನು ಲಿಂಗಾಯತರೆಂದೂ ಕರೆಯುವರು.

ಶಿವಲಿಂಗಗಳು :

ಶೈವ ಮತದಲ್ಲಿ ದೇವಾಲಯದಲ್ಲಿಟ್ಟು ಆರಾಧಿಸುವ ಸ್ಥಾವರ ಶಿವಲಿಂಗ ಪರಂಪರೆ ಪ್ರಾಚೀನವಾದದ್ದು. ವೀರಶೈವ ನೆಲೆಗಳಲ್ಲೂ ಇಷ್ಟಲಿಂಗ ಮತ್ತು ಸ್ಥಾವರ ಲಿಂಗ ಪರಂಪರೆಯಿದೆ. ಶಿವಲಿಂಗಗಳನ್ನು ವಿವಿಧ ರೂಪದಲ್ಲಿ ನಿರ್ಮಿಸಿ ಆರಾಧಿಸುವ ಪರಂಪರೆ ಬಹು ಪ್ರಾಚೀನ (ಸು. ಕ್ರಿಪೂ. ಮೂರನೇ ಶತಮಾನದಿಂದ) ಕಾಲದಿಂದ ಬಂದಿದೆ. ಶಿವಲಿಂಗಗಳ

ಮೇಲೆ ಕೆತ್ತಿದ ಬ್ರಹ್ಮಸೂತ್ರ/ನಾಡಿಯ ಶೈಲಿಯಿಂದ ಅವುಗಳ ಕಾಲಮಾನವನ್ನು ಗುರುತಿಸುವ ಪ್ರಯತ್ನ ಮೊದಲು ಮಾಡಿದವರು, ಗುರುಗಳಾದ ಡಾ. ಅ. ಸುಂದರ ಅವರು. ಅವರು ಸಾತವಾಹನರ ಕಾಲದಿಂದ ವಿಜಯನಗರದ ಕಾಲದವರೆಗಿನ ಶಿವಲಿಂಗಗಳಲ್ಲಿರುವ ಬ್ರಹ್ಮಸೂತ್ರಗಳ ಶೈಲಿಗಳನ್ನು ವಿವರಿಸಿದ್ದಾರೆ. ಶಿವಲಿಂಗಗಳನ್ನು ವಿಜಯನಗರ ಕಾಲಾವಧಿಯಲ್ಲಿ ಸ್ಥಾವರಲಿಂಗ, ಪಂಚಲಿಂಗ, ಸಹಸ್ರಲಿಂಗ, ಕೋಟಿ ಲಿಂಗಗಳನ್ನಾಗಿ ರಚಿಸಿ ಆರಾಧಿಸುವ ಪರಂಪರೆ ಹೆಚ್ಚು ವ್ಯಾಪಿಸಿದೆ. ಅಂಥವುಗಳು ಹಂಪಿ, ಪುರ, ಸಿಂದಗಿ, ಸೋಂದಾ, ಬಸವಕಲ್ಯಾಣ ಮುಂತಾದ ಕಡೆಗಳಲ್ಲಿವೆ.

ಪಂಚಮುಖ ಲಿಂಗಗಳು ಶಿವನ ಐದು ಮುಖಗಳಾದ ಈಶಾನ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜಾತರನ್ನು ಹೆಸರಿಸುತ್ತವೆ. ಈ ಅವಧಿಯಲ್ಲಿ ಮೂರು ಶೈಲಿಯಲ್ಲಿ ಪಂಚಲಿಂಗಗಳು ಕಾಣುತ್ತವೆ ಎಂದು ಡಾ. ಸಿ.ಎಸ್. ವಾಸುದೇವ ಅವರು ಮೊದಲು ಗುರ್ತಿಸುವರು. ಒಂದು ಚತುರಸ್ರಾಕಾರದ ಪ್ರನಾಳವುಳ್ಳ ಪಾಣಿಪೀಠದ ಮೇಲೆ ಐದು ಲಂಬಾಕಾರದ ಲಿಂಗಗಳು. ಈ ಐದು ಲಿಂಗಗಳು ಎತ್ತರವಾಗಿವೆ ಮತ್ತು ಒಂದಕ್ಕೊಂದು ಪರಸ್ಪರ ಅಂಟಿಕೊಂಡಿವೆ. ಈ ಪಂಚಲಿಂಗಗಳು ಪಂಚತತ್ವ ಮತ್ತು ಪಂಚಭೂತಗಳಾದ ಅಗ್ನಿ, ವಾಯು, ನೀರು, ಭೂಮಿ ಮತ್ತು ಆಕಾಶಗಳನ್ನು ಪ್ರತಿನಿಧಿಸುತ್ತವೆನ್ನುವರು. ಅದು ವಿಷ್ಣುಧರ್ಮೋತ್ತರದಲ್ಲೂ ಉಲ್ಲೇಖವಾಗಿದೆ. ಪಂಚಲಿಂಗವುಳ್ಳ ಪಾಣಿಪೀಠಕ್ಕೆ ಕೆಲವೊಮ್ಮೆ ಪ್ರನಾಳವಿರುವುದಿಲ್ಲ. ಅಂಥವುಗಳು ವಿವಿದೆಡೆಗಳಲ್ಲಿ ಕಾಣಿಸಿವೆ. ಕಮಲಾಪುರದ ವಸ್ತು ಸಂಗ್ರಹಾಲಯದಲ್ಲಿ (ಎ.ಎಸ್.ಐ.) ಪಂಚಲಿಂಗ ಜೊತೆ ಮಾರುತಿಯುಳ್ಳ ಶಿಲ್ಪವಿದ್ದು ಅದು ಅಪರೂಪದ್ದಾಗಿದೆ. ಹಂಪಿ ಪರಿಸರದಲ್ಲಿ ಮತ್ತು ಇನ್ನಿತರ ಕಡೆಗಳಲ್ಲಿ (ಬಸವಕಲ್ಯಾಣ–ಬೀದರ ಜಿಲ್ಲೆ) ಏಕಪಾಣಿಪೀಠದ ಮೇಲೆ ಪಂಚಲಿಂಗಗಳನ್ನು ನಿರ್ಮಿಸಿದ ಶಿಲ್ಪಗಳಿವೆ. ಈ ರೀತಿಯ ಶಿವಲಿಂಗಗಳನ್ನು ನಾನು ಮತ್ತು ಇನ್ನಿತರರು ಸೇರಿ (ಕೋಟಿ ಶಿವಲಿಂಗಗಳ ತಾಣ–ಪುರ ಕೃತಿ) ಮತ್ತು ಡಾ. ಸಿ.ಟಿ.ಎಂ. ಕೊಟ್ರಯ್ಯ, ಡಾ. ಕೆ.ರವೀಂದ್ರನಾಥ, ಡಾ.ಸಿ.ಎಸ್. ವಾಸುದೇವ, ಡಾ. ಟಿ.ಎಂ. ಮಂಜುನಾಥ, ಡಾ. ಸುರೇಶ ಮುಂತಾದವರು ಅಧ್ಯಯನ ಮಾಡಿರುವರು (ವಿಜಯನಗರ ಅಧ್ಯಯನ ಮಾಲೆ–12, ಪು. 231–243.)

ಹಂಪಿಯಲ್ಲಿ ಅನೇಕ ಶಾಸನೋಕ್ತ ಶಿವಲಿಂಗಗಳಿವೆ. ಈ ಲಿಂಗಗಳಲ್ಲಿ ಅನೇಕ ವಿಧಗಳಿವೆ. ಅವುಗಳು ಸರ್ವಾಂಗ ಲಿಂಗ, ಯೋಗಾಂಗಲಿಂಗ, ನಾಗಭೂಷಣ ಲಿಂಗ, ಶಿವಲಿಂಗ, ಮಹಾಲಿಂಗ, ಕೋಟಿಶಂಕರಲಿಂಗ, ಅಷ್ಟೋತ್ತರಲಿಂಗ (ನೂರೆಂಟು ಶಿವಲಿಂಗಗಳು) ಮತ್ತು ಕಾಳಹಸ್ತಿ ಲಿಂಗಗಳೆಂಬ ಪಟ್ಟಿಯನ್ನು ಡಾ. ಕೆ. ರವೀಂದ್ರನಾಥರು ನೀಡಿದ್ದಾರೆ (ವಿಜಯನಗರ ಅಧ್ಯಯನ, ಮಾಲೆ–9, ಪು. 164–67). ಕೋಟಿ ಲಿಂಗಗಳು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಪುರದ ಸೋಮೇಶ್ವರ ದೇವಾಲಯದಲ್ಲಿರುವುದು ವಿಶೇಷವೆನಿಸಿದೆ.

ಸಿ.ಟಿ.ಎಂ. ಕೊಟ್ರಯ್ಯನವರು ಹಂಪಿಯಲ್ಲೊಂದು ಸಿದ್ಧರಾಮೇಶ್ವರ ಪ್ರಣೀತ ಲಿಂಗಕ್ಕೆ ಲಿಂಗವೇ ಪೀಠವಾಗಿರ್ಪ ಯೋಗಲಿಂಗ ಇರುವುದನ್ನು ಗುರುತಿಸಿದ್ದಾರೆ. (ವಿಜಯನಗರ ಅಧ್ಯಯನ ಮಾಲೆ–1, ಪು. 20–25). ಅವರು ಹಂಪಿಯ ಉದ್ದಾನ ವೀರಭದ್ರ ದೇವಾಲಯದಲ್ಲಿ ಸರ್ವಾಂಗ ಲಿಂಗವಿರುವುದನ್ನು ಬೆಳಕಿಗೆ ತಂದಿದ್ದಾರೆ. ಈ ಲಿಂಗವು ಯಂತ್ರದಂತೆ ತ್ರಿಕೋನಾಕೃತಿಯಲ್ಲಿದೆ. ಅದಕ್ಕೆ ಮೂರು ಚಪ್ಪಟೆ ಮುಖಗಳು. ಮೊದಲ ಮುಖದಲ್ಲಿ ಸ್ವಾದಿಷ್ಠಾನ ಚಕ್ರಗಳಿವೆ. ಎರಡನೆಯ ಮುಖದಲ್ಲಿ ಮಣಿಪೂರ–ಅನಾಹುತ ಚಕ್ರಗಳಿವೆ. ಮೂರನೇ ಮುಖದಲ್ಲಿ ವಿಶುದ್ಧ–ಆಜ್ಞಾ ಚಕ್ರಗಳಿವೆ. ಅದರಲ್ಲಿ ವೀರಶೈವ ಸಿದ್ಧಾಂತವನ್ನು ಸಾರುವ ಆರು ಸೋಪಾನಗಳು ಷಠಸ್ಥಲಗಳಾಗಿವೆ. ಅದನ್ನೇ ಸರ್ವಾಂಗ ಲಿಂಗವೆಂದು ಅವರು ಗುರುತಿಸಿರುವುದು ಸ್ತುತ್ಯರ್ಹವಾಗಿದೆ. ಈ ಮಾಹಿತಿಗಳನ್ನು ಅವಲೋಕಿಸಿದಾಗ ಈ ಅವಧಿಯಲ್ಲಿ ಎಲ್ಲಾ ಸ್ಥಾವರಲಿಂಗಗಳಲ್ಲಿ ಶುದ್ಧಶೈವ ಪರಂಪರೆಯ ಲಕ್ಷಣವಿದೆ. ಇನ್ನೊಂದು ಇಷ್ಟಲಿಂಗದ ವೀರಶೈವ ಪರಂಪರೆಯ ಲಕ್ಷಣವಾಗಿದೆ. ಈ ಹಿನ್ನೆಲೆಯಲ್ಲಿ ವೀರಶೈವ/ಲಿಂಗಾಯತ ನೆಲೆಗಳ ಬಗ್ಗೆ ಸಮಗ್ರ ಅಧ್ಯಯನವನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ವೀರಭದ್ರ : ವೀರಶೈವ ಮತದ ಧಾರ್ಮಿಕ ಆಚರಣೆಯಲ್ಲಿ ವೀರಭದ್ರನು ಅನೇಕರಿಗೆ ಆರಾಧ್ಯ ದೈವನಾಗಿದ್ದಾನೆ. ಈತನು ಈ ಮತದ ಅನೇಕ ಭಕ್ತರಿಗೆ ಮನೆದೇವರೂ ಆಗಿರುವನು. ವೀರಭದ್ರನ ಭಕ್ತರಾದ ವೀರಶೈವರು ತಮ್ಮ ಮನೆಯ ಮದುವೆ ಇನ್ನಿತರ ಸಮಾರಂಭಗಳಲ್ಲಿ ಗುಗ್ಗಳವನ್ನು ಇಂದಿಗೂ ಏರ್ಪಡಿಸುವರು. ಗುಗ್ಗಳದ ಪ್ರಾಚೀನತೆ ಬಾದಾಮಿ ಚಾಲುಕ್ಯರ

ಅವಧಿಯಿಂದ ಕಾಣುವುದು. ಗುಗ್ಗಳ ಆಚರಿಸುವಾಗ ವೀರಭದ್ರ ಸ್ವಾಮಿಯ ಮಹಾತ್ಮೆಯನ್ನು ಪುರವಂತರು ಹೇಳುವರು. ಆಗ ಅಗ್ನಿಕುಂಡವನ್ನು ಹಾಯುವರು. ವೀರಭದ್ರನ ಹುಟ್ಟು ಬೆಳವಣಿಗೆಯ ಚರಿತ್ರೆಯನ್ನು ನೆನೆದಾಗ ಆತನು ಶಿವನ ತಾಂಡವ ನೃತ್ಯದ ಬೆವರಿನಿಂದ ಉದ್ಭವನಾದವನೆಂದು ತಿಳಿದಿದ್ದೇವೆ. ವೀರಭದ್ರನ ಶಿಲ್ಪಗಳನ್ನು ಅನೇಕರು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಡಾ. ಬಾಲಸುಬ್ರಹ್ಮಣ್ಯಂ, ಎಂ.ಜಿ. ನಾಗರಾಜ, ಡಾ. ಶಿವರಾಜ ಠೋಕರೆ (ಬೀದರ), ಡಾ. ಶಿವರುದ್ರಪ್ಪ, ಡಾ. ಎನ್.ಎಸ್. ವೀರೇಶ ಮುಂತಾದವರು ಮುಖ್ಯರಾಗಿದ್ದಾರೆ. ಶಿಲ್ಪಗಳಲ್ಲಿ ವೀರಭದ್ರನು ಸಪ್ತಮಾತೃಕೆಯರ ಶಿಲ್ಪಗಳಲ್ಲಿ ಒಂದು ಅಂಚಿನಲ್ಲಿ ಏಳು ದೇವತೆಯರ ರಕ್ಷಣಾ ಅಧಿಪತಿಯಾಗಿ ಕುಳಿತಿರುವುದನ್ನು ತೋರಿಸಲಾಗಿದೆ. ಇನ್ನೊಂದು ಬದಿಯಲ್ಲಿ ಗಣೇಶನು ಕುಳಿತಿರುತ್ತಾನೆ. ಅಲ್ಲಿ ಆತನು ಕೈಗಳಲ್ಲಿ ವೀಣೆಯನ್ನು ಹಿಡಿದಿರುವನು. ವಿಜಯನಗರಪೂರ್ವ ಕಾಲಾವಧಿಯಲ್ಲಿ ವೀರಭದ್ರನನ್ನು ದ್ವಿಭುಜಧಾರಿಯನ್ನಾಗಿ ಕೆಲವೆಡೆಗಳಲ್ಲಿ ತೋರಿಸಲಾಗಿದೆ. ಈತನಿಗಾಗಿ ಒಂದು ಪ್ರತ್ಯೇಕ ಗರ್ಭಗೃಹವನ್ನು ನಿರ್ಮಿಸಿ ಅಲ್ಲಿ ಈತನ ವಿಗ್ರಹವನ್ನು ಪ್ರತಿಷ್ಠಾಪಿಸಿ ಆರಾಧಿಸಿದ ಉದಾಹರಣೆಗಳಿವೆ. ದೇವಾಲಯಗಳ ಗರ್ಭಗೃಹದ ಭಿತ್ತಿ ಹೊರಭಾಗದಲ್ಲಿ ಕಿರುಗೂಡನ್ನು ಮಾಡಿ ಅಲ್ಲಿ ಈತನ ಕಿರು ವಿಗ್ರಹವನ್ನು ನಿರ್ಮಿಸಲಾಗಿದೆ. ಉದಾಹರಣೆಗೆ ಉಜ್ಜಯಿನಿ ಪೀಠದ ಶ್ರೀ ಮರುಳಸಿದ್ಧ ದೇವಾಲಯದ ಐದು ಗರ್ಭಗೃಹಗಳಲ್ಲಿ ಒಂದು ಈತನದ್ದಾಗಿವೆ. ಇದು ಸೇವುಣ ಅಥವಾ ಹೊಯ್ಸಳರ ಕಾಲಾವಧಿಯದ್ದಾಗಿದೆ (13ನೇ ಶತಮಾನ). ದ್ವಿಭುಜಧಾರಿ ಆದ ಈತನ ಕೈಗಳಲ್ಲಿ ಕತ್ತಿ ಮತ್ತು ಗುರಾಣಿಗಳನ್ನು ಹಿಡಿದಿದ್ದಾನೆ.

ವಿಜಯನಗರ ಕಾಲಾವಧಿಯಲ್ಲಿ ವೀರಭದ್ರನ ಆರಾಧನೆಗೆ ಹೆಚ್ಚು ಮಹತ್ವ ಬಂದಿದ್ದು ಕಾಣುತ್ತದೆ. ಅಂಥವುಗಳನ್ನು ಹಂಪಿ, ಉಜ್ಜಯಿನಿ, ಲಕ್ಷ್ಮೇಶ್ವರ, ರಾಚೋಟಿ (ಆಂಧ್ರ), ಎಡೆಯೂರು, ಬಾಳೆಹೊನ್ನೂರು, ಗೊಡಚಿ ಮುಂತಾದ ಕಡೆಗಳಲ್ಲಿ ಕಾಣಬಹುದು. ಈ ಅವಧಿಯ ಶಿಲ್ಪಗಳಲ್ಲಿ ವೀರಭದ್ರ ದೇವರ ಜೊತೆ ಆತನ ಪತ್ನಿ ಕಾಳಮ್ಮ/ಭದ್ರಕಾಳಿಯನ್ನು ತೋರಿಸಲಾಗಿದೆ. (ಈಕೆಯನ್ನು ವೀರಭದ್ರನ ಶಿಲ್ಪದಲ್ಲಿ ತೋರಿಸಲಾಗಿದೆ). ಆದರೆ ಚಿಂಚಲಿ (ಗದಗ ಜಿಲ್ಲೆಯ ಮುಳಗುಂದ ಹತ್ತಿರ) ಬಂಡೆಗಲ್ಲಿನಲ್ಲಿ ವೀರಭದ್ರನ ಜೊತೆ ಲಜ್ಜಾಗೌರಿಯನ್ನು ತೋರಿಸಲಾಗಿದೆ. ಉಜ್ಜಯಿನಿ ಶ್ರೀ ಮರುಳಸಿದ್ದ ದೇವಾಲಯದ ಮಹಾಮಂಟಪದಲ್ಲಿ ದೊಡ್ಡದಾದ ವೀರಭದ್ರನ ಮೂರ್ತಿಯಿದೆ. ಅದರ ಚತುರ್ಭುಜಧಾರಿ ಕಿರೀಟಮುಕುಟದಲ್ಲಿ ಕಿರುಶಿವಲಿಂಗವಿದೆ. ಅಲ್ಲಿನ ಪೂರ್ವ ಪ್ರಾಕಾರದ ಒಳಗೋಡೆಯ ಮೇಲೆ ಲಜ್ಜಾಗೌರಿಯ ಉಬ್ಬುಶಿಲ್ಪವಿದೆ.

ವಿಜಯನಗರ ಕಾಲಾವಧಿಯಲ್ಲಿನ ವೀರಭದ್ರನ ಶಿಲ್ಪಗಳಲ್ಲಿ ವೀರಭದ್ರನನ್ನು ಚತುರ್ಭುಜನನ್ನಾಗಿ ತೋರಿಸಲಾಗಿದೆ. ಕೈಗಳಲ್ಲಿ ಖಡ್ಗ, ಡಮರು, ಬಾಣ ಮತ್ತು ಆಯತಾಕಾರದ ಗುರಾಣಿಗಳನ್ನು ಹಿಡಿದಿರುವುದು ಸಾಮಾನ್ಯ. ಕೆಲವೊಮ್ಮೆ ಕೈಗಳಲ್ಲಿ ಖಡ್ಗ, ಬಿಲ್ಲು, ಬಾಣ ಮತ್ತು ಗುರಾಣಿಗಳನ್ನು ಹಿಡಿದಿದ್ದನ್ನು ತೋರಿಸಲಾಗಿದೆ. ಮುಖದಲ್ಲಿ ತ್ರಿನೇತ್ರ, ಕೋರೆಮೀಸೆ, ಕಿವಿ ಓಲೆ, ಕೈ, ಕಾಲು, ಕುತ್ತಿಗೆಗಳಲ್ಲಿ ರುದ್ರಾಕ್ಷಿ, ಕಿರೀಟದಲ್ಲಿ ಕಿರುಶಿವಲಿಂಗ ಇತ್ಯಾದಿಗಳನ್ನು ಧರಿಸಲಾಗಿದೆ (ಬಾಳೆಹೊನ್ನೂರು, ಹಂಪಿ ಇತ್ಯಾದಿ). ಕೆಲವೊಮ್ಮೆ ಈತನಿಗೆ ಯಜ್ಞೋಪವೀತವನ್ನು ಧರಿಸಲಾಗಿದೆ. ಕೆಲವೊಮ್ಮೆ ಕಿರು ಶಿವಲಿಂಗಧಾರಣೆ ಇರುವುದಿಲ್ಲ. ಕೆಲವು ಶಿಲ್ಪಗಳಲ್ಲಿ ವೀರಭದ್ರನ ಎದೆಯ ಮೇಲೆ ಕಿರು ಶಿವಲಿಂಗವನ್ನು ಧರಿಸಲಾಗಿದೆ. ಅಲ್ಲಿ ಆತನನ್ನು ಶ್ರೀ ವೀರಭದ್ರ ಲಿಂಗ ಶ್ರೀವಿರೂಪಾಕ್ಷದೇವ ಮತ್ತು ಶ್ರೀ ವೀರಭದ್ರಡಲಿಂಗಂ' ಎಂದು ಬರೆಯಲಾಗಿದೆ. ಕೆಲವುಗಳಿಗೆ ಮೀಸೆ ಇರುವುದಿಲ್ಲ. ವೀರಭದ್ರನ ಕೆಲವೊಂದು ಬದಿಗೆ ಟಗರು ತಲೆಯುಳ್ಳ ದಕ್ಷನು ಕೈಮುಗಿದು ನಿಂತದ್ದನ್ನು ತೋರಿಸಲಾಗಿದೆ. ವೀರಭದ್ರನು ರುಂಡಮಾಲೆಯನ್ನು ಧರಿಸಿದ್ದಾನೆ. ಹಂಪಿಯ ಉದ್ದಾನ ವೀರಭದ್ರ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ ವೀರಭದ್ರನ ಮೂರ್ತಿಯು ಸುಮಾರು 16 ಅಡಿ ಎತ್ತರವಿದೆ. ಈ ದೇವಾಲಯವನ್ನು ಸದಾಶಿವರಾಯನ ಆಳ್ವಿಕೆಯ ಕಾಲಾವಧಿಯಲ್ಲಿ ಅಳಿಯ ರಾಮರಾಯನ ಸಹೋದರ ವೀರ ತಿಮ್ಮರಾಜಯ್ಯನ ದಳವಾಯಿ ಜಂಗಮಯ್ಯನೆಂಬುವನು ಕಟ್ಟಿಸಿ ಅಲ್ಲಿ ವೀರಭದ್ರ ವಿಗ್ರಹವನ್ನು 1545 ರಲ್ಲಿ ಪ್ರತಿಷ್ಠಾಪಿಸಿದನು. (ಎ.ಆರ್.ಐ.ಇ. 1889, 36, 37; ಎಸ್ 334, 266) ಈತನನ್ನು ಮುದು ವೀರಣ್ಣನೆಂದು ಕರೆಯಲಾಗಿದೆ. ಕೆಲವೆಡೆಗಳಲ್ಲಿ ಮಂಡಿಯೂರಿ ಕುಳಿತ ವೀರಭದ್ರನ ಶಿಲ್ಪಗಳಿವೆ. ದ್ವಿಭುಜಧಾರಿಯಿದ್ದಾಗ ಕೈಗಳಲ್ಲಿ ತ್ರಿಶೂಲ ಮತ್ತು ಖಡ್ಗಗಳಿವೆ. ಹಂಪೆ ಒಂದೇ ಸ್ಥಳದಲ್ಲಿ ಈ ಅವಧಿಯ 34ಕ್ಕೂ ಹೆಚ್ಚು ಕಡೆಗಳಲ್ಲಿ ವೀರಭದ್ರನ ಶಿಲ್ಪ

ದೇವಾಲಯಗಳಿವೆ. ಅವುಗಳು ಮಾತಂಗಪರ್ವತ, ಕೋದಂಡರಾಮ ದೇವಾಲಯದ ಹತ್ತಿರ, ಪ್ರಸನ್ನ ವಿರೂಪಾಕ್ಷ ದೇವಾಲಯ, ಕಮಲಮಹಲ ಹತ್ತಿರ, ಕೃಷ್ಣಾಪುರಪೇಟೆ, ವಿರೂಪಾಕ್ಷೇಶ್ವರ ಮುಂತಾದ ಕಡೆಗಳಲ್ಲಿವೆ.

ಈತನನ್ನು ಕೆಲವೆಡೆಗಳಲ್ಲಿ ವೈಷ್ಣವ ದೇವಾಲಯಗಳಲ್ಲಿ ಪ್ರತಿಷ್ಠಾಪಿಸಲಾಗಿದೆ. ಇದು ವೀರಶೈವ–ವೈಷ್ಣವ ಧರ್ಮದ ಸಮನ್ವಯಆಗಿರಬಹುದು. ವೈದಿಕ ಪರಂಪರೆಯನ್ನು ಅನುಸರಿಸುವ ಕ್ವಾಂಟರು ಅಂದರೆ ಶೆಟ್ಟರೂ ಸಹ ಈ ದೇವರ ಆರಾಧನೆಯನ್ನು ಮಾಡುವುದುಂಟು.

ಕೆಲವೆಡೆಗಳಲ್ಲಿ ಈ ದೇವರು ವಿಭಿನ್ನ ಅಸ್ತ್ರಗಳನ್ನು ಹಿಡಿದಿದ್ದಾನೆ. ಹೊಸಪೇಟೆ ಬಳಿಯ ಜಂಭುಕೇಶ್ವರ ದೇವಾಲಯದಲ್ಲಿನ ವೀರಭದ್ರನು ಅಷ್ಟಭುಜಧಾರಿ. ಆತನ ಎಡಕೈಗಳಲ್ಲಿ ಡಮರು, ಬಾಣ, ಗುರಾಣಿ ಮತ್ತು ಕಪಾಲದ ಬದಲು ಕತ್ತರಿಸಿದ ಮನುಷ್ಯನ ಶಿರಗಳಿವೆ. ಕೆಳಗಡೆ ಬಹುತೇಕ ಭೈರವ ಶಿಲ್ಪದಂತೆ ನಾಯಿಯೊಂದು ಜಿಗಿದು ಕತ್ತರಿಸಿದ ಶಿರದಿಂದ ಹೊರಬೀಳುವ ರಕ್ತವನ್ನು ಕುಡಿಯುತ್ತಿರುತ್ತದೆ. ಬಲಕೈಗಳಲ್ಲಿ ತ್ರಿಶೂಲ, ಪರಶು, ಬಾಣ ಮತ್ತು ಖಡ್ಗಗಳಿವೆ. ತಿಮಲಾಪುರದ ವೀರಭದ್ರನ ಶಿಲ್ಪದಲ್ಲಿ ಯಕ್ಷನನ್ನು(?) ಆತನ ಕಥಾನಿರೂಪಣೆಯಲ್ಲಿ ದಕ್ಷನು ಆಚರಿಸುತ್ತಿದ್ದ ಯಜ್ಞಕುಂಡದ ಕಡೆ ಹೋಗುವುದನ್ನು ಚಿತ್ರಿಸಲಾಗಿದೆ. ದಕ್ಷಬ್ರಹ್ಮನು ಶಿವನನ್ನು ಯಜ್ಞಕ್ಕೆ ಕರೆಯದೆ ಆತನಿಗೆ ಅವಮಾನಿಸಿದ ಪ್ರಸಂಗವನ್ನು ಇದು ಸ್ಮರಿಸಿದೆ.

ಕೆಲವೊಮ್ಮೆ ಚತುರ್ಭುಜಧಾರಿ ವೀರಭದ್ರನ ಕೈಗಳಲ್ಲಿ ಧನಸ್ಸು, ಬಾಣ–ಬತ್ತಳಿಕೆ, ಬಿಚ್ಚುಗತ್ತಿ (ಕತ್ತಿ) ಮತ್ತು ಗಧೆಗಳಿರುವುದು ವಿಶೇಷ. ಕೆಲವೊಮ್ಮೆ ಆತನು ದಕ್ಷನ ತಲೆಯನ್ನು ಕತ್ತರಿಸುತ್ತಿರುವುದನ್ನು ಕಾಣಬಹುದು. ಕೆಲವೆಡೆ ರುಂಡವಿಲ್ಲದ ದಕ್ಷನು ಕೈಮುಗಿದು ಯಜ್ಞಕುಂಡದ ಮುಂದೆ ನಿಂತಿದ್ದಾನೆ. ಕೆಲವೆಡೆಗಳಲ್ಲಿ ವೀರಭದ್ರನನ್ನು ಹೋರಾಡುವ ರೀತಿಯಲ್ಲಿ ತೋರಿಸಲಾಗಿದೆ. ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯದ ದಕ್ಷಿಣ ಪ್ರಾಕಾರ ದ್ವಾರದ ಎಡಬಿತ್ತಿಯ ಗೂಡಿನಲ್ಲಿ ದಶಮುಖ ಮತ್ತು 20 ಕೈಗಳುಳ್ಳ ವೀರಭದ್ರನ ಶಿಲ್ಪವಿದೆ. ಆತನ ತಲೆಯ ಮೇಲೆ ಛತ್ರಿಯಿದೆ. ಒಂದು ಕೈಯಲ್ಲಿ ಖಡ್ಗವಿದೆ. ಇನ್ನೊಂದು ಕೈಯನ್ನು ನಿಂತ ದಕ್ಷನ ಮೇಲೆ ಇಡಲಾಗಿದೆ. ಮತ್ತೊಂದರಲ್ಲಿ ಗುರಾಣಿಯಿದೆ. ಇನ್ನಿತರ ಆಯುಧಗಳು ಉಳಿದ ಕೈಗಳಲ್ಲಿವೆ. ಇದೊಂದು ಅಪರೂಪ ಮಾದರಿಯ ವೀರಭದ್ರನ ಶಿಲ್ಪವಾಗಿದೆ. ಈತನ ಕಿರೀಟದಲ್ಲಿ ಕಿರುಶಿವಲಿಂಗವಿದೆ.

ಒಟ್ಟಾರೆ ಈ ಅವಧಿಯಿಂದ ವೀರಭದ್ರನ ದೇವಾಲಯ ಮತ್ತು ಶಿಲ್ಪಗಳು ವೀರಶೈವ ಮತಬಾಂಧವರ ಆರಾಧನಾ ಕೇಂದ್ರಗಳಾಗಿ ಮುಂದುವರಿದಿವೆ. ಈ ದೇವರ ಆರಾಧನೆಯು ಈ ಅವಧಿಯಲ್ಲಿ ಏಕೆ ಹೆಚ್ಚಾಯಿತು ಎಂಬುದರ ಬಗ್ಗೆ ಚರ್ಚಿಸುವ ಅಗತ್ಯತೆಯಿದೆ. ಈ ಪ್ರಶ್ನೆಯು ಬಂದಾಗ ವೀರಶೈವ ಪರಂಪರೆಯಲ್ಲಿ ಒಂದು ಕಡೆ ಹೇರಳ ವೀರಶೈವ ಸಾಹಿತ್ಯ/ವಚನ ಸಾಹಿತ್ಯ, ಇಷ್ಟಲಿಂಗ ಆರಾಧನೆ, ವಿವಿಧ ರೀತಿಯ ಲಿಂಗಗಳು, ಬಸವಮತ, 101 ವಿರಕ್ತರು, ಯಡೆಯೂರ ಸಿದ್ಧಲಿಂಗ ಯತಿಗಳು, ಮಹೇಶ್ವರಮತ, ಧರ್ಮ, ಲಿಂಗಿಗಳು ವೀರಭದ್ರ ಆರಾಧನೆ, ಪಂಚಾಚಾರ್ಯರು, ಗಣಂಗಳು, ಯತಿಗಳು, ಜಂಗಮರು, ಭಕ್ತರು, ಭಕ್ತೆಯರ ಶಿಲ್ಪಗಳು, 63 ಪುರಾತನರು, ಶಿವ–ಶರಣರು ಇತ್ಯಾದಿ ವಿವರಣೆಗಳು ಈ ಅವಧಿಯಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಗೋಚರಿಸಿವೆ. ಇವುಗಳು ಈ ಮತದ ಬೆಳವಣಿಗೆಯ ವೈಶಿಷ್ಟ್ಯತೆಯನ್ನು ತೋರಿಸುತ್ತವೆ. ಗುಲಬರ್ಗಾದ ಬಹಮನಿ/ವಿಜಾಪುರ ಆದಿಲ್‌ಷಾಹಿ ಮತ್ತು ಮೊಘಲ ರಾಜ್ಯದ ಪರಿವಿಧಿಯಲ್ಲೂ ಈ ಮತದ ಕೆಲವು ಕೇಂದ್ರಗಳು ಬೆಳೆದಿದ್ದು ಅಚ್ಚರಿಯ ಸಂಗತಿ ಆಗಿದೆ. ಒಂದೆಡೆ ಪಂಚಾಚಾರ್ಯ ಪರಂಪರೆ ಇನ್ನೊಂದೆಡೆಯಲ್ಲಿ 101 ವಿರಕ್ತರ ಪರಂಪರೆ ಸಮಕಾಲೀನದಲ್ಲಿ ನಾಡಿನ ಹಳ್ಳಿ–ಹಳ್ಳಿಗಳಲ್ಲಿ ಕ್ರಮೇಣ ವಿಸ್ತರಿಸಿದ್ದು ತಿಳಿಯುತ್ತದೆ. ಹೀಗಾಗಿವೀರಶೈವ ಮತದ ಮಠ–ಮಾನ್ಯಗಳ ಸಮಗ್ರ ಸರ್ವೇಕ್ಷಣೆ ಮತ್ತು ದಾಖಲೀಕರಣ ಕೆಲಸ ನಡೆಯಬೇಕಾಗಿದೆ.

ಪಂಚಮಠ ಸ್ಥಾನಗಳು : ವೀರಶೈವ ಮತದಲ್ಲಿ ಪಂಚಮಠ ಸ್ಥಾನಗಳು ಒಳಗೊಂಡಿವೆ. ಇದರ ಅರ್ಥವನ್ನು ನೋಡಿದರೆ ಇದರಲ್ಲಿ ಒಂದು ಕಡೆ ಐದು ಮಠಗಳಿದ್ದವೆಂದು ಸೂಚಿಸುತ್ತದೆ. ಈ ಐದು ಮಠಗಳು ಒಂದೆಡೆ ಸಂಯುಕ್ತವಾಗಿ ಸೇರಿದ ಪರಂಪರೆ ಬೇರಾವ ಮತಗಳಲ್ಲಿ ಇರುವುದಿಲ್ಲ. ಅದು ಪಂಚಪೀಠಗಳನ್ನು/ಸಿಂಹಾಸನಗಳನ್ನು ಮಾತ್ರ ನೆನಪಿಸುತ್ತದೆ. ಶಾಸನಗಳಲ್ಲಿ ಸು. ಕ್ರಿ.ಶ. 10ನೇ ಶತಮಾನದಿಂದ ಪಂಚಮಠಗಳ ಉಲ್ಲೇಖಬರುತ್ತದೆ. ವೀರಶೈವ ಮಠಗಳ ಪರಂಪರೆಯನ್ನು ಅವಲೋಕಿಸಿದಾಗ ಒಂದೆರಡು ಸನ್ನಿವೇಶಗಳು ನೆನಪಾಗುತ್ತವೆ. ವೀರಶೈವರ ಮದುವೆ ಇನ್ನಿತರ ಶುಭ ಸಂದರ್ಭಗಳಲ್ಲಿ

ಪಂಚಾಚಾರ್ಯರಿಗೆ ಸಂಬಂಧಿಸಿದಪಂಚಕಳಸಗಳನ್ನು ಹೂಡುವರು. ವಧು-ವರರಿಗೆ ತಾಳಿಯನ್ನು ಕಟ್ಟಿಸಿದ ಬಳಿಕ ಪಂಚಪೀಠಗಳಿಗೆ ಸೇರಿದ ಐದು ಪಂಚಪೀಠದ ಮಠಸ್ಥರಿಗೆ ಐದು ಫರಡಿಗಳನ್ನು ದಕ್ಷಿಣೆ ಆಗಿ ಕೊಡುವರು. ಗದಗ-ಧಾರವಾಡ ಜಿಲ್ಲೆಗಳಲ್ಲಿ ಕೆಲವೆಡೆ ಪಂಚಗೃಹ ಹಿರೇಮಠಗಳು ಅಸ್ಥಿತ್ವದಲ್ಲಿವೆ. ಅವುಗಳೂ ವೀರಶೈವ ಮಠಗಳೇ ಆಗಿವೆ. ಶಾಸನಗಳಲ್ಲಿ ಮುಂಮುರಿದಂಡರು, ಎಂಟು ಹಿಟ್ಟುಗಳು, ಪಂಚಮಠಸ್ಥಾನಗಳು ಮುಂತಾದ ಹೆಸರುಗಳು ಬರುತ್ತವೆ. ಡಾ. ಎಸ್. ಶೆಟ್ಟರ್ ಅವರು ಪಂಚಮಠ ಎಂಬುದು ಮಾರಾಟ, ಉತ್ಪಾದನ ವೃತ್ತಿಗೆ ಸೇರಿದ್ದಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೆ ಕಾಳಾಮುಖ ಶೈವರೇ ಆಚಾರ್ಯರು ಎಂದಿದ್ದಾರೆ. ಈ ಅಭಿಪ್ರಾಯ ಸರಿ ಎಂದು ಒಪ್ಪಿಕೊಳ್ಳಲು ಶಾಸನಗಳಲ್ಲಿ ಪಂಚಮಠಸ್ಥಾನಕ್ಕೆ ಕಾಳಾಮುಖ ಆಚಾರ್ಯರು ಇದ್ದುದರ ಉಲ್ಲೇಖ ನೀಡಬೇಕಾಗಿದೆ.ಶ್ರೇಣಿಗಳು, ಐಹೊಳೆ ಐನೂರ್ವರು, ಮುಂಮುರಿದಂಡರು, ನಾನಾದೇಶಿಗಳು ಮುಂತಾದವರೆಲ್ಲ ವ್ಯಾಪಾರಸ್ಥರೇ ಆಗಿದ್ದಾರೆ.ವಿಜಯನಗರ ಕಾಲದಲ್ಲಿ ಕೆಲವೆಡೆಗಳಲ್ಲಿ ಅದರಲ್ಲೂ ಹಂಪಿ-ಬುಕ್ಕಸಾಗರಗಳಲ್ಲಿ ಪಂಚಮಠಸ್ಥಾನದ ಉಲ್ಲೇಖವಿದೆ. ಈ ಹೆಸರಿನ ಮಠಗಳು ಈ ಅವಧಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಕಾಣಿಸಿವೆ.

ಇಷ್ಟಲಿಂಗ ಪರಿಕಲ್ಪನೆ : ಹಂಪೆಯ ಮತ್ತು ಇನ್ನಿತರ ಕಡೆಗಳಲ್ಲಿ ಅನೇಕ ವೀರಶೈವ/ಶೈವ ಪರಂಪರೆಯ ಶಿಲ್ಪಗಳು ಕಂಡುಬಂದಿವೆ. ಅಲ್ಲಿಯೂ ಸಹ ಸ್ಥಾವರಲಿಂಗಗಳೇ ಕಾಣುತ್ತವೆ. ಅವುಗಳಲ್ಲಿ ಹಂಪೆಯ ಮಾತಂಗ ಪರ್ವತದ ವೀರಭದ್ರ, ಭೈರವ ಮತ್ತು ಕಾಳಿಕಾ ಶಿಲ್ಪಗಳ ಕಿರೀಟಮುಕುಟದ ಬುಡಭಾಗದ ನಡುವೆ ಕಿರಿದಾದ ಶಿವಲಿಂಗವನ್ನು ಚಿತ್ರಿಸಲಾಗಿದೆ. (ಟಿ.ಎಂ. ಮಂಜುನಾಥ : ವಿಜಯನಗರ ಅಧ್ಯಯನ, 2003, ಮಾತಂಗ ಪರ್ವತ: ಒಂದು ಅಧ್ಯಯನ, ಪು. 211-242) ಈ ದೇವರ ಶಿಲ್ಪಕಲಾ ಲಕ್ಷಣದಲ್ಲಿ ಈ ಅವಧಿಯ ಪೂರ್ವ ಈ ರೀತಿಯಲ್ಲಿ ಕಿರುಶಿವಲಿಂಗ ಧಾರಣೆಯನ್ನು ತೋರಿಸಿದ್ದು ತೀರ ವಿರಳ. ಈ ಕಿರುಶಿವಲಿಂಗಗಳು ವೀರಶೈವ ಪರಂಪರೆಯ ಇಷ್ಟಲಿಂಗಧಾರಣೆಯನ್ನೇ ಸೂಚಿಸುತ್ತವೆ. ಭೈರವನನ್ನು ಬಿಟ್ಟು ಉಳಿದ ಶಿಲ್ಪಗಳಲ್ಲಿ ವೀರಭದ್ರ ಮತ್ತು ಕಾಳಿಕ ದೇವ-ದೇವತೆಯರು ಹೆಚ್ಚಾಗಿ ವೀರಶೈವರ ಆರಾಧ್ಯ ದೈವವಾಗಿವೆ. ಆ ದೇವರನ್ನು ಇವರು ಇಂದಿಗೂ ಪೂಜಿಸುವರು. ಆದರೆ ಭೈರವನನ್ನು ಇವರು ಪೂಜಿಸುವುದು ವಿರಳ. ಚತುರ್ಭುಜಧಾರಿ ವಿಷ್ಣು/ಹನುಮಂತರು ತಮ್ಮ ಒಂದು ಕೈಯಲ್ಲಿ ಸಾಲಿಗ್ರಾಮ ಹಿಡಿದ ಉದಾಹರಣೆಗಳಿವೆ. ಈ ಸಾಲಿಗ್ರಾಮವೇ ಕಿರುಶಿವಲಿಂಗ ಅದೇ ಇಷ್ಟಲಿಂಗ. ವಿಷ್ಣು/ಹನುಮಂತರ ಒಂದು ಕೈಯಲ್ಲಿ ಸಾಲಿಗ್ರಾಮ ಹಿಡಿದ ಲಕ್ಷಣ ವೈಷ್ಣವ ಪರಂಪರೆಯಲ್ಲಿ ಅಪರೂಪದ್ದಾಗಿದೆ. ಈ ಬಗ್ಗೆ ಅವಲೋಕಿಸಿದಾಗ ಹಾವೇರಿಯ ಸಿದ್ದೇಶ್ವರ ದೇವಾಲಯದಲ್ಲಿ ಚತುರ್ಭುಜಧಾರಿಯಾಗಿ ಕುಳಿತ ವಿಷ್ಣುವಿನ ಶಿಲ್ಪವಿದೆ. (12ನೇ ಶತಮಾನ)ಈತನ ಕೆಳಗಿನ ಯೋಗಮುದ್ರೆಯುಳ್ಳ ಕೈಗಳಲ್ಲಿ ಕಿರುಶಿವಲಿಂಗವಿದೆ. ಉಳಿದೆರಡು ಮೇಲಿನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಇದು ವೈಷ್ಣವ ಶಿಲ್ಪಕಲೆಯಲ್ಲೇ ಅಪರೂಪದ್ದಾಗಿದೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಈ ಅವಧಿಯ ವೇಣುಗೋಪಾಲ ದೇವಾಲಯದ ನವರಂಗದ ಒಂದು ಕಂಬದಲ್ಲಿ ತೋರಿಸಿದ ಒಬ್ಬ ಯತಿಯ ಎಡ ಕೈಯಲ್ಲಿ ಕಿರುಶಿವಲಿಂಗವಿದೆ. ಈ ರೀತಿಯ ಯತಿಗಳ ಶಿಲ್ಪಗಳು ಅನೇಕ ಶೈವ, ವೀರಶೈವ, ವೈಷ್ಣವ, ಶ್ರೀವೈಷ್ಣವ ಧರ್ಮದ ದೇವಾಲಯಗಳಲ್ಲಿರುವುದು ವಿಶೇಷವೆನಿಸಿದೆ. ಈ ಕಿರು ಲಿಂಗವುಳ್ಳ ದೇವ-ದೇವತೆಗಳ ಮತ್ತು ಯತಿ ಅಥವಾ ಭಕ್ತೆ/ಭಕ್ತರ ಶಿಲ್ಪಗಳು ವೀರಶೈವ ಲಕ್ಷಣವನ್ನೇ ಪ್ರತಿಬಿಂಬಿಸುತ್ತವೆ.

ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯದ ದಕ್ಷಿಣ ಪ್ರಾಕಾರದಲ್ಲಿ ಪರೀಕನಾಯಕನ ಶಿಲ್ಪವಿದೆ. ಆತನು ಯೋಗಭಂಗಿಯಲ್ಲಿ ಕುಳಿತಿದ್ದಾನೆ. ರುದ್ರಾಕ್ಷಿಯನ್ನು ಧರಿಸಿದ್ದಾನೆ. ಎಡಗೈಯಲ್ಲಿ ಕಿರುಶಿವಲಿಂಗವನ್ನು ಹಿಡಿದು ತನ್ನ ಬಲಕೈಯಿಂದ ಅದನ್ನು ಆರಾಧಿಸುತ್ತಿರುವುದು ಈತನೊಬ್ಬ ಇಷ್ಟಲಿಂಗಧಾರಿ ವೀರಶೈವ/ಶರಣನೆನಿಸಿದ್ದಾನೆ. ದಕ್ಷಿಣ ಕರ್ನಾಟಕದಲ್ಲಿ ಈ ಮತದ (?) ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿಯ ಪರಂಪರಾ ಕೇಂದ್ರಗಳು ಇಂದಿಗೂ ಪ್ರಸಿದ್ಧಿಯಲ್ಲಿವೆ. ಇಷ್ಟಲಿಂಗವುಳ್ಳ ಮಹಾಲಕ್ಷ್ಮಿಯ ಶಿಲ್ಪಗಳು 12-13ನೇ ಶತಮಾನದಲ್ಲಿ ಅಲ್ಲಲ್ಲಿ ಕಂಡುಬಂದಿವೆ. (ಹಲಸಿ, ಬಸವಕಲ್ಯಾಣ ಮುಂತಾದ ಸ್ಥಳಗಳು)

ಲಿಂಗದೀಕ್ಷೆ ಮತ್ತು ಮಹೇಶ್ವರ ಮತ/ಧರ್ಮ : ಇಲ್ಲಿ ಚರ್ಚೆಗೆ ಬರುವ ಸಂಗತಿಯೇನೆಂದರೆ ಲಿಂಗದೀಕ್ಷೆ ಪಡೆದ ನಂತರ ಶಿವಲಿಂಗಧಾರಣೆ ಕಡ್ಡಾಯವಾಗುತ್ತದೆ. ಈ ಲಿಂಗದೀಕ್ಷೆಯ ಪ್ರಾಚೀನ ಒಂದು ಉಲ್ಲೇಖದಲ್ಲಿ(7ನೇ ಶತಮಾನ) ಶಿವಮಂಡಲ

ದೀಕ್ಷೆಯು ನೆನಪಾಗುತ್ತದೆ. ಈ ಎರಡೂ ದೀಕ್ಷೆಗಳು (ಲಿಂಗದೀಕ್ಷೆ ಮತ್ತು ಶಿವಮಂಡಲ ದೀಕ್ಷೆ) ಭಿನ್ನವೆ ಅಥವಾ ಒಂದೇ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ವೀರಶೈವರಲ್ಲಿ ಪ್ರಾಚೀನ ಕಾಲದಿಂದ ವಿಜಯನಗರ ಸಾಮ್ರಾಜ್ಯದ ಪೂರ್ವದವರೆಗೆ ಶೈವರ ಅನೇಕ ಶಾಖೆಗಳಲ್ಲಿ ಮಹೇಶ್ವರಮತ ಒಂದಾಗಿದೆ.ಮಹೇಶ್ವರ ಗುಂಪಿನವರು ಕಲ್ಯಾಣ ಚಾಲುಕ್ಯ, ಕಳಚುರಿ, ಸೇವುಣರ ಅವಧಿಯಲ್ಲಿ ಹೆಚ್ಚು ಪ್ರಸಿದ್ಧಿಯಲ್ಲಿದ್ದರು. ಈ ಅವಧಿಯ ಅರಸರ/ಅಧಿಕಾರಿಗಳ ಆಶ್ರಯದಿಂದ ಮಹೇಶ್ವರ ಶಾಖೆಯು ಮಹೇಶ್ವರಮತ, ಮಹೇಶ್ವರಧರ್ಮವಾಗಿ ಪರಿವರ್ತನೆ ಹೊಂದಿದಂತೆ ಕಾಣುತ್ತದೆ. (ಕೊಪ್ಪಳ ಜಿಲ್ಲೆಯ ಯಲಬುರ್ಗ ತಾಲೂಕಿನ ಕಲ್ಲೂರ ಶಾಸನ) ಬಸವಣ್ಣನವರ ವಚನ ಸಾಹಿತ್ಯದಿಂದ ಮತ್ತು ಶಾಸನದಿಂದ ಈ ಕಾಲದಲ್ಲಿ ಬಸವಧರ್ಮದ ಉಲ್ಲೇಖವಿರುವುದು ವಿಶೇಷವೆನಿಸಿದೆ. ಕಲ್ಯಾಣ ಚಾಲುಕ್ಯ ಅರಸ ಇರಿವಬೆಂಡಂಗ ಸತ್ಯಾಶ್ರಯನ ಸಾಮಂತ ಸೋಬರಸನು ಮಹೇಶ್ವರ ಧರ್ಮವನ್ನು ಆಚರಿಸುತ್ತಿದ್ದನು. (ಅದೇ ಯಲಬುರ್ಗಿ ಶಾಸನ) ಆದರೆ ಕದಂಬ ಸಾಮಂತ ನನ್ನಿದೇವ ತ್ರೈಲೋಕ್ಯಮಲ್ಲನು ಬನವಾಸಿ ಪುರವರಾಧೀಶ್ವರ 'ವೀರ ಮಹೇಶ್ವರ' ಎಂಬ ಬಿರುದನ್ನು ಗಳಿಸಿದ್ದನು. ಈ ವಿಷಯವನ್ನು ಕೊಪ್ಪಳ ಜಿಲ್ಲೆಯ ಶಿವಪುರದ ಗವಿ ಶಾಸನ ಉಲ್ಲೇಖಿಸುತ್ತದೆ. ಮತ್ತೊಬ್ಬನು (1047) ಮದನ ಮಹೇಶ್ವರನೆಂದು ಕರೆಸಿಕೊಂಡಿದ್ದಾನೆ. ಮಹಾಮಂಡಳೇಶ್ವರ ಬುದ್ಧರಸನನ್ನು ಸೌರ್ಯಮಹೇಶ್ವರನೆಂದು ಕರೆಯಲಾಗಿದೆ.ಕೆಲವೆಡೆಗಳಲ್ಲಿ ವೀರಮಹೇಶ್ವರ ಪರಮಮಹೇಶ್ವರನೆಂದು ಕರೆಸಿಕೊಳ್ಳಲಾಗಿದೆ. ಮಂಡ್ಯ ಜಿಲ್ಲೆಯ ಮರಡೀಪುರ ಶಾಸನವು (18.12.1305) ವೀರಶೈವರ ಸದಾಚಾರ, ರಿಷಿಗಣಂಗಳು, ವೀರಭದ್ರ, ಘಂಟಾಕರ್ಣ, ದಾರುಕ, ರೇಣುಕ, ಸಾರುಪ್ಯ, ಸಾಯುಜ್ಯ, ಗಣಗಳು, ಸಿರಿವಾಳ, ಓಹಿಲ, ಉದ್ಭಟ ಮುಂತಾದ ವಿಷಯಗಳನ್ನು ಹೊರಗೆಡವುತ್ತದೆ. ಇವರು ವಿಜಯನಗರ ಪೂರ್ವದಲ್ಲಿ (ಉಲ್ಲೇಖವಾಗಿದೆ) ಕಾಣುವರು. ದಿನಾಂಕ 27.12.1362 ರ ಹಾಸನ ಜಿಲ್ಲೆಯ ಅರಕಲಗೂಡಿನ ಕೇರಳಪುರದ ವೀರಭದ್ರಗುಡಿ ಶಾಸನವು 63 ಮಹಾಗಣಂಗಳ ಮಠಪತಿಗಳನ್ನು ಉಲ್ಲೇಖಿಸುತ್ತದೆ. ಅಲ್ಲಿ 'ವೀರೇಶ್ವರ ದೇವರ ಧರ್ಮ'ದ ಉಲ್ಲೇಖ ಕಾಣುತ್ತದೆ. 1370 ರ ಆಂಧ್ರದ ಕಡಪಾ ಜಿಲ್ಲೆಯ ರಾಜಂಪೇಟೆ ತಾಲೂಕಿನ ಮತುಕೂರಿನ ನಾಗೇಶ್ವರ ದೇವಸ್ಥಾನದ ಶಾಸನದಲ್ಲಿ'ಷಡ್ದರ್ಶನ ಸ್ಥಾಪನಾಚಾರ್ಯ ಮಾರುದಾಲಲಿಂಗ ವೀರಶೈವ ಸಿದ್ಧಬಿಕ್ಷಾ'ದ ಉಲ್ಲೇಖವಿದೆ. ಉಜ್ಜಯಿನಿ (ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕು)ಯ ಸೇವುಣ ಮಹಾದೇವನ ಆಳ್ವಿಕೆಯ ಶಾಸನದಲ್ಲಿ (1268) ಇದಕ್ಕಾರಾದರೂ (ದಾನಕ್ಕೆ) ತಪ್ಪಿ ನಡೆದರೆ ಮಹಾಗಣಂಗಳ ಕಾರ್ಯ ನಡೆಸುವುದು" ಎಂದಿದೆ. ಈ ಪೀಠದಲ್ಲಿರುವ ಶಾಸನಗಳಿಂದ ಅಲ್ಲಿನ ದೇವಾಲಯದ ಹೆಸರು ಸು. ಕ್ರಿ.ಶ. 16ನೇ ಶತಮಾನದವರೆಗೆ ಮಲ್ಲಿಕಾರ್ಜುನ ಎಂದು ಕರೆಯಲಾಗಿದೆ. ಆ ಬಳಿಕವೇ ಅದಕ್ಕೆ ಈ ಪೀಠದ ಹೆಸರು ಮತ್ತು ಅಲ್ಲಿನ ದೇವಾಲಯದ ಹೆಸರು ಈಗಿನಂತೆ ಬಂದಿವೆ. ಹಾಸನ ಜಿಲ್ಲೆಯ ಆಲೂರು ತಾಲೂಕಿನ ಹುಲಕುಂದದ ಶಾಸನದಲ್ಲಿ (1479) ಶ್ರೀ ಮದೇಶಿಕಷಟ್‌ಸ್ಥಲ ಚಕ್ರವರ್ತಿ ವಿರಕ್ತ ಶಿಖಾಮಣಿ ಮುರಿಗೆ ಸ್ವಾಮಿಯವರ ಹೆಸರಿದೆ. ಆಂಧ್ರಪ್ರದೇಶದ ಕಡಪ ಜಿಲ್ಲೆಯ ರಾಜಂಪೇಟೆ ತಾಲೂಕಿನ ಮಾಲೆವರ್ಪ್ಪರಂ ಶಾಸನದಲ್ಲಿ (30–3–1458) 'ವೀರಶೈವಾಚಾರ'ದ ಹೆಸರಿದೆ. 1474 ರ ತಮಿಳುನಾಡಿನ ತಿರುವಳ್ಳಂ ಜಿಲ್ಲೆಯ ಗುಮ್ಮಳಾಪುರದ ಶಾಸನದಲ್ಲಿ ಅಶೇಷ ವೀರಮಹೇಶ್ವರರು, ಶಾಂತದೇವರು, ಚಿಕ್ಕವೀರದೇವರು, ಶರಣವೀರಣದೇವರು, ಶಾಂತದೇವರು, ನಾಗದೇವರು, ಚಿಕ್ಕದೇವಪ್ಪನವರು, ಜಂಗಳದೇವರು, ಪ್ರಸಾದಿದೇವರು, ಮಲ್ಲಿಕಾರ್ಜುನಾರಾಧ್ಯರು, ಪ್ರಸಾದಿದೇವರು, ಮಲ್ಲಿಕಾರ್ಜುನಾರಾಧ್ಯರು, ಬಸವಣ ದೇವರು ಮುಂತಾದವರ ಹೆಸರುಗಳಿವೆ. ಇವುಗಳು ವೀರಶೈವ ಮತಕ್ಕೆ ಸೇರಿವೆ. ಈ ಪ್ರದೇಶಕ್ಕೂ ಈ ಅವಧಿಯಲ್ಲಿ ಈ ಮತದ ಪ್ರಸಾರ ವಿಸ್ತರಿಸಿದ್ದು ಕಾಣುತ್ತದೆ. ಈ ಅವಧಿಯಲ್ಲಿ ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬೆರಕನಹಳ್ಳಿಯ ಶಾಸನದಲ್ಲಿ ಲಿಂಗಮುದ್ರೆಯನ್ನು ಹಾಕಿದ್ದು ಜಂಗಮರ ಹಾಗೂ ನಿರಾಸಿಮಠದವರ ವಿವರಗಳು ಕಾಣುತ್ತವೆ.

ಪಂಚಾಚಾರ್ಯರು : ಪಂಚಾಚಾರ್ಯರ ಪರಂಪರೆಯಲ್ಲಿನ ಕೆಲವು ವಿಷಯಗಳು ಈ ಕಾಲಾವಧಿಯಲ್ಲಿ ಕಾಣುತ್ತವೆ. ಈ ಕಾಲಪೂರ್ವದಲ್ಲಿ ಪಂಚಾಚಾರ್ಯರಿಗೆ ಸಂಬಧಿಸಿದ ಕೆಲವು ಹೆಸರುಗಳು ಈ ಮೇಲೆ ಹೇಳಿದ ಮರಡೀಪುರ ಮುಂತಾದ ಶಾಸನಗಳಲ್ಲಿ ಬಂದಿವೆ. ಹಾನಗಲ್ಲು ತಾಲೂಕಿನ ಶಾಸನದಲ್ಲಿ ಮೊಟ್ಟ ಮೊದಲಿಗೆ ಪಂಚಪೀಠಗಳಲ್ಲಿ ಒಂದಾದ ಬಾಳೆಹೊನ್ನೂರು ಸಿಂಹಾಸನದ ಹೆಸರು ಕಾಣುತ್ತದೆ (ಸು. 14ನೇ ಶತಮಾನ). ಉಜ್ಜಯಿನಿ ಸಿಂಹಾಸನದ ಹೆಸರು 17ನೇ ಶತಮಾನದ ಒಂದು ಶಾಸನ ಹರಪನಹಳ್ಳಿ ತಾಲೂಕಿನಲ್ಲಿದೆ. ಉಜ್ಜಯಿನಿ ಒಂದುಪೀಠವಾದರೂ ಈಗಿನ ಪೀಠದ ಮತ್ತು ಅಲ್ಲಿನ ದೇವಾಲಯದ

ಹೆಸರುಗಳು 17ನೇ ಶತಮಾನದಿಂದ ಕಂಡುಬರುತ್ತವೆ. ಲಕ್ಷ್ಮೇಶ್ವರದ 1513ರ ಸೆಪ್ಟಂಬರ್ 4ರ ವೀರಭದ್ರ ದೇವಾಲಯದ ಶಾಸನದಲ್ಲಿ (ಈ ಶಾಸನವು ಈಗ ಅಲ್ಲಿನ ಸೋಮೇಶ್ವರ ದೇವಾಲಯದ ಪ್ರವೇಶದಲ್ಲಿದೆ) ವೀರಶೈವರ ಅನೇಕವಿವರಗಳಿವೆ. (ಎಸ್.ಐ.ಐ. 20, ನಂ. 390, 1513) ಅದರಲ್ಲಿ ಮರುಳಸಿದ್ಧೇಶ್ವರರನ್ನು ಸ್ಮರಿಸಲಾಗಿದೆ. ಅದರ ವರ್ಣನೆಯಲ್ಲಿ ಸದಾಶಿವನ ಮಹಾಗಣಸ್ತೋಮದ ನಡುವೆ ಬೆಳ್ಳಿಯ ಓಲಗವಿತ್ತೆಂಬ ವರ್ಣನೆಯಿದೆ. ಅಲ್ಲಿ ದಾರುಕ-ರೇಣುಕರ ಮಹಿಮೆಗಳಿವೆ. ದಾರುಕರು ಶಿವಲಿಂಗೋದ್ಭವರಾಗಿ ಸಂಚರಿಸುತ್ತಿದ್ದರು. ರೇಣುಕಾಚಾರ್ಯರು ಈ ವಸುಂಧರೆಯಲ್ಲಿ 1400 ವರ್ಷ ಜೀವಂತವಾಗಿದ್ದು ಗುಪ್ತವಾಗಿದ್ದು, ಅವರು ತಮ್ಮ ಲೀಲೆಯನ್ನು ಜಂಗಮರ ವೇಶದಿಂದ ಭಕ್ತರಿಗೆ ಆನಂದವನ್ನುಂಟು ಮಾಡಿದರು. ಅದರಿಂದ ಪುಲಿಗೆರೆಯು ಪುಣ್ಯದ ತಾಣವಾಗಿದೆ.ರೇಣುಕಾಚಾರ್ಯರನ್ನು ಮೊದಲು ಪರಮೇಶ್ವರ ಅವತಾರವೆಂದು ಕರೆಯಲಾಗಿದೆ. ಮರುಳಸಿದ್ದೇಶ್ವರ ಹೆಸರಿನಿಂದ ಅವರು ಪ್ರಸಿದ್ಧಿ ಪಡೆದ ವಿವರಗಳಿವೆ. ಆಗ ಲಿಂಗಮೂರ್ತಿ ಮರುಳಸಿದ್ಧೇಶ್ವರರಿಗೆ ಅವರ ಶಿಷ್ಯ ಕೂಡಲಿಗೆಯ ಸಿಂಗಿಸೆಟ್ಟಿಯರಸರು ಬಾವಿ ಕಟ್ಟಿಸಿ ಹೂದೋಟ ದಾನ ನೀಡಿದರು. ಕುತೂಹಲದ ಸಂಗತಿಯೆಂದರೆ ಈ ಶಾಸನದ ಕಾಲಮಾನ 1513. ಈ ಅವಧಿಯಲ್ಲಿ ಕೃಷ್ಣದೇವರಾಯನು ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದನು. ಈತನ ಆಳ್ವಿಕೆಯ ಹೆಸರನ್ನು ಇನ್ನಿತರ ಶಾಸನಗಳಲ್ಲಿ ಹೇಳಿದಂತೆ ಈ ಶಾಸನದಲ್ಲಿ ಉಲ್ಲೇಖಿಸಿರುವುದಿಲ್ಲ.

ಶಿವ-ಲಿಂಗ-ಗುರುದ್ರೋಹಿಪದಗಳು : ಆಂಧ್ರಪ್ರದೇಶದ ಕಡಪ ಜಿಲ್ಲೆಯ ಕಮಲಾಪುರ ತಾಲೂಕಿನ ನಿಡುಜುವ್ವಿ ಶಿವದೇವಾಲಯ ಶಾಸನದಲ್ಲಿ (6-1-1549) ಶಿವದ್ರೋಹಿ, ಲಿಂಗದ್ರೋಹಿ ಮತ್ತು ಗುರುದ್ರೋಹಿಯಪದಗಳಿದ್ದು ಅವುಗಳು ವೀರಶೈವ ಪದಗಳಾಗಿವೆ.

ಲಿಂಗದೆರಿಗೆ : ಈ ಅವಧಿಯಲ್ಲಿ ಲಿಂಗಧರಿಸಿದವರಿಗೆ ತೆರಿಗೆಯನ್ನು ವಿಧಿಸುವುದು ಆರಂಭವಾಗಿದೆ. ಈ ವಿಷಯವು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಧರ್ಮವರ ತಾಲೂಕಿನ ಕನಗಿನಪಲ್ಲೆಯ ಹನುಮಂತ ದೇವಾಲಯ ಶಾಸನ ಹೇಳಿದೆ. ಇದು ವಿಜಯನಗರ ಅರಸ ಸದಾಶಿವರಾಯನ ಕಾಲದ್ದು (27-8-1550). ಈ ಶಾಸನವು ಇನ್ನೂ ಹಲವಾರು ವಿವರಗಳನ್ನು ನೀಡಿದೆ. ಅದರಲ್ಲಿ ಲಿಂಗಧಾರಿಗಳು, ವೀರೇಶ್ವರ, ವೀರಭದ್ರ ಶಿವಾಚಾರ ಹೆಸರುಗಳಿವೆ. ಲಿಂಗಧಾರಿಗಳು ನೀಡಿದ ಲಿಂಗದೆರಿಗೆಯನ್ನು ಆ ಊರಿನ ವೀರಭದ್ರ/ವೀರೇಶ್ವರ ದೇವರ ದೀಪಾರಾದನೆಗೆ ಬಳಸಲು ಸೂಚಿಸಲಾಗಿದೆ. ಈ ತೆರಿಗೆಯನ್ನು ಈ ಮತದವರಿಂದಲೇ ಸಂಗ್ರಹಿಸಿ ಅದನ್ನು ತಮ್ಮ ಸಮಾಜದ ದೇವರ ಕಾರ್ಯಕ್ಕೆ ಬಳಸುವ ನೂತನ ನಿಯಮವನ್ನು ಇಲ್ಲಿ ಆರಂಭಿಸಿದ್ದು ಅಪರೂಪದ ಉದಾಹರಣೆಯಾಗಿದೆ.

ಅವಧೂತರು : ಕೆಲವು ವಿರಕ್ತರು ಇಷ್ಟಲಿಂಗ ಪರಂಪರೆಯನ್ನು ವಿರೋಧಿಸಿ ಅನುಭಾವ ಮಾರ್ಗವನ್ನು ಕಂಡುಕೊಂಡರು. ಅವರೇ ಅವಧೂತರೆಂದು ಹೇಳುವರು. ಅವಧೂತರು ಈ ಕಾಲಾವಧಿಯಲ್ಲಿ ಹಂಪಿಯಲ್ಲಿದ್ದರು. ನೂರೊಂದು ವಿರಕ್ತರಲ್ಲಿ ಅನೇಕರು ಅವಧೂತರಿರುವರೆಂದು ಡಾ. ಎಂ.ಎಂ. ಕಲಬುರ್ಗಿ ಅವರು ತೋರಿಸಿದ್ದಾರೆ. ಅವರಲ್ಲಿ ಪಂಪ, ಬಾಚಿಕಾರ್ಯದ ಬಸವಣ್ಣ, ಗುರುಲಿಂಗವಿಭು, ಸತ್ತಕಾವ್ಯದ ಗುರುಬಸವ, ಗುಬ್ಬಿಮಲ್ಲಣಾರ್ಯ, ಲಕ್ಷ್ಮೀಶ, ಮಹಲಿಂಗರಂಗರೆಂದು ಹೇಳುವರು. ಇವರ ಶಿಷ್ಯರ ಬೆಳವಣಿಗೆ, ಅವರ ನೆಲೆ, ಐಕ್ಯವಾದ ಸಮಾಧಿಗಳಿವೆ ಎಂದಿದ್ದಾರೆ. ಇವರ ಒಂದು ಮಠವು ಹಂಪಿಯಲ್ಲಿತ್ತು ಎನ್ನಲಾಗಿದೆ. ಹೀಗಾಗಿ ಈ ಪರಂಪರೆಯವರ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ನಂದಿ : ನಂದಿಯನ್ನು ಬಸವಣ್ಣನೆಂದು ಕರೆಯುವರು. ಹಂಪಿ ಭಾಗದ ಕೆಲವು ನಂದಿಮೂರ್ತಿಗಳಿಗೆ ಬಸವಣ್ಣನೆಂದು ಕರೆಯಲಾಗಿದೆ. ನಂದಿ ಶಿವನ ವಾಹನ. ಪೌರಾಣಿಕ ಹಿನ್ನಲೆಯಲ್ಲಿ ನಂದಿಯನ್ನು ನಾಲ್ಕು ರೂಪಗಳಲ್ಲಿ ಕಾಣುವರು. ಅವುಗಳು ಸವ್ಯವೃಷಭ, ಮಹಾಕಾಯ ವೃಷಭ, ಮಹಾಶಯ ವೃಷಭ, ಮಹಶೃಂಗ ವೃಷಭ. ಈ ಬಗ್ಗೆ ಚಂದ್ರಶೇಖರ ದಾವಣಗೇರಿ ಇವರು ತಮ್ಮ ಲೇಖನ 'ಹಂಪಿ ಶ್ರೀ ವಿರೂಪಾಕ್ಷ ದೇವಾಲಯದ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ'ಯಲ್ಲಿ ವಿವರಿಸಿದ್ದಾರೆ. (ವಿಜಯನಗರ ಅಧ್ಯಯನ ಸಂ.9, ಪು. 180-195) ಆದರೆ 10ನೇ ಶತಮಾನದ ಶಿವಲಿಂಗ ವೃತ್ತಪೀಠದಲ್ಲಿ ಆರು ಕುಳಿತ ನಂದಿಗಳಿವೆ. ಅದು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನಲ್ಲಿದೆ. ಅನೇಕ ಕಡೆಗಳಲ್ಲಿನ ನಂದಿ ವಿಗ್ರಹಗಳಲ್ಲಿ ಕುಳಿತ ನಂದಿ ಸಾಮಾನ್ಯ. ಎಡಕಾಲನ್ನು ಮಡಚಿ ಅದನ್ನು ಸ್ವಲ್ಪ ಮುಂಚಾಚಿರುವನಂದಿ ಶಿಲ್ಪಗಳು ಸಾಮಾನ್ಯ.

ಅದರ ಕೊರಳಹಾರದ ಮುಂದೆ ಕೆಲವೊಮ್ಮೆ ಕಿರುಶಿವಲಿಂಗವಿರುತ್ತದೆ.ಕೋದಂಡರಾಮ ದೇವಾಲಯದ ಪಶ್ಚಿಮಕ್ಕಿರುವ ತುಂಗಾ ನದಿಯಲ್ಲಿನ ಬಂಡೆಯ ಮೇಲಿನ ಗಣೇಶ ಮತ್ತು ಹನುಮಾನ ಮೂರ್ತಿಗಳನ್ನು ವಾರಣಾಸಿಯ ದೇವಣ್ಣನ ಮಗ ಲಖಣ್ಣರು ಮಾಡಿದರು. (ವಿಪಿರಿ 1984–87, ನಂ. 65) ವಿಶೇಷವೆಂದರೆ ಈ ವಿಗ್ರಹಗಳನ್ನು ತಯಾರಿಸಿದ ಲಖಣ್ಣನು ವಾರಣಾಸಿಯವನಾಗಿದ್ದಾನೆ. ಮೊದಲನೇ ದೇವರಾಯನು ತಾನು ಪಟ್ಟಾಭಿಷಿಕ್ತನಾದಾಗ ನಂದಿಯ ಕಂಬವನ್ನು 1448 ರಲ್ಲಿ ಪ್ರತಿಷ್ಠಾಪನೆ ಮಾಡಿದ ಉದಾಹರಣೆಯಿದೆ. (ಕೆ.ಐ. 6,68, ಧಾರವಾಡ) ಆನೆಗುಂದಿಯಲ್ಲಿ ಬಸವರಾಜನ ವಿಗ್ರಹವನ್ನು ಅಚ್ಯುತದೇವರಾಯನ ಆಳ್ವಿಕೆಯಲ್ಲಿ ನಿಲ್ಲಿಸಲಾಗಿದೆ. ಇದರಿಂದ ಈ ಅವಧಿಯಲ್ಲಿ ನಂದಿಶಿಲ್ಪ, ನಂದಿ ಕಂಬಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ಕೊಡಲಾಗಿದ್ದು ತಿಳಿಯುತ್ತದೆ. ಒಂದು ಸನ್ನಿವೇಶದಲ್ಲಿ ಬ್ರಾಹ್ಮಣರು ನಂದಿ ಮೂರ್ತಿಯನ್ನು ಮಾಡಿಸಿ ದಾನ ನೀಡಿದ್ದು ವಿಶೇಷವೆನಿಸಿದೆ. ಕೆಲವೊಮ್ಮೆ ದೇವಾಲಯಗಳ ಮೇಲೆ ನಾಲ್ಕೂ ಮೂಲೆಗಳಲ್ಲಿ ಕುಳಿತ ನಂದಿಗಳನ್ನು ಕೂಡಿಸಿದ ಉದಾಹರಣೆಗಳು ಈ ಅವಧಿಯಿಂದ ಕಾಣುತ್ತದೆ.

ಮಠಗಳು : ಹಂಪಿ ಪರಿಸರದ ಶಾಸನೋಕ್ತ ವೀರಶೈವ ಮಠಗಳ ಬಗ್ಗೆ ಹಲವಾರು ಲೇಖನಗಳು ಹೊರಬಂದಿವೆ. ಅವುಗಳಲ್ಲಿ ಶ್ರೀಮತಿ ಎಸ್.ಎಸ್. ಭಗವತಿ ಮತ್ತು ಡಾ. ಎಚ್.ಎಸ್. ಮೇಲಿನಮನಿ ಅವರ ಲೇಖನ ಹಂಪಿ ಶಾಸನೋಕ್ತ ವೀರಶೈವ ಮಠಗಳು (ವಿಜಯನಗರ ಅಧ್ಯಯನ, 2005, ಪು. 94–101) ಮತ್ತು ಟಿ.ಎಂ. ಮಂಜುನಾಥ ಅವರ ಲೇಖನ ಹಂಪೆಯ ಶಾಸನಗಳಲ್ಲಿ ಶಿವಶರಣರು (ವಿಜಯನಗರ ಅಧ್ಯಯನ, 2005, ಪು. 86–93), ಸಿ.ಟಿ.ಎಂ. ಕೊಟ್ರಯ್ಯ ಅವರ ಅನೇಕ ಲೇಖನಗಳು (ವಿಜಯನಗರ ಅಧ್ಯಯನ ಸಂ. 1, 1996), ಸಿ.ಎಸ್. ಪಾಟಿಲ ಅವರ ಲೇಖನ (ವಿಜಯನಗರ, 1991, ಪ್ರೊಗ್ರೆಸ್ ಆಫ್ ರೀಸರ್ಚ್ 1984–87, 1987–88) ಮತ್ತು ಸಿ.ಎಸ್. ಪಾಟೀಲ ಮತ್ತು ವಿನೋದ ಪಾಟೀಲ ಅವರ ಲೇಖನ (1996, ವಿಜಯನಗರ ಶಾಸನಗಳು) ಮತ್ತು ಬಿ.ವಿ. ಮಲ್ಲಾಪುರ ಅವರ ಕೃತಿ (ಸುಧಾರ್ಣವ, ಪು. 84), ರವೀಂದ್ರನಾಥ ಮತ್ತು ಹೆಚ್.ಟಿ. ಹಳ್ಳಿಕೇರಿ ಅವರ ಅಧ್ಯಯನ ಮುಂತಾದವುಗಳು ಪ್ರಮುಖವೆನಿಸಿವೆ. ಇವರೆಲ್ಲರ ಅಧ್ಯಯನಗಳಿಂದ ಹಂಪೆಯಲ್ಲಿ ವಿಜಯನಗರ ಕಾಲಾವಧಿಯಲ್ಲಿ ಅನೇಕ ವೀರಶೈವ ಮಠಗಳು, ವೀರಭದ್ರ ದೇವಾಲಯಗಳು, ಶಿವಶರಣರ ನೆಲೆಗಳು ಮತ್ತು ಇವರ ನೆಲೆಗಳಲ್ಲಿ ದೇವರ ವಿಗ್ರಹಗಳೂ ಇದ್ದುದು ತಿಳಿಯುತ್ತದೆ. ಪ್ರೌಢದೇವರಾಯನ ಕಾಲಾವಧಿಯಲ್ಲಿ 101 ವಿರಕ್ತರ ಒಂದೊಂದು ಮಠವಿದ್ದವೆನ್ನಲಾಗಿದೆ. ಮಠಗಳಲ್ಲಿ ಕರಿಸಿದ್ದಪ್ಪನ ಮಠವು ವಿರೂಪಾಕ್ಷ ದೇವಾಲಯ ಎದುರಿನ ತೇರುಬೀದಿಯ ದಕ್ಷಿಣಕ್ಕಿದೆ. ಮಹಮಂತಿನ ಮಠವು ಕಮಲಾಪುರ–ವಿರೂಪಾಕ್ಷಪೇಟೆ ಮತ್ತು ಹೊಸಪೇಟೆ ರಸ್ತೆಗಳು ಸಂಧಿಸುವ ಸ್ಥಳದ ಹತ್ತಿರವಿದೆ. ಪರಮೇಶ್ವರನ ಮಠವು (ರಾಣಿವಾಸದ ಆವರಣದ ಸಮೂಹದ ಗುಡ್ಡದಲ್ಲಿ) ನಿರಾಸಿಮಠ (ಅಹಮದ್ ಖಾನ್ ಧರ್ಮ ಶಾಲೆಯ ಪಶ್ಚಿಮಕ್ಕೆ ಗುಡ್ಡದ ಮೇಲಿನ ಬಾವಿಯ ಹತ್ತಿರ), ಹಂಪಿ ಮಠ (ತಾಮ್ರಶಾಸನದ ಉಲ್ಲೇಖ), ಮಹಾಲಿಂಗವೊಡೆಯರ ಮಠ, ಬಸವರಾಜ ದೇವರ ಮಠ (ತಳವಾರ ಘಟ್ಟದ ಬಳಿಯ ಮಂಟಪ–ಬಸವಣ್ಣನ ಗುಡಿ)ಗಳು ಮುಖ್ಯವಾಗಿವೆ. ಶಿವಶರಣರ ಹೆಸರಿನ ನೆಲೆಗಳಲ್ಲಿ ಗುರುಗುಹೇಶ್ವರನ ಆಶ್ರಮದಲ್ಲಿ (ಅಲ್ಲಮಪ್ರಭುವಿನ ಆಶ್ರಮ) ಮೂರು ಶಿವಲಿಂಗಗಳಿವೆ. ಅದರ ಸಮೀಪ ವೀರಭದ್ರ ದೇವಾಲಯವಿದೆ. ಸಂಗನಬಸವ ನೆಲೆಯಲ್ಲಿ ಶಿವಲಿಂಗ ಮತ್ತು ನಂದಿ ವಿಗ್ರಹಗಳಿವೆ; (ಗುರು ಗುಹೇಶ್ವರ ಆಶ್ರಮ ಉತ್ತರಕ್ಕಿದೆ) ಶ್ರೀ ಸಂಗಮೇಶ್ವರರು ಅಲ್ಲಿ ಲಿಂಗದ ಮೇಲೆ ಲಿಂಗ ಮತ್ತು ನಂದಿಮೂರ್ತಿಗಳಿವೆ, ಅಕ್ಕಮಹಾದೇವಿಯವರ ಬಾವಿಯು ವಿರೂಪಾಕ್ಷ ತೇರು ಬೀದಿ ಪೂರ್ವಕ್ಕೆ ಮಾತಂಗ ಪರ್ವತಕ್ಕೆ ಹೋಗುವ ದಾರಿ ಪೂರ್ವದ ಗುಹಾಬಾವಿಯಾಗಿದೆ. ಬೊಮ್ಮದೇವರ ಗವಿಯು ಕೋಟಿಲಿಂಗ /ಕೋಟಿತೀರ್ಥ ಎಡದಂಡೆಯಲ್ಲಿನ ಗವಿಯಾಗಿದೆ. ಶಿವಯೋಗಿ ದೇವರ ಗವಿ ಇವರ ಹೆಸರು ರೇವಣಸಿದ್ದರೆನ್ನುವರು. ಅದು ಕಮಲಾಪುರದ ಗಾಣಗಿತ್ತಿ ಜಿನಾಲಯದ ಪೂರ್ವದಲ್ಲಿರುವ ಗುಡ್ಡದಲ್ಲಿನ ಗುಹೆಯಾಗಿದೆ. ಅದರ ಪಶ್ಚಿಮಕ್ಕೆ ವೀರಭದ್ರ ಗುಡಿ, ಬದಿಗೆ ಗಡ್ಡಧಾರಿ ಯತಿವರ್ಯರು, ಶ್ರೀ ಮರುಳಸಿದ್ಧದೇವರು. ವಿರೂಪಾಕ್ಷ ತೇರು ಬೀದಿ ಎದುರಿನ ಬಸವಣ್ಣನ ಗುಡಿ ಹಿಂದಿನ ಗುಹೆಭಾಗದಲ್ಲಿ ಕೆಮ್ಮಣ್ಣಿನಿಂದ ಬರೆದ ಶಾಸನವಿದೆ. ಅಲ್ಲಿ ಶಿವಲಿಂಗದ ಚಿತ್ರವಿದೆ. ಮಡಿವಾಳ ಮಾಚಯ್ಯನನ್ನು ಮಂಚಯ್ಯ ಎಂದು ಕರೆಯುವರು. ಅದು ಹೇಮಕೂಟ ಪರ್ವತದಲ್ಲಿದೆ. ಬಸವರಾಜದೇವರೆಂದು ನಂದಿವಿಗ್ರಹದ ಪೀಠಶಾಸನದಲ್ಲಿದೆ. ಪಂಡಿತಾರಾಧ್ಯರಸರು ಎಂಬುದನ್ನು ಸದಾಶಿವ ಮಹಾಯೋಗಿ ಎಂದು ಕರೆಯುವರು. ಅದು ಈ ಮೇಲೆ ಹೇಳಿದ

ರೇವಣಸಿದ್ಧದೇವರ ನೆಲೆ. ಅದು ಪೂರ್ವ ಮತ್ತು ಮಲ್ಯವಂತ ಪರ್ವತದ ದಕ್ಷಿಣದ ಗುಡ್ಡದ ಮೇಲಿದೆ. ಇವೆಲ್ಲ ನೆಲೆಗಳು ಅಲ್ಲಿ ಮುಖ್ಯವಾಗಿ ಕಾಣಿಸಿದೆ. ಈ ಭಾಗದಲ್ಲಿ ಆಗ ಚತುರಾಚಾರ್ಯರಿದ್ದುದನ್ನು ಹೇಳುವರು.

ಅನ್ನದಾನಿ ಸ್ವಾಮಿಗಳ ಕಳಿಮಠ : ವಿರಕ್ತ ಸಂಪ್ರದಾಯದ ಅನ್ನದಾನೀಶ್ವರಸ್ವಾಮಿಗಳ ಮಠವು ಗದಗ ಜಿಲ್ಲೆಯ ಮುಂಡರಗಿಯಲ್ಲಿದೆ. ಮುಂಡರಗಿಯಲ್ಲಿರುವ ಅನ್ನದಾನೇಶ್ವರ ಮಠದ ಸ್ವಾಮಿಗಳನ್ನು ಜಗದ್ಗುರು ಅನ್ನದಾನೇಶ್ವರ ಎನ್ನುವರು. ಈ ಮಠವು ಈ ಭಾಗದಲ್ಲಿ ಪ್ರಸಿದ್ಧಿ ಪಡೆದಿದೆ. ಗದಗ ಜಿಲ್ಲೆಯ ರೋಣ ಭಾಗದಲ್ಲಿಯೂ ಕೆಲವು ಅನ್ನದಾನೇಶ್ವರ ಮಠಗಳಿವೆ.ಶಾಸನಗಳಲ್ಲಿ ಪ್ರಾಚೀನವಾಗಿ 1538 ರಲ್ಲಿ ಅನ್ನದಾನಿ ದೇವರು ಕಾಣುವರು. ಅನ್ನದಾನಿ ದೇವರ ಹೆಸರು ಶಾಸನಗಳಲ್ಲಿ ಪ್ರಾಚೀನವಾಗಿ 1538ಕ್ಕೆ ಹೋಗುತ್ತದೆ. ಲಕ್ಷ್ಮೇಶ್ವರದಲ್ಲಿ 1538 ರಲ್ಲಿ ಜೈನರಿಗೂ ಮತ್ತು ಶೈವ ದೇವಾಲಯದವರ ನಡುವೆ ವಿವಾದ ನಡೆಯಿತು. ಉತ್ಸವದಲ್ಲಿ ದಿಕ್ಪಾಲಕರ ನಿಶಾನೆಯನ್ನೂ ಜೈನರು ಮೆರೆಸಿದರು. ಅದು ಅಲ್ಲಿನ ಸೋಮೇಶ್ವರ ದೇವಾಲಯಕ್ಕೆ ಸೇರಿದ್ದೆಂದು ಪ್ರತಿಪಾದಿಸಿ ಅದನ್ನು ಅವರು ಜಯಿಸಿದ್ದರು. ಅದಕ್ಕಾಗಿ ಜಯಪತ್ರವನ್ನು ಸೋಮೇಶ್ವರ ದೇವಾಲಯದ ಪ್ರಮುಖರಿಗೆ ಬರೆದು ಕೊಡಲಾಯಿತು. ಆ ಪ್ರಮುಖರಲ್ಲಿ ಅನ್ನದಾನಿ ದೇವರು ಒಬ್ಬರಾಗಿ ಕಾಣುವರು. ಅನ್ನದಾನಿ ದೇವರು ಮುಂದೆ 1729ರಲ್ಲಿ ಅದೇ ಲಕ್ಷ್ಮೇಶ್ವರದಲ್ಲೇ ಕಾಣುವರು. ಅಲ್ಲಿನ ಅವರ ಮಠದ ಹೆಸರು ಕಳ್ಳಿಮಠವಾಗಿದೆ. ಈಗ ಅದು ಹಾಳಾಗಿದೆ. ಅದನ್ನು ಸಚ್ಚಿದಾನಂದ ಸ್ವರೂಪಿ ಅನ್ನದಾನಿ ಸ್ವಾಮಿಗಳ ಕಳ್ಳಿಮಠದಲ್ಲಿ ಶಿವಪ್ಪ ಗೌರಕಪರಭಿ ಲಕ್ಷ್ಮಣೇಶ್ವರದ ದೇಸಾಯಿ ಯಿಂ ಮಾಡಿ ಬಹದೂರ ಕೆಂಚಪ್ಪಗೌಡರ ಜೇಷ್ಠಪುತ್ರ ಅವರ ಮಗ ಮುಮ್ಮಡಿ ಕಾನಪಗೌಡರು ಸೇರಿ ಬಿಟ್ಟ ಭೂದತ್ತಿ (1728). ಶಿವಪ್ಪ ಮಹಾದೇವಪ್ಪ ಕಳ್ಳೀಮನಿ ಅವರ ಹೊಲದಲ್ಲಿ ಈ ಶಾಸನವಿದೆ.(ಹನುಮಾಕ್ಷಿ ಗೋಗಿ : ಲಕ್ಷ್ಮೇಶ್ವರ: ಸಾಂಸ್ಕೃತಿಕ ಅಧ್ಯಯನ, ನಂ. 90, ಪು. 179). ಇಲ್ಲಿ ಕಾಣುವ ಅನ್ನದಾನಿ ದೇವರು ಆ ಬಳಿಕ ಸಚ್ಚಿದಾನಂದ ಸ್ವರೂಪಿ ಅನ್ನದಾನಿ ಸ್ವಾಮಿಗಳ ಕಳ್ಳಿಮಠ ಹೆಸರುಗಳಿಂದ ಈ ಕಾಲದಲ್ಲಿ ಅನ್ನದಾನಿ ಸ್ವಾಮಿಗಳು ಪ್ರಸಿದ್ಧಿಯಲ್ಲಿದ್ದರೆಂದು ಗೊತ್ತಾಗುತ್ತದೆ. ಪರಂಪರೆಯನ್ನು ಅವಲೋಕಿಸಿದಾಗ ಈ ಪ್ರದೇಶದಲ್ಲಿನ ಮುಂಡರಗಿ ಜಗದ್ಗುರು ಅನ್ನದಾನಿ ಸ್ವಾಮಿಗಳ ಹೆಸರನ್ನು ನೆನಪುಮಾಡುತ್ತದೆ. ಇದರಿಂದ ಇವರು ಈ ಮಠದ ಪ್ರಾಚೀನರೆಂದು ತರ್ಕಿಸಬಹುದು. ಆದರೂ ಈ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ.

ಬಸವಮಠ : ಚಂದ್ರಶೇಖರಾಮಾತ್ಯನು 1529 ರಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯ ಸಂಕಿರಣದಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಿದನು. ಆ ದೇವಾಲಯಕ್ಕೆ ಒಂದು ಹಳ್ಳಿಯನ್ನು ದಾನ ಮಾಡಿದನು. ಇದಲ್ಲದೆ ಅಲ್ಲಿಯ ಬಸವಮಠದ ನಿವಾಸಿಯೊಬ್ಬನಿಗೆ ಹಳ್ಳಿಯೊಂದನ್ನು ದಾನ ನೀಡಿದನು.

ವಿಜಯನಗರ ಕಾಲಾವಧಿಯಲ್ಲಿ ವೀರಶೈವ ಮತದ ಬೆಳವಣಿಗೆಯ ಅನೇಕ ಅಂಶಗಳು ಕಾಣುತ್ತವೆ. ಬೆಳಕಿಗೆ ಬಂದ ಹಂಪಿಯ ಶಿವಶರಣರ ನೆಲೆಗಳಲ್ಲಿ ಲಿಂಗ-ನಂದಿಗಳಿರುವುದು ಅಥವಾ ವೀರಶೈವರ ನೆಲೆಗಳಲ್ಲಿ ದೇವಾಲಯಗಳಲ್ಲಿ ಶಿವಲಿಂಗದ ಆರಾಧನೆ ಜೊತೆ ನಂದಿ ಮತ್ತು ಧರ್ಮ ಪ್ರಚಾರ ಕೇಂದ್ರಗಳಾದ ಮಠಮಾನ್ಯಗಳಿದ್ದುದು ತಿಳಿಯುತ್ತದೆ. ಆರಾಧನೆಯಲ್ಲಿ ಇಷ್ಟಲಿಂಗ, ವೀರಭದ್ರ ದೇವಾಲಯ ಮತ್ತು ನಂದಿ ಮೂರ್ತಿಗಳು ಮುಖ್ಯವಾಗಿ ವೀರಶೈವರಿಗೆ ಸೀಮಿತವಾಗಿದ್ದವೆಂದು ಪರಂಪರೆಯಿಂದ ಒಪ್ಪಿಕೊಳ್ಳಬಹುದಾಗಿದೆ.

ಜಂಗಮರು ಕಾಳಾಮುಖ ಸಂತತಿಯವರೇ?

ಶೈವಧರ್ಮದ ಬೆಳವಣಿಗೆಗೆ ಲಕುಲೀಶ-ಕಾಳಾಮುಖ-ಪಾಶುಪತ ಆಚಾರ್ಯ ಸಂತತಿಯೇ ಕಾರಣವಾಗಿದೆ. ಅದರಲ್ಲೂ ಕಲ್ಯಾಣ ಚಾಲುಕ್ಯ ಮತ್ತು ಕಳಚುರಿಯರ ಕಾಲದಲ್ಲಿ ಕಾಳಾಮುಖರು-ಪಾಶುಪತರು ನೈಷ್ಠಿಕ ಸ್ಥಾನಗಳಾದ ದೇವಾಲಯ-ಮಠಗಳ ಆಚಾರ್ಯರಾಗಿ/ ಸ್ಥಾನಾಚಾರ್ಯರಾಗಿದ್ದರು. ಮುಂದೆ ವಿಜಯನಗರ ಕಾಲದಲ್ಲೂ ಇವರು ಮುಂದುವರಿದರು. ಇವರು ಇಷ್ಟಲಿಂಗಧಾರಿಗಳಲ್ಲ ಸ್ಥಾವರಲಿಂಗ ಆರಾಧಕರು. ವೀರಶೈವರ ತತ್ವಸಿದ್ಧಾಂತದಲ್ಲಿನ ಷಟಸ್ಥಲ, ಅಷ್ಟಾವರಣ ಮತ್ತು ಪಂಚಾಚಾರಗಳು ಇವರಿಗೆ ಸೇರಿರುವುದಿಲ್ಲ. ಆದರೆ ಇವರು ಶಿವನ ಆರಾಧಕರಾಗಿದ್ದಾರೆ.

ಕೋಟಿ ಶಿವಲಿಂಗಗಳ ಅಪರೂಪದ ತಾಣ- ಪುರ : ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಒಂದು ಚಿಕ್ಕ ಗ್ರಾಮ ಪುರ. ಈ ಸ್ಥಳದ ಶಿವಲಿಂಗಗಳನ್ನು ಮತ್ತು ಶಿಲ್ಪಗಳನ್ನು ಮೊದಲು ಅಧ್ಯಯನ ಮಾಡಿ ಲೇಖನ ಮೂಲಕ ಬೆಳಕಿಗೆ ತಂದವರು

ಡಾ. ಅ. ಸುಂದರ ಅವರು. ಆ ಬಳಿಕ ಈ ನೆಲೆಯ ಸಮಗ್ರ ಶಿವಲಿಂಗ–ಶಿಲ್ಪ–ಶಾಸನಗಳನ್ನು, ದೇವಾಲಯ ಮತ್ತು ಪರಂಪರೆಗಳನ್ನು ಒಂದೆಡೆ ಅಧ್ಯಯನ ಮಾಡಿ ಒಂದು ಕೃತಿಯನ್ನು ನಾನು, ಡಾ. ಶ್ರೀಮತಿ ಸುಶೀಲ ತಾಳಿಕೋಟಿ ಮತ್ತು ಡಾ. ಎಸ್.ಕೆ. ಮೇಲಕಾರ ಬರೆದಿದ್ದೇವೆ. ಪುರದ ಊರಿನ ಪ್ರವೇಶದ ಬಲಭಾಗದಲ್ಲಿ ವಾಸ್ತುವೈವಿಧ್ಯತೆಯ ಶ್ರೀಮಂತಿಕೆಯ ಸೊಗಸಿಲ್ಲದ ಸೋಮೇಶ್ವರ ದೇವಾಲಯವಿದೆ. ಆದರೆ ಅಲ್ಲಿ ಕಲಾತ್ಮಕವಾದ ಸುಮಾರು ಕೋಟಿ ಶಿವಲಿಂಗಗಳನ್ನು ವೈವಿಧ್ಯಮಯವಾಗಿ ನಿರ್ಮಿಸಿರುವುದು ಮತ್ತು ಮಂಚ, ಚಂದ್ರ, ಇನ್ನಿತರ ದೇವರ ಶಿಲ್ಪಗಳಿರುವುದು ವಿಶೇಷವೆನಿಸಿದೆ. ಈ ಎಲ್ಲ ಪುರಾವೆಗಳು, ಸ್ಮಾರಕಗಳು ವಿಜಯನಗರ ಕಾಲದ್ದಾಗಿವೆ. ಅಲ್ಲಿಯ ನವಲಹಳ್ಳಿಯ ಶಾಸನದಿಂದ ಒಯಲಪುರದ ಆಗ್ನೇಯ ದಿಕ್ಕಿನಲ್ಲಿ ವಿಜಯನಗರ ಅರಸ ದೇವರಾಯನು ಆಳುವಾಗ ಒಂದು ಕಾಲುವೆಯನ್ನು ನಿರ್ಮಿಸಲಾಗಿದೆ. ಈ ಸ್ಥಳದಲ್ಲಿ ಓಹಿಲನಿದ್ದನೆನ್ನುವರು. ಪೌರಾಣಿಕ ಚರಿತ್ರೆಯಿಂದ ಈ ಓಹಿಲನು ಈ ಕಾಲದ ವೀರಶೈವನೆಂದು ತಿಳಿದಿದೆ.

ಪುರದ ಒಂದು ಶಾಸನದಿಂದ ತ್ರೈಲೋಕ್ಯ ವಿಜಯ ಭೂಷಣ ಸೇರಪು ಮತ್ತು ಸೋಮನಾಥ ದೇವರು ಅಲ್ಲೇ ಓಹಿಲನಿಗೆ ಶಿಲ್ಪ ಮಡುವ ಅಧಿಕಾರವನ್ನು ಮತ್ತು ದೇವಾಲಯ ನಿರ್ಮಿಸುವ ಅಧಿಕಾರವನ್ನು ಕೊಡಲಾಯಿತೆಂದು ಮತ್ತು ಅಲ್ಲಿನ ಕೋಟಿ ಶಿವಲಿಂಗಗಳ ಪೂಜೆಗಾಗಿ ಹೂವು, ಹಣ್ಣು ಮುಂತಾದ ಪದಾರ್ಥಗಳಿಗೆ ಮತ್ತು ಲಿಂಗಗಳನ್ನು ಮಾಡಿದ ಓಹಿಲನಿಗೆ ಅನೇಕ ವಸ್ತುಗಳನ್ನು ದತ್ತಿ ನೀಡಿದ ವಿವರಗಳಿವೆ. ಈ ಓಹಿಲನು ವೀರಶೈವ ಸಾಹಿತ್ಯದಲ್ಲಿ ಗುಜರಾತಿನ ಸೋಮನಾಥ ಸ್ಥಾನದಿಂದ ಈ ಪುರಕ್ಕೆ ಆಗಮಿಸಿ ಅಲ್ಲಿ ಕೋಟಿ ಲಿಂಗಗಳನ್ನು ಸೃಷ್ಟಿಸಿದನು.

ಏಕಪೀಠದಲ್ಲಿ ಅನೇಕ ಕಿರು ಲಿಂಗಗಳನ್ನು ಮಾಡಿದ ಲಿಂಗಗಳಿವೆ. ಅಂತಹ ಹಲವಾರು ಲಿಂಗಗಳನ್ನು ಅಲ್ಲಿನಕಿರುಗುಡಿಗಳಲ್ಲಿ ಮತ್ತು ಪ್ರತ್ಯೇಕವಾಗಿ ಎರಡು ಮೂರು ಸಾಲುಗಳಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ಲಿಂಗಗಳಿಗೆ ಮತ್ತು ಇನ್ನಿತರ ದೇವರಿಗೆ ನೈವೇದ್ಯ ನೀಡುವ ವೃತ್ತಾಕರದ ಶಿಲ್ಪ ಬಾನಿಯನ್ನು ಏಕಕಂಬದ ಮೇಲೆ ಕೂಡಿಸಲಾಗಿದೆ. ಅಲ್ಲಿಯ ಮೂರು ಕಾಲುಳ್ಳ ಶಿಲಾ ಹಲಗೆಯುಳ್ಳ ಮಂಚ(?), ನಂದಿ ವಿಗ್ರಹಗಳೂ ಸಹ ಅಪರೂಪದ್ದೆನಿಸಿವೆ.

ಸೋಮೇಶ್ವರ ದೇವಾಲಯ ಸುತ್ತಲಿನಲ್ಲಿ ಮೂರು ಕಡೆಗಳಲ್ಲಿ ಸಾಲಾಗಿ ಕಿರು ಗುಡಿಗಳಿವೆ. ತಲಾ ಒಂದರಲ್ಲಿ ಹೆಚ್ಚಾಗಿ ಏಕಲಿಂಗದಲ್ಲಿ ಅಡ್ಡ–ಉದ್ದ ರೇಖೆಗಳನ್ನು ಛೇಧಿಸುವ ಮುಖಾಂತರ ಹೆಚ್ಚು ಲಿಂಗಗಳನ್ನು ರಚಿಸಲಾಗಿದೆ. ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗಗಳಿವೆ. ಬದಿಯಲ್ಲಿ ಕಿರುಬಾವಿಗಳಿವೆ. ಈ ಸ್ಥಳದಲ್ಲಿನ ಸೋಮೇಶ್ವರ ದೇವಾಲಯದ ವಾಸ್ತುಶಿಲ್ಪ ಮತ್ತು ಹೇರಳ ದೇವ ದೇವತೆಯರ ಶಿಲ್ಪಗಳಿವೆ ಮತ್ತು ವೈವಿಧ್ಯಮಯ ಕೋಟಿ ಶಿವಲಿಂಗಗಳು ಶೈಲಿಯಿಂದ ಇವುಗಳು ವಿಜಯನಗರ ಕಾಲದ್ದಾಗಿವೆ.

ಗಮನಿಸುವ ಅಂಶವೆಂದರೆ (ನಂದಿಕೋಲುಳ್ಳ (?) ತ್ರಿಕಾಲುಳ್ಳ ಮಂಚ/ಹಲಗೆಯ ಬಳಕೆ ಮತ್ತು ಇನ್ನಿತರ ಕೆಲವು ಶಿಲ್ಪಗಳ ಚಾರಿತ್ರಿಕ ಹಿನ್ನೆಲೆಗಳನ್ನು ತಿಳಿಯಬೇಕಾಗಿದೆ. ಈ ಎಲ್ಲ ಶಿಲ್ಪಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಬೇಕಾಗಿದೆ. ಮತ್ತೊಂದು ಸಂಗತಿಯೆಂದರೆ ಅಲ್ಲಿನ ವೀರಭದ್ರನ ಶಿಲ್ಪ ಬಿಟ್ಟು ಇನ್ನುಳಿದವುಗಳಲ್ಲಿ ಯತಿ ಇತ್ಯಾದಿಗಳಲ್ಲಿ ಇಷ್ಟಲಿಂಗದ ಚಿತ್ರ ಕಾಣುವುದಿಲ್ಲ. ಈ ಬಗ್ಗೆಯೂ ಚಿಂತಿಸುವ ಅವಶ್ಯಕತೆಯಿದೆ. ಆಧುನಿಕ ಪರಂಪರೆಯನ್ನು ಗಮನಿಸಿದಾಗ ಈ ದೇವರ ಹೇರಳ ಪ್ರಮಾಣದ ಭಕ್ತರು ವೀರಶೈವರಾದ್ದಾರೆ. ಇಲ್ಲಿನ ಈ ದೇವಾಲಯದ ಅರ್ಚಕರು ವೀರಶೈವ ಜಂಗಮರಾಗಿದ್ದಾರೆ.

ಎಡೆಯೂರು ತೋಂಟದ ಸಿದ್ಧಲಿಂಗ ಯತಿಗಳ ನೆಲೆ–ಸಿಂಧಗಿ : ಎಡೆಯೂರು ಸಿದ್ಧಲಿಂಗ ಸ್ವಾಮಿಗಳು ವಿಜಯನಗರ ಸಂಗಮ ಮನೆತನದ ಅರಸ ಪ್ರೌಢದೇವರಾಯನ ಕಾಲದಲ್ಲಿ ಹಂಪಿಗೆ ದಯಮಾಡಿಸಿದ್ದರು. ಅವರ ಜೊತೆಯಲ್ಲಿ 701 ವಿರಕ್ತರು ಹಂಪಿಗೆ ಆಗಮಿಸಿದರು. ಅಲ್ಲಿ ವೀರಶೈವ ಮತದ ಪ್ರಚಾರಕ್ಕೆ ತಮ್ಮದೇ ಅದಂತಹ ಕೊಡುಗೆಯನ್ನು ಸಲ್ಲಿಸಿದ್ದುಂಟು. ಅಲ್ಲಿಂದ ಅವರು ವಿವಿಧ ಕಡೆಗಳಿಗೆ ಸಂಚರಿಸಿದರು. ಅದರಲ್ಲಿ ಸಿಂದಗಿ ಸ್ಥಳವೂ ಒಂದಾಗಿತ್ತೆಂದು ಕಂಡುಬರುತ್ತದೆ. ವಿಜಾಪುರ ಜಿಲ್ಲೆಯ ಸಿಂದಗಿ ಮತ್ತು ಮುದ್ದೇಬಿಹಾಳ್ ತಾಲೂಕಿನ ಸರೂರು ಮತ್ತು ತಾಲೂಕಾ ಕೇಂದ್ರವಾದ ಸಿಂದಗಿ ಮುಂತಾದ ಸ್ಥಳಗಳಲ್ಲಿ ಈ ಅವಧಿಯ ಶೈವ–ವೀರಶೈವ ಮತದ ವೈವಿಧ್ಯಮಯ ಶಿಲ್ಪಗಳಿವೆ. ಸಿಂದಗಿಯ ಸಂಗಮೇಶ್ವರ ದೇವಾಲಯದಲ್ಲಿರುವ ವೈವಿಧ್ಯಮಯ ಶಿವಲಿಂಗಗಳಲ್ಲಿ ಭಕ್ತ ಭಕ್ತೆ, ಯತಿ, ಸಪ್ತಋಷಿ, ಲಿಂಗಧಾರಿ ಭಕ್ತರು ಮುಂತಾದವರ ಕಲಾತ್ಮಕ ಶಿಲ್ಪಗಳಿವೆ. ಮೊದಲು ಈ ಶಿಲ್ಪಗಳನ್ನು ಅಧ್ಯಯನ ಮಾಡಿ ಪ್ರಕಟಿಸಿದವರು ಡಾ. ಅಂ ಸುಂದರ ಅವರು.

(ಕರ್ನಾಟಕ ಭಾರತಿ) ಅಲ್ಲಿನ ಈ ಎಲ್ಲಾ ಶಿಲ್ಪಗಳ ಕಾಲಮಾನ ಸುಮಾರು ಕ್ರಿ.ಶ. 16ನೇ ಶತಮಾನವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಸ್ಥಳದ ಈ ಎಲ್ಲಾ ಶಿಲ್ಪಗಳನ್ನು ಸುಮಾರು 25 ವರ್ಷಗಳ ಹಿಂದೆ ನಾನು ಸಹ ಅಧ್ಯಯನ ಮಾಡಲು ಅಲ್ಲಿಗೆ ಹೋದಾಗ ಹಲವಾರು ಹೊಸ ಶಿಲ್ಪಗಳು ನನಗೆ ಪತ್ತೆ ಆದವು. ಅದರಲ್ಲಿ ಯಡೆಯೂರು ತೋಂಟದ ಸಿದ್ಧಲಿಂಗೇಶ್ವರರ ಶಿಲ್ಪ ಪೀಠ, ಈ ಯತಿಯ ಮುರಿದ ಶಿಲ್ಪ ನಾಲ್ಕು ಮೂಲೆಗಳಲ್ಲಿ ನಾಲ್ಕು ಗೋ ಕಾಲು ಮುದ್ರೆಗಳುಳ್ಳ ಆಯತಾಕಾರದ ಶಿಲಾ ಬಾನಿ ಮುಖ್ಯವೆನಿಸಿವೆ. ಅದೇ ವರ್ಷ ಗದಗಿನಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾಡೆಮಿಯ ಸಮ್ಮೇಳನದಲ್ಲಿ ಈ ಶಿಲ್ಪಗಳ ಬಗ್ಗೆ ಒಂದು ಲೇಖನವನ್ನು ಮಂಡಿಸಿದೆನು. ಅದು ಅದರ ಇತಿಹಾಸ ದರ್ಶನ ಸಂಚಿಕೆಯಲ್ಲಿ ಪ್ರಕಟವಾಗಿದೆ. ಆ ಬಳಿಕ ಈ ಸ್ಥಳದ ಸಮಗ್ರ ಶಿಲ್ಪಗಳನ್ನು ಮತ್ತು ದೇವಾಲಯವನ್ನು ಅಧ್ಯಯನ ಮಾಡಿ ಹಂಪಿ ವಿಶ್ವವಿದ್ಯಾಲಯವು ಅಲ್ಲಿ ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಮಂಡಿಸಿದೆನು. ಆ ಕೃತಿಯೂ (ಸಿಂದಗಿ) ಈಗ ಪ್ರಕಟವಾಗಿದೆ.

ಒಂದು ಎತ್ತರವಾದ ದೊಡ್ಡ ಶಿಲಾಪೀಠವನ್ನು ಅಲ್ಲಿನ ಸಂಗಮೇಶ್ವರ ದೇವಾಲಯದ ಹೊರಗಡೆಯ ಮೂಲೆಯಲ್ಲಿ ಎಸೆಯಲಾಗಿತ್ತು. ಅದರ ಮೇಲೆ ಮಣ್ಣು ಹರಡಿತ್ತು. ಅದನ್ನು ಸ್ವಚ್ಛಗೊಳಿಸಿದಾಗ ಅದರ ಮುಮ್ಮುಖದಲ್ಲಿ ಆಯತಾಕಾರದ ಗೂಡಿನಲ್ಲಿ ಶಿಲ್ಪವನ್ನು ಕಂಡರಿಸಿದ್ದು ಗೋಚರಿಸಿತು. ಅದರಲ್ಲಿ ಒಂದು ಆಕಳು ನಿಂತಿದೆ. ಅದರ ಕೆಚ್ಚಲ ಕೆಳಗೆ ಮತ್ತು ನಾಲ್ಕು ಕಾಲುಗಳ ಮಧ್ಯ ಒಬ್ಬ ಯತಿ ಧ್ಯಾನಾಸಕ್ತನಾಗಿ ಯೋಗಮುದ್ರೆಯಲ್ಲಿ ಕುಳಿತಿದ್ದಾರೆ. ಆಕಳಿನ ಬದಿಗಳಲ್ಲಿ ಆಕಳಿನ ಒಡೆಯರು ನಿಂತಿದ್ದಾರೆ. ಈ ರೀತಿಯ ಚಿತ್ರದೃಶ್ಯವು ಯಡೆಯೂರಿನ ತೋಂಟದ ಸಿದ್ಧಲಿಂಗ ಯತಿಗಳ ಕಥೆಯನ್ನು ಹೋಲುತ್ತದೆ. ಸಂಗಮೇಶ್ವರ ದೇವಾಲಯ ಸಂಕಿರಣದಲ್ಲಿ ಒಂದು ಯತಿಯ ಶಿಲ್ಪವಿದೆ. ಅದು ಮುರಿದಿದೆ. ಅದರ ಕೆಳಭಾಗ ಸ್ಥಾನಪಲ್ಲಟವಾಗಿದೆ. ಈ ಶಿಲ್ಪವನ್ನು ಈ ಪೀಠದ ಮೇಲೆ ಮೊದಲು ಕೂಡಿಸಿರಬೇಕೆಂದು ಕಾಣುತ್ತದೆ. ಹೀಗಾಗಿ ಈ ಪೀಠ ಮತ್ತು ಶಿಲ್ಪವು ಈ ಯತಿವರ್ಯರದೆಂದು ಗುರುತಿಸಿದೆನು. ಅದರ ಪಕ್ಕದಲ್ಲೇ ಕಿರು ಆಳವುಳ್ಳ ಆಯತಾಕಾರದ ಶಿಲಾಬಾನಿಯಿತ್ತು. ಅದರ ನಾಲ್ಕು ಮೂಲೆಗಳಲ್ಲಿ ನಾಲ್ಕು ಆಕಳ ಕಾಲಿನ ಪಾದಮುದ್ರೆಗಳಿವೆ. ಈ ಫಲಕವು ಆ ಗೋವಿನ ನೀರಿನ ಬಾನಿ ಇರಬೇಕು. ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರ ಕಥೆಯಲ್ಲಿ ಅವರು ತಪಸ್ಸನ್ನಾಚರಿಸುವಾಗ ಅವರ ಮೇಲೆ ಎತ್ತರದ ಮಣ್ಣಿನ ಹುತ್ತ ಬೆಳೆಯಿತು. ನಿತ್ಯ ಒಂದು ಆಕಳು ಅಲ್ಲಿಗೆ ಬಂದು ಆ ಹುತ್ತದ ಮಧ್ಯ ನಿಂತು ತನ್ನ ಕೆಚ್ಚಲಿನಿಂದ ಹಾಲನ್ನು ಕರೆದು ಹೋಗುತ್ತಿತ್ತು. ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ ಯತಿಗಳು ಮತ್ತು 101 ವಿರಕ್ತರು ಇನ್ನಿತರರು ವಿಜಯನಗರ ರಾಜಧಾನಿಯಾಗಿದ್ದ ಹಂಪಿಯಲ್ಲಿದ್ದು ಅಲ್ಲಿಂದ ವಚನ ಸಾಹಿತ್ಯ ಸಂಗ್ರಹಣೆ ಇತ್ಯಾದಿ ಕಾಯಕದ ಜೊತೆಗೆ ವೀರಶೈವ ಮತವನ್ನು ಪ್ರಚಾರ ಮಾಡಿದ ಚರಿತ್ರೆಯಿದೆ.

ಇಷ್ಟೊಂದು ದೊಡ್ಡದಾದ ಈ ಪೀಠದ ನಡುವೆ ಮೂರ್ತಿಯನ್ನು ಕೂಡಿಸಲು ಅನುಕೂಲವಾಗಲು ಚೌಕಾದ ಗುಣಿ/ ರಂಧ್ರವಿದೆ. ಅಲ್ಲಿ ದೊಡ್ಡದಾದ ಮುರಿದ ಒಂದು ಯತಿಯ ಶಿಲ್ಪವಿದೆ. ಆ ವಿಗ್ರಹವನ್ನು ಆ ರಂಧ್ರದಲ್ಲಿ ಮೂಲತಃ ಕೂಡಿಸಿರಬೇಕು.

ಸುಮಾರು 25 ವರ್ಷಗಳ ಹಿಂದೆ ಈ ದೇವಾಲಯವನ್ನು ಪರಿಶೀಲಿಸಿದಾಗ ಋಷಿ, ಮುನಿ, ಭಕ್ತ, ಭಕ್ತೆಯರು ಮುಂತಾದ ಶಿಲ್ಪಗಳನ್ನು ಈ ದೇವಾಲಯದ ಎಡಗಡೆಗೆ 2–3 ಸಾಲುಗಳಲ್ಲಿ ಎದುರು ಬದುರಾಗಿ ನಿಲ್ಲಿಸಲಾಗಿತ್ತು. ಈಗ ಆ ಸಾಲುಗಳು ಸಂಪೂರ್ಣವಾಗಿ ಬದಲಾಗಿವೆ. ಅಲ್ಲಿನ ಶಿಲ್ಪಗಳೆಲ್ಲ ಈ ದೇವಾಲಯದ ಸಂಕಿರಣದಲ್ಲಿ ಹರಡಿವೆ. ಏಕೆಂದರೆ ತದನಂತರದ ಕಾಲದಲ್ಲಿ ಈ ಸ್ಥಳವನ್ನು ದುರಸ್ತಿ ಮಾಡಿಸಿದಾಗ ಅಲ್ಲಿ ವಿಶಾಲ ಆವರಣ ನಿರ್ಮಾಣವಾಗಿದೆ. ಮೂಲ ಸ್ಥಿತಿಯಲ್ಲಿದ್ದ 2–3 ಸಾಲುಗಳ ಮುನಿ–ಭಕ್ತ/ಭಕ್ತೆಯರ ಮುಂತಾದವರ ಶಿಲ್ಪಗಳ ಒಂದು ಮುಖದಲ್ಲಿ ಪ್ರಧಾನವಾಗಿ ಈ ಮೇಲೆ ವಿವರಿಸಿದ ಎಡೆಯೂರ ತೋಂಟದ ಸಿದ್ಧಲಿಂಗ ಶಿಲ್ಪವನ್ನು ಆಕಳಿನ ಬಾನಿಯನ್ನು ಪ್ರತಿಷ್ಠಾಪಿಸಿರಬೇಕೆಂದು ತರ್ಕಿಸಬಹುದು.

ಒಟ್ಟಾರೆ ಅಲ್ಲಿನ ಸಮಗ್ರ ಶಿವಲಿಂಗ, ಮುನಿ–ಭಕ್ತ–ಭಕ್ತೆಯರ ಮತ್ತು ಇನ್ನಿತರ ಶಿಲ್ಪಗಳನ್ನು ಅಧ್ಯಯನ ಮಾಡಿದೆನು. ಅದರಿಂದ ಇವೆಲ್ಲವುಗಳನ್ನು ಮೂರು ಕಾಲಘಟ್ಟಗಳನ್ನಾಗಿ ವರ್ಗೀಕರಿಸಿರುವೆನು. ಮೊದಲನೆಯದು 12ನೇ ಶತಮಾನ. ಎರಡನೆಯದು 14–16ನೇ ಶತಮಾನ, ಮೂರನೆಯದು 16ನೇ ಶತಮಾನದಿಂದ 17ನೇ ಶತಮಾನ. ಈ ವರ್ಗೀಕರಣದಿಂದ ಮೊದಲು ಅಲ್ಲಿ ಶುದ್ಧ ಶೈವ ಲಕ್ಷಣದ ಸ್ಥಾವರ ಶಿವಲಿಂಗಗಳಿದ್ದವು. ಎರಡನೇ ಕಾಲಘಟ್ಟದಲ್ಲಿ ಮುನಿ, ಭಕ್ತರ, ಭಕ್ತೆಯರ,

ಶಿವಲಿಂಗಗಳ (ಏಕಲಿಂಗದಲ್ಲಿ ಅನೇಕ ಲಿಂಗಗಳ ನಿರ್ಮಾಣ) ನಂದಿ ಮುಂತಾದ ಶಿಲ್ಪಗಳಿದ್ದವು. ಆ ಶಿಲ್ಪಗಳ ಸಮೂಹದಲ್ಲಿ ಪ್ರತ್ಯೇಕವಾಗಿ ಯಡೆಯೂರ ತೋಂಟದ ಸಿದ್ಧಲಿಂಗಯತಿವರ್ಯರ ಶಿಲ್ಪವನ್ನು ಪ್ರಧಾನವಾಗಿ ಪ್ರತಿಷ್ಠಾಪಿಸಿರಬೇಕು.

ಈ ವಿವರಣೆಗಳಿಂದ ಸಂಗಮೇಶ್ವರ ದೇವಾಲಯವು ಮೊದಲು ಶೈವಮತಕೇಂದ್ರವಾಗಿತ್ತು. ಆ ಬಳಿಕ ಶೈವ–ವೀರಶೈವರ ಕೇಂದ್ರವಾಗಿ ಪರಿವರ್ತನೆ ಹೊಂದಿತು. ಮುಂದೆ ವೀರಶೈವ ಕೇಂದ್ರವಾಗಿ ಬದಲಾವಣೆ ಆಗಿರಬಹುದಾದ ಲಕ್ಷಣಗಳಿವೆ.ಈ ಭಾಗ ಆಗ ಬಹಮನಿ ಮತ್ತು ಆದಿಲ್‌ಷಾಹಿಗಳ ಅಧೀನದಲ್ಲಿದ್ದಾಗ ಇಷ್ಟೊಂದು ಪ್ರಮಾಣದಲ್ಲಿನ ಶಿಲ್ಪಗಳು ವೀರಶೈವ ಕೇಂದ್ರವಾಗಿ ಮಾರ್ಪಟ್ಟಿದ್ದು ವಿಶೇಷವೆನಿಸಿದೆ. ಈ ಕೇಂದ್ರದ ಬೆಳವಣಿಗೆಗೆ ಅಲ್ಲಿದ್ದ ಸುಲ್ತಾನರೂ ಸ್ಥಳೀಯ ಅಧಿಕಾರಿಗಳು ಸಹಾಯ–ಸಹಕಾರ ನೀಡಿರಬಹುದು. ಈ ಕೇಂದ್ರದ ಬೆಳವಣಿಗೆಗೆ ಆಗ ಪ್ರಸಿದ್ಧಿಯಲ್ಲಿದ್ದ ಯಡೆಯೂರು ತೋಂಟದ ಸಿದ್ಧಲಿಂಗ ಯತಿಗಳ ಪ್ರಭಾವವೂ ಕಾರಣವಾಗಿರಬಹುದು.

ಮುದ್ದೇಬಿಹಾಳ ಪ್ರದೇಶದಲ್ಲಿ 12–13ನೇ ಶತಮಾನದಲ್ಲಿ ಹಲವಾರು ಶಿವಶರಣರು ಪ್ರಸಿದ್ಧಿಯನ್ನು ಪಡೆದಿದ್ದರು. ಅವರಲ್ಲಿ ಸಿದ್ಧರಾಮ ಮುಂತಾದವರನ್ನು ಶಾಸನಗಳಲ್ಲಿ ಕಾಣುವರು. ಈ ತಾಲೂಕಿನ ಸರೂರಿನ ರೇವಣಸಿದ್ಧ ದೇವಾಲಯವು 13ನೇ ಶತಮಾನದ್ದಾಗಿದೆ. ಅದರಲ್ಲಿನ 14–15ನೇ ಶತಮಾನದ ಕೆಲವು ಶೈವ ಯತಿಯರ ಶಿಲ್ಪಗಳಿವೆ. ಅಲ್ಲಿ ದೇವಾಲಯದ ಶಿವಲಿಂಗ ಆರಾಧನೆಯನ್ನು ಕಾಣುತ್ತೇವೆ. ಈ ಬಗ್ಗೆ ತುಲನಾತ್ಮಕ ಅಧ್ಯಯನವನ್ನು ಕೈಗೊಂಡರೆ ಈ ಮತದ ಇನ್ನೂ ಹೆಚ್ಚಿನ ವಿಶಿಷ್ಠ ಅಂಶಗಳು ತಿಳಿದುಬರುತ್ತವೆ.

ವೀರಶೈವರಲ್ಲಿ ಪ್ರಮುಖ ಸ್ಥಳಗಳಲ್ಲೊಂದಾದ ಸ್ಥಳ ಗುಮ್ಮಳಾಪುರ. ಇದು ಬೆಂಗಳೂರಿನಿಂದ 30 ಮೈಲು ದೂರವಿದೆ. ಅಲ್ಲಿ ವೀರ ಮಹೇಶ್ವರರು ಮಹಾಶಿವರಾತ್ರಿಯ ಪುಣ್ಯಕಾಲದಲ್ಲಿ ವೈದಿಕ ಬ್ರಾಹ್ಮಣರಾದ ವೆಂಕಟೇಶ ದೀಕ್ಷಿತರಿಗೆ ಭೂದಾನ ನೀಡಿದ ವಿವರಗಳಿವೆ. ಅಲ್ಲಿ 1474 ಫೆಬ್ರವರಿ–ಮಾರ್ಚ್‌ನ ಕಾಲದ ಎರಡು ತಾಮ್ರಶಾಸನಗಳಿರುವುದು ವಿಶೇಷವೆನಿಸಿದೆ. ಒಂದು ತಾಮ್ರಶಾಸನದ ಮೇಲೆ ಸೂರ್ಯ–ಚಂದ್ರರ ನಡುವೆ ಶ್ರೀಗುರುವೇ, ಅದರ ಮೇಲೆ ಶ್ರೀ ವೀರೇಶ್ವರ ಎಂದು ಬರೆಯಲಾಗಿದೆ. ಎರಡರಲ್ಲಿ ಹಸುವಿದೆ. ಇದು ಬ್ರಾಹ್ಮಣ ಮತ್ತು ವೀರಶೈವರ ನಡುವಿನ ನಿಕಟ ಸಂಬಂಧವನ್ನು ಬೆಸೆದಿರಬಹುದು.

ಅನೇಕ ಸಂಸ್ಥಾನಗಳು ವೀರಶೈವ ಮಠಗಳ ಅನುಯಾಯಿಗಳಾಗಿದ್ದವು. ಅವರಲ್ಲಿ ಅನೇಕರು ಲಿಂಗಾಯತ/ವೀರಶೈವ ದೇಶಗತಿ ಮನೆತನಕ್ಕೆ ಸೇರಿದ್ದಾರೆ. (ಕಿತ್ತೂರ, ಬೆಳವಡಿ, ಶಿರಸಂಗಿ, ಇಕ್ಕೇರಿ ಮುಂತಾದವುಗಳು) ಹಲವಾರು ಸಂಸ್ಥಾನಗಳಲ್ಲಿ ಕೆಳದಿ, ಸೋಂದ ಮುಂತಾದ ಸಂಸ್ಥಾನಗಳು ಸೇರಿವೆ. ಅವರಲ್ಲಿ ದೊಡ್ಡ ಸಂಕಣ್ಣ ನಾಯಕನೆನ್ನುವವನು ಅನೇಕ ಕಡೆಗಳಲ್ಲಿ ವೀರಶೈವ ಮಠಗಳನ್ನು ಸ್ಥಾಪಿಸಿದ್ದು ವಿಶೇಷವೆನಿಸಿದೆ.

ತಲಕಾಡು (ಮೈಸೂರು ಹತ್ತಿರ) ಹಂಪಿಯ ಉತ್ಖನನಗಳಲ್ಲಿ ಕೆಲವೆಡೆ ಕಿರುಶಿವಲಿಂಗಗಳು ಸಿಕ್ಕಿವೆ. ಇವು ಕಂಠಿಇಡದ ಲಿಂಗಗಳು. ಅವುಗಳು ವೀರಶೈವರ ಇಷ್ಟಲಿಂಗಗಳಿರಬಹುದು. ಈ ಅವಧಿಯಲ್ಲಿ ಕುರುಗೋಡಿನ ಸಿಂಧರ ಒಂದು ಶಾಸನದಲ್ಲಿ ಬಸವ ಮತದ ಉಲ್ಲೇಖವಿದೆ. ಹಡಗಲಿ ತಾಲೂಕಿನ ಒಂದು ಶಾಸನದಲ್ಲಿ (16) ನೊಣಬರ ಚೌಡಯ್ಯನು ಶಿವಾಚಾರಕ್ಕೆ ಕುಲಾಚಾರಕ್ಕೆ ತಪ್ಪಿದವನೆಂದು ಹೇಳಲಾಗಿದೆ. ಪ್ರಾಚೀನ ಕದಂಬರ ರಾಜಧಾನಿ ಆಗಿದ್ದ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಈ ಅವಧಿಯಲ್ಲಿ ಮಯಾ ಕೋಲಾಹಲದ ಕಥಾನಕ ಅಂಶಗಳು ಜರುಗಿದ್ದು ತಿಳಿದು ಬರುತ್ತದೆ.

ಇನ್ನೊಂದೆಡೆ ತಮಿಳುನಾಡಿನಲ್ಲಿ ಅಸ್ಥಿತ್ವದಲ್ಲಿದ್ದ ಶೈವ ಪರಂಪರೆಯ 63 ಪುರಾತನರು ಮತ್ತು ಅವರ ಶಿಲ್ಪಗಳು ಕರ್ನಾಟಕದಲ್ಲೂ ಈ ಅವಧಿಯಲ್ಲಿ ಪ್ರಸಿದ್ಧಿಯನ್ನು ಪಡೆದವು. ಕೆಲವು ಕಾರಣಗಳಿಂದ ಇವರ ವಿಗ್ರಹಗಳು ವೀರಶೈವ ಮತಕ್ಕೆ ಪ್ರಭಾವ ಬೀರಿವೆ.

ಸಮಕಾಲೀನ ಧಾರ್ಮಿಕ ವಿವಾದಗಳು :

ಈ ಅವಧಿಯಲ್ಲಿ ಅನೇಕ ಕಡೆಗಳಲ್ಲಿನ ಧಾರ್ಮಿಕ ಕೇಂದ್ರಗಳಲ್ಲಿ ವ್ಯಾಜ್ಯ/ಘರ್ಷಣೆ/ಮತೀಯ ಗಲಭೆಗಳು ನಡೆದವು. ವೀರಶೈವ ಮತ್ತು ಜೈನರ ನಡುವೆ ಪುಲಿಗೆರೆಯಲ್ಲಿ ಎರಡು ಸಲ ವಿವಾದಗಳು ನಡೆದವು. ಇನ್ನೊಂದು ವೈಷ್ಣವರು ಜೈನರ ವಿರುದ್ಧ ನಡೆಸಿದ ಗಲಭೆಗಳೆಂದು ಕಾಣುತ್ತವೆ. ಮೂರನೆಯದು ಮಾಧ್ವ ಮತ್ತು ವೀರಶೈವರ ನಡುವೆ ನಡೆದ

ಜಗಳವೆಂದುಕಾಣುತ್ತದೆ. ನಾಲ್ಕನೆಯದು ಈ ಅವಧಿಯ ಪೂರ್ವದಲ್ಲಿ ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಬಗ್ಗೆ ಧಾರ್ಮಿಕ ಘರ್ಷಣೆ ನಡೆಯಿತು. ಐದನೆಯದು ಶ್ರೀಶೈಲದಲ್ಲಿ ಎರಡು ಮತದ ಮಠಗಳ ನಡುವೆ ವಿವಾದ ನಡೆಯಿತು. ಆರನೆಯದು ಶ್ರೀಶೈಲದಲ್ಲಿ ಅಲ್ಲಿನ ವೀರಶೈವರು ಜೈನರ ವಿರುದ್ಧ ಘರ್ಷಣೆ ನಡೆಸಿದರು. ಹೀಗೆ ಅನೇಕ ವಿವಾದ/ಘರ್ಷಣೆಗಳು ಈ ಅವಧಿಯಲ್ಲಿ ಅಲ್ಲಲ್ಲಿ ನಡೆದದ್ದನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ.

1. ಜೈನ ವೀರಶೈವರ ನಡುವಿನ ವ್ಯಾಜ್ಯ/ವಿವಾದಗಳು :

ಸೋಮೇಶ್ವರ ದೇವಾಲಯದ ಆಚಾರ್ಯ ಶಿವರಾಮಯ್ಯ ಮತ್ತು ಶಂಖ ಬಸದಿಯ ಹೇಮದೇವಾಚಾರ್ಯರ ನಡುವೆ ತಮ್ಮ ತಮ್ಮ ದೇವಸ್ಥಾನಗಳ ಭೂಮಿಯ ವಿವಾದ ಉಂಟಾ(1412, ನವೆಂಬರ್ 2, ರವಿವಾರ)ಯಿತು.ಆಗ ಅವರು ತಮ್ಮ ಬಿನ್ನಹಪತ್ರವನ್ನು ವಿಜಯನಗರದ ಅರಸ 2ನೇ ಹರಿಹರ ಕುಮಾರ ದೇವರಾಯನು ಕ್ರಿ.ಶ. 1412 ರಲ್ಲಿ ಆಳುವಾಗ ಮಹಾಪ್ರಧಾನ ನಾಗಂಣ ದಂಡನಾಯ್ಕರಿಗೆ ಸಲ್ಲಿಸಿದರು. ಆಗ ಪುರೋಹಿತ ಸಂಗಮ ದೇವಗಳು ಅರಮನೆಯ ವಿದ್ವಾಂಸರುಗಳು ಸೇರಿಕೊಂಡು ಈರ್ವರಲ್ಲಿದ್ದ ಶಾಸನ ದಾಖಲೆಗಳನ್ನು ಓದಿಸಿ ನೋಡಿದರು. ತಪ್ಪನ್ನು ತಿದ್ದುಪಡಿ ಮಾಡಿ ಜೈನ ಬಸದಿಯ ಹೇಮದೇವನಾಚಾರ್ಯರಿಗೆ ಅದನ್ನು ನಿರ್ವಹಿಸಲು ಜಯಪತ್ರವನ್ನು ಕೊಟ್ಟರು. ಅದರಲ್ಲಿ ವಿದ್ವಾಂಸರುಗಳು ಹೇಳಿದ ಹಾಗೆ ಕೇಳುವೆನೆಂದು ದಂಡನಾಯಕರ ಹೆಸರ ಆಣೆ ವೋಲೆಗಳನ್ನು ತಿದ್ದಿಕೊಟ್ಟರು.

ಈ ನಿರ್ಣಯದ ಮೊದಲು ಶಂಖಬಸದಿಯ ಹೇಮದೇವಾಚಾರ್ಯರ ಕೈಯ್ಯಲ್ಲಿದ್ದ ಶಾಸನಗಳನ್ನು ಓದಿಸಿ ನೋಡಿದರು. ಅದರಲ್ಲಿ ಉಲ್ಲೇಖವಾದ ಭೂಮಿಯ ವಲಯವನ್ನು ಪಟದಲ್ಲಿ ನೋಡಿದರು. ಆ ಬಳಿಕ ಸೋಮೇಶ್ವರ ದೇವಾಲಯದ ಆಚಾರ್ಯ ಸಿವರಾಮಯ್ಯಗಳ ಅಂಣ್ಣ ಗಂಗಂಣ ಅಯ್ಯಗಳ ಕೈಯ್ಯಲ್ಲಿದ್ದ ಶಾಸನಗಳನ್ನು ಓದಿಸಿ ನೋಡಿದರು. ಆಗ ಹುಲಿಗೆರೆಯ ಈಶಾನ್ಯದ ಮನ್ನೆಯ ಹೊಲದೊಳಗೆ 40 ಮತ್ತರದ ಭೂಮಿಯ ಚತುರ್‌ಸೀಮೆಯನ್ನು ಒಂದು ಕಡೆ ಬಂದು ಪರಿಶೀಲಿಸಿದರು. ಆಗ ದಕ್ಷಿಣದ ಬೆಳ್ಳನೂರ ಪೂರ್ವ (ಮೂಡಲು) ಪಶ್ಚಿಮ (ಪಡುವಲು) ಶಂಖಬಸದಿಯ ಭೂಮಿ, ಮೂಡಲಿನ ಶಂಖ ಬಸ್ತಿಯ ಸೀಮೆಯನ್ನು 40 ಮತ್ತರ ಭೂಮಿಯ ಚತುಸ್ಸೀಮೆಯನ್ನು ಅಳೆದರು. ಸುಮಾರು 6000 ಮೂಡನೆಲದಲ್ಲಿ 14 ಮತ್ತರ ಭೂಮಿಯ ವಿವರ ಕಂಡಿತು. ಅದರಲ್ಲಿನ ಭೂಮಿಯ ಬಗ್ಗೆ ಈರ್ವ್ವರಲ್ಲಿ ವಿವಾದವಿತ್ತೆಂದು ಅರಿತರು. ಈ ಭೂಮಿಯ ವ್ಯವಸಾಯವನ್ನು ಕುದನೂರು ಹಿರಿಯಂಣಗಳು ಬೊಮ್ಮಯಸಾವಪ್ಪದೇಹರದ ಸೋಮಪ್ಪ, ಮಾರ್ಗದ ಮುರುಕಯ್ಯ ಮಾಡಬೇಕಾಗಿದ್ದರೆಅದರ ಆಣೆ ಮೀರಿ ಸಿಮರಾಮಯ್ಯಗಳವರು ಮಾಡುತ್ತಿದ್ದರು ಎನ್ನಲಾಗಿದೆ. ಆ ಭೂಮಿಯಲ್ಲಿ ಬಂದ ಬೆಳೆಯನ್ನು ಕಾಲಕಾಲಕ್ಕೆ ಕೈಗೆ ಸಿಕ್ಕಿದಷ್ಟನ್ನು ಅವರು ಪಡೆಯುತ್ತಿದ್ದರೆಂಬ ಆರೋಪವಿತ್ತು. ಇಂತಹ ಪರಿಸ್ಥಿತಿಯಲ್ಲಿ ಹುಲಿಗೆರೆ ನಾಗಗೌಡ ಸಮಸ್ತ ನಾಗಿಸೆಟ್ಟಿ ಮುಖಂಡರ ಕಾಮಿಸೆಟ್ಟಿ ಗಡ್ಡದ ಕೇತಿಸೆಟ್ಟಿ ಮುಂತಾದ ಗೌಡ ಪ್ರಜೆಗಳು ಅವರು ಆಣೆಯಟ್ಟಿದನ್ನು ಹುಲಿಗೆರೆಯ ಗೌಡಪ್ರಜೆಗಳು ಬಲ್ಲರೆಂದು ಹೇಮದೇವಾಚಾರ್ಯರು ಹೇಳಿದರು. ಆಗ ವಿದ್ವಾನುಗಳು ಸಿವರಾಮಯ್ಯಂಗಳ ಅಣ್ಣ ಗಂಗಂಣಯ್ಯರನ್ನು ಮತ್ತು ಹೇಮಾಚಾಯರನ್ನು ಕರೆಸಿದರು.
ಹರಿಹರರಾಯರ ಮನ್ವಂತರ ಪರಿಯಂತರವಾಗಿ ಈ ಮೂರು ಕೈಯ ಭೂಮಿಯನ್ನು (4 ಮತ್ತರ ಭೂಮಿ) ಸಿವರಾಯ ಅಯ್ಯಗಳು ಅಕ್ರಮಣವಾಗಿ ಭೋಗಿಸುತ್ತಿದ್ದರು. ಆ ಮೂರು ಕೈಯ ಭೂಮಿಯು ಆ ಹೇಮದೇವಾಚಾರ್ಯರಿಗೆ ಸೇರುತ್ತದೆ ಎಂದು ಅಲ್ಲಿನ ನಾಡಗೌಡ ಮುಂತಾದ ಪ್ರಜೆಗಳು ಹೇಳಿದರು. ಅದನ್ನು ಮರ್ಯಾದೆಯಿಂದ ತಿದ್ದಿಕೊಂಡರೆಂದು ನಾಗಂಣದಂಡನಾಯಕರ ಹೆಸರ ಆಣೆ ಬರೆದ ಓಲೆಯನ್ನು ತಯಾರಿಸಿದರು. ಆ ಓಲೆಯಲ್ಲಿ ಬರೆದ ಪ್ರಕಾರ ನಾಗಗೌಡ ಮುಂತಾದ ಗೌಡ ಪ್ರಜೆಗಳು ಹೇಳಿದ ಹಾಗೆ ಕೇಳುವೆವು ಎಂದು ದಂಡನಾಯಕರ ಹೆಸರು ಬರೆದು ಓಲೆಯನ್ನು ಕೊಟ್ಟರು. ಶಿವರಾಮಯ್ಯಗಳ ಅಂಣ್ಣ ಗಂಗಂಣ ಅಯ್ಯನು ನಾಗಗೌಡ ಮುಂತಾದ ಪ್ರಜೆಗಳು ಹೇಳಿದ ಹಾಗೆ ಕೇಳುವೆನೆಂದು ದಂಡನಾಯಕರ ಹೆಸರಿನಿಂದ ಆಣೆ ಬರೆದುಕೊಟ್ಟರು.

ಹುಲಿಗೆರೆಯ ಈಶಾನ್ಯ ಹೊಲದ ನಾಲ್ಕು ಮತ್ತರು ಭೂಮಿಯು ಶಂಖ ಬಸ್ತಿಯದೆಂದು ಮತ್ತು ಈ ಬಗ್ಗೆ ಹೇಮದೇವಾಚಾರ್ಯರಿಗೆ ವಿವಾದವನ್ನು ಮಾಡಬಾರದೆಂದೆನ್ನಲಾಗಿದೆ. ಕೊನೆಗೆ ಈ ಭೂಮಿಯ ವಿವಾದವನ್ನು ತಿದ್ದಿ

ಅರಮನೆಯ ಪುರೋಹಿತ ಸಂಗಮದೇವಗಳು ಮತ್ತು ವಿದ್ವಾನುಗಳು ಶಂಖ ಬಸದಿಯ ಹೇಮದೇವಾಚಾರ್ಯರಿಗೆ ಜಯಪತ್ರ ಕೊಟ್ಟರು. ಆಗ ಈ ಸಂಗಮದೇವರ ಸ್ವಹಸ್ತದಿಂದ ಶ್ರೀಧರ ಧೀಕ್ಷಿತರು, ಚೆನ್ನಕೃಷ್ಣ, ತಾರ್ಕಿಕ ನರಹರಿ ಭಟ್ಟರು ಮತ್ತು ಬುಕ್ಕಂಣಗಳ ಸಮ್ಮುಖದಲ್ಲಿ ಶಾಸನವನ್ನು ಬರೆಸಿದಂತೆ ಕಾಣುತ್ತದೆ.

2. ಜೈನ–ವೀರಶೈವರ ನಡುವಿನ ವ್ಯಾಜ್ಯ : ಲಕ್ಷ್ಮೇಶ್ವರ ತಾಲ್ಲೂಕಾ ಕಥೇರಿಯ ತೃಟಿತ 1538 ಏಪ್ರಿಲ್ 29ರ ಶಾಸನದಲ್ಲಿ (ಏಸ್.ಐ.ಐ. 20, ನಂ. 391) ಶಂಖ ಬಸದಿಯ ಸಂಖಣಾಚಾರ್ಯ ಮತ್ತು ಹೇಮಣಾಚಾರ್ಯ ಪ್ರಮುಖ ಜೈನರಿಗೂ ಮತ್ತು ಸೋಮನಾಥ ದೇವಾಲಯದ ಕಾಳಹಸ್ತಿದೇವರು ಮತ್ತು ಶಿವರಾಮದೇವ ಪ್ರಮುಖ ಶೈವರ (?) ನಡುವೆ ನಡೆದ ವ್ಯಾಜ್ಯದ ಜಯಪತ್ರದ ವಿವರಗಳಿವೆ. (ಎಸ್.ಐ.ಐ. 20, ನಂ. 391) ಇದರಲ್ಲಿ ಮರ್ತ್ಯಲೋಕದ ಮಹಾಗಣಂಗಳನ್ನು ಸ್ಮರಿಸಲಾಗಿದೆ. ಮುಂದೆ ಮುಖ್ಯ ವಿಷಯಗಳನ್ನು ಹೀಗೆ ಬರೆಯಲಾಗಿದೆ. ಅಲ್ಲಿನ ಸೋಮೇಶ್ವರದೇವರಿಗೆ ಸಲ್ಲುವ ಅಷ್ಟದಿಕ್ಪಾಲಾದಿಗಳ ಧ್ವಜಪತಾಕಾದಿಗಳನ್ನು ಶಂಖ ಬಸ್ತಿಯ ಶಾಂತಿ ತೀರ್ಥಂಕರ ಉತ್ಸವದಲ್ಲಿ ಪ್ರಜ್ಞಾಹೀನತೆಯಿಂದ ತೋರಿಸಿದರು. ಅವರು ಮಾಡಿದ ಶಿಕ್ಷೆಗಳಿಗೊಳಗಾಗಿ ಕಾಲತ್ರಯದೊಳು ವೇದಶಾಸ್ತ್ರ ಪುರಾಣಾಗಮಾದಿಗಳು ಸಲ್ಲವೆಂದರು, ಇದನ್ನು ಶ್ರೀಕಾಳಹಸ್ತಿದೇವರ ಸತ್ಯವಚನ ಸಮುದಾಯದಿಂದ ಕೇಳಿದರು. ಆಗ ಜಿನಸಮಯಕ್ಕೆ ದಿಕ್ಪಾಲಾದಿಗಳ ಧ್ವಜಗಳು ಸಲ್ಲವೆಂದು ಜಯಪತ್ರವನ್ನು ವಿತರಿಸಿದರು. ಈ ಜಯಪತ್ರಿಕೆಯನ್ನು ಅಲ್ಲಿಯ ಮಠದ ಲಿಂಗಣೊಡೆಯರು, ದೇವರ ಪೂಜೆಯ ದೇವರು, ಅನ್ನದಾನಿ ದೇವರು, ಭೋಗವ ದೇವರು, ವೀರಬಸವ ಗಜದೇವರು, ನಾಡಕಂಥೆಯ ದೇವರು, ರಾಚವಟ್ಟೆಯೊಡೆಯರು, ಹುಲಿಗೆರೆಯ ಪುರನಿವಾಸಿಗಳು ಮರ್ತ್ಯಲೋಕದ ಮಹಾಗಣಂಗಳು ಪಡೆದರು. ಈ ಶಾಸನದಲ್ಲಿ ಜಯಪತ್ರಿಕೆಯನ್ನು ಪಡೆದವರೆಲ್ಲರೂ ವೀರಶೈವ ಮತದವರಾಗಿದ್ದಾರೆ. ಅದರಲ್ಲಿ ಹೇಳಿರುವ ಅನ್ನದಾನಿ ದೇವರು ಪ್ರಸಿದ್ಧಿಯಲ್ಲಿರುವ ಮುಂಡರಗಿಯ ಅನ್ನದಾನೇಶ್ವರ ಮಠಕ್ಕೆ ಸೇರಿರಬಹುದು.

3. ವೀರಶೈವ –ಜೈನರ ನಡುವಿನ ಘರ್ಷಣೆ : ವೀರಶೈವ ಮತ್ತು ಶ್ವೇತಾಂಬರ ಜೈನರ ನಡುವೆ ಘರ್ಷಣೆ ನಡೆಯಿತು(ಶ್ರೀಶೈಲದ ಒಂದು ಶಾಸನ). ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಧರ್ಮಕರ್ತ ಮತ್ತು ಜಂಗಮ ಭಿಕ್ಷಾವೃತ್ತಿ ಶಾಂತಲಿಂಗಯ್ಯ ಅವರು ಅಲ್ಲಿ ಮಠವನ್ನು ಕಟ್ಟಿಸಿದರು. ಅದಕ್ಕೆ ದತ್ತಿದಾನಗಳನ್ನು ನೀಡಿದರು. ಅವರಿದ್ದ ಪ್ರದೇಶ, ಅವರ ಮಠ, ಅಲ್ಲಿನ ಮಲ್ಲಿಕಾರ್ಜುನ ದೇವಾಲಯದ ಗ್ರಾಮಗಳ ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸಿದರು. ಈತನು ಅರಸರಂತೆ ರಾಜಲಾಂಛನಗಳನ್ನು ಹೊಂದಿದ್ದನಂತೆ. ಈತನ ಮಗನು ಶ್ರೀಶೈಲದ ಭಿಕ್ಷಾವೃತ್ತಿಮಠದ ಆಜ್ಞಾಧಾರಕ ಕುಮಾರಲಿಂಗಯ್ಯ. ಈತನು ಜಂಗಮ ಬ್ರಾಹ್ಮಣರಿಗೆ ದಾನ ಬಿಟ್ಟನು. ಇದಲ್ಲದೆ ಮಲ್ಲಿಕಾರ್ಜುನ ದೇವಾಲಯಕ್ಕೆ ಚಿನ್ನದ ಆಭರಣಗಳನ್ನು ಮಹಾಜನರಿಗೆ ಗ್ರಾಮಗಳನ್ನು ದತ್ತಿ ನೀಡಿದನು. (ಎಫಿಗ್ರಾಫಿಯಾ ಆಂದ್ರ ಕ.ವಾ.1, ಪು. 46–47) ಈತನು ಶ್ವೇತಾಂಬರ ಜೈನರ ತಲೆಗಳನ್ನು ಕಡಿದನೆಂದು ಈ ಶಾಸನವು ಹೇಳಿದೆ. ಈ ವಿಷಯವು ಶ್ರೀಶೈಲಮ್ ಕೈಫಿಯತ್ತಿನಲ್ಲೂ ಉಲ್ಲೇಖವಾಗಿದೆ. ಮುಂದೆ ಕೃಷ್ಣದೇವರಾಯನ ಆದೇಶದಂತೆ ಗನಿತಿಮ್ಮನು ಈತನನ್ನು ಸೋಲಿಸಿದನು(ವೆಲುಗೋಟಿ ವಾರಿ ವಂಶಾವಳಿ). ಈ ವಿವರಣೆಗಳನ್ನು ಡಾ. ಜೆ.ಎಂ. ನಾಗಯ್ಯ ಅವರು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. (2008, ಇತಿಹಾಸದರ್ಶನ, ಸಂ. 23, ಪು. 109–113)

4. ಶ್ರೀಶೈಲದಲ್ಲಿ ನಡೆದ ಧಾರ್ಮಿಕ ಸಂಘರ್ಷ : ಶ್ರೀಶೈಲವು (ಆಂಧ್ರಪ್ರದೇಶ) ಪಂಚಾಚಾರ್ಯರ ಒಂದು ಸಿಂಹಾಸನವಾಗಿದೆ. ಪ್ರಸಿದ್ಧ ಪ್ರಾಚೀನ ಶೈವಕೇಂದ್ರ. ಈ ವಿಷಯವನ್ನು ಶಿವತತ್ವಸಾರ, ಸ್ಕಂದಪುರಾಣ, ಮಹಾಭಾರತ ಮುಂತಾದ ಕಾವ್ಯಗಳಲ್ಲಿ ಹೇಳಲಾಗಿದೆ. ಸಂಗಮ ವಂಶದ ಪ್ರೌಢರಾಯನ ಅರಮನೆಯಲ್ಲಿದ್ದ ಓದುವ ಹೊನ್ನಮ್ಮವ್ವೆಯು ಶ್ರೀಶೈಲವನ್ನು ಖರೀದಿಸಿದಳೆಂದು ಅಲ್ಲಿನ ಮಲ್ಲಿಕಾರ್ಜುನ ದೇವರ ಸೇವೆಗೆ ಮತ್ತು ಐದು ಮಂದಿ ಜಂಗಮರ ಆರೋಗಣೆಗೆ ದತ್ತಿ ನೀಡಿದಳು. (ಶ್ರೀಶೈಲ ಶಾಸನ– 19–1–1458ಮತ್ತು ತಜಾಜಿ ದೇವೇಂದ್ರಪ್ಪ : 2005: ವಿಜಯನಗರ ಅಧ್ಯಯನ, ಪು. 281–85) ಶ್ರೀಶೈಲದಲ್ಲಿ ಈ ಮತವನ್ನು ಪ್ರಚಾರ ಮಾಡಲು ಅನೇಕ ಮಠಗಳಿದ್ದವು. ಅವುಗಳಲ್ಲಿ ವಿಭೂತಿಮಠ, ಭಿಕ್ಷಾವೃತ್ತಿಮಠ, ಗಣಮಠ, ಸಾರಂಗಿಮಠ, ಘಂಟಾಮಠ, ನಂದಿಮಠ, ಬೃಂಗಿಮಠ, ವೀರಭದ್ರಮಠ ಮುಂತಾದವುಗಳು ಪ್ರಮುಖವಾಗಿವೆ. ಶ್ರೀಶೈಲದಲ್ಲಿ ಇಷ್ಟೊಂದು ವೀರಶೈವ ಮಠಗಳು ಈ ಅವಧಿಯಲ್ಲಿದ್ದುದು ತಿಳಿಯುತ್ತದೆ. ಈ ಸ್ಥಳಕ್ಕೆ ವಿವಿಧ ಕಾಲಘಟ್ಟಗಳಲ್ಲಿ ಅನೇಕ ಅರಸರು/

ರಾಣಿಯರು ಬೆಟ್ಟ ನೀಡಿ ದಾನ ನೀಡಿದ್ದಾರೆ. ಈ ಅವಧಿಯಲ್ಲಿ ಕೃಷ್ಣದೇವರಾಯನೂ ಬೆಟ್ಟ ನೀಡಿ ಅಲ್ಲಿನ ಮಲ್ಲಿಕಾರ್ಜುನ ದೇವರಿಗೆ ಅನೇಕ ದತ್ತಿಗಳನ್ನು ನೀಡಿದ್ದಾನೆ. ಈ ಕಾಲಾವಧಿಯಲ್ಲಿ ಶ್ರೀಶೈಲದಲ್ಲಿ ಧಾರ್ಮಿಕ ಸಂಘರ್ಷವೇ ನಡೆಯಿತು. ಈ ಸಂಘರ್ಷದಿಂದ ಅಲ್ಲಿನ ಭೃಂಗಿಮಠ ಮತ್ತು ಶಿವಲಿಂಗ ಮಠಗಳು ನಾಮಾವಶೇಷವಾದವೆನ್ನುವರು. 1313 ಫೆಬ್ರುವರಿ 26 ರಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ದೇವರ ಪಾಶುಪತ ಶೈವ ಸಂಪ್ರದಾಯದ ಪೂಜಾ ಕಾರ್ಯವನ್ನು ನಿಲ್ಲಿಸಲಾಯಿತೆನ್ನುವರು. ಆ ಬಳಿಕ ಅಲ್ಲಿ ವೀರಶೈವ ಸಂಪ್ರದಾಯದ ಪೂಜೆಯನ್ನು ಆರಂಭಿಸಲಾಯಿತೆನ್ನುವರು. ಇದಲ್ಲದೆ ಈ ದೇವಾಲಯದ ಪಾಶುಪತರ 70 ಗ್ರಾಮಗಳನ್ನು ಗಣಮಠದವರು ತಮ್ಮ ಕೈವಶ ಮಾಡಿಕೊಂಡರೆಂಬ ಸಂಗತಿಯೂ ಇದೆ.

5. ಆನೆಗುಂದಿಯ ರೂಢಚಾರ್ಯ ಮಠ ಮತ್ತು ಅಂತರವಳ್ಳಿಯ ಮೂರುಜಾವ ಮಠದ ನಡುವಿನ ವಿವಾದ : ಗಿಣಿಗೇರಾ ಗ್ರಾಮದಲ್ಲಿ ಆನೆಗುಂದಿ ವಿಶ್ವಕರ್ಮ ಮಠದ ತಾಮ್ರಪಠ ಶಾಸನವಿತ್ತಂತೆ. ಅದರ ಕಾಲಮಾನ 25-2-1520. ಅದರ ಪ್ರಕಾರ ಶ್ರೀಕೃಷ್ಣದೇವರಾಯನು ವಿದ್ಯಾನಗರ ಸಿಂಹಾಸನದ ಕಾಳಹಸ್ತಾಚಾರ್ಯ ಸದ್ಯೋಜಾತ ಸ್ವಾಮಿಗಳಿಗೆ ತ್ರಿಮತಸ್ಥ ಬ್ರಾಹ್ಮಣರು, ಮಹಾಮಂಡಳೇಶ್ವರ ಬಂಗಾರು ತಿಮ್ಮರಾಜು ದಳವಾಯಿ ಜಯಪತ್ರವನ್ನು ಬರೆಸಿಕೊಟ್ಟಿದ್ದನ್ನು ಅನೇಕರು ತಿಳಿಸಿದ್ದಾರೆ. ಈ ಪತ್ರದಲ್ಲಿ ಆನೆಗೊಂದಿ ಸಂಸ್ಥಾನದಲ್ಲಿನ ರೂಢಚಾರ್ಯನ ಮಠವು ಅಂತರವಳ್ಳಿಯ ನಿರಂಜನಯ್ಯ ಮೂರುಜಾವದಯ್ಯರು ತಮ್ಮದೆಂದು ವಾದಿಸುತ್ತಿದ್ದರು. ಇವರಲ್ಲಿದ್ದ ದಾಖಲೆಗಳನ್ನು ಸಭಾಸದರು ಪರಿಶೀಲಿಸಿದಾಗ ಅವರ ದಾಖಲೆಗಳು ಸರಿಯಿಲ್ಲವೆಂದು ತಿರಸ್ಕರಿಸಿದರು. ಈ ಕಾರಣಕ್ಕಾಗಿ ಸಭಾಸದರು ಅಂತರವಳ್ಳಿ ಮಠದ ರೂಢಾಚಾರ್ಯರಿಗೆ ತಮ್ಮ ಕಾಣಿಕೆಯನ್ನು ಸದ್ಯೋಜಾತ ಸ್ವಾಮಿಗಳಿಗೆ ಜಯಪತ್ರವನ್ನು ಬರೆದುಕೊಟ್ಟರಂತೆ. ಆದರೆ ಈ ಶಾಸನದಕಾಲಮಾನ 18ನೇ ಶತಮಾನದ್ದೆನ್ನುವರು.

6. ಮುಸ್ಲಿಂರಿಂದ ದೇವಾಲಯ ನಾಶ : ಬೀದರಿನ ಫರ್ಥಾಬಾದನಲ್ಲಿರುವ ಒಂದು ದೇವಾಲಯವನ್ನು ನಾಶಮಾಡಿ ಅಲ್ಲಿ ಮಸೀದಿಯನ್ನು ಕಟ್ಟಲಾಗಿದೆ. (ಬೀದರಿನ ಮಸೀದಿ ಶಾಸನ) ಆ ದೇವಾಲಯವನ್ನು ಅಪವಿತ್ರಗೊಳಿಸಿದರಂತೆ. ಅದರ ನೇತೃತ್ವವನ್ನು ವಹಿಸಿದವರು ಜಾಫರಾಬಾದ್ ಸುಬಾದ ಸುಬೇದಾರ್ ಮುಖ್ತಾರ್‌ಖಾನ್-ಅಲ್-ಹುಸ್ಕೋ ಅಸ್ಸಬ್ಜವಾರೀ. ಅಲ್ಲಿ ತೋಟವನ್ನು ನಿರ್ಮಿಸಿ ಅದಕ್ಕೆ ಫರ್ಥಾಬಾಗ್ (ಬಾಗ್-ಇ-ಫರ್ಥಾ) ಎಂಬ ಹೆಸರಿಟ್ಟ ಮಾಹಿತಿಯಿದೆ.

7. ವೀರಶೈವ-ಮುಸ್ಲಿಂ ಧರ್ಮ ಸಮನ್ವಯದ ಭಾವೈಕ್ಯ ಕೇಂದ್ರಗಳು : ಈ ಅವಧಿಯಲ್ಲಿ ಸಮಕಾಲೀನವಾಗಿ ಆಳುತ್ತಿದ್ದ ಬಹಮನಿ ಮತ್ತು ವಿಜಾಪುರದ ಆದಿಲ್‌ಷಾಹಿಗಳ ಅಧಿಕಾರಿ ವರ್ಗದವರಿಂದ ರಾಜ್ಯದ ಅನೇಕ ಕಡೆಗಳಲ್ಲಿ ವೀರಶೈವ-ಮುಸ್ಲಿಂ ಧರ್ಮಗಳ ಸಮನ್ವಯ ಕೇಂದ್ರಗಳು ಹುಟ್ಟಿಕೊಂಡವು. ಅವುಗಳಲ್ಲಿ ಕೊಡೇಕಲ್ಲ ಬಸವಣ್ಣ, ಶಿರಹಟ್ಟಿ ಫಕ್ಕೀರಸ್ವಾಮಿಮಠ, ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಸಾವಳಗಿ ಮಠಗಳು, ಬೀದರ ಜಿಲ್ಲೆಯ ಅಷ್ಠೂರ ಇನ್ನಿತರವುಗಳು ಪ್ರಮುಖದ್ದಾಗಿವೆ. ಇಲ್ಲಿ ವೀರಶೈವರ ಮತ್ತು ಮುಸ್ಲಿಂ ಧರ್ಮದವರಸಂಯುಕ್ತ ಪರಂಪರೆಗಳೆಗಳುಬೆಸೆದುಕೊಂಡು ಭಾವೈಕ್ಯದ ಕೇಂದ್ರಗಳಾಗಿವೆ. ಈ ಸ್ಥಳಗಳ ಸ್ಥಳೀಯ ಆಚರಣೆಗಳ ಚರಿತ್ರೆಯನ್ನು ಅವಲೋಕಿಸಿದಾಗ ಇವುಗಳು ಹಿಂದೂ ವೀರಶೈವ ಮತ್ತು ಮುಸ್ಲಿಂ ಪರಂಪರೆಯ ಕೇಂದ್ರಗಳಾಗಿದ್ದುದು ತಿಳಿಯುತ್ತದೆ. ಇವುಗಳು ಸು. ಕ್ರಿ.ಶ. 14 ರಿಂದ 16ನೇ ಶತಮಾನದಲ್ಲಿ ಆರಂಭವಾದವೆಂದು ಹೇಳುವರು. ಈ ಕೇಂದ್ರಗಳ ಸಾಂಸ್ಕೃತಿಕ ಪರಂಪರೆಗಳು ಹಿಂದೂ (ವೀರಶೈವ) ಮತ್ತು ಮುಸ್ಲಿಂ ಧರ್ಮದ ಆಚರಣೆಗಳನ್ನು ಪ್ರತಿಬಿಂಬಿಸುತ್ತವೆ.

8. ಮಾಧ್ವ ಮತ್ತು ವೀರಶೈವರ ನಡುವಿನ ವಿವಾದ : ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸೋಂದಾದಲ್ಲಿ ಮಾಧ್ವ ವೈಷ್ಣವರು ಮತ್ತು ವೀರಶೈವರ ನಡುವೆ ವಿವಾದ ನಡೆಯಿತು. ಆಗ ಮಾಧ್ವಮತದ ವಾದಿರಾಜ ಗುರುಗಳು ವೀರಶೈವರನ್ನು ಸೋಲಿಸಿದರಂತೆ. ಆಗ ವೀರಶೈವ ಮಠದಲ್ಲಿದ್ದ ಬಸವಣ್ಣನ ಗಂಟೆಯನ್ನು ಸೋಂದವಾದಿರಾಜ ಮಠಕ್ಕೆ ತಂದರೆಂಬ ಐತಿಹ್ಯವಿದೆ. ಸೋಂದಾದಲ್ಲಿ ಈ ಅವಧಿಯ ಹಾಳಾದ ವೀರಶೈವರ ಮಠವಿದೆ.

9. ಜೈನ-ಶ್ರೀವೈಷ್ಣವರ ನಡುವಿನ ಧಾರ್ಮಿಕ ಘರ್ಷಣೆ : ಶ್ರೀ ವೈಷ್ಣವ ಧರ್ಮವು ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಪ್ರಸಿದ್ಧಿಗೆ ಬಂದಿತು. ಆಗ ಶ್ರೀವೈಷ್ಣವರ ರಾಜಧರ್ಮವಾಗಿದ್ದ ಜೈನಧರ್ಮದವರ ವಿರುದ್ಧ ಅಲ್ಲಲ್ಲಿ ಜಗಳ-ಘರ್ಷಣೆಗಳನ್ನು ನಡೆಸಿದರು. ಆಗ ವಿಜಯನಗರ ಅರಸ ಬುಕ್ಕರಾಯನು ಈ ರೀತಿಯ ವಿವಾದ/ಸಂಘರ್ಷಗಳನ್ನು

ವೈಯಕ್ತಿಕವಾಗಿ ಬಗೆಹರಿಸಿದ್ದು ವಿಶೇಷವೆನಿಸಿದೆ. ಉದಾಹರಣೆಗೆ ಶ್ರವಣಬೆಳಗೊಳ ಮತ್ತು ಈ ಪ್ರದೇಶದ ಅನೇಕ ಸ್ಥಳಗಳಲ್ಲಿ ಈರ್ವರನಡುವೆ ವಿವಾದಗಳು ನಡೆದವು. ಶ್ರವಣಬೆಳಗೊಳದಲ್ಲಿ 1368 ರಲ್ಲಿ ಜೈನರನ್ನು ಭವ್ಯರೆಂದು ಶ್ರೀವೈಷ್ಣವರು ಭಕ್ತರೆಂದು ಕರೆದ ನಿಮಿತ್ತ ಈರ್ವ್ವರ ನಡುವೆ ಧಾರ್ಮಿಕ ಘರ್ಷಣೆ ನಡೆಯಿತು. ಆಗ ಪಟ್ಟಣದಲ್ಲಿನ ಜೈನರ ಮೇಲೆ ಹಲ್ಲೆ ನಡೆಯಿತು. ಜೈನ ಬಸದಿಗಳ ಮೇಲೆ ಹಾನಿ ಉಂಟಾಯಿತು. ಈ ಅನ್ಯಾಯದ ಬಗ್ಗೆ ವಿಜಯನಗರ ಅರಸ ಬುಕ್ಕನಿಗೆ ದೂರಿತ್ತರು. ಆಗ ಅರಸನು ಈರ್ವ್ವ ಧರ್ಮೀಯರನ್ನು ಕರೆಯಿಸಿ ನಾಡ ಸಮಸ್ತರ ಸಮ್ಮುಖದಲ್ಲಿ ಎರಡೂ ಧರ್ಮೀಯರ ಕೈಯಲ್ಲಿ ಕೈಗಳನ್ನು ಹಿಡಿಸಿದನು. ಎರಡೂ ಮತಗಳ ನಡುವೆ ಯಾವ ಬೇಧವಿಲ್ಲವೆಂದು ಮತ್ತು ಈರ್ವ್ವರೂ ಬೇರೆಯೆಂದು ಭಾವಿಸಬಾರದೆಂಬ ತಿಳುವಳಿಕೆ ಹೇಳಿದನು. ಮುಂದೆ ಬೆಳಗೊಲದ ತೀರ್ಥದಲ್ಲಿನ ಜೈನರ ಮತ್ತು ಅವರ ಬಸದಿಗಳ ರಕ್ಷಣೆಯನ್ನು ವೈಷ್ಣವರು ಮಾಡಬೇಕು. ಅವರ ಅಂಗರಕ್ಷಣೆಯ ವೆಚ್ಚವನ್ನು ರಾಜ್ಯದ ಜೈನರು ತಲಾ ಒಂದು ಹಣವನ್ನು ಅವರ ಮನೆಯಿಂದ ಸಂಗ್ರಹಿಸಬೇಕು. ಆ ಹಣವನ್ನು 20 ಆಳುಗಳ ವೆಚ್ಚಕ್ಕೆ ಮತ್ತು ಉಳಿದ ಹಣವನ್ನು ಜೈನ ಬಸದಿಗಳ ಜೀರ್ಣೋದ್ಧಾರಕ್ಕೆ ಖರ್ಚು ಮಾಡಲು ನಿರ್ಣಯಿಸಿದನು. ಇದೊಂದು ಐತಿಹಾಸಿಕ ವಿಷಯವಾಗಿದೆ. (ಎ.ಎಕ. 2 (ಹೊಸದು) ನಂ. 475 ಮತ್ತು ಪಿ. ಯಶೋಧಾ ರಾಜಶೇಖರಪ್ಪ : 2006, ವಿಜಯನಗರ ಅಧ್ಯಯನ ಮಾಲೆ 11, ಶ್ರವಣಬೆಳಗೊಳದಲ್ಲಿರುವ ವಿಜಯನಗರ ಕಾಲದ ಶಾಸನಗಳು, ಪು. 473).

ಒಟ್ಟಾರೆ ಈ ಎಲ್ಲಾ ವಿವಾದಗಳ ಬಗ್ಗೆ ಸರಿಯಾದ ಅಧ್ಯಯನಗಳು ನಡೆಯಬೇಕಾಗಿದೆ. ಅದರಿಂದ ಸಮಕಾಲೀನ ಧಾರ್ಮಿಕ ಸ್ಥಿತಿಯು ಇನ್ನೂ ಹೆಚ್ಚು ಅರ್ಥವಾಗಬಹುದು.

10. ಲಜ್ಜಾಗೌರಿ : ಪ್ರಾಚೀನ ಕಾಲದಲ್ಲಿ ಶಾಕ್ತದೇವತೆ ಲಜ್ಜಾಗೌರಿಗೆ ಅನೇಕ ಭಕ್ತರಿದ್ದರು. ಸಾತವಾಹನರ ಕಾಲದಿಂದ ವಿಜಯನಗರ ಕಾಲದವರೆಗೆ ಈ ದೇವಿಯು ಅಸ್ತಿತ್ವದಲ್ಲಿದ್ದಳು. ಮೊದಲು ಸಾತವಾಹನರ ಕಾಲದ ಈ ದೇವಿಯ ಕಿರುಶಿಲ್ಪಗಳು ಸನ್ನತಿಯಲ್ಲಿ ಸಿಕ್ಕಿವೆ. ಮುಂದೆ ಬಾದಾಮಿ ಚಾಲುಕ್ಯರ ಕಾಲಾವಧಿಯಲ್ಲಿ ಭವ್ಯವಾದ ಲಜ್ಜಾಗೌರಿಯ ಬೃಹತ್ ಶಿಲಾವಿಗ್ರಹಗಳು ನಿರ್ಮಾಣವಾದವು. ಅವುಗಳು ಬಾದಾಮಿ, ಬಿ.ಎನ್. ಜಾಲಿಹಾಳ್ ಇನ್ನಿತರ ಕಡೆಗಳಲ್ಲಿವೆ. ಈಕೆಯು ಸಾಮಾನ್ಯವಾಗಿ ಬತ್ತಲೆಯಾಗಿ ಕುಳಿತ ದ್ವಿಭುಜಧಾರಿ ದೇವಿ ಆಗಿದಾಳೆ. ಈಕೆಗೆ ಮುಖದ ಬದಲು ಕಮಲವನ್ನು ತೋರಿಸಲಾಗಿದೆ. ಈ ಅವಧಿಯ ಮುನ್ನ ಅಂದರೆ ಬನವಾಸಿ ಕದಂಬರ ಕಾಲದಲ್ಲೂ ಈ ದೇವಿಯ ಕಿರು ಫಲಕಗಳು ಅಸ್ತಿತ್ವದಲ್ಲಿದ್ದವು. ಅಂಥವುಗಳು ಬೆಳಗಾವಿ ಜಿಲ್ಲೆಯ ಮಜತಿ ಮತ್ತು ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಆಲದಗೇರಿಯಲ್ಲಿ ಸಿಕ್ಕಿವೆ. ಈ ಕಿರುಶಿಲಾ ಚೌಕಫಲಕಗಳಲ್ಲಿ ಬತ್ತಲೆಯಲ್ಲಿ ಕುಳಿತ ಈ ದೇವಿಯ ಬದಿಗಳಲ್ಲಿ ಒಂದು ಕಡೆ ಶಿವಲಿಂಗ ಮತ್ತೊಂದು ಕಡೆ ನರಸಿಂಹ (ಸಿಂಹರೂಪ)ವನ್ನು ತೋರಿಸಲಾಗಿದೆ. ಇಲ್ಲಿ ದೇವಿಯ ಮುಖಭಾಗದಲ್ಲಿ ಕಮಲದ ಹೂವಿನ ಚಿತ್ರವಿದೆ. ಬುಡದಲ್ಲಿ ಆಕೆಯನ್ನು ಆರಾಧಿಸುತ್ತಿರುವ ಭಕ್ತರಿದ್ದಾರೆ. ಇದರಿಂದ ಈ ದೇವಿಗೆ ಶಿವ ಮತ್ತು ವಿಷ್ಣುವಿನಂತೆ ಸರಿಸಮಾನ ಸ್ಥಾನ ನೀಡಿದ್ದು ತಿಳಿಯುತ್ತದೆ. ಕಲ್ಯಾಣ ಚಾಲುಕ್ಯರ ಕಾಲಾವಧಿಯ ಈ ದೇವಿಯ ಶಿಲ್ಪ ಬಳ್ಳಿಗಾವಿಯ ಕೇದಾರೇಶ್ವರ ದೇವಾಲಯದ ಮುಂದಿದೆ. ಮುಂದೆ ವಿಜಯನಗರ ಕಾಲದಲ್ಲಿ ಈ ದೇವಿಯ ಉಬ್ಬುಶಿಲ್ಪಗಳಿವೆ ಅಥವಾ ರೇಖಾಚಿತ್ರಗಳಿವೆ. ಅಲ್ಲಿ ದೇವಿಯ ಮುಖಭಾಗವಿದ್ದು ಕಮಲದ ಚಿತ್ರವಿಲ್ಲ.

ವಿಜಯನಗರ ಕಾಲದ ಈ ದೇವಿಯ ಉಬ್ಬುಶಿಲ್ಪವು ಪಂಚಪೀಠಗಲ್ಲೊಂದಾದ ಉಜ್ಜಯಿನಿ ಪೀಠದಲ್ಲಿದೆ. ಅಲ್ಲಿನ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ದೇವಾಲಯದ ಸುತ್ತಲಿನ ಪೂರ್ವದ ಪ್ರಾಕಾರದ ಗೋಡೆಯಲ್ಲಿ ಪೂರ್ವದ್ವಾರದ ಬದಿಗಿನ ಒಳಗೋಡೆಯ ಮೇಲೆ ಈ ದೇವಿಯ ಉಬ್ಬುಶಿಲ್ಪವಿದೆ. ಬದಿಗೆ ಉದ್ದವಾಗಿ ಹರಿದ ಸರ್ಪದ ಉಬ್ಬುಶಿಲ್ಪವಿದೆ. ಈ ದೇವಾಲಯದ ಮುಂದಿನ ಮಹಾಸ್ತಂಭ ಮಂಟಪದಲ್ಲಿ ಈ ಅವಧಿಯ ಸುಮಾರು 8 ಅಡಿ ಎತ್ತರದ ವೀರಭದ್ರನ ಶಿಲ್ಪವಿದೆ. ಆತನ ಕಿರೀಟ ಮುಕುಟದಲ್ಲಿ ಕಿರುಶಿವಲಿಂಗವಿದೆ. ಗದಗ ಜಿಲ್ಲೆಯ ಮುಳಗುಂದದ ಹತ್ತಿರವಿರುವ ಚಿಂಚಲಿ ಗ್ರಾಮದ ಹೊರಗಡೆ ಗುಡ್ಡದ ಹತ್ತಿರ ಒಂದು ಹೊಲದಲ್ಲಿ ಅನೇಕ ದೊಡ್ಡ ದೊಡ್ಡ ಕಲ್ಲು ಬಂಡೆಗಳಿವೆ. ಅದರ ಒಂದು ಬಂಡೆಯ ಮೇಲೆ ವೀರಭದ್ರ, ಲಜ್ಜಾಗೌರಿ, ಭೈರವ, ಭೈರವಿ, ಕತ್ತಿಗಳು, ಪಾದಮುದ್ರೆ ಇತ್ಯಾದಿ ರೇಖಾ ಚಿತ್ರಗಳಿವೆ. ಇನ್ನೊಂದು

ಬಂಡೆಯ ಮೇಲೆ ತೀರ್ಥಂಕರನ ರೇಖಾಚಿತ್ರವಿದೆ. ಇವುಗಳೆಲ್ಲ ಶೈವ, ವೀರಶೈವ, ಶಾಕ್ತ ಮತ್ತು ಜೈನ ಮತಕ್ಕೆ ಸೇರಿದವುಗಳಾಗಿವೆ. ಇವುಗಳು ಶೈಲಿಯಿಂದ ಸು. ಕ್ರಿ.ಶ. 16ನೇ ಶತಮಾನದ್ದಾಗಿವೆ.

11. ಸ್ಮಾರಕಗಳ ಸಂರಕ್ಷಣಾ ಕಾರ್ಯ

ವಿಜಯನಗರ ಕಾಲದ ಹೇರಳ ಸ್ಮಾರಕಗಳು ದಕ್ಷಿಣ ಭಾರತದ ವಿವಿಧ ಕಡೆಗಳಲ್ಲಿವೆ. ನಾನಾ ಕಾರಣಗಳಿಂದ ಎಷ್ಟೋ ದೇವಾಲಯಗಳು ಮತ್ತು ಇನ್ನಿತರ ಮಾದರಿಯ ಸ್ಮಾರಕ ಕಟ್ಟಡಗಳು ಅಲ್ಲಲ್ಲಿ ಬಿದ್ದುಹೋಗಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಪುರಾತತ್ವ ಇಲಾಖೆಗಳು ಹಾಳಾಗುವ ಅಂಚಿನಲ್ಲಿರುವ ಎಷ್ಟೋ ಸ್ಮಾರಕಗಳ ಸಂರಕ್ಷಣಾ ಕಾರ್ಯವನ್ನು ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಕೇವಲ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರಾ ಇಲಾಖೆಯು ವಿಜಯನಗರ ಕಾಲದ ಅನೇಕ ದೇವಾಲಯಗಳ ಸಂರಕ್ಷಣಾ ಕಾರ್ಯವನ್ನು ಮಾಡಿದೆ ಮಾಡುತ್ತಿದೆ. ಅವುಗಳಲ್ಲಿ ಪ್ರಮುಖ ಸ್ಮಾರಕಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಹಂಪಿಯ ಅನೇಕ ಸ್ಮಾರಕಗಳನ್ನು ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯವು ಕೈಗೊಂಡ ಸಂರಕ್ಷಣೆಯ ಕೆಲಸವನ್ನು ಈ ವಿಭಾಗದ ಡಾ. ಸಿ.ಎಸ್. ಪಾಟೀಲ ಅವರು ಮೊದಲು ತಮ್ಮ ಲೇಖನದ ಮೂಲಕ ಪರಿಚಯಿಸಿದ್ದಾರೆ. ಈ ದಶಕದಲ್ಲಿ ಈ ವಿಭಾಗದ ಎಂಜಿನಿಯರ್ ಮತ್ತು ಉಪನಿರ್ದೇಶಕರಾದ ಡಾ. ಎಸ್.ಜಿ. ವಾಸುದೇವ ಅವರು ಈ ಕಾಲದ ಅನೇಕ ದೇವಾಲಯ, ಪುಷ್ಕರಣಿ, ಮುಂತಾದ ಸ್ಮಾರಕಗಳ ಸಂರಕ್ಷಣಾ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಈ ಕಾರ್ಯದಲ್ಲಿ ಈ ವಿಭಾಗದ ನಿರ್ದೇಶಕರಾಗಿದ್ದ ಡಾ. ಎಂ.ಎಸ್. ನಾಗರಾಜರಾವ್, ಡಾ. ಅ. ಸುಂದರ, ಡಾ. ಆರ್. ಗೋಪಾಲ, ಡಾ. ದೇವರಾಜ, ಡಾ. ಎಂ.ವಿ. ಕೃಷ್ಣಪ್ಪ, ಆಯುಕ್ತರಾದ ಡಾ. ಬೆಟಸೂರಮಠ, ಮುಂತಾದವರ ಸೇವೆಯು ಮೆಚ್ಚುವಂತಹದು.

ಹಂಪೆಯಲ್ಲಿ ಇತ್ತೀಚಿನ ದಶಕದಲ್ಲಿ ಎಂಟು ದೇವಾಲಯಗಳಲ್ಲಿ ಸಂರಕ್ಷಣಾ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಅದರಲ್ಲಿ ಹಂಪೆಯ ತೇರು ಬಜಾರದ ಸಭಾಮಂಟಪ, ಕೋಟೆ ಶಂಕರ ಬಾಗಿಲು, ಅದರ ಬದಿಗಿನ ವೈಷ್ಣವ ದೇವಾಲಯ, ಕಮಲ್‌ಮಹಲ್ ಬದಿಗಿನ ವೈಷ್ಣವ ದೇವಾಲಯ ಮತ್ತು ಬಂಡೆಯ ಮೇಲಿನ ವೈಷ್ಣವ ದೇವಾಲಯ ಪ್ರಮುಖವಾಗಿವೆ. ಇವಲ್ಲದೆ ಶೃಂಗಾರದ ಬಾಗಿಲು (ಅಹಮ್ಮದ್‌ಖಾನ್ ಛತ್ರದ ಬದಿಗೆ) ಮತ್ತು ಬಾಲಕೃಷ್ಣ ದೇವಾಲಯಗಳ ಡಾ. ಎಂ.ಎಸ್. ನಾಗರಾಜರಾವ್ ಅವರ ನಿರ್ದೇಶನದಲ್ಲಿ ಸಂರಕ್ಷಣಾ ಕಾರ್ಯ ನಡೆಯಿತು. ತಳವಾರ ಘಟ್ಟ ಬದಿಯ ಹನುಮಾನ್ ದೇವಾಲಯ, ಅಲ್ಲಿನ ಸಾಲುಮಂಟಪ, ಹಂಪೆಯ ತುರ್ತು ಕಾಲುವೆ ಮತ್ತು ಉದ್ಯಾನವನ, ವೀರಭದ್ರ ದೇವಾಲಯ ಹತ್ತಿರದ ಆದಿವೆಂಕಟೇಶ್ವರ ದೇವಾಲಯ, ವಿರೂಪಾಕ್ಷ ದೇವಾಲಯದ ಹತ್ತಿರದ ಪಂಚಲಿಂಗೇಶ್ವರ ದೇವಾಲಯ, ಅದರ ಬಳಿಯ ಸ್ನಾನಘಟ್ಟ ಮಂಟಪ, ವಿರೂಪಾಕ್ಷ ದೇವಾಲಯ, ನಗರೇಶ್ವರ, ವಿರೂಪಾಕ್ಷ ದೇವಾಲಯದ ಪಕ್ಕದ ಮನ್ಮಥಕುಂಡ (ಪುಷ್ಕರಣಿ), ಕಮಲಾಪುರ ಹತ್ತಿರದ ಪಾಪನಾಯಕನ ಹಳ್ಳಿಯ ಭವ್ಯವಾದ ಚಿಕ್ಕಗುಡಿ, ಮಲಪನಗುಡಿ ಹತ್ತಿರದ ಮಲ್ಲೇಶ್ವರ ಗುಡಿ, ಕನ್ನಡ ವಿಶ್ವವಿದ್ಯಾಲಯದ ಹತ್ತಿರದ ಹಳ್ಳಿಕೇರಿಯ ಮಂಟಪ (ಹಂಪೆಯ ಮಹಾನವಮಿ ದಿಬ್ಬದಂತಿದೆ) ಕಮಲಾಪುರದ ಗಾರೆ ಹನುಮಾನ್ ದೇವಾಲಯ, ಸೋಮವಾರ ಬಾಗಿಲು, ಶೃಂಗಾರ ಬಾಗಿಲು, ಹೂವಿನ ಬಾಗಿಲು, ಉದಯಗಿರಿ ಬಾಗಿಲು, ಕೋಟೆಶಂಕರದ ಮೂರು ಬಾಗಿಲುಗಳು, ಹಂಪೆಯ ವಿರೂಪಾಕ್ಷ ದೇವಾಲಯದ ಕಲ್ಯಾಣಮಂಟಪ, ಆನೆಗುಂದಿಯಲ್ಲಿನ ಅಂಬಿಗರ ಬಾಗಿಲು, ಕೋಟೆ ಉತ್ತರ ಬಾಗಿಲು, ಆನೆ ಸಾಲು, ಕುದುರೆ ಸಾಲು ಮಂಟಪಗಳು, ಸ್ನಾನಘಟ್ಟ, ವಿರುಪಾಪುರದ (ಕೊಪ್ಪಳ ಜಿಲ್ಲೆ) ಮೇಲ್ ಕಾಲುವೆ, ಆನೆಗುಂದಿ ಹತ್ತಿರದ ಹನುಮನಳ್ಳಿಯಲ್ಲಿ ಯಕ್ಷಕುಂಡದ ಚಂದ್ರಮೌಳೇಶ್ವರ ದೇವಸ್ಥಾನ ಮತ್ತು ಗಗನ್ ಮಹಲ್ (ಇವುಗಳು ಹಂಪೆ ಪ್ರದೇಶದವುಗಳಾಗಿವೆ)ಗಳ ಸಂರಕ್ಷಣಾ ಕಾರ್ಯವನ್ನು ಮಾಡಲಾಗಿದೆ.

ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿನ ಸೋಮೇಶ್ವರ ದೇವಾಲಯದಲ್ಲಿಈ ಅವಧಿಯ ರಂಗಮಂಟಪ ಇತ್ಯಾದಿ ಭಾಗ ಮತ್ತು ಗದಗಿನ ವೀರನಾರಾಯಣ ದೇವಾಲಯದ ಗೋಪುರ ಭಾಗಗಳನ್ನು ಇವರು ಸಂರಕ್ಷಣೆ ಮಾಡಿದರು.

ಈ ವಿಭಾಗದಲ್ಲಿ ಹಂಪೆಯಲ್ಲಿ ನಡೆಸಿದ ಉತ್ಖನನದಲ್ಲಿ ಅನೇಕ ತಳಪಾಯವುಳ್ಳ ಕಟ್ಟಡಗಳು ಬೆಳಕಿಗೆ ಬಂದಿವೆ. ಅದರಲ್ಲಿರುವ ಗಣ್ಯ ವ್ಯಕ್ತಿಗಳ ವಸತಿ ಸಂಕೀರ್ಣ, ಹಾಳಾದ ಮಂಟಪ, ಮಠ, ಮನೆಗಳು ಮುಂತಾದವುಗಳ ಜಗತಿ–ಗೋಡೆಗಳನ್ನು ಸಂರಕ್ಷಣೆ ಮಾಡಲಾಗಿದೆ.

ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯ ಅಧೀನದಲ್ಲಿ ವಿಜಯನಗರ ಕಾಲದ ಹೇರಳ ಸ್ಮಾರಕಗಳಿವೆ. ವಿಭಾಗದವರೂ ಸಹ ಹಂಪೆ ಪರಿಸರದ ಅನೇಕ ಸ್ಮಾರಕಗಳ ಸಂರಕ್ಷಣಾ ಕಾರ್ಯವನ್ನು ಮಾಡಿರುವರು. ಸುಮಾರು ಒಂದು ಶತಮಾನದಿಂದ ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯವರು ಹಂಪೆಯಲ್ಲಿನ ಅನೇಕ ಸ್ಮಾರಕಗಳನ್ನು ಸಂರಕ್ಷಣೆ ಮಾಡಿದ್ದಾರೆ. ಲೌಖಿಕ ಸ್ಮಾರಕಗಳಲ್ಲಿ ಕೋಟೆಗಳು, ಪುಷ್ಕರಣಿ, ರಾಣಿಯರ ಈಜುಗೊಳ, ಮಹಾದ್ವಾರ, ಮಹಾನವಮಿ ದಿಬ್ಬ, ಅಸೆಂಬ್ಲಿ ಹಾಲ್‌ಗಳಿವೆ.ಧಾರ್ಮಿಕ ಸ್ಮಾರಕಗಳಾದ ದೇವಾಲಯಗಳಲ್ಲಿ ಹಜಾರರಾಮ, ವಿಠಲ, ಕೃಷ್ಣ, ಅಚ್ಯುತದೇವ, ಉಗ್ರನರಸಿಂಹ, ಕಡಲೆಕಾಳು ಮತ್ತು ಸಾಸಿವೆ ಕಾಳು ಗಣಪತಿಗಳು, ನೆಲತಳಭಾಗದ ಗುಡಿ, ಆನೆ ನಿಲ್ಲಿಸುವ ಕೋಣೆಗಳು ಮುಂತಾದವುಗಳಾಗಿವೆ. ಈ ವಿಭಾಗದವರು ಹಂಪಿಯಲ್ಲಿ ನಡೆಸಿದ ಉತ್ಖನನದಿಂದ ಅನೇಕ ಸ್ಮಾರಕಗಳನ್ನು ಹೊರತಂದಿದ್ದಾರೆ. ಅದರಲ್ಲಿ ಅರಮನೆ ಸಂಕೀರ್ಣ, ಓಕಳಿಹೊಂಡ, ಪುಷ್ಕರಣಿ, ಈಜುಗೊಳ, ಬಾವಿ, ಸಾಲುಮಂಟಪ ಮುಂತಾದವುಗಳಾಗಿವೆ. ಈ ಎಲ್ಲಾ ಸ್ಮಾರಕಗಳನ್ನು ಕೇಂದ್ರ ಪುರಾತತ್ವ ಇಲಾಖೆಯವರುಸಂರಕ್ಷಣೆ ಮಾಡಿದ್ದಾರೆ. ಇವುಗಳ ಸಂರಕ್ಷಣಾ ಕಾರ್ಯದಲ್ಲಿ ಅನೇಕ ಅಧಿಕಾರಿಗಳು ಕಾರಣರಾಗಿದ್ದಾರೆ. ಅವರಲ್ಲಿ ಡಾ. ಎಂ.ಎನ್. ದೇಶಪಾಂಡೆ, ಡಾ. ಎಸ್.ಆರ್. ರಾವ್, ಡಾ. ಶ್ರೀನಿವಾಸನ್, ಡಾ. ನರಸಿಂಹಯ್ಯ, ಡಾ. ಕೆ.ಪಿ. ಪೂಣಚ್ಚ, ಡಾ. ಹನುಮಂತಪ್ಪ ತೆಲಗಿ, ಡಾ. ಕೊಟ್ರಯ್ಯ, ಶ್ರೀ ರಾಯಚೂರ, ಶ್ರೀ ಕೃಷ್ಣ, ಶ್ರೀ ರಂಗಪ್ಪ, ಶ್ರೀ ನಾಗೇಂದ್ರ., ಡಾ. ಎಸ್.ವ್ಹಿ.ಪಿ.ಹೆಚ್. ಹಳಕಟ್ಟಿ, ಶ್ರೀ ಪ್ರಕಾಶರಾವ್, ಕೆ.ವಿ. ರಾವ್, ಡಾ. ವೀರಭದ್ರರಾವ್, ಡಾ. ನರಸಿಂಹನ್, ಡಾ. ವೆಂಕಟೇಶಯ್ಯ ಮುಂತಾದವರು ಪ್ರಮುಖ ಕೊಡುಗೆಯನ್ನು ನೀಡಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯವರು ಇಲ್ಲಿಯವರೆಗೆ ಅವರು ಸಂರಕ್ಷಿಸಿದ ಈ ಕಾಲದ ಸ್ಮಾರಕಗಳ ಬಗ್ಗೆ ಇನ್ನೂ ಹೆಚ್ಚಿನ ವ್ಯವಸ್ಥಿತ ಅಧ್ಯಯನ ನಡೆಯಬೇಕಾಗಿದೆ.

(ಪ್ರಸ್ತುತ ರಾಜ್ಯ ಸರ್ಕಾರದ ಸ್ಮಾರಕಗಳ ಸಂರಕ್ಷಣೆಯ ಮಾಹಿತಿಗಳನ್ನು ರಾಜ್ಯ ಪುರಾತತ್ವ ಇಲಾಖೆಯ ಉಪನಿರ್ದೇಶಕ, ಡಾ. ವಾಸುದೇವ ಅವರು ಒದಗಿಸಿದ್ದಕ್ಕಾಗಿ ಅವರಿಗೆ ಕೃತಜ್ಞತೆಗಳು.)

12. ವಾಸ್ತುಶಿಲ್ಪಕಲೆ :

ವಿಜಯನಗರ ಕಾಲದ ವಾಸ್ತುಶಿಲ್ಪಕಲೆಯ ಬಗ್ಗೆ ಅನೇಕ ಕೃತಿಗಳು ಹೊರಬಂದಿವೆ. ವಿದ್ಯಾರ್ಥಿಗಳ ಹಿತದೃಷ್ಟಿಯ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಡಾ. ರೆಸ್. ರಾಜಶೇಖರ ಅವರು ಬರೆದ 'ಕರ್ನಾಟಕ ವಾಸ್ತುಶಿಲ್ಪ ಕಲೆ' ಕೃತಿಯು ತುಂಬ ಉಪಯುಕ್ತವೆನಿಸಿದೆ. ಈ ಅವಧಿಯ ಕೆಲವು ಮಹತ್ವದ ಲಕ್ಷಣಗಳು ಹೀಗಿವೆ. ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಆರಂಭಿಕ ಹಂತದಲ್ಲಿ ಹೊಯ್ಸಳರ–ಚೋಳರ ಹಲವಾರು ವಾಸ್ತುಶಿಲ್ಪಕಲಾ ಅಂಶಗಳು ಮುಂದುವರೆದಿವೆ. ಶಿಲೆಯಲ್ಲಿ ಬಳಪದ ಶಿಲೆ ಮುಂದುವರಿದಿದೆ. ವಾಸ್ತುಶಿಲ್ಪಕಲಾ ಮಾದರಿಯಲ್ಲಿ ದ್ರಾವಿಡ ಪರಂಪರೆ ಮುಂದುವರೆದಿದೆ.

ಕಣಶಿಲೆ ಬಳಕೆ ಸಾಮಾನ್ಯ, ಬಳಪ ಶಿಲೆ ವಿರಳ. ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಅಂತರಾಳ ಸುತ್ತ ಕೆಲವೆಡೆಗಳಲ್ಲಿ ಪ್ರದಕ್ಷಿಣಾಪಥವನ್ನು ಜೋಡಿಸಲಾಗಿದೆ. ದ್ವಾರದಲ್ಲಿ ಹಲವೆಡೆ ಮಾನವಾಕಾರ ಎತ್ತರದ ದ್ವಾರಪಾಲಕರನ್ನು ನಿಲ್ಲಿಸಲಾಗಿದೆ. ಕೆಲವೊಮ್ಮೆ ದೇವಾಲಯಗಳಿಗೆ ಉಪಪೀಠಗಳಿವೆ. ಪಾದಬಂಧ, ಅಧಿಷ್ಠಾನದ ಮೇಲೆ ದೇವಾಲಯವಿದೆ. ನಿರಾಲಂಕೃತ ಬಿತ್ತಿಗಳಿವೆ. ಕಪೋತಯುಕ್ತ ನಾಸಿಗಳಿವೆ. ಗೋಪುರ ಮತ್ತು ಶಿಖರ ಭಾಗವನ್ನು ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಬುಡದ ಅಧಿಷ್ಠಾನದಿಂದ ಛಾವಣಿವರೆಗಿನ ದೇವಾಲಯದ ಅಥವಾ ಮಹಾದ್ವಾರದ ಅಥವಾ ಗೋಡೆಗಳ ಭಾಗಗಳನ್ನು ಸಾಮಾನ್ಯವಾಗಿ ಶಿಲೆಯಿಂದ ಕಟ್ಟಿರುವುದು ಕಂಡುಬರುತ್ತದೆ. ಕಂಬಗಳಿಗೆ ಪಾದ ಮತ್ತು ಶಿಲ್ಪಯುಕ್ತ ನಾಲ್ಕು ಮುಖ (ಚೌಕ) ಪಟ್ಟಿಕೆಯಿವೆ. ಅದರ ಮೇಲೆ ಕಲಶ, ಕುಂಭ, ಪದ್ಮಗಳ ಮಡಿ, ಇತ್ಯಾದಿಗಳಿವೆ. ತುದಿಯಲ್ಲಿ ಪುಷ್ಪಬೋದಿಗೆಯಿವೆ. ಕೆಲವೆಡೆಗಳಲ್ಲಿ ಸಂಯೋಗ ಸ್ತಂಭಗಳಿವೆ. ಅಂದರೆ ಒಂದೇ ಪೀಠದ ಮೇಲೆ ಮಧ್ಯ ಒಂದು ಪ್ರಧಾನ ಕಂಬ ಅದರ ಸುತ್ತಲೂ ಸಣ್ಣ ಸಣ್ಣ ಕಂಬಗಳನ್ನು ಏಕಶಿಲೆಯಲ್ಲಿ ನಿರ್ಮಿಸಲಾಗಿದೆ. ವಿತಾನದ ಅಂಚಿನ ಸುತ್ತಲೂ ಪದ್ಮದಳಗಳ ಸಾಲುಗಳ ಅಲಂಕರಣವಿರುತ್ತದೆ. ನಡುವೆ ಇಳಿಬಿದ್ದ ಮುಗ್ಗಿನ/ ಅರಳಿದ ಕಮಲವಿರುತ್ತದೆ. ದ್ವಾರಪಟ್ಟಿಕೆಯಲ್ಲಿ ಕೆಲವೆಡೆ ನಿಂತ ಗಂಗೆ–ಯಮುನೆಯರ ಉಬ್ಬು ಶಿಲ್ಪಗಳಿವೆ. (ಇದು ಬಾದಾಮಿ ಚಲುಕ್ಯರ ಒಂದು ವಾಸ್ತು ಲಕ್ಷಣವೂ ಹೌದು)

ದೊಡ್ಡ ದೊಡ್ಡ ದೇವಾಲಯಗಳಿಗೆ ಸುತ್ತಲೂ ಎತ್ತರವಾದ ಪ್ರಕಾರ ಗೋಡೆಯನ್ನು ಕಟ್ಟಲಾಗಿದೆ. ಮುಂದಿನ ಪ್ರಾಕಾರಕ್ಕೆ ಮತ್ತು ಬದಿಗಿನ ಗೋಡೆಗಳಿಗೆಹೊಂದಿ ಗೋಪುರವುಳ್ಳ ಮಹಾದ್ವಾರಗಳು ನಿರ್ಮಾಣವಾಗಿವೆ. ಗೋಪುರಗಳು ಎತ್ತರವಾಗಿವೆ. ಗೋಪುರದಲ್ಲಿ ಅನೇಕ ಹಂತಗಳಿವೆ. ಬಿತ್ತಿಯಲ್ಲಿ ಕೂಡ್ಯ ಸ್ತಂಭಗಳ ಅಲಂಕರಣೆ ಇರುತ್ತದೆ.

ಸ್ತಂಭ ಶಿಲ್ಪಗಳಲ್ಲಿ ದೇವಾನು ದೇವತೆಗಳಲ್ಲದೆ ಯತಿಯರನ್ನು ಚಿತ್ರಿಸಲಾಗಿದೆ. ಶಿಲ್ಪ ಯತಿಗಳಲ್ಲಿ ಕೆಲವೊಮ್ಮೆ ಎಡಗೈಯಲ್ಲಿ ಕಿರುಶಿವಲಿಂಗ ಮತ್ತು ಬಲಕೈ ಚಿನ್ಮುದ್ರೆಯಲ್ಲಿ ತೋರಿಸಿವೆ. ಅಂಥವು ವೇಣುಗೋಪಾಲ ದೇವಾಲಯ (ಹೊಳಲ್ಕೆರೆ) ಇಂತಹ ಅನೇಕ ವಿವರಣೆಗಳನ್ನು ಕಾಣಬಹುದು. (ಅಪರ್ಣ : 2005 ವಿಜಯನಗರ ಅಧ್ಯಯನ, ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ, ಪು. 197–202; ಹಾಗೂ ಸಂಗಮರ ಕಾಲದ ದೇವಾಲಯಗಳು.) ಈ ಅವಧಿಯಲ್ಲಿನ ದೊಡ್ಡ ದೇವಾಲಯಗಳ ಮುಂದೆ ಸಾಮಾನ್ಯವಾಗಿ ಬಲಿಪೀಠ, ದೀಪಸ್ತಂಭ ನಿಲ್ಲಿಸಲಾಗಿದೆ. ದೇವಾಲಯದ ಬದಿಗಳಲ್ಲಿ ಮಂಟಪ. ಕಲ್ಯಾಣ ಮಂಟಪ, ಕೆಲ ಕಿರು ದೇವಾಲಯಗಳನ್ನು ನಿರ್ಮಿಸಲಾಗಿದೆ. ಕೆಲವೊಮ್ಮೆ ಬೃಹದಾಕಾರವಾದ ಎತ್ತರ ವಿಗ್ರಹಗಳನ್ನು ನಿಲ್ಲಿಸುವ ಪರಂಪರೆ ಆರಂಭವಾಗಿದೆ. ಈ ಅವಧಿಯಲ್ಲಿ ಪೂಜಾ ಪರಂಪರೆಗಳು ಹೆಚ್ಚಾಗಿವೆ. ಧಾರ್ಮಿಕ ಮತ್ತು ಲೌಕಿಕ ಸಾಹಿತ್ಯ ರಚನಾ ಕಾರ್ಯವು ತೀಕ್ಷ್ಣವಾಗಿ ನಡೆದಿದೆ.

ದೇವಾಲಯಗಳ ದುರಸ್ತಿ–ವಿಸ್ತರಣೆ : ದೇವಾಲಯಗಳ ದುರಸ್ತಿ ಕಾರ್ಯವು ಈ ಅವಧಿಯಲ್ಲಿ ನಡೆದಿವೆ. ಆದರೆ ವಿಜಯನಗರ ಕಾಲಾವಧಿಯಲ್ಲಿ ಅನೇಕ ಪ್ರಾಚೀನ ಬಸದಿ/ದೇವಾಲಯಗಳನ್ನು ದುರಸ್ತಿ ಮಾಡಿದ್ದು ಒಂದು ಕಡೆ ಕಂಡರೆ ಹಲವೆಡೆಗಳಲ್ಲಿ ಅವುಗಳನ್ನು ವಿಸ್ತರಿಸಿ ಕಟ್ಟಿದ್ದು ವಿಶೇಷ ಗಮನವನ್ನು ಸೆಳೆಯುತ್ತದೆ. ವಿಸ್ತರಣೆಯಲ್ಲಿ ದೇವಾಲಯದ ನವರಂಗದ ಮುಂದೆ ಮಹಾಸ್ತಂಭಮಂಟಪ, ದೇವಾಲಯದ ಸಂಕಿರಣದಲ್ಲಿ ದೊಡ್ಡ ದೊಡ್ಡ ಬಾವಿ/ಪುಷ್ಕರಣಿಗಳನ್ನು, ಎತ್ತರದ ದೀಪಸ್ತಂಭಗಳನ್ನು, ಬಲಿಪೀಠಗಳನ್ನು, ಕಲ್ಯಾಣಮಂಟಪಗಳನ್ನು, ದೇವಾಲಯ ಮಹಾದ್ವಾರಗಳ ಎದುರಿನ ಬೀದಿ ಬದಿಗಳಲ್ಲಿನ ಅಂಗಡಿ ಮುಂತಾದವುಗಳು ನಿರ್ಮಾಣವಾಗಿವೆ. ಇವುಗಳ ವಿಸ್ತರಣೆಗೆ ಬಹುತೇಕವಾಗಿ ಆ ದೇವಾಲಯದ–ಭಕ್ತ ಸಮುದಾಯದವರ ದತ್ತಿ–ದಾನಗಳನ್ನು ಅವಲಂಬಿಸಿರಬೇಕು. ಅಂತಹ ಹೇರಳ ಉದಾಹರಣೆಗಳು ರಾಜ್ಯದೆಲ್ಲೆಡೆಯಲ್ಲಿವೆ. ಅವುಗಳಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯ, ಅಣ್ಣಿಗೇರಿಯ ಅಮೃತೇಶ್ವರ, ಲಕ್ಷ್ಮೇಶ್ವರದ ಸೋಮೇಶ್ವರ, ಲಕ್ಷ್ಮಣೇಶ್ವರ, ಅನಂತನಾಥ ಬಸದಿ, ಮುಳಗುಂದದ ಸಿದ್ದೇಶ್ವರ, ಉಜ್ಜಯಿನಿಯ ಮರುಳಸಿದ್ದೇಶ್ವರ, ನಂಜನಗೂಡಿನ ಶ್ರೀಕಂಠೇಸ್ವರ, ಕಾಳಹಸ್ತ, ಲೇಪಾಕ್ಷಿ, ತಂಜಾವೂರು, ಚಿದಂಬರಂ, ಶ್ರೀರಂಗಂ, ಶ್ರೀರಂಗಂಪಟ್ಟಣದ ಶ್ರೀರಂಗ ಮುಂತಾದವುಗಳು ಸೇರಿವೆ. ಈ ಬಗ್ಗೆ ನಾನು ಬರೆದ 'ಉಜ್ಜಯಿನಿ ಪೀಠದ ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ ಆ ಸ್ಥಳದಲ್ಲಿನ ಮರುಳ ಸಿದ್ದೇಶ್ವರ ದೇವಾಲಯ, ಶಾಸನ, ಶಿಲ್ಪಗಳು ಈ ಅವಧಿಯಲ್ಲಿಯ ಅನೇಕ ಸಾಂಸ್ಕೃತಿಕ ಮತ್ತು ಧಾರ್ಮಿಕ ವಿಷಯಗಳನ್ನು ಸೂಚಿಸುತ್ತವೆ. ಅದರಲ್ಲಿ ಅಲ್ಲಿನ ದೇವಾಲಯವು ಸಾಕಷ್ಟು ವಿಸ್ತೀರ್ಣವಾಗಿದೆ. ಸ್ಥಳಿಕರು ಈ ಪೀಠದ ವಾಸ್ತುಶಿಲ್ಪಕಲೆಯ ವೈಭವವನ್ನು ಗಮನಿಸಿ 'ಉಜ್ಜಯಿನಿಯನ್ನು ಒಳನೋಡು ಹಂಪಿಯನ್ನು ಹೊರನೋಡೆಂದು' ಕರೆಯುವರು. ಈ ಸ್ಥಳವು ಅಲ್ಲಿನ ಶಾಸನಗಳಿಂದ 16ನೇ ಶತಮಾನದವರೆಗೆ ಅದೊಂದು ಪೀಠವಾಗಿದ್ದು ತಿಳಿದು ಬರುವುದಿಲ್ಲ. ಡಾ. ಅಪರ್ಣಾ ಅವರು ಗದಗ ಜಿಲ್ಲೆಯಲ್ಲಿರುವ ಈ ಅವಧಿಯ ಅನೇಕ ದೇವಾಲಯಗಳನ್ನು ವಿಸ್ತರಿಸಿ ಕಟ್ಟಿದ ಒಂದು ಪಟ್ಟಿಯನ್ನೇ ನೀಡಿದ್ದಾರೆ.

ಹಂಪಿಯ ಧಾರ್ಮಿಕ ಸ್ಮಾರಕಗಳಲ್ಲಿ ದೇವಾಲಯಗಳನ್ನು ಭವ್ಯತೆ, ಗಾತ್ರ ಮತ್ತು ವಾಸ್ತುಶಿಲ್ಪಕಲೆಯ ವೈವಿಧ್ಯತೆ ಹಿನ್ನೆಲೆಯಲ್ಲಿ ಅವಲೋಕಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಶ್ರೀವೈಷ್ಣವ ಮತದ ದೇವಾಲಯ, ಶಿಲ್ಪಗಳು ಕಾಣುತ್ತವೆ. ಅಲ್ಲಿ ವೀರಶೈವ ಮತದ ಹಲವಾರು ದೇವಾಲಯ, ಮಠ, ಶಿಲ್ಪ, ಶಾಸನಗಳಿವೆ. ಶೈವಮತದ ವಿರೂಪಾಕ್ಷ, ಕಡಲೆಕಾಳು ಗಣಪತಿ, ಸಾಸಿವೆಕಾಳು ಗಣಪತಿ, ಬಡವಿಲಿಂಗ, ಚಂದ್ರಶೇಖರ ದೇವಾಲಯದ ಶಿಲ್ಪಗಳನ್ನು ಬಿಟ್ಟರೆ ಉಳಿದವು ಹೆಚ್ಚಾಗಿ ವೀರಶೈವದ್ದಾಗಿವೆ. ಆದರೆ ವೀರಶೈವ ಮತದ ಸ್ಮಾರಕ ಶಿಲ್ಪಗಳು ಶ್ರೀವೈಷ್ಣವದಂತೆ ಭವ್ಯವಾಗಿಲ್ಲ. ಗಾತ್ರದಲ್ಲಿ ದೊಡ್ಡದಾಗಿಲ್ಲ, ವಿಸ್ತಾರವಾಗಿಲ್ಲ. ವಾಸ್ತುಶಿಲ್ಪಕಲೆಯಲ್ಲೂ ವೈವಿಧ್ಯತೆಯಿಂದ ಕೂಡಿಲ್ಲ. ಅಲ್ಲಿನ ವಿಠ್ಠಲ, ಕೃಷ್ಣ ಮತ್ತು ಅಚ್ಯುತರಾಯರ ದೇವಾಲಯಗಳು ಉಗ್ರನರಸಿಂಹ/ ಲಕ್ಷ್ಮೀನರಸಿಂಹನ ಬೃಹತ್ ಎತ್ತರದ ಶಿಲ್ಪ, ಮಹಾದ್ವಾರಗಳ ಭವ್ಯವಾದ ಎತ್ತರದ ಗೋಪುರಗಳು,

ರಾಜಧಾನಿಯಾದ ಹಂಪಿಯಲ್ಲಿನ ಈ ಕಾಲದ ಶ್ರೀವೈಷ್ಣವ ಧರ್ಮದ ವಾಸ್ತುಶಿಲ್ಪಕಲೆಯ ವೈಭವವನ್ನು ಎತ್ತಿ ಸಾರುತ್ತವೆ. ಅಂತಹ ವೈಭವವನ್ನು ತಿರುಪತಿ ಇನ್ನಿತರ ಸ್ಥಳಗಳಲ್ಲೂ ಕಾಣಬಹುದು. ಆದರೆ ಶ್ರೀಶೈಲಂನಲ್ಲಿ ಶೈವ–ವೀರಶೈವರ ವಾಸ್ತುಶಿಲ್ಪಕಲೆಯ ಭವ್ಯತೆ ಮತ್ತು ವೈಭವವಿದೆ.

13. ದತ್ತಿ ದಾನಗಳು :

ದಾನ–ಧರ್ಮ ಮಾಡುವುದು ಶ್ರೇಷ್ಠವಾದ ಕೆಲಸ. ಮಾಡಿದ ಸಂಕಲ್ಪಕ್ಕೆ ಜೀವವನ್ನು ಸಮರ್ಪಣೆ ಕೊಡುವುದು ಪುಣ್ಯದ ಕೆಲಸವೆಂದು ನಾವು ಪ್ರಾಚೀನ ಕಾಲದಿಂದ ನಂಬಿದ್ದೇವೆ. ಪಾಪ ನಿವಾರಣೆ ಆಗುತ್ತದೆ, ದೀರ್ಘಕಾಲ ಆಯುಷ್ಯ ಸಿಗುತ್ತದೆಂಬೆಲ್ಲಾ ಫಲಾಪೇಕ್ಷೆ ಕಾರಣಗಳಿಂದ ಈ ಆಚರಣೆಗೆ ಒತ್ತು ಕೊಟ್ಟಿದ್ದೇವೆ.ವಿಜಯನಗರ ಕಾಲದಲ್ಲಂತೂ ಈ ಪರಂಪರೆ ಉನ್ನತ ಮಟ್ಟಕ್ಕೇರಿದೆ. ದತ್ತಿ ದಾನ ಸಂಗತಿಗಳ ಅಧ್ಯಯನವು ನಮ್ಮ ಕುತೂಹಲವನ್ನು ಕೆರಳಿಸುತ್ತದೆ. ವಯಸ್ಸಾದ ಅನುಭವಿಗಳು ದಾನ ನೀಡುವುದು ಶ್ರೇಷ್ಠವೆನ್ನುವರು. ಈ ಬಗ್ಗೆ ಡಾ. ಅಪರ್ಣ ಅವರ ಕೃತಿ ಸಂಗಮರ ಕಾಲದ ದೇವಾಲಯಗಳು ಮತ್ತು ಇನ್ನಿತರ ಲೇಖನ ಕೃತಿಗಳನ್ನು ಅವಲೋಕಿಸಿದಾಗ ದಾನದ ವೈವಿಧ್ಯತೆ ಕಾಣುತ್ತದೆ. (ಪು. 100–131) ಅವುಗಳಲ್ಲಿ ಪುಣ್ಯ, ಸಂತಾನ, ವಿಜಯ, ಅಭಿವೃದ್ಧಿ, ಸ್ವರ್ಗ, ಸದ್ಗತಿ ಪಡೆಯಲು, ಗೃಹಶಾಂತಿ, ಜನ್ಮನಕ್ಷತ್ರದ ಶಾಂತಿ, ಸಾಮ್ರಾಜ್ಯ ಸ್ಥಾಪನೆ, ರಾಜ್ಯವಿಸ್ತರಣೆ, ರಾಜನಾಗುವ ಅಪೇಕ್ಷೆ, ಸೈನ್ಯದ ಯಶಸ್ಸಿಗೆ, ರಾಜ್ಯಾಭ್ಯುದಯಕ್ಕೆ, ರಾಜನಿಗೆ ಧರ್ಮವಾಗಲೆಂದು, ಸಕಲ ಸಾಮ್ರಾಜ್ಯ ಸಿಗಲೆಂದು, ಯಶಸ್ಸು ಸಿಗಲೆಂದು, ರಾಜರ ಆಯುಷ್ಯ ಅಭಿವೃದ್ಧಿಯಾಗಲು, ಶತ್ರುಗಳು ನಾಶವಾಗಲು, ದೀರ್ಘಕಾಲ ಸಿಂಹಾಸನದಲ್ಲಿರಲು, ಸಿಂಹಾಸನ ಮತ್ತು ಆಯುಷ್ಯಕ್ಕೆ ಆಪತ್ತು ಬರಬಾರದೆಂದು, ರಾಜರ ಸಂತತಿಯ ಶ್ರೇಯಸ್ಸಿಗಾಗಿ, ಸ್ಥಿರ ಸಾಮ್ರಾಜ್ಯಕ್ಕಾಗಿ, ಶಾಶ್ವತ ಪುಣ್ಯಲೋಕ ಪ್ರೀತ್ಯರ್ಥವಾಗಿ, ಎರಡುಕೇರಿಯ ಜನತೆಯ ಪುಣ್ಯಕ್ಕಾಗಿ, ಹಿರಿಯರ ಪುಣ್ಯಲೋಕಕ್ಕಾಗಿ, ಚತುರ್ವಿಧ ಸಾಧನೆಗಾಗಿ, ವ್ಯಕ್ತಿ/ರಾಜ/ಅಧಿಕಾರಿ ಇತರರು ಸಾವನ್ನಪ್ಪಿದ ಸಂದರ್ಭದಲ್ಲಿ, ದೇವರನ್ನು ಪ್ರತಿಷ್ಠಾಪನೆ ಮಾಡಿದಾಗ, ಹಬ್ಬ/ಉತ್ಸವ, ವಿಶೇಷ ಪೂಜಾ ಸಂದರ್ಭಗಳಲ್ಲಿ, ವಿಶೇಷ ವ್ರತಗಳನ್ನು ಆಚರಿಸಿದಾಗ, ಅರಸ ಪಟ್ಟಾಭಿಷಿಕ್ತನಾದಾಗ, ಯುದ್ಧಕ್ಕೆ ಹೋಗುವ ಮೊದಲು ಜಯಗಳಿಸಲು ಮತ್ತು ಜಯಗಳಿಸಿದ ನಿಮಿತ್ತವಾಗಿ, ನಾಮಕರಣ ಮಾಡುವಾಗ, ಅಂಗಡಿ ಸ್ಥಳ ದೊರೆಯಿತೆಂದು, ಪತಿಪೀಡಿತಳಾದಾಗ, ರೋಗ ಬಂದಾಗ, ಅಂತ್ಯಕಾಲ ಸಮೀಪಿಸಿದಾಗ, ಬ್ರಾಹ್ಮಣರನ್ನು/ನಖರರನ್ನು ಕೊಂದಾಗ, ಪಠಿಸುವ ಮಂತ್ರ ತಪ್ಪಾದಾಗ, ಮೂರ್ತಿ ಪ್ರತಿಷ್ಠಾಪಿಸಿದಾಗ, ದೇವಾಲಯ ಕಟ್ಟಿದಾಗ ಮತ್ತು ಇನ್ನಿತರ ಕಾರಣಗಳು ಪ್ರಮುಖವಾಗಿ ಕಾಣುತ್ತವೆ.

ಆಧುನಿಕ ಸಮಾಜದಲ್ಲೂ ಈ ರೀತಿಯ ದಾನ ಧರ್ಮದ ಕಾರ್ಯಗಳು ಮುಂದುವರೆದಿವೆ. ಹೆಚ್ಚು ಜಾತಕ ಫಲಗಳನ್ನು ನೋಡುವರು. ಅವಶ್ಯವಿದ್ದಾಗ ಶಾಂತಿ ಮಾಡಿಸಲು ಯಾಗ, ಪೂಜೆ, ಯಜ್ಞಗಳನ್ನು ಮಾಡಿಸುವುದು ಹೆಚ್ಚಾಗಿ ಕಂಡುಬರುತ್ತದೆ.

ಈ ಅವಧಿಯ ನಾಲ್ಕು ವಂಶಸ್ಥರಲ್ಲಿ ತುಳುವ ವಂಶಸ್ಥರು ನೀಡಿದ ದತ್ತಿ ದಾನಗಳು ಅತಿ ಹೆಚ್ಚು ಮತ್ತು ವೈವಿಧ್ಯಮಯವಾಗಿವೆ. ಅದರಲ್ಲಿ ಶ್ರೀಕೃಷ್ಣದೇವರಾಯನು ನೀಡಿದ ನೇರ ದತ್ತಿ ದಾನಗಳು ವಿಶೇಷ ಗಮನವನ್ನು ಸೆಳೆಯುತ್ತವೆ.ಈತನು ಹಂಪೆಯ ವಿರೂಪಾಕ್ಷ, ತಿರುಪತಿ ವೆಂಕಟೇಶ್ವರ ಹಾಗೂ ಶ್ರೀ ವೈಷ್ಣವ ದೇವಾಲಯಗಳಿಗೆ ಹೆಚ್ಚು ದಾನಗಳನ್ನು ನೀಡಿದ್ದಾನೆ. ಅದರಲ್ಲಿ ಈತನು ಈ ಮನೆತನದವರು ಶ್ರೀವೈಷ್ಣವ ಧರ್ಮಕ್ಕೆ ನೀಡಿದ ದತ್ತಿ ದಾನ ಅತೀ ಹೆಚ್ಚು.

ದತ್ತಿ–ದಾನ ನೀಡಿ ಅನೇಕ ಯುದ್ಧಗಳಲ್ಲಿ ಜಯ ಸಂಪಾದಿಸಿದ್ದು ಕೃಷ್ಣದೇವರಾಯ. ಈತನ ದಿಗ್ವಿಜಯ ಸಂಗತಿಗಳಂತೂ ವಿಜಯನಗರ ಚರಿತ್ರೆಯಲ್ಲಿ ವಿಶೇಷ ಸ್ಥಾನ ಪಡೆದಿವೆ. ಆದರೆ ಈತನು ಎಷ್ಟೆಲ್ಲದತ್ತಿ ದಾನ ನೀಡಿದರೂ ಸಹ ಅತಿಯಾದ ದುಃಖಈತನಿಗೆ ಒದಗಿ ಬಂದದ್ದು ವಿಪರ್ಯಾಸದ ಸಂಗತಿಯಾಗಿದೆ. ಅದೇನೆಂದರೆ ಕೃಷ್ಣದೇವರಾಯನಿಗೆ ಒಬ್ಬನೇ ಮಗ ತಿರುಮಲ. ಈ ಮಗನನ್ನು ಪಡೆಯಲು ತಿರುಪತಿ ವೆಂಕಟೇಶ್ವರನಿಗೆ ಬೇಡಿಕೊಂಡಿದ್ದನು. ಈತನು ಹುಟ್ಟಿದ ಬಳಿಕ ಆತನಿಗೆ ತಿರುಮಲ ಎಂದು ನಾಮಕರಣ ಮಾಡಿದನು. ಈ ಮಗನನ್ನು ಈ ದೇವರು ದಯಪಾಲಿಸಿದನೆಂದು ಸಂತೋಷಪಟ್ಟು ಆತನಿಗೆ ಹೇರಳ ದತ್ತಿದಾನವನ್ನು ನೀಡಿದನು. ಆದರೆ ಆ ಮಗ ತನ್ನ ಆರನೇ ವಯಸ್ಸಿನಲ್ಲಿ ವಿಷಪ್ರಾಶನದಿಂದ ಸಾವನ್ನಪ್ಪಿದ. ಕೃಷ್ಣದೇವರಾಯನ ಜೀವನ ಚರಿತ್ರೆಯಲ್ಲಿ ಈ ಘಟನೆಯು ಆಘಾತವನ್ನುಂಟು ಮಾಡಿದೆ. ಹುಟ್ಟು ಅನಿರೀಕ್ಷಿತ, ಸಾವು ನಿಶ್ಚಿತ.

ಆದರೆ ಹೇರಳ ದತ್ತಿದಾನ ನೀಡಿ ದೇವರ ಕೃಪೆಯಿಂದ ಪಡೆದ ಮಗು ತನ್ನ ಅತೀ ಚಿಕ್ಕ ವಯಸ್ಸಿನಲ್ಲೇ ಸಾವಪ್ಪಿದಾಗ ದತ್ತಿದಾನ ನೀಡಿದವರಿಗೆ ದೇವರ ಬಗ್ಗೆ ನಂಬಿಕೆ ಮುಂದುವರಿಯಲು ಸಾಧ್ಯವಾದೀತೆ? ಆದರೂ ಸಹ ಸಮಾಜ ದೇವರನ್ನು ನಂಬಿದೆ. ದತ್ತಿದಾನ ನೀಡುವುದನ್ನು ಯಾವ ಕಾಲದಲ್ಲೂ ನಿಲ್ಲಿಸಿಲ್ಲ. ಅದು ಆತನ ಅನುಭವವೇ ಸರಿ. ದತ್ತಿ ದಾನದಿಂದಲೇ ಎಲ್ಲಾ ಕಾಲಕ್ಕೂ ಹೇರಳ ಧಾರ್ಮಿಕ ಸ್ಮಾರಕಗಳಾದ ದೇವಾಲಯ, ಬಸದಿ, ಸ್ತೂಪ, ಮಠ–ಮಾನ್ಯಗಳು ಮುಂತಾದವು ನಮ್ಮಲ್ಲಿ ನಿರ್ಮಾಣವಾಗಿವೆ. ಭವ್ಯ ಶಿಲ್ಪಗಳನ್ನು ನಿಲ್ಲಿಸಲಾಗಿದೆ. ಈ ಅವಧಿಯಲ್ಲಿ ನೀಡಿದ ದತ್ತಿದಾನದ ವಿವರಗಳ ಬಗ್ಗೆ ಒಂದು ಪ್ರತ್ಯೇಕ ಅಧ್ಯಯನ ಕೈಕೊಳ್ಳುವ ಅವಶ್ಯಕತೆಯಿದೆ.

14. ವಿಜಯನಗರ ಕಾಲದ ನೆಲೆಗಳ ಉತ್ಖನನಗಳು :

ವಿಜಯನಗರ ಕಾಲದ ಹಲವರು ಹಾಳಾದ ಜನವಸತಿ ನೆಲೆಗಳು ಕರ್ನಾಟಕ ಮತ್ತು ಇನ್ನಿತರ ಭಾಗಗಳಲ್ಲಿವೆ. ಅದರಲ್ಲೂ ರಾಜಧಾನಿ ನಗರ ಹಂಪೆ, ಬಹುದೊಡ್ಡ ನೆಲೆಯಾಗಿದೆ. ಇದಲ್ಲದೆ ಬಾರಕೂರು ನೆಲೆ ಮತ್ತು ಶಿಗ್ಗಾಂವಿ ಹತ್ತಿರದ ಕನಕದಾಸರ ಊರಾದ ಬಾಡದ ನೆಲೆಗಳು ಮಹತ್ವದ್ದಾಗಿದೆ.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯವರು ಸುಮಾರು 4½ ದಶಕಗಳಿಂದ ಹಂಪಿಯ ರಾಜಾಂಗಣ ಪ್ರದೇಶ ಮುಂತಾದ ಕಡೆಗಳಲ್ಲಿ ಉತ್ಖನನವನ್ನು ನಡೆಸುತ್ತಿದೆ. ಅಲ್ಲಿ ಅನೇಕ ರೀತಿಯ ಶಿಲಾಕಟ್ಟಡಗಳ ತಲವಿನ್ಯಾಸಗಳು ಸಿಕ್ಕಿವೆ. ಅವುಗಳಲ್ಲಿ ಅರಮನೆಯ ಸಂಕೀರ್ಣ, ಕಾವಲುಗಾರರ ಮನೆ, ಉಗ್ರಾಣಗಳು, ಜಲಪೂರೈಕೆ ಭಾಗಗಳು, ಒಳಚರಂಡಿ ಹಾಗೂ ಇನ್ನಿತರ ಪುರಾವೆಗಳು ವೈವಿಧ್ಯಮಯವಾಗಿವೆ. ರಾಜ್ಯ ಪುರಾತತ್ವ ಇಲಾಖೆಯೂ ಸಹ ಹಂಪಿ ಭಾಗದಲ್ಲಿ,ವಿರೂಪಾಕ್ಷ ದೇವಾಲಯ ಎದುರಿನ ಹಜಾರ, ಧನನಾಯಕ ಸಂಕೀರ್ಣ ಪ್ರದೇಶಗಳ ಬದಿಗಳಲ್ಲಿ ಉತ್ಖನನವನ್ನು ಸುಮಾರು 2½ದಶಕಗಳಿಂದ ನಡೆಸುತ್ತ ಬಂದಿದೆ.ಈರ್ವ್ವರ ಪ್ರಯತ್ನದ ಫಲದಿಂದ ಈ ಅವಧಿಯ ಅನೇಕ ರೀತಿಯ ತಲವಿನ್ಯಾಸವುಳ್ಳ ಕಟ್ಟಡಗಳು ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಪುರಾವೆಗಳು ಬೆಳಕನ್ನು ಕಂಡಿವೆ. ಬೆಳಕಿಗೆ ಬಂದ ಈ ಎಲ್ಲಾ ರೀತಿಯ ತಲವಿನ್ಯಾಸಗಳುಳ್ಳ ಕಟ್ಟಡ ಸ್ಮಾರಕಗಳನ್ನು ಸಂರಕ್ಷಣೆ ಮಾಡಿರುವರು. ಈರ್ವ್ವರೂ ನಡೆಸಿದ ಉತ್ಖನನದ ವರದಿಗಳು ಕಾಲಕಾಲಕ್ಕೆ ಹೊರಬಂದಿವೆ. ಅವುಗಳು ವಿಜಯನಗರ ಕಾಲದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡಲು ನೆರವಾಗಿವೆ.

ಶಾಸನಗಳಲ್ಲಿ ಅರಮನೆ ಸಂಕಿರಣದ ಉಲ್ಲೇಖ :

ದೇಶೀಯ ಮತ್ತು ವಿದೇಶೀಯ ಬರವಣಿಗೆಗಳು, ಶಾಸನಗಳು ಮತ್ತು ಮೌಖಿಕ ಪುರಾವೆಗಳು ರಾಜಧಾನಿಯಾಗಿದ್ದ ಹಂಪಿಯ ಬಗ್ಗೆ ಅನೇಕ ವಿಷಯಗಳನ್ನು ತಿಳಿಸಿ ಪ್ರಸಿದ್ಧಿ ಪಡೆದಿವೆ. ಹಂಪೆಯ ಕೆಲವು ಶಾಸನಗಳ ಅಧ್ಯಯನದಿಂದ ಅರಮನೆ ಸಂಕಿರಣದ ಕುತೂಹಲ ಮಾಹಿತಿಗಳು ಉಪಲಬ್ಧವಾಗಿವೆ. ಒಂದು ಶಾಸನದಲ್ಲಿ ವೀರ ಹರಿಹರ ರಾಯನ ಮನೆಯ ಜಾಗದಲ್ಲಿ ತಿಪ್ಪಉಡೆಯನು ಭುವನೇಶ್ವರ ಮೂರ್ತಿಯನ್ನು ಮಾಡಿಸಿ ಪ್ರತಿಷ್ಠಾಪಿಸನೆಂದು ಉಲ್ಲೇಖಿಸಿದೆ. (1337–1404) ಒಂದು ಸ್ತಂಭಶಾಸನದಲ್ಲಿ ಕೃಷ್ಣದೇವರಾಯನು ಆಳುವಾಗ (1508–1530) ವೀರಭದ್ರನ ಮನೆಯ ಉಲ್ಲೇಖವಿದೆ. ಬಹುಷಃ ಅದು ವೀರಭದ್ರದೇವರ ಗುಡಿ ಹೋಗಿ ಅದು ಹಿರಿಯ ಅರಮನೆ ಆಗಿದ್ದು ತಿಳಿಯುತ್ತದೆ. ಆದನ್ನು ರಂಗಮಹಲ್ ಎನ್ನುವರು(?). ಮತ್ತೊಂದು ಶಾಸನದಲ್ಲಿ ಹಿರಿಯ ಅರಮನೆಯ ಶಿಲಾಮಂಟಪವನ್ನು ಪಂಪೋಜನ ಮಗ ತಿಪ್ಪೋಜ ಕಟ್ಟಿಸಿದನೆನ್ನಲಾಗಿದೆ. (1528) ಅಲ್ಲಿ ನಾಗಬನವಿತ್ತೆನ್ನಲಾಗಿದೆ. ಆನೆಗುಂದಿಯಲ್ಲಿನ ಒಂದು ಶಾಸನದ ಪ್ರಕಾರ ಅಲ್ಲಿ ತಿಪ್ಪಣ್ಣವೊಡೆಯರ ಅರಮನೆ ಇದ್ದುದು ತಿಳಿಯುತ್ತದೆ. ಹಜಾರರಾಮ ದೇವಾಲಯದ ಹಿಂದಿನ ಶಿಲಾಮಂಟಪಗಳಲ್ಲಿ ಎರಡು ಶಿಲಾಶಾಸನಗಳಿವೆ. ಮೊದಲನೇ ಮತ್ತು ಎರಡನೇ ವೀರ ಹರಿಹರರಾಯರ ಕಾಲದ ಅರಮನೆ ಮತ್ತು ಹಿರಿಯ ಅರಮನೆ, ಅದರ ಪೂರ್ವದಲ್ಲಿ ಮಹಾದ್ವಾರ, ಹೊರಗಿನ ಆಸ್ಥಾನ, ಆನೆಗಳುಳ್ಳ ಎತ್ತರದ ಜಗತಿ, ನೀರು ಬಿಡುವ ಮನೆ, ನೀರಿನ ಕಾಲುವೆ, ಉತ್ತರ ದ್ವಾರ, ರಾಜನ ಆಸ್ಥಾನ, ಪೂರ್ವದ್ವಾರ, ಪಶ್ಚಿಮ ಗ್ಯಾಲರಿಯ ಆಸ್ಥಾನ, ಕಾವಲುಗಾರರ ವೇದಿಕೆ, ಆಸ್ಥಾನಕ್ಕೆ ಹೋಗುವ ಒಳದಾರಿ, ಟಾಯಲೆಟ್ ಬ್ಲಾಕ್, ಒಳ ಆಸ್ಥಾನ ಭಾಗ, ವಾಸಮಾಡುವ ಮನೆಗಳ ಪೂರ್ವಭಾಗ,

ವಾಸಿಸುವವರ ಮನೆಗಳು, ರಾಜರ ವನ, ಅರಸರ ವಾಸದ ಅರಮನೆಗಳು ಕಂಡಿವೆ. (ರೀಸೆಂಟ್ ಎಕ್ಸ್‌ಕವೇಶನ್ ಇನ್ ಮಿಂಟ್ ಏರಿಯಾ, ಟಿ.ಎಂ. ಕೇಶವ : 2003, ವಿಜಯನಗರ ಅಧ್ಯಯನ, ಪು. 42-48)

ಕೇಂದ್ರ ಪುರಾತತ್ವ ಇಲಾಖೆಯವರು ಹಂಪೆಯ ಮಹಾನವಮಿ ದಿಬ್ಬ ಭಾಗ, ವಿಠಲ ದೇವಾಲಯ ಸಂಕಿರಣ ಮತ್ತು ಅದರ ಪೂರ್ವ, ಉತ್ತರ ಮತ್ತು ಸುತ್ತಲಿನ ಭಾಗದಲ್ಲಿ ಉತ್ಖನನ ನಡೆಸಿದರು. ಅಲ್ಲಿ ಮೂಲರಸ್ತೆಯು ವಿಠಲ ದೇವಾಲಯದ ಪೂರ್ವದ್ವಾರ ಮತ್ತು ಹೆಜ್ಜಲ ಮಂಟಪದ ಬಳಿ ಸಿಕ್ಕವು. ಈ ಬಜಾರ ಉತ್ತರಕ್ಕೆ ಮುಚ್ಚಿದ ಮೆಟ್ಟಣಿಕೆಯುಳ್ಳ ಬಾವಿ, ಲೌಖಿಕ ವಾಸದ ಮನೆ ಕಂಡಿವೆ. ಇವುಗಳು ವ್ಯಾಪಾರಸ್ಥರ ವಾಸದ ಸಾಲು ಸಾಲು ಮನೆಗಳೆಂದು ಹೇಳುವರು. ವಿಠಲ ದೇವಾಲಯದ ಉತ್ತರ ದ್ವಾರದಲ್ಲಿ ಗುಡಿಗಳು, ಲೌಖಿಕ ಕಟ್ಟಡಗಳಿಗೆ ಹೊಂದಿ ಉತ್ತರಕ್ಕೆ ಸಾಲು ಸಾಲು ರಸ್ತೆಗಳು ಕಾಣಿಸಿದವು. ಇಲ್ಲಿ ನೆನಪಿಸುವ ಸಂಗತಿಯೆಂದರೆ, ಈ ರಸ್ತೆಗಳ/ದಾರಿ ಬದಿಗಳು ಕನಕದಾಸರು ಬರೆದ ಮೋಹನತರಂಗಿಣಿಯಲ್ಲೂ ಉಲ್ಲೇಖವಾಗಿವೆ. ರಾಜಧಾನಿ ನಗರವಾದ ಹಂಪಿಯ ಮೆಟ್ರೊಪೊಲಿಟ್‌ನ ಮಹತ್ವದ ಕಟ್ಟಡಗಳನ್ನೆಲ್ಲ ಡಾ. ಬಿ. ನರಸಿಂಗಯ್ಯ ಅವರು ಚೆನ್ನಾಗಿ ದಾಖಲಿಸಿದ್ದಾರೆ. (MetroPolis Vijayanagara) ಇದರಲ್ಲಿನ ಅನೇಕ ಕಟ್ಟಡಗಳನ್ನು ವಿದೇಶಿಯರ ಬರವಣಿಗೆಯಂತೆ ಗುರ್ತಿಸಿದ್ದು ವಿಶೇಷವೆನಿಸಿದೆ. ಟಂಕಸಾಲೆಯೆಂದು ಕರೆದ ಭಾಗವು ಕೃಷ್ಣದೇವರಾಯನ ಅರಮನೆ ಎಂದು ಗುರುತಿಸಿರುವರು. ಅಲ್ಲಿ ಅಷ್ಟಕೋನ ನೀರಿನ ತೊಟ್ಟಿಯಿದೆ. ಅದರ ವಿರುದ್ಧ ಭಾಗದಲ್ಲಿ ಅಡುಗೆ ಮನೆ ಮತ್ತು ಭೋಜನಶಾಲೆಯಿವೆ. ವೀರಹರಿಹರ ಅರಮನೆಯು ಹಜಾರರಾಮಚಂದ್ರ ದೇವಾಲಯದ ಪಶ್ಚಿಮಕ್ಕಿದೆ.

1983-84ರ ಉತ್ಖನನವನ್ನು ರಂಗಮಹಲ್ ಪೂರ್ವ ಅಥವಾ ಟಂಕಸಾಲೆ ಭಾಗದಲ್ಲಿ ನಡೆಸಲಾಯಿತು. ಅಲ್ಲಿ ವಿವಿಧ ಅಳತೆಯ ಹಲಗೆಯ ಮೇಲೆ ಬರೆಯುವ ಬಳಪ ತುಂಡುಗಳು ಸಿಕ್ಕವು. ಬಳಪದ ಮೇಲೆ 17 ಅಕ್ಷರಗಳ ಹೆಸರಿದೆ. ಅಲ್ಲಿ ಶ್ರೀ ತಿರು ಮತ್ತು ಮ... ಹೆಸರಿನಿಂದಲೂ ಅದನ್ನು ಕೃಷ್ಣದೇವರಾಯನ ಮಗ ತಿರುಮಲರಾಯನೆಂದು ಗುರುತಿಸಿದ್ದಾರೆ. ಆ ಬಳಪವು 8 ಸೆಂ.ಮಿ. ಉದ್ದ ಮತ್ತು 2 ಸೆಂ.ಮೀ. ಸುತ್ತಳತೆಯದಿದೆ. ತುದಿ ಬರೆಯಲು ಬಗ್ಗಿ ಚೂಪಾಗಿದೆ. ಈ ವಿವರಗಳು ಕೇಶವ ಟಿ.ಎಂ. ಹಾಗೂ ಇನ್ನಿತರರು ಬರೆದ ಲೇಖನದಲ್ಲಿವೆ. (2010, ವಿಜಯನಗರ ಅಧ್ಯಯನ, ಸಿಗ್ನಿಫಿಕೆನ್ಸ್ ಆಫ್ ಎನ್ ಇನ್‌ಸಿಗ್ನಿಫಿಕೆಂಟನ್ ಎಂಟಿಕ್ಯೂಟೀ ರಿಟ್ರವಡ್ ಫ್ರಮ್ ಹಂಪಿ ಎಕ್ಸಕವೇಶನ್ಸ್, ಪು. 430-39)

ಇಲ್ಲಿಯವರೆಗೆ ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಯವರು ನಡೆಸಿದ ಉತ್ಖನನಗಳ ಫಲಿತಗಳನ್ನೆಲ್ಲ ಸೇರಿಸಿ ಎರಡು ಕಿರುಹೊತ್ತಿಗೆಗಳನ್ನು ಹೊರತರುವ ಅವಶ್ಯಕತೆಯಿದೆ. ಏಕೆಂದರೆ ಅದರಲ್ಲಿನ ಫಲಿತಗಳು ವಿವಿದೆಡೆಗಳಲ್ಲಿ ವರದಿಯಾಗಿವೆ. ಇವುಗಳು ಸಂಶೋಧಕರಿಗೆ ಮತ್ತು ಅಧ್ಯಾಪಕರಿಗೆ ವಿಜಯನಗರದ ಬಗ್ಗೆ ಹೆಚ್ಚಿನ ಅಧ್ಯಯನ ಕೈಕೊಳ್ಳಲು ತುಂಬಾ ಉಪಯುಕ್ತವಾಗುವವು.

1975 ರಿಂದ ಹಂಪೆಯ ನೊಬಲ್‌ಮೆನ್ ಭಾಗದಲ್ಲೇ ಉತ್ಖನನ ನಡೆಸಿದಾಗ ಅಲ್ಲಿ ಸುಮಾರು 14 ತಲವಿನ್ಯಾಸವುಳ್ಳ ಕಟ್ಟಡಗಳು ಬೆಳಕಿಗೆ ಬಂದವು. ನಾಣ್ಯ ಮುದ್ರಿಸುವ ಭಾಗದಲ್ಲೇ ಎರಡು ವಾಸದ ಕಟ್ಟಡಗಳು ಕಾಣಿಸಿವೆ. ನೋಬಲ್‌ಮನ್ 2 ಭಾಗದಲ್ಲಿ ನಾಲ್ಕು ಸಣ್ಣ ಕಟ್ಟಡಗಳು ಕಂಡಿವೆ. ನೋಬಲ್ ಮೆನ್ ಮನೆಗಳ ಉತ್ತರ ಭಾಗದಲ್ಲಿ ಸಣ್ಣಪುಟ್ಟ 24 ಕಟ್ಟಡ ಪುರಾವೆಗಳು ಹೊರಬಂದಿವೆ.

ಹಜಾರರಾಮ ದೇವಾಲಯದ ಹತ್ತಿರದ ರಾಜಾಂಗಣದಲ್ಲಿ ನಾಲ್ಕು ಅರಮನೆ ಸಂಕಿರಣಗಳು ಲಭ್ಯವಾಗಿವೆ. ಅವೆಲ್ಲ ತಲವಿನ್ಯಾಸವುಳ್ಳ ಗೋಡೆಗಳಾಗಿವೆ. ಒಂದು ಕಡೆ ಟಾಯಿಲೆಟ್ ಭಾಗವೂ ಕಂಡುಬಂದಿದೆ. ಅರಮನೆಗಳಲ್ಲಿ ನೆಲಕ್ಕೆ ಬಿದ್ದ ಅವಶೇಷಗಳಿವೆ. ಒಂದರಲ್ಲಿ ಕಂಬಗಳುಳ್ಳ ಹಾಲ್ ಇದೆ. ಎರಡರಲ್ಲಿ ಕೋಣೆಗಳಿದ್ದವು. ನಾಣ್ಯ ಮುದ್ರಿಸುವ ಟಂಕಶಾಲೆ, ಅರಸನ ದರ್ಬಾರ್ ಹಾಲ್, ವಿರೂಪಾಕ್ಷ ದೇವಾಲಯ ಸಂಕಿರಣದಲ್ಲಿ ಇತ್ತೀಚೆಗೆ ಪುಷ್ಕರಣಿ ಬೆಳಕಿಗೆ ಬಂದಿದೆ. ಮಹಾನವಮಿ ದಿಬ್ಬ ಪರಿಸರದಲ್ಲಿ ಓಕಳಿ ಹೊಂಡ, ಪುಷ್ಕರಣಿ ಇತ್ಯಾದಿ ಕಟ್ಟಡಗಳು ಹೊರಬಂದವು. ಅಲ್ಲಲ್ಲಿ ದ್ವಾರಗಳು ಕಂಡಿವೆ. ಅಲ್ಲಿ ಕೆಲವು ಇಟ್ಟಿಗೆಗಳ ಹಾಗೂ ಇಟ್ಟಿಗೆ ಮತ್ತು ಗಾರೆ ಕಟ್ಟಡಗಳು ಸಿಕ್ಕಿವೆ. ತಾಮ್ರ ಕರಂಡಕವೊಂದು (ಚೌಕ) ಅಚ್ಯುತ ಬಜಾರಿನಲ್ಲಿ ಮಂಟಪದ ಅಂಕಣ ನೆಲದಲ್ಲಿ ಸಿಕ್ಕಿದೆ (2006-07ರ ಉತ್ಖನನ) ಅನೇಕ ಗಡಿಗೆ ಮಡಿಕೆಗಳು, ಕಿರು

ಶಿವಲಿಂಗಗಳು ಮುಂತಾದ ಪ್ರಾಚ್ಯವಸ್ತುಗಳು ರಾಜಾಂಗಣ ಮುಂತಾದ ಕಡೆಗಳಲ್ಲಿ ಸಿಕ್ಕಿವೆ. ಒಟ್ಟಾರೆ ಹಂಪೆಯಲ್ಲಿ ನಡೆದ ಉತ್ಖನನಗಳ ಸಮಗ್ರ ಮಾಹಿತಿ ಒಂದೆಡೆ ತರಬೇಕಾಗಿದೆ.

ಬಾಡ ಉತ್ಖನನ : ಕರ್ನಾಟಕ ರಾಜ್ಯ ಸರ್ಕಾರ ಕನಕದಾಸರ ಹುಟ್ಟೂರೆನಿಸಿದ ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಬಾಡದಲ್ಲಿ ಅವರ ಮಹಾಮನೆಯ ಹಾಳು ಜಾಗದಲ್ಲಿ 2008–09 ರಲ್ಲಿ ಉತ್ಖನನ ನಡೆಸಿತು. ಬಾಡ ಊರಿನ ಪಶ್ಚಿಮಕ್ಕೆ ಸುಮಾರು ಮುಕ್ಕಾಲು ಕಿ.ಮೀ. ಅಂತರದಲ್ಲಿ ಈ ಹಾಳು ನೆಲವಿದೆ. ಸುಮಾರು 15 ಚ.ಮೀ. ನಲ್ಲಿ ಹಾಳಾದ ಕಟ್ಟಡವಿದೆ. ಅಲ್ಲಿ ಕನಕದಾಸರ ದೇವಾಲಯವನ್ನು 1965 ರಲ್ಲಿ ಕಟ್ಟಿಸಲಾಗಿದೆ. ಅಲ್ಲಿ ಎರಡು ಕಾಲಘಟ್ಟಗಳಲ್ಲಿ ನಿರ್ಮಿಸಿದ ವಾಸದ ಮನೆ ಬೆಳಕಿಗೆ ಬಂದಿತು. ಆ ಮನೆಯು 42 ಮೀ. ಉದ್ದ 43 ಮೀ. ಅಗಲ ವ್ಯಾಪ್ತಿಯನ್ನು ಹೊಂದಿದೆ. ಅದರ ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಅನೇಕ ಕೋಣೆಗಳ ಗೋಡೆಗಳು ಕಂಡವು. ಆ ಸ್ಥಳದಲ್ಲಿ ವಿವಿಧ ರೀತಿಯ ಮಧ್ಯಯುಗೀನ ಕಾಲದ ಗಡಿಗೆ–ಮಡಿಕೆಗಳು, ಕಬ್ಬಿಣದ ಮಳೆಗಳು, ತೂಕದ ಕಲ್ಲುಗಳು, ಬಳೆ ತುಂಡುಗಳು, ಶಿವಲಿಂಗಗಳು ಸಿಕ್ಕವು. ಈ ಕಟ್ಟಡದ ಸುತ್ತಲೂ ಗೋಡೆಯಿದೆ. ಈ ಸ್ಥಳದಲ್ಲಿ ನಾನು ಸರ್ವೇಕ್ಷಣೆ ಮಾಡಿದಾಗ ಅಲ್ಲಿ ವಿಜಯನಗರ ಕಾಲದ ಅನೇಕ ನಾಣ್ಯಗಳನ್ನು ಸ್ಥಳೀಯರ ಮನೆಗಳಲ್ಲಿ ಹುಡುಕಿದೆನು. ಹೀಗಾಗಿ ಈ ಸ್ಥಳದ ಕಟ್ಟಡವು ವಿಜಯನಗರ ಕಾಲದ್ದೆಂದು ಸ್ಪಷ್ಟಪಡಿಸಬಹುದಾಗಿದೆ. ಈ ಕಟ್ಟಡದ ವಿನ್ಯಾಸದಿಂದ ಇದೊಂದು ಪ್ರಾದೇಶಿಕ ಆಡಳಿತಗಾರ/ ಅಧಿಕಾರಿಯ ವಾಸದ ಮನೆ ಇರಬೇಕೆಂಬ ಅಭಿಪ್ರಾಯವಿದೆ. ಸ್ಥಳಿಕರು ಈ ಸ್ಥಳವು ಕನಕದಾಸರ ತಂದೆಯ ಮನೆಯಾಗಿತ್ತೆಂದು ಹೇಳುವರು. ಉತ್ಖನನದ ವರದಿಯಿಂದ ಅಲ್ಲಿ ದೊಡ್ಡ ಮನೆ ಅರಮನೆ ಇದ್ದ ಪುರಾವೆ ಗೊತ್ತಾಗಿದೆ. ದೊರೆತ ಮನೆಯ ಪುರಾವೆ ಮತ್ತು ಸ್ಥಳಿಕರ ಚರಿತ್ರೆಯಿಂದ ಈ ಮನೆಯು ಕನಕದಾಸರ ಮನೆ ಆಗಿರಬೇಕು. ಈ ನೆಲೆಯನ್ನು ರಾಜ್ಯ ಸರ್ಕಾರದ ಪ್ರಾಧಿಕಾರ ಉತ್ಖನನ ಮಾಡಿಸಿದ ಅದನ್ನು ರಕ್ಷಣೆ ಮಾಡುತ್ತಿದೆ (ಎಸ್.ಜಿ. ಸಾಮಕ; ಕನಕದಾಸ ಎಕ್ಸ್‌ಕವೇಶನ್ ಆಫ್ ಹಿಜ್ 'ಮಹಾಮನೆ'(ಪ್ಯಾಲೇಸ್). ಅಲ್ಲಿ ಒಂದು ಬೃಹತ್ ಆಧುನಿಕ ಕನಕ ಭವನವನ್ನು ನಿರ್ಮಿಸಲಾಗಿದೆ.

ಬಾರಕೂರು ಉತ್ಖನನ : ವಿಜಯನಗರ ಸಾಮ್ರಾಜ್ಯದಲ್ಲಿ ಬಾರಕೂರು ಒಂದು ಪ್ರಸಿದ್ಧ ಆಡಳಿತ ಪ್ರಾಂತವಾಗಿತ್ತು. ಅದಕ್ಕೆ ಈ ಅವಧಿಯಲ್ಲಿ ಬಸವಣ್ಣ ರಾಜ್ಯಪಾಲನಾಗಿದ್ದ. ವಿಜಯನಗರದ ರಾಜ್ಯಪಾಲ ಮಹಾಬಳದೇವ ಒಡೆಯ ಬಾರಕೂರು ರಾಜ್ಯದ ಆಡಳಿತ ನೋಡುತ್ತಿದ್ದ. ಮುಂದೆ ಬಾರಕೂರಿಗೆ ಬಾಚಣ್ಣ ಒಡೆಯನು ರಾಜ್ಯಪಾಲನಾಗಿದ್ದನು. ಆಬಳಿಕ ಬಾನತ್ರ ಒಡೆಯನು ಬಾರಕೂರಿನ ರಾಜ್ಯಪಾಲನಾಗಿದ್ದನು. 1432 ರಲ್ಲಿ ಚಂಡರಸ ಒಡೆಯನು ಬಾರಕೂರಿನ ರಾಜ್ಯಪಾಲನಾಗಿದ್ದ. ಕೃಷ್ಣದೇವರಾಯನ ಕಾಲದಲ್ಲಿ ರತ್ನತ್ರ ಒಡೆಯನು ಬಾರಕೂರಿನ ರಾಜ್ಯಪಾಲನಾಗಿದ್ದ. ಈ ಅವಧಿಪೂರ್ವದಲ್ಲಿ ಮತ್ತು ನಂತರವೂ ಬಾರಕೂರು ರಾಜಕೀಯವಾಗಿ, ವಾಣಿಜ್ಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು. ಬಾರಕೂರ ನೆಲೆಯನ್ನು ಉತ್ಖನನ ಮಾಡಲಾಯಿತು. ಅದು ಕೇವಲ ಅಲ್ಪ ಅವಧಿಯದಾಗಿತ್ತು. ಈ ಅವಧಿಯ ಹಲವಾರು ಪುರಾವೆಗಳು ಅಲ್ಲಿ ಸಿಕ್ಕಿವೆ.

15. ನಾಣ್ಯಗಳು :

ವಿಜಯನಗರ ಕಾಲದ ನಾಣ್ಯಗಳ ಬಗ್ಗೆ ಅನೇಕ ಸಂಶೋಧಕರು ಅಧ್ಯಯನ ಮಾಡಿದ್ದಾರೆ. ವಿಜಯನಗರ ಕಾಲದ ಶಾಸನಗಳಲ್ಲಿ ಬಾರಕೂರ, ಮಧುರೆ, ಹಂಪೆ, ಇನಾಂಪುರ ಭಾಗಗಳು ಮತ್ತು ಟಂಕಸಾಲೆ ಮತ್ತು ನಾಣ್ಯಗಳ ಉಲ್ಲೇಖಗಳು ಕಂಡುಬಂದಿವೆ. ಅದರಲ್ಲಿ ಪಾಡಪತ್ರ ಗದ್ಯಾಣ, ನೆಲ್ಲೂರು ಗದ್ಯಾಣ, ಮಧುರೆ ಗದ್ಯಾಣ, ಬಾರಕೂರು ಗದ್ಯಾಣ, ಮಂಗಳೂರು ಗದ್ಯಾಣ, ಗುತ್ತು ಹೊನ್ನು, ಅದೋಣಿ ಹಣ, ತಿರುಪತಿ ಹೊನ್ನುಗಳ ಹೆಸರುಗಳಿವೆ. ಅವುಗಳು ಒಂದೊಂದು ಆಡಳಿತ ಪ್ರಾಂತಗಳ ಟಂಕಸಾಲೆಯಲ್ಲಿ ಮುದ್ರಿಸಿದ ನಾಣ್ಯಗಳೆಂದು ತಿಳಿಯುತ್ತದೆ. ಇದರಿಂದ ಟಂಕಸಾಲೆಗಳ ಪುರಾವೆಗಳನ್ನು ಹುಡುಕುವ ಕಡೆ ನಾವು ಗಮನ ಹರಿಸಬೇಕಾಗಿದೆ. ನಾಣ್ಯಗಳ ಮೇಲೆ ಒಂದು ಅಥವಾ ಎರಡು ಮುಖಗಳಲ್ಲಿ ಬರಹ–ಚಿತ್ರಗಳು/ ಬರಹಗಳು ಇವೆ. ಒಂದರಲ್ಲಿ ಹನುಮಂತನನ್ನು ಒಂದು ಮುಖದಲ್ಲಿ, ಇನ್ನೊಂದು ಮುಖದಲ್ಲಿ ಅರಸರ ಬಿರುದು/ ಹೆಸರುಗಳಿವೆ. ನಾಣ್ಯರೂಪದಲ್ಲಿ ಈ ಕಾಲದಲ್ಲಿ ತೆರಿಗೆ ಕಟ್ಟುವುದಕ್ಕೂ ಬಳಸಲಾಗಿದೆ. ಈ ನಾಣ್ಯಗಳನ್ನು ಪಣ,

ಹಾಗ, ವೀಸ, ಬೇಳೆ, ಕಡು, ರೂಕ, ಚಿನ್ನ, ಗದ್ಯಾಣ, ವರಹ ಗದ್ಯಾಣ, ಪೊನ್, ಪಗೋಡ, ಕಾಟಿ ಮುಂತಾದ ಹೆಸರುಗಳಿಂದ ಕರೆಯಲಾಗಿತ್ತು. ಈ ನಾಣ್ಯಗಳನ್ನು ಬೆಳ್ಳಿ, ಚಿನ್ನ, ತಾಮ್ರಗಳಿಂದ ತಯಾರಿಸಲಾಗಿದೆ. ಈ ನಾಣ್ಯಗಳನ್ನು ಕೆಲವೆಡೆ ವಿಜಯನಗರದ ಮಂತ್ರಿಗಳು ಮುಂತಾದವರು ತಮ್ಮದೇ ಆದ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತರುತ್ತಿದ್ದರು. ಈ ಕಾರಣದಿಂದ ವಿಜಯನಗರ ಕಾಲದಲ್ಲಿ ಮುದ್ರಿತವಾದ ಅರಸರ/ಸಾಮಂತರ/ ಮಂತ್ರಿಗಳ ಮುಂತಾದವರ ನಾಣ್ಯಗಳನ್ನೆಲ್ಲ ಒಂದೆಡೆ ತಂದು ಸಮಗ್ರವಾಗಿ ಅವುಗಳನ್ನು ಅಧ್ಯಯನ ಮಾಡಬೇಕಾಗಿದೆ. ಹಂಪೆಯ ಉತ್ಖನನದಲ್ಲಿ ರಾಜಾಂಗಣ ಮತ್ತು ಹಜಾರರಾಮ ದೇವಾಲಯದ ಹಿಂದುಗಡೆ ಟಂಕಸಾಲೆ ಇದ್ದ ಲಕ್ಷಣಗಳು ಹೊರಬಂದಿವೆ.

ಲಕ್ಕಣ್ಣ ದಂಡನಾಯಕನು ಆತನ ಸಹೋದರ ಮಾದಣ್ಣನ ಜೊತೆ ಇಮ್ಮಡಿ ದೇವರಾಯನ ಆಳ್ವಿಕೆಯ ಕಾಲದಲ್ಲಿ (1433–46) ಮುಳಬಾಗಿಲು ಪ್ರಾಂತದ ಅಧಿಕಾರಿಯಾಗಿ ಆಡಳಿತ ನಡೆಸಿದನು. ಇದಲ್ಲದೆ ಆತನು ತಮಿಳುನಾಡಿನ ಮಧುರೆ ಪ್ರಾಂತ್ಯದ ದಂಡನಾಯಕನಾಗಿದ್ದಾಗ ಅಲ್ಲಿ ಬೆಳ್ಳಿ–ತಾಮ್ರ ನಾಣ್ಯಗಳನ್ನು ಟಂಕಿಸುವ ಅಧಿಕಾರ ಪಡೆದಿದ್ದನು. ಈ ರೀತಿಯ ಅಧಿಕಾರ ಪಡೆದಿದ್ದು ಈ ಕಾಲಾವಧಿಯಲ್ಲಿ ಅಪರೂಪ. ಅದರಲ್ಲಿ ಆತನ ಹೆಸರನ್ನು ಟಂಕಿಸಲಾಗಿದೆ. (ಡಾ. ಎಂ. ಗಿರಿಜಾಪತಿ: ವಿಜಯನಗರ ಅಧ್ಯಯನಮಾಲೆ, 2008: ಪು. 113–117) ಆತನು ಮುಂದೆ ರಾಜ್ಯಕ್ಕೆ ಮಹಾದಂಡನಾಯಕ ಮತ್ತು ಕಾರ್ಯಪಾಲನಾದನು. ಈ ರೀತಿಯಲ್ಲಿ ಇನ್ನಿತರ ದಂಡನಾಯಕರೂ ತಮ್ಮ ಆಡಳಿತದ ವಿಭಾಗಗಳಲ್ಲಿ ನಾಣ್ಯಗಳನ್ನು ಟಂಕಿಸುವ ಅಧಿಕಾರ ಹೊಂದಿರಬೇಕು. ಈ ಬಗ್ಗೆ ಒಂದು ಪಟ್ಟಿಯನ್ನು ತಯಾರಿಸಿ ಅಧ್ಯಯನ ಮಾಡಬೇಕಾಗಿದೆ.

ರೂಕ ಎಂಬ ನಾಣ್ಯವು ಸೇವುಣ ರಾಮಚಂದ್ರನ ಆಳ್ವಿಕೆಯಲ್ಲಿ (1276) ಚಲಾವಣೆಯಲ್ಲಿತ್ತು. ಅದು ಪಂಡರಪುರದ ಶಾಸನದಲ್ಲಿ ಉಲ್ಲೇಖವಾಗಿದೆ. (ನರಸಿಂಹಮೂರ್ತಿ ಎ.ವ್ಹಿ. ದಿ ಕಾಯಿನ್ಸ್ ಅಂಡ ಕರೆನ್ಸಿ ಸಿಸ್ಟಮ್ ಇನ್ ಕರ್ನಾಟಕ, ಪು. 162) ಅದು ಬೆಳ್ಳಿ/ಬಂಗಾರದ ನಾಣ್ಯವೆನ್ನುವರು. ಅದು ಈ ಅವಧಿಯಲ್ಲೂ ಚಲಾವಣೆಯಲ್ಲಿ ಇದ್ದಿರಬೇಕೆನ್ನುವರು. ಅದನ್ನು ಈಗ ಪರಿಶೀಲಿಸಬೇಕಾಗಿದೆ.

16. ಸರ್ವಾಧ್ಯಕ್ಷರ ಭಾಷಣಗಳು :

ವಿಜಯನಗರ ಅಧ್ಯಯನ ವಿಚಾರ ಸಂಕಿರಣಗಳ ಸಂಪುಟಗಳಲ್ಲಿ ಹಲವಾರು ಸಂಶೋಧಕರ ಅಧ್ಯಕ್ಷೀಯ ಭಾಷಣಗಳು ಪ್ರಕಟಗೊಂಡಿವೆ. ಅದರಲ್ಲಿನ ಕೆಲವರ ಅಭಿಪ್ರಾಯಗಳು ವಿಶೇಷವೆನಿಸಿವೆ. ಅವುಗಳಲ್ಲಿ ಡಾ. ಕೆ.ವಿ. ರಮೇಶ, ಡಾ. ಲಕ್ಷ್ಮಣ ತೆಲಗಾವಿ, ಡಾ. ಎಂ.ವಿ. ಶ್ರೀನಿವಾಸ, ಮುಂತಾದವರ ಭಾಷಣಗಳಲ್ಲಿ ಅನೇಕ ಚಿಂತನಾತ್ಮಕ ವಿಷಯಗಳಿವೆ. ವಿಜಯನಗರ ಚರಿತ್ರೆ ಬಗ್ಗೆ ಡಾ. ಕೆ.ವಿ. ರಮೇಶ್ ಅವರು ತಮ್ಮದೇ ಆದ ಅಭಿಪ್ರಾಯಗಳನ್ನು ನೀಡಿದ್ದಾರೆ. ಅವುಗಳು ಅನೇಕರಿಗೆ ಆಳವಾಗಿ ಚಿಂತನೆ ಮಾಡಲಚ್ಚಿವೆ. ಕೆ.ವಿ. ರಮೇಶ ಅವರ ಹೇಳಿಕೆಯಲ್ಲಿ ವಿಜಯನಗರ ಕಾಲದ ನಡೆ–ನುಡಿಗಳಲ್ಲಿ, ಬರಹಗಳಲ್ಲಿ, ರಚನಾಕ್ರಮಗಳಲ್ಲಿ ಒಂದು ಬಗೆಯ ಅಸ್ತವ್ಯಸ್ಥತೆ, ಕಲಬೆರಕೆಯಿದೆ ಎನ್ನುವರು. (ಕನ್ನಡಿಗ : ಒಂದು ಬಗೆಯ ಐತಿಹಾಸಿಕ ವ್ಯಕ್ತಿಚಿತ್ರ; ಇತಿಹಾಸ ದರ್ಶನ, ಸಂ. 3, ಪು. 273 (1988) ಈ ಮಾತನ್ನು ಪ್ರೊ. ಲಕ್ಷ್ಮಣ ತೆಲಗಾವಿ ಅವರು ಸಮ್ಮತಿಸಿದ್ದಾರೆ. ಅವರು ವಿಜಯನಗರ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಈ ಕಾಲದ ಕೆಳಸ್ಥರದ ಚರಿತ್ರೆಯನ್ನು ವಿಶ್ಲೇಷಿಸಿದ್ದಾರೆ. ಅದರಲ್ಲಿ ಐದು ಅನಿಷ್ಠ ಪದ್ಧತಿಗಳನ್ನು ವ್ಯಾಖ್ಯಾನಿಸಿದ್ದಾರೆ. ಅವುಗಳು ಸತಿಪದ್ಧತಿ, ವೇಶ್ಯಾಪದ್ಧತಿ, ಗುಲಾಮ ಪದ್ದತಿ, ಬಲಿಪದ್ದತಿ ಮತ್ತು ಅಸಹ್ಯಕರವಾದ ಅಂತಃಪುರ ಜೀವನದ ಪದ್ಧತಿ. ಇವುಗಳನ್ನು ಅವರು ಖಂಡಿಸಿದ್ದಾರೆ. ಇದಲ್ಲದೆ ನಾಯಕತನ ವ್ಯವಸ್ಥೆಯು ಮೊದಲು ಕಾಕತೀಯರ ರುದ್ರಾಂಬಾ ಮತ್ತು ಕಸಪನಾಯಕರ ಕಾಲದಿಂದ ಆರಂಭವಾಯಿತು. ಅದು ವಿಜಯನಗರ ಕಾಲದಲ್ಲಿ ವಿಸ್ತಾರಗೊಂಡಿತೆಂದು ಹೇಳಿರುವರು. ಕಾಕತೀಯರ ಅಧೀನದಲ್ಲಿ ಪದ್ಮಕುಲದ 77 ನಾಯಕರಿದ್ದರೆಂದು ತಿಳಿಸಿರುವರು. ವಿಜಯನಗರ ಕಾಲದಲ್ಲಿ 200 ನಾಯಕರು ಮತ್ತು ಪಾಳೆಯಗಾರರು ಸುಮಾರು 200 ವರ್ಷ ಆಡಳಿತ ನಡೆಸಿದರೆಂದು (ವಿಜಯನಗರ ಅಧ್ಯಯನ: ನಂ. 9, ಪು. 7 ರಿಂದ 14) ಇವರ ಬೆಳವಣಿಗೆಯನ್ನು ಪ್ರಸಿದ್ಧರೆನಿಸಿದ್ದ ಹೈದರಾಲಿ–ಟಿಪ್ಪು ಸುಲ್ತಾನ ದುರ್ಬಲಗೊಳಿಸಿದರೆಂಬಆರೋಪವಿದೆ. ಈ ಅಂಶಗಳು ಚರಿತ್ರೆ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಚಿಂತನೆಗೆ ಎಡೆಮಾಡಿವೆ.

ಅವರು ಹೇಳಿದ ವಿಜಯನಗರ ಕಾಲದ ಸತಿಪದ್ಧತಿ, ವೇಶ್ಯಾಪದ್ಧತಿ, ಗುಲಾಮ ಪದ್ಧತಿ, ಬಲಿಪದ್ಧತಿ ಇತ್ಯಾದಿಗಳು ಆಧುನಿಕ ಪರಿವಿಧಿಯಲ್ಲಿ/ಕಾಲಘಟ್ಟದಲ್ಲಿ ಅನಿಷ್ಠ ಪದ್ಧತಿಗಳೆಂಬುದನ್ನು ಒಪ್ಪಬಹುದು. ಆದರೆ ವಿಜಯನಗರ ಸಮಕಾಲೀನದ ಸಂಸ್ಕೃತಿಯನ್ನು ಅವಲೋಕಿಸಿದಾಗ ಈ ಅವಧಿಯಿಂದ ನಮಗೆ ಬ್ರಿಟಿಷರ ಆಳ್ವಿಕೆಯ ಮೊದಲಿನವರೆಗೆ ಇವುಗಳ ಆಚರಣೆಗಳನ್ನು ಮಾನ್ಯ ಮಾಡಲಾಗಿತ್ತು. ಇದೊಂದು ಆ ಕಾಲಘಟ್ಟದ ಸಾಂಸ್ಕೃತಿಕ ಪರಂಪರೆಯಾಗಿದೆ. ಏಕೆಂದರೆ ಆ ಕಾಲಘಟ್ಟದಲ್ಲಿ ಈ ಸಾಂಸ್ಕೃತಿಕ ಪರಂಪರೆಗಳನ್ನು ವಿರೋಧಿಸುವ ಸಮಾಜಕ್ಕೆ ರಾಜಮಾನ್ಯತೆ ಇರಲಿಲ್ಲ. ಅದು ಏನಾದರೂ ಇದ್ದಿದ್ದರೆ ಆಗಿನ ರಾಜಸತ್ತೆ/ಪ್ರಭುತ್ವ ಇಂಥಹವುಗಳನ್ನು ಸಾಮಾಜಿಕ ಪರಂಪರೆಯಿಂದ ದೂರ ಇಡುತ್ತಿತ್ತು ಹಾಗೂ ಅದನ್ನು ಸಮಾಜ ಬಹಿಷ್ಕರಿಸುತ್ತಿತ್ತು. ಎಲ್ಲಾ ರೀತಿಯ ಆಚರಣೆಗಳು ಆರಂಭವಾಗಿದ್ದು ಮಾನವನ ದೀರ್ಘ ಕಾಲದ ಅನುಭವಗಳಿಂದಲೇ ಆಗಿದೆ.

ಎಂ.ವಿ. ಶ್ರೀನಿವಾಸ ಅವರು ತಮ್ಮ ಸರ್ವಾಧ್ಯಕ್ಷೀಯ ಭಾಷಣದಲ್ಲಿ ಶಾಸನಗಳಲ್ಲಿ ಉಲ್ಲೇಖವಾದ ಐತಿಹಾಸಿಕ ವಿಷಯಗಳು ಸಾಹಿತ್ಯ ಆಕರಗಳ ಮಾಹಿತಿಗಳನ್ನು ಸ್ಥಿರಗೊಳಿಸುವ ನಿಟ್ಟಿನಲ್ಲಿ ಸಂಶೋಧನೆಗಳು ನಡೆಯಲೆಂಬುದನ್ನು ಆಶಿಸಿದ್ದಾರೆ. (ಸಂ. 13) ಈ ಬಗ್ಗೆ ಮುಂದುವರೆದು ಹೇಳುವುದೇನೆಂದರೆ ಶಾಸನ ಮತ್ತು ಸಾಹಿತ್ಯದಲ್ಲಿ ಹೇಳಿದ ವಿಚಾರಗಳನ್ನು ಪುರಾತತ್ವ ಮತ್ತು ಪರಂಪರೆಗಳ ಕಡೆಗೂ ದೃಷ್ಟಿ ಹರಿಸಿ ಅಧ್ಯಯನ ನಡೆಸಬೇಕು. ಆದುದರಿಂದ ಮಸುಕಾಗಿ ಉಳಿದ ಅನೇಕ ಸಂಗತಿಗಳಿಗೆ ಸ್ಪಷ್ಟತೆ ಸಿಗುವುದರಲ್ಲಿ ಸಂದೇಹವಿಲ್ಲ.

17. ನಾವಿದರು :

ನಾವಿದರ ಬಗ್ಗೆ ಡಾ. ಶ್ರೀನಿವಾಸ ಪಾಡಿಗಾರ ಇನ್ನಿತರರು ನಡೆಸಿದ ಅಧ್ಯಯನಗಳು ತುಂಬಾ ಮಹತ್ವವೆನಿಸಿವೆ. ನಾವಿದರ ನೆಲೆ–ಹಿನ್ನಲೆಯನ್ನು ಇಲ್ಲಿ ಸ್ಥೂಲವಾಗಿ ಅವಲೋಕಿಸಲಾಗಿದೆ. ನಾವಿದ ವೃತ್ತಿ (ಕೇಶಶಿಲ್ಪಿ) ಸಾಧನಗಳು ಕತ್ತಿ, ಕನ್ನಡಿ. ಸಮಾಜದ ಕೀಳುವೃತ್ತಿ/ಗಡ್ಡದ ಕೆಲಸಿಗರು. ಬ್ರಾಹ್ಮಣರ ಉಗುರುಗಳನ್ನು ತೆಗೆಯಲು ಅಗ್ರಹಾರದಲ್ಲಿ ನಾವಿದರನ್ನು ನೇಮಿಸುತ್ತಿದ್ದರು. (1158) ವಾವಿದೆರೆ (ವೃತ್ತಿ ತೆರೆ)ಯನ್ನು ಸಂಗ್ರಹಿಸುವ ಪರಂಪರೆ ಮೊದಲಿನಿಂದಲೂ ಇತ್ತು. 32 ಶಾಸನಗಳಲ್ಲಿ ತುಳುವ ಸದಾಶಿವರಾಯನ ಕಾಲದಲ್ಲಿ ಅರಸರುಗಳ ಕೆಲಸಿಗರಿದ್ದರು. ಶಾಸನಗಳ ಪ್ರಕಾರ 1544 (ಸೊಂಡೂರು)ರಲ್ಲಿ ನಾವಿದ ಸಮುದಾಯ ಮಾಡಿದ ಭಿನ್ನಹದಿಂದ ಸಂಡೂರು ಸೀಮೆಯ ನಾವಿದರ ಮೇಲಿನ ಸಿದ್ದಾಯ ಮತ್ತು ಕಾಣಿಕೆ ತೆರಿಗೆಗಳನ್ನು ರಾಮರಾಜ ಮಹಾಅರಸುಗಳು ಸದಾಶಿವರಾಯರಲ್ಲಿ ವಿನಂತಿಸಿ ಮನ್ನಾ ಮಾಡಿಸಿದರು. ಇನ್ನೊಂದೆಡೆಯಲ್ಲಿ ಕೊಂಡೋಜ ಮತ್ತು ಭದ್ರೋಜ ಅಥವಾ ಇನ್ನಿತರ ನಾವಿದರ ಹೆಸರುಗಳಿವೆ. ಆದರೆ ಈ ಸಮುದಾಯದ ಒಂದು ಕುಟುಂಬ/ವ್ಯಕ್ತಿಯ ಮೇಲಿನ ತೆರಗೆಯನ್ನು ಮನ್ನಾ ಮಾಡಿಲ್ಲ.

ನಾವಿದರಿಗೆ ಬಿರಾಡ ಸುಂಕ ವಿನಾಯತಿ :

ಪುಲಿಗೆರೆ ಸೀಮೆಯ ನಾವಿದರಿಗೆ ಬಿರಾಡ ಕೊಳ್ಳಲು ಅದರ ಸುಂಕವನ್ನು ಮುಕ್ತಗೊಳಿಸಲಾಯಿತು. ಅದನ್ನು ರಾಮರಾಜ ಮಹಾ ಅರಸರು ಶ್ರೀ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಬಿಟ್ಟರು. (1547 ನವೆಂಬರ್ 22 ಮಂಗಳವಾರ, ಎಸ್.ಐ.ಐ. 20, ನಂ. 239) ಇದನ್ನು ಕಂದನವೊಳಲ ನಾಡಿನ ತಿಮ್ಮೋಜನ ಮಕ್ಕಳಾದ ತಿಮ್ಮೋಜ, ರಂಗೋಜ, ಭದ್ರೋಜ (ಅಣ್ಣತಮ್ಮಂದಿರು) ಸದಾಶಿವರಾಯನು ಆಳುವಾಗ ಆತನ ಮಹಾಮಂಡಳೇಶ್ವರ ರಾಮರಾಜನ ಮಹಾಅರಸರನ್ನು ವಿನಂತಿಸಿದ್ದರು. ಆಗ ರಾಮರಾಜ ಮಹಾರಾಜನು ಅರಸ ಸದಾಶಿವರಾಯರನ್ನು ಭಿನ್ನವಿಸಿದ್ದನು. ಈ ವಿನಂತಿಯನ್ನು ಮೂಡಣ ಸಮುದ್ರ, ತೆಂಕಣ (ದಕ್ಷಿಣ) ಸಮುದ್ರ ಮತ್ತು ಪಶ್ಚಿಮ (ಪಡುವಣ) ಸಮುದ್ರ ನಡುವಿನ ಭಾಗಗಳ ಅಗ್ರಹಾರ ಗಿರಿದುರ್ಗ, ಜಲದುರ್ಗ, ವನದುರ್ಗಪುರದ ಸೀಮೆಯವೊಳಗಣ ಬಿರಾಡ ಸುಂಕವನ್ನು ಮುಕ್ತಗೊಳಿಸಿದ್ದು ವಿಶೇಷವೆನಿಸಿದೆ.ಸೀಮೆ ಸೀಮೆಗಳಲ್ಲಿನ ಈ ವಿಷಯವುಳ್ಳ ಶಾಸನವನ್ನು ಬರೆಸಲಾಯಿತೆಂದು ಕಾಣುತ್ತದೆ. ಈ ವಿನಾಯತಿಯನ್ನು ಹುಲಿಗೆರೆಯ ಲಕ್ಷ್ಮಣೇಶ್ವರದ ನಾಡ ನೂರಯಿಪ್ಪತ್ತು ಗ್ರಾಮ ಅಗ್ರಹಾರ ದೇವಸ್ಥಾನ ಪುರದೊಳಗಿನ ನಾವಿದರಿಗೆ ಕೊಟ್ಟ ಬಿರಾಡ ಕಾಣಿಕೆಯಾಗಿದೆ. ಈ ಅವಧಿಯಲ್ಲಿ ನಾವಿದರು ಪ್ರಭಾವಿಶಕ್ತಿಗಳಾಗಿದ್ದರೆಂದು ಅವರ ಮೇಲಿನ ವೃತ್ತಿತೆರಿಗೆಯನ್ನು

(ಸಾಮೂಹಿಕವಾಗಿ) ಮುಕ್ತಗೊಳಿಸಲು ಅಳಿಯ ರಮರಾಯನು ಬಹುಮುಖ್ಯ ಪಾತ್ರ ವಹಿಸಿದ್ದು ಕಾಣುತ್ತದೆ. ಏಕೆ ನಾವಿದರಿಗೆ ವಿಶೇಷತೆಯನ್ನು ಈ ಅವಧಿಯಲ್ಲಿ ಕೊಡಲಾಯಿತೆಂಬುದನ್ನು ಪರಿಶೀಲಿಸಬೇಕಾಗಿದೆ.

18. ಮದುವೆ ವಿನಾಯತಿ :

ಈ ಅವಧಿಯಲ್ಲಿ ಅನೇಕ ಕಾರ್ಯಕ್ರಮಗಳಿಗೆ ಸುಂಕವನ್ನು ಹೇರುವುದು ಅಥವಾ ವಿನಾಯಿತಿ ಮಾಡುವುದು ಕಂಡುಬರುತ್ತದೆ. ಅದರಲ್ಲಿ ಮದುವೆ ವಿನಾಯಿತಿ ಕುತೂಹಲವೆನಿಸಿದೆ. ಹಂಪೆಯ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ (1542– ಎಸ್.ಐ.ಐ. 20,ನಂ. 238) ಸದಾಶಿವರಾಯರನ್ನು ವಿನಂತಿಸಿ ಸುಡುಗಾಡ ಲಿಂಗಿಸೆಟ್ಟಿಯು ಪುಲಿಗೆರೆನಾಡ ಅಗ್ರಹಾರ ದೇವಸ್ಥಾನ ಪುರವರ್ಗ ಅಮರ ಗ್ರಾಮ ಭಂಡಾರ ಗ್ರಾಮಗಳಲ್ಲಿ ಜರುಗುವ ಹೆಣ್ಣು ಗಂಡಿನ ಮದುವೆಯ ಸುಂಕವನ್ನು ವಿನಾಯತಿ ಮಾಡಿಸಿದನು. ಆಗ ಗುಜಲ ಇಮ್ಮಡಿಮಂನ್ನಪನಾಯಕರನ್ನು ಕರೆಸಿ ಹುಲಿಗೆರೆಯ ನಾಡಿಗೆ ಮದುವೆಯ ಸುಂಕವನ್ನು ವಿನಾಯತಿ ನೀಡಿ ಶಿಲಾಶಾಸನವನ್ನು ಬರೆಸಿದರೆಂದಿದೆ. ಈ ಶಾಸನದಲ್ಲೂ ಈ ಕಾರ್ಯಕ್ಕೆ ನೆರವಾದವರು ಶಿವರಾಮ ದೇವರೆಂದಿದೆ. ಇದರಿಂದ ಪುಲಿಗೆರೆಯ (ಲಕ್ಷ್ಮೇಶ್ವರ) ನಾವಿದರು ಖರೀದಿಸುವ ಬಿರಾಡಿಗೆ ಮತ್ತು ಅದೇ ಊರಿನಲ್ಲಿ ಮದುವೆ ಮಾಡಲು ಕೊಡಬೇಕಾದ ಸುಂಕವನ್ನು ವಿಜಯನಗರದ ಅರಸ ವೀರಸದಾಶಿವರಾಯನು ಹಂಪಿಯ ವಿರೂಪಾಕ್ಷ ಸನ್ನಿಧಿಯಲ್ಲಿ ವಿನಾಯತಿ ನಿಡಿದ್ದು ಅಪರೂಪದ ಸಂಗತಿಯೆನಿಸಿದೆ.

19. ಮೈಲಾರ ಪರಂಪರೆ :

ಹಂಪೆ ಪರಿಸರದಲ್ಲಿ ಎಕ್ಕೋಟಿ ಚಕ್ರವರ್ತಿ ಮಠಗಳಿದ್ದದು,ಎಕ್ಕೋಟಿಯು ಮೈಲಾರನ ಆರಾಧನೆಯನ್ನು ಸೂಚಿಸುತ್ತದೆ. ಇದೇ ರೀತಿಯಲ್ಲಿ 1207–10 ರಲ್ಲಿ ಎಕ್ಕೋಟಿ ತಪೋಧನರೂ ಹಾಗೂ ಎಕ್ಕೋಟಿ ಮಹಾದೇವರು ಇದ್ದರು. ಕೊಗಳಿ 500 ರಲ್ಲಿ ಏಳುಕೋಟಿ ಸಮಯ ಚಕ್ರವರ್ತಿ ಶ್ರೀ ಮನು ಮಹಾಮಂಡಳಾಚಾರ್ಯ ರಾಜಗುರು ಖಳೇಶ್ವರದೇವರು ಹರಪನಹಳ್ಳಿ ತಾಲೂಕಿನ ಬೆಣ್ಣಿಹಳ್ಳಿಯಲ್ಲಿದ್ದರು. ಇದರಿಂದ ರಾಜಗುರುವೆನಿಸಿದ್ದ ಖಳೇಶ್ವರ ದೇವರು ಕೋಗಳಿ 500 ನಾಡಿಗೆ ಏಳುಕೋಟಿ ಸಮಯ ಚಕ್ರವರ್ತಿ ಆಗಿದ್ದನೆಂಬುದು ಅಪರೂಪದ ಸಂಗತಿಯಾಗಿದೆ. ಪಂಚಮಠ ಒಂದು ಕಡೆ ಪ್ರಸಿದ್ಧಯಲ್ಲಿದ್ದರೆ ಇನ್ನೊಂದೆಡೆ ಚಕ್ರವರ್ತಿ ಮಠವೊಂದು ಇದ್ದಿತು. 1207 ರಲ್ಲಿ ಎಕ್ಕೋಟಿ ಮಹಾದೇವರು ಕಾಣುವರು. ಈ ಏಳುಕೋಟಿ ಪರಂಪರೆ ಕಾಳಾಮುಖ ಪರಂಪರೆಗೆ ಸೇರಿದ್ದಾಗಿದೆ ಎನ್ನುವರು. ಹೂವಿನ ಹಡಗಲಿ ಪಶ್ಚಿಮದ ಮೈಲಾರವು ಮೈಲಾರಲಿಂಗದ ಪ್ರಮುಖ ಧಾರ್ಮಿಕ ಕೇಂದ್ರ. ಶಿರಗುಪ್ಪಾ ತಾಲೂಕಿನ ಮಲ್ಲಯ್ಯನಗುಡ್ಡದ ಮೇಲಿರುವ ಮೈಲಾರ (?) ವಿಗ್ರಹದ ಕೆಳಗೆ ಏಳುಕೋಟಿ ಪದದರಸನಿಗೆ ಹಣ(3 ಹೊನ್ನು) ದಾನ ಕೊಟ್ಟಿದ್ದನ್ನು ಹೇಳಿದೆ.

ವಿಜಯನಗರ ಕಾಲದಲ್ಲಿ ಮೈಲಾರದ ಚರಿತ್ರೆ ಸುರುವಾಗುತ್ತದೆ. (ಎಸ್.ಆರ್.ಜಿ. 58 ಶಾಸನಗಳು, 1017, ಪ್ರಾಚೀನ ಮೈಲಾರ) ಈ ದೇವಾಲಯಗಳು ಹೆಚ್ಚು ಅಭಿವೃದ್ಧಿ ಹೊಂದಿವೆ. ಈ ದೇವರ ಭಂಡಾರಿ ನಾಗರಸನ ಮಗ ಗಂಗರಸನಿದ್ದನು. ಈತನು ಮಾಳಲದೇವಿಗೆ ಸುಖನಾಸಿ, ನವರಂಗವನ್ನು 1412 ರಲ್ಲಿ ಕಟ್ಟಿಸಿದನು. ನೂರನೇ ವರ್ಷ ಈತನು ಇದೇ ದೇವಾಲಯಕ್ಕೆ ಶ್ರೀ ಹೆಗ್ಗಡೆಯವರ ಶಿಲಾಮಂಟಪ ಮಾಡಿದ. ಮುಂದೆ 33 ವರ್ಷ ಕಳೆದ ಬಳಿಕ ಈತನು ಪ್ರೌಢದೇವರಾಯನ ಹೇಳಿಕೆಯಂತೆ ಈ ದೇವಾಲಯಕ್ಕೆ ಶಿಲಾರಂಗಮಂಟಪ ಕಟ್ಟಿಸಿದನು. ಮೈಲಾರದೇವರ ಉತ್ಸವವು 1551 ರಲ್ಲಿ ನಡೆಯಿತೆಂದು ತಿಳಿಯಲಾಗಿದೆ. 1357 ರಲ್ಲಿ ಮೈಲಾರದ ಮೈಲಾರಲಿಂಗ ಅದರಲ್ಲಿ ಮಾಚಬೇದೇವಿ ದೇವಾಲಯ ಸೇರಿದೆ. ಹಂಪೆಯಲ್ಲಿ ಮೈಲಾರ ದೇವರ ತೀರ್ಥವಿತ್ತು. ಅದನ್ನು ಮಲ್ಯವಂತ ಪರ್ವತದಲ್ಲಿ ಶ್ರೀಮೈಲಾರ ದೇವರೆನ್ನುವರು. ಮೈಲಾರನಿಗೆ ನಾಯಿ–ಕುದುರೆ ಸಂಬಂಧವನ್ನು ತೋರಿಸಲಾಗಿದೆ. ಮೈಲಾರ ಖಂಡೇರಾಯ ಲಿಂಗಪೂಜೆ ಮಾಡುವ ಚಿತ್ರವಿದೆ. ಮೈಲಾರದ ಮೈಲಾರಲಿಂಗೇಶ್ವರ ದೇವಾಲಯದ ಮಹಾದ್ವಾರ ಪೂರ್ವಕ್ಕೆ ಮುಖಮಾಡಿದೆ. ಈ ಅವಧಿಯಲ್ಲೇ ಅದು ನಿರ್ಮಾಣವಾಗಿದೆ. ಈ ರೀತಿಯ ಮಹಾದ್ವಾರ ಲಕ್ಷ್ಮೇಶ್ವರ, ಉಜ್ಜಯಿನಿ ಮುಂತಾದ ಕಡೆಗಳಲ್ಲಿವೆ. ಈ ಮೈಲಾರ ಆರಾಧನೆಯು ಪ್ರಾದೇಶಿಕ ದೇವರಾಗಿ ಬೆಳೆದಿದ್ದು ತಿಳಿದುಬರುತ್ತದೆ.

20. ಸ್ಮಾರಕ ದೇವಾಲಯ (ಗುರುವಾತನ ಮಂದಿರ) :

ಈ ಅವಧಿಯಲ್ಲಿ ಕೆಲವೆಡೆಗಳಲ್ಲಿ ಗುರುಗಳ ಮತ್ತು ರಾಜರ ಹೆಸರುಗಳಲ್ಲಿ ದೇವಾಲಯಗಳು ನಿರ್ಮಾಣವಾಗಿವೆ. ಆದರೆ ಗುರುಗಳ ಹೆಸರಲ್ಲಿ ನಿರ್ಮಾಣವಾದ ಸ್ಮಾರಕ ದೇವಾಲಯ ಶೃಂಗೇರಿಯಲ್ಲಿರುವುದು ಅಪರೂಪವೆನಿಸಿದೆ. ಅದನ್ನು ಸುಮಾರು 1375ರ ಒಳಗಡೆ ನಿರ್ಮಿಸಲಾಗಿದೆ ಎನ್ನುವರು. (ಮಂಗಳೂರು ತಾಲೂಕಿನ ಕುಡುಪುವಿನ ಶಾಸನ) ಕೆಲವರು ಅಲ್ಲಿನ ವಿದ್ಯಾಶಂಕರ ದೇವಾಲಯ ಪರಿಸರದಲ್ಲೇ ಹಿಂದಿನ ಗುರುಗಳ ಸಮಾಧಿಯಿದೆ ಎನ್ನುವರು. ಆದರೆ ಅದು ಶೃಂಗೇರಿ ಪೀಠಾಧಿಪತಿಗಳಾದ ವಿದ್ಯಾಶಂಕರ ಸಮಾಧಿ ಸ್ಮಾರಕವೆಂದು ಅನೇಕರು ಒಪ್ಪಿಕೊಂಡಿರುವರು. ಅದೊಂದು ಈ ಅವಧಿಯ ಅಪರೂಪದ ಸ್ಮಾರಕ ದೇವಾಲಯ. ಅದು ಸಾಂಧಾರ ಮಾದರಿಯ ದೇವಾಲಯ. ತಲವಿನ್ಯಾಸದಲ್ಲಿ ನಾಲ್ಕು ಗರ್ಭಗೃಹಗಳು ಪ್ರಧಾನವಾಗಿವೆ. ಮೂಲ ಗರ್ಭಗೃಹವು ಪೂರ್ವಕ್ಕೆ ಮುಖಮಾಡಿದ್ದು, ಅದಕ್ಕೆ ಶುಕನಾಸಿ ಮತ್ತು ಅರ್ಧಮಂಟಪವಿದೆ. ಅರ್ಧಮಂಟಪದ ಬದಿಗಳಲ್ಲಿ ತದನಂತರ ಅವಧಿಯಲ್ಲಿ ಸೇರಿಸಿದ ಕೊಠಡಿಗಳಿವೆ. ಉಳಿದ ಮೂರು ಗರ್ಭಗೃಹಗಳಲ್ಲಿ ತಲಾ ಒಂದರ ಬದಿಯಲ್ಲಿ ಒಂದು ಕೋಣೆಯಿವೆ. ಒಟ್ಟಾರೆ ಎರಡು ಲಾಳಾಕರದ ಜೋಡಣೆ ಅಥವಾ ಮೊಟ್ಟೆಯಾಕರದಂತಹ ತಲವಿನ್ಯಾಸದಲ್ಲಿ ಅದನ್ನು ನಿರ್ಮಿಸಿದ್ದು ಗೊತ್ತಾಗುವುದೆಂದು ಮತ್ತು ಇದು ಸ್ವಸ್ತಿಕ ಅಥವಾ ಕೂರ್ಮಪೀಠ ವಿನ್ಯಾಸದಂತಿರುವುದರಿಂದ ಶಿಲ್ಪಶಾಸ್ತ್ರದ ಪ್ರಕಾರ ಈ ಲಕ್ಷಣವು ಆಚಾರ್ಯರ ಸಮಾಧಿಯನ್ನು ಪುಷ್ಟೀಕರಿಸುತ್ತದೆ ಎಂದು ಜಿ. ಮನೋಜ ಅವರು ಅಭಿಪ್ರಯಪಟ್ಟಿದ್ದಾರೆ. (ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. 242–46) ಹೀಗಾಗಿ ಈ ಸ್ಮಾರಕವು ಗುರುವಾತನ ಮಂದಿರವೆನ್ನಲಾಗಿದೆ. ಇದಕ್ಕೆ ನಾಲ್ಕು ಸೋಪಾನಗಳಿವೆ. ಅಲ್ಲಿನ ಹೆಚ್ಚಿನ ಶಿಲ್ಪಗಳು ಪುರಾಣಯುಕ್ತ ಮತ್ತು ಆಗಮಯುಕ್ತಕ್ಕೆ ಸೇರಿವೆ. ಅದರಲ್ಲಿನ ಶಿವ–ಸತಿಯನ್ನು ಹೊತ್ತು ಲೋಕಪರ್ಯಟನ ಮಾಡುತ್ತಿರುವುದು, ಅಷ್ಟಭುಗಳುಳ್ಳ ಕಾರ್ತವೀರಾರ್ಜುನ, ಮೂರು ವೀರಭದ್ರ ಮತ್ತು ಇನ್ನಿತರ ಶಿಲ್ಪಗಳು ವಿಶೇಷವೆನಿಸಿವೆ.

21. ಶಾಪಾಶಯಗಳು :

ಈ ಅವಧಿಯ ಶಾಪಾಶಯಗಳಲ್ಲಿ (ಶಾಸನಗಳಲ್ಲಿ) ಹೊಸ ರೀತಿಯಲ್ಲಿ ಸಮಾಜಕ್ಕೆ ತಿಳಿಸುವ ಕಾರ್ಯ ನಡೆದಿದ್ದು ಗೊತ್ತಾಗುತ್ತದೆ. ಅವುಗಳ ವಿವರಣೆ ಹೀಗಿದೆ. ಮಂಗಳಮಹಾ ಶ್ರೀ ಶ್ರೀ (ಎಸ್.ಐ.ಐ. 20, ನಂ. 366) ಭೂದತ್ತಿ ಬಿಟ್ಟಾಗ ಅದರ ರಕ್ಷಣೆಯನ್ನು ಭೂಧರ್ಮ ಮಂಗಳ ಎಂದಿದೆ 1729.ಒಂದರಲ್ಲಿ (ಲಕ್ಷ್ಮೇಶ್ವರ–1576) ದಾನಪಾಲನಯೋರ್ಮಧ್ಯೇ । ದಾನಾತ್ಶ್ರೇಯೋನುಪಾಲನಂ । ದಾನಾತ್ಸ್ವರ್ಗಮವಾಪ್ನೋತಿ ಪಾಲನಾದಚ್ಚುತಂ ಪದಂ ॥ ಸ್ವದತ್ತಾಂದ್ವಿಗುಣಂಪುಣ್ಯಂ ಪರದತನುಪಾಲನಂ ಪರದತ್ತಾಪಹಾರೇಣ ಸ್ವದತಂ ನಿಷ್ಪಲಂಭವೇತ್ ॥ ಶತ್ರುಣಾಪಿ ಕ್ರುಮೊ ಧರ್ಮೋ ಪಾಲನೀಯೋ ಪ್ರಯತ್ನತಃ ಶತ್ರುರೇವ ಹಿ ಶತ್ರುಶ್ಯಾತ್ ಧರ್ಮ ಶತ್ರುರ್ನ ಕಸ್ಯಚಿತ್ । ಸದತಾ ತವಯೋ ಭೂಮಿ ಬ್ರಂಹ್ಮದತ್ತಾ ಸಹೋದರೀ ಅಂನ್ಯದತ್ತಾ ಚ ಮಾಪಾ ಚ ತ್ರಿಭಿರ್ವರ್ಜೀತ ಭೂಭುಜಃ ॥ ಸ್ವದತ್ತಾಂಪರದತ್ತಾಂ ವಾ ಯೋ ಹರೇತಿ ವಸುಂಧರಾ । ಷಷ್ಟಿವರುಷ ಸಹಸ್ರಾಣಿ ವ್ರಿಷ್ಠಾಯಾಂ ಜಾತಯೇ ಕ್ರಿಮಿಃ ॥ ಕೊನೆಗೆ ಯೀ ಧರ್ಮಂ ಅಳುಪಿದರೆ ಗೋಮಾಂಸ ಭಕ್ಷಣೆ ಮುಸಿಲ್ಲಮಾನರಿಗೆ ಹಂದಿಮಾಂಸ ಭಕ್ಷಣೆ ॥ ಎಂದಿದೆ. (ಮಲ್ಲಿಕಾರ್ಜುನ ದೇವಾಲಯ, ಎಸ್.ಐ.ಐ. ನಂ. 257)

ವಿಜಯನಗರ ಪತನದ ನಂತರದಲ್ಲಿ ಲಕ್ಷ್ಮೇಶ್ವರವನ್ನು ಅಲ್ಲಿ ಧವಲಪಾತಹಾಹಿ ವಡೆಯರು ಆಳುತ್ತಿರುವಾಗ ಲಕ್ಷ್ಮೇಶ್ವರ ನೈರುತ್ಯದಲ್ಲಿನ ಮಲ್ಲಿಕಾರ್ಜುನ ದೇವರಿಗೆ ಮತ್ತು ನಾಗಂಣವೊಡೆಯರಿಗೆ ಬಂಗಿದೇವ ನಾಯಕರು ಶಿವಾರ್ಪಣವಾಗಿ ಭೂದಾನ ನೀಡಿದರೆನ್ನಲಾಗಿದೆ. ಅದರಲ್ಲಿ ಏದ್ಲಿಖಾನ್ ಪಾತಶಾಹಿಯು ಅಮರ ಮೋಕಾಸಿನಾಯಕತನದ ಉಲ್ಲೇಖವಿದೆ. ಪಾತಶಾಹಿಗಳಿಬ್ಬರು ಅಲ್ಲಿ ಇದ್ದರೆಂದು ಅವರ ಈ ಭಾಗದ ಅಧಿಕಾರಿ ಅಮರ ಮೊಖಾಸಿ ನಾಯಕನಿದ್ದು ಆತನ ಅಧೀನದಲ್ಲಿ ಹುಲಿಗೆರೆಯ ನಾಡ ಲಕ್ಷ್ಮಣೇಶ್ವರದ ಸೀಮೆ ಇದ್ದು ಮತ್ತು ಅದರಲ್ಲಿ ಗೌಡಗೆರೆ ಇದ್ದುದು ತಿಳಿಯುತ್ತದೆ.

1432ರ ಸೋಮೇಶ್ವರ ದೇವಾಲಯದ ಪೂರ್ವ ಪ್ರವೇಶ ದ್ವಾರಕಂಬ ಶಾಸನದಲ್ಲಿ (ಎಸ್.ಐ.ಐ. 20, ನಂ. 380) ಈ ಮೇಲೆ ಹೇಳಿದ ಒಂದು ಶ್ಲೋಕವನ್ನು ಸ್ವಲ್ಪ ಬದಲಾಯಿಸಿ ಹೀಗೆ ಹೇಳಲಾಗಿದೆ. ದಾನಪಾಲನಯೋರ್ಮಧ್ಯೇ ದಾನಾತ್ಶ್ರೆಯೋನುಪಾಲನಂ ದಾನಾತ್ಸಗ್ಗಮವಾಪ್ನೋತಿ ಪಾಲನಾದಚ್ಯತಂ ಪದಂ॥ ಮುಂದೆ ಅಕ್ಷಯಸುಖದ್ದೀ ಧರ್ಮ್ಮವ

ರಕ್ಷಿಸಿ ಸಿಕ್ಕಿಸಿದ ಪುಂಣ್ಯ ಪುರುಸರ್ಗ್ಗಂಕ್ಕುಂ ಭಕ್ಷಿಸಿದಾತನ ಸಂತಾನಕ್ಷಯ ಆಲುಕ್ಷಯಂ ಕುಲಕ್ಷಯ ಮಕ್ಕುಂ ಎಂದು ಹೇಳಲಾಗಿದೆ. 1382 ರ ಅಲ್ಲಿನ ಶಂಖ ಬಸದಿಯ ಎಡಭಾಗದ ಕಂಬ ಪೂರ್ವದಿಕ್ಕಿನ ಶಾಸನದಲ್ಲಿ (ಹನುಮಾಕ್ಷಿ ಗೋಗಿ, ಅದೇ, ನಂ. 77, ಪು. 160–161) ಯಿಂತತ್ತುದಕ್ಕೆ ನಂಮನಾಡ ವೊಪ್ಪ ॥ ಶ್ರೀ ಮದುಕನಾಥ ಶ್ರೀನವಲೇಸ್ವರದೇವರು ಎಂದಿದೆ.

ಈ ಅವಧಿಯ ಶಾಪಾಶಯಗಳಲ್ಲಿ ಅನೇಕ ಭಿನ್ನತೆಗಳು ಗೋಚರಿಸುತ್ತವೆ. ಇದಕ್ಕೆ ಸಮಕಾಲೀನ ಸಮಾಜ, ಅವರ ಆಚರಣೆಗಳ ಸುಧಾರಣೆಗಳೇ ಕಾರಣವಿರಬೇಕೇ ಅಥವಾ ಇನ್ನಿತರ ಕಾರಣವಿರಬೇಕೇ ಎಂಬುದನ್ನು ಅರಿಯಬೇಕಾಗಿದೆ.

22. ವೀರರ ಗೋರಿಗಳು :

ಜಿತೇನ ಲಭ್ಯತೇ ಲಕ್ಷ್ಮೀರ್ಮ್ರಿ ತಾನಾಪಿ
ಸುರಾಂಗನಾ । ಕ್ಷಣ ವಿಧ್ವಂಸನೇಯೇ ಕಾಕೇಕಾ

ಚಿಂತಾ ಮರಣೇರಣೇ । (ಕಡತಿ, ಹರಪನಹಳ್ಳಿ, ಎಸ್.ಐಐ, 9, ಭಾಗ–1, ನಂ. 1292–93, ಸೇವುಣ ವೀರರಾಮಚಂದ್ರ) ಕೋಣೆ ಗೋರಿಗಳಂತಹ ವೀರರ ಗುಡಿ ಸ್ಮಾರಕಗಳು ದಕ್ಷಿಣ ಕರ್ನಾಟಕದಲ್ಲಿ ಮಂಡ್ಯಜಿಲ್ಲೆ, ರಾಮನಗರ ಮತ್ತು ಬೆಂಗಳೂರು ಜಿಲ್ಲೆಗಳ ಆಸುಪಾಸುಗಳಲ್ಲಿ ಗೋಚರಿಸಿವೆ. ನೋಡಲು ಇವುಗಳು ಕಬ್ಬಿಣದ ಬೃಹತ್ ಶಿಲಾಗೋರಿಯಂತೆ ಕಾಣಿಸುತ್ತವೆ. ಈ ಗೋರಿಗಳನ್ನು ಮೂರು ಶಿಲಾ ಹಲಗೆಗಳನ್ನು ಚೌಕಾಗಿ ಇಲ್ಲವೆ ಆಯತಾಕಾರದಲ್ಲಿ ನೆಲದ ಮೇಲೆ ಒಂದಕ್ಕೊಂದು ಸಂಧಿಸಿ ನಿಲ್ಲಿಸಲಾಗಿದೆ. ಈ ಹಲಗೆಗಳ ಮೇಲೆ ಒಂದು ಹಲಗೆ ಅದರ ಮಾಳಿಗೆಯಂತೆ ಮುಚ್ಚಲಾಗಿದೆ. ಉಳಿದೊಂದು ಮುಖವನ್ನು ತೆರೆಯಲಾಗಿದೆ. ಇವುಗಳನ್ನು ಗುಡಿಗಳಂತೆ ನಿರ್ಮಿಸಲಾಗಿದೆ. ಈ ಗುಡಿಗಳ ಒಳಮುಖಗಳ ಹಲಗೆಗಳ ಮೇಲೆ ವೀರ–ಮಹಾಸತಿಯರ ಉಬ್ಬುಶಿಲ್ಪಗಳನ್ನು ಮತ್ತು ಶಾಸನಗಳನ್ನು ಕೆತ್ತಲಾಗಿದೆ. ಈ ರೀತಿಯ ವೀರರ ಗುಡಿಗಳನ್ನು ಉತ್ತರ ಕರ್ನಾಟಕದಲ್ಲಿ ನಿರ್ಮಿಸಿದ್ದು ಕಂಡುಬಂದಿರುವುದಿಲ್ಲ. ಆದರೆ ಈ ಪ್ರದೇಶದಲ್ಲಿ ವೈವಿಧ್ಯಮಯ ಇತಿಹಾಸಪೂರ್ವ ಕಾಲದ ಕಬ್ಬಿಣದ ಬೃಹತ್ ಶಿಲಾಯುಗದ ಚೌಕಾದ ಕಲ್ಲುಗೋರಿಗಳಿವೆ. ಅವುಗಳಲ್ಲಿ ಕೋಣೆಯಂತಹ ಕಲ್ಲುಗೋರಿಗಳು, ಈ ಶಿಲಾ ಹಲಗೆಯುಳ್ಳ ಕೋಣೆ ಆಕಾರದ ವೀರರ ಗುಡಿಗಳು ವಿಜಯನಗರ ಕಾಲಕ್ಕೆ ಸೇರಿವೆ. ಈ ರೀತಿಯ ವೀರರ ಗುಡಿಗಳಲ್ಲಿ ಶಿಲ್ಪ–ಶಾಸನಗಳ ಅರುಹನಹಳ್ಳಿಯಲ್ಲಿರುವ ವೀರರ ಗುಡಿಗಳು ವಿಶೇಷವೆನಿಸಿವೆ.ಅಲ್ಲಿನ ಕೆಲವು ವೀರಗಲ್ಲುಗಳನ್ನು ಡಾ. ವಸುಂಧರಾ ಸಿಬೋಜ ಅವರು ಅಧ್ಯಯನ ಮಾಡಿದ ಬಳಿಕ ಆ ಸ್ಥಳವನ್ನು ಸಮಗ್ರವಾಗಿ ಸರ್ವೇಕ್ಷಣೆ ಮಾಡಿದೆನು. ಅಲ್ಲಿನಮತ್ತು ನೆರೆಹೊರೆಯ ಸ್ಥಳಗಳ ಸ್ಮಾರಕಗಳನ್ನು ಅಧ್ಯಯನ ಮಾಡಿ ಲೇಖನ ಬರೆದೆನು (ಮಂಡ್ಯ ಜಿಲ್ಲೆಯ ಸ್ಮಾರಕ ಶಿಲ್ಪಗಳು, ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಆರ್. ಗೋಪಾಲ (ಸಂ.) 2008 ಪು. 342–399). ಒಂದರಲ್ಲಿ ಅರುಹನಹಳ್ಳಿಯ ಅಧಿಕಾರಿ ಬಡವಾರ ವಂಶದ ಕೀರ್ತಿಯರಸನ ಮಗ (1362) ದೇವಪನು ತನ್ನ ತಮ್ಮ ದೇವಪ್ಪ ಮಡಿದಾಗ ಅವನ ಪತ್ನಿ ಬಯಿಚಕ್ಕಳು ಸತಿಹೋದ ನಿಮಿತ್ಯ ಅವರ ಹೆಸರಲ್ಲಿ ವೀರಗಲ್ಲನ್ನು ನಿಲ್ಲಿಸಿದನೆಂದಿದೆ. ಇನ್ನೊಂದು ಅಲ್ಲಿಯ ವೀರಗಲ್ಲನ್ನು ಬುರನಮಗ ವೀರಹರಿಹರ ಆಳುವಾಗಕೀರ್ತಿದೇವ(ಕೀರ್ತಿರಾಜ)ನ ಮಗ ಭಟ್ಟರಬಾಜಯಪ್ಪನು ಮಾಡಿದನು. ಈಬಾಜಿಯಪ್ಪನು ಅಲ್ಲಿ ಮೊದಲುಬುಕ್ಕರಾಯ ಸಮುದ್ರ, ಚೌಡಪ್ಪನ ಕಾಲುವೆ, ಕೀರ್ತಿಸಮುದ್ರ, ವಾಳೌವೆಯ ಕೆರೆಗಳನ್ನು ಕಟ್ಟಿಸಿದ್ದನು. ಅಲ್ಲಿ ಅಡಕೆ ತೋಟವನ್ನು ಮಾಡಿಸಿದ್ದನು. ಬಾಚಿ ಪಟ್ಟಣದಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ಪ್ರತಿಷ್ಠಾಪಿಸಿದನು. ಆಗ ಬಾಚಿಯಪ್ಪನ ಹಿರಿಯ ಮಗ ಬುಕ್ಕಪ್ಪನು ಹಂಪಿಯ ವಿರೂಪಾಕ್ಷದಲ್ಲಿ ಪ್ರಾಯಶ್ಚಿತ್ತ ವಿಧಿಸಿ ಅಸ್ಥಿಯನ್ನು ವಾರಣಾಸಿಗೆ ಕಳಿಸಿದನೆನ್ನಲಾಗಿದೆ. ಈ ನಿಮಿತ್ಯ ಈತನು ವೀರಗಲ್ಲನ್ನು ನಿಲ್ಲಿಸಿದನೆನ್ನಲಾಗಿದೆ. (13–5–1381) ಅದರಲ್ಲಿ ಪ್ಲವಂಗ ಸಂವತ್ಸರ ವೈಶಾಖ ಬಹುಳ 6, ಆಧಿವಾರದಿಂದ ಕಂಪಣ್ಣ ಒಡೆಯರ ಮರಣದ ಉಲ್ಲೇಖವಿದೆ. ಮತ್ತೊಂದು ಶಾಸನದಲ್ಲಿ ಕೀರ್ತಿರಾಜನ ಮಗ ನಾಗಪ್ಪನುಮಡಿದಾಗ ಆತನ ಮೂವರು ಮಡದಿಯರು ಬಯಿಚಕ್ಕ, ಬಾಯಿದೇವಿ ಮತ್ತು ಮಾದರಗುಂದಿಯರು ಸತಿ ಹೋದರೆಂದು ಕಾಣುತ್ತದೆ. (2–9–1369) (ಎ.ಕ. 7, 92, 93–94 ಅರುಹನಹಳ್ಳಿ, ಮದ್ದೂರು ತಾ. ಮಂಡ್ಯ ಜಿಲ್ಲೆ)

ಅರುಹನಹಳ್ಳಿಯು ಮದ್ದೂರಿಂದ (ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕು) 20 ಕಿ.ಮೀ. ಅಂತರದಲ್ಲಿದೆ. ಅಲ್ಲಿನ ವೀರರ ಗುಡಿಗಳು ಪ್ರಸಿದ್ಧಿಯಾಗಿದೆ. ಈ ಊರಿನ ರಾಮಾಂಜನೇಯ ಗುಡಿ ಪರಿಸರದಲ್ಲಿ ಹತ್ತಕ್ಕೂ ಹೆಚ್ಚು ವೀರರ ಗುಡಿಗಳಿವೆ. ಕೆಲವು ಬಿದ್ದು ಹೋಗಿವೆ. ಇವು ನೋಡಲು ಬೃಹತ್ ಶಿಲಾ ಗೋರಿಗಳಂತಿವೆ. ಈಗ ಈ ಊರಿನಲ್ಲಿ 4–5 ವೀರ ಗುಡಿಗಳು ಉಳಿದಿವೆ. ಕೆಲವುಗಳ ತಲವಿನ್ಯಾಸ 84 ಸೆಂ.ಮಿ.× 150 ಸೆಂ.ಮಿ. ಇವೆ. ಒಂದಕ್ಕೊಂದು ಹೊಂದಿಕೊಂಡು ಏಕಸಾಲಿನಲ್ಲಿ ಮೂರು ವೀರರ ಗುಡಿಗಳಿವೆ. ಈ ಗುಡಿಗಳನ್ನು ಕಟ್ಟಲು ದೊಡ್ಡ ದೊಡ್ಡ ಶಿಲಾ ಹಲಗೆಗಳನ್ನು ಬಳಸಲಾಗಿದೆ. ಇವುಗಳು 178 ಸೆಂ.ಮೀ. ಉದ್ದ, 188 ಸೆಂ.ಮಿ. ಎತ್ತರ ಇವೆ. ಒಳಮಗ್ಗಲಲ್ಲಿ ವೀರ ಮಾಸ್ತಿಯರ ಚಿತ್ರಗಳಿವೆ. ಕೆಳಗಿನ ಸಾಲಿನಲ್ಲಿ ಕಾಲ್ದಳ ಸೈನ್ಯ ಪರಿವಾರದೊಂದಿಗೆ ಕುದುರೆ ಸವಾರಿಯ ವೀರನು ವೈರಿಪಡೆಯ ವಿರುದ್ಧ ಕಾದಾಡುತ್ತಿರುವನು. ಅವರು ಕತ್ತಿ, ಗುರಾಣಿ ಹಿಡಿದು ಯುದ್ಧ ಮಾಡುತ್ತಿರುವರು. ಎರಡನೇ ಸಾಲಿನಲ್ಲಿ ಆನೆ ಪಡೆಯವರು ಕುದುರೆಪಡೆ ವಿರುದ್ಧ ಕಾದಾಡುತ್ತಿರುವರು. ಕೆಲವರು ನೆಲದ ಮೇಲೆ ಬಿದ್ದಿರುವರು. ಮೂರನೇ ಸಾಲಿನಲ್ಲಿ ಸತಿ ಹೋದವರ ಐದು ಸತಿಯರ ಚಿತ್ರಗಳಿವೆ. ವೀರನು ಅಲ್ಲಿ ಕೈಮುಗಿದು ನಿಂತಿರುವನು. ಅಪ್ಸರೆಯರು ವೀರನನ್ನು ಹಿಡಿದುಕೊಂಡು ಸ್ವರ್ಗಲೋಕಕ್ಕೆ ಹಾರುತ್ತಿರುವರು. ಅಪ್ಸರೆಯರು ಇನ್ನೊಂದು ಕೈಯಲ್ಲಿ ಕಮಲವನ್ನು ಹಿಡಿದಿರುವರು. ಮುಂದೆ ಏಕಸಾಲಿನಲ್ಲಿ ಸತಿ ಹೋದವರ ನೆನಪಿಗೆ ಬಲತೋಳು ಎತ್ತಿದ ಕೈಗಳನ್ನು ಒಂದೊಂದು ಕಂಬಕ್ಕೆ ಹೊಂದಿಸಿ ಕೆತ್ತಲಾಗಿದೆ. ನಾಲ್ಕನೇ ಸಾಲಿನಲ್ಲಿ ವೀರನು ತನ್ನ ಆರು ಸತಿಯರ ಜೊತೆ ಕೈಮುಗಿದು ಕುಳಿತಿರುವನು. ವೀರನು ಗಡ್ಡಧಾರಿಯಾಗಿದ್ದಾನೆ. ಮುಂದೆ ವೀರನು ಶಿವಲಿಂಗದ ಮುಂದೆ ಕೈಮುಗಿದು ನಿಂತಿದ್ದಾನೆ.

ಈ ಗುಡಿಯ ಇನ್ನೊಂದು ಒಳ ಮುಖದ ಶಿಲಾ ಹಲಗೆಯ ಮೇಲೆ ವೀರಮಾಸ್ತಿಯರ ಶಿಲ್ಪಗಳಿವೆ. ಒಂದು ಹಲಗೆಯ ಮೇಲೆ ಮೂರು ಸಾಲುಗಳಲ್ಲಿ ವಾದ್ಯಮೇಳದವರಿದ್ದಾರೆ. ಎರಡನೇ ಸಾಲಿನಲ್ಲಿ ವಾದ್ಯಮೇಳದವರ ಮೆರವಣಿಗೆಯಿದೆ. ಅದರಲ್ಲಿ ಮಡಿದ ಮೂವರು ವೀರರಿದ್ದು ತಲಾ ಒಬ್ಬರು ಕತ್ತಿ ಮತ್ತು ಗುರಾಣಿಗಳನ್ನು ಕೈಗಳಲ್ಲಿ ಹಿಡಿದಿದ್ದಾರೆ. ಅವರ ಮುಂದೆ ಮೂರು ವಾದ್ಯ ಮೇಳದವರಿದ್ದಾರೆ. ಒಂದರಲ್ಲಿ ತುತ್ತೂರಿ ಊದುತ್ತ ನಡೆದಿದ್ದಾರೆ. ಮೂರನೇ ಸಾಲಿನಲ್ಲಿ ಮೂವರು ವೀರರು ತಮ್ಮ ಪತ್ನಿ ಸಮೇತರಾಗಿ ಹೊರಟಿದ್ದಾರೆ.

ಈ ಗುಡಿಯ 3ನೇ ಶಿಲಾ ಹಲಗೆಯ ಮೇಲೆ ಶಾಸನವಿದೆ. ಅಲ್ಲಿನ ಮತ್ತೊಂದು ವೀರರ ಗುಡಿಯ ಶಿಲಾ ಹಲಗೆಯ ಮೇಲೆ 13 ಸಾಲುಗಳಲ್ಲಿ ಮೂರು ಮಾಸ್ತಿಯರ ಶಿಲ್ಪಗಳಿವೆ. ಮೊದಲನೆ ಸಾಲಿನಲ್ಲಿ ಹೋರಾಟ ದೃಶ್ಯವಿದ್ದು ಅದರ ನಡುವೆ ವೀರನು ಭರ್ಚಿ ಹಿಡಿದು ನಿಂತಿರುವದನ್ನು ದೊಡ್ಡ ಗಾತ್ರದಲ್ಲಿ ಚಿತ್ರಿಸಲಾಗಿದೆ. ಈ ವೀರನನ್ನು ಬದಿಗೆ ನಿಂತ ವೈರಿಪಡೆಯ ಯೋಧರಿಬ್ಬರು ಭರ್ಚಿಯಿಂದ ಅವನನ್ನು ಇರಿಯುತ್ತಿರುವರು. ಎರಡನೇ ಸಾಲಿನ ಚಿತ್ರಗಳನ್ನು ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಮಡಿದ ವೀರರಿಬ್ಬರು ಪತ್ನಿಯರ ಜೊತೆ ಕೈಮುಗಿದು ವಿಮಾನದಲ್ಲಿ ನಿಂತಿದ್ದಾರೆ. ನಡುವೆ ಮತ್ತು ಬದಿಗಿನ ಗೂಡುಗಳಲ್ಲಿ ಈ ವಿಮಾನವಿಡಿದು ಅಪ್ಸರೆಯರು ಹಾರುತ್ತಿರುವವರಿದ್ದಾರೆ. ಬದಿಗಳಲ್ಲಿ ಕಳಸಗಳಿವೆ. ಮೂರನೇ ಸಾಲಿನಲ್ಲಿ ವೀರನು ತನ್ನಿಬ್ಬರು ಪತ್ನಿಯರ ಜೊತೆ ಕೈಮುಗಿದು ವಿಮಾನದಲ್ಲಿ ಕುಳಿತಿರುವನು. ಈ ಮಂಟಪದಲ್ಲಿ ಒಂದು ವಿಮಾನದಲ್ಲಿ ಕುಳಿತ ನಂದಿ, ಇನ್ನೊಂದು ವಿಮಾನದಲ್ಲಿ ಆರತಿ ಮತ್ತು ಗಂಟೆಯನ್ನಿಡಿದು ಯತಿಯೊಬ್ಬ ಶಿವಲಿಂಗಕ್ಕೆ ಆರತಿ ಮಾಡುತ್ತಿರುವನು.ಅಲ್ಲಿಯ ಮೂರನೇ ವೀರರ ಗುಡಿ ಬಿದ್ದಿದ್ದು ಅದರ ಒಂದು ಶಿಲಾ ಹಲಗೆಯ ಮೇಲೆ ಬಾಳೆಯ ರಥವಿದೆ. ಅದರ ಮುಂದೆ ವೀರನು ನಿಂತಿದ್ದು ಆತನ ಬದಿಗೆ ಅವನ ಪತ್ನಿ ಕೈಮುಗಿದು ನಿಂತಿದ್ದಾಳೆ.

ನಾಲ್ಕನೇ ವೀರನ ಗುಡಿಯು ಬಹುದೊಡ್ಡದಾಗಿದೆ. ಆ ಗುಡಿಯ ಒಂದು ಶಿಲಾ ಹಲಗೆಯು 238 ಸೆಂ.ಮೀ. ಉದ್ದ ಮತ್ತು 242 ಸೆಂ.ಮೀ. ಅಗಲವಿದೆ. ಎತ್ತರ 284 ಸೆಂ.ಮೀ. ಮುಂದೆ ಅಡ್ಡವಾಗಿಟ್ಟ ಶಿಲಾ ಹಲಗೆಯು 175×242 ಸೆಂ.ಮೀ. 214 ಸೆಂ.ಮೀ. ಉದ್ದವಿದೆ, ಎತ್ತರ 134 ಸೆಂ.ಮೀ. ಈ ಗುಡಿಯ 3 ಶಿಲಾಹಲಗೆಯಲ್ಲಿ ವೀರ ಸತಿಯರ 4 ಸಾಲುಳ್ಳ ಶಿಲ್ಪಗಳಿರುವುದು ವಿಶೇಷ. 1ನೇ ಸಾಲಿನಲ್ಲಿ ಕುದುರೆ ಸವಾರಿ, ಕೋಲಿನ ಎರಡೂ ತುದಿಗೆ ಕೆಳಗಡೆ ಇಳಿಬಿಟ್ಟು ಕಟ್ಟಿದ ಪುಟ್ಟಿಯನ್ನು (ಡಬ್ಬಿ) ಹೊತ್ತ ವ್ಯಕ್ತಿ ನಿಂತಿದ್ದಾನೆ. ಈ ಡಬ್ಬಿಯಲ್ಲಿ ಒಂದು ವಸ್ತುವಿದೆ. ಅದು ಬಹುತೇಕ ಅಸ್ಥಿಯಿರಬಹುದು.

ಮುಂದುಗಡೆ ನಾಲ್ಕು ಸಮಾಂತರವಾಗಿ ಕಂಬಗಳನ್ನು ನಿಲ್ಲಿಸಲಾಗಿದೆ. ತಲಾ ಒಂದಕ್ಕೆ ಒಕ್ಕೈಯನ್ನು ಜೋಡಿಸಲಾಗಿದೆ. ಇವು ನಾಲ್ಕು ಸತಿಯರು ಹೋಗಿರುವುದನ್ನು ಸೂಚಿಸುತ್ತದೆ. ಎರಡನೇ ಸಾಲಿನಲ್ಲಿನ ಮೆರವಣಿಗೆಯಲ್ಲಿ ಸೈನ್ಯದಳದವರು ಆನೆ ಸವಾರಿಯನ್ನು ಮಾಡುತ್ತ ಕೈಗಳಲ್ಲಿ ಭರ್ಚಿಯನ್ನು ಹಿಡಿದು ಮೇಲೆತ್ತಿದ್ದಾರೆ. ಬದಿಗೆ ಕತ್ತಿ ಹಿಡಿದ ಕುದುರೆ ಸವಾರರಿದ್ದಾರೆ. ಮುಂದೆ ವೀರನನ್ನು ಪಲ್ಲಕ್ಕಿಯಲ್ಲಿ ಕೂಡಿಸಿದ್ದಾರೆ. ಅದನ್ನು ಇಬ್ಬರು ಸೇವಕರು ಹೊತ್ತು ಒಯ್ಯುತ್ತಿರುವರು. ಈ ಪಲ್ಲಕ್ಕಿಗೆ ಒಬ್ಬ ಸೇವಕ ಛತ್ರಿಯನ್ನು ಹಿಡಿದಿರುವನು. ಪಲ್ಲಕ್ಕಿಯ ಮುಂದಿನ ನೊಗವನ್ನು ಹೊತ್ತಿದ್ದಾರೆ. ಅದರ ಹಿಂದೆ ಮತ್ತು ಮುಂದುಗಡೆ ಇರುವ ಸೇವಕರು ಕತ್ತಿಗಳನ್ನು ಮೇಲಕ್ಕೆತ್ತಿಕೊಂಡು ಹೋಗುತ್ತಿರುವರು. ಮೂರನೇ ಸಾಲಿನಲ್ಲಿ ಮಧ್ಯದಲ್ಲಿರುವ ವೀರನು ಗಡ್ಡಧಾರಿಯಾಗಿದ್ದಾನೆ. ತನ್ನ ನಾಲ್ವರು ಪತ್ನಿಯರ ಜೊತೆ ಕೈಮುಗಿದು ಆಯತಾಕಾರದ ವಿಮಾನದಲ್ಲಿ ಕುಳಿತಿರುವನು. ವಿಮಾನದ ಬದಿಗಳಲ್ಲಿನ ಗೂಡುಗಳಲ್ಲಿ ಆನೆಸವಾರಿ ಮಾಡುವ ಅಪ್ಸರೆಯರಿರುವುದು ಅಪರೂಪ. ಈ ವಿಮಾನವನ್ನು ಇಬ್ಬರು ಅಪ್ಸರೆಯರು ಹೊತ್ತು ಹಾರುತ್ತಿರುವರು. ನಾಲ್ಕನೇ ಸಾಲಿನಲ್ಲಿ ಮಡಿದ ವೀರನು ತನ್ನ ನಾಲ್ವರು ಸತಿಯರ ಜೊತೆ ಕುಳಿತಿದ್ದಾನೆ. ಇಲ್ಲಿ ಈ ವೀರನಿಗೆ ಯತಿಯೊಬ್ಬ ಹಾರಹಾಕಿ ಪೂಜಿಸುತ್ತಿರುವುದೂ ಅಪರೂಪದ್ದಾಗಿದೆ. ಮುಂದೆ ವಾದ್ಯ ಮದ್ದಳೆ ಬಾರಿಸುವವಳು ಮತ್ತು ನೃತ್ಯ ಮಾಡುವ ಮಹಿಳೆಯರಿದ್ದಾರೆ. ಮುಂದುಗಡೆ ಆಯತಾಕಾರದ ಒಂದು ವಿಮಾನ ಮಾದರಿಯಲ್ಲಿ ಮಡಿದ ವೀರನು ದೇವರ (ಶಿವಲಿಂಗ) ಸಾನಿಧ್ಯದಲ್ಲಿ ಕೈಮುಗಿದು ನಿಂತಿರುವನು. ಬದಿಗೆ ಕುಳಿತ ನಂದಿ ಮತ್ತು ಗಣೇಶರಿದ್ದಾರೆ. ಶಿವಲಿಂಗವನ್ನು ಇದರ ಮುಂದಿರುವ ಶಿಖರವುಳ್ಳ ವಿಮಾನದಲ್ಲಿ ತೋರಿಸಿದ್ದು ಅದನ್ನು ಯತಿ ಪೂಜಿಸುತ್ತ ನಿಂತಿದ್ದಾನೆ.

ಗುಡಿಯ ಮತ್ತೊಂದು ಅಡ್ಡಪಟ್ಟಿಯುಳ್ಳ ಶಿಲಾ ಹಲಗೆಯ ಮೇಲೆ ಶಾಸನವಿದೆ. ಅದರ ಮೇಲ್ಗಡೆ ಎರಡು ಆಯತಾಕಾರದ ಗೂಡುಗಳಿವೆ. ಅವುಗಳಲ್ಲಿ ವೀರ–ಸತಿಯರ ಚಿತ್ರಗಳಿವೆ. ಕೆಳಗಿನ ಸಾಲಿನಲ್ಲಿ ಐವರು ಸತಿಯರು ಕೈಮುಗಿದು ಕುಳಿತಿರುವರು. ಇಲ್ಲಿಯೂ ಸಹ ಒಂದು ಸಾಲಿನಲ್ಲಿ ಮೂವರು ಪತ್ನಿಯರಿದ್ದಾರೆ. ಮತ್ತೊಂದು ಸಾಲಿನಲ್ಲಿ ಆರು ಪತ್ನಿಯರಿದ್ದಾರೆ. ಗುಡಿಯ ಛತ್ತಿನಲ್ಲಿ ವಿತಾನವಿದೆ. ಅದರ ಹಲಗೆಯ ಮೇಲೆ ವೃತ್ತಾಕರದ ಕಮಲದ ಅಲಂಕರಣವಿದೆ. ಕೆಳಗಡೆ ಶಾಸನವಿದ್ದು ಅದರಲ್ಲಿ ಬುಕ್ಕರಾಯನು ಎರಡನೇ ವೀರ ಹರಿಹರ ಆಳುವಾಗ ಕ್ರಿ.ಶ. 1382 ರಲ್ಲಿ ಅರಸನು ಸಕಲ ಧರ್ಮದವರನ್ನು ಕರೆಯಿಸಿ ಬಾಚಿರಾಜನು ಕನಕದಂಡಿಗೆ ಕನಕ ಚಾಮರ, ಕನಕ ಛತ್ರಗಳನ್ನು ಧರಿಸಿ ತುಂಗಭದ್ರ ತೀರದಲ್ಲಿರುವ ಓಅಕ್ಷರದೇವರ (ವಿರೂಪಾಕ್ಷೇಶ್ವರ) ಸಾನಿಧ್ಯದಲ್ಲಿ ಪರಮ ಪದವನೆಯಿದ ಯುಕ್ತನ ನಿತಾಸ್ತನಕಳಶಹಾರಹೋದರೆಂದಿದೆ. ಆ ಬಾಚಯಪ್ಪನ ಹಿರಿಯ ಮಗ ಬುಕಂಣನು ವಿರೂಪಾಕ್ಷ ದೇವರ ಸಾನಿಧ್ಯದಲ್ಲಿ ಪ್ರಾಯಶ್ಚಿದ ಮಾಡಿಕೊಂಡು ತನ್ನ ಚಾರೆಯ (ತಂದೆಯ) ಅಸ್ತಿಯನ್ನು ವಾರಣಾಸಿಗೆ ಕಳುಹಿಸಿ ಈ ಶಾಸನವನ್ನು ಪ್ರತಿಷ್ಠೆ ಮಾಡಿಸಿದನೆಂದು ಹೇಳಲಾಗಿದೆ. ಕಂಪಂಣ ವಡೆಯರು ಸ್ವರ್ಗಸ್ಥರಾದರೆಂದು ತಿಳಿಸಲಾಗಿದೆ. ಈತನು ಬುಕ್ಕನ ಸಹೋದರನಿರಬೇಕು. ಸಮಕಾಲೀನ ಶಾಸನಗಳನ್ನು ಪರಿಶೀಲಿಸಿದಾಗ ವಿಜಯನಗರ ಸಾಮ್ರಾಜ್ಯದಲ್ಲಿ ಹರಿಹರ ಬುಕ್ಕರು 1385 ರಲ್ಲಿ ಮಹಾ ಮಂಡಳೇಶ್ವರರಾಗಿ ಆಳುತ್ತಿದ್ದರೆಂದು ತಿಳಿಯುತ್ತದೆ.

ಇಲ್ಲಿ ಬುಕ್ಕರಾಯನು ತಂದೆ ಬಾಚೆಯಪ್ಪ ಎಂದು ಹೇಳಿದ್ದು ಸರಿಯೇ. ಇಲ್ಲಿನ ವೀರಗುಡಿಯು ಶಿಲ್ಪದ ವಿವರಣೆಯಿಂದ ವಿಜಯನಗರ ಅರಸ (ಮಹಾಮಂಡಳೇಶ್ವರ)ನಾಗಿದ್ದ ಬುಕ್ಕನು ತನ್ನ ತಂದೆ ಬಾಚೆಯಪ್ಪನು ಮಡಿದ ನಿಮಿತ್ಯ ಈ ವ್ಯವಸ್ಥೆ ಮಾಡಿದನೆಂದು ಅರ್ಥವಾಗುತ್ತದೆ. ಇಲ್ಲಿಯ ಬರವಣಿಗೆಯು ಅಸ್ಪಷ್ಟವಿದೆ.

ಈ ವೀರನ ಗುಡಿಯ ಮತ್ತೊಂದು ಶಿಲಾಹಲಗೆಯ ಮೇಲೆ ಕೆಳಭಾಗದಲ್ಲಿ ಏಕಸಾಲಿನಲ್ಲಿ ಒಕ್ಕೈ ಹೊಂದಿದ ಐದು ಕಂಬಗಳನ್ನು ಚಿತ್ರಿಸಲಾಗಿದೆ. ಪ್ರವೇಶದಲ್ಲಿ ಈ ಗುಡಿಗೆ ಕೆಳಗಡೆ ಸ್ವಲ್ಪ ಎತ್ತರದ ಶಿಲಾಹಲಗೆಯನ್ನು ಅಡ್ಡವಾಗಿ ಕೂಡಿಸಲಾಗಿದೆ. ಈ ವೀರನ ಗುಡಿಗೆ ನೇರವಾಗಿ ಜನರು ಪ್ರವೇಶಿಸಲು ಕಷ್ಟವಾಗಲೆಂದು ಈ ಹಲಗೆಯನ್ನು ಅಡ್ಡವಾಗಿ ಜೋಡಿಸಿರಬೇಕು. ಮತ್ತೊಂದು ವೀರರ ಗುಡಿ ಚೌಕಾದ ತಲವಿನ್ಯಾಸವನ್ನು ಹೊಂದಿದೆ. (160×158ಸೆಂ.ಮಿ.×90 ಸೆಂ.ಮೀ.) ಅದರಲ್ಲೂ ವೀರರ ಹೋರಾಟ, ಅಪ್ಸರೆಯರು ಮಡಿದ ವೀರನನ್ನು ಒಯ್ಯುತ್ತಿರುವುದು ಮತ್ತು ಯತಿಯೊಬ್ಬ ಮತ್ತು ಮಡಿದ ವೀರರು ಬದಿಗಿನ ಕುಳಿತ ನಂದಿ, ಶಿವಲಿಂಗವನ್ನು ಪೂಜಿಸುತ್ತ ನಿಂತಿದ್ದಾರೆ.

ಅಲ್ಲಿನ ವೀರಾಂಜನೇಯ ಗುಡಿ ನಡುವೆ ಒಂದು ವೀರರ ಕಿರು ಗುಡಿಯಿದೆ. ಅದು ದಕ್ಷಿಣಕ್ಕೆ ಮುಖ ಮಾಡಿದೆ. ಅದರಲ್ಲಿ ವೀರನೊಬ್ಬ ಎರಡು ನಾಯಿಗಳನ್ನು ಕರೆದುಕೊಂಡು ಬೇಟೆಯಾಡಲು ಹೊರಟಿರುವನು. ಅಲ್ಲಿನ ಮತ್ತೊಂದು ವೀರಗಲ್ಲು ಶಾಸನದಲ್ಲಿ ಕೀರ್ತಿರಾಜನ ಮಕ್ಕಳಾದ ಬಾಚೆಪ್ಪನ ತಮ್ಮ ರೇವಪ್ಪನು 1362 ರಲ್ಲಿ ಸ್ವರ್ಗಸ್ಥನಾದಾಗ ಆತ ಮತ್ತು ರೇವಪ್ಪನ ಅರಸಿಯರು ಸೇರಿ ನೆನಪಿನ ಕಂಬವನ್ನು ಬರೆಯಿಸಿ ನಿಲಿಸಿದರೆಂದಿದೆ. ಈ ಮೇಲೆ ಹೇಳಿದ ಒಂದು ದೊಡ್ಡ ವೀರಗುಡಿ ಶಾಸನದಲ್ಲಿ ಮಡಿದ ಬಾಚಿರಾಜನ ಹಿರಿಯ ಮಗ ಬುಕ್ಕಣನೆಂದು ತಿಳಿದಿದ್ದು ಇದರಲ್ಲಿ ಈ ಬಾಚಿರಾಜನ ತಮ್ಮ ರೇವಪ್ಪನೆಂದು (1362) ಮತ್ತು ಬಾಚಿರಾಜಪ್ಪನ ತಂದೆ ಕೀರ್ತಿರಾಜ ಎಂದು ಹಾಗೂ ಈ ದೇವಪ್ಪನ ಅರಸಿ ಬಯಿಚಕ್ಕರಸಿ ಎಂದು ತಿಳಿಯುತ್ತದೆ.

ಅರುಹನಹಳ್ಳಿಯ ಹತ್ತಿರದ ಕೊಕ್ರಿಬೆಳ್ಳೂರಿನಲ್ಲಿ ಹಲವಾರು ವೀರರ ಗುಡಿಗಳಿವೆ. ಒಂದು ವೀರನ ಗುಡಿಯಲ್ಲಿ 3 ದೃಶ್ಯಗಳಿವೆ. ಅವುಗಳು, ಒಂದು ಯುದ್ಧದ ದೃಶ್ಯ, ಎರಡರಲ್ಲಿ ಮಡಿದ ವೀರ ಮತ್ತು ಅವನು ಇಬ್ಬರೂ ಪತ್ನಿ ಸಮೇತ ವಿಮಾನದಲ್ಲಿ ಕುಳಿತಿದ್ದು ಈ ವಿಮಾನವನ್ನು ಅಪ್ಸರೆಯರು ಒಯ್ಯುತ್ತಿದ್ದು ಮತ್ತು ಮೂರರಲ್ಲಿ ವೀರ ಇಬ್ಬರು ಪತ್ನಿ ಸಮೇತ ವಿಮಾನದಲ್ಲಿ ಕುಳಿತಿರುವರು. ಬದಿಗೆ ಯತಿ ಶಂಖ ಊದುತ್ತಿರುವನು.

ಅಲ್ಲಿಂದ ಸಮೀಪದಲ್ಲಿ ಈ ಮೇಲಿನಂತೆ ಚೊರೆಚಾಕಾನ ಹಳ್ಳಿಯಲ್ಲಿ ವೀರರ ಗುಡಿ ಇವೆ. ಇದರಲ್ಲಿ ಮಡಿದ ವೀರನನ್ನು ಯತಿ ಪೂಜಿಸುತ್ತಿರುವನು. ಅಲ್ಲಿಂದ ಸಮೀಪದ ಕಸಲಗೆರೆಯ ಮುಕ್ಕೋಟಿ ಜಿನಾಲಯದ ಮುಂದೆ ವೀರಗುಡಿ ಮಾದನಾಯಕನ ಹಳ್ಳಿಯಲ್ಲಿ ಮತ್ತು ಅಗ್ರಹಾರ ಬಾಚಹಳ್ಳಿಯಲ್ಲಿ, ದುಂಡನಹಳ್ಳಿ (ಮದ್ದುರು ತಾ.) ಸೋಮನಹಳ್ಳಿಯಲ್ಲಿವೆ.

ಮಡಿದವರ ಅಸ್ಥಿಯನ್ನು ವಾರಣಾಸಿ ಬಳಿಯ ಗಂಗಾನದಿಯಲ್ಲಿ ವಿಸರ್ಜನೆ ಮಾಡುವ ಪ್ರಾಚೀನ ಪರಂಪರೆಯಿದೆ. ಉದಾಹರಣೆಗೆ ರಾಷ್ಟ್ರಕೂಟರ ಕಾಲದಲ್ಲಿ ಗಂಗಾನದಿಯಲ್ಲಿ ಅಸ್ಥಿ ವಿಸರ್ಜನೆ ಮಾಡಿ ಬಂದವನಿಗೆ ದಾನ ನೀಡಿದ ವಿವರ ವಿಜಾಪುರ ಜಿಲ್ಲೆಯ ಹೂವಿನ ಹಿಪ್ಪರಗಿಯ ಒಂದು ಶಾಸನ ಹೇಳುತ್ತದೆ. ಅದೇ ಪ್ರಕಾರ ಕಲ್ಯಾಣ ಚಾಲುಕ್ಯರ ದೊರೆ ಎರಡನೇ ಜಯಸಿಂಹನ ಆಳ್ವಿಕೆಯಲ್ಲಿ (1036–37) ಆತನ ಸಾಮಂತ ನೊಳಂಬ ಮಹಾದೇವಿಯ ಅಸ್ಥಿಯನ್ನು ಗಂಗೆಯಲ್ಲಿ ವಿಸರ್ಜಿಸಿ ಬಂದ ಕ್ರಿಷ್ಣಯ್ಯ ಮತ್ತು ಮಾಧವ ಷಡಂಗಿಯವರಿಗೆ ದಾನ ನೀಡಿದ್ದು ಕಂಡುಬರುತ್ತದೆ (ಬರುವಾಯಿ ಶಾಸನ).

ಈ ವೀರರ ಗುಡಿಗಳ ವಾಸ್ತುಶಿಲ್ಪಗಳಲ್ಲಿ ಕೆಲವು ಅಪರೂಪದ ಸಂಗತಿಗಳಿವೆ. ಅಲ್ಲಿ 3 ಶಿಲಾ ಹಲಗೆಗಳನ್ನು ಚೌಕಾಗಿ ಅಥವಾ ಆಯತಾಕರದಲ್ಲಿ ನೆಲದ ಮೇಲೆ ನಿಲ್ಲಿಸಿ ಪೂರ್ವಕ್ಕೆ ಮುಖ ತೆರೆದಿದ್ದು ಅದರ ಮಾಳಿಗಯನ್ನು ಶಿಲಾ ಹಲಗೆಯಿಂದ ಮುಚ್ಚಲಾಗಿದೆ. ಈ ರೀತಿಯ ಗುಡಿಗಳ ಶಿಲಾ ಹಲಗೆಗಳ ಒಳಮುಖಗಳಲ್ಲಿ ಶಾಸನ ಬರೆಸಿ ವೀರ ಮಹಾಸತಿಯರ ಉಬ್ಬು ಶಿಲ್ಪಗಳನ್ನು ಖಂಡರಿಸಲಾಗಿದೆ. ಈ ಶಿಲ್ಪಕಲೆಯಲ್ಲಿ ಮಡಿದ ವೀರನಿಗೆ ಯತಿಯೊಬ್ಬ ಹೂವಿನ ಹಾರ ಹಾಕಿ ಗೌರವಿಸುವ ದೃಶ್ಯವು ವಿರಳವಾಗಿದೆ. ವೀರನಿಗೆ ನಾಲ್ಕು ಅಥವಾ ಐದು ಪತ್ನಿಯರು ಆತನು ಮಡಿದ ಬಳಿಕ ವೀರ ಸತಿಯರನ್ನು ವಿಮಾನದಲ್ಲಿ ಕೂಡಿಸಿ ವಾದ್ಯ ಮೇಳದೊಂದಿಗೆ ಮೆರವಣಿಗೆ ಮಾಡುವ ಚಿತ್ರಗಳಿವೆ.

23. ಸ್ಮಾರಕಗಳು :

ವಿಜಯನಗರ ಕಾಲದಲ್ಲಿ ವೈವಿಧ್ಯಮಯ ಧಾರ್ಮಿಕ ಮತ್ತು ಲೌಖಿಕ ಸ್ಮಾರಕಗಳಿದ್ದು ಅವುಗಳಲ್ಲಿ ಶೈವ–ಶ್ರೀವೈಷ್ಣವರ ಪರಂಪರೆಗಳಲ್ಲಿ ಬೃಂದಾವನಗಳು ಜೈನರಲ್ಲಿ ಪಿರಮಿಡ್ ಆಕಾರದಂತಹ ಕಟ್ಟಡಗಳು ಮತ್ತು ಕೋಣೆಗೋರೆಯಂತೆ ಕಟ್ಟಿದ ವೀರರ ಗುಡಿಗಳು ವಿಶೇಷವೆನಿಸಿವೆ.

ಕೋಲುಸಿಡಿಗೆ ಆತ್ಮಬಲಿದಾನ ಮಾಡಿಕೊಂಡ ಮೂವರ ಶಿಲ್ಪಗಳುಳ್ಳ ವೀರಗಲ್ಲು ಹಂಪಿಯಲ್ಲಿದೆ. ಹಂಪಿಯಲ್ಲಿ ಅನೇಕರು ರಥ ಚಕ್ರಕ್ಕೆ ಮೈಒಡ್ಡಿ ಪ್ರಾಣತ್ಯಾಗ ಮಾಡುತ್ತಿದ್ದರು. ಕೆಲವೊಮ್ಮೆ ಅನೇಕರು ತಮ್ಮ ಪಕ್ಕೆಯಲ್ಲಿ ತೂತು ಮಾಡಿ ಅದರಲ್ಲಿ ಹಗ್ಗವನ್ನು ಪೋಣಿಸಿ ರಥಕ್ಕೆ ಅಲಂಕಾರವಾಗಿ ತೂಗು ಹಾಕುತ್ತಿದ್ದರು. ಇವರಿಂದ ದೇವರುಳ್ಳ ರಥವು ಮೆರವಣಿಗೆ ಹೋಗುತ್ತಿತ್ತು. ಈ ರೀತಿಯಲ್ಲಿ ಸಿಡಿಬಂಡಿಗೆ ಬಲಿಯಾಗುತ್ತಿದ್ದ ವಿಯಷವನ್ನು ನಿಕೊಲೊ–ಡಿ–ಕೊಂತಿ ಹೇಳಿದ್ದಾರೆ. ಕೆಲವರು ಎಳೆಯುವ ರಥದ ಚಕ್ರಕ್ಕೆ ಬಿದ್ದು ಸಾಯುತ್ತಿದ್ದರು.

1453ರಲ್ಲಿ ವಿರುಪಣ್ಣ ದಂಡನಾಯಕನು ಭೂದತ್ತಿಯನ್ನು ಬೆಳಗೊಳದ ಚಾರುಕೀರ್ತಿ ಪಂಡಿತದೇವರಿಗೆ ನೀಡಿದ್ದನು. ಅದನ್ನು ಬ್ರಾಹ್ಮಣನೊಬ್ಬನು ಸುಟ್ಟು ಭಸ್ಮಗೊಳಿಸಿ ಅಳಿಯುವನು. ಆಗ ಮಂತ್ರಿ ದೇವಣ್ಣ ವೊಡೆಯನು ಆದಿಪರಮೇಶ್ವರ ಹಾರ ದಾರೆಗುಂಟ ಭೂದಾನ ನೀಡಿದನು. ಹೀಗೆ ಈ ರೀತಿಯ ಅನೇಕ ವಿವಾದಗಳು ಸಂಗಮರ ಅವಧಿಯಲ್ಲಿ ನಡೆದದ್ದನ್ನು ಡಾ. ಸಿ.ಎಸ್. ಅಪರ್ಣ ಅವರು ವಿವರಿಸಿದ್ದಾರೆ. (ಅಪರ್ಣ ಸಿ.ಎಸ್. ಸಂಗಮರ ದೇವಾಲಯಗಳು, ಪು. 278)

24. ಬೃಂದಾವನಗಳು :

ಶ್ರೀ ವೈಷ್ಣವ ಪರಂಪರೆಯಲ್ಲಿ ಅನೇಕ ಮಠಗಳ ಯತಿವರ್ಯರ ಸ್ಮಾರಕಗಳನ್ನು ಕಟ್ಟಲಾಗಿದೆ. ಅವುಗಳನ್ನು ಬೃಂದಾವನದಂತೆ ನಿರ್ಮಿಸಲಾಗಿದೆ. ಶ್ರೀವೈಷ್ಣವ ಧರ್ಮದ ಅನೇಕ ಯತಿಗಳು ತಮ್ಮ ಧರ್ಮವನ್ನು ಸಮಕಾಲೀನ ಅರಸರ ರಾಜಾಶ್ರಯದಿಂದ ಹೆಚ್ಚು ಬೆಳೆಸಿದರು. ಶಂಕರಾಚಾರ್ಯ ಪರಂಪರೆಯಲ್ಲಿ ಉಡುಪಿಯಲ್ಲಿ ಅನೇಕ ಆಚಾರ್ಯರ ಬೃಂದಾವನಗಳಿವೆ. ಇವುಗಳು ಶಿರಸಿ ಬಳಿ ಸೋಂದಾದ ವಾದಿರಾಜರ ಮಠದಲ್ಲಿವೆ. ಅದೇ ರೀತಿಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಪರಂಪರೆಯಲ್ಲಿನ ಸ್ವಾಮಿಗಳ ಬೃಂದಾವನಗಳು ಮತ್ತು ಉತ್ತರಾಧಿಮಠ ಪರಂಪರೆಯ ಸ್ವಾಮಿಗಳ ಬೃಂದಾವನಗಳು ಆನೆಗೊಂದಿಯ ನಡುಗಡ್ಡೆಗಳಲ್ಲಿವೆ. ಅವುಗಳಲ್ಲಿ ಕೆಲವುಗಳು ಈ ಅವಧಿಗೆ ಸೇರಿವೆ. ಶ್ರೀ ರಾಘವೇಂದ್ರ ಸ್ವಾಮಿಗಳ ಮತ್ತು ಅವರ ಅನೇಕ ಉತ್ತರಾಧಿ ಮಠದ ಸ್ವಾಮಿಗಳ ಬೃಂದಾವನಗಳಿವೆ. ಎಲ್ಲಾ ಯತಿವರ್ಯರ ಹೆಸರಿನ ಮಾಧ್ವ ಪರಂಪರೆಯ ಅನೇಕ ಯತಿಗಳ ಬೃಂದಾವನಗಳು ಅಥವಾ ಕೇವಲ ಶ್ರೀ ರಾಘವೇಂದ್ರ ಸ್ವಾಮಿಗಳ ಹೆಸರಿನ ಬೃಂದಾವನಗಳು ಅನೇಕ ಊರುಗಳಲ್ಲಿವೆ. ಅವುಗಳನ್ನು ಶ್ರದ್ಧಾಭಕ್ತಿಯಿಂದ ಆರಾಧಿಸವುರು. ಅದರಲ್ಲಿ ನಂಜನಗೂಡು ಮುಂತಾದ ಸ್ಥಳಗಳ ಬೃಂದಾವನಗಳು ಪ್ರಾಚೀನದ್ದಾಗಿವೆ.

ಬೃಂದಾವನಗಳು ಉಡುಪಿ ಶ್ರೀಕೃಷ್ಣ ಮಠದ ಸಂಕೀರ್ಣದಲ್ಲಿವೆ. ಅವುಗಳು ಅಷ್ಟಮಠಗಳಿಗೆ ಸಂಬಂಧಿಸಿದ ಅನೇಕ ಪೂಜ್ಯರ ಬೃಂದಾವನಗಳಿವೆ.ಅದೇ ರೀತಿಯಲ್ಲಿ ಹಂಪಿ ಹತ್ತಿರದ ಆನೆಗುಂದಿಯಲ್ಲಿವೆ. ಆ ಸ್ಥಳವು ವ್ಯಾಸರಾಯ ಮಠದ ಉತ್ತರಾಧಿ ಮಠದವರಿಗೆ ಮಹತ್ವದ ಕೇಂದ್ರವಾಗಿದೆ. ವಿಜಾಪುರದಲ್ಲಿ ಮಹೀಪತಿ ದಾಸರ ಬೃಂದಾವನವಿದೆ. ಸೋಂದೆಯಲ್ಲಿ ವಾದಿರಾಜ ಮಠದಲ್ಲಿ ಬೃಂದಾವನವಿದೆ. ಆದರೆ ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿ ಘೀರ ಮತದವರ ವಾಡೆಯಂತಹ ಮನೆಯ ಒಳಗೆ ಈ ಮನೆತನದವರಿಗೆ ಸೇರಿದ ಬೃಂದಾವನಗಳಿವೆ. ಈ ಜಿಲ್ಲೆಯ ಔರಾದ ತಾಲೂಕಿನ ಒಂದೆರಡು ಹಳ್ಳಿಗಳಲ್ಲೂ ಬೃಂದಾವನಗಳಿವೆ. ಆನೆಗುಂದಿಯಲ್ಲಿ ನವಬೃಂದಾವನದಲ್ಲಿ ಮಾಧ್ವ ಸಂಪ್ರದಾಯದ ಯಂತ್ರೋದ್ಧಾರಕ ಮತ್ತು ಶ್ರೀ ನರಹರಿತೀರ್ಥರ ಬೃಂದಾವನವಿದೆ. ಈ ಬೃಂದಾವನಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿದರೆ ಅದರ ಚಾರಿತ್ರಿಕ ಮತ್ತು ಧಾರ್ಮಿಕ ನೆಲೆ–ಹಿನ್ನೆಲೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು.

ಜೈನ ಮುನಿಗಳ ಸ್ಮಾರಕಗಳಲ್ಲಿ ತೆರೆದ ಸ್ತಂಭ, ಮಂಟಪ ಮಾದರಿ, ಎತ್ತರದ ಪಿರಮಿಡ್ ಆಕರದ ಸ್ಮಾರಕಗಳು ಉತ್ತರ ಕನ್ನಡ ಶಿರಸಿ ಬಳಿಯ ಸೋಂದೆಯಲ್ಲಿ ಜೈನಮಠ ಸಂಕಿರಣದಲ್ಲಿ ಭಟ್ಟಾಕಳಂಕರ ಸಮಾಧಿಯಿದೆ. ಈ ಎಲ್ಲಾ ಸ್ಮಾರಕಗಳನ್ನು ಸಮಗ್ರವಾಗಿ ಪರಿಶೀಲಿಸಿ ಅಧ್ಯಯನ ನಡೆಸುವ ಅವಶ್ಯಕತೆಯಿದೆ. ಜೈನ ಮುನಿಗಳ ಪಗೋಡ ಮಾದರಿಯ ಸ್ಮಾರಕಗಳು ಮೂಡಬಿದರಿಯಲ್ಲಿವೆ. ತಲಾ ಒಂದನ್ನು ಪ್ರತ್ಯೇಕವಾಗಿ ಕಟ್ಟಲಾಗಿದೆ. ಎತ್ತರವಾದ ಚೌಕ ಕಟ್ಟೆಯನ್ನು ಕಟ್ಟಲಾಗಿದೆ. ಅದರ ಮೇಲೆ ಎತ್ತರವಾದ ಚೌಕಾದ ಗೋಡೆಯು ಪಿರಮಿಡ್ ಆಕಾರದಲ್ಲಿದೆ. ಇಟ್ಟಂಗಿಗಳಿಂದ ನಿರ್ಮಿಸಿದ್ದಾಗಿವೆ. ಈ ಮಾದರಿಯ ಸ್ಮಾರಕಗಳು ಅಪರೂಪದ್ದೆನಿಸಿವೆ. ಸ್ಥಳೀಯ ಒಂದು ಶಾಸನವನ್ನು ಅಧ್ಯಯನ ಮಾಡಿದಾಗ 1430 ರಲ್ಲಿ ಅಲ್ಲಿ ತ್ರಿಭುವನ ಚೂಡಾಮಣಿ ಬಸದಿಯ ನಿರ್ಮಾಣದ ಸಂಗತಿ ಗೊತ್ತಾಗುತ್ತದೆ. ಅದಕ್ಕೆ ಮೂರು ಅಂತಸ್ತುಗಳಿವೆ. ಅದನ್ನು ಒಂದನೇ ದೇವರಾಯನು ಉದ್ಘಾಟಿಸಿದನೆಂದಿದೆ. ಈ ಅಂತಸ್ತುಗಳನ್ನು ಚಂದ್ರನಾಥ, ಸುಪಾರ್ಶ್ವನಾಥ ಮತ್ತು ಚಂದ್ರಪ್ರಭರ ಮೂರ್ತಿಗಳನ್ನು ಕ್ರಮವಾಗಿ ಪ್ರತಿಷ್ಠಾಪಿಸಲಾಗಿದೆ. ಆದರೆ ಇದು ಯಾವ ಯತಿವರ್ಯರ ನೆನಪಿನಲ್ಲಿ ಕಟ್ಟಿಸಿದ್ದು ತಿಳಿಯುವುದಿಲ್ಲ.

25. ಸ್ಮಾರಕ ಶಿಲ್ಪಗಳು :

ಈ ಅವಧಿಯ ಸ್ಮಾರಕ ಶಿಲ್ಪಗಳಲ್ಲಿ ವೀರಗಲ್ಲು–ವೀರ–ಮಹಾಸತಿಕಲ್ಲು, ಮಹಾಸತಿ ಕಲ್ಲು, ಇತ್ಯಾದಿಗಳು ಕಾಣುತ್ತವೆ. ಹಲವೆಡೆಗಳಲ್ಲಿನ ವೀರಗಲ್ಲುಗಳಲ್ಲಿ (ಹಂಸಭಾವಿ) (ಉತ್ತರ ಕನ್ನಡ ಜಿಲ್ಲೆ) 5ಕ್ಕೂ ಹೆಚ್ಚು ಫಲಕಗಳಿವೆ. ಯುದ್ಧ ದೃಶ್ಯವನ್ನು ಎರಡು ಫಲಕಗಳಲ್ಲಿ ಮೆರವಣಿಗೆಯನ್ನು ಎರಡು ಫಲಕಗಳಲ್ಲಿ ತೋರಿಸಲಾಗಿದೆ. ಕರಾವಳಿ ಪ್ರದೇಶದಲ್ಲಿ ಕೆಲವೆಡೆ ನಿಶಾನೆಯಂತಹ ಸತಿಗಲ್ಲುಗಳಿವೆ. ಹೀಗೆ ಈ ಕುರಿತು ಈಗಾಗಲೇ ಹೇರಳ ವಿಷಯಗಳು ತಿಳಿದಿವೆ. ಅವೆಲ್ಲವುಗಳನ್ನು ಒಂದೆಡೆ ಅಧ್ಯಯನಮಾಡುವ ಅವಶ್ಯಕತೆಯಿದೆ.

ಆಧಾರಸೂಚಿ :

Albert Henri Longharts (1917) : Hampi Ruins, Discriptive and Illustrated, Calcutta.

Albert Henri Longharts (1927) : The Aravidu Dynasty of Vijayanagara.

Anila Varghese (1995) : Religious Tradition at Vijayanagara, Manohar Publication, New Delhi.

Anila Varghese (2001) : Archaeology, Art and Religion, New Perspectives on Vijayanagara, Oxford University Press, New Delhi.

Anila Varghese (2002) : Hampi Monumental Legacy, Oxford University Press, New Delhi.

Anila Varghese and Anna Dallapiccola (Ed) : South India under Vijayanagra Art and Archaeology, Oxford University Press, New Delhi.

Anna L Dallapiccola, Anila Verghese (1998) : Sculpture at Vijayanagara Iconography and Style, Manohar American Institute of Indian Studies, New Delhi.

Anna L Dallapiccola, Anila Verghese (2010) : The Great Platform at Vijayanagara, Manohar Publishers and Distributors, New Delhi.

Anna L Dallapiccola, John M. Fritz George Michel, Rajashekar S. (1992) : The Ramachandra Temple at Vijayanagara, Manohar Publishers and Distributors, New Delhi.

Basavaraj K.R. 1978 : The Vijayanagara Urbanity, Hospet.

Basavaraj K.R. : History and Culture of Karnataka

Burton Stein (1994) : The Cambridge History of India Vijayanagara, Foundation Book, New Delhi.

D. Devakunjar, 1983 : Hampi, ASI, New Delhi.

Diwakar R.R. and Karmarkan D.P. (Ed.) 1936, Vijayanagara Six Centunary Commemorations Volume, (held in 1936) in Hampi, Karnataka Historical Research Society, Dharwad.

Dalla peccalo, Anna Libera Lallement Stephania Z (1985) : Vijayanagara City and Empire : New Courses of Research.

E.C. Raven Shah (1836) : Translation of Various Inscription found among ruins of Vijayanagara with preliminary observation, 20, p. 1-40.

Falhen Heras : Aravidu.

George Michel (1990) : Vijayanagara Architect.

George Michel : Vasundhara Fillioza : Splendours of the Vijayanagara, Empire Hampi.

Gopal R and Muralidhar M.N. (2008) : Vijayanagara Through the eyes of Alexander J. Grun Law (1856), John Gwlings (1983), and Gopal etc (2008) Mysore.

Gururaj Bhat P 1975 : Studies in Tuluva History and Culture.

Heras Henri (1929) : The beginning of Vijayanagara History.

Jawaharlal Nehru 1956 : The Discovery of India, Modern Book Ltd, London (4th Edition).

Joshi, S.K., 1985 : Defence Architecture in Early Karnataka, New Delhi.

Karasima Nobory (1992) : Towards a New Formation : South Indian Society Under Vijayanagara Rule.
Konduri Sarojini Devi 1990 : Religion in Vijayanagara Empire, New Delhi.
Krishnaswamy A., 1964 : The Tamil Country under Vijayanagara.
Mahalingam T.V. 1975 : Administration and Social Life Under Vijayanagara.
Proceedings of Karnataka History Volumes, Karnataka History Congress, Bangalore
Marks Wilks (1810): History of Mysore.
Rajashekhara.S. (1983) : Master Pieces of Vijayanagar Art, Taraporevale and Co. Bombay.
Rajashekhara S. : Karnataka Art and Architecture
Ramachandrayya O., (1953) : Studies on Krishnadevaraya of Vijayanagara.
Robert Sewell : A Forgotton Empire (Vijayanagara) Asian Educational Service, Madras 1992, 7th Edition.
Royal Asiatic Society (1869) : Madhava and Sayanas Many wars.
Saletore B.A. (1936) : Social and Political Life in Vijayanagara Empire.
Saletore, B.A. (1946) : Economic Life of the Vijayanagara Empire.
Salitore, B.A. : Social and Political life in Vijayanagara, Vol. II.
Sorojini Devi Kunduri (1990) : Religion in Vijayanagara.
South Canara Gazetteer.
Srikanthaiah, S. (1938) : Founders of Vijayanagara.
Stein Burton (1980) : Present State and Society in Medieval South India, New Delhi.
Subbarayalu Y (2006) : Administrative Division of the Vijayanagara State.
Sundara A. : The Vijayanagara war site and Ramarayas Death.
Suryanarayana Rao, B. (1905) : A History of Vijayanagara Never to be Forgotton Empire.
The Royal Centres of Vijayanagara : A Preliminary Report.
Vasundhara Filliozat (Ed) 1999 : Vijayanagara an seen by Domingos Paes and Fernao Nuniz, NBTI, New Delhi.
Venkataramanayya S. (1929) : Kampli and Vijayanagara.
Venkataramanayya S. (1933) : Origin of Vijayanagara, the City and Empire.
Venkataramanayya S. (1934) : Studies of the Third Dynasty of Vijayanagara Empire.
Venkataramanayya S. and Neelakantha Shastry, K.A. (1946) : Further Sources of Vijayanagara History.
Verghese Anila (Ed) (2013) : Krishnadevaraya His Times.
ಸರ್ವೇಶ ಕೆ. (2008) : ವಿಜಯನಗರ ಕಾಲದ ಶೈವ ದೇವಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಸುರೇಶ ಕೆ.ಎಂ., ವಾಸುದೇವ ಬಡಿಗೇರ, ಸೋಮಶೇಖರ ಎಸ್.ವೈ., ಎಂ. ಕೊಟ್ರೇಶ (1999) : ಬಳ್ಳಾರಿ ಜಿಲ್ಲೆ, ಕೊಪ್ಪಳ ಜಿಲ್ಲೆ (2001) ಕರ್ನಾಟಕ ದೇವಾಲಯ ಕೋಶ, ಕ.ವಿ.ವಿ. ಹಂಪಿ.
ಸರಸ್ವತಿದೇವಿ ಎಸ್. ಭಗವತಿ (2008) : ಹಂಪಿಯ ಶಾಸನಗಳು : ಒಂದು ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.
ಸದಾನಂದ ಕನವಳ್ಳಿ (ಅನು) (2008) : ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ರಾಬರ್ಟ್ ಸಿವೆಲ್ (ಮೂಲ) ಕ.ವಿ.ವಿ. ಹಂಪಿ.
ಸೋಮಶೇಖರ ಎಸ್.ವೈ. (1997) : ಹಂಪೆಯ ಬಜಾರುಗಳು, ಕ.ವಿ.ವಿ. ಹಂಪಿ.
ಸೋಮಶೇಖರ ಎಸ್.ವೈ. (2009) : ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ, ಸಂಚಿಕೆ ಪ್ರಕಾಶನ.
ಸೋಮಶೇಖರ ಎಸ್.ವೈ. (2014) : ಕರ್ನಾಟಕದ ಬಿರುದಾವಳಿಗಳು, ಕ.ವಿ.ವಿ. ಹಂಪಿ.
ಸ್ವಾಮೀಜಿ ಸದ್ಯೋಜಾತ (1971) : ವಿಜಯನಗರ ಕಾಲದ ಜನತೆಯ ಧಾರ್ಮಿಕ ಜೀವನ, ಧಾರವಾಡ.
ದೀಕ್ಷಿತ ಜಿ.ಎಸ್. (ಸಂ.) (1991) : ಸಂಗಮರ ಕಾಲದ ವಿಜಯನಗರ ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು.

ನರಸಿಂಹನ್ ಅ.. (2008) : ವಿಜಯನಗರ ಶಿಲ್ಪಕಲೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

ನರಸಿಂಹಮೂರ್ತಿ. ಎ.ವಿ. (1996) : ವಿಜಯನಗರ ನಾಣ್ಯ ಸಂಪತ್ತು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನಾಗರಾಜ ಎಂ.ಜಿ. (2000) : ಶಿವಸಂಸ್ಕೃತಿಯ ವಿಕಸನ ನೆಲೆಗಳು, ಶ್ರೀ ಜ. ಸಾರಂಗಧರೇಶ್ವರ ಪ್ರಕಾಶನ, ಶ್ರೀಶೈಲಂ.

ಪ್ರಭಾಕರ ಎಮ್.ಎನ್. (1997) : ದೇವಾಲಯ ವಾಸ್ತು, ಕ.ವಿ.ವಿ. ಹಂಪಿ.

ಪುರುಷೋತ್ತಮ ಬಿಳಿಮಲೆ, ಚೆಲುವರಾಜು (1997) : ಹಂಪಿ ಜನಪದ, ಕ.ವಿ.ವಿ. ಹಂಪಿ.

ಪರಮಶಿವಮೂರ್ತಿ ಡಿ.ವಿ. (1999) : ಕನ್ನಡ ಶಾಸನ ಶಿಲ್ಪ, ಕ.ವಿ.ವಿ. ಹಂಪಿ.

ಪರಮಶಿವಮೂರ್ತಿ ಡಿ.ವಿ., ವಾಸುದೇವ ಬಡಿಗೇರ, ವಿರೂಪಾಕ್ಷಿ ಪೂಜಾರಹಳ್ಳಿ (ಸಂ.) (2008) : ಕೃಷ್ಣದೇವರಾಯ ಆಯ್ದ ಲೇಖನ ಸಂಪುಟ, ಕ.ವಿ.ವಿ. ಹಂಪಿ.

ಪರಮೇಶ್ವರಪ್ಪ ಟಿ. (1997) : ಹಂಪಿ ಪರಂಪರೆ, ಶ್ರೀ ವಿದ್ಯಾವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ಕ.ವಿ.ವಿ. ಹಂಪಿ.

ಶಾಮ ಶಾಸ್ತ್ರಿ (ಸಂ.) 1973 : ಕೆಳದಿ ನೃಪವಿಜಯ, ಮೈಸೂರು.

ಶರಣಬಸಪ್ಪ ಕೋಲ್ಕಾರ (2012) : ವಿಜಯನಗರ ಪರಿಸರ (ಸಂಶೋಧನ ಲೇಖನಗಳು) ಕಿಕ್ಕೇರಿ ಪಬ್ಲಿಕೇಶನ್ಸ್, ಬೆಂಗಳೂರು.

ಶರಣಬಸಪ್ಪ ಕೋಲ್ಕಾರ (2013) : ವಿಜಯನಗರ ಸಾಮ್ರಾಜ್ಯದ ಮಾತೃಸ್ಥಾನ ಆನೆಗುಂದಿ, ಬಸವಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು.

ಶಿವಾನಂದ. ವಿ. (1976) : ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ–ವೀರಶೈವ, ವಸಂತಕಾಲ– 1401–1500, ಕಾರ್ತಿಕೇಯ ಪ್ರಕಾಶನ, ಕಲಬುರ್ಗಿ.

ಶೆಟ್ಟಿ ಎಸ್.ಡಿ. 2002 : ತುಳುನಾಡಿನ ಜೈನ ಧರ್ಮ : ಒಂದು ಸಾಂಸ್ಕೃತಿಕ ಅಧ್ಯಯನ, ಉಡುಪಿ.

ವಿನೋದ ಪಾಟೀಲ (2003) : ಶಿಲ್ಪಗಳಲ್ಲಿ ಶಿವಭಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

ವಿರಕ್ತಮಠ ಶಿವಾನಂದ (1978) : ಪ್ರೌಢದೇವರಾಯನ ಕನ್ನಡ ಸಾಹಿತ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿವೇಕ ರೈ (ಸಂ.) (2010) : ಪ್ರವಾಸಿ ಕಂಡ ವಿಜಯನಗರ, ಕ.ವಿ.ವಿ. ಹಂಪಿ.

ವಿಜಯನಗರ ಅಧ್ಯಯನ 1 ರಿಂದ 20 ಸಂಪುಟಗಳು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರಾ ಇಲಾಖೆ, ಮೈಸೂರು.

ವಿರೂಪಾಕ್ಷಿ ಪೂಜಾರಹಳ್ಳಿ (2008) : ವಿಜಯನಗರ ಕಾಲದ ಸಂಸ್ಕೃತಿ, ಕ.ವಿ.ವಿ. ಹಂಪಿ.

ಲಕ್ಷ್ಮಣ ತೆಲಗಾವಿ (ಸಂ.) (2006) : ಜೀರ್ಣ ವಿಜಯನಗರ ದರ್ಶನಂ, ಕ.ವಿ.ಇ. ಹಂಪಿ.

ಲಕ್ಷ್ಮಣ ತೆಲಗಾವಿ (ಸಂ.) (2009) : ವಿಜಯನಗರ ಕಾಲದ ಕೂಟಗಳು, ಮಂಟಪಮಾಲೆ, ಕ.ವಿ.ಇ. ಹಂಪಿ.

ಸೂರ್ಯನಾಥ ಕಾಮತ್ (1987) : ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಬಾಪ್ಕೊ ಪ್ರಕಾಶನ, ಬೆಂಗಳೂರು.

ಷ. ಶೆಟ್ಟರ್ (ಮೂಲ), ರಾಜಾರಾಮ ಹೆಗಡೆ (ಅನುವಾದ) : ಬಳ್ಳಿಗಾವೆ ಮಧ್ಯಕಾಲೀನ ನಗರವೊಂದರಲ್ಲಿ ಮತವೈವಿಧ್ಯತೆಯ ವಿನ್ಯಾಸ, ಕನ್ನಡ ಅಧ್ಯಯನ, ಸಂ. 9, ಸಮ. 4.

ಷೇಕ ಅಲಿ (ಪ್ರ.ಸಂ.) 1997 : ಕರ್ನಾಟಕ ಚರಿತ್ರೆ, ಹಂಪೆ, ಕನ್ನಡ ವಿಶ್ವವಿದ್ಯಾಲಯ.

ಸೀತಾರಾಮ ಜಾಗೀರದಾರ (1984) : ಪರಮೇಶ್ವರ 25 ಅವತಾರಗಳು, ಪಂಚವಿಂಶತಿ ಲೀಲಾ ಮೂರ್ತಯಃ

ಸಿದ್ಧಲಿಂಗೇಶ ಸ್ವಾಮಿಗಳು (ಸಂ.) (1983) : ಶ್ರೀ ಪಂಪಾಮಹಾತ್ಮೆ, ಶ್ರೀಗುರು ವೃಷಭಾಶ್ರಮ.

ಶ್ರೀನಿವಾಸ.ಎಸ್. (2010) : ಹಂಪಿ ಪರಿಸರದ ಆದಿಮಾನವ ನೆಲೆಗಳು, ಕ.ವಿ.ವಿ. ಹಂಪಿ.

ಶ್ರೀಕಂಠಯ್ಯ ಕೆ., (1983) : ವಿಜಯನಗರ ಕಾಲದ ಸಾಹಿತ್ಯ, ಜನಜೀವನ ಚಿತ್ರ, ಗೀತಾ ಬುಕ್ ಹೌಸ್, ಮೈಸೂರು.

ಚಿನಿ ಮಲ್ಲಾಪುರ (ಸಂ.) : ಅಲ್ಲಮ ಪ್ರಭುದೇವರ ವಚನ ಸಂಪುಟ.

ವಸುಂಧರಾ ಫಿಲಿಯೋಜ, 1997 : ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1980

ವಸುಂಧರಾ ಫಿಲಿಯೋಜಾ (2011) : ಅಳಿದುಳಿದ ಹಂಪೆ, ಸ್ಥಾನಿಕಂ, ಪ್ರಕಾಶನ, ಮೈಸೂರು.

ವಸಂತಲಕ್ಷ್ಮಿ ಕೆ. (2008) : ಕರ್ನಾಟಕದ ಶೈವಶಿಲ್ಪಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

ವಾಸುದೇವ ಬಡಿಗೇರ (2012) : ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಭಾಗ–1, ಕ.ವಿ.ವಿ. ಹಂಪಿ.

ವಾಸುದೇವ ಬಡಿಗೇರ : ತಾಳಿಕೋಟೆ ಯುದ್ಧದ ಸ್ಥಳ ಸಮೀಕ್ಷೆ.
ವಾಸುದೇವನ್ ಸಿ.ಎಸ್. (2001) : ಹಂಪಿ ಪರಿಸರದ ಕೆರೆಗಳು, ಕ.ವಿ.ವಿ. ಹಂಪಿ.
ಮಂಜುನಾಥ ಬೇವಿನಕಟ್ಟಿ (ಸಂ.) (1997) : ವಿಜಯನಗರ ಸಾಂಸ್ಕೃತಿಕ ಆಯಾಮಗಳು, ಶ್ರೀ ವಿದ್ಯಾವಿಜಯನಗರ, ಹಂಪಿ ಹೆರಿಟೇಜ್, ಆನೆಗೊಂದಿ.
ಮಹಾದೇವ ಸಿ. (2000) : ವಿಜಯನಗರದ ಗಾರೆಶಿಲ್ಪ, ಕ.ವಿ.ವಿ. ಹಂಪಿ.
ಮಹಾದೇವ ಸಿ. (2009) : ಕಮ್ಮಟದುರ್ಗದ ಅರಸರು, ಕ.ವಿ.ವಿ. ಹಂಪಿ.
ಚಿದಾನಂದಮೂರ್ತಿ ಎಂ. (2002) : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, (450 ರಿಂದ 1150), ಸಪ್ನ ಬುಕ್ ಹೌಸ್, ಬೆಂಗಳೂರು.
ಅನ್ನದಾನೀಶ್ವರ ಮಹಾಸ್ವಾಮಿಗಳು (2003) : ಶಿವಾಗಮಗಳಲ್ಲಿ ವೀರಶೈವ ಧರ್ಮ, ಮುಂಡರಗಿ.
ಅಪರ್ಣ ಕೂ.ಸ. (2008) : ಸಂಗಮರ ಕಾಲದ ದೇವಾಲಯಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.
ಅಪರ್ಣ ಕೂ.ಸ. 2000 : ದೇವಾಲಯ ವಾಸ್ತುಶಿಲ್ಪ ಪರಿಚಯ, ಕ.ವಿ.ವಿ ಹಂಪಿ.
ಇತಿಹಾಸ ದರ್ಶನ 1 ರಿಂದ 30, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.
ರಾಮಚಂದ್ರರಾವ್ ಎಸ್.ಕೆ. (1975) : ಮೂರ್ತಿಶಿಲ್ಪ ನೆಲೆ–ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
ರಾಮಚಂದ್ರರಾವ್ ಎಸ್.ಕೆ. (1980) : ಭಾರತದ ದೇವಾಲಯಗಳು ನೆಲೆ–ಹಿನ್ನೆಲೆ, ಐಬಿಎಚ್. ಪ್ರಕಾಶನ, ಬೆಂಗಳೂರು.
ರಾಜಾ ಅಚ್ಯುತ ದೇವರಾಯ, ರಾಮಮೂರ್ತಿ ಜೆ.ಆರ್. ಪರಮೇಶ್ವರಪ್ಪ (ಲೇ) (1998) : ಆನೆಗೊಂದಿ, ಕುಮಾರರಾಮ ಮಂಟಪ, ಆನೆಗೊಂದಿ.
ರಾಜಾರಾಮ ಹೆಗಡೆ ಮತ್ತು ಅಶೋಕ ಶೆಟ್ಟರ್ (2001) : ಲೌಕಿಕ–ಅಲೌಕಿಕ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.
ರಾಜಶೇಖರ ಎಸ್, (1984) : ವಿಜಯನಗರ ಶಾಸನಗಳು, ಧಾರವಾಡ.
ಎಂ.ವಿ. ಕೃಷ್ಣರಾವ್ ಮತ್ತು ಕೇಶವಭಟ್ಟ : ಕರ್ನಾಟಕ ಇತಿಹಾಸದರ್ಶನ, ಬೆಂಗಳೂರು.
ಎಂ.ಎಂ. ಕಲಬುರ್ಗಿ: ಮಾರ್ಗ, ಸಂಪುಟಗಳು.
ಹೆಬ್ಬಾಲೆ ಕೆ. ನಾಗೇಶ (2012) : ಹಂಪಿ ಸಂಸ್ಕೃತಿ ಮತ್ತು ಮುಕ್ತ ಪರಿಸರ, ಕ.ವಿ.ವಿ. ಹಂಪಿ.
ಸುಂದರ ಅ.(ಸಂ): ಕನ್ನಡ ವಿಷಯ ವಿಶ್ವಕೋಶ (2009), ಇತಿಹಾಸ ಮತ್ತು ಪುರಾತತ್ವ, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು.
ಕೃಷ್ಣ ಕೋಲಾರ ಕುಲಕರ್ಣಿ : ವಿಜಯನಗರ ನಿರ್ಣಾಯಕ ಯುದ್ಧದಲ್ಲಿ ರಾಮರಾಯನನ್ನು ಕೊಂದವರು ಯಾರು?
ಕೃಷ್ಣಾಜೋಯಿಸ್ ಎಸ್.ಎನ್. (ಸಂ.) (1955) : ಪಂಪಾಸ್ಥಾನವರ್ಣಂ, ಶರಣ ಸಾಹಿತ್ಯ ಕಾರ್ಯಾಲಯ, ಬೆಂಗಳೂರು.
ಕಣ್ಣನ್ ಕೆ.ಎಸ್. (ಅನು) (2001) : ಅಹೋಬಲ ವಿರೂಪಾಕ್ಷ ವಸಂತೋತ್ಸವ ಚಂಪೂ, ಕ.ವಿ.ವಿ. ಹಂಪಿ.
ಗೋಪಾಲ ಆರ್. (ಸಂ.) : ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಉಡುಪಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಬಾಗಲಕೋಟ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ.
ಗೋಪಾಲರಾವ್ ಎಚ್.ಎಸ್. (2008) : ರಾಷ್ಟ್ರಕೂಟ ಶಿಲ್ಪಕಲೆ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.
ತಿಪ್ಪೇರುದ್ರಸ್ವಾಮಿ (1969) : ವಚನಗಳಲ್ಲಿ ವೀರಶೈವ ಧರ್ಮ, ಮೈಸೂರು.
ಚಂದ್ರಶೇಖರ ನಾರಣಾಪುರ : ಕರ್ನಾಟಕದ ವೀರಶೈವ ಮಠಗಳು.
ಚೆಲುವರಾಜು (2002) : ಹಂಪಿಯ ಸ್ಮಾರಕಗಳಲ್ಲಿ ಜನಪದೀಯ ಅಂಶಗಳು, ಕ.ವಿ.ವಿ. ಹಂಪಿ.
ದೇಸಾಯಿ ಪಿ.ಬಿ. (1936) : ವಿಜಯನಗರ ಸಾಮ್ರಾಜ್ಯ.
ಪಿ.ಬಿ. ದೇಸಾಯಿ : ವಿಜಯನಗರ ಸಂಗಮರು.

ದೇವರಕೊಂಡಾರೆಡ್ಡಿ (2006) : ಹಂಪಿ ಸಂಪುಟ : ಕಲೆ, ಕ್ರೀಡೆ ಮತ್ತು ಕೌಶಲ್ಯ, ಕ.ವಿ.ವಿ. ಹಂಪಿ.
ಷಡಕ್ಷರಯ್ಯ ಆರ್. ಎಂ. : ದಕ್ಷಿಣ ಭಾರತದ ಚರಿತ್ರೆ (ಕ್ರಿ.ಶ. 1336 ರ ವರೆಗೆ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಷಡಕ್ಷರಯ್ಯ ಆರ್. ಎಂ. : ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ
ಷಡಕ್ಷರಯ್ಯ ಆರ್. ಎಂ. : ಬಸವಕಲ್ಯಾಣದ ಸಂಸ್ಕೃತಿ ಮತ್ತು ಕಲೆ
ಷಡಕ್ಷರಯ್ಯ ಆರ್.ಎಂ., ಶ್ರೀಮತಿ ಸುಶೀಲಾ ಮತ್ತು ಎಸ್. ಕೆ. ಮೇಲಕಾರ : ಕೋಟಿ ಶಿವಲಿಂಗಗಳ ಅಪರೂಪದ ತಾಣ : ಪುರ
ಪರಮ ಶಿವಮೂರ್ತಿ : ಕೃಷ್ಣದೇವರಾಯನ ಕಾಲದ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

Ph.D. Thesis

Hasabi C.S. 1997 : Puligere through the Ages upto 16th Century AD, based on inscription and temples. (Guide R.M. Shadakshariah)

Chandrashekhara Shastri (2002) : Vijayanagara Urbanity (Guide I.K. Pattar)

Hanumanth Rao BSL (1970) : Religion in Andhra (Guide G.S. Dikshit)

Kamat Jotsna (1972) : Studies in Social life in Karnataka (Guide G.S. Dikshit)

Chitnis K.N. (1965) : Government and Administration under the Keladi Rulers (Guide P.B. Desai)

Jayanti V.G. (1993) : Hampi : A Critical Study (Guide : A. Sundara)

S.R. Shetty (1989) : Banavasi Through the Ages (Guide : B.K. Gururaja Rao)

Shiviah Bhargavi (1972) : Krishnadevaraya (Guide : G.S. Dikshit)

Sri Rama Murthy (1973) : Studies in the Telugu Country During the Vijayanagara Period 1536-1550 (Guide : G.S. Dikshit)

Venkata Ratnam V. (1970) : Local Self Government in the Vijayanagara Empire (Guide : G.S. Dikshit)

Radhakrishna Murthy K (1981) : Economic Condition of Medieval Andhradesh AD 100 – AD 1500 (Guide : K.R. Basavaraj)

A.K.Sastry, Tonnemane (1976) : History of Sringeri (Guide : G.S. Dikshit)

Satyanathan R.S. (1978) : Achyuta Raya (Guide : K.R. Basavaraj)

Shettar S. (1968) : Sravanabelgola Monuments (Guide : G.S. Dikshit)

M.T. Kamble (1993) : Vijayanagara Temples : A Study (Guide S. Rajashekhar)

Kulkarni Anand J (2002) : Talikote Yuddha : Ondu Adhyayana (Guide : M.T. Kamble)

Kivadanavar Jagadish (2000) : Festivals in Vijayanagara Empire (Guide I.K. Pattar)

Lalitamba K (1975) : Virasaivism in Andhra (Guide : P.B. Desai)

C.S. Patil 1989 : Medieval Temples of Raichur and Bellari Region : A Study : (Guide : S.L. Shantakumari)

Vasant Madhav, 1976 : Political History of Kanara. (Guide : S.H. Ritti)

Srinivasan S. 1981 : Study of the History of Tirrukoyilur Down to AD 1600 (Guide : S.H. Ritti)

Nagaraj H.N. (1991) : Devaraya II and his Times, Ph.D. Thesis, University of Mysore.

ಭಟ್, (2002) : ಕರಾವಳಿ ಕರ್ನಾಟಕದ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳು: ಒಂದು ಸಾಂಸ್ಕೃತಿಕ ಅಧ್ಯಯನ (ಮಾರ್ಗದರ್ಶಕರು : ಶ್ರೀನಿವಾಸ ಪಾಡಿಗಾರ)

ಬಿರಾದಾರ ಎಸ್.ಟಿ. (2002) : ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆಯಲ್ಲಿ ಹಂಡೆಪಾಳೆಯಗಾರರ ವಾಸ್ತುಶಿಲ್ಪಕಲೆ (ಮಾರ್ಗದರ್ಶಕರು : ಎಚ್.ಆರ್. ರಘುನಾಥಭಟ್)

ಭೈರಾಪುರ ಆನಂದ (2007) : ರಾಯಲಸೀಮೆಯ ವಿಜಯನಗರ ದೇವಾಲಯಗಳ ವಾಸ್ತು ಶಿಲ್ಪಗಳು ಒಂದು ಅಧ್ಯಯನ (ಮಾರ್ಗದರ್ಶಕರು ಐ.ಕೆ. ಪತ್ತಾರ)

ದೊಡ್ಡಮನಿ ಗಂಗಾಧರ ಎಂ. (2002) : ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಪ್ರಮುಖ ರಾಜಧಾನಿ ಪಟ್ಟಣಗಳು : ಒಂದು ಅಧ್ಯಯನ (ಮಾರ್ಗದರ್ಶಕರು ಐ.ಕೆ. ಪತ್ತಾರ)

ನಾಗರಾಜಪ್ಪ ಎಸ್. (2016) : ಹಂಪಿ ಪರಿಸರದ ಲೌಖಿಕ ಶಿಲ್ಪಗಳು, ಹಂಪಿ ವಿಶ್ವವಿದ್ಯಾಲಯ, (ಮಾರ್ಗದರ್ಶಕರು : ಡಾ. ಸಿ.ಎಸ್. ವಾಸುದೇವನ್)

ಹೇಮಾವತಿ ಮೆಣಸಗಿ (2016) : ಹಂಪಿ ಪರಿಸರದ ಶೈವ ಶಿಲ್ಪಗಳು, ಕ.ವಿ.ವಿ. ಹಂಪಿ, (ಮಾರ್ಗದರ್ಶಕರು : ಡಾ. ಸಿ.ಎಸ್. ವಾಸುದೇವನ್)

ರಾಯಚೂರು ದೋಬ್ ಪ್ರದೇಶ ಅಧಿಕಾರ ಮತ್ತು ಹೋರಾಟ, ಕ.ವಿ.ವಿ. ಹಂಪಿ. (ಮಾರ್ಗದರ್ಶಕರು ವಿಜಯಾ ಪೂಣಚ್ಚ)

ಐಯ್ಯಳಿ ಯರಿಸ್ವಾಮಿ : ಹೊಸಪೇಟೆ ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನ, (ಮಾರ್ಗದರ್ಶಕರು ಗೋವಿಂದರಾಜ ಸಿ.ಆರ್.)

ವೀಣಾ ಎನ್. (2017) : ವಿಜಯನಗರ ಕಾಲದ ವಸ್ತ್ರ ಮತ್ತು ಆಭರಣಗಳು (ಮಾರ್ಗದರ್ಶಕರು ಎಸ್.ವೈ. ಸೋಮಶೇಖರ)

ವೀರೇಶ ಎನ್.ಎಸ್. (2011) : ಶಾಸನ ಮತ್ತು ಕನ್ನಡ ಕೃತಿಗಳಲ್ಲಿ ಹಂಪಿ ಪರಿಸರದ ವೀರಶೈವ ಧರ್ಮ.

ಶಿವಲೀಲಾ ಕೆ. (2008) : ಕಮಲಾಪುರ : ಒಂದು ಸಾಂಸ್ಕೃತಿಕ ಅಧ್ಯಯನ.

ಮಹೇಶ ಕೆ. (2003) : ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು.

M.Phil. Dissertation

ನಾಝಿಯಾ ಬಾಜಿ (2006) : ಹಂಪಿ ಪರಿಸರದಲ್ಲಿ ಕಂಡುಬರುವ ವಿಜಯನಗರ ಕಾಲದ ಇಂಡೋ–ಇಸ್ಲಾಮಿಕ್ ಶೈಲಿಯ ಸ್ಮಾರಕಗಳು, ಕ.ವಿ.ವಿ. ಹಂಪಿ.

ಮಠದ ಬಸವರಾಜಯ್ಯ (1995) : ವಿಜಯನಗರ ಕಾಲದ ಸಮಾಜದ ಕೆಲವು ಅನಿಷ್ಠ ಪದ್ಧತಿಗಳು, ಕ.ವಿ.ವಿ. ಹಂಪಿ.

ಶಾರದಾ ಪಾಟೀಲ (2008) : ಹಂಪಿಯ ವಿರೂಪಾಕ್ಷ, ಸಾಂಸ್ಕೃತಿಕ ಅಧ್ಯಯನ, ಕ.ವಿ.ವಿ. ಹಂಪಿ.

ಶಿವಲೀಲಾ ಕೆ. (2004) : ಕಮಲಾಪುರದ ಶಾಸನಗಳು ಮತ್ತು ದೇವಾಲಯಗಳು, ಕ.ವಿ.ವಿ. ಹಂಪಿ.

ಸಾವಿತ್ರಿಬಾಯಿ ಪವಾರ (2006) : ಭಾಷಾಂತರ ಕೃತಿಗಳಲ್ಲಿ ವಿಜಯನಗರ ಒಂದು ಅಧ್ಯಯನ, ಕ.ವಿ.ವಿ. ಹಂಪಿ.

ತ್ರಿವೇಣಿ (2010) : ವಿಜಯನಗರ ಕಾಲದ ಮಹಿಳೆ ಕೊಡುಗೆಗಳು, ಕ.ವಿ.ವಿ. ಹಂಪಿ.

ಶಾಸನ ಸಂಪುಟಗಳು :

MAR 1924-25.

S.H. Ritti (Ed) : Kannada Inscriptions of Vijayanagara (3 Volumes) (ICHR)

S.H. Ritti (Ed) (2016) : Inscriptions of Vijayanagara Rulers (Sanskrit Inscriptions), ICHR, New Delhi.

Parabrahma Shastri : Telugu Inscriptions of Vijayanagar (ICHR)

Subbarayalu : Tamil Inscriptions of Vijayanagar (ICHR)

Vijayanagara Inscriptions, Directorate of Archaeology and Museums, Mysore

ಹಂಪಿ ವಿಶ್ವವಿದ್ಯಾಲಯ ಶಾಸನ ಸಂಪುಟಗಳು, ಬಳ್ಳಾರಿ (1), ಹಂಪಿ (3).

ಇ.ಸಿ. 1–13, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

1. ಸದಾಶಿವರಾಯನ ಕಂಚಿಕೆರೆಯ ಅಪ್ರಕಟಿತ ಶಿಲಾಶಾಸನ

- ಡಾ. ನಾಗರಾಜಪ್ಪ ಎಸ್.

ವಿಜಯನಗರ ಸಾಮ್ರಾಜ್ಯವನ್ನಾಳಿದ ತುಳುವ ವಂಶದ ದೊರೆ ಸದಾಶಿವರಾಯನ ಕಾಲದ ಅಪ್ರಕಟಿತ ಶಾಸನವೊಂದು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿರುವ ಕಂಚಿಕೆರೆ ಗ್ರಾಮದಲ್ಲಿ ಇತ್ತೀಚೆಗೆ ಬೆಳಕಿಗೆ ಬಂದಿದೆ. ಈ ಗ್ರಾಮದ ಕೆರೆಯ ಮುಂಬದಿಯಲ್ಲಿರುವ ಪಾಳುಬಿದ್ದ ಈಶ್ವರ ದೇವಾಲಯದ ಮುಂಬದಿಯಲ್ಲಿ ಪ್ರಸ್ತುತ ಶಿಲಾಶಾಸನವನ್ನು ನಿಲ್ಲಿಸಲಾಗಿದೆ.[1]

ಕಣಶಿಲೆಯ ಶಿಲಾಫಲಕವೊಂದರ ಮೇಲೆ ಕೊರೆಯಲ್ಪಟ್ಟಿರುವ ಈ ತ್ರುಟಿತ ಶಿಲಾಶಾಸನದಲ್ಲಿ ಒಟ್ಟು 16 ಸಾಲುಗಳಿವೆ. ಇದರ ಲಿಪಿ ಮತ್ತು ಭಾಷೆ ಕನ್ನಡ. ವಿಜಯನಗರ ಕಾಲದ ಬೇರೆ ಶಾಸನಗಳಿಗೆ ಹೋಲಿಸಿದರೆ ಅಕ್ಷರಗಳು ಗಾತ್ರದಲ್ಲಿ ಚಿಕ್ಕವಾಗಿದ್ದರೂ, ಸಮಾನತೆಯನ್ನು ಕಾಯ್ದುಕೊಳ್ಳಲಾಗಿದೆ ಹಾಗೂ ಅಕ್ಷರಗಳನ್ನು ತೀರಾ ಒತ್ತಾಗಿ ಕೆತ್ತಲಾಗಿದೆ. ತೆಱಗೆ, ನಾಯಿಂದಱಗೆ ಎಂಬ ಪದಗಳ ಬಳಕೆಯಲ್ಲಿ ಶಟಕರೇಫ ಱ ಅಕ್ಷರವನ್ನು ಬಳಸಲಾಗಿದೆ. ಒತ್ತಕ್ಷರಗಳ ಬಳಕೆಯು ಸಹ ಹಲವು ಪದಗಳಲ್ಲಿ ಇಲ್ಲದಿರುವುದನ್ನು ಕಾಣಬಹುದು.

ಶಾಸನದಲ್ಲಿ ಉಲ್ಲೇಖವಾಗಿರುವ ಭಾಷೆಯ ಬಗ್ಗೆ ಎರಡು ಮಾತುಗಳನ್ನು ಹೇಳುವುದು ಉತ್ತಮ. ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟಿರುವ ಶಾಸನದಲ್ಲಿ ಪ್ರೌಢ ಭಾಷೆಯನ್ನು ಬಳಸದೆ ಶ್ರೀಸಾಮಾನ್ಯನಿಗೂ ಅರ್ಥವಾಗುವಂತೆ ಬರೆದಿರುವುದನ್ನು ಕಾಣಬಹುದು. ಶಾಸನದ ಕೆತ್ತನೆ ಮತ್ತು ಬಹುಶಃ ಶಾಸನ ಸಂಯೋಜನೆಯ ವ್ಯತ್ಯಾಸದಿಂದ ಅನೇಕ ಭಾಗಗಳಲ್ಲಿ ಕಾಗುಣಿತ ದೋಷಗಳು ಕಂಡುಬರುತ್ತವೆ. ಅವುಗಳಲ್ಲಿ ಶಾಂಭವೇ-ಶಂಭವೇ, ಸಿಂಹ್ವಾಸನರೂಡನಾಗಿ- ಸಿಂಹಾಸನರೂಢನಾಗಿ, ಪ್ರುಥ್ವಿರಾಜ್ಯಂಗೆಯುತ್ತಮಿರಲು - ಪೃಥ್ವಿರಾಜ್ಯಂಗೆಯ್ಯುತ್ತಮಿರಲು, ಆವನ-ಅವನ, ಇತ್ಯಾದಿ ಕೆಲವು ಪದಗಳನ್ನು ಇಲ್ಲಿ ಸೋದಾಹರಣೆಯಾಗಿ ನೀಡಬಹುದು. ಶಿಲಾಫಲಕದ ಕೆಲವೆಡೆ ಚಕ್ಕೆಗಳು ಸಹ ಎದ್ದಿರುವುದರಿಂದ ಶಾಸನದ ಸಂಪೂರ್ಣ ಪಾಠವನ್ನು ಒದಗಿಸುವುದು ಕಷ್ಟಸಾಧ್ಯ. ಹಾಗಾಗಿ, ಲಭ್ಯವಿರುವ ಶಾಸನದ ಪಾಠವು ಈ ಕೆಳಗಿನಂತಿದೆ.

ಶಾಸನದ ಪಾಠ

1. . . . . .ನಮ[ಃ*] ಸರ . . . . .
2. ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈ[ಲೋಕ್ಯ] . . .
3. ರಂಭ ಮೂಲಸ್ತಂಭಾಯ ಶಾ(ಶ)[ಂಭವೇ][?*] ಸ್ವಸ್ತಿಶ್ರೀ [ಜಯಾ]
4. ಭ್ಯುದಯ ಶಾಲಿವಾಹನ ಶಕವರು[ಷ] . . . . . ಯ
5. ಕೀಲಕ ಸಂವತ್ಸರದ ಜೇಷ್ಟ ಶು 15 ಮಂಗಳವಾರದಲು ಶ್ರೀ[ಮಹಾರಾಜಾ]
6. ಧಿರಾಜ ರಾಜಪರಮೇಶ್ವರ ಶ್ರೀವೀರಪ್ರತಾಪ ವೀರಸದಾಶಿವರಾಯ ಮಹಾರಾಯರು

7. ಸುಖಸಂಕಥಾವಿನೋದ[ದಿಂದ*] ವೀರರತ್ನ ಸಿಂಹ್ಹಾಸನರೂಡನಾಗಿ ಪ್ರುಥ್ವಿರಾಜ್ಯಂಗೆಯು
8. ತ್ತಮಿರಲು ತದರಂತರ ರಾಯರು ಮದಾನೊಂದು ದಿವಸದಲು ಶ್ರೀ
9. ಮಧಿಜಾಮುನಖಾನಾಯನವರನು ರಾಯರು ನಂಮ ಕೆಲಸವ ಮಾಡುವನಾ
10. ದ ಕೊಂಡೋಜನು ನಂಮ ಸೇ[ವೆ*]ಯೆನು ಮಾಡಿ ಮೆಚಿಸಿದಕೆ ನಾವು ಆವನ ಬೇಡಿಕೆಯೆಂದರೆ ನಾ
11. . . ಬಳಕೆಯಿಂದ ನಾಯಿಂದರಿಗೆ ತೆಜೆಗೆ ಬಿಟಿ ಬಿರಾಡೆಯೆನ. ಕೊಳಬೇಡಯೆಂದು ಬಿ
12. . . ನಾಲು ಆತಗೆ ಮೆಚಿ ಬಿಟೆವು ನೀನು ನಿಂನ ಹರಿಹರದ ಸೀಮೆಯೊಳಗೆ ನಾಯಿಂದ
13. ಜೆಗೆ ಬೆದಾಲಂದು ರಾಯರು ಮನಖಾನ ಅಯ್ಯನವರು ತೆಜೆಗೆ ಬಿಡಿಸಿದ ಮಹಾಥ
14. ರ್ಮದ ಕೆಲಸಕ್ಕೆ ಅವನಾನೊಬನು ಅಳುಪಿ ತೆಜೆಗೆಯ ಕೊಂದರೆ ಆ
15. ನ ಬಾಯಲಿ ಕತ್ತೆತುಣ್ಣಿ ಕಲ್ಲುಪ್ಪು ಕಳಿಮೊನೆಯ ಸೇವಿಸಿದು ಎಂದು
16. ಬರದ ಸಿಲಶಾಶಸನ ಮೀರಿಕೊಂದರೆ ನಾಯಿಂದರ ಮನ [?*]

ಪ್ರಸ್ತುತ ಶಾಸನವು ವಿಜಯನಗರ ಕಾಲದ ಇತರ ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡುಬರುವಂತಹ 'ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ' ಎಂಬ ಶೈವ ಶ್ಲೋಕ ಮತ್ತು ಇತರೆ ಭಕ್ತಿ ಸ್ತುತಿಗಳಿಂದ ಪ್ರಾರಂಭವಾಗುತ್ತದೆ. ತೇದಿಯ ಭಾಗ ಅಂದರೆ ಶಾಲಿವಾಹನ ಶಕವರ್ಷದ ಭಾಗ ತ್ರುಟಿತವಾಗಿದೆ. ಆದರೆ ಕೀಲಕ ಸಂವತ್ಸರ, ಜೇಷ್ಠ, ಶು 15 ಮಂಗಳವಾರದ ಉಲ್ಲೇಖವಿದ್ದು, ಸದಾಶಿವರಾಯ ಮಹಾರಾಯನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಕೀಲಕ ಸಂವತ್ಸರವು ಸದಾಶಿವರಾಯನ(ಕ್ರಿ.ಶ. 1543–1570) ಆಳ್ವಿಕೆಯ ಶಾಲಿವಾಹನ ಶಕವರ್ಷ 1470 ರಲ್ಲಿದ್ದು, ಇದು ಅವನ ಆಳ್ವಿಕೆಯ ಕ್ರಿ.ಶ. 1548 ಮೇ 22, ಮಂಗಳವಾರಕ್ಕೆ ಸರಿ ಹೊಂದುತ್ತದೆ.

ನಾಯಿಂದ ಕುಲದ ಕೊಂಡೋಜನು ಅರಸನ ಸೇವೆಯನ್ನು ಮಾಡಿ ಮೆಚ್ಚಿಸಿದ್ದರಿಂದ ಸಂತಸಗೊಂಡ ಅರಸನು ಅವನ ಬೇಡಿಕೆಯಂತೆ ಹರಿಹರದ ಸೀಮೆಯಲ್ಲಿನ ನಾಯಿಂದರ ಬೆದ್ದಲು ಭೂಮಿಯ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ರದ್ದುಗೊಳಿಸಿದನು ಮತ್ತು ಇದನ್ನು ಪಾಲಿಸುವಂತೆ ಹರಿಹರ ಸೀಮೆಯ ಮಧಿಜಾಮುನಖಾನನಿಗೆ ತಿಳಿಸಿದ ಸಂಗತಿ ಪ್ರಸ್ತುತ ಶಾಸನದಿಂದ ದೃಢಪಡುತ್ತದೆ. ಶಾಸನದ ಅಂತ್ಯದಲ್ಲಿ ಶಾಸನವನ್ನು ಹಾಳು ಮಾಡಿದವನು ಕಲ್ಲುಪ್ಪು ಕಳಿಮೊನೆಯನ್ನು ಸೇವಿಸಿದಂತಾಗಲಿ ಎಂಬ ಶಾಪಾಶಯ ವಾಕ್ಯವಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಅದರಲ್ಲಿಯೂ ವಿಶೇಷವಾಗಿ ಸದಾಶಿವರಾಯ ಮತ್ತು ಅವನ ಮಂತ್ರಿ ರಾಮರಾಯನ ಅವಧಿಯಲ್ಲಿ ನಾಯಿಂದ ಸಮುದಾಯಕ್ಕೆ ಕೆಲವು ವಿಶೇಷ ಸವಲತ್ತುಗಳನ್ನು ನೀಡಿದ್ದ ಸಂಗತಿ ಅವರ ಕಾಲದ ಕರ್ನಾಟಕದ ಕೆಲವು ಶಾಸನಗಳಿಂದ ತಿಳಿಯುತ್ತದೆ. ರಾಮರಾಯನು ನಾಯಿಂದರಿಗೆ ತೆರಿಗೆ ವಿನಾಯಿತಿಯನ್ನು ನೀಡುವುದರಲ್ಲಿ ಕೊಂಡೋಜ, ತಿಮ್ಮೋಜ ಮತ್ತು ಭದ್ರೋಜರು ಪ್ರಮುಖ ಪಾತ್ರ ವಹಿಸಿದ್ದರು. ರಾಮರಾಯನ ಗದ್ದವನ್ನು ಕ್ಷೌರ ಮಾಡುವ ಕೊಂಡೋಜನ ಕಲೆಗೆ ರಾಮರಾಯನು ಮನಸೋತಿದ್ದನು ಎಂಬ ಸಾಮಾನ್ಯ ಅಭಿಪ್ರಾಯವೊಂದು ಪ್ರಚಲಿತದಲ್ಲಿದೆ. ತೆಲುಗು ಕವಿ ರುದ್ರಯ್ಯನು ಅರಸನೊಡನೆ ನಡೆಸಿದ ಸಂದರ್ಶನದಲ್ಲಿ, ಅರಸ ಸದಾಶಿವರಾಯನು ನಾಯಿಂದರ ಮೇಲೆ ವಿಧಿಸಿದ್ದ ತೆರಿಗೆಯನ್ನು ರದ್ದುಮಾಡಿದ ಸಂಗತಿಯನ್ನು ಮತ್ತು ಇದಕ್ಕೆ ಕೊಂಡೋಜನೇ ಪ್ರೇರಕನೆಂದು ತನ್ನ ನಿರಂಕುಶೋಪಾಖ್ಯಾನಂಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ.[2] ಕವಿಯು ಸದಾಶಿವರಾಯನ ನೆಚ್ಚಿನ ಕ್ಷೌರಿಕ ಕೊಂಡೋಜನ ಪ್ರಭಾವದಿಂದ ಈ ಸಂದರ್ಶನವನ್ನು ನಡೆಸಿದ್ದನೆಂಬುದು ಈ ಕೃತಿಯಿಂದ ತಿಳಿಯುತ್ತದೆ. ಪ್ರಸ್ತುತ ಶಾಸನ ಉಲ್ಲೇಖಿಸುವ ಕೊಂಡೋಜ ಮತ್ತು ಸದಾಶಿವರಾಯ ಹಾಗೂ ರಾಮರಾಯನಿಗೆ ಉತ್ತಮ ಸೇವೆಯನ್ನು ಸಲ್ಲಿಸುವ ಮೂಲಕ ಅನೇಕ ಸವಲತ್ತುಗಳನ್ನು ಪಡೆದುಕೊಂಡಿದ್ದ ಕೊಂಡೋಜ ಇಬ್ಬರೂ ಒಬ್ಬರೇ ಆಗಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಹರಿಹರದ ಸೀಮೆಯಲ್ಲಿನ ನಾಯಿಂದರ ಬೆದ್ದಲು ಭೂಮಿಯ ಮೇಲಿನ ತೆರಿಗೆಯನ್ನು ರದ್ದುಪಡಿಸುವಂತೆ ಸದಾಶಿವರಾಯನು ನೀಡಿದ್ದ ಆದೇಶವನ್ನು ಮಧಿಜಾಮುನಖಾನನು ಪಾಲಿಸಿದ ಸಂಗತಿ ಶಾಸನದ ಅಧ್ಯಯನದಿಂದ ತಿಳಿಯುತ್ತದೆ. ಇವನ ಹೆಸರಿನ ಅವಲೋಕನದಿಂದ ಇವನೊಬ್ಬ ಮುಸಲ್ಮಾನನೆಂಬ ಸಂಗತಿ ವೇದ್ಯವಾಗುತ್ತದೆ. ಮುಸ್ಲಿಮರ ಹೆಸರುಗಳನ್ನು ಕನ್ನಡೀಕರಣಗೊಳಿಸಿ ಬರೆಯುವ ಪದ್ಧತಿ ಪ್ರಚಲಿತದಲ್ಲಿದ್ದ ಸಂಗತಿಯು ವಿಜಯನಗರ ಕಾಲದ ಶಾಸನಗಳಿಂದ ತಿಳಿಯುತ್ತದೆ. ಹಾಗಾಗಿ ಮಧೀಜಾಮುನಖಾನ ಎನ್ನುವ ಹೆಸರು ಶ್ರೀಮತ್ ನಿಜಾಮ್‌ಖಾನ್ ಅಥವಾ ಇಜಮ್‌ಖಾನ್ ಎಂಬ ಹೆಸರಿನ ಕನ್ನಡ ರೂಪವಾಗಿದ್ದಿರಬಹುದು. ಈತ ಬಹುಶಃ ಹರಿಹರ ಸೀಮೆಯ ಆಡಳಿತವನ್ನು ಪಾಲಿಸುತ್ತಿದ್ದ ಒಬ್ಬ ಅಧಿಕಾರಿಯಾಗಿದ್ದಿರಬಹುದು. ಪ್ರಸ್ತುತ ಕಂಚಿಕೆರೆಯ ಶಾಸನದಲ್ಲಿ ಇವನ ಕುರಿತ ಮೊದಲ ಉಲ್ಲೇಖ ದೊರೆತಿರುವುದು ಗಮನೀಯ ಸಂಗತಿ.

ವಿಜಯನಗರ ಕಾಲದಲ್ಲಿ ಮುಸಲ್ಮಾನ ಸೈನಿಕರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳುವ ಪದ್ಧತಿ ಪ್ರಚಲಿತದಲ್ಲಿತ್ತು. ಈ ಪ್ರಕ್ರಿಯೆಗೆ ಮೊದಲು ಚಾಲನೆ ನೀಡಿದವನು ಇಮ್ಮಡಿ ದೇವರಾಯ. ಇವನು 10,000 ಜನ ಅಶ್ವಾಳುಗಳನ್ನು ತನ್ನ ಸೇನೆಯಲ್ಲಿ ಸೇರಿಸಿಕೊಂಡಿದ್ದ ಸಂಗತಿಯನ್ನು ಅವನ ಕ್ರಿ.ಶ. 1430ರ ಶಾಸನದಿಂದ ತಿಳಿಯುತ್ತದೆ.[3] ಅಲ್ಲದೆ, ಅನೇಕ ಬಿಲ್ಲುಗಾರರು ಸಹ ಇದ್ದರು. ಸೈನ್ಯವನ್ನು ಬಲಪಡಿಸುವುದ ಮತ್ತು ಉತ್ತಮ ಬಿಲ್ಲುಗಾರರ ಕೊರತೆಯನ್ನು ನೀಗಿಸುವುದು ಇದರ ಮುಖ್ಯ ಉದ್ದೇಶವಾಗಿತ್ತು. ಆದರೆ ಆಡಳಿತದಲ್ಲಿ ಅವರಿಗೆ ಮುಖ್ಯಸ್ಥಾನಗಳನ್ನು ನೀಡುತ್ತಿರಲಿಲ್ಲ. ಸದಾಶಿವರಾಯನ ಕಾಲದಲ್ಲಿ ಅವನ ಮಂತ್ರಿ ರಾಮರಾಯನು ಅನೇಕ ಮುಸಲ್ಮಾನರನ್ನು ಸೈನ್ಯಕ್ಕೆ ಸೇರಿಸಿಕೊಂಡನು. ಅವರಿಗೆ ನಾಗರೀಕ ಸೇವೆಯಲ್ಲಿ ಮಹತ್ವದ ಸ್ಥಾನಗಳನ್ನು ನೀಡಿ ಕೆಲವು ಸೀಮೆಗಳ ಆಡಳಿತವನ್ನು ನೋಡಿಕೊಳ್ಳಲು ನೇಮಿಸಲಾಗಿತ್ತು. ಕ್ರಿ.ಶ. 1546ರ ಅವುತುಗೊಂಡಹಳ್ಳಿ ಶಾಸನವು ಸದಾಶಿವರಾಯನ ಅಧೀನದಲ್ಲಿದ್ದ ತುಸ್ಯಂಬಕಾನ್ (ತುಷ್ಯಂಬ್ ಖಾನ್) ವಾಗರಸನಿಗೆ ದಾನ ನೀಡಲು ನಿರ್ದೇಶನ ನೀಡಿದ ಸಂಗತಿಯನ್ನು ತಿಳಿಸುತ್ತದೆ.[4] ಕ್ರಿ.ಶ. 1546ರ ಮಸಹಳ್ಳಿ ಶಾಸನವು ರುಸ್ತುಮ್‌ನಿಖಾನ್ ಒಡೆಯನು ಅರಸನ ಆಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದನೆಂದು ಹೇಳಿದೆ.[5] ಕ್ರಿ.ಶ. 1547ರ ಲಕ್ಷ್ಮೇಶ್ವರದ ತ್ರುಟಿತ ಶಾಸನವೊಂದು ತಿಮ್ಮೋಜನ ಮಕ್ಕಳಾದ ರಂಗೋಜ ತಿಮ್ಮೋಜ ಮತ್ತು ಭದ್ರೋಜರ ಕೋರಿಕೆಯಂತೆ ರಾಮರಾಯನು ಅರಸನಿಗೆ ಬಿನ್ನವಿಸಿಕೊಂಡು, ಅರಸನು ಸಾಮ್ರಾಜ್ಯದ ಎಲ್ಲ ದಿಕ್ಕುಗಳಲ್ಲಿನ ನಾಯಿಂದರ ತೆರಿಗೆಯನ್ನು ರದ್ದುಪಡಿಸಿದ. ಲಕ್ಷ್ಮೇಶ್ವರ ಸೀಮೆಯನ್ನು ಆಳುತ್ತಿದ್ದ . . .ಖಾನ್ ಎಂಬುವನು ಅರಸನ ಆಜ್ಞೆಯಂತೆ ಇದನ್ನು ಕಾರ್ಯಗತಗೊಳಿಸಿದ್ದನ್ನು ಈ ಶಾಸನವು ತಿಳಿಸುತ್ತದೆ.[6] ಕ್ರಿ.ಶ. 1551ರ ಸದಾಶಿವರಾಯನ ಶಾಸನವು ಅವನ ಅಧಿಕಾರಿಯಾಗಿದ್ದ ಐನನಮಲುಕ (ಐನ್–ಉಲ್–ಮುಲ್ಕ್) ಬೇವಿನಹಳ್ಳಿಯನ್ನು ಕೆಲವು ಬ್ರಾಹ್ಮಣರಿಗೆ ದಾನ ನೀಡಲು ರಾಮರಾಯನನ್ನು ಕೇಳಿಕೊಂಡಿದ್ದ.[7] ಇದೇ ಅವಧಿಯ ಕೋಟೀಶ್ವರ ಶಾಸನವು ಮುಸ್ಲಿಂ ಮುಖಂಡ ಯೆಕದಲಖಾನ (ಎಕ್–ದಿಲ್–ಖಾನ್) ಸದಾಶಿವರಾಯನಿಂದ ಬಾರಕೂರು ರಾಜ್ಯವನ್ನು ರಾಜ್ಯಪಾಲನಾಗಿ ನೇಮಕಗೊಂಡಿದ್ದ ಸಂಗತಿಯನ್ನು ತಿಳಿಸುತ್ತದೆ.[8] ಕ್ರಿ.ಶ. 1558–19ರ ಟಮಕದ ಶಾಸನವು ಸದಾಶಿವರಾಯನ ಮಹಾಮಂಡಲೇಶ್ವರ ರಾಮರಾಜಯ್ಯನ ಕಾರ್ಯಕರ್ತನಾದ ದಿಲುವರಖಾನನ (ದಿಲ್ವರ್‌ಖಾನ್) ಕಾರ್ಯಕರ್ತನೊಬ್ಬ (ಹೆಸರು ತ್ರುಟಿತವಾಗಿದೆ) ಕೋಳಾಲದ ಸೀಮೆಯಲ್ಲಿನ ಕೋಡಿರಾಮಸಮುದ್ರ ಗ್ರಾಮವನ್ನು ವೀರಯ್ಯ ಎನ್ನುವವರಿಗೆ ಭಟ್ಟಗ್ರಹಾರವನ್ನಾಗಿ ದಾನ ನೀಡಿದ್ದನ್ನು ತಿಳಿಸುತ್ತದೆ.[9] ಈ ಮೇಲಿನ ಶಾಸನಗಳ ಅವಲೋಕನದಿಂದ ಬಾರಕೂರು ರಾಜ್ಯ, ಲಕ್ಷ್ಮೇಶ್ವರ ಸೀಮೆ, ಕೊಳಾಲ ಸೀಮೆಗಳು ಮುಸಲ್ಮಾನ ಅಧಿಕಾರಿಗಳ ನಿರ್ವಹಣೆಯಲ್ಲಿದ್ದ ಅಂಶವು ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಶಾಸನದಲ್ಲಿ ಉಲ್ಲೇಖವಾಗಿರುವ ನಿಜಾಮ್‌ಖಾನ್ ಅಥವಾ ಇಜಮ್‌ಖಾನ್ ಸಹ ಹರಿಹರ ಸೀಮೆಯ ಒಬ್ಬ ಮುಖ್ಯ ಅಧಿಕಾರಿಯಾಗಿದ್ದು, ಅದರ ಉಸ್ತುವಾರಿ ನೋಕೊಳ್ಳುತ್ತಿದ್ದಿರಬಹುದು.

ನಾವಿದರು ತಮ್ಮ ವೃತ್ತಿ ತೆರಿಗೆಯ ಜೊತೆಗೆ ಕಾಣಿಕೆ, ಕಡ್ಡಾರ, ಬಿಡಾರ, ಕೊಟ್ಟಣ, ಅಕಾಲಚಕ್ರ, ಮದುವೆಸುಂಕ, ದೇವಿಪೊನ್ನುಗಳನ್ನು ಬಿಟ್ಟುದಾಗಿ ಶಾಸನಗಳು ತಿಳಿಸುತ್ತವೆ.[10] ಇಲ್ಲಿ ಕೊಂಡೋಜ ಮತ್ತು ಇತರರು ಒಂದು ಕುಟುಂಬದ ತೆರಿಗೆಯನ್ನು ಮಾತ್ರ ಮನ್ನ ಮಾಡಿಸದೆ, ಸಾಮ್ರಾಜ್ಯದಲ್ಲಿರುವ ಎಲ್ಲ ನಾಯಿಂದರ ವೃತ್ತಿ ತೆರಿಗೆಯ ಜೊತೆಗೆ ಇತರೆ ಕೆಲವು ತೆರಿಗೆಗಳನ್ನು ಮಾನ್ಯ ಮಾಡುವಷ್ಟರ ಮಟ್ಟಿಗೆ ಅರಸರ ಮೇಲೆ ಪ್ರಭಾವ ಬೀರಿದ್ದುದು ಗಮನೀಯ ಸಂಗತಿ. ಅರಸರು ಸಹ

ಜನಸಾಮಾನ್ಯರ ಮೇಲೆ ಹೊರೆಯಾಗುವಂತಹ ತೆರಿಗೆಗಳನ್ನು ಮಾನ್ಯ ಮಾಡಿ ಶ್ರೀಸಾಮಾನ್ಯನ ಮಾತಿಗೂ ಆದ್ಯತೆ ನೀಡಿರುವುದು ಗಮನಾರ್ಹ ಸಂಗತಿ ಎನ್ನಬಹುದು. ಸಮಾಜದ ಕೆಳಸ್ತರದ ಒಂದು ಸಮುದಾಯವು ದೊರೆತ ಸದಾವಕಾಶವನ್ನು ಬಳಸಿಕೊಂಡು ಅಂತಿಮವಾಗಿ ತಮ್ಮ ಸಮುದಾಯದ ಎಲ್ಲರ ತೆರಿಗೆಯನ್ನು ಬಿಡಿಸಿದ್ದು ವಿಜಯನಗರ ಸಾಮ್ರಾಜ್ಯದ ಸಾಮಾಜಿಕ ಇತಿಹಾಸದಲ್ಲಿನ ಮುಖ್ಯ ಸಂಗತಿ ಎನ್ನಬಹುದು. ಒಟ್ಟಾರೆಯಾಗಿ ಸದಾಶಿವರಾಯ ಮತ್ತು ಅವನ ಮಂತ್ರಿ ರಾಮರಾಯನಿಂದ ನಾಯಿಂದರ ವೃತ್ತಿ ತೆರಿಗೆ ಸಹಿತ ಅನೇಕ ಬಗೆಯ ತೆರಿಗೆಗಳಿಂದ ವಿನಾಯಿತಿ ಪಡೆದಿದ್ದರು. ಶ್ರೀಮಂತನಿಂದ ಸಾಮಾನ್ಯನವರೆಗೆ ಸಮಾಜದ ಎಲ್ಲ ವರ್ಗದವರಿಗೂ ಇವರ ಸೇವೆ ಅಗತ್ಯವಾಗಿತ್ತು. ಸಮಾಜದ ಅತ್ಯಂತ ಕೆಳಸ್ತರದ ವ್ಯಕ್ತಿಗಳ ಮಾತಿಗೆ ಹೆಚ್ಚಿನ ಮಹತ್ವ ನೀಡಿ ತೆರಿಗೆ ವಿನಾಯಿತಿ ನೀಡಿದ್ದು, ಅರಸರ ಉದಾರ ಗುಣಕ್ಕೆ ಹಿಡಿದ ಕೈಗನ್ನಡಿ ಎನ್ನಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಪ್ರಸ್ತುತ ದೇವಾಲಯದ ಬಳಿಯಲ್ಲಿದ್ದ ಒಟ್ಟು ಮೂರು ಶಾಸನಗಳಲ್ಲಿ 2 ಉಚ್ಚಂಗಿ ಪಾಂಡ್ಯರಿಗೆ ಮತ್ತು 1 ವಿಜಯನಗರ ಅರಸರಿಗೆ ಸಂಬಂಧಪಟ್ಟಿವೆ. ಉಚ್ಚಂಗಿ ಪಾಂಡ್ಯರ ಶಾಸನಗಳಲ್ಲಿ (ಪ್ರಸ್ತುತ ತುಮಕೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ವಿಭಾಗದ ವಸ್ತು ಸಂಗ್ರಹಾಲಯದಲ್ಲಿರುವ) ಒಂದು ಶಾಸನವನ್ನು ಡಾ.ಎಂ. ಕೊಟ್ರೇಶ್ ಅವರು ಪ್ರಕಟಿಸಿದ್ದಾರೆ. (ಡಾ.ಎಂ. ಕೊಟ್ರೇಶ್,2016, 'ತ್ರಿಭುವನಮಲ್ಲ ವಿಜಯಪಾಂಡ್ಯದೇವರ ಅಪ್ರಕಟಿತ ಶಾಸನ', ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ ಜಿ.ಕೆ. (ಸಂ.), **ಇತಿಹಾಸ ದರ್ಶನ** ಸಂಪುಟ–31, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ಪು.81–83). ದೇವಾಲಯದ ಬಳಿಯಲ್ಲಿರುವ ಇನ್ನೊಂದು ಭಗ್ನ ಶಾಸನವನ್ನು ಕೆ.ಎಂ. ರಾಘವೇಂದ್ರಾಚಾರ್ ಪ್ರಕಟಿಸಿದ್ದಾರೆ (ರಾಘವೇಂದ್ರಾಚಾರಿ ಕೆ.ಎಂ., 2017, 'ಕಂಚಿಕೆರೆಯಲ್ಲಿ ದೊರೆತ ಉಚ್ಚಂಗಿ ಪಾಂಡ್ಯರ ಅಪ್ರಕಟಿತ ಶಾಸನ', ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ ಜಿ.ಕೆ. (ಸಂ.), **ಇತಿಹಾಸ ದರ್ಶನ** ಸಂಪುಟ–32, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ಪು.61–63). ವಿಜಯನಗರದ ಅರಸರ ಅಪ್ರಕಟಿತ ಶಾಸನವನ್ನು ಈ ಲೇಖನದ ಮೂಲಕ ಪ್ರಕಟಿಸುತ್ತಿದ್ದೇನೆ. 2011ರಲ್ಲಿಯೇ ಪ್ರತಿ ಮಾಡಲಾದ ಈ ಶಾಸನಗಳನ್ನು ನನ್ನ ಗಮನಕ್ಕೆ ತಂದ ದಾವಣಗೆರೆಯ ಸಂಶೋಧಕರಾದ ಶ್ರೀ ಬುರುಡೆಕಟ್ಟೆ ಮಂಜಣ್ಣ ಮತ್ತು ಶ್ರೀ ರಾಘವೇಂದ್ರಾಚಾರಿ ಅವರಿಗೆ ಅನಂತ ಧನ್ಯವಾದಗಳು. ಇವುಗಳನ್ನು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಶಾಸನಶಾಸ್ತ್ರ ವಿಭಾಗದ 2011–12ನೆಯ ಸಾಲಿನ ವಾರ್ಷಿಕ ವರದಿಯಲ್ಲಿ ಪ್ರಕಟಿಸಲಾಗುವುದು.
2. Mahalingam T.V., 1940, Administration and Social Life under Vijayanagara, University of Madras, Madras, pp. 429
3. Epigraphia Carnatica, Vol. 6 (Revised edition), Srirangapattana-25 and Nagaraju H.M., Devaraya II and His Times, Prasaranga, University of Mysore, Mysore, pp. 48
4. Srinivasa Ritti, Gopal B.R.(ed.), Inscriptions of the Vijayanagara Rulers, Vol.II No.654
5. Ibid., No. 652
6. Ibid., No. 679
7. Ibid., lxxxi
8. Ibid., No. 719
9. Ibid., No. 807
10. ಶ್ರೀನಿವಾಸ ಪಾಡಿಗಾರ, 1998, 'ನಾವಿದ ಕಲೆಗೊಂದು ಸಂಮಾನ', ಶಿವಶಂಕರ್ ಎಂ.ಎಲ್., ಚನ್ನಬಸಪ್ಪ ಎಸ್. ಪಾಟೀಲ (ಸಂ.), **ವಿಜಯನಗರ ಅಧ್ಯಯನ**, ಸಂ. 3, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು.76–81

❑

2. ಒಂದನೆಯ ದೇವರಾಯನ ಕಲ್ಲುಕೊಪ್ಪ ಗ್ರಾಮದ ಹೊಸ ಶಾಸನ

– ಆರ್.ವಿ. ಅನಿಲ್ ಕುಮಾರ್

ಕಲ್ಲುಕೊಪ್ಪ ಗ್ರಾಮವು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕಂಡು ಬರುವ ಕುಗ್ರಾಮ. ಈ ಗ್ರಾಮವು ತೀರ್ಥಹಳ್ಳಿ ತಾಲ್ಲೂಕಿನಿಂದ ಸರಿಸುಮಾರು 30 ಕಿ.ಮೀ. ದೂರದಲ್ಲಿದ್ದು ಮಲೆನಾಡಿನ ಸೊಬಗನ್ನು ಎತ್ತಿ ಹಿಡಿಯುವಂತೆ ತೋರುತ್ತದೆ. ತೀರ್ಥಹಳ್ಳಿ ತಾಲ್ಲೂಕಿನ ಇತಿಹಾಸವು ಪ್ರಾಗೈತಿಹಾಸಿಕ ಕಾಲದಿಂದ, ಮೈಸೂರು ಒಡೆಯರ ಕಾಲದವರೆಗೂ ಇದರ ಐತಿಹಾಸಿಕ ಬೆಳವಣಿಗೆಯನ್ನು ಕಾಣಬಹುದು.

ಪ್ರಸ್ತುತ ಶಾಸನವು ತ್ರುಟಿತವಾಗಿದ್ದು, ಮೂಲತಃವಾಗಿ ಕಲ್ಲುಕೊಪ್ಪ ಗ್ರಾಮದಿಂದ ದಕ್ಷಿಣಕ್ಕೆ ಸರಿಸುಮಾರು 2 ಕಿ.ಮೀ ದೂರ ಕಾಡಿನಲ್ಲಿರುವ ಪಾಳು ದೇವಸ್ಥಾನದ ಮುಂಭಾಗ ಮಣ್ಣಿನಲ್ಲಿ ಹುದುಗಿತ್ತು.(ದಿನಾಂಕ 20.03.2015ರ ವಿಜಯ ಕರ್ನಾಟಕ ದಿನಪತ್ರಿಕೆ ಪುಟ 7ರಲ್ಲಿ ಈ ವಿವರ ಪ್ರಕಟವಾಗಿದೆ). ಪ್ರಸ್ತುತ ಶಾಸನವನ್ನು ಕಲ್ಲುಕೊಪ್ಪ ಗ್ರಾಮದಲ್ಲಿ ವಾಸವಿರುವ ಎಂ.ಎ. ಪ್ರಭಾಕರ್‌ರವರ ಮನೆಯ ಮುಂಭಾಗದಲ್ಲಿ ಇರಿಸಲಾಗಿದೆ.

ವಿಜಯನಗರ ಕಾಲಘಟ್ಟಕ್ಕೆ ಸೇರುವ ಈ ಶಾಸನವು ಒಂದನೆಯ ದೇವರಾಯನ ಅವಧಿಯ ಶಾಸನವಾಗಿದೆ. ಶಾಸನವು 5 ಅಡಿ ಎತ್ತರ, 2.5 ಅಡಿ ಅಗಲ, 1.5 ಅಡಿಯಷ್ಟು ದಪ್ಪವಿದೆ. ಶಾಸನದ ಮೇಲ್ಭಾಗದಲ್ಲಿ ಸುಂದರವಾದ ಶಿಲ್ಪ ಕಂಡರಿಸಲಾಗಿದ್ದು, ಮಧ್ಯಭಾಗದಲ್ಲಿ ವಾಮನ, ಬಲಭಾಗದಲ್ಲಿ ಸೂರ್ಯ, ಎಡಭಾಗದಲ್ಲಿ ಕರುವಿಗೆ ಹಾಲುಣಿಸುತ್ತಿರುವ ಆಕಳು ಮತ್ತು ಇದರ ಮೇಲೆ ಚಂದ್ರನ ಚಿತ್ರವನ್ನು ಕೆತ್ತಿರುವುದು. ಶಾಸನದ ಶ್ಲೋಕ ಭಾಗವು ಶಿವನನ್ನು ಸ್ತುತಿಸಿದರೆ, ಶಿಲ್ಪಪಟ್ಟಿಕೆಯಲ್ಲಿ ವಾಮನಶಿಲ್ಪ ಮೂಡಿರುವುದು ವಿಶೇಷವಾಗಿ ಕಂಡುಬಂದಿದೆ.

ಕನ್ನಡ ಭಾಷೆ ಮತ್ತು ಲಿಪಿಯಲ್ಲಿ ಕೆತ್ತಲ್ಪಟ್ಟಿರುವ ಈ ಶಾಸನವು 41 ಸಾಲುಗಳನ್ನೊಳಗೊಂಡಿದೆ. ಅಕ್ಷರಗಳು ಆಕಾರದಲ್ಲಿ ತೀರ ಸಣ್ಣದ್ದಾಗಿ ಕಂಡು ಬಂದಿದ್ದು ಪ್ರಾದೇಶಿಕ ಭಿನ್ನತೆಯನ್ನು ತೋರುತ್ತದೆ. ಶಾಸನದ ಪೂರ್ಣಪಾಠ ಈ ಕೆಳಗಿನಂತಿದೆ.

ಶಾಸನಪಾಠ

1 . . . . ಶುಭಮಸ್ತು ನಮಸ್ತುಂಗ ಶಿರ

2 ಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ (ಶಂಭವೆ)

3 ಸ್ವಸ್ತಿ ಶ್ರೀ ಜಯಾಭ್ಯು[ದ*]ಯ ಶಕವರುಷ 1342ನೆಯ ಸಂದು ವರ್ತಮಾನ ವಿಕಾರಿ ಸಂವಛರದ ಪಾಲ್ಗು–

4 ಣ ಸು 15 ಅಲೂ ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪದೇವರಾಯ ಮಹಾರಾ–

5 ಯರು ವಿಜಯನಗರದಲು ಸಕಲ ಮರ್ಯಾ(ದೆ)ಮವಂ (ಮ)ಂಗಳನು ಪ್ರತಿಪಾಲಿಸುತ ಸುಖಸಂಕಥಾ ವಿನೋದಧಿ ಸಾಂಬ್ರಾ

6 ಜ್ಯಗೆಯಿವಂತಂ ಯಿಧ(ಚೌ) . ದಲೂ ಆ ರಾಯರ ನಿರೂಪಧಿಂ ಮುಟ್ಟರಸ ವೊಡೆಯರು ಆರಗದ ರಾಜ್ಯದ ಸಕಲ ದಂಮಂ–

7 ವನು ಪ್ರತಿಪಾಲಿಸುತಂಯಿಹ ಕಾಲದಲೂ ಆಗರದ ತೋಪ್ಪಯರ ಕುಡುವತ್ತಿನಾಡ ಬಾಲ[ಹೆ*]ಗಡೆ, ಬಲಪಹೆಗಡೆ, (ಬೊ)ಂ–

8 ಮಂಣ ಹೆಗಡೆ, ಕಾಮಂಣ ಹೆಗಡೆ, ಬಯಿಬಂನಾ ಹೆಗಡೆ ವೊಳಗಾದ ಸಮಸ್ತ ನಾಡವರೂ ನಂಮ ಆಳಿಯಂದಿರು, ಮಕ್ಕಳು, ಹೆಂ–

9 ಡತಿಯರು ಸಹ ಸರ್ವನಮಸ್ಯವಾಗಿ ಯಜನ–ಯಾಜನ, ಅಧ್ಯಯನ, ಅಧ್ಯಾಪನ ದಾನ ಪತಿಗ್ರಹಷರ್ಯಾನಿಯತರು

10 ... (ಪತ) (ಕಾ) ಮಾದ್ಯಯಿಗ(ಳ)ಮಪ ಕಾಶ್ಯಪ ಗೋತ್ರದ ಅ.ತಿ(ನು)ಂವಿಯ ಮಲ್ಲಿನಾಥ ಭಟ್ಟರ ಮಕ್ಕಳು ಸೋವರಸರಿಗೆ ಕೊ–

11 ಟ್ಟ (ಮಾನ್ಸ) ಶಿಲಾಶಾಸನದ ಕ್ರಮವೆಂತೆಂದರೆ ನಂಮ ಕುಡುವತ್ತಿಯನಾಡ ವೊಳಗಣ ಕಾಗೆಮಿ ಜನಂಗಳ (ಗ್ರಾಮದ (ಉ–

12 ತ್ತರ) . . . . ಅಕ್ಷರ ಯಿಪತಯಿದು. ಯಗ ಭೂಮಿಯನು . . . . ರವ . ರಾಗ ಪುಂಣ್ಯ ಕಾ

13 . . . . ವಾಗಿ ದಾರೆಯ ನೆಱೆದು ಕೂಟದಾಗಿ ಆ ಭೂಮಿಯ ಚತುಸೀಮೆಯ ಭಾರಮಾಡಲೂ ಆಸಿವೂಗ

14 ನಟ್ಟ ವಾಮನಮುದ್ರೆಯ ಕಲ್ಲಿಂದ ಪಡುವೊಲು ತೆಂಕಲು ಆಸಿವೊಗ ನಟ್ಟ ವಾಮವಮುದ್ರೆಯ ಕಲ್ಲಿಂದ ಬಡಗಲು ಪಡವಲು ಆಸಿ–

15 ವೂಗ . . . . ಧಿಂದಂ ಮೂಡಲು ಬಡಗಲು ಆಸಿವೊಗ ನಟ್ಟ ವಾಮನಮುದ್ರೆಯ ಕಲ್ಲಿಂದ .

16 . . . . (ಬೊ)ರ(ದ) . ಂಮಂತೂಹುಣ(ಪ) ಬೇಪರ ಹಲಸು, ಮೆಣಸು (ಮ) .

17 . . . . ಅಕ್ಷಿಣಿ ಆಗಾಮಿ ಸಿದ್ದ ಸಾದ್ಯ ಆ(ಪ್ರೂವ) ತೇಜ ಸ್ವಾಮ್ಯ . .

18 . . . . . ಭೂಮಿಯ . . . ಸಲುತಾಗಿ ನಂಮನಾಡು ಸರ್ವ್ವನಮಸ್ಯವಾಗಿ ಆಣವಂಣಗಳಿಗೆ ಸಹಿರಂಣ್ಯೂದ

19 ಕವಾಗಿ . . . . ವಾಗಿ . . . . . (ಪುತ್ರ) . . . . ಂತ್ತ ದಾಯಾದ್ಸನುಮತ ಪ . . ಠವಾಗಿ (ಸೋಮಾ)ಪರಾಗ .

20 . . . . ಯಾಗಿ ಸರ್ವ್ವಮಾಂನ್ಯದ ಆ(ಪ್ರೂ)ರವಾಗಿ ದಾರೆಯನೆಱೆದು ಕೋಪವಾಗಿ ನ.

21 . . . . ಕಾ ಆ ಚಂದ್ರಾ . . . . . ನಕ್ಷತ್ರ ಆ ಭೂಮಿಗೆ ಬಂದ (ಆಕುಳಕೆ) (ಬಂದ) . . .

22 . . . ಮ . (ವ)ಂ . . . . ವಾಗಿ . . ಯ . . ಯ . ಂಬಳಿಹಾಂಮಾಱುಬಿಟ್ಟ ಬಿಡಾರ ಮೂದಲಾಗಿ ಯಾ

23 (ಬ)ಂದಂ . . . . ನಂಮ ಕುಡುವತ್ತಿಯನಾಡನು . ತೆಱುವ ಕಳದ(ಐ)ಲೆ ಹರಿದುಕೊಂಡು ಅಸೂ(ವ) ,

24 . . . . ಸರ್ವಮಾಂನ್ಸದ ಅ(ಪ್ಪೂ)ರವಾಗಿ ಆವರ ಸಂಥಾನ ಪಾರಂಪರೆಯಾಗಿ ಪಾಲಿ

25 . . . . ಯಿಂದೋ(ಡಂ) ಬಪ್ಪು ಕೊಟ್ಟ ಭೂದಾನ ಶಿಲಾಶಾಸನ ಪತ್ರ ಯಿಂತ್ತಪುದಕೆ(ತ)

26 . . . . ಗಳ ಮಕ್ಕಳು, ನರಹರಿಭಟ್ಟ ಅಯ್ಯಗಳು, ಮಯಿಲಾರ ಭಟ್ಟರು, ದೇವಂಣ ಭ–

27 ಟ್ಟ ಅಯ್ಯಗಳು, . ಮಂದಿ . ನರಹರಿಭಟ್ಟ ಅಯ್ಯಗಟಿ, ಕುಡುವತ್ತಿಯ ಗಲುರಂಣಗಳು, ಕಾಮರಸುರು, (ಸು). ಗೌಡ

28 .... . (ಮಲ್ಲ)ಂಣಗಳು, ದೇವಳಿಗೆಯನಾಡ ಹಕೊಪ್ಪೆಯ ತಂಮಂಣ ಹೆಗ್ಗಡೆ, ಕೋಟೆಯತನ ಬೊಂಮಂಣ ಹೆಗ–

29 ಡೆ . . . . . ಬೊಂಮಂಣ ಹೆಗ್ಗಡೆ (ಯಿಂ) . . . ವರು ಭಯಾಂನದಧಿಂ ನಾಡ ಸೇನಾಬೋವ ಚಂದಪನಬ .

30 . . ರು . . . . ಸುಷ . . . . ಅಶ್ವ . ರ ದೇವರು ಸಾಕ್ಷಿಗ(ಳು) . . . .

31 . . . . ಶ್ರೀ ಶಂಖರದೇವರು, ಶ್ರೀಭಯಿರವದೇವರು, ...

32 ..(ಬ)ನದೇವರು, ಬ್ರಂಹ್ಮದೇವರು ಶ್ರೀ ಭಯಿರವದೇವರು(॥) ಆದಿತ್ಯ ಚಂದ್ರನಳಾನಳಶ್ಚ ದೇವುಭೂಮಿ ರಾಪೋ ಹೃ

33 ದಯಂ ಯಮಶ್ಚ ಅಹಶ್ಚ ರಾತ್ರಿಶ್ಚ ಉಭೇಚ ಸಂಧ್ಯ ಧಶ [ಧರ್ಮಶ್ಚ*] ಜ್ನಾನಾತಿ ನರಸ್ಪವ್ರಿತ್ತಂ । ಸ್ವದತ್ತಂ ಪರದತ್ತಂ ವಾಯೋಹರೇತಿ

34 ವಸುಂನ್ದರ ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಟಯಾಂ ಜಾಯತೇ ಕ್ರಿಮಿ ॥ ಸ್ವದತ್ತಾ ದ್ವಿಗುಣಂ ಪುಂಣ್ಯಂ ಪರದತ್ತಾ–

35 ನು ಪಾಲನಂ ಪರದತ್ತಾಪಹಾರೇಣ ಸ್ವದತ್ತಂ ನಿಷ್ಪಲಂ ಭವೇತು । ದಾನ ಪಾಲನಯಾಂ . . . .

36 ದಾನ . . ಮವಾ . . . . ಂ ॥ ಆ ಕೊಟರು ಯಿಧರ್ಂಮ್ಮವನೂ . . . .

37 ಗಂಗಾ ತೀರದಲು . . . . ಯಲು ಸಹಸ್ರಮಂಧಿ ಬ್ರಾಂಹ್ಮರಿಗೆ ಸಹಸ್ರ ಕವಿಲೆ . . . . .

38 . . . . ದಾನ ಮಾಡಿದಲಿ ದೇವರ . . . ಸಹಸ್ರ ಕಂನ್ಯದಾನವ ಮಾಡಿದ ಪಲ . . . . .

39 . . . . ದ್ರ . . . . . ಗಂಗಾ ತೀರದ ಶ್ರೀ ವಿಶ್ವೇಶ್ವರ ದೆವರನು . . . . .

40 . . . . ವ . ಪಡಲು ಹೋಹರು . . . .

41 . . . . ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಶಾಸನದ ಕಾಲವು ಶಕವರುಷ 1342 ವಿಕಾರಿ ಸಂವತ್ಸರ, ಪಾಲ್ಗುಣ ಸು 15 ಎಂದಿದ್ದು ಇಂಡಿಯನ್ ಎಫಿಮರೀಸ್ ಪ್ರಕಾರ ಕ್ರಿ.ಶ. 1420 ಫೆಬ್ರವರಿ 29 ಗುರುವಾರಕ್ಕೆ ಸರಿ ಹೊಂದುತ್ತದೆ. ಲಭ್ಯ ಶಾಸನದಲ್ಲಿನ ವಿಕಾರಿ ಸಂವತ್ಸರವು ಶಕವರುಷ 1341ರಲ್ಲಿ ಕಂಡು ಬಂದಿದ್ದು, ಆದರೆ ಪಾಲ್ಗುಣ ಮಾಸವು ಸಂವತ್ಸರದ ಅಂತ್ಯಭಾಗದಲ್ಲಿ ಅಂದರೆ ಕ್ರಿ.ಶ. 1420 ಆರಂಭದಲ್ಲಿ ಕಂಡು ಬಂದಿರುವುದರಿಂದ ಕಾಲನಿರ್ಣಯದಲ್ಲಿನ ಯಾವುದೇ ತಪ್ಪಿಗೆ ಎಡೆಯಾಗುವುದಿಲ್ಲ.

ಶಾಸನವು ತಿಳಿಸುವಂತೆ ಒಂದನೆಯ ದೇವರಾಯನು ಕ್ರಿ.ಶ. 1420ರ ಅವಧಿಯಲ್ಲಿ ವಿಜಯನಗರವನ್ನು ಪ್ರತಿಪಾಲಿಸುತ್ತಿರುವ ಕಾಲದಲ್ಲಿ, ಅವರ ನಿರೂಪದಿಂದ ಪುಟ್ಟರಸ ವೊಡೆಯರು ಆರಗ ರಾಜ್ಯವನ್ನು ಆಳ್ವಿಕೆ ನಡೆಸುತ್ತಿದ್ದು, ಆರಗ ರಾಜ್ಯದಲ್ಲಿ ಕಂಡು ಬರುವ ಕುಡುವತ್ತಿ ನಾಡನ್ನು ತೊಪ್ಪಯರು ಆಳುವ ಕಾಲದಲ್ಲಿ, ಯಜನ–ಯಾಜನ, ಅಧ್ಯಯನ–ಅಧ್ಯಾಪನಕ್ಕೆ ಕಾಶ್ಯಪಗೋತ್ರದ ಮಲ್ಲಿನಾಥ ಭಟ್ಟರ ಮಗನಾದ ಸೋವರಸನಿಗೆ ಕುಡುವತ್ತಿನಾಡ ಬಾಲ [ಹೆ*]ಗಡೆ, ಬಲಪ ಹೆಗಡೆ, (ಬೊ)ಂಮಂಣ ಹೆಗಡೆ, ಕಾಮಂಣ ಹೆಗಡೆ, ಬಯಿಬಂಣ ಹೆಗಡೆ, ಅವರ ಅಳಿಯಂದಿರು, ಮಕ್ಕಳು, ಹೆಂಡತಿಯರು, ಸಮಸ್ತ ನಾಡವರೂ ಸೇರಿ ಭೂಮಿಯನ್ನು ದಾನವಾಗಿ ನೀಡಿರುವ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಮುಂದುವರಿದಂತೆ ಈ ಶಿಲಾಶಾಸನಕ್ಕೆ ನರಹರಿ ಭಟ್ಟ ಅಯ್ಯಗಳು, ಮಯಿಲಾರ ಭಟ್ಟರು, ದೇವಂಣ ಭಟ್ಟರು, ಇನ್ನೂ ಮುಂತಾದವರನ್ನೊಳಗೊಂಡಂತೆ ಶ್ರೀ ಶಂಖರದೇವರು, ಶ್ರೀ ಭಯಿರವದೇವರು, ಬ್ರಂಹ್ಮದೇವರುಗಳು ಹಲವರು ಸಾಕ್ಷಿಗಳು ಎಂದಿದೆ.

ಕ್ರಿ.ಶ. 1420ರ ಕಾಲಘಟ್ಟದ ಈ ಶಾಸನದಿಂದ ಬೆಳಕಿಗೆ ಬರುವ ಪ್ರಮುಖವಾದ ಅಂಶವೆಂದರೆ, ಪುಟ್ಟರಸ ವೊಡೆಯ ಆರಗದಲ್ಲಿ ಆಳ್ವಿಕೆ ನಡೆಸಿದ್ದು ಮತ್ತು ತೊಪ್ಪಯನು ಪುಟ್ಟರಸನ ಅಧೀನದಲ್ಲಿ ಕುಡುವತ್ತಿ ನಾಡನ್ನು ಪ್ರತಿಪಾಲಿಸುವಂತಹದು. ಪ್ರಕಟಿತ ಶಾಸನಗಳಲ್ಲಿ ಪುಟ್ಟರಸ ವೊಡೆಯ ಮತ್ತು ತೊಪ್ಪಯ ಹಾಗೂ ಅವನ ಕುಡುವತ್ತಿಯ ನಾಡಿನ ಬಗ್ಗೆ ವಿವರಗಳು ಕಂಡು ಬರದ ಕಾರಣ, ಮೊದಲ ಬಾರಿಗೆ ಪ್ರಸ್ತುತ ಶಾಸನದ ಮೂಲಕ ಇವರು, ಇವರ ಕಾಲ ಮತ್ತು ಪ್ರದೇಶದ ವಿವರಗಳು ಬೆಳಕಿಗೆ ಬಂದಿವೆ.


ಈ ಶಾಸನದಲ್ಲಿ ಕಂಡು ಬರುವ ಕೆಲವು ಹೆಗಡೆಗಳು ಮತ್ತು ಭಟ್ಟರುಗಳು ಕೂಡ ಪ್ರಸ್ತುತ ಶಾಸನದಿಂದ ಬೆಳಕಿಗೆ ಬಂದಿರುವುದು ಗಮನಾರ್ಹ ಸಂಗತಿ. ಇದರ ಜೊತೆಗೆ ನನ್ನ ಈ ಪ್ರದೇಶದ ಸರ್ವೇಕ್ಷಣೆಯಲ್ಲಿ ಒಂದನೆಯ ದೇವರಾಯನ ಮೂರು ಶಾಸನೋಕ್ತ ಮಾಸ್ತಿಕಲ್ಲುಗಳು ಸಾಗರ ತಾಲ್ಲೂಕಿನಲ್ಲಿ ದೊರಕಿದೆ.

ಪ್ರಸ್ತುತ ಶಾಸನವು ಪ್ರಾದೇಶಿಕ ಅಥವಾ ಸ್ಥಳೀಯ ಇತಿಹಾಸವನ್ನು ರಚಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ಜೊತೆಗೆ ಆರಗ ರಾಜ್ಯವನ್ನು ಪುಟ್ಟರಸ ವೊಡೆಯನು ಆಳುತ್ತಿದ್ದ ಮಾಹಿತಿಯನ್ನು ಮೊದಲ ಬಾರಿಗೆ ನೀಡುತ್ತಿರುವುದು ಗಮನೀಯ ಅಂಶ.

ಆಧಾರಸೂಚಿ :

1. **ಎಪಿಗ್ರಾಫಿಯ ಕರ್ನಾಟಿಕ ಸಂ. 15** (ಪರಿಷ್ಕೃತ ಆವೃತ್ತಿ) ಶಿವಮೊಗ್ಗ ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ವಿಶ್ವವಿದ್ಯಾನಿಲಯ, ಮೈಸೂರು–2009.
2. **ಎಪಿಗ್ರಾಫಿಯ ಕರ್ನಾಟಿಕ ಸಂ. 12** (ಪರಿಷ್ಕೃತ ಆವೃತ್ತಿ) ಚಿಕ್ಕಮಗಳೂರು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2003.
3. **ಎಪಿಗ್ರಾಫಿಯ ಕರ್ನಾಟಿಕ ಸಂ. 13** (ಪರಿಷ್ಕೃತ ಆವೃತ್ತಿ) ಶಿವಮೊಗ್ಗ ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2006.
4. Swamikannu Pillai., 1982, **Indian Ephimeries**, Vol.5, Agam Kala Prakashan, Delhi.
5. Gopal M.H.,1978, **The Histore of the Vijayanagar Empire**, Vol.1,Popular Prakashan. Bombay.
6. Desai.P.B.,1970, **A History of Karnataka**, Kannada research Institute, Karnataka university, Dharwar.
7. **Annual Report on Indian Epigraphy.**, 2015-16
8. **Annual Report on Indian Epigraphy.**, 2016-17

ಶಾಸನದ ಪಡಿಯಚ್ಚು ಮತ್ತು ಛಾಯಾಚಿತ್ರ





❑

3. ಬಾರಕೂರಿನ ಮಲ್ಲಿಕಾರ್ಜುನನ ಶಾಸನ

– ಡಾ. ಬಿ. ಜಗದೀಶ ಶೆಟ್ಟಿ

ಬಾರಕೂರು ಕರಾವಳಿ ಕರ್ನಾಟಕದ ವಿಜಯನಗರ ಕಾಲದ ಪ್ರಾಂತೀಯ ರಾಜಧಾನಿಯಾಗಿತ್ತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯೊಂದಿಗೆ ವಿಜಯನಗರ ಸ್ಥಾಪಕ ಅರಸರು ಬಾರಕೂರಿನ ವ್ಯಾಪಾರಿ ಮತ್ತು ರಕ್ಷಣಾತ್ಮಕ ಮಹತ್ವವನ್ನು ಮನಗಂಡು ತಮ್ಮ ಕೋಟೆಯನ್ನು ಸ್ಥಾಪಿಸಿ ಬಾರಕೂರನ್ನು "ಬಾರಕೂರು ತುಳು" ರಾಜ್ಯದ ರಾಜಧಾನಿಯನ್ನಾಗಿ ಮಾಡಿಕೊಂಡರು.

ಸಂಗಮ ವಂಶದ ಅರಸು ಇಮ್ಮಡಿ ದೇವರಾಯನ ಆಳ್ವಿಕೆ 1449ರವರೆಗೆ ಕರಾವಳಿ ಕರ್ನಾಟಕದಲ್ಲಿ ಮುಂದುವರಿದ ಉಲ್ಲೇಖವಿದ್ದರೂ[1] ಕ್ರಿ.ಶ.1447ರಿಂದಲೇ ಮಲ್ಲಿಕಾರ್ಜುನನ ಶಾಸನಗಳು ಬಾರಕೂರು ರಾಜ್ಯದಲ್ಲಿ ದೊರೆಯುತ್ತವೆ. ಇದಕ್ಕೆ ಮುಖ್ಯ ಕಾರಣ ಇಮ್ಮಡಿ ದೇವರಾಯನು ತನ್ನ ಕೊನೆಯ ದಿನಗಳಲ್ಲಿ ಅಸ್ವಸ್ಥನಾಗಿದ್ದು. ಅವನ ಆರೋಗ್ಯ ಉತ್ತಮವಾಗಬೇಕೆಂಬ ಕಾರಣದಿಂದ ವಿವಿಧ ದಾನ ನೀಡಿದ ಉಲ್ಲೇಖ ಬಾರಕೂರು ರಾಜ್ಯದ ಶಾಸನಗಳಲ್ಲಿ ಲಭ್ಯವಿದೆ.[2]

ಬಾರಕೂರು ವಿಜಯನಗರ ಆಡಳಿತ ಕಾಲಕ್ಕೆ ಆಡಳಿತ ಅನುಕೂಲಕ್ಕಾಗಿ ಅನೇಕ ಕೇರಿಗಳಾಗಿ ವಿಂಗಡಿಸಲ್ಪಟ್ಟಿದ್ದ ವಿವರವಿದೆ. ಅವುಗಳಲ್ಲಿ ಒಂದು ಕೋಟೆಕೇರಿ. ಈ ಕೋಟೆಕೇರಿಯ ಪ್ರಧಾನ ದೇವರು ಪಂಚಲಿಂಗೇಶ್ವರ. ಅದರ ಸಮೀಪ ಡಾ. ಬಿ. ವಸಂತಶೆಟ್ಟಿಯವರು ಸಂಶೋಧಿಸಿರುವ ದೇವರಾಯನ ಆಳ್ವಿಕೆಯ ಒಂದು ಶಾಸನ ಬಹಳ ಮುಖ್ಯವಾದ ದಾಖಲೆಯಾಗಿದ್ದು ಅದು ಅನೇಕ ಹೊಸ ವಿಷಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಶಾಸನದಲ್ಲಿ 21 ಸಾಲುಗಳಿವೆ. ಇದು ಶಕವರ್ಷ 1381ನೆಯ ಶಾಸನ (ಕ್ರಿ.ಶ. 1459ರ ಶಾಸನ).[3] ಡಾ. ಬಿ. ವಸಂತ ಶೆಟ್ಟಿಯವರು ದೇವಪ್ಪ ದಂಣಾಯಕನ ಬಗ್ಗೆ ಉಲ್ಲೇಖಿಸುತ್ತಾ ಅವನ ಏಕೈಕ ಶಾಸನ ಕ್ರಿ. ಶ. 1461ರಲ್ಲಿ ದೊರೆತಿದೆ ಎಂಬುದಾಗಿ ಹೇಳುತ್ತಾರೆ. ಅವನು ಈ ಮೊದಲು ಬಾರಕೂರಿನ ರಾಜ್ಯಪಾಲನಾಗಿದ್ದು ಇದು ಎರಡನೇ ಅವಧಿಗೆ ನೇಮಕ ಎಂಬುದಾಗಿಯೂ ಹೇಳುತ್ತಾರೆ. ಆದರೆ ಕ್ರಿ.ಶ. 1459ರ ಈ ಶಾಸನದಲ್ಲಿ ದೇವಪ್ಪ ದಂಣಾಯಕನ ಉಲ್ಲೇಖ ಬರುತ್ತದೆ. ಆದರೆ ಅವನು ರಾಜ್ಯಪಾಲನಾಗಿರಲಿಲ್ಲ. ರಾಜ್ಯಪಾಲನಾಗಿದ್ದವನು ಗುರುವಪ್ಪ ಒಡೆಯ. ದೇವಪ್ಪ ದಂಣಾಯಕ ಸರ್ವ ರಾಜ್ಯದ ಪಾರುಪತ್ಯವನ್ನು ನೋಡಿಕೊಳ್ಳುತ್ತಿದ್ದ ಎಂಬುದಾಗಿ ಶಾಸನ ದಾಖಲಿಸುತ್ತದೆ.[4]

ರಾಜ ಮಲ್ಲಿಕಾರ್ಜುನನ ಆಯುಷ್ಯಾಭಿವೃದ್ಧಿಯಾಗಬೇಕೆಂದು ಕೋಟೆಕೇರಿಯ ಮಾರ್ಕಂಡೇಶ್ವರ ಅಥವಾ ಪಂಚಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಗೋವೆಯ ಜ್ಞಾನಸಾಗರ ಶ್ರೀಪಾದಂಗಳಿಗೆ ನೀಡಿದ ದಾನವನ್ನು ಉಲ್ಲೇಖಿಸುವುದು ಈ ಶಾಸನದ ಉದ್ದೇಶ.

ಈ ಶಾಸನದ ಪ್ರಕಾರ ಜ್ಞಾನಸಾಗರ ಶ್ರೀಪಾದಂಗಳು ವಿದ್ಯಾ ಸಂಸ್ಥೆಯನ್ನು ನಡೆಸುತ್ತಿದ್ದರೆಂಬುದು ಸ್ಪಷ್ಟ. ಅವರ ಈ ಕಾರ್ಯಕ್ಕೆ ಪ್ರೋತ್ಸಾಹಿಸುವ ಉದ್ದೇಶದಿಂದ ಪಡುವ ಕೋಣೆ ನಾಡಿನಿಂದ ಸಂಗ್ರಹವಾಗುವ ತೆರಿಗೆಯಲ್ಲಿ 30 ಕಾಟಿ ಗದ್ಯಾಣ ಮತ್ತು ಉಪ್ಪೂರಿನ 60 ಹಾನೆಯ 6 ಮುಡಿ ಅಕ್ಕಿಯನ್ನು ಪ್ರತಿವರ್ಷ ತೆರುವಂತೆ ತಿಳಿಸಲಾಗಿದೆ. ಅಲ್ಲದೆ ಈ ದಾನ ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಕೋಟೆಕೇರಿಯ ಹಲರದ್ದು ಎಂದು ತಾಕೀತು ಮಾಡಲಾಗಿದೆ.

ವಿಜಯನಗರ ಆಡಳಿತಾವಧಿಯಲ್ಲಿ ಬಾರಕೂರು ಮತ್ತು ಗೋವಾ ರಾಜ್ಯಗಳ ಮಧ್ಯೆ ಸುಮಧುರ ಸಂಬಂಧ ಇತ್ತು. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ರಾಜ್ಯಪಾಲರ ವರ್ಗಾವಣೆ ನಡೆಯುತ್ತಿತ್ತು. ಗೋವೆಯಲ್ಲಿದ್ದ ವಿದ್ಯಾಸಂಸ್ಥೆಗೆ ಬಾರಕೂರಿನಲ್ಲಿ ದಾನ ನೀಡಿರುವುದು ಗಮನಾರ್ಹ. ಇದು ವಿಜಯನಗರ ಕಾಲದಲ್ಲಿ ಸರ್ವೇ ಸಾಮಾನ್ಯ. ಶೃಂಗೇರಿಯ ಮಠದ ಗ್ರಂಥ ಭಂಡಾರದ ಜೀರ್ಣೋದ್ಧಾರಕ್ಕೆ ಬಾರಕೂರು ರಾಜ್ಯದಲ್ಲಿ ದಾನ ನೀಡಿರುವುದು ಸಹ ಶಾಸನಗಳಲ್ಲಿ ದಾಖಲಾಗಿದೆ.[5] ವಿಜಯನಗರ ಕಾಲದಲ್ಲಿ ದಂಡ ನಾಯಕನ ಪಾತ್ರ ಎಷ್ಟು ಮಹತ್ವ ಪಡೆದಿತ್ತೆಂಬುದಕ್ಕೆ ಅವನ ನಿರೂಪದಿಂದ ಬಾರಕೂರಿನ ರಾಜ್ಯಪಾಲ ಆಡಳಿತ ನಿರ್ವಹಿಸುತ್ತಿರುವುದು ಸಾಕ್ಷಿಯಾಗಿದೆ.

ಅಲ್ಲದೆ ಈ ಶಾಸನ ರಾಜ್ಯ, ನಾಡು, ಊರು ಮುಂತಾದ ಆಡಳಿತ ವಿಭಾಗಗಳ ಪಟ್ಟಿಯಲ್ಲಿ ಬೆಳಕು ಚೆಲ್ಲುತ್ತದೆ. ಶಾಸನದಲ್ಲಿ ಬರುವ ಒಂದು ಉಲ್ಲೇಖ ಬಹಳ ಮಹತ್ವದ್ದಾಗಿದೆ. ಪಡುವಕೋಣ ನಾಡು ಹದಿನಾರರ ಒಪ್ಪ ಮುಖ್ಯ ಪಾತ್ರವನ್ನು ವಹಿಸುತ್ತಿತ್ತು. ದಾನ ನೀಡುವಾಗ ಅವರ ಒಪ್ಪಿಗೆ ಪಡೆಯಲಾಗಿತ್ತು.

ಬಾರಕೂರಿನ ಆಡಳಿತದಲ್ಲಿ ಹಲವರು ಇತರರೊಂದಿಗೆ ಭಾಗವಹಿಸುತ್ತಿದ್ದರು ಎಂಬುದು ಅವರಿಗೆ ದಾನದ ರಕ್ಷಣೆಯ ಜವಾಬ್ದಾರಿ ನೀಡಿದಲ್ಲಿ ವ್ಯಕ್ತವಾಗಿದೆ. ನಾಣ್ಯದ ಉಲ್ಲೇಖವಿದೆ (ಕಾಟಿಗದ್ಯಾಣ) ಇನ್ನು ಅಳತೆಯ ವಿವರವಿದೆ. 60 ಹಾನೆಯ ಮುಡಿ ಎನ್ನುವುದು ಮುಡಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ.

ತೆರು ಮತ್ತು ಸಿದ್ಧಾಯ ಆ ಕಾಲದ ಎರಡು ಪ್ರಮುಖ ತೆರಿಗೆಗಳಾಗಿ ಇಲ್ಲಿ ಉಲ್ಲೇಖಿಸಲ್ಪಟ್ಟಿವೆ. ಅವುಗಳ ಉಲ್ಲೇಖ ಅನೇಕ ಶಾಸನಗಳಲ್ಲಿ ಬರುವುದು ಅವುಗಳ ಪ್ರಾಬಲ್ಯಕ್ಕೆ ಇರುವ ಪ್ರಮುಖ ಸಾಕ್ಷಿ. ತೆಋ ಎನ್ನುವುದು ವಿಜಯನಗರ ಕಾಲದ ಒಂದು ಪ್ರಮುಖ ತೆರಿಗೆ. ತೆಋ ಎಂದರೆ ಪಾವತಿಸು ಎಂದರ್ಥ. ವಿಜಯನಗರ ಕಾಲದ ಅನೇಕ ಶಾಸನಗಳಲ್ಲಿ ತೆಋವಿನ ಉಲ್ಲೇಖ ಬರುತ್ತದೆ. ಆದರೆ ತೆಋ ಎಷ್ಟು ಸಂಗ್ರಹವಾಗುತ್ತಿತ್ತು ಎಂಬ ಬಗ್ಗೆ ಉಲ್ಲೇಖ ಸಿಗುವುದಿಲ್ಲ. ನೀರಿನ ಆಶ್ರಯ, ಬೆಳೆಯುವ ಬೆಳೆಗಳು ಇವುಗಳ ಆಧಾರದ ಮೇಲೆ ತೆಋವನ್ನು ನಿಗದಿಪಡಿಸಲಾಗುತ್ತಿತ್ತು. ಇದನ್ನು ನಿಗದಿಪಡಿಸುವಾಗ ಕೆಲವೊಮ್ಮೆ ಬಿತ್ತುವ ಬೀಜ ಮತ್ತು ಕೆಲವೊಮ್ಮೆ ನಿಗದಿಪಡಿಸಲಾದ ಗೇಣಿಯನ್ನು ಆಧಾರವಾಗಿ ತೆಗೆದುಕೊಳ್ಳಲಾಗುತ್ತಿತ್ತು. ಅದು ನಗದು ಅಥವಾ ವಸ್ತುಗಳ ಆಧಾರದಲ್ಲಿ ಸಂಗ್ರಹವಾಗುತ್ತಿತ್ತು. ತೆಋವನ್ನು ನಿಗದಿಪಡಿಸುವಾಗ ತೋಟಕ್ಕೂ ಸಹ ನಿಗದಿಪಡಿಸುತ್ತಿದ್ದರು.

ಸಿದ್ಧಾಯ ವಿಜಯನಗರ ಶಾಸನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುವ ಇನ್ನೊಂದು ತೆರಿಗೆ. ಇದನ್ನು ನಗದು ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಇದನ್ನು ಸಂಗ್ರಹಿಸುವ ಜವಾಬ್ದಾರಿ ಸೇನಬೋವನದ್ದಾಗಿತ್ತು. ಆದರೆ ಸಿದ್ಧಾಯವನ್ನು ದೇವಸ್ಥಾನಗಳಿಗೆ ನೀಡಿದಾಗ ಅದನ್ನು ಸಂಗ್ರಹಿಸುತ್ತಿದ್ದುದು ಮಧ್ಯಸ್ಥ.[6] ಒಟ್ಟಿನಲ್ಲಿ ಈ ಶಾಸನ ವಿಜಯನಗರ ಇತಿಹಾಸದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ.

ಶಾಸನದ ಪೂರ್ಣಪಾಠ

1. ಶ್ರೀ ಗಣಾಧಿಪತಯೆ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರ
2. ವೆ ತಯಿಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ ಸ್ವಸ್ತಿ ಶ್ರೀ ಜಯಾಭ್ಯುದ
3. ಯ ಶಕವರುಷ 1381ನೆಯ ಪ್ರಮಾಧಿಸಂವತ್ಸರದ ಶ್ರಾವಣ ಶುದ್ಧ 12 ಗುಲು
4. ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪೂರ್ವದಕ್ಷಿಣಪಶ್ಚಿಮ ಉತ್ತರ ಚತುಸ್ಸಮು
5. ದ್ರಾಧಿಪತಿ ಶ್ರೀವೀರಪ್ರತಾಪ ಮಲ್ಲಿಕಾರ್ಜುನಮಹಾರಾಯರು ವಿಜಯನಾಗರಿಯ
6. ।ಲು। ಸುಖಸಂಕಥಾವಿನೋದದಿಂದಿರುತಿಹ ಕಾಲದಲ್ಲಿ ಅವರ ಆಗ್ನಾ(ಜ್ಞಾ)ಪ್ರತಿಪಾ
7. ಲಕ ದೇವಪದಂಣಾಯಕರು ಸರ್ವರಾಜ್ಯದ ಪಾರಿಪತ್ಯವಚಿತ್ತೆಯಿಸುತಿಪ್ಪ

8. ಲ್ಲಿ ಅವರ ನಿರೂಪದಿಂ ಬಾರಕೂರ ರಾಜ್ಯವನು ಗುರುವಪ್ಪವೊಡೆಯರು ಸದರ್ಮ್ಮ ।ದಿಂ।
9. ।ದಾಳು।ತಿಹಲ್ಲಿ ಮಲ್ಲಿಕಾರ್ಜುನರಾಯರಿಗೆ ಆಯುಷ್ಯಾಭಿವೃದ್ಧಿಯಾಗಬೇಕೆಂದುಕೋ
10. ಟೆಯಕೇರಿಯ ಮಾರ್ಕಂಡೇಶ್ವರ ದೇವರ ಸನ್ನಿಧಿಯಲ್ಲಿ ವೋಪೆ(ವೆ)ಯಲಿಹಗ್ನಾ(ಜ್ಞಾ)ನ ಸಾಗರ ಶ್ರೀಪಾ
11. ದಗಳಿಗೆ ಶಿಕ್ಷಾಸ್ವಾ(?)ಸ್ಥಗೆ ದ್ವಾದಶಿಉ ಪುಂಣ್ಯ ಕಾಲದಲ್ಲಿ ಧಾರೆಯನೆರೆದು ಬರದು ನಟ್ಟ ಶಿ
12. ಲಾಶಾಸನದ ಕ್ರಮವೆಂತೆಂದರೆ ಪಡುಕೋಣೆನಾಡು ಆ ಅರಮನೆಗೆ ತಾರಯಬಿಶಿರೂ
13. ರ ಗ್ರಾಮ ನಡಿಗೆ ತೆರು ಸಿದಾಯ ಪಯಿಕದಿಂ ಕಾಟಗ 30 ಉಪ್ಪೂರಹಳಿಯ...
14. ಗಣ ಉಡುವರಬಳಿಯವರ ಬಗೆಯಿಂ ಬಂದ ಹರವರಿ ಅಕ್ಕಿಮು...ಸಿಂಗಾರ(ಪೂ)
15. ಹರವರಿ ಅಕ್ಕಿ ಮು.3 ಅಂತು ಮೂವತ್ತು ಕಾಟ ಉ ಅರುವತ್ತು ಹಾನೆಯಲಿ ಆರು.
16. ಮೂಡೆಅಕ್ಕಿಯಾ ಅಕ್ಕಿ ಹೊಂನಿಗೆ ಅಸಾಧ್ಯ ಪಾರಿಪತ್ಯ ಕೋಟೆಯ ಕೇರಿಯ ಹಲ
17. ರಿಗೆಂದು ಧಾರೆಯನೆರದು ಬರದು ನಟ್ಟ ಶಿಲಾಶಾಸನ ಯಿದಕ್ಕೆ ಕರಣಿಕ ಲಿಂಗರ (?)
18. ಸರ ವೊಪ್ಪ ಪಡುವಕೋಣನಾಡು ಹದಿನಾರರ ವೊಪ್ಪ ತಾರಯ ಭಿ ಶಿರ ಊರವೊ
19. ಪ್ಪ ಗುರುವಪ್ಪಗಳ ಬರಹ ಯಾ ಧರ್ಮಕ್ಕೆ ಶುಭಮಸ್ತು ಮಂಗಳಮಹಾ ।ಶ್ರೀ ಶ್ರೀ ।
20. ದಾನಪಾಲನಯೋರ್ಮ್ಮಧ್ಯೆ ದಾನಾಛ್ರೇಯೋನುಪಾಲನಂ
21. ದಾನತ್ಸರ್ಗಮವಾಪ್ನೋತಿ ಪಾಲನಾದಚ್ಯುತಂಪದಂ ಶ್ರೀ

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. ಡಾ.ಬಿ. ವಸಂತಶೆಟ್ಟಿ, ಬಾರಕೂರು–**ಎ ಮೆಟ್ರೋಪೊಲಿಟನ್ ಸಿಟಿ ಆಫ್ ಆಂಟಿಕ್ವಿಟ್ ಇಟ್ಸ್ ಹಿಸ್ಟರಿ ಎಂಡ್ ಕಲ್ಚರ್** (ಮಂಗಳೂರು 2017) ಪು. 88, ಎಸ್.ಐ.ಐ.ಸಂ.ಶಾಸನ337, ಡಾ. ಕೆ.ವಿ. ರಮೇಶ **ತುಳುನಾಡಿನ ಇತಿಹಾಸ,** (ಉಡುಪಿ 1969) ಪು. 90–91.
2. ಡಾ. ಬಿ. ವಸಂತ ಶೆಟ್ಟಿ, **ಬ್ರಹ್ಮಾವರ ಇತಿಹಾಸ** (ಬ್ರಹ್ಮಾವರ 1988) ಪು. 47–49.,
3. ತೇದಿಯ ನಿರ್ಧಾರದಲ್ಲಿ ಡಾ. ಬಿ. ಆರ್. ಗೋಪಾಲರ ನೆರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.
4. ಅದೇ. ಬಾರಕೂರು ಬಿ. ವಸಂತ ಶೆಟ್ಟಿ, ಪು. 90–91
5. ಶೃಂಗೇರಿ ಮಠಕ್ಕೂ ಬಾರಕೂರು ರಾಜ್ಯದಲ್ಲಿ ಭೂಮಿ ಹಾಗೂ ತೆರಿಗೆಯಿಂದ ಬರತಕ್ಕ ಉತ್ಪತ್ತಿ ದಾನವಾಗಿ ನೀಡಲಾಗಿತ್ತು.
6. ಡಾ. ಬಿ. ಜಗದೀಶ ಶೆಟ್ಟಿ, ದಿ. ಆಗ್ರೋ ಇಕಾನಮಿಕ್ ರಿಲೇಶನ್ಸ್ ಆ್ಯಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ದಕ್ಷಿಣಕನ್ನಡ (ಕ್ರಿ.ಶ. 1000–1600) ಅಪ್ರಕಟಿತ ಪಿ.ಎಚ್.ಡಿ. ಪ್ರಬಂಧ (ಪು. 145–147)

❑

4. ಹಾನುಗಲ್ಲು ತಾಲೂಕಿನ ವಿಜಯನಗರದ ಅರಸರ ಅಪ್ರಕಟಿತ ಶಾಸನಗಳು

– ಶ್ರೀಮತಿ ಹನುಮಾಕ್ಷಿ ಗೋಗಿ

ಹಾನುಗಲ್ಲು ತಾಲೂಕು ನಿಸರ್ಗ, ನೀರು–ಗುಡ್ಡ ಬೆಟ್ಟಗಳು, ಹಚ್ಚಹಸುರಿನ ವನರಾಜಿ, ಇತಿಹಾಸ, ಸಂಸ್ಕೃತಿಗಳಿಂದ ಸಮೃದ್ಧವಾದ ಪ್ರದೇಶ. ಅಂತೆಯೇ ಇಲ್ಲಿಯ ಆಳರಸರ ಕಾಲದಲ್ಲಿ ಜನರು ಸುಖ–ನೆಮ್ಮದಿಗಳಿಂದ ಬಾಳಿ, ದೇವಾಲಯಗಳನ್ನು ಕಟ್ಟಿಸಿ, ಭೂದಾನ, ಸುಂಕದಾನ, ಧನದಾನ ಮತ್ತು ಧಾನ್ಯದಾನಗಳನ್ನು ನೀಡಿದ್ದಾರೆ. ಹಾಗೆಂತಲೇ ಇಲ್ಲಿ ಇದುವರೆಗೆ 400ಕ್ಕೂ ಮಿಕ್ಕು ಶಾಸನಗಳು ದೊರೆತಿವೆ. ಅವುಗಳಲ್ಲಿ ವಿಜಯನಗರದ ಕರ್ನಾಟಕ ಸಾಮ್ರಾಜ್ಯದ ಅರಸರನ್ನು ಹೆಸರಿಸುವ ಶಾಸನಗಳನ್ನು ಆಯ್ಕೆ ಮಾಡಿಕೊಂಡು ಈ ಸಂಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಈ ಶಾಸನಗಳು ಕ್ರಿ.ಶ.1336ರಿಂದ 1522ರ ನಡುವಿನ ಅವಧಿಯಲ್ಲಿ ರಚನೆಗೊಂಡಿವೆ. ಕರ್ನಾಟಕ ಸಾಮ್ರಾಜ್ಯದ ಸಂಸ್ಥಾಪಕನೂ ವಿಜಯನಗರದ ಅರಸನೆಂದೇ ಖ್ಯಾತನಾದ ಹರಿಹರನಿಂದ ಆರಂಭಿಸಿ ವೀರ ನರಸಿಂಹರಾಯ ಮಹಾರಾಯರ ಕಾಲದವರೆಗಿನ ಶಾಸನಗಳಿವೆ.

ಕನ್ನಡ ಭಾಷೆ ಮತ್ತುಕನ್ನಡ ಲಿಪಿಯ ಶಾಸನಗಳು ಇವಾಗಿವೆ. ಜೈನ, ಶೈವ ಶಾಸನಗಳೂ ಇಲ್ಲಿವೆ. ಬಸದಿ ಮತ್ತು ದೇಗುಲಗಳಿಗೆ ನೀಡಿದದಾನ ಶಾಸನ, ನಿಷಧಿ ಶಾಸನ ಮತ್ತು ಮಾಸ್ತಿಕಲ್ಲುಗಳೂ ಇವೆ. ಒಂದು ಶಾಸನವನ್ನು ಹೊರತುಪಡಿಸಿ ಮಿಕ್ಕ 5 ಶಾಸನಗಳು ಕೇಂದ್ರ ಶಾಸನ ಇಲಾಖೆಯ ಶೋಧಗಳಾಗಿವೆ.

1
ಹಾವಣಗಿ
ಅಂಗನವಾಡಿ ಶಾಲೆಯಆವರಣದಲ್ಲಿಯ ಶಾಸನ
(ಸದ್ಯ ಬಸದಿಯಎದುರಿಗೆಇಡಲಾಗಿದೆ)
ಕ್ರಿ.ಶ.1336

20" ಅಗಲ 30"ಎತ್ತರದ ಕರಿಕಲ್ಲಿನಲ್ಲಿ ಈ ನಿಷಧಿ ಶಾಸನವನ್ನು ಕೆತ್ತಿದ್ದು, ಎಡಭಾಗ ಒಡೆದಿದೆ. ಮೇಲಿನ 20" ಭಾಗದಲ್ಲಿ ಆಮಲಕ ಶಿಖರವಿರುವ ಮಂಟಪದೊಳಗೆ ಪರ್ಯಂಕಾಸೀನನಾದ ತೀರ್ಥಂಕರ ವಿಗ್ರಹವಿದೆ. ಕೆಳಗೆ 10 ಸಾಲಿನ ಶಾಸನವಿದೆ. ಶಾಸನದ ಕೆಳಗೆ ಬಲಭಾಗದಲ್ಲಿ ಶಿಷ್ಯೆ ಕುಳಿತಿದ್ದು, ಎಡಭಾಗದಲ್ಲಿ ಗುರು ಬಲಗೈ ಎತ್ತಿ ಉಪದೇಶಿಸುತ್ತಾನೆ. ಇಬ್ಬರ ಮಧ್ಯೆ ಅಟ್ಟವಣೆ ಕೋಲಿದೆ. ತುಂಬ ಸುಂದರವಾದ ಉಬ್ಬುಶಿಲ್ಪಗಳ ಕೆತ್ತನೆಯನ್ನು ಈ ನಿಷಧಿ ಶಾಸನವು ಹೊಂದಿದೆ.

ಕ್ರಿ.ಶ.1336ರ ಹಾವಣಗಿಯ ಈ ಶಾಸನವು ವಿಜಯನಗರದ ಅರಸುವೀರ ಹರಿಹರ ಮಹಾರಾಯರ ಆಡಳಿತಾವಧಿಯಲ್ಲಿ, ರಾಯರಾಜಗುರು ಮಂಡ[ಲಾ*] ಚಾರ್ಯರೂತೀರ್ಥಂಕರ ಪಾದಸ್ಮರರೂ ಎನಿಸಿದ ಮಹಾ ಸಕಲ ಚಕ್ರವರ್ತಿಗಳೂ

ದೇಸಿಗಣಾಗ್ರಗಣ್ಯರೂ ಆದತ್ರಿಭುವನ ಮದನಕೀರ್ತಿಗಳ ಶ್ರಾವಕ ಶಿಷ್ಯನಾದ ಹೆಬಸುರ ಮಹಾಪ್ರಭು ಗೊಂಕನ ಮಗ ಕೇಸವದೇವ ಬಹುಶಃ ವ್ರತಧಾರಿಯಾಗಿ ಸ್ವರ್ಗಸ್ಥನಾದನೆಂದು ತಿಳಿಸಿದೆ. ಕೊನೆಯ ನಾಲ್ಕು ಸಾಲುಗಳ ಅಕ್ಷರ ಅಸ್ಪಷ್ಟವಾಗಿವೆ.

"ಶಕವರುಶ(ರ್ಷ) 1310 ಧಾತು ಸಂವಛ(ತ್ಸ)ರದ ಆಶಾಢ [ಸುದ್ಧ*] 2 ಗುರುವಾರದಲು"ಎನ್ನುವತಿಥಿಯು, ಕ್ರಿ.ಶ.1336ರ ಜೂನ್ 13ರಂದು ಬರುತ್ತದೆ.

1 @ ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಚನಂ ಜೀಯಾತ್ರೈ–

2 ಳೋಖ್ಯನಾಥಸ್ಯ ಶಾಸನಂ ಜಿನಶಾಸನಂ ॥ ಶ್ರೀಮನ್ಮಹಾ[ಮಂಡಳೇಶ್ವರಂ ಭಾಷೆಗೆ*]

3 ತಪ್ಪುವ ರಾಯರಗಂಡ ಶ್ರೀ ವೀರಹರಿಹರ ಮಹಾರಾಯರಾ[ಳುತ್ತ*]–

4 [ಮಿರೆ*] ಸಕವರುಶ(ರ್ಷ) 1310 ಧಾತು ಸಂವಛ(ತ್ಸ)ರದ ಆಸಾಢ[ಸುದ್ಧ*]

5 2 ಗುರುವಾರದಲು ಸ್ವಸ್ತಿ ಶ್ರೀಮ್ಮದ್ರಾಯ ರಾಜಗುರು ಮಂಡ[ಳಾ*]–

6 ಚಾರ್ಯ್ಯ ವೀತರಾಗ ಪಾದಸ್ಮರಂ ವಾದಿ ಪಿತಾಮಹಾ ಸಕಲ . .

7 ಚಕ್ರವರ್ತ್ತಿಗಳುಂ ದೇಸಿಗಣಾಗ್ರಗಂಣ್ಯರುಮಪ್ಪ ತ್ರಿಭುವನ ಮದನಕೀರ್ತ್ತಿ[ಗಳ*]

9 ಗುಡನು ಹೆಬಸುರ ಮಹಾಪ್ರಭು ಗೊಂಕನ ಮಗ ಕೇಸವದೇವ ಸ್ವ[ರ್ಗ್ಗ*]–

10 ಸ್ಥನಾದನು ।*

* 5ನೆಯ ಸಾಲಿನ ನಂತರದ ಅಕ್ಷರಗಳು ಅಸ್ಪಷ್ಟವಾಗಿವೆ.

2
ಶಿರಗೋಡ
ಹೊಲದಲ್ಲಿರುವ ಮಾಸ್ತಿಕಲ್ಲು
ಕ್ರಿಶ 1353

ARSIE1950-51 NO.88

ವಿಜಯನಗರದ ಚಕ್ರವರ್ತಿ ವೀರದೇವರಾಯನು ಆಳ್ವಿಕೆಯಲ್ಲಿ, ಭೀಮ ಮತ್ತು ಮಾದಣ ಇವರು ಹಾನುಗಲ್ಲಿನಲ್ಲಿ ಯುದ್ಧಕ್ಕೆ ಬಂದಾಗ, ಹರಿಗನಾಯಕನ ಮಗ ಓಬೆನಾಯಕ ಹೋರಾಡಿ ವೀರಮರಣವನ್ನು ಅಪ್ಪಿದಾಗ, ಆತನ ಹೆಂಡತಿಯರಾದ ಕಾಮವ್ವೆ ಹಾಗೂ ಲಕ್ಕವ್ವೆ ನಾಯಕಿತಿಯರು ಗಂಡನೊಡನೆ ಕಿಚ್ಚು ಹಾಯ್ದರೆಂದು ಈ ಶಾಸನವು ತಿಳಿಸುತ್ತದೆ.

"ಶಕವರುಷ ಸಾ 1340ನೆಯ ಸಾಧಾರಣ ಸಂವತ್ಸರಕಾ[ರ್ತ್ತಿಕ*] . . ಆದಿವಾರದಂದು" ಎನ್ನುವ ಮಿತಿಯು ಸರಿಯಿಲ್ಲ. ಶಕವರ್ಷ 1340ರಲ್ಲಿ ವಿಳಂಬ ಸಂವತ್ಸರವಿದ್ದು, ಕಾರ್ತಿಕ ಮಾಸ ನವೆಂಬರ್‌ನಲ್ಲಿ ಬರುತ್ತದೆ. ಅಂತೆಯೇ ಸಾಧಾರಣ ಸಂವತ್ಸರವು ಶಕವರ್ಷ 1353ರಲ್ಲಿ ಬರುತ್ತಿದ್ದು, ಕಾರ್ತಿಕ ಮಾಸವು ಅಕ್ಟೋಬರ್–ನವೆಂಬರ್‌ಗಳಲ್ಲಿ ಬರುತ್ತದೆ.

1 ಸ್ವಸ್ತಿ ಶ್ರೀಮತು ಶು(ಶ)ಕವರುಷ ಸಾ 1340ನೆಯ ಸಾಧಾರಣ ಸಂವತ್ಸರ ಕಾ[ರ್ತ್ತಿಕ*] . .

2 ಆದಿವಾರದಂದು ಶ್ರೀಮಂನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರದೇವರಾ[ಯ*] . .

3 ಯ್ಯುಮಿರ್ದಂದು ಶ್ರೀಮತು ಸದಿಯರಕ ಭೀಮ ಮಾದಣರು ಹಾನುಗಲ್ಲಲಿ ಮಾದ. .

4 ಗವಾದಲ್ಲಿ ತಗುಳ್ದು ಹರಿಗೆನಾಯ್ಕನ ಮಗ ಓಬೆನಾಯ್ಕ ಸತ್ತು ಸುರಲೋಕಪ್ರಾಪ್ತನಾ[ದಂ ॥ ಮ*]

5 ೦ಗಳ ಮಹಾಶ್ರೀ ಶ್ರೀ [॥*] ಕಮವೆ(ಕಾಮವ್ವೆ) ನಾಯಕತಿ ಲ್ಕವೆ(ಲಕ್ಕವ್ವೆ) ನಾ[ಯ*]ಕಿತಿಒಡನೆ ಕಿಚ್ಚ ಹಾಯಿದರು [॥*]

3
ವೀರಾಪುರ
ಬಸದಿಯಲ್ಲಿರುವ ನಿಷಧಿ ಶಾಸನ
ಕ್ರಿ.ಶ.1394

ARSIE1949-50 NO.131

ವರ್ಧಮಾನ ಮಹಾವೀರ ಬಸದಿಯಕಟ್ಟೆಯ ಮೇಲೆ ನಿಲ್ಲಿಸಿದ 35"ಎತ್ತರ 18"ಅಗಲದ ಕರಿಕಲ್ಲಿನಲ್ಲಿ ಶಾಸನವನ್ನು ಕೆತ್ತಲಾಗಿದ್ದು, ಮೊದಲ ಸ್ತರದಲ್ಲಿ ಮುಕ್ಕೊಡೆಯ ಕೆಳಗೆ ಪರ್ಯಂಕಾಸನದಲ್ಲಿ ಕುಳಿತ ಧ್ಯಾನಾಸಕ್ತ ತೀರ್ಥಂಕರನಿದ್ದು, ಎಡಬಲಗಳಲ್ಲಿ ಚಾಮರಗಳಿವೆ. ಎರಡನೆಯ ಸ್ತರದಲ್ಲಿ ಶಾಸನವಿದ್ದು, ಮೂರನೆಯ ಸ್ತರದಲ್ಲಿ ಮಧ್ಯೆ ಶ್ರುತಪೀಠವಿದ್ದು, ಬಲದಲ್ಲಿ ಶಿಷ್ಯ ಕೈಮುಗಿದು ಕುಳಿತಿದ್ದು, ಎಡದಲ್ಲಿ ಪಿಂಛಿ ಪಕ್ಕದಲ್ಲಿಟ್ಟುಕೊಂಡು ಇನ್ನೊಬ್ಬ ಶಿಷ್ಯನ ಸಹಿತ ಕುಳಿತ ಗುರು ಉಪದೇಶಿಸುವ ಚಿತ್ರಣವಿದೆ.

ವಿಜಯನಗರದ ಕರ್ನಾಟಕ ಸಾಮ್ರಾಜ್ಯದ ಅರಸು ಎರಡನೆಯ ಹರಿಹರನ ಕಾಲದ ಶಾಸನವಿದಾಗಿದ್ದು, ನಾಗರಹಳ್ಳಿಯ ಚಂದೋಜನ ಮಗ ಚಿಕ್ಕಚಂದಪ್ಪನು (ಸಮಾಧಿವಿಧಿಯಿಚಿದ ಮುಡುಪಿ) ಸ್ವರ್ಗಸ್ಥನಾದುದನ್ನು ತಿಳಿಸುತ್ತದೆ.

ಶಾಸನದ 4–5ನೆಯ ಸಾಲುಗಳಲ್ಲಿ ಬರುವ "ಶ್ರೀ ವೀರಹರಿಹರ ಮಹಾರಾಯ ರಾಜ್ಯೋದ್ಭವಸ(ಶ)ಕವರುಸ(ಷ) 1317 ಭಾವ ಸಂವಛ(ತ್ಸ)ರದ ಭಾದ್ರಪದ ಬಹುಳ ಅಮಾವಾಸ್ಯೆ 30 ಬುಧವಾರದಲ್ಲಿ" ಎಂಬ ಮಿತಿಯು 25–9–1394 ಕ್ಕೆ ಸರಿ ಹೊಂದುತ್ತದೆ.

1 @ ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಚಿಛನಂಜೀಯಾತ್ರೈ[ಳೋ*]ಕ್ಯನಾ–

2 ಥಶ್ಯ(ಸ್ಯ) ಸಾ(ಶಾ)ಸನಂ ಜಿನಸಾ(ಶಾ)ಸನಂ ॥ @ ॥ ಶ್ರೀಮನ್ಮಹಾಮಂಡಳೇ–

3 ಶ್ವರರಾಜಾಧಿರಾಜ ಸತಬಿಟ್ಟಿ ಅರಿರಾಯ ವಿಭಾಡ ಬಾಸೆ(ಭಾಷೆ)ಗೆ ತಪ್ಪುವರಾ–

4 ಯರಗಂಡ ಶ್ರೀ ವೀರ ಹರಿಹರ ಮಹಾರಾಯ ರಾಜ್ಯೋದ್ಭವ

5 ಸ(ಶ)ಕವರುಸ(ರ್ಷ) 1317 ಭಾವ ಸಂವಛ(ತ್ಸ)ರದ ಭಾದ್ರಪದ ಬಹುಳ

6 ಅಮಾವಾಸ್ಯೆ 30 ಬುಧವಾರದಲ್ಲಿ ನಾಗರಹಳ್ಳಿಯ ಚಂದೋಜ–

7 ನ ಮಗ ಚಿಕ್ಕಚಂದಪ್ಪನು ಸ್ವರ್ಗಸ್ಥನಾದನು ॥

4
ಮಕರವಳ್ಳಿ
ಕೆರೆ ಮೇಲೆ ಗರುಡಗಂಬಕ್ಕೆ ಬರೆದ ಶಾಸನ
ಕ್ರಿ.ಶ. 1399

ARSIE 1949-50 NO.121

ವಿಜಯನಗರದ ಅರಸ ಇಮ್ಮಡಿ ಹರಿಹರನ ಕಾಲದ ಶಾಸನವಿದು. ತ್ರುಟಿತಗೊಂಡಿದ್ದು, ಗೋವೆಯ ಪ್ರಧಾನಿ ಬಾಚಣ್ಣ ಒಡೆಯನು ನರಸಿಂಹ ದೇವರಿಗೆ ಮಕರವಳ್ಳಿಪುರವನ್ನು ದಾನವಾಗಿ ನೀಡಿದುದನ್ನು ತಿಳಿಸುತ್ತದೆ. ಅಲ್ಲಿಯ ಸ್ಥಾನದ ಪ್ರಜಾರಿ ವೋಬಳದೇವನು ಎಂದೂ ಹೆಸರಿಸುತ್ತದೆ.

"ಶಕವರುಷ 1321ನೆಯ ಪ್ರಮಾಧಿಸಂವತ್ಸರ ಸು(ಶು)ಕ್ಲಪಕ್ಷ ಸೋಮವಾರದಲು"ಎನ್ನುವ ಮಿತಿಯು ಕ್ರಿ.ಶ.1399ರಲ್ಲಿ ಬರುತ್ತದೆ.

1 @ ಶ್ರೀಮನ್ಮಹಾಮಂಡಳೇಸ್ವ(ಶ್ವ)ರ ಅರಿರಾ–

2 ಯ ವಿಭಾಡಚತುಸಮುದ್ರಾಧಿಪತಿ ಶ್ರೀ ವೀ–

3 ರ ಬುಕ್ಕಂಣ್ಣ ವ್ಡೆಯರಕುಮಾರಂ ಶ್ರೀ ವೀ–

4 ರ ಹರಿಹರ ರಾಜ್ಯಂಗೆಯ್ಯುತ್ತಂಮಿರೆ ॥

5 ಶಕವರುಷ 1321 ನೆಯಧಾತು (ಪ್ರಮಾಧಿ) ಸಂ–

6 ವತ್ಸರ ಸು(ಶು)ಕ್ಲಪಕ್ಷ ಸೋಮವಾರದಲು ಗೋವೆ–

7 ಯ ಪ್ರಧಾನಿ ಬಾಚಂಣಒಡೆಯರು ಎ–

8 ರಂಬರಗೆಯ ನಾರಸಿಂಹ್ವದೇವರಿ–

9 ಗೆ ಕೊಟ್ಟ ಮಕರವಳ್ಳಿಪುರ ॥ .

10 ದ ಸ್ತಾನಿಕ ಪೂಜೇಂದ್ರ ವೋಬಳದೇವನು ॥

5
ಹೊಂಬಳಿ
ರಾಮಲಿಂಗ ದೇವಾಲಯದಲ್ಲಿ
ಕ್ರಿ.ಶ.1486–1490

ARSIE1946-47 NO.219

ಅತ್ಯಂತ ತ್ರುಟಿತವೂ ಅಸ್ಪಷ್ಟವೂ ಆಗಿರುವ ಈ ಶಾಸನವು, ವಿಜಯನಗರದ ಅರಸುವೀರ ನರಸಿಂಹರಾಯ ಮಹಾರಾಯರ ಆಳ್ವಿಕೆಯಲ್ಲಿ, ಕಣ್ವಾಯನ ಸೂತ್ರದಸಹವಾಸಿ ಸಪ್ತರಸರ ಮಕ್ಕಳಾದ ಹೊನ್ನರಸನು ರಾಮೇಶ್ವರ ದೇವಾಲಯ ನಿರ್ಮಾಣ ಮಾಡಿ, ದೇವರನ್ನು ಪುನಃ ಸ್ಥಾಪಿಸಿದ ಹಾಗೂ ಅಚ್ಚಪ್ಪನಾಯಕದತ್ತಿ ನೀಡಿದ ಉಲ್ಲೇಖವನ್ನು ಒಳಗೊಂಡಿದೆ.

"ಶಾಲಿವಾಹನ ಶಕವರ್ಷ 1410ನೆಯ ಶುಕ್ಲ ಸಂವಛ(ತ್ಸ)ರದ ಫಾಲ್ಗುಣ ಶು 1 ಸೋಮವಾರ"ಎನ್ನುವ ಶಾಸನೋಕ್ತ ಮಿತಿಯಲ್ಲಿ ಶಕವರ್ಷ 1410 ರಲ್ಲಿ ಶುಕ್ಲ ಸಂವತ್ಸರವಿಲ್ಲ. ವಿಜಯನಗರದ ವೀರನರಸಿಂಹನ ಕಾಲವಾದ ಕ್ರಿ.ಶ. 1486–1490 ರ ನಾಲ್ಕೂ ವರ್ಷಗಳಲ್ಲಿ ಶುಕ್ಲ ಸಂವತ್ಸರವಾಗಲಿ ಫಾಲ್ಗುಣ ಶು 1 ಮಿತಿಯು ಸೋಮವಾರದಂದು ಬರುವುದಿಲ್ಲ.

1 ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇತ್ರಯಿ(ತ್ರೈ) ಲೋಕ್ಯ

2 ನಗರಾರಂಭ ಮೂಲಸ್ತಂಭಾಯ ಶಂಭವೇ ॥ ಸ್ವಸ್ತಿ ಶ್ರೀ ಜಯಾಭ್ಯುದ–

3 ಯ ಶಾಲೀವಾಹನ ಶಕವರ್ಷ 141(9)0ನೆಯ ಶುಕ್ಲ ಸಂವಛ(ತ್ಸ)ರದ ಫಾ–

4 ಲ್ಗುಣ ಶು 1 ಸೋಮವಾರ ಶ್ರೀಮನ್ಮಹಾರಾಜಾಧಿರಾಜ ಪರಮೇಶ್ವರ ಶ್ರೀ

5 ವೀರಪ್ರತಾಪ ಶ್ರೀ ವೀರನರಸಿಂಹರಾಯ ಮಹಾರಾಯರು । ಸು–

6 ಖರಾಜ್ಯಂಗೆಯ್ಯುತ್ತಿರೆ . . . .

7 ಹರ ಶ್ರೀಮನ್ಮಹಾನಾಯಕಾಚಾರ್ಯ್ಯರು ಸಾವಿಕಣ . . . . . ದಂದು

8 ಗಡಿಯಂಕ ನಿಲಯ . . ಯಾತನಯಧರ್ಮ್ಮ . . . . ನಾ–

9 ಯಕರ ಮಕ್ಕಳು . . . .

10 ಭಿದಾನಚಕಾ .ರ ವಂಶದಕಣ್ವಾಯನ ಸೂತ್ರದ ಪಾ . . . ಭರ

11 ಸಹವಾಸಿ ಸಪ್ತರಸರ ಮಕ್ಕಳು ಹೊಂನ್ನರಸರು ಹೊಂಬೊಳಿ–

12 ಯಲು. . ಹನ ಶಾಸನ ರಘುನಾಥಜೀರ್ಣ್ನೋದ್ಧಾರರಾಮೇಶ್ವರದೇ–

13 ವರನು ಪುನಪ್ರತಿಷ್ಠೆಯಾಗಿ ಜೀರ್ಣ್ನೋದ್ಧಾರವ ಮಾಡಿದಲ್ಲಿಅರಸು

14 ಯಿಂಮಡಿ ಅಚ್ಚಪ್ಪನಾಯಕರು ರಾಮೇಶ್ವರದೇವರ ಅಂಗಭೋ–

15 ಗ ಸರ್ವ ನಮಸ್ಯದ ದಾನ ಧಾರಾಪೂರ್ವಕವಾಗಿ

16 ಧಾರೆಯನೆರೆದು ಪೂರ್ವ ರಾಮೇದೇವರಿಗೆ ರಘು–

17 ನಾಮಾ . . . . ರಾಮನ ಗ್ರಾಮ । 1 । ಭಿಂಗಾ–

18 ರಳ ಗೋಭೂಮಿ. . ಬಾಯರ ಗ್ರಾಮದೇವರ ಮಧ್ಯಂ

19 . . . . ಬೆದಲು ಬಡಗಟ್ಟಿಯ ಕೆಳಗಣ

20 . . . . ನ . . . . ಬ 3 ದೇವರಭತ್ರಕೆ ಅವರ ಮಕ್ಕಳು

21 ಯರದ . . . . ನಾಯಕರು ಬಿಟ್ಟುಕೊಟ್ಟ ಮನೆ . .

22 . . ಗ್ರಾಮದ . . . . . ದೇವರಯ ವಿರುವೆದಯಲ್ಲು

23 . . . . ಳಗೆ . . ಧರ್ಮ್ಮ ನಿವಿಗೆಯಲು ವೊಡ್ಡಿನ ಕೆಳಗೆ ಬಿಟ್ಟ

24 ಸಹವಾಸಿ . . . . . ಲು ಮೊಗೆಯ ಹೊಲವಾಗಿ ಬಳನ ಬಿ–

25 . . . . . . ದಯಗೆ ಫಲವಹ ಅಡಕೆಯ ಮರನು

26 500 . . . . ಗೆ . . . ಶಾದ್ದು ಸ್ತಳದಿಂದಲ್ಲು ಸೆಟ್ಟಿ

27 ಯ . . . . ಸ್ತಳದಿಂದಲು ಫಲ ಬಾಹ

28 . . . . ಸಾಸಿರ 1000 । ಅಡಕೆ ಮರ ಸಹ ಯಿಪ್ಪ

29 . . . . ಸಾಯಿಗಳಾಗಿ ಪ್ರತಿಪಾಲಿಸಿ

30 . . . . ಧರ್ಮ್ಮಶಾಸನ [॥*]

6

ಹೊಂಬಳಿ

ರಾಮಲಿಂಗ ದೇವಾಲಯದಲ್ಲಿ

ಕ್ರಿ.ಶ. 1522

ARSIE1946-47 NO.220

ಈ ತ್ರುಟಿತ ಶಾಸನವು ಮೇಲಿನ ಶಾಸನದ 31ನೆಯ ಸಾಲಿನಿಂದಲೇ ಮುಂದುವರಿದ ಭಾಗವಾಗಿದ್ದು, ಶಾಸನ ವರದಿಗಳಲ್ಲಿ ಬೇರೆಯ ಶಾಸನವೆಂದು ಗುರುತಿಸಲಾಗಿದೆ. ಇದರಲ್ಲಿ ಪ್ರಧಾನ ಮಲ್ಲರಸನಿಂದ ರಾಮೇಶ್ವರ ದೇವಾಲಯದ ಭೋಗಮಂಟಪದ ನಿರ್ಮಾಣವಾಗಿದೆ ಎಂಬ ಉಲ್ಲೇಖವಿದೆ.

"ಚಿತ್ರಭಾನು ಸಂವತ್ಸರದ ಚೈತ್ರ ಶು 10ಲು"ಎನ್ನುವ ಶಾಸನೋಕ್ತಮಿತಿಯಂತೆ ಕ್ರಿ.ಶ. 1522ರಲ್ಲಿ ಚಿತ್ರಭಾನು ಸಂವತ್ಸರವು ಇದೆ. ಅಧಿಕ ಚೈತ್ರವಾದರೆ 7 ಮಾರ್ಚ್ ಶುಕ್ರವಾರದಂದು, ನಿಜಚೈತ್ರವಾದರೆ ಏಪ್ರಿಲ್ 21 ಸೋಮವಾರದಂದು ಬರುತ್ತದೆ.

1 ಚಿತ್ರಭಾನು ಸಂವ–

2 ತ್ಸರದಚೈತ್ರ ಶು 10ಲು ಆ ಹೊಂನ್ನರಸರ ಮಕ್ಕಳು

3 ಪ್ರಧಾನ ಮಲ್ಲರಸರು ರಾಮೇಶ್ವರ ದೇವರ ಭೋಗಮಂ–

4 ಟಪವನು ಕಟ್ಟಿಸಿ . . . . ಳವನು ನಿಲಿಸಿದ

5 . . . .*

ಶಾಸನದ ಬಲಪಕ್ಕದಲ್ಲಿ ಮುಂದುವರೆದ ಭಾಗ

6 ರ್ಮ್ಮದ ಪ್ರತಿಪಾಲಿಸಿ–

7 ದ ಪುಂಣ್ಯಂ ತಳೆ ॥

8 ದಾನಪಾಲನಯೋ–

9 ರ್ಮಧ್ಯೇದಾನಾಶ್ರೇ–

10 ಯೋನು ಪಾಲನಂ

11 ದಾನಾತ್ಸ್ವರ್ಗ್ಗಮವಾ–

12 ಪ್ನೋತಿ ಪಾಲನಾ–

13 ದಚ್ಚುತಂ ಪದಂ [॥*]

14 ಸ್ವದತ್ತಂ ಪರದತ್ತಂ

15 ವಾ ಯೋ ಹರೇತಿ ವ–

16 ಸುಂಧರಾ । ಶ(ಷ)ಷ್ಟಿ–

17 ರ್ವರುಶ(ರ್ಷ) ಸಹಶ್ರಾ(ಸ್ರಾ)–

18 ಣಿ ಯಿ(ವಿ)ಷ್ಟಾಯಾಂ

19 ಜಾಯತೇಕೃ(ಕ್ರಿ)–

20 ಮಿ[ಃ*] ॥ ಯೀ ಶಾಷ(ಸ)–

21 ನಕೆ ಮಂಗಳ

22 ಮಹಾಶ್ರೀ ಶ್ರೀ ಶ್ರೀ[॥*]

----

* ಈ ಸಾಲಿನಲ್ಲಿ ಇನ್ನೂ ಕೆಲವು ಅಕ್ಷರಗಳಿದ್ದು, ಪಡಿಯಚ್ಚಿನಲ್ಲಿ ಸರಿಯಾಗಿ ಮೂಡಿಲ್ಲ.

❑

5. ಹೊಸನಗರ ತಾಲೂಕಿನ ಎರಡು ಹೊಸ ಶಾಸನಗಳು

– ಆರ್. ಶೇಜೇಶ್ವರ

1. ಒಂದನೆಯ ಶಾಸನ

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಹೆದ್ದಾರಿಪುರ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ತಳಲೆ(ಮಾದವಪುರ) ಗ್ರಾಮದಲ್ಲಿ ಈ ಶಾಸನಾಧಾರಿತ ಮಾಸ್ತಿಕಲ್ಲು ಕಂಡುಬರುತ್ತದೆ. ಇಲ್ಲಿ ಇತರೆ ಶಾಸನವಿಲ್ಲದ ನಾಲ್ಕು ಮಾಸ್ತಿಕಲ್ಲುಗಳು ಕಂಡುಬರುತ್ತವೆ, ಇಲ್ಲಿ ನಾನು ಶಾಸನಾಧಾರಿತ ಮಾಸ್ತಿಕಲ್ಲನ್ನು ಮಾತ್ರ ವಿವರಿಸಲಾಗಿದೆ. ಇದು ಶಾಸನಾಧಾರಿತ ಒಕ್ಕೈ ಮಾಸ್ತಿಕಲ್ಲಾಗಿದ್ದು ಕೆಳ ಭಾಗದಲ್ಲಿ ಶಾಸನವನ್ನು ನೋಡಬಹುದು.

ಮೇಲ್ಭಾಗದಲ್ಲಿರುವ ಪಟ್ಟಿಕೆಯಲ್ಲಿ ಶಿಲ್ಪಗಳನ್ನು ಕಂಡರಿಸಲಾಗಿದೆ. ನಾಲ್ಕು ಜನರು ಕೈಮುಗಿದು ಕುಳಿತಿದ್ದು ಮಧ್ಯದಲ್ಲಿ ಸತಿ ಹೋಗಿರುವವರು ವೀರನ ಅಕ್ಕಪಕ್ಕದಲ್ಲಿ ಕುಳಿತಿರುವರು, ಇಲ್ಲಿ ವೀರನು ಮಡಿದಿದ್ದಾನೆ. ಅವನಿಗೆ ಮೂವರು ಪತ್ನಿಯರಿದ್ದು ಮೂವರು ಸತಿ ಹೋಗಿರುವುದು ಕಂಡುಬರುತ್ತದೆ, ಮಧ್ಯದಲ್ಲಿರುವ ವೀರ ಹಾರ ಧರಿಸಿರುವುದು ಹಾಗೂ ಸತಿ ಹೋಗಿರುವವರು ಸೊಂಟಕ್ಕೆ ಹಾರ ಹಾಗೂ ವಸ್ತ್ರವನ್ನು ಧರಿಸಿರುವುದನ್ನು ಕಾಣಬಹುದು. ಇವರ ಮೇಲ್ಭಾಗದಲ್ಲಿ ಶಿವಲಿಂಗವಿದ್ದು ಒಬ್ಬ ಯತಿಯು ಘಂಟೆಯನ್ನಿಡಿದು ಪೂಜಿಸುತ್ತಿರುವುದು ಪಕ್ಕದಲ್ಲಿ ಹಸು ಸೂರ್ಯ ಚಂದ್ರ ಹಾಗೂ ಪಕ್ಕದಲ್ಲಿ ಒಂದು ಕತ್ತಿ ಇದೆ.

ಈ ಶಾಸನವು ತುಂಬಾ ತ್ರುಟಿತವಾಗಿದ್ದು, ಇಲ್ಲಿ ಬಿದಿರು ಮೆಳೆ ಇದ್ದಿದ್ದರಿಂದ ಇದು ಬೆಂಕಿಗೆ ಆಹುತಿಯಾಗಿ ಒಡೆದು ಚೂರು ಚೂರು ಆಗಿದೆ. ಇದನ್ನು ಜೋಡಿಸಿ ಓದುವ ಪ್ರಯತ್ನ ಮಾಡಲಾಗಿದೆ. ಈ ಶಾಸನವು ಹನ್ನೊಂದು(11) ಸಾಲಿನಿಂದ ಕೂಡಿದ್ದು ಕನ್ನಡ ಲಿಪಿಯಲ್ಲಿದೆ.

ಶಾಸನದ ಪಾಠ

1 0 ಪ್ಲವಂಗ ಸಂವತ್ಸರ
2 0 ಚಯಿತ್ರ ಶು 2 ಆ
3 0 . . . . ಉಖಶಿನಿ
4 0 ಯ . . . .
5 0 ಶಿ ನಾ . . .[ಆ]
6 0 ರಗದ ರಾಜ್ಯವಂ . .
7 0 ಯ ಕಾಲದಲಿ . .
8 0 ಮಲಗವುಡನು ಸ . .
9 0 . ಕನಾನಿ ಆತನ . . .

10 0 ದದೋ . . .

11 0 . . . .

ಶಾಸನದ ಸಾರಾಂಶ

ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಆರಗ ರಾಜ್ಯವು ಇವರ ಆಡಳಿತಕ್ಕೆ ಒಳಪಟ್ಟು ಇವರ ಸಾಮಂತರಾಗಿ ಆರಗದ ಅರಸರು ಅಳ್ವಿಕೆ ಮಾಡುತ್ತಿದ್ದರು. ಈ ಶಾಸನದ ಕಾಲವನ್ನು ಕ್ರಿ.ಶ. 1367 ಎಂದು ಅಂದಾಜಿಸಲಾಗಿದ್ದು, ಈ ಕಾಲದಲ್ಲಿ ವಿಜಯನಗರದ ಅರಸ ಇಮ್ಮಡಿ ಹರಿಹರನು ಆಳ್ವಿಕೆ ಮಾಡುತ್ತಿದ್ದಾಗ ಇವನ ಮಗ ಶ್ರೀಮಾನ್ ಎಂದು ಕರೆಸಿಕೊಂಡು ಅಳ್ವಿಕೆ ಮಾಡುತ್ತಿದ್ದ ಚಿಕ್ಕರಾಜ ಒಡೆಯರು ಆಳ್ವಿಕೆ ಮಾಡುತ್ತಿದ್ದರು[1], ಆಗ ಪ್ಲವಂಗ ಸಂವತ್ಸರದ ಚೈತ್ರ ಶುಕ್ಲದ ಎರಡರಂದು ಆರಗದ ರಾಜ್ಯವನ್ನು ಆಳುವ ಕಾಲದಲ್ಲಿ ಮಲ್ಲಗವುಡನು ಯಾವುದೋ ಕಾಳಗದಲ್ಲಿ ಊರಿನ ಒಳತಿಗಾಗಿ ಹೋರಾಡಿ ಮಡಿದಿರಬಹುದು. ಆಗ ಈ ವೀರನ ಜೊತೆ ಅವನ ಸತಿಯರು ಸತಿ ಹೋಗಿರುವರು ಆಗ ಸತಿ ಹೋಗಿರುವವರಿಗೋಸ್ಕರ ಈ ಮಾಸ್ತಿಕಲ್ಲನ್ನು ಹಾಕಿರಬಹುದು ಎಂದು ಈ ಶಾಸನದಿಂದ ತಿಳಿಯಬಹುದಾಗಿದೆ.

ಎರಡನೆಯ ಶಾಸನ

ಶಿವಮೊಗ್ಗ ತಾಲೂಕಿನ ಹೊಸನಗರ ತಾಲೂಕಿನ ಕೆಂಚನಾಳು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಹಾಲುವಳ್ಳಿ ಗ್ರಾಮದ ಗ್ರಾಮಠಾಣಾ ಜಾಗದಲ್ಲಿ ಒಂದು ದಿಬ್ಬವಿದೆ, ಇಲ್ಲಿ ಈಶ್ವರ ದೇವಸ್ಥಾನವಿತ್ತು ಎಂದು ಸ್ಥಳೀಯರು ಹೇಳುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಆ ದಿಬ್ಬದಲ್ಲಿ ಪಾಣಿಪೀಠ ಭೈರವ ಮೂರ್ತಿ ಮೊದಲಾದ ಪ್ರಾಚ್ಯ ಕುರುಹುಗಳನ್ನು ನೋಡಬಹುದು. ಈ ದಿಬ್ಬದ ಬಲಭಾಗದಲ್ಲಿ ಒಂದು ಶಾಸನವಿರುವ ವೀರಗಲ್ಲು ಕಂಡುಬಂದಿತು. ಇದರ ಅರ್ಧಭಾಗ ಮಣ್ಣಲ್ಲಿ ಹೂತು ಹೋಗಿತ್ತು ಇದನ್ನು ಅಗೆಸಿದಾಗ ಸಂಪೂರ್ಣ ಮೂರು ಪಟ್ಟಿಕೆಯ ಶಾಸನಾಧಾರಿತ ವೀರಗಲ್ಲು ಕಂಡುಬಂದಿತು. ಇದರಲ್ಲಿ ಮೊದಲ ಹಾಗೂ ಎರಡನೇ ಪಟ್ಟಿಕೆಯಲ್ಲಿ ಶಾಸನವನ್ನು ನೋಡಬಹುದು.

ಕೆಳಗಿನ ಪಟ್ಟಿಕೆ

ವೀರನು ಕುದುರೆಯ ಮೇಲೆ ಕುಳಿತು ಹೋರಾಡುತ್ತಿರುವುದು ಕೈಯಲ್ಲಿ ಒಂದು ಆಯುಧವಿದ್ದು ಇದು ಯಾವ ಆಯುಧವೆಂದು ತಿಳಿದು ಬರುತ್ತಿಲ್ಲ. ವೀರನು ಕರ್ಣಕುಂಡಲ ಕೊರಳಲ್ಲಿ ಹಾರ ತೋಳಬಂದಿ ಕೈಬಳೆ ತಲೆಗೆ ಶಿರಸ್ತ್ರಾಣ ಧರಿಸಿ ಎಡಭಾಗಕ್ಕೆ ಮುಡಿಯನ್ನು ಕಟ್ಟಿ ವೀರಗಚ್ಚೆಯನ್ನು ಹಾಕಿರುವುದು ಕಂಡುಬರುತ್ತದೆ. ವೀರನ ಹಿಂದೆ ಸೇವಕ ಅಥವಾ ಸೈನಿಕ ಛತ್ರಿಯನ್ನು ಹಿಡಿದಿರುವುದು ಕಂಡುಬರುತ್ತದೆ. ಇದರಿಂದ ಈ ವೀರನು ರಾಜ ಪ್ರಮುಖನಿರಬಹುದು ಎಂದು ತಿಳಿಯಬಹುದಾಗಿದೆ. ವೀರನ ಮುಂದೆ ಶತ್ರು ಅಥವಾ ಇನ್ನೊಬ್ಬ ವೀರನು ಕೈಯಲ್ಲಿ ಕತ್ತಿ ಗುರಾಣಿ ಹಿಡಿದಿರುವುದು ಕಂಡುಬರುತ್ತದೆ.

ಎರಡನೇ ಪಟ್ಟಿಕೆ

ವೀರನು ಪಲ್ಲಕ್ಕಿ ಅಥವಾ ಮಂಟಪದಲ್ಲಿ ಕೈಮುಗಿದು ಕುಳಿತಿರುವುದು ಈ ಮಂಟಪವನ್ನು ಅಪ್ಸರೆಯರು ಕೈಯಲ್ಲಿ ಹಿಡಿದು ಇನ್ನೊಂದು ಕೈಯಲ್ಲಿ ಚಾಮರ ಬಿಸುತ್ತಿರುವುದನ್ನು ಕಾಣಬಹುದು.

ಮೇಲಿನ ಪಟ್ಟಿಕೆ

ಈ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಒಬ್ಬ ಯತಿಯು ಪೂಜಿಸುತ್ತಿರುವುದು ಬಲಭಾಗದಲ್ಲಿ ವೀರನು ಕುಳಿತಿದ್ದು ಅವನ ಪಕ್ಕದಲ್ಲಿ ಇಬ್ಬರು ಸ್ತ್ರೀಯರು ಕುಳಿತಿದ್ದು ಬಹುಶಃ ಇವನ ಸತಿಯರು ಇರಬಹುದು. ಇವರು ಮುಡಿಯನ್ನು ಬಲಭಾಗಕ್ಕೆ ಕಟ್ಟಿ ಕೆದಿಗೆ ಮುಡಿದಿರುವುದು ಕಂಡುಬರುತ್ತದೆ. ವೀರನು ಎಡಭಾಗಕ್ಕೆ ಮುಡಿಯನ್ನು ಕಟ್ಟಿರುವುದು ಮೂವರು ಕೊರಳಲ್ಲಿ ಹಾರ ಧರಿಸಿರುವುದನ್ನು ಕಾಣಬಹುದು. ಎಡಭಾಗದಲ್ಲಿ ಹಸುವನ್ನು ಹಾಗೂ ಎಡ ಬಲಭಾಗದಲ್ಲಿ ಸೂರ್ಯ ಚಂದ್ರರನ್ನು ಕಾಣಬಹುದು.

ಈ ವೀರಗಲ್ಲಿನಲ್ಲಿ ಆರು ಸಾಲುಗಳಿದ್ದು ಇವು ಕನ್ನಡ ಲಿಪಿಯಲ್ಲಿವೆ, ಮೇಲಿನ ಪಟ್ಟಿಕೆಯಲ್ಲಿ ನಾಲ್ಕು(4) ಹಾಗೂ ಎರಡನೇ ಪಟ್ಟಿಕೆಯಲ್ಲಿ ಎರಡು(2) ಸಾಲುಗಳನ್ನು ನೋಡಬಹುದು.

ಮೊದಲ ಪಟ್ಟಿಕೆ ಶಾಸನ

1 0 ಸಿದ್ದಾರ್ಥಿ ಸಂವತ್ಸರದ ॥ ಮಾಘ ಶು 1 ಗುರುವಾರದಲು

2 0 ಸಾವಂತಾಧಿಪತಿ । ನಾಗೆನಾಯ್ಕರಾಮಗ ಬಯಿರನಾ

3 0 ಯ್ಕರು ಸ್ವರ್ಗ್ಗಸ್ತರಾದಲಿ ಕುಡಸಂಗವ ನಾಯಕಿನೆಯ್ಕ

4 ಕ[ಲಾ/ರಾ]ಯ್ಸು । ಕುಡೆ ಸ್ವರ್ಗವನು ತೆಗೊಂಡುದು ! ಮಹಾ ಶ್ರೀ

ಎರಡನೇ ಪಟ್ಟಿಕೆ ಶಾಸನ

5 0 ಯಿಂತುಗದವರು । ಗೊದ[ಡ]ವ ಮಾಬುಜನ ಮಗ ನಾಗೋಜನು । ಕೆತೋಜನು ಮಾ

6 0 ಮಾಡಿದ ಮಸ್ಸಿನ್ನಿಯಕಲು । ಮಹಾ

ಸಾರಾಂಶ

ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಆರಗ ರಾಜ್ಯವು ಇವರ ಆಡಳಿತಕ್ಕೆ ಒಳಪಟ್ಟು ಇವರ ಸಾಮಂತರಾಗಿ ಅರಗದ ಅರಸರು ಆಳ್ವಿಕೆ ಮಾಡುತ್ತಿದ್ದರು. ಈ ಶಾಸನದ ಕಾಲವನ್ನು ಕ್ರಿ.ಶ. 1380 ಎಂದು ಅಂದಾಜಿಸಲಾಗಿದ್ದು, ಈ ಕಾಲದಲ್ಲಿ ವಿಜಯನಗರದ ಅರಸ ಬುಕ್ಕರಾಯನು ಆಳ್ವಿಕೆ ಮಾಡುತ್ತಿದ್ದನು. ಆಗ ಇವನ ಸಾಮಂತರಾಗಿ ಆರಗವನ್ನು ಆಳ್ವಿಕೆ ಮಾಡುತ್ತಿದ್ದವನು ಒಂದು ಕಡೆ ಬುಕ್ಕರಾಯನ ಮಗ ವಿರುಪಂಣ ಒಡೆಯ ಎಂತಲೂ ಇನ್ನೊಂದು ಕಡೆ ವೀರ ಅರಿಯಪ್ಪ ಒಡೆಯನ ಮಗ ವಿರುಪಂಣ ಒಡೆಯ ಎಂತಲೂ ತಿಳಿಯಬಹುದಾಗಿದೆ[2]. ಒಟ್ಟಾರೆಯಾಗಿ ಆಳ್ವಿಕೆ ಮಾಡುತ್ತಿದ್ದವನು ವಿರುಪಂಣ ಒಡೆಯ ಎಂದು ತಿಳಿಯಬಹುದಾಗಿದೆ. ಇವನ ಆಳ್ವಿಕೆಯ ಸಂದರ್ಭದಲ್ಲಿ ಸಿದ್ದಾರ್ಥಿ ಸಂವತ್ಸರದ ಮಾಘ ಶುಕ್ಲದ ಒಂದನೇ ಗುರುವಾರದಲ್ಲಿ ಸಾವಂತಾಧಿಪತಿ ನಾಗೆ ನಾಯ್ಕರ ಮಗ ಬಯಿರ ನಾಯ್ಕರು ಸ್ವರ್ಗಸ್ಥರಾದಾಗ ಇವನ ಸಂಗಡ ನಾಯಕಿ ಹಾಗೂ ಇನ್ನೊಬ್ಬರು ಸ್ವರ್ಗವನ್ನು ಹೋಗಿರುವದು ಕಂಡುಬರುತ್ತದೆ. ಬಹುಶಃ ಇವನಿಗೆ ಇಬ್ಬರು ಹೆಂಡತಿಯರು ಇರಬಹುದು. ಇವನ ಜೊತೆ ಅವರು ಸಹಾ ಸತಿ ಹೋಗಿರಬಹುದೆಂದು ಇಲ್ಲಿ ಶಾಸನದಲ್ಲಿ ಒಬ್ಬರ ಹೆಸರು ಉಲ್ಲೇಖವಾಗಿದ್ದು ಇನ್ನೊಬ್ಬರ ಹೆಸರು ಸ್ಪಷ್ಟವಾಗಿ ಕಾಣುತ್ತಿಲ್ಲ. ಆದರೆ ಮೇಲಿನ ಪಟ್ಟಿಕೆಯಲ್ಲಿ ಇಬ್ಬರು ಸ್ತ್ರೀಯರು ವೀರನ ಜೊತೆ ಸ್ವರ್ಗಸ್ತರಾಗಿರುವುದು ಕಂಡುಬರುತ್ತದೆ. ಈ ಶಾಸನವಿರುವ ಕಲ್ಲನ್ನು ಕೆತ್ತಿಸಿರುವವರು ಹಾಗೂ ನಿಲ್ಲಿಸಿರುವರು ಗೊದ(ಡ)ವ ಮಾಬುಜನ ಮಗ ನಾಗೋಜನು ಕೇತೂಜನು ಮಾಡಿದ ಮಸ್ಸನಿಯಕಲ್ಲು ಎಂದು ಈ ಶಾಸನದಿಂದ ತಿಳಿಯಬಹುದಾಗಿದೆ.

ಉಪಸಂಹಾರ: ಒಟ್ಟಾರೆಯಾಗಿ ಈ ವೀರಗಲ್ಲಿನ ಶಿಲ್ಪಗಳು ಹಾಗೂ ಮಾಸ್ತಿಗಲ್ಲಿನಲ್ಲಿರುವ ಶಿಲ್ಪಗಳು ಹಾಗೂ ಶಾಸನಗಳ ಆಧಾರದ ಮೇಲೆ ವಿಜಯನಗರ ಅರಸರ ಸಾಮಂತ ಆರಗ ಅರಸರ ಆಳ್ವಿಕೆಯ ಕಾಲದವು ಎಂದು ತಿಳಿಯಬಹುದಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ರಾಜರಾಂ ಹೆಗಡೆ ಮತ್ತು ಅಶೋಕ ಶೆಟ್ಟರ್(ಸಂ), 2001, **ಮಲೆನಾಡಿನ ಅರಸು ಮನೆತನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ.216–217
2. ಅದೇ ಪುಟ. 217

❑

6. ಮಾತಂಗ ಪರ್ವತ ಪರಿಸರದ ಸೂಚಕ ನಂದಿ ಶಿಲ್ಪಗಳು ಮತ್ತು ಅವುಗಳ ವಿಶೇಷತೆ

– ಡಾ. ಬಿ.ಸಿ. ರಾಕೇಶ್

ಭಾರತೀಯ ಸಂಸ್ಕೃತಿಯಲ್ಲಿ ವೃಷಭ ಸಂಸ್ಕೃತಿ ಪ್ರಮುಖ ಮತ್ತು ಪ್ರಾಚೀನ ಸಂಸ್ಕೃತಿ, ಅನಾದಿ ಶ್ರೀ ರುದ್ರದೇವನಿಂದಲೇ ಪ್ರಾರಂಭವಾದುದು. ವೃಷಭೋರುದ್ರಃ ರುದ್ರನಿಗೆ ಅನ್ವರ್ಥಕ ಹೆಸರು ರುದ್ರದೇವನು ಧರ್ಮ ಪರಾಕ್ರಮಿಯಾಗಿದ್ದರಿಂದ ಆತನನ್ನು ವೃಷಭನೆಂದು ಸಂಬೋಧಿಸಿದ. ವೃಷಭ ಪದದರ್ಥಧರ್ಮ ಪರಾಕ್ರಮ ಎನ್ನುವುದು. ಧರ್ಮ ಮತ್ತು ಪರಾಕ್ರಮ ಇವೆರಡೂ ರುದ್ರದೇವನ ಸ್ವಾಭಾವಿಕ ಗುಣಧರ್ಮಗಳಾಗಿದ್ದವು. ಶಿವನ ಅವತಾರವಾದ ರುದ್ರನು ಪರಾಕ್ರಮಿಯೆಂಬುದು ಪ್ರಸಿದ್ಧ ಅಂತೆಯೇರುದ್ರನು ವಿಶ್ವರೂಪ ಎಂದು ವಿಖ್ಯಾತನಾಗಿದ್ದಾನೆ. ನಂದಿಯ ರೂಪದಲ್ಲಿರುವ ವೃಷಭದೇವನು ಜನರ ದುಖಃಗಳನ್ನು ದೂರಮಾಡಿ ಜನರಿಗೆ ನೆಮ್ಮದಿಯನ್ನು ಕರುಣಿಸುತ್ತಾನೆ ಎಂಬ ನಂಬಿಕೆ ಇದೆ. ಹಾಗಾಗಿ ನಂದಿಯ ರೂಪದಲ್ಲಿ ಶಿವನನ್ನು ಕಾಣುವ ಒಂದು ಸಂಪ್ರದಾಯ ಪಲ್ಲವರು ಹಾಗು ನೊಳಂಬ ಅರಸರ ಕಾಲದಲ್ಲಿ ಬೆಳವಣಿಗೆಯಾಯಿತು ಅಂತೆಯೇ ನಂದಿಯನ್ನು ಅವರ ಲಾಂಛನವಾಗಿ ಸ್ವೀಕರಿಸಿರಬಹುದು. ವೃಷಭೋ ವಿಶ್ವರೂಪಃ॥ ಸಿಂಧೂ ನಾಗರೀಕತೆಯ ಕಾಲದಲ್ಲಿ ನಂದಿಯ ಆರಾಧನೆ ಬಗ್ಗೆ ನಮಗೆ ತಿಳಿದುಬರುತ್ತದೆ. ಅಂತೆಯೇ ಬೃಹತ್ ನಂದಿಯ ಮೂರ್ತಿಗಳು ಜಗತ್ತಿನ ಬೇರೆ ಬೇರೆಕಡೆಕಂಡು ಬರುತ್ತವೆ. ಕಾಂಬೋಡಿಯ ದೇವಾಲಯದ ಸಂಕೀರ್ಣಗಳಲ್ಲಿ, ನೇಪಾಳದ ಪಶುಪತಿದೇಗುಲ, ಆಸ್ಟ್ರೇಲಿಯ. ಜರ್ಮನಿ, ಈಜಿಪ್ಟ್ ದೇಶಗಳಲ್ಲಿ ನಂದಿಯ ಮೂರ್ತಿಗಳು ಸಿಗುತ್ತವೆ. ಶಿವನ ವಾಹನ ನಂದಿಯನ್ನು ಎಲ್ಲಾ ದೇಗುಲಗಳಲ್ಲಿ ನಾವು ಕಾಣಬಹುದು. ಅಂದರೆ ನಂದೀಶ್ವರ, ಬಸವೇಶ್ವರ ಇನ್ನೂ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮುಖ್ಯವಾಗಿ ದೇವಾಲಯಗಳಲ್ಲಿ ವೃಷಭ ಅಥವಾ ನಂದಿಗೆ ವಿಶೇಷವಾದ ಪೂಜೆಯ ವಿಧಿ ವಿಧಾನಗಳು ನಡೆಯುತ್ತವೆ. ನಂದಿಯು ಆಹಾರ ಮತ್ತು ಶಕ್ತಿಯ ಸಂಕೇತ, ಚೈತನ್ಯ, ಸಾಕ್ಷಾತ್ಕಾರ, ಭೂಮಿಯ ಮೇಲಿರುವ ಕಲ್ಪತರು ವಿಶ್ವದ ರಕ್ಷಕ ಮುಂತಾದ ಹೆಸರುಗಳಿಂದ ನಂದಿಯನ್ನು ಹೊಗಳಲಾಗಿದೆ. ಸೂರ್ಯನು ಸೃಷ್ಠಿಯಕರ್ತೃ ಅದರಂತೆ ನಂದಿಯು ರಕ್ಷಕನಾಗಿ ಕಾರ್ಯವನ್ನು ನಿರ್ವಹಿಸುತ್ತಾನೆ. ಅನೇಕ ದೇವಾಲಯಗಳಲ್ಲಿ ಮಕರ ಸಂಕ್ರಮಣದ ದಿನದಂದು ಸೂರ್ಯ ಕಿರಣಗಳು ನಂದಿಯ ಕೊಂಬಿನ ಮಧ್ಯದಿಂದ ಹಾದು ಲಿಂಗದ ಮೇಲೆ ಬೀಳುತ್ತದೆ. ನಂದಿಯ ಕೊಂಬಿನ ಮಧ್ಯದಿಂದ ಲಿಂಗವನ್ನು ನೋಡುವ ಪರಿಪಾಠವಿನ್ನು ಇರುವುದನ್ನು ಇಂದಿಗು ನಾವು ಗಮನಿಸಬಹುದು. ನಂದಿಯ ಕಿವಿಯಲ್ಲಿ ಹರಕೆ ಅಥವಾ ಬೇಡಿಕೆಯನ್ನು ಮಾಡಿಕೊಂಡರೆ ಪೂರ್ಣವಾಗುತ್ತದೆ ಎಂಬ ನಂಬಿಕೆ ಇದೆ. ನಂದಿಯು ಧರ್ಮರಕ್ಷಕ 18 ಜನ ಹಿಂದೂಧರ್ಮದ ಸಾಧಕರ(ಸಿದ್ಧರ) ಮುಖ್ಯಸ್ಥನಾಗಿದ್ದನು. ಶಿವನ ಪ್ರಮುಖ ಅಂಗರಕ್ಷಕ, ಬೇಡಿದ್ದನ್ನು ನೀಡುವದೇವರು ಎನ್ನುವ ನಂಬಿಕೆ ಅಂತೆಯೇ ನಂದಿಯನ್ನು ಶಿವಲಿಂಗದ ಎದುರಿಗೆ ವಿಶೇಷವಾಗಿ ನಿರ್ಮಾಣ ಮಾಡಿರುತ್ತಾರೆ. ಶಿವಲಿಂಗದ ಮತ್ತು ಅನೇಕ ಕಡೆ ಹೊರ ಭಾಗದಲ್ಲಿ ಬೃಹತ್ ಪ್ರಮಾಣದ ನಂದಿಯ ಶಿಲ್ಪಗಳನ್ನು ನಾವು ಕಾಣಬಹುದು. ದೇವಾಲಯದಲ್ಲಿ ನಂದಿಯ ಶಿಲ್ಪವಿರುವ ಸ್ಥಳದಲ್ಲಿ ವಾಸ್ತವ ಹಾಗೂ ದೈವಿಕಾ ಭಾವನೆ ಬರುವಂತಹ ಸ್ಥಳದಲ್ಲಿ ನಂದಿಯನ್ನು ಪ್ರತಿಷ್ಠಾಪನೆ ಮಾಡಿರುತ್ತಾರೆ. ದೇವಾಲಯ ಪ್ರವೇಶ ಮಾಡಿದಾಗ ನಂದಿಯ ದರ್ಶನವಾಗುತ್ತದೆ. ಭಾರತದ ಕೆಲವು ಕಡೆ ನಂದಿಗಾಗಿ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ. ದೇವಾಲಯದ ಮುಖ್ಯದೇವರು ನಂದಿಯೆ ಆಗಿರುವುದು ವಿಶೇಷ. ಉದಾಹರಣೆಗೆ ಬೆಂಗಳೂರಿನ ಬಸವನಗುಡಿ ನಾವು ನೋಡಬಹುದು.

ಮಾತಂಗ ಪರ್ವತದಲ್ಲಿ ಬರುವ ಸೂಚಕ ನಂದಿ ಶಿಲ್ಪಗಳು ಮೂರು ಕಡೆಯಿಂದ ಪರ್ವತವನ್ನು ಹತ್ತಲಿಕ್ಕೆ ದಾರಿಗಳಿದ್ದು ದಾರಿಯಲ್ಲಿ ಕಡಿದಾದ ಮೆಟ್ಟಿಲುಗಳನ್ನು ಹಾಕಲಾಗಿದೆ. ಮೆಟ್ಟಿಲುಗಳು ಹತ್ತುತ್ತಾ ಸಾಗಿದಾಗ ನಮಗೆ ನಂದಿಯ ಶಿಲ್ಪಗಳು ಸಿಗುತ್ತವೆ. ಮೊದಲನೆಯಾದಾಗಿ ಕಮಲಾಪುರದ ಕಡೆಯಿಂದ ಅಂದರೆ ದಕ್ಷಿಣ ಭಾಗದಿಂದ ಪರ್ವತವನ್ನು ಹತ್ತಲಿಕ್ಕೆ ಪ್ರಾರಂಭಿಸಿದರೆ ಕಾಲುವೆಯನ್ನು ದಾಟಿದ ಮೇಲೆ ಒಂದು ಬಂಡೆಗೆ ಹೊಂದಿಕೊಂಡಂತೆ ಕಲ್ಲು ಮಂಟಪವನ್ನು ಹಾಕಲಾಗಿದೆ. ಬಂಡೆಯ ಮೇಲೆ ನಂದಿಯ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ, ನಂದಿಯ ಶಿಲ್ಪವು ಸರಳ ಅಲಂಕಾರಗಳಿಂದ ಕೂಡಿದ್ದು ಬಲಗಾಲನ್ನು ಮುಂದೆಚಾಚಿ ಎಡಗಾಲನ್ನು ಮಡಚಿದೆ. ಶಿವಲಿಂಗಕ್ಕೆ ಮುಖಮಾಡಿದೆ, ಹಿಂಭಾಗದಲ್ಲಿ ಗಣೇಶನ ಶಿಲ್ಪವಿದೆ, ನಂದಿಯ ಅರ್ಧ ಭಾಗ ಮಾತ್ರ ಕಾಣಸಿಗುತ್ತದೆ. ಕಲ್ಲಿನ ಮೇಲೆ ಕಟೆದಿರುವುದರಿಂದ ಎಲ್ಲವು ಉಬ್ಬು ಶಿಲ್ಪಗಳೆ ಇವೆ. ಶಿಲ್ಪಗಳನ್ನು ನಾವು ಗಮನಿಸಿದಾಗ ಇದೊಂದು ಸ್ಮಾರಕ ಶಿಲ್ಪವಾಗಿರಬಹುದು ಎಂದು ಅನಿಸುತ್ತದೆ. ಇದಕ್ಕೆ ಪೂರಕವಾಗಿ ಅಲ್ಲಿರುವ ಶಿಲ್ಪಗಳನ್ನು ಅಧ್ಯಯನ ಮಾಡಿದಾಗ ಇದೊಂದು ಸ್ಮಾರಕ ಶಿಲ್ಪ ಎಂಬುದು ನಮ್ಮ ಗಮನಕ್ಕೆ ಬರುತ್ತದೆ. ಕಲ್ಲು ಮಂಟಪದ ಪಕ್ಕದಿಂದ ಮೆಟ್ಟಿಲುಗಳನ್ನು ಹತ್ತುತ್ತಾ ಸುಮಾರು 150 ಮೆಟ್ಟಿಲುಗಳನ್ನು ಮೇಲೆರುತ್ತಾ ಸಾಗಿದರೆ ಪಶ್ಚಿಮಕ್ಕೆ ಮುಖ ಮಾಡಿದ ನಂದಿಯ ಶಿಲ್ಪವಿದ್ದು ಇದನ್ನು ರಸ್ತೆ ಸೂಚಕ ನಂದಿಯ ಶಿಲ್ಪ ಎಂಬುದಾಗಿ ನಾವು ಕರೆಯಬಹುದು. ಕಾರಣ ಪ್ರಾಚೀನಕಾಲದಲ್ಲಿ ಮಾತಂಗ ಪರ್ವತ ಹತ್ತಲಿಕ್ಕೆ ಸರಿಯಾದ ಮಾರ್ಗವಿರಲಿಲ್ಲ ಇಂತಹ ಸಂದರ್ಭದಲ್ಲಿ ನಂದಿಯನ್ನು ಸ್ಥಾಪಿಸಿರುವ ಸಾಧ್ಯತೆ ಇದೆ. ಯಾತ್ರಿಕರು ರಸ್ತೆಯನ್ನು ತಪ್ಪದಿರಲಿ ಎಂದು ನಂದಿಯ ಶಿಲ್ಪವನು ಸ್ಥಾಪಿಸಲಾಗಿದೆ. ನಂದಿಯ ಶಿಲ್ಪದ ಕೆಲವು ಭಾಗಗಳು ಮುಕ್ಕಾಗಿದ್ದು ಸುಮಾರು ನಾಲ್ಕು ಅಡಿ ಸುತ್ತಳತೆ ಎರಡು ಅಡಿ ಎತ್ತರವಾಗಿದೆ. ನಂದಿಯ ಎಡಗಾಲನ್ನು ಮುಂದೆಚಾಚಿದ್ದು ಬಲಗಾಲು ಮಡಿಚಿದೆ. ಕೊರಳಹಾರಗಳು ಹಾರಕ್ಕೆ ಗಂಟೆಯನ್ನು ಕೆತ್ತಲಾಗಿದೆ, ಹಣೆಯ ಪಟ್ಟಿ, ಹಣೆಯ ಫಲಕ ಭುಜಕ್ಕೆ ಹೊಂದಿಕೊಂಡಂತೆ ಮೈಸುತ್ತುಗಳು ನಂದಿಯ ಮೈಮೇಲೆ ನಾವು ಗಮನಿಸಬಹುದು. ನಂದಿಯನ್ನು ಇನ್ನೊಂದುಕಡೆ ಸರಿಸಬಹುದು. ದಾರಿಯಲ್ಲಿ ಅನೇಕ ಕಂದಕಗಳಿದ್ದು ನಂದಿಯನ್ನು ಸ್ಥಾಪಿಸಿರುವ ಉದ್ದೇಶ ಮಾತಂಗ ಪರ್ವತವನ್ನು ಹತ್ತುವಾಗ ಯಾತ್ರಿಕರು ನಂದಿಯನ್ನು ಬಳಸಿಕೊಂಡು ಮೇಲೆ ಹೋಗಲಿ ಎಂದು ಇದನ್ನು ಇಲ್ಲಿ ಕೆತ್ತಿಡಲಾಗಿದೆ.

ನಂದಿಯ ಶಿಲ್ಪವನ್ನು ಬಳಸಿಕೊಂಡು ಮೇಲೆ ಸಾಗಿದರೆ ವೀರಭದ್ರ ದೇವಾಲಯವನ್ನು ಪ್ರವೇಶ ಮಾಡಬಹುದು. ವೀರಭದ್ರ ದೇವಾಲಯದ ಒಳಗಡೆ ವೀರಭದ್ರನಿಗೆ ಎದುರಾಗಿ ಎರಡು ನಂದಿಯ ಶಿಲ್ಪಗಳು ಇದ್ದು ಇವುಗಳನ್ನು ಪೂಜಿಸುತ್ತಾರೆ. ಒಂದು ನಂದಿಯು ಅಂತರಾಳದಲ್ಲಿ ಇದ್ದು ಸರಳ ಅಲಂಕಾರಗಳಿಂದ ಕೂಡಿದೆ. ಕೊರಳಹಾರ, ಹಣೆಪಟ್ಟಿ ಎಡಗಾಲು ಮುಂದಿದ್ದು ಬಲಗಾಲನ್ನು ಮಡಚಿದೆ, ಮೂರು ಅಡಿ ಸುತ್ತಳತೆ ಒಂದುವರೆ ಅಡಿ ಎತ್ತರವಾಗಿದ್ದು ನಂದಿಯ ಹಿಂಭಾಗದಲ್ಲಿ ಹೊರಗಡೆ ಇನ್ನೊಂದು ನಂದಿಯ ಶಿಲ್ಪವಿದ್ದು ಶಿಲ್ಪವು ದುಂಡುದುಂಡಾಗಿದೆ. ಅಲ್ಲದೆ ದೇಹದ ಕೆಳಭಾಗ ಕೊಡದ ರೀತಿಯಲ್ಲಿ ನಂದಿಯಶಿರವನ್ನು ಮೇಲೆ ಸರಳ ಅಲಂಕಾರಗಳಿಂದ ದುಂಡಾಗಿ ಕೆತ್ತಲಾಗಿದೆ. ವೀರಭದ್ರ ದೇವಾಲಯದ ಸಂಕೀರ್ಣದಲ್ಲಿ ಕೆಳಗಡೆ ನಾಲ್ಕು ನಂದಿಯ ಶಿಲ್ಪಗಳು ಇವೆ. ಅದರಲ್ಲಿ ಎರಡು ನಂದಿಯ ಶಿಲ್ಪಗಳು ಪೂಜೆಗೊಳ್ಳುತ್ತವೆ, ಅವುಗಳು ವೀರಭದ್ರ ದೇವಾಲಯದಲ್ಲಿವೆ. ಇನ್ನೂ ಮೂರು ನಂದಿಯ ಶಿಲ್ಪಗಳು ಪೂಜೆಗೊಳ್ಳುವುದಿಲ್ಲ. ಅದರಲ್ಲಿ ಒಂದು ನಂದಿ ಶಿಲ್ಪವು ದೇವಾಲಯದ ಮೇಲೆ ಇದೆ. ಇನ್ನೆರಡು ನಂದಿಯ ಶಿಲ್ಪಗಳು ಪಕ್ಕದ ಕೋಣೆಯಲ್ಲಿವೆ. ಇಲ್ಲಿರುವ ನಂದಿಗಳು ಸರಳ ಅಲಂಕಾರಗಳಿಂದ ಕೂಡಿವೆ ಅದರಲ್ಲಿ ನಾವು ಪಾಣಿಪೀಠಗಳನ್ನು ನಾವು ಕಾಣಬಹುದು. ದೇವಾಲಯದ ಮೇಲೆ ಪಶ್ಚಿಮಕ್ಕೆ ಮುಖ ಮಾಡಿದ ನಂದಿಯ ಶಿಲ್ಪವಿದೆ. ಇದು ಕೂಡ ಹಾರ, ಹಣೆಪಟ್ಟಿ ಗಂಟೆಯಿಂದ ಮಾಡಿದ ಸರಳ ಅಲಂಕಾರದಿಂದ ಕೂಡಿದೆ. ದೇವಾಲಯದ ಪಕ್ಕದ ಗೊಪುರದಲ್ಲಿ ನಾಲ್ಕು ಮುಖ ಎಂಟು ದೇಹಗಳ ಶಿಲ್ಪಗಳಿವೆ, ಅವುಗಳು ಸಂಪೂರ್ಣವಾಗಿ ಹಾಳಾಗಿವೆ ಇವುಗಳು ನಂದಿಯ ಶಿಲ್ಪಗಳಿದ್ದಿರಬಹುದು. ದೇವಾಲಯದ ಸಂಕೀರ್ಣದಲ್ಲಿ ಒಟ್ಟು ಐದು ನಂದಿಯ ಶಿಲ್ಪಗಳು ನಮಗೆ ಸಿಗುತ್ತವೆ. ನಂದಿಯ ಶಿಲ್ಪಗಳಿಂದ ದೇವಾಲಯದ ಆಚರಣೆ ಮತ್ತು ಪ್ರಾಚೀನತೆಯನ್ನು ನಾವು ತಿಳಿಯಬಹುದಾಗಿದೆ.

ಮಾತಂಗ ಪರ್ವತದಿಂದ ವಿರುಪಾಕ್ಷ ದೇವಾಲಯದ ಕಡೆ ಕೆಳಗೆ ಇಳಿಯುವಾಗ ಮಧ್ಯದ ಗವಿಯಲ್ಲಿ ಉದ್ಭವ ಲಿಂಗವು ತುಂಬಾ ದೂರದಲ್ಲಿದೆ ಅದನ್ನು ನೋಡಲಿಕ್ಕೆ ಅನುಕೂಲ ಆಗಲಿ ಎಂದು ಬಾಗಿಲನ್ನು ಮಾಡಿರುತ್ತಾರೆ. ಬಾಗಿಲ ಬಲ ಪಕ್ಕದಲ್ಲಿ ಪೂರ್ವದ ಮತ್ತು ಪಶ್ಚಿಮದ ಬಂಡೆಯ ಮೇಲೆ ನಂದಿಯ ಉಬ್ಬು ಶಿಲ್ಪವಿದ್ದು ಅಕ್ಕಪಕ್ಕದಲ್ಲಿ ಮತ್ತು ಸುತ್ತಲು ಶಾಸನಗಳನ್ನು ಹಾಕಿಸಿದ್ದಾರೆ. ಸುಂದರವಾಗಿ ಎರಡು ಅಡಿ ಸುತ್ತಳತೆಯಲ್ಲಿ ಇವುಗಳನ್ನು ಕೆತ್ತಲಾಗಿದೆ. ಇವುಗಳು ಬಲಗಾಲನ್ನು ಮುಂದೆ ಚಾಚಿದ್ದು ಸರಳ ಅಲಂಕಾರಗಳಿಂದ ಕೂಡಿವೆ, ನಂದಿಯ ಉಬ್ಬು ಶಿಲ್ಪಗಳನ್ನು ಕೆತ್ತಿಸಿರುವ ಈ ಸ್ಥಳವು ಪೂಜ್ಯನೀಯ ಮತ್ತು ಪವಿತ್ರ ಸ್ಥಳ ಎಂದು ತಿಳಿಯುವ ಉದ್ದೇಶದಿಂದ ಗವಿಯಲ್ಲಿರುವ ಉದ್ಭವ ಲಿಂಗದದಾರಿ ಸೂಚಿಸುವುದಾಗಿದೆ. ಬಂಡೆಗಲ್ಲಿನ ಮೇಲೆ ಕೆತ್ತಿದ್ದರಿಂದ ದೇವಾಲಯದ ದಾರಿಯನ್ನು ನಾವು ಗಮನಿಸಬಹುದು. ಅಲ್ಲದೆ ಮೇಲೆ ಹೋಗುವ ದಾರಿ ಸೂಚಕಗಳು ಆಗಿವೆ. ಯಾತ್ರಿಕರಿಗೆ ಪೂಜ್ಯ ಭಾವನೆ ಬರಲೆಂದು ಹಾಗೂ ಶಾಸನಗಳನ್ನು ಗುರುತಿಸಲು ಇವುಗಳು ಅನುಕೂಲವಾಗಿದೆ.

ಮಾತಂಗ ಪರ್ವತದಲ್ಲಿ ಬರುವ 9 ನಂದಿಯ ಶಿಲ್ಪಗಳಲ್ಲಿ ನಾಲ್ಕು ನಂದಿಯ ಶಿಲ್ಪಗಳು ಮಾತಂಗ ಪರ್ವತ ಹತ್ತಲಿಕ್ಕೆ ದಾರಿಯ ಸೂಚಕವಾಗಿ ಬಳಸಲ್ಪಟ್ಟಿವೆ. ನಂದಿಯ ಶಿಲ್ಪಗಳು ಯಾತ್ರಿಕರಿಗೆ ಸೂಚನೆಯನ್ನು ನೀಡುವ ಶಿಲ್ಪಗಳಾಗಿವೆ. ವಿಜಯನಗರ ಕಾಲದಲ್ಲಿ ಮೆಟ್ಟಿಲುಗಳನ್ನು ಅಭಿವೃದ್ಧಿಪಡಿಸಲಾಗಿದೆ. ಅದಕ್ಕೂ ಪೂರ್ವದಲ್ಲಿನಂದಿಯ ಶಿಲ್ಪಗಳನ್ನು ಬಳಸಿಕೊಂಡು ಮೇಲೆ ಹತ್ತಲಿಕ್ಕೆ ದಾರಿಯನ್ನು ಕಾಣಬಹುದು. ಕಮಲಾಪುರದ ಕಡೆಯಿಂದ ಬರುವಾಗ ಕಾಲುವೆಯನ್ನು ದಾಟಿದ ಮೇಲೆ ಕಲ್ಲಿನ ಮಂಟಪದಿಂದ ಪ್ರಾರಂಭವಾಗಿ ಅರ್ಧಕ್ಕೆ ಹತ್ತಿದ ಮೇಲೆ ಅಲ್ಲೊಂದು ನಂದಿಯ ಶಿಲ್ಪವನ್ನು ಕಾಣಬಹುದು. ಅಲ್ಲಿಂದ ಮುಂದೆ ಸಾಗಿದರೆ ವೀರಭದ್ರ ದೇವಾಲಯದ ಆವರಣದಲ್ಲಿ 5 ನಂದಿಯ ಶಿಲ್ಪಗಳಿದ್ದು ಅದರಲ್ಲಿ ಎರಡು ಪೂಜೆಗೊಳ್ಳುತ್ತವೆ. ಇನ್ನೂ ಮೂರು ನಂದಿಯ ಶಿಲ್ಪಗಳು ಪೂಜೆಗೊಳ್ಳುವುದಿಲ್ಲ. ಅದರಲ್ಲಿ ಒಂದು ನಂದಿ ಶಿಲ್ಪವು ದೇವಾಲಯದ ಮೇಲೆ ಇದೆ. ಇನ್ನೆರಡು ನಂದಿಯ ಶಿಲ್ಪಗಳು ವೀರಭದ್ರ ದೇವರಗರ್ಭಗುಡಿಯ ಪಕ್ಕದಲ್ಲಿರುವ ಇನ್ನೆರಡು ಗರ್ಭಗುಡಿಯಲ್ಲಿವೆ. ಇವುಗಳು ಮುಕ್ಕಾಗಿವೆ. ಅಲ್ಲಿಂದ ವಿರೂಪಾಕ್ಷ ದೇವಾಲಯದ ಕಡೆ ಕೆಳಗಿಳಿದರೆ ಮಧ್ಯದಲ್ಲಿ ಅಂದರೆ ವಿರೂಪಾಕ್ಷ ದೇವಾಲಯದ ಕಡೆಯಿಂದ ಮತ್ತು ಅಚ್ಯುತ ದೇವಾಲಯದ ಕಡೆಯಿಂದ ಬಂದು ಸೇರುವ ಹತ್ತಿರದಲ್ಲಿ ಬಂಡೆಗಲ್ಲಿನ ಮೇಲೆ ಎರಡು ನಂದಿಯ ಉಬ್ಬು ಶಿಲ್ಪಗಳಿವೆ. ಇವುಗಳು ಗುಹಾಲಯದ ದಾರಿ ಮತ್ತು ದೇವಾಲಯಕ್ಕೆ ಹೋಗುವ ಜಾಗದಲ್ಲಿವೆ. ಅಲ್ಲದೆ ಇದೆ ಜಾಗದಲ್ಲಿ ಹಲವು ಶಾಸನಗಳನ್ನು ಕೆತ್ತಲಾಗಿದೆ. ಪರ್ವತದ ಮೇಲೆ ಹೋಗುವ ದಾರಿಯ ಸೂಚಕವಾಗಿದೆ. ಇನ್ನೊಂದು ಅಚ್ಚುತಾಪುರದಕಡೆಗೆ ಹೋಗುವ ದಾರಿಯ ಸೂಚಕವಾಗಿದೆ. ಜೊತೆಯಲ್ಲಿ ಶಾಸನಗಳನ್ನು ಕೆತ್ತಿರುವ ಹಿನ್ನೆಲೆಯಲ್ಲಿ ಈ ಸ್ಥಳವು ಮಹತ್ವವನ್ನು ಪಡೆದುಕೊಂಡಿದೆ. ನಂದಿಯ ಶಿಲ್ಪಗಳನ್ನು ನಾವು ಅಧ್ಯಯನ ಮಾಡಿದಾಗ ದಾರಿ ಸೂಚಕ ನಂದಿ ಶಿಲ್ಪಗಳಾಗಿದ್ದವು ಎಂಬುದು ನಮಗೆ ತಿಳಿದು ಬರುತ್ತದೆ. ಇವುಗಳನ್ನು ಬಳಸಿಕೊಂಡು ಮಾತಂಗ ಪರ್ವತವನ್ನು ಹತ್ತುತ್ತಿದ್ದರು. ಇಂಥಹ ಅನೇಕ ನಂದಿಯ ಉಬ್ಬು ಶಿಲ್ಪಗಳು ಹಂಪಿಯ ಪರಿಸರದಲ್ಲಿ ನಮಗೆ ಸಿಗುತ್ತವೆ. ನಂದಿಯ ಶಿಲ್ಪಗಳನ್ನು ದಾರಿಯ ಸೂಚಕವಾಗಿ, ಪೂಜ್ಯನೀಯ ಶಿಲ್ಪಗಳಾಗಿ, ಅವಗಡ ಸೂಚಕ ಶಿಲ್ಪಗಳಾಗಿ ಮತ್ತು ಸ್ಮಾರಕ ಶಿಲ್ಪಗಳಾಗಿ ಅನೇಕ ಉದಾಹರಣೆಗಳು ನಮಗೆ ದೊರೆಯುತ್ತವೆ. ಮಾತಂಗ ಪರ್ವತದ ಪರಿಸರದಲ್ಲಿರುವ ನಂದಿ ಶಿಲ್ಪಗಳು ಸೂಚಕ ಶಿಲ್ಪಗಳಾಗಿದ್ದವು ಎಂಬುದರಲ್ಲಿ ಸಂಶಯವಿಲ್ಲ ಅಲ್ಲದೆ ನಂದಿ ಶಿಲ್ಪಗಳ ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ.

ಆಧಾರಸೂಚಿ :

1) ಶ್ರೀ ಜ.ಚ.ನಿ. ಸನ್ನಿಧಿಯು, **ವೃಷಭ ಸಂಸ್ಕೃತಿ,** ಶ್ರೀ ಜ.ಚ.ನಿ. ಅಧ್ಯಯನ ಪೀಠ ಮತ್ತು ಸ್ನಾತಕೋತ್ತರ ಸಂಸ್ಥೆ, ಬೆಂಗಳೂರು–1989, ಪು.ಸಂ.01–17.

2) ಹೆಚ್. ಜಯಮ್ಮ ಕರಿಯಣ್ಣ, **ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಾಡ–2007–08,ಪು.ಸಂ.57–58.

3) ವೈ.ಆರ್. ಚನ್ನಬಸವಯ್ಯ, 'ನೊಳಂಬವಾಣಿ', ಸಂಪುಟ 5 & 6, ನೊಳಂಬ ವೀರಶೈವ ಸಂಘ, ಬೆಂಗಳೂರು, 2012–14. ಪು.ಸಂ.27–28/25–27.

4) ಜಗದೀಶ್. ಎಂ. ಹೆಚ್. 'ಶಿವಗಣ ಸೂಚಕ ಶಿಲ್ಪಗಳು', ನೊಳಂಬವಾಣಿ, ಸಂ–2, ಸಂಚಿಕೆ–8, ಬೆಂಗಳೂರು–2013, ಪು.ಸಂ.:10.
5) ಚಂದ್ರಶೇಖರ್ ಎಸ್.ಟಿ., 'ನಂದಿ – ಬಸವ' ಒಂದು ಜಿಜ್ಞಾಸೆ, ನೊಳಂಬವಾಣಿ, ಸಂ–4, ಸಂಚಿಕೆ–4, ಬೆಂಗಳೂರು–2014, ಪು.ಸಂ.: 2–5.
6) ಕ್ಷೇತ್ರಕಾರ್ಯ / ಸ್ಥಳೀಯರ ಸಂದರ್ಶನದ ವಿವರಗಳು / ಅಂತರ್ಜಾಲ ಮಾಹಿತಿ.

❑

7. ಶಾಸನೋಕ್ತ ಸಣ್ಣ ಪ್ರತಾಪ ನಾಣ್ಯ-ಸಂಕ್ಷಿಪ್ತ ವಿವೇಚನೆ

- ಎಸ್. ಕಾರ್ತಿಕ್

ಕರ್ನಾಟಕದಲ್ಲಿ ದೊರಕಿರುವ ನಾಣ್ಯಗಳ ವೈವಿಧ್ಯ ಬಹುಮುಖವಾದುದು. ಅನೇಕ ಹೆಸರಿನ ಚಿನ್ನ, ಬೆಳ್ಳಿ, ತಾಮ್ರದ ನಾಣ್ಯಗಳು ದೊರೆತಿವೆ. ಈ ನಾಣ್ಯಗಳಲ್ಲಿ ಪ್ರತಾಪ ಎನ್ನುವ ಹೆಸರಿನ ಚಿನ್ನದ ನಾಣ್ಯ ಪ್ರಮುಖವಾದುದು. ಇದರ ಬಳಕೆ ಮೊದಲ ಬಾರಿಗೆ ಕಂಡು ಬರುವುದು ವಿಜಯನಗರದ ಸಾಮ್ರಾಜ್ಯದ ಆಳ್ವಿಕೆಯ ಸಮಯದಲ್ಲಿ ಎನ್ನುವುದು ಇದುವರೆಗೂ ತಿಳಿದುಬಂದ ಮಾಹಿತಿ ಯಾಗಿತ್ತು. ವಿಜಯನಗರ ಸಾಮ್ರಾಜ್ಯವನ್ನು ಆಳಿದ ಸಂಗಮವಂಶದ ದೊರೆ ಎರಡನೆಯ ಹರಿಹರನು (ಕ್ರಿ.ಶ. 1377-1404) ಟಂಕಿಸಿದ ಪ್ರತಾಪ ಎಂಬ ಚಿನ್ನದ ನಾಣ್ಯ ದೊರೆತಿದೆ. ವಿದೇಶೀ ಯಾತ್ರಿಕರು ಇದನ್ನು ಪರ್ತಾವೋ, ಪರ್ದಬ್ ಎಂದು ಕರೆದಿದ್ದಾರೆ[1]. ಆದರೆ ಇತ್ತೀಚಿನ ಶೋಧನೆಗಳಿಂದ ಈ ಹೆಸರಿನ ನಾಣ್ಯ ಕ್ರಿ.ಶ. 11ನೆಯ ಶತಮಾನದ ಸುಮಾರಿನಲ್ಲಿಯೇ ಬಳಕೆಯಲ್ಲಿತ್ತು ಎಂಬ ಅಂಶ ತಿಳಿದು ಬಂದಿದೆ. ಈ ಸಮಯದ ನಾಣ್ಯ ದೊರೆಯದೇ ಇದ್ದರೂ ಶಾಸನವೊಂದರಲ್ಲಿ ಇದರ ದಾಖಲಾತಿಯಿದೆ. ಆದ ಕಾರಣ ಈ ನಾಣ್ಯವನ್ನು ಟಂಕಿಸಿದ್ದು ಎರಡನೆಯ ಹರಿಹರನೆಂದು ಇನ್ನು ಮುಂದೆ ತಿಳಿಯುವುದು ಸಮರ್ಪಕವಾಗಲಾರದು. ಇದರ ಬಗೆಗೆ ಈಗಾಗಲೇ ಸಂಕ್ಷಿಪ್ತವಾಗಿ ಅಧ್ಯಯನ ನಡೆದಿದೆ[2]. ಶಾಸನಗಳಲ್ಲಿ ದೊರಕುವ ನಾಣ್ಯಗಳ ಹೆಸರುಗಳಲ್ಲಿ ಕೆಲವುಗಳ ಬಗೆಗೆ ಅಸ್ಪಷ್ಟತೆಯಿದೆ. ಇದನ್ನು ಗಮನಿಸಿ, ಪ್ರಕೃತ ಲೇಖನದಲ್ಲಿ ಎರಡು ಶಾಸನಗಳಲ್ಲಿ ಕಂಡುಬರುವ ಸಂಣಪ್ರತಾಪ ಹೆಸರಿನ ನಾಣ್ಯವೊಂದರ ಬಗೆಗೆ ಸಂಕ್ಷಿಪ್ತವಾಗಿ ವಿವೇಚಿಸಲಾಗಿದೆ.

ಸಂಣಪ್ರತಾಪ ಎಂಬ ಹೆಸರಿನ ನಾಣ್ಯದ ಉಲ್ಲೇಖವಿರುವ ಎರಡು ಶಾಸನಗಳಲ್ಲಿ ಮೊದಲನೆಯ ಶಾಸನವು ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ಮೂಡಬಿದರೆಯ ಹೊಸ ಬಸ್ತಿಯ [=ತ್ರಿಭುವನ ಚೂಡಾಮಣಿ ಬಸದಿ, ಶ್ರೀ ಚಂದ್ರಪ್ರಭ ತೀರ್ಥಕರ ಬಸದಿ] ಕ್ಷೇತ್ರಪಾಲ ಗುಡಿಯ ಗೋಡೆಯ ಮೇಲಿದೆ[3]. ಇದರ ಕಾಲ ಶಕ 1398, ದುರ್ಮುಖಿ ಸಂವತ್ಸರ, ಮಾಘ ಶುದ್ಧ 10 [=ದಶಮಿ], ಶುಕ್ರವಾರ. ಇದು ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. 24-1-1477, ಶುಕ್ರವಾರಕ್ಕೆ ಸರಿಹೊಂದುತ್ತದೆ. ಇದರಲ್ಲಿ ವಿರೂಪಾಕ್ಷರಾಯನ (ಕ್ರಿ.ಶ. ಸು 1465-1485) ಉಲ್ಲೇಖವಿದ್ದು, ಈತ ವಿಜಯನಗರ ಸಾಮ್ರಾಜ್ಯವನ್ನು ಆಳಿದ ಸಂಗಮ ವಂಶದ ಅರಸನೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಈತನ ಆಳ್ವಿಕೆಯ ಸಮಯದಲ್ಲಿ, ಸಿಂಗಪ್ಪ ದಣ್ಣಾಯಕ ಮತ್ತು ಮಂಗಳೂರು ರಾಜ್ಯದ ಆಡಳಿತಗಾರನಾಗಿದ್ದ ವಿಟ್ಠರಸವೊಡೆಯನ ಕಾಲದಲ್ಲಿ ಚಾರುಕೀರ್ತಿಪಂಡಿತ ದೇವರ ನಿರೂಪದಂತೆ ಬಿದಿರೆಯ ಎಂಟು ಪ್ರಜೆಸೆಟ್ಟಿಕಾರರು, ನಾಲ್ವರೆಳಮೆಗೊಳಗಾದ ಸಮಸ್ತ ಹಲರು ಶ್ರೀ ಚಂದ್ರಪ್ರಭಸ್ವಾಮಿಯ ತ್ರಿಭುವನ ಚೂಡಾಮಣಿಯೆಂಬ ಚೈತ್ಯಾಲಯದ ನಡುವಣ ನೆಲೆಯ ಎರಡು ಗಂಧಕುಟಿಗಳನು ಪೇರಳದ [ಕ]ರಣಂತತ ಬಳಿ[ಯ] [ಮೆಲ್ಲಂಟ] ಸೌಟೆರೆಸೆಟ್ಟಿಯರು ಅವರ ಅಳಿಯ ಚಿಟ್ಟಿಪಾಡಿಯ [ಕೇಚಿ]ಯ ದೇವರುಸೆಟ್ಟಿಯರು ಇವರುಗಳಿಗೆ ಧರ್ಮವಾತ್ಸಲ್ಯದಿಂದ ಕೊಟ್ಟ ದಾನದ ವಿವರ ಈ ಶಾಸನದಲ್ಲಿದೆ. ದಾನದ ವಿವರಗಳು ವಿಶದವಾಗಿ ದಾಖಲಾಗಿದ್ದು, ಇವುಗಳಲ್ಲಿ, ನಾನೂರು ಸಂಣಪ್ರತಾಪ ನಾಣ್ಯಗಳನ್ನು ಕೊಟ್ಟು ಮನೆಯೊಂದನ್ನು ಖರೀದಿಸಿ ದಾನಮಾಡಿದ ಉಲ್ಲೇಖವೂ ಒಂದಾಗಿದೆ. ಆದರೆ ಸಂಣಪ್ರತಾಪ ಎಂಬುದರ ಅರ್ಥ ಅಸ್ಪಷ್ಟವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ನಾಣ್ಯ ಶಾಸ್ತ್ರಜ್ಞರಾದ ಎ.ವಿ. ನರಸಿಂಹಮೂರ್ತಿ ಅವರು ತಮ್ಮ **'ವಿಜಯನಗರದ ನಾಣ್ಯ ಸಂಪತ್ತು'** ಎಂಬ ಕನ್ನಡ ಭಾಷೆಯ

ಪುಸ್ತಿಕೆಯಲ್ಲಿ ಹಾಗೂ ***Coins & Currency System in Vijayanagara Empire*** ಎಂಬ ಇಂಗ್ಲಿಷ್ ಕೃತಿಯಲ್ಲಿ ಶಾಸನೋಕ್ತ ವಿಜಯನಗರದ ನಾಣ್ಯಗಳ ಬಗೆಗೆ ವಿವರಿಸುತ್ತ ಈ ಶಾಸನದ ಸಂಣ ಪ್ರತಾಪ ಎಂಬುದನ್ನು ಕುರಿತು ಕೆಳಗಿನಂತೆ ಬರೆದಿದ್ದಾರೆ.

"ಸಣ್ಣಪ್ರತಾಪ ಎಂಬ ನಾಣ್ಯ ಕ್ರಿ.ಶ. 1477ರ ಶಾಸನವೊಂದರಲ್ಲಿ ಉಲ್ಲೇಖಿತವಾಗಿದೆ. ನಾನೂರು ಸಣ್ಣ ಪ್ರತಾಪಗಳನ್ನು ಕೊಟ್ಟು ಮನೆಯೊಂದನ್ನು ಖರೀದಿಸಲಾಯಿತೆಂದು ಈ ಶಾಸನ ತಿಳಿಸುತ್ತದೆ. ನಾವು ಆಗಲೇ ಗಮನಿಸಿರುವಂತೆ ಪ್ರತಾಪ ಎನ್ನುವುದು ಅರ್ಧ ಗದ್ಯಾಣ ಮೌಲ್ಯದ ಚಿನ್ನದ ನಾಣ್ಯ. ಹಾಗಾದರೆ ಸಣ್ಣ ಪ್ರತಾಪ ಎನ್ನುವ ನಾಣ್ಯ ಇದ್ದಿತೆ ? ಈ ವಿಷಯದಲ್ಲಿ ಖಚಿತವಾದ ಅಭಿಪ್ರಾಯವನ್ನು ಹೇಳುವುದು ಸಾಧ್ಯವಿಲ್ಲವಾಗಿದೆ"[4].

"Sanna Pratapa is mentioned in an Inscription of 1477 A.D. It refers to a house Purchased by paying four hundred Sanna Pratapas. Pratapa as we Know was half of a gadyana. Sanna Pratapa literally means a small Pratapa. In that case was there a big Pratapa? However, its exact Significance cannot be made out from the available data"[5].

ಎ.ವಿ. ನರಸಿಂಹಮೂರ್ತಿ ಅವರು ಉಲ್ಲೇಖಿಸಿರುವ ಶಾಸನದಲ್ಲಿನ, ಈ ನಾಣ್ಯದ ಉಲ್ಲೇಖ ಬರುವ ಭಾಗವನ್ನು ಗಮನಿಸಬಹುದಾಗಿದೆ.

13 ಮೂಡಿಲ್ಲರ ದೇಶದಲ್ಲಿ ನಾಲ್ಕೂರೊಳಗೊಂದೆನಿಸಿದ ಕೆಂಮುತ[ಮ]ರಲ್ಲಿ ಸಂಕರ[ವೊಜೊಂತಿಟಿಿ೦]

14 ಬ ಬ್ರಾಹ್ಮಣನ ಮೂಲದ ಬಯಿಲಗದ್ದೆಗಳೆರಡನು ನಾಲ್ನೂಱು ಸಂಣಪ್ರತಾಪಂಗಳನೂ ಕೊಟ್ಟು

ಎ.ವಿ. ನರಸಿಂಹಮೂರ್ತಿ ಅವರ ಗಮನಕ್ಕೆ ಬಾರದ ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕಿನ ಪೊಳಲಿ ಅಮ್ಮುಂಜೆಯ ಅಮ್ಮುಂಜೆಗುಟ್ಟದ ಬಯಲಿನಲ್ಲಿರುವ ಮತ್ತೊಂದು ಶಾಸನದಲ್ಲಿಯೂ ಸಂಣ ಪ್ರತಾಪ ನಾಣ್ಯದ ಉಲ್ಲೇಖವಿದೆ. ಈ ಶಾಸನದ ಕಾಲ ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. 13–8–1465, ಮಂಗಳವಾರ ಎಂದು ಶಾಸನಸಂಪುಟದಲ್ಲಿ ಹೇಳಿದೆ. ಇದರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಆಳಿದ ಸಂಗಮವಂಶದ ದೊರೆ ಪ್ರೌಢಮಲ್ಲಿಕಾರ್ಜುನ ದೇವರಾಯನ (ಕ್ರಿ.ಶ. ಸು 1449–1465) ಉಲ್ಲೇಖವಿದೆ. ಈತನ ಮುದ್ರೆ ಉಂಗುರವನ್ನು ಧರಿಸಿ ಆಳ್ವಿಕೆ ನಡೆಸುತ್ತಿದ್ದ ರಾಮಚಂದ್ರ ದಣ್ಣಾಯಕ ಮತ್ತು ಮಂಗಳೂರು ರಾಜ್ಯದ ಆಡಳಿತಗಾರನಾಗಿದ್ದ ವಿಟ್ಠರಸವೊಡೆಯನ ಉಲ್ಲೇಖವೂ ಇದೆ. ಪೊಳಲಿದೇವಿಗೆ ಕೊಟ್ಟ ದಾನಶಾಸನವಿದಾಗಿದ್ದು, ಸಂಣಪ್ರತಾಪ ಗದ್ಯಾಣದ ಉಲ್ಲೇಖ ಬರುವ ಶಾಸನದ ಪಾಠ ಭಾಗವಿಂತಿದೆ[6].

19 – – – ಪೊಳಲದೇವಿಯ ಶ್ರೀಗಂಧ ನಂದಾದೀಪ್ತಿಗೆ ವರುಷಂಪ್ರತಿ ನಡವ ಸೀಮೆ ಸಂಣಪ್ರತಾಪ

20 ಗದ್ಯಾಣ 10 ಆ ಹತ್ತು ಹೊಂನು ದೇವರ ವೃಷಾಪೂಜೆಯ ಅಮೃತಪಡಿಯ ಬಗೆಗೆ

ಮೇಲಿನ ಪಾಠಗಳನ್ನು ಗಮನಿಸಿದಾಗ ಸಂಣ ಪ್ರತಾಪ ಎಂಬುದು ಸೊಣ್ಣಪ್ರತಾಪ ಎಂಬುದರ ಬದಲಾಗಿ ಕೆತ್ತಲಾಗಿರುವ ರೂಪ ವೆಂದು ತೋರುತ್ತದೆ. ಇಲ್ಲವೇ ಸ ಅಕ್ಷರಕ್ಕೆ ಇರುವ ಕೊಂಬು ಬಿಂದುವಿನ ಭ್ರಾಂತಿಯನ್ನು ಉಂಟುಮಾಡುವ ಸಾಧ್ಯತೆಯೂ ಇರುವ ಕಾರಣ ಸೊಣ್ಣ ಅಥವಾ ಸೊಣ ಎಂಬುದನ್ನು ಶಾಸನ ಸಂಪಾದಕರು ಸಂಣ ಎಂದು ಓದಿರುವ ಸಾಧ್ಯತೆಯೂ ಇದೆ. ಸೊಂಣ ಎಂದು ಕೆತ್ತನೆಯಿದ್ದರೂ ಇರಬಹುದು. ಸ ಅಕ್ಷರಕ್ಕೆ ಇರುವ ಕೊಂಬು ತೀರಾ ಸಣ್ಣದಾಗಿದ್ದು ಗೋಚರಿಸದೆ ಇರಬಹುದು. ಬಿಂದು ಕೂಡ ಸಣ್ಣದಾಗಿ ಇದ್ದಿರಬಹುದು. ಮುದ್ರಣ ದೋಷವನ್ನೂ ಅಲ್ಲಗಳೆಯುವಂತಿಲ್ಲ. ಈ ಹಿನ್ನೆಲೆಯಲ್ಲಿ ಈ ಶಬ್ದದ ಸರಿಯಾದ ರೂಪ ಸೊಣ್ಣ ಪ್ರತಾಪ ಎಂದಿಟ್ಟುಕೊಳ್ಳಬಹುದು. ಸೊಣ್ಣ ಎಂದರೆ ಏನು ಎಂದು ತಿಳಿದುಕೊಳ್ಳುವುದು ಮುಖ್ಯ. ಸುವರ್ಣ ಶಬ್ದವು ಸುವರ್ಣ > ಸ್ವರ್ಣ > ಸೋಣ್ಣ > ಸೊಣ್ಣ ಎಂದಾಗುವುದು ಭಾಷಿಕ ನಿಯಮದಂತೆ ಸಹಜವಾದುದು. ಸ್ವರ್ಣ ಶಬ್ದದ ಪ್ರಾಕೃತ ರೂಪ ಸೋಣ್ಣ ಆಗಿದೆ. ಸೋಣ್ಣ ಶಬ್ದವು ಕನ್ನಡದಲ್ಲಿ ಸೊಣ್ಣ ಎಂದಾಗಿದೆ. ಸುವರ್ಣ ಎಂದರೆ ಚಿನ್ನ ಎಂದರ್ಥ. ಹಿಂದೀ ಭಾಷೆಯಲ್ಲಿ ಸೋನಾ, ಸೋನೆ ಎಂಬ ಶಬ್ದಗಳಿದ್ದು, ಇವುಗಳ

ಅರ್ಥ ಚಿನ್ನ ಎಂಬುದಾಗಿದೆ. ಸುವರ್ಣ ಶಬ್ದವು ಸೋವಣ ಎಂಬ ರೂಪದಲ್ಲಿಯೂ ಶಾಸನವೊಂದರಲ್ಲಿ ದೊರಕುತ್ತದೆ[7]. ಇದು ಕೂಡ ಗಮನಾರ್ಹವಾದ ರೂಪವೇ ಆಗಿದೆ. ಸೋವಣ > ಸೋಣ ಆಗುವುದು ಭಾಷಾಶಾಸ್ತ್ರದ ದೃಷ್ಟಿಯಿಂದ ಸಮ್ಮತವಾದುದು. ಚಿನ್ನ ಎಂಬರ್ಥದ ಸೊನ್ನೆ ಎಂಬ ಶಬ್ದ ಕನ್ನಡದಲ್ಲಿ ದೊರಕುತ್ತದೆ[8]. ಸೊಣ್ಣ > ಸೊನ್ನೆ ಆಗುವುದು ಸ್ವಾಭಾವಿಕ. ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಸ್ವರ್ಣ > ಸೊನ್ನೆ ಎಂಬುದಾಗಿ ಸೂಚಿಸಲಾಗಿದೆ[9]. ಈ ಅಂಶ ಗಳನ್ನು ಗಮನಿಸಿಕೊಂಡು ಸೊಣ್ಣ ಪ್ರತಾಪ ಎಂದರೆ ಚಿನ್ನದ ಪ್ರತಾಪ ನಾಣ್ಯ ಎಂದು ತಿಳಿಯಬಹುದು. ಸೋಣ್ಣ ಪ್ರತಾಪ ಎಂಬ ಹೆಸರಿದ್ದರೂ ತೊಂದರೆಯೇನಿಲ್ಲ. ಅನೇಕ ಸಂಶೋಧಕರು ಸಂಣ ಪ್ರತಾಪ ಎಂದರೆ ಚಿಕ್ಕನಾಣ್ಯ ಎಂದು ಅರ್ಥ ಬರೆದಿದ್ದಾರೆ. ಇದು ಶಾಸನದ ಸಂದರ್ಭಕ್ಕೆ ಸರಿಹೊಂದುತ್ತದೆಯೇ ಎಂಬುದನ್ನು ಗಮನಿಸಬೇಕು. ಏಕೆಂದರೆ ಪ್ರತಾಪ ನಾಣ್ಯದಲ್ಲಿ ಚಿಕ್ಕದು, ದೊಡ್ಡದು ಎನ್ನುವಂತಹ ಭೇದಗಳು ದೊರೆತಿರುವಂತೆ ಕಾಣುವುದಿಲ್ಲ. ಹಾಗೇನಾದರೂ ಇದ್ದರೆ/ದೊರೆತರೆ ಸಣ್ಣಪ್ರತಾಪ ಎಂಬ ಹೆಸರು ಸಾರ್ಥಕವೆಂದು ಹೇಳಬಹುದು. ವಿಜಯನಗರ ಸಾಮ್ರಾಜ್ಯದ ನಾಣ್ಯಗಳಲ್ಲಿ ಈ ವರೆಗೂ ತಿಳಿದುಬಂದಿರುವಂತೆ ಪ್ರತಾಪ ಎನ್ನುವ ನಾಣ್ಯವು ಅರ್ಧ ಗದ್ಯಾಣ ಮೌಲ್ಯದ ಚಿನ್ನದ ನಾಣ್ಯವಾಗಿದೆ. ಪೊಳಲಿ ಅಮ್ಮುಂಜೆಯ ಶಾಸನದಲ್ಲಿ ಸಂಣ ಪ್ರತಾಪ ಗದ್ಯಾಣ ಎಂದೇ ಹೇಳಿರುವುದು ಗಮನಾರ್ಹ ಅಂಶ (ಬೆಳ್ಳಿ, ತಾಮ್ರ, ಚಿನ್ನದ ಗದ್ಯಾಣಗಳು ಇರುವ ಕಾರಣ ಆಯಾ ಕಾಲದಲ್ಲಿಯೇ ಇವುಗಳಲ್ಲಿ ಭೇದವನ್ನು ತೋರಿಸುವ ಸಲುವಾಗಿ ಚಿನ್ನದ ಗದ್ಯಾಣ, ಬೆಳ್ಳಿಯ ಗದ್ಯಾಣ ಎಂದು ಕರೆದಿರುವಂತೆ ಕಾಣುತ್ತದೆ. ಒನ್ನ ಶಬ್ದಕ್ಕೆ ಸಮಾನಾರ್ಥವಿರುವ ಶಬ್ದಗಳನ್ನೂ ಬಳಸಲಾಗಿದೆ). ಸಂಣ ಎಂಬುದನ್ನು ಅರ್ಥ ಮೌಲ್ಯಕ್ಕೆ ಅನ್ವಯಿಸುವುದು ಸಾಧ್ಯವಿಲ್ಲ. ಆದ ಕಾರಣ ಸಂಣ ಪ್ರತಾಪ ಎನ್ನುವುದು ಬಲುಮಟ್ಟಿಗೆ ಸೊಣ್ಣಪ್ರತಾಪ ಎಂಬುದರ ಬದಲಾಗಿ ಕೆತ್ತಲಾಗಿರುವ ರೂಪವಾಗಿದೆ ಎಂದು ತಿಳಿಯುವುದರಲ್ಲಿ ತಪ್ಪೇನೂ ಆಗಲಾರದೆಂದು ತೋರುತ್ತದೆ. ಆದರೂ ಎರಡೂ ಶಾಸನಗಳ ಪಾಠವನ್ನು ಮತ್ತೊಮ್ಮೆ ಪರಿಶೀಲಿಸುವುದು ಸೂಕ್ತವೆಂದು ಹೇಳಬಹುದು. ಇವೆರಡೂ ಉಲ್ಲೇಖಗಳು ಕರಾವಳಿ ಕರ್ನಾಟಕ ಭಾಗದ ಶಾಸನಗಳಲ್ಲಿ ಮಾತ್ರ ಕಂಡುಬರುತ್ತಿರುವುದು ಕುತೂಹಲಕಾರಿಯಾಗಿದೆ. ಒಟ್ಟಾರೆಯಾಗಿ ಇವುಗಳ ಬಗೆಗೆ ಹೆಚ್ಚಿನ ಅಧ್ಯಯನದ ಅಗತ್ಯವಿದ್ದು, ನಾಣ್ಯದ ಶೋಧನೆಯೂ ನಡೆಯಬೇಕಿದೆ {ಈಚೆಗೆ ಇವೆರಡೂ ಶಾಸನಗಳನ್ನೂ ಮೂಲದಲ್ಲೇ ಪರೀಕ್ಷಿಸಿದಾಗ ಸ ಅಕ್ಷರಕ್ಕೆ ಇರುವ ಕೊಂಬು ಸಣ್ಣದಾಗಿದ್ದು, ಸ್ವಲ್ಪ ಚಕ್ಕೆ ಎದ್ದಿರುವುದು ಕಂಡುಬಂದಿತು. ಆದ ಕಾರಣ ಸಂಣ ಎಂಬುದನ್ನು ಸೊಣ ಅಥವಾ ಸೋಣ ಎಂದು ಧೈರ್ಯವಾಗಿ ಓದಬಹುದಾಗಿದೆ}.

ಸಂಣಪ್ರತಾಪ ಎಂಬ ಹೆಸರಿನ ನಾಣ್ಯ ಮೇಲಿನ ಎರಡು ಉಲ್ಲೇಖಗಳನ್ನು ಹೊರತುಪಡಿಸಿ ಬೇರೆ ಶಾಸನಗಳಲ್ಲಿ ಉಲ್ಲೇಖವಾಗಿ ರುವುದು ಸದ್ಯದಲ್ಲಂತೂ ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಹೆಚ್ಚಿನ ಪ್ರಯೋಗಗಳು ದೊರೆತರೆ ಬೇರೆ ರೀತಿಯಲ್ಲಿಯೂ ಅರ್ಥೈಸುವ ಸಾಧ್ಯತೆಯನ್ನು ಪರಿಶೀಲಿಸಬಹುದು. ಪ್ರತಾಪ ನಾಣ್ಯದ ಉಲ್ಲೇಖವಂತೂ ವಿಜಯನಗರ ಸಾಮ್ರಾಜ್ಯದ ಶಾಸನಗಳಲ್ಲಿ ಮತ್ತು ಆ ಕಾಲದ ಇತರ ಶಾಸನಗಳಲ್ಲಿ ಬಹಳವಾಗಿ ಕಂಡುಬರುತ್ತದೆ. ಶಾಸನಗಳಲ್ಲಿ ಕಂಡುಬರುವ ಅಪಲಿಖಿತ ರೂಪಗಳನ್ನು ಆಯಾ ಕಾಲದ ಆಡುನುಡಿಯೆಂದು ಪರಿಗಣಿಸುವುದು ಸಮರ್ಥನೀಯವಲ್ಲ. ಕಂಡರಣೆಕಾರರಿಂದಾಗಿರುವ ಸ್ಖಾಲಿತ್ಯಗಳನ್ನು ಭಾಷೆ, ಸಾಹಿತ್ಯ, ಶಾಸನ ರಚನೆಯ ಬಂಧ, ಲಿಪಿ ಮುಂತಾದ ಅಂಶಗಳ ಆಧಾರದಿಂದ ಸರಿಪಡಿಸಿಕೊಳ್ಳಬೇಕು. ಎತ್ವ, ಒತ್ವ, ಹ್ರಸ್ವ, ದೀರ್ಘಗಳನ್ನು ಭಾಷೆ, ಬಂಧ ಸಂದರ್ಭಾನುಸಾರ ಓದಿಕೊಳ್ಳಬೇಕು. ಆಗ ಮಾತ್ರ ಸಮರ್ಪಕವಾದ ವಿಶ್ಲೇಷಣೆಗಳು ಸಾಧ್ಯವಾಗುತ್ತವೆ. ನಾಣ್ಯಗಳ ಬಗೆಗೆ ಪ್ರಕಟವಾಗಿರುವ ಬರಹಗಳನ್ನೂ ಈ ಸಂದರ್ಭದಲ್ಲಿ ನೋಡಬೇಕು (ಪ್ರಕೃತ ಲೇಖನದ ಕೊನೆಗೆ ಕರ್ನಾಟಕದ ನಾಣ್ಯಶಾಸ್ತ್ರವನ್ನು ಕುರಿತು ಪ್ರಕಟವಾಗಿರುವ ಗ್ರಂಥಗಳ ಸಣ್ಣ ಸೂಚಿಯನ್ನು ನೀಡಲಾಗಿದೆ. ಇದೇನೂ ಪೂರ್ಣ ಪ್ರಮಾಣದ ಸೂಚಿಯಲ್ಲ. ಲೇಖನಗಳ ವಿವರಗಳನ್ನು ಇಲ್ಲಿ ಸೇರಿಸಲು ಸಾಧ್ಯವಾಗಿಲ್ಲ. ಸಾಧ್ಯವಿರುವ ಮಟ್ಟಿಗೂ ಗ್ರಂಥಗಳ ವಿವರಗಳನ್ನು ಮಾತ್ರ ನಿರ್ದಿಷ್ಟವಾಗಿ ನೀಡಲಾಗಿದೆ). ಈ ಹಿನ್ನೆಲೆಯಲ್ಲಿಯೇ ಪ್ರಕೃತ ಬರಹ ರೂಪುಗೊಂಡಿದೆ. ಈ ಲೇಖನದಲ್ಲಿ ಕೆಲವು ಲೋಪ ದೋಷಗಳೂ ಇದ್ದಿರಬಹುದು. ಇವುಗಳನ್ನು ಆಧಾರಸಹಿತವಾಗಿ ಪ್ರಕೃತ ಲೇಖಕನ ಗಮನಕ್ಕೆ ತಂದಲ್ಲಿ ಕೃತಜ್ಞತೆಯಿಂದ ಸರಿಪಡಿಸಿಕೊಳ್ಳಲಾಗುವುದು[10].

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. ಇದರ ಬಗೆಗೆ ಹೆಚ್ಚಿನ ಮಾಹಿತಿಗೆ ಕೆಳಗೆ ದಾಖಲಿಸಿರುವ ಬರಹಗಳನ್ನು ಪ್ರಮುಖವಾಗಿ ನೋಡಬಹುದು.

   (ಅ) **ವಿಜಯನಗರದ ನಾಣ್ಯ ಸಂಪತ್ತು**–ಎ.ವಿ. ನರಸಿಂಹಮೂರ್ತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–1996

   (ಆ) **ಕರ್ನಾಟಕ ನಾಣ್ಯ ಪರಂಪರೆ**–ಎ.ವಿ. ನರಸಿಂಹಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2003

   (ಇ) ***Coins & Currency System in Karnataka***-A.V. Narasimha Murthy, Directorate of Archaeology & Museums Karnataka, Mysore-1997

   (ಈ) ***Coins & Currency System in Vijayanagara Empire***-A.V. Narasimha Murthy, The Numismatic Society of India, Varanasi-1991

2. **ಕುಂದನಾಡಿನ ಶಾಸನಗಳು**–(ಸಂ) ಪಿ.ಎನ್. ನರಸಿಂಹಮೂರ್ತಿ, ಸ್ವಾಗತ ಸಮಿತಿ, ಅಖಿಲ ಭಾರತ 74 ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಉಡುಪಿ–2007, ಸಂಖ್ಯೆ–22, ಪುಟ 149–150 ಮತ್ತು ಪುಟ 6–7 {ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬಿಜೂರಿನ ಈ ಶಾಸನದಲ್ಲಿ 460 ಪ್ರತಾಪ ಎಂಬ ಉಲ್ಲೇಖವಿದೆ. ಈ ಶಾಸನದ ಕಾಲವನ್ನು ಪಿ.ಎನ್. ನರಸಿಂಹಮೂರ್ತಿ ಅವರು ಕ್ರಿ.ಶ. 1025 ಎಂದು ಸೂಚಿಸಿದ್ದಾರೆ} ; ಈ ಶಾಸನದಲ್ಲಿ ಕಂಡುಬರುವ ಪ್ರತಾಪ ನಾಣ್ಯವನ್ನು ಕುರಿತು ಎ. ವಿ. ನರಸಿಂಹಮೂರ್ತಿ ಅವರು ***Antiquity of the Coin Pratapa*** ಎಂಬ ಲೇಖನವನ್ನು ಪ್ರಕಟಿಸಿದ್ದಾರೆ (Studies in South Indian Coins, Volume-XXVII, South Indian Numismatis Society, Chennai-2017, pp 124-127).

3. ಈ ಶಾಸನವು ವರದಿಯಾಗಿರುವ ಆಕರಗಳು ಮತ್ತು ಪ್ರಕಟವಾಗಿರುವ ಕೃತಿಗಳ ವಿವರ ಇಂತಿದೆ.

   (ಅ) ***Annual Report on Indian Epigraphy*, B 39 of 1901** (Summary Only)

   (ಆ) ***South Indian Inscriptions*, Volume-7, No-209** {ಪ್ರಕೃತ ಲೇಖನದಲ್ಲಿ ಈ ಸಂಪುಟದ ಪಾಠವನ್ನು ಆಧಾರವಾಗಿರಿಸಿಕೊಳ್ಳಲಾಗಿದೆ}

   (ಇ) ***Vijayanagara Inscriptions*, Volume-2,** (Ed) B.R. Gopal, Directorate of Archaeology & Museums, Mysore-1986, (Summary Only), No-1019, pp 269

   (ಈ) ***Inscriptions of Vijayanagara Rulers* {Volume-1, Part-5, Kannada Inscriptions}** - (Ed) Srinivasa Ritti, B.R. Gopal, I.C.H.R. & Northern Book Centre, New Delhi-2004, No-808, pp 1949-1951

   (ಉ) **ಮೂಡುಬಿದಿರೆ ಶ್ರೀ ಚಂದ್ರನಾಥ ಸ್ವಾಮಿಯ ಸಾವಿರ ಕಂಬದ ಬಸದಿ**–ವೈ. ಉಮಾನಾಥ ಶೆಣೈ, ಶ್ರೀಧವಲತ್ರಯ ಪ್ರಕಾಶನ ಟ್ರಸ್ಟ್, ಶ್ರೀ ಜೈನ ಮಠ, ಮೂಡುಬಿದಿರೆ–2008, ಪುಟ 74–75

4. **ವಿಜಯನಗರದ ನಾಣ್ಯ ಸಂಪತ್ತು**–ಎ.ವಿ. ನರಸಿಂಹಮೂರ್ತಿ, ಪುಟ 45

5. ***Coins & Currency System in Vijayanagara Empire***-A.V. Narasimha Murthy, pp 34

6. ಈ ಶಾಸನವು ವರದಿಯಾಗಿರುವ ಆಕರಗಳು ಮತ್ತು ಪ್ರಕಟವಾಗಿರುವ ಕೃತಿಗಳ ವಿವರ ಇಂತಿದೆ.

   (ಅ) ***Annual Report on Indian Epigraphy*, B 376 of 1928** (Summary Only)

   (ಆ) ***South Indian Inscriptions*, Volume-9, Part-2, No-460** {ಪ್ರಕೃತ ಲೇಖನದಲ್ಲಿ ಈ ಸಂಪುಟದ ಪಾಠವನ್ನು ಆಧಾರವಾಗಿರಿಸಿಕೊಳ್ಳಲಾಗಿದೆ}

(ಇ) ***Vijayanagara Inscriptions*, Volume-2,** (Ed) B.R. Gopal, (Summary Only), No-1052, pp 283-284

(ಈ) ***Inscriptions of Vijayanagara Rulers* {Volume-1, Part-5, Kannada Inscriptions}** - No- 764, pp 1826-1828

7. **ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–3 (ಪರಿಷ್ಕೃತ),** ಗುಂಡ್ಲುಪೇಟೆ–54, ಪುಟ 44, ಸಾಲು 6
8. **ಸೊನ್ನೆ, ಕಸವರಂ, ಚೆಂಬೊನ್, ಮಿಸುನಿ–ಈ ನಾಲ್ಕು ಸುವರ್ಣಂ {ಅಜ್ಞಾತ ಕರ್ತೃಕ ಕರ್ಣಾಟಕ ಶಬ್ದಸಾರಂ,** ಕ್ರಿ.ಶ.ಸು 1400}–(ಸಂ) ಎಸ್.ಜಿ. ನರಸಿಂಹಾಚಾರ್ಯ ಮತ್ತು ಮಂ.ಆ. ರಾಮಾನುಜ ಅಯ್ಯಂಗಾರ್, ಕರ್ಣಾಟಕ ಕಾವ್ಯಮಂಜರಿ ಮಾಲೆ–18, ಮೈಸೂರು–1897, ಪುಟ 5, ಸಂಖ್ಯೆ–61
9. **ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ**–(ಸಂ) ಟಿ.ವಿ. ವೆಂಕಟಾಚಲಶಾಸ್ತ್ರೀ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು–2008, ಪರಿಷ್ಕೃತ ದ್ವಿತೀಯ ಮುದ್ರಣ, ಸೂತ್ರ–284 ರ ಪ್ರಯೋಗ, ಪುಟ 271
10. ಈ ಲೇಖನವನ್ನು ಖ್ಯಾತ ನಾಣ್ಯಶಾಸ್ತ್ರಜ್ಞರೂ ಪುರಾತತ್ತ್ವಜ್ಞರೂ ಶಾಸನತಜ್ಞರೂ ಆದ ಡಾ.ಎ.ವಿ. ನರಸಿಂಹಮೂರ್ತಿ ಅವರು ಪರಿಶೀಲಿಸಿ ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ. ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಕರ್ನಾಟಕ ನಾಣ್ಯಶಾಸ್ತ್ರವನ್ನು ಕುರಿತಾದ ಕೃತಿಗಳ ಸೂಚಿ

ಕರ್ನಾಟಕ ಮತ್ತು ಭಾರತೀಯ ನಾಣ್ಯಶಾಸ್ತ್ರವನ್ನು ಕುರಿತಾದ ಕನ್ನಡ ಗ್ರಂಥಗಳು / ಸಂಪಾದಿತ ಕೃತಿಗಳು

1. **ಕರ್ನಾಟಕ ನಾಣ್ಯ ಸಂಪತ್ತು**–ಎ.ವಿ. ನರಸಿಂಹಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ವಿಶ್ವ ಕನ್ನಡ ಸಮ್ಮೇಳನಮಾಲೆ, ಬೆಂಗಳೂರು–1983
2. **ಕರ್ನಾಟಕದ ನಾಣ್ಯಗಳು**–ಎ.ವಿ. ನರಸಿಂಹಮೂರ್ತಿ, ಪ್ರಚಾರ ಪುಸ್ತಕ ಮಾಲೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2009
3. **ಕರ್ನಾಟಕದಲ್ಲಿ ವಿದೇಶೀ ನಾಣ್ಯಗಳು**–ಎ.ವಿ. ನರಸಿಂಹಮೂರ್ತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2000
4. **ಕರ್ನಾಟಕ ನಾಣ್ಯಶಾಸ್ತ್ರ ಅಧ್ಯಯನ**–ಎ.ವಿ. ನರಸಿಂಹಮೂರ್ತಿ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು–2010
5. **ಕರ್ನಾಟಕ ನಾಣ್ಯ ಪರಂಪರೆ**–ಎ.ವಿ. ನರಸಿಂಹಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2003
6. **ನಾಣ್ಯ ಕರ್ನಾಟಕ** (ವಸ್ತು ವಿನಿಮಯದಿಂದ ಕ್ರಿ.ಶ. 2000 ದ ವರೆಗೆ) – ಹೆಚ್. ಖಂಡೋಬರಾವ್, ಮಗರ್ ಪಬ್ಲಿಕೇಷನ್ಸ್, ಶಿವಮೊಗ್ಗ–2002
7. **ನಾಣ್ಯದರ್ಶಿನಿ** {ನೆನಪಿನ ಸಂಚಿಕೆ, ಶ್ರೀ ಕೇಶವಮೂರ್ತಿ ಹುಣಸೂರುರವರ 100ನೇ ಅಪೂರ್ವ ನಾಣ್ಯ ನೋಟುಗಳ ಪ್ರದರ್ಶನ}–(ಸಂ) ಎ.ವಿ. ನರಸಿಂಹಮೂರ್ತಿ, 2005
8. **ನಾಣ್ಯದರ್ಶಿನಿ–2012** {Souvenir of Nanya Darshini-2012}, ಕನ್ನಡನಾಡು ನಾಣ್ಯಸಂಘ (ರಿ), ಬೆಂಗಳೂರು–2012
9. **ನಾಣ್ಯದರ್ಶಿನಿ–2014** {Souvenir of Nanya Darshini-2012}, ಕನ್ನಡನಾಡು ನಾಣ್ಯಸಂಘ (ರಿ), ಬೆಂಗಳೂರು–2014
10. **ನಾಣ್ಯದರ್ಶಿನಿ–2016** {Souvenir of Nanya Darshini-2012}, ಕನ್ನಡನಾಡು ನಾಣ್ಯಸಂಘ (ರಿ), ಬೆಂಗಳೂರು–2016
11. **ವಿಜಯನಗರದ ನಾಣ್ಯ ಸಂಪತ್ತು**–ಎ.ವಿ. ನರಸಿಂಹಮೂರ್ತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–1996

12. ಸ್ವಾತಂತ್ರ್ಯೋತ್ತರದಲ್ಲಿ ಕರ್ನಾಟಕ ನಾಣ್ಯಶಾಸ್ತ್ರ–(ಸಂ) ಎಂ. ವಿ. ಕೃಷ್ಣಪ್ಪ, ಆರ್. ಗೋಪಾಲ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು–1999

ಕರ್ನಾಟಕ ನಾಣ್ಯಶಾಸ್ತ್ರವನ್ನು ಕುರಿತಾದ ಇಂಗ್ಲಿಷ್ ಗ್ರಂಥಗಳು / ಸಂಪಾದಿತ ಕೃತಿಗಳು

1. ***A Brief Sketch of the old, Silver and Copper Coinage of Mysore (Coins of Mysore)***-H.P. Hawkes, Bangalore-1856
2. ***A Study of the Satavahana Coinage***-Mala Dutta, Harman Publishing House, New Delhi-1990
3. ***An Introduction to the Satavahana Coinage***-Surendra Lal Srivastava, Krishna Books Publications, Mau (U.P)-2006
4. ***Coin Collecting in Mysore***- Jackson R.P., London-1909
5. ***Coinage in Mysore***-P.B. Ramachandra Rao, Bangalore-1957
6. ***Coinage of the Satavahana Empire***-I.K. Sarma, Agam Kala Prakashan, Delhi-1980
7. ***Coins & Currency System in Vijayanagara Empire***-A.V. Narasimha Murthy, The Numismatic Society of India, Varanasi-1991
8. ***Coins and Currency System in Karnataka***-A.V. Narasimha Murthy, Directorate of Archaeology and Museums Karnataka, Mysore-1997
9. ***Coins Of Banavasi***-K. Ganesh, Published by Author, 2008
10. ***Coins of Karnataka***-A.V. Narasimha Murthy, Geetha Book House, Mysore-1975
11. ***Coins of Karnataka*** {From Barter System to 1947 A.D}-H. Khandoba Rao, Magar Publishers, Shimoga-2002
12. ***Copper Coins of the Bahmanis***-D. Raja Reddy, Reesha Books International, Mumbai-2011, Revised Edition
13. ***Deccan Numismatics***-M. H. Krishna {Unpublished}
14. ***Directory cum Souvenir, 20th Anniversary Celebrations,*** ಕನ್ನಡನಾಡು ನಾಣ್ಯಸಂಘ (ರಿ), ಬೆಂಗಳೂರು–1994
15. ***Gold Coins in the Srivari Hundi of Lord sri Venkateswara***-(Ed) A. V. Narasimha Murthy, Deme Raja Reddy, Numismatic Series, No-1, Sri Venkateswara Museum, Tirumala Tirupati Devasthanam-2012
16. ***Karnataka coins***-K. Ganesh, Published by Author, 2007
17. ***Karnataka Numismatics Society*** , Directory Cum Souvenir 20th Anniversary Celebrations 14-15 May 1994
18. ***Karnataka Numismatics Studies***-K. Ganesh, Girijapathy, Published by Authors, 1999

19. ***Recent Numismatic Discoveries In Karnataka***-M.S.Nagaraja rao, Directorate of Archaeology and Museums in Karnataka & The Mythic Society, Bangalore (A Special Exhibition on the Occasion of the 67th Annual Conference of The Numismatic Society of India, Bangalore)-1980
20. ***Satavahana Epoch a New Light***-P.V. Parabrahma Sastry, Telugu Goshthi, Hyderabad-1994
21. ***Satavahana Coins A Guide***-Deme Raja Reddy, B R Publishing Corporation, Delhi-2017
22. ***Select Gold And Silver Coins In The Andhra Pradesh Archaeological Museum***- Rama Rao. M., Hyderabad- 1963
23. ***Silver, Copper & other Metal Coins in the Srivari Hundi of Lord sri Venkateswara***-(Ed) A. V. Narasimha Murthy, Deme Raja Reddy, Numismatic Series, No-2, Sri Venkateswara Museum, Tirumala Tirupati Devasthanam-2013
24. ***Some Aspects of Early Historic Archaeology & Numismatics of Karnataka***-A.V. Narasimha Murthy, University of Madras, Madras-1991
25. ***Studies In Karnataka Numismatics***-A.V. Narasimha Murthy, Directorate Of Archaeology And Museums, Mysore-1996
26. ***Studies In The Early Coins Of Karnataka***- H. R. Raghunath Bhat, Directorate Of Archaeology And Museums, Hospet-2003
27. ***Studies in vijayanagar Coins***- K. Ganesh, Published by Author, 2009
28. ***The Alupas, Coinage and History*** by Govindraya Prabhu. S & Nithyananda Pai.M., Published by Authors, 2006
29. ***The Coinage & History of Vijayanagara Empire***-K. Ganesh, Published by Author, 2009
30. ***The Coinage and History of Southern India*** (Part-1, Karnataka, Andhra)- Michael Mitchiner, Hawkins Publications, Ravenhill, Rectory Park, Sanderstead CR2 9JR, London-1998
31. ***The Coinage And History Of Wodeyars Of Mysore***- M. Girijapathy, Published by Author, 2014
32. ***The Coins of Haidar Ali & Tippu Sultan***-J.R. Henderson, Madras-1921, Reprint : R.K. Publishers, Delhi-1987
33. ***The Coins of the Hoysalas***-K. Ganesh, Girijapathy, Published by Authors, 1998
34. ***The Coins of the Vijayanagara Empire***-K. Ganesh, Girijapathy, Published by Authors, 1997
35. ***The Coins of Tipu***-Rev.Geo. P. Taylor, Asian Educational Services, New Delhi-1989, First Published-1914
36. ***Venetian Coins In Karnataka***- R. Gopal, Directorate Of Archaeology And Museums, Hospet-2005

ಸೂಚಿಗಳು

ಇಂದಿನ ಕರ್ನಾಟಕದಲ್ಲಿರುವ ನಾಣ್ಯಗಳ ಸೂಚಿ

1. *Catalogue of Mysore Coins In The Collection of The Government Museum Bangalore* by capt R H Campbell Tufnell, Madras -1889

ಹೊರ ರಾಜ್ಯಗಳಲ್ಲಿರುವ ಕರ್ನಾಟಕ/ ಕರ್ನಾಟಕ ಸಂಬಂಧೀ ನಾಣ್ಯಗಳ ವಿವರಗಳುಳ್ಳ ಸೂಚಿಗಳು

2. *A Catalogue of the Vijayanagara Coins of the Andhra Pradesh Government Museum-* N. Rameshan, Archaeological Series-4, The Government of Andhrapradesh, Hyderabad-1972
3. *A Catalogue of Yadava Coins In The Andhra Pradesh State Museum Hyderabad-* Subramanyam. R., Andhra Pradesh Government Museum series-9, The Government of Andhra Pradesh-1965
4. *Bahmani Coins in the Andhra Pradesh Government Museum, Hyderabad* by Mohd Abdul Wali Khan, Andhra Pradesh Government Museum series-7, Government of Andhra Pradesh-1964
5. *Catalogue of Coins In The Provincial Museum Lucknow* (Coins of the Mughal Emperors, Volume-1, prefaces & plates) by C. J. Brown, Published For The United Provinces Government, Oxford-1920
6. *Catalogue of Coins In The Provincial Museum Lucknow* (Coins Of The Mughal Emperors, Volume-2, Catalogue) by C. J. Brown, Published For The United Provinces Government, Oxford-1920
7. *Catalogue of Indian Coins In The British Museum* (the Muhammadan states) by Stanley Lane-Poole, Edited by Reginald Stuart Poole, London-1885
8. *Catalogue of The Coins In The Indian Museum Calcutta* **(volume-1)** by v a smith, Published For The Trustees Of The Indian Museum, Oxford-1906
9. *Catalogue of The Coins In The Indian Museum Calcutta, Including The Cabinet Of The Asiatic Society Of Bengal* (Volume-3, Mughal Emperors Of India), by H Nelson Wright, Published For The Trustees Of The Indian Museum, Oxford-1907
10. *Catalogue of The Coins Of The Indian Museum*, Part-2 (The Mogul Emperors Of India, The East India Company, The Native States, The Indian Empire, Medals & Tokens) by Chas J Rodgers, Calcutta-1894
11. *Catalogue of The Coins Of The Indian Museum*, Part-3 (Ancient Coins Of India, Medieval Coins Of India, Miscellaneous North Indian Coins, Miscellaneous South Indian Indian Coins) by Chas J Rodgers, Calcutta-1895

12. *Catalogue of Vijayanagara Coins In the Madras Government Museum*- N. Shankaranarayanan, Government of Tamilnadu, Madras-1977

13. *Government Central Museum, Madras Coins Catalogue, No-1, Mysore* by Edgar Thurston, Madras-1888

14. *Manual on the Numismatic Gallery in the Government Museum, Chennai* (Typological, Descriptive & Chronological Catalogue on Coins & Medals)-R. Kannan, Government Museum, Chennai, New Series, General Section, Volume-xvii, No-3, 2003

15. *Punch-Marked Coins in the Andhra Pradesh Government Museum*-Parmeshwari Lal Gupta, Andhra Pradesh Government Museum Series-1, Government of Andhra Pradesh-1960

16. *Qutub Shahi Coins in the Andhra Pradesh Government Museum* by Mohd Abdul Wali Khan, Andhra Pradesh Government Museum series-3, Government of Andhra Pradesh-1961

17. *Satavahana Coins in the Andhra Pradesh Govt Museum*- Rama Rao. M., Andhra Pradesh Government Museum series-2, Government of Andhra Pradesh, Hyderabad-1961

18. *Select Gold and Silver Coins in the Andhra Pradesh Government Museum, Hyderabad*- M. Rama Rao, Andhra Pradesh Government Archaeological Series-13, Government of Andhra Pradesh, Hyderabad-1963

ನಾಣ್ಯಗಳ ವಿವರಗಳನ್ನೊಳಕೊಂಡ ಉತ್ಖನನಗಳ ವರದಿಗಳು
{ಇಂದಿನ ಕರ್ನಾಟಕವನ್ನು ಅನುಲಕ್ಷಿಸಿ}

1. *Excavations at Banavasi*-(Ed) A.V. Narasimhamurthy & Others, Directorate of Archaeology and Museums, Mysore, India-1997

2. *Excavations at Talakadu*, **Volume-1** - (Ed) A.V. Narasimhamurthy & Others, Directorate of Archaeology and Museums, Mysore, India-1996

3. *Excavations at Sannathi, 1986-1989*- (Ed) James R. Howell, G. V. S. Rao, J. Vara Prasada Rao, Annie Howell, Memoirs of the Archaeological Survey of India-93, Archaeological Survey Of India, New Delhi-1995

4. *Excavations at Kanaganahalli (Sannati), Taluk Chitapur, Dist. Gulbarga, Karnataka*, Archaeological Survey Of India, New Delhi-2013

5. *Interim Report on the Excavations at Sannati, 1993-95*-(Ed) D. V. Devaraj, H.T. Talwar, Directorate of Archaeology and Museums, Mysore, India-1996

ಸಂಕೀರ್ಣ

{ಕರ್ನಾಟಕದ ನಾಣ್ಯಗಳನ್ನು ಕುರಿತು ಮಾಹಿತಿ ಲಭಿಸುವ ಕನ್ನಡ, ಇಂಗ್ಲಿಷ್ ಗ್ರಂಥಗಳು / ಸಂಪಾದಿತ ಕೃತಿಗಳು ಹಾಗೂ ಇತರ ಬರಹಗಳು}

1. **ತಿರುಮಲ ಶ್ರೀ ವೆಂಕಟೇಶುನಿ ಹುಂಡಿಲೋ ಬಂಗಾರು ನಾಣೆಲು**–(ಸಂ) ಎ.ವಿ. ನರಸಿಂಹಮೂರ್ತಿ, ದೇಮೆ ರಾಜಾರೆಡ್ಡಿ, (ತೆಲುಗು ಅನುವಾದ–ಗೋಪರಾಜು ನಾರಾಯಣರಾವು), ನಾಣೆಲ ಅಧ್ಯಯನಂ–1, ಶ್ರೀ ವೆಂಕಟೇಶ್ವರ ವಸ್ತುಸಂಗ್ರಹಾಲಯಮು, ತಿರುಮಲ ತಿರುಪತಿ ದೇವಸ್ಥಾನಮು–2013
2. **ನಾಣ್ಯಗಳು** – (ಮೂಲ–ಪರಮೇಶ್ವರಿ ಲಾಲ್ ಗುಪ್ತ) ಅನುವಾದ– ಎ.ಎಂ. ಅಣ್ಣಿಗೇರಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–1992
3. **ಭಾರತೀಯ ನಾಣ್ಯಗಳು**–ಎ.ವಿ. ನರಸಿಂಹಮೂರ್ತಿ, ಪ್ರಚಾರ ಪುಸ್ತಕ ಮಾಲೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–1971
4. **ಭಾರತೀಯ ನಾಣ್ಯ ಪರಂಪರೆ**–ಎ.ವಿ. ನರಸಿಂಹಮೂರ್ತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2008
5. **ಭಾರತದ ಪ್ರಾಚೀನ ನಾಣ್ಯಗಳು**–ಎ.ಎಂ. ಅಣ್ಣೀಗೇರಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–1971
6. **ಸ್ವತಂತ್ರ ಭಾರತದ ನಾಣ್ಯಗಳು** (1950–2000) – ಹೆಚ್. ಖಂಡೋಬರಾವ್, ಮಗರ್ ಪಬ್ಲಿಕೇಷನ್ಸ್, ಶಿವಮೊಗ್ಗ–2002
7. ***Ancient Indian Numismatics, a Historigraphical Study***-Shankar Goyal, Kusumanjali Book World, Jodhpur-1998
8. ***Coins And Currency System In South India***-Brajadulal Chattopadhyaya, Munshiram Manoharlal Publishers Pvt Ltd, Delhi-1977
9. ***Coins of Southern India***-Walter Elliot, 1884 {Reprint-1975 ; Bharatiya Kala Prakashan, Delhi-2005} ; Prithivi Prakashan, Varanasi-1970
10. ***Coins***-Parmeshwari Lal Gupta, National Book Trust, India-1976, 1979, 1980, 1991, 1996
11. ***Coins of Andhra Desa***-Ragini Ramamohan, Tirupati-1989
12. ***Hints to Coin : Collectiors in Southern India***- Capt R. H. Campbell Tufnell, Madras -1889
13. ***Indian Coin Heritage***-A.V. Narasimha Murthy, Bharatiya Vidya Bhavan, Mumbai-2004
14. ***Indian Coinage***-R. Vanaja, National Museum, New Delhi-1983
15. ***Kotalingala Coinage of Satavahanas and Other Local Rulers*** : A Profile-D. Rajareddy, P. Suryanarayana Reddy, The Numismatic Society of Hyderabad, Hyderabad-1987
16. ***Maratha Mints and Coinage***-K.K. Maheshwari & Kenneth W. Wiggins, Indian Institute of Research in Numismatic Studies, Anjaneri, Nasik-1989
17. ***Mysore Archaeological Reports*** (1885-1905)- (Ed) B.L. Rice, Mysore Archaeological Department, Bangalore
18. ***Mysore Archaeological Reports*** (1906-1922)- (Ed) R. Narasimhachar, Mysore Archaeological Department, Bangalore

19. ***Mysore Archaeological Reports*** (1923-1928)- (Ed) R. Shamashastry, Mysore Archaeological Department, Bangalore
20. ***Mysore Archaeological Reports*** (1929-1947)- (Ed) M. H. Krishna, Mysore Archaeological Department, Mysore
21. ***Mysore Archaeological Reports*** (1947-1956)- (Ed) M. Sheshadri, Mysore Archaeological Department, Mysore
22. ***Numismatic Researches*** (Critical Studies from Excavated Context)-I.K. Sarma, Book India Publishing Co, Delhi-2000
23. ***Some Copper Coins Issued by the English East India company and Other European Powers in South India***-R. P. Jackson, 1909
24. ***South Indian Coinage*** (A Review of Recent Discoveries)-I.K. Sarma, New Era Publications, Madras-1992
25. ***South Indian Coins***-T. Deshikachari, Asian Educational Services-1984, Reprint {First Published-1932}
26. ***The Coins of the Indian Sultanates*** (Covering the Area of Present Day India, Pakistan and Bangladesh)-Stan Goron, J.P.Goenka, Munshiram Manoharlal Publishers Pvt Ltd, Delhi-2001
27. ***The Dynastic Coins of Ancient India***-S.R. Goyal, Kusumanjali Prakashan, Jodhpur-1998
28. ***Unique Andhra Coins***-Deme Raja Reddy, B. R. Publishing Coroporation, Delhi-2012

ನಾಣ್ಯಗಳನ್ನು ಕುರಿತು ಪ್ರಕಟವಾಗಿರುವ ಲೇಖನಗಳು ಮತ್ತು ಪುಸ್ತಕಗಳ ವಿವರಗಳಿರುವ ಕೆಲವು ಸೂಚಿಗಳು

1. ***Bibliography of Indian Coins, Part-1*** {Non-Mohammadan Series}-Compiled by C.R. Singhal, Edited by A.S. Altekar, The Numismatic Society of India, Varanasi-1950
2. ***Bibliography of Indian Coins, Part-2*** {Mohammadan and Later Series}-Compiled by C.R. Singhal, The Numismatic Society of India, Varanasi-1952
3. ***Bibliography of Indian Coins, Part-2*** {Medieval and Modern}, First Supplement (1952-1960)-Compiled by C.R. Singhal, P.L Gupta, The Numismatic Society of India, Varanasi-1965
4. ***Bibliography of Indian Numismatics, Part-1*** {Ancient India}, 1971-1980, by S.J. Mangalam, The Numismatic Society of India, Varanasi-1989
5. ***The Study of Satavahana History, The Source Material***-D. Raja Reddy, Megana Deme, Deccan Archaeological and Cultural Research Institute, Hyderabad-2015

❑

8. ಪ್ರೌಢದೇವರಾಯನ ಸೇವಾ ಭೂ ಹಿಡುವಳಿ ಶಾಸನಗಳು

– ಡಾ. ಎಚ್.ಈ. ಬಸವರಾಜಪ್ಪ

ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಆಡಳಿತಾವಧಿಯಲ್ಲಿ ವ್ಯಕ್ತಿಯೊಬ್ಬನು ಭೂಹಿಡುವಳಿಯನ್ನು ಆಸ್ತಿಯ ರೂಪದಲ್ಲಿ ಹೊಂದಿರಬಹುದೆಂಬ ತತ್ವಕ್ಕೆ ಅರಸನ ಮತ್ತು ಸಮಾಜದ ಮನ್ನಣೆ ಇತ್ತು ಈ ಕಾಲದಲ್ಲಿಯೂ ಪ್ರಬಲ ಭೂಹಿಡುವಳಿದಾರರು ಸಮಾಜದಲ್ಲಿ ಮಹತ್ವದ ಪಾತ್ರವಹಿಸಿದ್ದರು. ಪ್ರೌಢದೇವರಾಯನ ಶಾಸನಗಳು ಭೂ ಹಿಡುವಳಿಯ ವಿವರವಾದ ಮಾಹಿತಿ ನೀಡುತ್ತವೆ. ಸೇವೆ ಸಲ್ಲಿಸುತ್ತಿದ್ದ ವ್ಯಕ್ತಿಗಳಿಗೆ ನೀಡುತ್ತಿದ್ದ ಭೂಹಿಡುವಳಿಯನ್ನು "ಸೇವಾ ಭೂ" ಎಂದು ಕರೆಯುತ್ತಿದ್ದರು. ಗ್ರಾಮದಲ್ಲಿ ವಾಸಿಸುವ ಜೋಯಿಸಿ, ಬಡಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ, ತೋಟಿ, ತಳವಾರ, ಓಲೆಕಾರ, ಪೂಜಾರಿ, ಕ್ಷೌರಿಕ ಮೊದಲಾದ ಆಯಗಾರರುತಾವು ಸಲ್ಲಿಸುತ್ತಿದ್ದ ಸೇವೆಗೆ ಭೂ ಮಾನ್ಯತೆ ನೀಡಲಾಗಿತ್ತು. ಇದು ಸಂಪೂರ್ಣವಾಗಿತೆರಿಗೆ ರಹಿತವಾಗಿರುತ್ತಿತ್ತು.[1] ಭೂ ಒಡೆತನವು ಒಬ್ಬ ವ್ಯಕ್ತಿಯ ಅಂತಸ್ತನ್ನು ನಿರ್ಧರಿಸುತ್ತಿತ್ತು ಹಾಗೆಯೇ ಭೂಮಿಯನ್ನು ಅರಸನಿಂದ ದಾನವಾಗಿ, ಕಾಣಿಕೆಯಾಗಿ, ಬಳುವಳಿಯಾಗಿ, ಜಹಗೀರಿಯಾಗಿ ವಿವಿಧ ಒಪ್ಪಂದಗಳ ಮೂಲಕ ಪಡೆಯುವುದು ಮತ್ತು ಪಡೆದ ಭೂಮಿಗಾಗಿ ವಿವಿಧ ಸೇವೆಕಪ್ಪಕಾಣಿಕೆ, ಸೇವಾ ಸಹಾಯ ಸಲ್ಲಿಸುವುದಾಗಿತ್ತು. ಈ ಲಕ್ಷಣಗಳು ಸೇವಾ ಭೂ ಹಿಡುವಳಿಯಲ್ಲಿ ಗುರುತಿಸಬಹುದು ಈ ಬಗ್ಗೆ ವಿಜಯನಗರ ಕಾಲದ ಹಾಗೂ ಪ್ರೌಢದೇವರಾಯನ ಶಾಸನಗಳು ವಿವರವಾದ ಮಾಹಿತಿಯನ್ನು ನೀಡುತ್ತವೆ.[2]

ಪ್ರೌಢದೇವರಾಯನ ಕಾಲದಲ್ಲಿ ಭೂ ಒಡೆಯರಿಗೆ ಮತ್ತು ಭೂರಹಿತ ಸಮುದಾಯಕ್ಕೆ ನಿಕಟ ಸಂಬಂಧವಿತ್ತು ಎಂದು ಶಾಸನಗಳು ಇಂತಹ ಕುಶಲ ವೃತ್ತಿಯ ಶ್ರೇಣಿಗಳ ಬಗ್ಗೆ ಹೆಚ್ಚು ಬೆಳಕನ್ನು ಬೀರುತ್ತವೆ. ಇಂತಹ ಕುಶಲ ವೃತ್ತಿಯನ್ನು 18 ಪಡೆಗಳು ಅಥವಾ ವಿಭಾಗಗಳು ಇರುವ ಬಗ್ಗೆ ತಿಳಿಸುತ್ತವೆ. ಉದಾಹರಣೆಗೆ: 'ಪಾಂಚಾಲರು'ಎಂದರೆ ಐದು ಬಗೆಯ ಕುಶಲ ಕರ್ಮಿಗಳಾಗಿದ್ದರು ಉದಾಹರಣೆಗೆ ಕಮ್ಮಾರ, ಸುವರ್ಣಕಾರ, ಕಂಚುಗಾರ, ಬಡಗಿ ಹಾಗೂ ಶಿಲ್ಪಿ ಇವರೆಲ್ಲರನ್ನು 'ವೀರ ಪಾಂಚಾಲರು' ಎಂದು ಶಾಸನಗಳು ಉಲ್ಲೇಖಿಸುತ್ತವೆ. ಇವರಾರು ನಿಜವಾದ ಕೃಷಿಕರಾಗಲಿ, ಭೂ ಒಡೆಯರಾಗಲಿ ಆಗಿರಲಿಲ್ಲ. ತಮ್ಮ ಜೀವನಕ್ಕಾಗಿ ತಮ್ಮ ವೃತ್ತಿಗಳನ್ನು ನಡೆಸುತ್ತಿದ್ದರು. ಇದೇ ರೀತಿ ವ್ಯವಹಾರಿಕರು, ಕುಂಬಾರರು, ನೇಕಾರರು, ಬಟ್ಟೆಗೆ ಬಣ್ಣ ಹಾಕುವವರು, ಗಾಣದವರು, ಚೆಮ್ಮರರು, ವಸ್ತ್ರರಕ್ಷಕರು, ದೇವಾಂಗದವರು, ಗೂಳಿಸಾಕುವವರು, ಗೋರಕ್ಷಕರು, ಜೇಡರು, ಅಗಸರು ಹಾಗೂ ಕ್ಷೌರಿಕರು ಮುಖ್ಯವಾಗಿದ್ದರು. ಅವರಲ್ಲಿ ಒಂದು ಭಾಗವು ಗ್ರಾಮ ಸಮುದಾಯದಲ್ಲಿರುವ ಹನ್ನೆರಡು ಬಗೆಯ ಸಾಮಾಜಿಕ ಸೇವೆಗಳನ್ನು ಸಲ್ಲಿಸುತ್ತಿದ್ದ ಘಟಕಗಳು ಸೇರಿವೆ.

ಕ್ರಿ.ಶ 1430ರ ಶಾಸನದಲ್ಲಿ ಲಕ್ಕಣ್ಣ ವೊಡೆಯರು ಆಳುತ್ತಿದ್ದ ಮುಳಬಾಗಿಲು ರಾಜ್ಯದ ಈಗಿನ ಮರಗಲ್ಲು ಗ್ರಾಮದ ಹಲವು ಪಾಂಚಾಳರು ಸೇರಿಕೊಂಡು ಸಂತೆಯನ್ನು ಕಟ್ಟಿಸಿ ಅದರ ಸಂಬಂಧ ಆ ಸಂತೆಯ ಪಟ್ಟಣದ ಸ್ವಾಮಿಯಾದ ಚಿಯಿಯ ಬಸ್ಸಿಸೆಟ್ಟಿಗೆ ಭೂಮಿಯನ್ನು ಮತ್ತು ಕೆಲವು ತೆರಿಗೆಯನ್ನು ಮಾನ್ಯವಾಗಿ ಬಿಡಲಾದ ವಿವರಗಳಿವೆ.[3] ಸಂತೆಯಲ್ಲಿ ಕುದುರೆಯನ್ನು ಕೊಂಡಾಗ, ಮಾರಿದಾಗ, ಕಬ್ಬಿಣ ಕೆಲಸ, ಮರ ಗೆಲಸ, ಅಕ್ಕಸಾಲಿ, ಅಗಸ, ನಾವಿಂದ, ಹೊಲೆಯ ಮುಂತಾದವರೂ ಭೂಮಿಯನ್ನು ದಾನವಾಗಿ ಪಡೆದಿರುವ ಬಗೆಗೆ ತಿಳಿಸುವ ಅಪರೂಪದ ಶಾಸನಗಳಲ್ಲಿ ಇದೂ ಒಂದಾಗಿದೆ.

ಕ್ರಿ.ಶ. 1431ರ ಕೊಡುಗೆಹಳ್ಳಿ ಶಾಸನದಲ್ಲಿ ವಿಜಯ ಭೂಪತಿರಾಯರ ಕುಮಾರದೇವರಾಯ ಮಹಾರಾಯರು ಆಳುವಾಗ ಮಹಾಪ್ರಧಾನಿಯಾಗಿದ್ದ ಮುಂಗಪ್ಪದಂಣಾಯಕರ ಮಕ್ಕಳು ಪ್ರತಾಪರಾಯರು ವಿರೂಪಾಕ್ಷಪುರವನ್ನು ಈ ಸಮಯದಲ್ಲಿ ವಿಜಯದೇವರಾಯ ಪುರವೆಂದು ಹೆಸರನ್ನು ಬದಲಿಸಿ ದಾನವಾಗಿ ನೀಡಲಾದ ವಿವರಗಳಿವೆ. ದಾನದ ವಿವರದಲ್ಲಿ ಪಾತ್ರದಜನ, ನಟುವಜನ, ಮದ್ದಳೆಕಾರರು, ಸಿತಾರನಜನ, ಉಪಾಂಗದಜನ, ಕಂಸಾಳೆ ಜನ ಹೀಗೆ ಒಟ್ಟು ಏಳು ಜನರಿಗೆಎರಡು ಹೊತ್ತು ಅಂಗ ರಂಗ ಭೋಗವನ್ನು ನಡೆಸಲು ದೇವಸಮುದ್ರದ ಕೆರೆಯ ಕೆಳಗಿನ ಗದ್ದೆಯನ್ನು ದಾನವಾಗಿ ನೀಡಲಾಗಿದೆ.[4]

ಕ್ರಿ.ಶ. 1431ರಲ್ಲಿ ಮಹಾಮಂಡಳೇಶ್ವರನಾದ ಸಾಳುವ ಗೋಪರಾಜವೊಡೆಯರ ಪ್ರಧಾನಿಯಾಗಿದ್ದ ಸಿಂಗರಾಜನು ತೇಕಲ್ಲಿನ ವರದರಾಜದೇವರ ಮುಖ ಮಂಟಪದಗೋಪುರಕ್ಕೆ ಬಾಗಿಲು ತರಿಸುತ್ತಾನೆ. ಇದರ ಕೆಲಸ ಮಾಡಿದ ಬಡಗಿ ಬೋಜ ದೇವನಿಗೆ ಮಾದನಹಳ್ಳಿಯ ಹತ್ತಿರದಗದ್ದೆ ಮತ್ತು ಹೊಲವನ್ನು ದಾನವಾಗಿ ನೀಡಲಾಗಿದೆ. ಭೂಮಿಯನ್ನು ಮಾತ್ರವಲ್ಲದೆ ಅವರ ಕೆಲಸಕ್ಕೆ ಮೆಚ್ಚಿಕುದುರೆ, ಸುತ್ತಿಗೆಗಳನ್ನು ಮತ್ತು ಲಾಂಛನಗಳನ್ನು ನೀಡಲಾಗಿದೆ. ಕಬ್ಬಿಣದ ಕೆಲಸ ಮಾಡಿದ ಅಂಜಲಲಿಂಗೋಜನಿಗೂ ಸಹ ಸಿವದಿ ಹಳ್ಳಿಯಲ್ಲಿ ಗದ್ದೆಯನ್ನು ದಾನವಾಗಿ ನೀಡಲಾಗಿದೆ ಅಲ್ಲದೇ ವರದರಾಜಸ್ವಾಮಿಯನ್ನು ಪ್ರತಿಷ್ಠಾಪಿಸಿ ಪೂಜೆ ಪುನಸ್ಕಾರ ಮಾಡಲು ಹಲವು ಬ್ರಾಹ್ಮಣರಿಗೆ, ದೇವರಿಗೆ ನೈವೇದ್ಯ ಸಿದ್ಧಪಡಿಸುವ ಬ್ರಾಹ್ಮಣರಿಗೆ, ಮಂತ್ರ ಹೇಳುವವರಿಗೆ, ಹೂಮಾಲೆಗಾರರಿಗೆ, ಹಾಡುಗಾರರಿಗೆ, ಸೆಟ್ಟಿಯ ಹಳ್ಳಿಯನ್ನು ದಾನವಾಗಿ ನೀಡಲಾಗಿದೆ. ಇಷ್ಟೇ ಅಲ್ಲದೆ ಪಾತ್ರದವರಾದಚೆಂನ್ನಿಯ ಮಕ್ಕಳಾದ ವರದಿ, ಹಿರಿಯವರದಿ, ನಿಟ್ಟಿಯವರದಿ, ಸಿಂಗಿಯ ಮಗಳಾದ ಒಡನಾಚಿ, ಚಿಕ್ಕ ಅಳುವಿಯ ಮಗಳಾದ ಕಸ್ತೂರಿ ಹಾಗೂ ಅಂಗರಂಗ ಮಂಟಪವನ್ನು ಸಾರಿಸುವ ಉಳಿಗದ ತಿಂಮ್ಮಿಗೆ ಹಾಗೂ ಇನ್ನಿತರ ಸೇವಾನಿರತ ಮಹಿಳೆಯರಿಗೆ ತೇಕಲ್ಲುನಾಡಿನ ಆಳಂಬಾಳು, ಕೆಂದೊಳ, ಪುತ್ತೂರು, ಹುಣಸೆಕೊಪ್ಪ, ಆನಂದನಹಳ್ಳಿ ಮುಂತಾದಆರು ಗ್ರಾಮಗಳನ್ನು ದಾನವಾಗಿ ನೀಡಲಾಗಿದೆ.[5] ಈ ಶಾಸನದ ಮತ್ತೊಂದು ಮಹತ್ವದ ಅಂಶವೆಂದರೆ ದೇವಾಲಯದ ಸೇವೆಗೆ ನೇಮಿಸಲ್ಪಡುತ್ತಿದ್ದ ಪಾತದವರು (ದೇವದಾಸಿಯರು, ಹಾಡುಗಾರ್ತಿಯರು, ನೃತ್ಯಗಾರ್ತಿಯರು ಬೇರೆ ಬೇರೆ ವೃತ್ತಿಯ ಹೆಣ್ಣು ಮಕ್ಕಳನ್ನು ಇದು ಉಲ್ಲೇಖಿಸಿದೆ.

ಕ್ರಿ.ಶ. 1432ರಲ್ಲಿ ಯೀಶ್ವರ ಸ್ವರೂಪ ಒಡೆಯರ ಹೆಸರಿನಲ್ಲಿ ಮಠದಗಂಗಾಧರಪುರಿ ಶ್ರೀಪಾದಂಗಳು ನಾರಾಯಣ ದೇವರ ಛತ್ರದ ಸೇವೆಗಾಗಿ ರಾಮಭಟ್ಟ ಎಂಬುವನಿಗೆ ಬುಕ್ಕರಾಯಪುರವನ್ನು ದಾನ ನೀಡಿದೆ.ಇದರಲ್ಲಿ ಅಡಿಗೆಯವನಿಗೆ, ಛತ್ರದ ಪಾರುಪತ್ತು ಮಾಡುವವನಿಗೂ ಭೂ ಉತ್ಪನ್ನದಲ್ಲಿ ಇಂತಿಷ್ಟು ಹಣವನ್ನು ನೀಡಲಾಗಿದೆ.[6] ಕ್ರಿ.ಶ. 1432ರ ಹೊಸಾಳದ ಶಾಸನದಲ್ಲಿ ಬಾರಕೂರ ರಾಜ್ಯದ ಅರಿಯಕೇರಿಯ ಸೆಟ್ಟಿಕಾರರು ಮತ್ತು ಸಮಸ್ತರು ಕೂಡಿಕೊಂಡು ಹಲವು ದೇವರುಗಳಿಗೆ ದಾನವನ್ನು ನೀಡಿದ ವಿವರವಿದೆ.[7] ಅಲ್ಲದೇ ಚೌಳಿಯ ಬೆಟ್ಟುವಿನ ಮಡಿವಾಳರು ಹಾಗೂ ಬೆಸ್ತರು ಸೇರಿಕೊಂಡು, ಆ ಊರಿನ ಕೆರೆಯ ಕೆಸರನ್ನು ತೆಗೆದು ಶುದ್ಧಮಾಡಿ, ಆ ಕೆರೆಯ ಜೀರ್ಣೋದ್ಧಾರ ಮಾಡಬೇಕೆಂದು ತಿಳಿಸುತ್ತದೆ. ಇಲ್ಲಿ ಮಡಿವಾಳ ಮತ್ತು ಬೆಸ್ತರಕಾಯಕ ಕೆರೆಯನ್ನು ಅವಲಂಬಿಸಿದೆಯೆಂದು ತಿಳಿದು ಬರುತ್ತದೆ. ತಿಮ್ಮನಹಳ್ಳಿ ಕ್ರಿ.ಶ.1432 ಶಾಸನದಲ್ಲಿ ವೀರಪ್ರತಾಪ ದೇವರಾಯನು ರಾಜ್ಯವಾಳುತ್ತಿದ್ದಾಗ ಬಸವಶಂಕರಸೆಟ್ಟಿ ನಾಯಕ ನೇರೆಲಿಗೆಯ ಹಿರಿಯಕೆರೆಯ ಭಂಡಿಜೀವಿತಕ್ಕೆ ಭೂಮಿಯನ್ನು ದಾನ ನೀಡಿದ ವಿವರವಿದೆ.[8] ಆ ಭೂಮಿಯನ್ನು ತೋಟಗದ್ದೆಯನ್ನು ಮಾಡಿಕೊಂಡು ಕೆರೆಯ ಭಂಡಿಯನ್ನು ನಡೆಸಬೇಕೆಂದು ಸೂಚಿಸಲಾಗಿದೆ.ಕೆರೆಗಳುಗ್ರಾಮ ಸಂಸ್ಕೃತಿಯ ಅವಿಭಾಜ್ಯ ಅಂಗಗಳು ಉತ್ತಮಕೆರೆಗಳು ರೈತರ ಬದುಕನ್ನು ಹಸನುಗೊಳಿಸುತ್ತವೆ. ಇದನ್ನು ಅರಿತಿದ್ದ ನಮ್ಮ ಪೂರ್ವಿಕರು ಕೆರೆಗಳ ನಿರ್ಮಾಣಕ್ಕೆ ಮತ್ತು ಜೀರ್ಣೋದ್ಧಾರಕ್ಕೆ ಹೆಚ್ಚಿನ ಮಹತ್ವ ನೀಡಿದ್ದರೆಂದು ಸ್ಪಷ್ಟವಾಗುತ್ತದೆ. ಕ್ರಿ.ಶ.1436ರಲ್ಲಿ ಪ್ರತಾಪ ದೇವರಾಯರು ವರದ ನಾಯಕರಿಗೆ ಮುದಗಲ್ಲನಾಡನ್ನು ನಾಯಕ ತನಕ್ಕೆ ಕೊಡುವರು. ಮುದಗಲ್ಲ ಸಿಂಪಿಗ ಭೂತನಾಥನ ಮಗ ರಾಹುತ್ತನಿಗೆ ಮುದಗಲ್ಲ ಗೌಡಪ್ರಜೆಗಳು ಕೂಡಿಕೊಂಡು ಆ ರಾಹುತ್ತವೀರಣ್ಣನಿಗೆ ಭೂಮಿ ದಾನವನ್ನು ನೀಡಿದರು, ಈ ಶಾಸನವನ್ನು ಕೆತ್ತಿದ ಕಲ್ಲು ಕುಟ್ಟಿಗತಿಪ್ಪೋಜ್ಜನಿಗೆ ಹಿರಿಯಎರೆದ ಹಳ್ಳಿಯಲ್ಲಿ ಭೂಮಿದಾನ ನೀಡಲಾಗಿದೆ.

ವ್ಯಕ್ತಿಯೊಬ್ಬ ಸಲ್ಲಿಸಿದ ಸೇವೆಗೆ ಹಣದ ಬದಲಾಗಿ ಭೂಹಿಡುವಳಿಯನ್ನು ದಾನ ನೀಡುವ ಮೂಲಕ ಅವನ ಸೇವೆಯನ್ನು ನಿರಂತರವಾಗಿ ಪಡೆಯುವದಾಗಿತ್ತು. ಇಮ್ಮಡಿ ದೇವರಾಯನ ಕಾಲಾವಧಿಯ ಅನೇಕ ಶಾಸನಗಳಲ್ಲಿ ಕೆಳಸ್ತರದ ಸಮುದಾಯಗಳು ಸಹ ಭೂಹಿಡುವಳಿಯನ್ನು ದಾನವಾಗಿ ಪಡೆದಿರುವ ಬಗ್ಗೆ ವಿವರ ನೀಡುತ್ತವೆ. ವಿಜಯನಗರ ಅರಸರ ಕಾಲಕ್ಕೆ ಭೂ ಸಂಬಂಧಿ ವ್ಯವಹಾರಗಳು ಸ್ಪಷ್ಟವಾಗಿ ಕ್ರಯರೂಪದಲ್ಲಿ ಮಾರಾಟವಾಗಿರುವ ಬಗ್ಗೆ ಸಹ ಶಾಸನಗಳಲ್ಲಿ ಉಲ್ಲೇಖವಿದೆ. ಈ ಸಂದರ್ಭದಲ್ಲಿ ಸಮಾಜದ ಎಲ್ಲಾ ವರ್ಗದಲ್ಲಿ ಭೂಹಿಡುವಳಿಗಳು ಸ್ವಲ್ಪ ಪ್ರಮಾಣದಲ್ಲಿ ಹಂಚಿಕೆಯಾಗಿವೆ. ಅದರಲ್ಲಿ ವೃತ್ತಿ ಆಧರಿಸಿದ ಕಸುಬುದಾರರಿಗೂ ಸಹ ಭೂಹಿಡುವಳಿಯನ್ನು ದಾನ ಪಡೆಯುವ ಮೂಲಕ ಆರ್ಥಿಕ ಭದ್ರತೆಯನ್ನು ಪಡೆಯುವ ಪ್ರಯತ್ನ ಮಾಡಿರುವುದು ಅಧ್ಯಯನದ ದೃಷ್ಟಿಯಿಂದ ಮಹತ್ವದ ಸ್ಥಾನ ಪಡೆದಿದೆ.

ಆಧಾರಸೂಚಿ :

1. ಎಚ್.ಈ. ಬಸವರಾಜಪ್ಪ, **ಚಿತ್ರದುರ್ಗ ಪ್ರದೇಶದ ಭೂಹಿಡುವಳಿಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ**, ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ. 2001.
2. ಡಿ.ವಿ. ಪರಮಶಿವಮೂರ್ತಿ, **ಪ್ರೌಢ ದೇವರಾಯನ ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.
3. ಎ.ಕ.x ಬಂಗಾರಪೇಟೆ –72.
4. ಎ.ಕ. IX ಬೆಂಗಳೂರು –127.
5. ಎ.ಕ.XVII ಮಾಲೂರ –3.
6. ಎ.ಕ. –13, ತೀರ್ಥಹಳ್ಳಿ –151
7. ಎಸ್.ಐ.ಐ. XXVII –108.
8. ಕ.ಶಾ.ಸಂ –7 ಲಿಂಗಸೂಗೂರು –50.
9. **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್**, ಸಂಪುಟ XXVII ನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣಾಲಯ ಮೈಸೂರು.
10. ದೇವರ ಕೊಂಡಾರೆಡ್ಡಿ, ಕೆ.ಜಿ. ಭಟ್‌ಸೂರಿ, ಡಿ.ವಿ. ಪರಮಶಿವಮೂರ್ತಿ, ಕಲವೀರ ಮನ್ವಾಚಾರ್, (ಸಂ) ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–7, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

❑

9. ಹಾವೇರಿ ಪ್ರದೇಶದಲ್ಲಿ ವಿಜಯನಗರ ಕಾಲದ ಕೆಲವು ಶಾಸನಗಳು

– ಶೀ. ನಾಗರಾಜ ತಳವಾರ

ದಕ್ಷಿಣಭಾರತದಲ್ಲಿ ಮಧ್ಯಕಾಲೀನ ಸಂದರ್ಭದಲ್ಲಿ ಉಚ್ಛ್ರಾಯಸ್ಥಿತಿಗೇರಿ ಮೆರೆದ ಹಲವು ಸಾಮ್ರಾಜ್ಯಗಳಲ್ಲಿ ವಿಜಯನಗರ ಸಾಮ್ರಾಜ್ಯ ಮುಖ್ಯವಾಗಿದೆ, ಆ ಕಾಲದಲ್ಲಿ ಅದರ ಪ್ರಭಾವ ಮತ್ತು ವ್ಯಾಪಕತೆ ಶಾಸನಗಳಿಂದ ಗೊತ್ತಾಗುತ್ತದೆ, ವಿಜಯನಗರ ವ್ಯಾಪ್ತಿಗೆ ಒಳಪಟ್ಟ ಹಾವೇರಿ ಪ್ರದೇಶವು ಇಲ್ಲಿ ವಿಜಯನಗರ ಅರಸರ ಕಾಲದ ಕೆಲವು ಶಾಸನಗಳು ಅಂದಿನ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ಜೀವನವನ್ನು ತಿಳಿಸುತ್ತವೆ ಎಂದು ಹೇಳಬಹುದು.

ಪ್ರಾಚೀನತಮವಾಗಿ ಹಾವೇರಿಯು ಜಂಬೂದ್ವೀಪದ ಕುಂತಳ ಅಂದರೆ ಈಗಿನ ಕರ್ನಾಟಕ ರಾಜ್ಯದಲ್ಲಿ ಬನವಾಸಿ ನಾಡು ಒಂದು, ಆ ಬನವಾಸಿಯಲ್ಲಿ ಹಾವೇರಿ ಒಂದಾಗಿತ್ತು ಎಂದು ಕಲ್ಯಾಣಿ ಚಾಲುಕ್ಯ ಅರಸನಾದ ಮೂರನೇ ಸೋಮೇಶ್ವರನ ಕ್ರಿಶ 1134ರ ಶಾಸನದಲ್ಲಿ ಉಲ್ಲೇಖಗೊಂಡಿದೆ. ಬನವಾಸಿ ನಾಡಿಗೆ ಹಾವೇರಿ ಅಲಂಕಾರಪ್ರಾಯವಾಗಿತ್ತು ಎಂದು ವರ್ಣಿಸಲಾಗಿದೆ.

ಹಾವೇರಿಯನ್ನು ಪ್ರಾಚೀನ ಶಾಸನದಲ್ಲಿ ಪಾವರಿ, ಹಾವರಿ, ನಳಪುರಿ, ಹಾವೇರಿ ಎಂದು ಉಲ್ಲೇಖಗೊಂಡಿದೆ. ಈ ನಗರವು 400 ಮಹಾಜನರನ್ನು ಒಳಗೊಂಡಿದ್ದು ಅಗ್ರಹಾರವಾಗಿತ್ತು. ರಾಷ್ಟ್ರಕೂಟ ಅರಸನಾದ ಮೂರನೇ ಕೃಷ್ಣನ ಒಂದು ಶಾಸನದಲ್ಲಿ ಹಾವರಿ ಎಂದು ಉಲ್ಲೇಖವಾಗಿದೆ. ಹೀಗೆ ಅನೇಕ ಹೆಸರುಗಳಿಂದ ಪ್ರಚಲಿತವಿದ್ದು ಮುಂದೆ ಇದು ಹಾವೇರಿ ಎಂದು ರೂಢಿಗತವಾಯಿತು ಎಂದು ಹೇಳಬಹುದು.

ಈ ಹಾವೇರಿ ಪ್ರದೇಶವು ಕದಂಬರಿಂದ ಹಿಡಿದು ವಿಜಯನಗರ ಮತ್ತು ಸವಣೂರ ನವಾಬ ವರೆಗೂ ಹಲವು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು, ಆ ಅವಧಿಯಲ್ಲಿ ದೊರೆತ ಶಾಸನಗಳು ಎಂದರೆ ಕದಂಬರು, ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ಯಾದವರು, ಗುತ್ತರು, ಹೊಯ್ಸಳರು, ಮತ್ತು ವಿಜಯನಗರ ಸಾಮ್ರಾಜ್ಯ ಅರಸು ಮನೆತನಗಳ ಶಾಸನಗಳು ಈ ಪ್ರದೇಶದಲ್ಲಿ ಲಭ್ಯವಾಗಿವೆ.

ಪ್ರಸ್ತುತ ನನ್ನ ವಿಷಯ ವ್ಯಾಪ್ತಿಗೆ ಒಳಪಟ್ಟಂತೆ ಹಾವೇರಿ ಪ್ರದೇಶ (ಜಿಲ್ಲೆ) ದಲ್ಲಿ, ಹಾವೇರಿ, ಬ್ಯಾಡಗಿ, ರಾಣಿಬೆನ್ನೂರು, ಹಾನಗಲ್ಲ, ಹಿರೇಕೆರೂರ, ಶಿಗ್ಗಾಂವ ಮತ್ತು ಸವಣೂರ ಭಾಗಗಳಲ್ಲಿ ಕೆಲವು ವಿಜಯನಗರ ಸಾಮ್ರಾಜ್ಯ ಅರಸು ಮನೆತನಗಳ ಶಾಸನಗಳು ಲಭ್ಯವಾಗಿವೆ. ಅವುಗಳ ಚಾರಿತ್ರಿಕ ಅಂಶಗಳನ್ನು ಈ ಕೆಳಗಿನಂತೆ ನೋಡಬಹುದು.

ಪ್ರಮುಖ ಶಾಸನಗಳು :

1. ರಾಣಿಬೆನ್ನೂರ ಪ್ರದೇಶದ ಗುತ್ತಲದಲ್ಲಿ ದೊರೆತ ವಿಜಯನಗರ ಸಾಮ್ರಾಜ್ಯದ ಅರಸನಾದ ಸದಾಶಿವರಾಯನ ಕ್ರಿ.ಶ 1547ರ ಶಾಸನದಲ್ಲಿ ನಾವಿದದಿಗೆ ಅರಸ ರಾಜ್ಯದಾದ್ಯಂತ ನೀಡಿದ ರಿಯಾಯಿತಿಯ ದಾಖಲೆಯಾಗಿದ್ದು ಅಲ್ಲದೆ ನಾವಿದರ ವೃತ್ತಿ ಸಾಧನೆಗಳನ್ನು ರೇಖಿಸಿರುವುದನ್ನು ಉಲ್ಲೇಖಿಸಿದೆ. ಇದರಲ್ಲಿ ನಾಯಕ ದಂಡನಾಯಕ, ಮಹಾಮಂಡಳೇಶ್ವರ, ಸರ್ವಾಧಿಕಾರಿ, ವರ್ತಕರು, ಸುಹಾಧಿಕಾರಿ ಮುಂತಾದವರು ರಾಜ್ಯದಲ್ಲಿ ಇದ್ದರೆಂದು ಈ ಕೆಳಗಿನಂತೆ ತಿಳಿದು ಬರುತ್ತದೆ.

ಸಿಧಾಯ ಬಿರಾಡೆವನು ಎನುಂಳ ಸೆ–
ರ್ವ ಮಾನ್ಯವಾಗಿ ಪಾಲಿಸಿದೆ ಉ ಅರಾ–
ಮರಜ ಅಯನವರಾ ಯಲ್ಲಪೂಡೆ–
ಯರಿಗೆ ನಿಂಮ ಸೀಮವೊಳಗೆ ಯಿದ ನಾ–
ವಿಲರ ತೆರಿಗೆ ಸಿಧಾಯ ಬಿರಾಡ ಕಾ–
ಣಿಕೆ ಕಡಾಯ ಮದುವೆ ಸುಂಕ ಸರ್ವ ಮಾ–
ನ್ಯೆವನು ಕೊಟಲು ಯಂದು ಹೇಳಿ ರಾಮ
ರಾಜ ಅಯನವರ ನಿರೂಪದಿಂದ–
ಲು ಸರ್ವಮಾನ್ಯವಾಗಿ ಕೊಟೆಉಯಿಪ್ಪ–
ಕೆ ತಪಿದರ ರಾಯರ ಪಾದದಣ
ಶ್ರೀ ವಿರೂಪಾಕ್ಷ ದೇವರಿಗೆ ತಪಿದುಯೀ
ನಾಸನಕೆ ತಪ್ಪಿದರೆ ಕತ್ತೆಯ ರುಣಿ
ಕಳ್ಳಪೂಗೆ–

ಎಂದು ಈ ರೀತಿಯಾಗಿ ಶಾಸನವು ತಿಳಿಸಿದೆ. ಈ ಮೇಲಿನ ಶಾಸನವನ್ನು ಅವಲೋಕಿಸಿದಾಗ ಈ ರೀತಿಯಾಗಿ ವಿವಿಧ ತೆರಿಗೆಗಳಿದ್ದು ಇವುಗಳ ಮೂಲಕ ರಾಜ್ಯಬೊಕ್ಕಸಕ್ಕೆ ಆದಾಯ ಬರುತ್ತಿತ್ತು. ಅಲ್ಲದೆ ಆಗಿನ ಕಾಲದ ವಾಣಿಜ್ಯಬೆಳೆಗಳು ಆಹಾರದ ಬೆಳೆಗಳು ಮತ್ತು ಇನ್ನಿತರ ಕೃಷಿ ಉತ್ಪನ್ನಗಳ ಮೇಲೆ ತೆರಿಗೆಯನ್ನು ವಿಧಿಸುತ್ತಿದ್ದರು.

2. ವಿಜಯನಗರ ಅರಸರಲ್ಲಿಯೇ ಪ್ರಖ್ಯಾತನದ ತುಳುವಂಶದ ಕೃಷ್ಣದೇವರಾಯನಿಗೆ ಸಂಬಂದಿಸಿದಂತೆ ಶಾಸನವೊಂದು ರಾಣಿಬೆನ್ನೂರ ಪ್ರದೇಶದ ಹನುಮಾಪೂರದಲ್ಲಿ ದೊರೆತಿದ್ದು, ಅದು ಕೃಷ್ಣದೇವರಾಯನ ಪ್ರಧಾನ ಇಮ್ಮಡಿ ಯಲ್ಲಪ್ಪ ಒಡೆಯನು ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಈ ಶಾಸನದಲ್ಲಿ ಕಾಲವನ್ನು "ಶಕ ಸಾವರದ ನನುರ ಅಯಿವತೆರಡು ಒರುಸದ ಸರ್ವಜಿತು ಸಂವಶ್ವರದ ವಯಿಸಕ ಸುದ ದಸಮಿಲು" ಎಂದು ಹೇಳಿದ್ದು ಇದು ಕ್ರಿ.ಶ1527, ಎಪ್ರಿಲ್11, ಗುರುವಾರಕ್ಕೆ ಹೊರಡಿಸಿದೆ. ಪ್ರಧಾನ ಇಮ್ಮಡಿ ಯಲ್ಲಪ್ಪ ಒಡೆಯನು 'ಪಾತ್ರದ ನೀಳಾಯಿ' ಎಂಬವಳಿಗೆ ಚಿಕ್ಕಮಾದಾಪುರವೆಂಬ ಹಳ್ಳಿಯನ್ನು ದಾನವಾಗಿ ನೀಡಿದ ವಿಷಯವಿದೆ.

3. ಸದಾಶಿವರಾಯನಿಗೆ ಸಂಬಧಿಸಿದಂತೆ ಕ್ರಿ.ಶ 1550ರ ಶಾಸನವೊಂದು ರಾಣಿಬೆನ್ನೂರಿನಲ್ಲಿ ದೊರೆತಿದ್ದು ಅದು ತನ್ನ ರಾಜ್ಯದೊಳಗಿನ ಗಡ್ಡದ ಕೆಲಸಗಳಿಗೆ ಕೆಲವೊಂದು ತೆರಿಗೆಗಳನ್ನು ಮಾನ್ಯ ಮಾಡಿದ ಬಗ್ಗೆ ಉಲ್ಲೇಖಿಸುತ್ತದೆ. ಕ್ಷೌರಿಕರು ಅಥವಾ ಗಡ್ಡದ ಕೆಲಸಿಗಳು ರಾಣಿಬೆನ್ನೂರ ಪ್ರದೇಶದಲ್ಲಿ ಇದ್ದರೆಂಬುದನ್ನು ಶಾಸನಗಳು ತಿಳಿಸುತ್ತವೆ. ಅದರ ಉಲ್ಲೇಖಗಳು ಈ ಕೆಳಗಿನಂತಿವೆ.

ಹಾಲ ಅರಸರುಗಳು ಗಡ್ಡದ ಕೆಲಸಿಗಳ
ತಿಮ್ಮೋಜ, ಕೊಂಡೋಜ, ಭದ್ರೋಜ, ಇವರು
ಮೂವರುಗಳ ಕೆಲಸಕ್ಕೆ ಮೆಚ್ಚಿ ಮನದನಿಸಲಾಗಿ
ಸದಾಶಿವರಾಯರು ಆಳುವಂಥಾ ರಾಜ್ಯದೊಳಗಣ
ಗಡ್ಡ ಕೆಲಸಗಳಿಗೆ ತಿರುಣಿ ಸಿದಾಯ
ಮನವಣ ಕಾಣಿಕೆ ಕಡ್ಡಾಯ... ಮುಂತಾಗಿ ವಿವರಿಸುತ್ತದೆ.

ಈ ವಿವರಣೆಯನ್ನು ನೋಡಿದಾಗ ಕ್ಷೌರಿಕರು ಕಸಬು ಉತ್ಪಾದನೆ ಕಡಿಮೆ ಇದ್ದುದರಿಂದ ಅವರಿಗೆ ವಿಧಿಸಿದ ಎಲ್ಲಾ ತೆರಿಗೆಯನ್ನು ಮನ್ನಿಸಿ ಸಮಾಜದಲ್ಲಿ ಅವರಿಗೆ ಆಶ್ರಯ ನೀಡಿದ್ದರೆಂದು ಹೇಳಬಹುದು.

4. ಬ್ಯಾಡಗಿ ಭಾಗದಲ್ಲಿ ಬ್ಯಾಡಗಿ ಮಹಲ ಎಂಬಲ್ಲಿ 14ನೇ ಶತಮಾನಕ್ಕೆ ಸೇರಿದ ವೀರ ಹರಿಹರನ ಶಾಸನವು ದೊರೆತಿದೆ. ಇದು ಬ್ಯಾಡಗಿಯ ಗಜಶ್ವೇರ ದೇವಾಲಯದ ಮುಂಬಾಗದಲ್ಲಿ ಇದೆ,ಇದರಲ್ಲಿ 'ಶ್ರೀವೀರ ಹರಿಹರ ರಾಜೋ(ಕ್ತ)ರಿಸ್ತು'...ಎಂದಿದೆ. ಈ ಶಾಸನವು ಚುಳಕಿಯ ಮುದೇಗೌಡನ ಮಗನಾದ ಸಿಡಲಗೌಡನ ಮರಣ ಹೊಂದಿದ ಬಗ್ಗೆ ತಿಳಿಸುತ್ತದೆ.

5. ಹಿರೇಕೆರೂರ ಭಾಗದಲ್ಲಿ ಸದಾಶಿವರಾಯನ ಆಡಳಿತಕ್ಕೆ ಸಂಬಂಧಿಸಿದ ಎರಡು ಶಾಸನಗಳು ದೊರೆತಿವೆ. ಅದರಲ್ಲಿ ಒಂದು ತ್ರುಟಿತಗೊಂಡಿದ್ದು, ಗೋವೆ, ಬನವಾಸಿ, ರಟ್ಟಹಳ್ಳಿ ಇವುಗಳ ಉಲ್ಲೇಖವನ್ನು ಕೊಡುತ್ತದೆ. ಇದರಿಂದ ವಿಜಯನಗರ ಸಾಮ್ರಾಜ್ಯದ ಆಡಳಿತ ಬನವಾಸಿ ಒಳಗೊಂಡು ಗೋವೆಯವರೆಗೂ ಹರಡಿತ್ತೆಂದು ತಿಳಿದು ಬರುತ್ತದೆ. ಕ್ರಿ.ಶ 1505ರ ಶಾಸನದಲ್ಲಿ ಸದಾಶಿವರಾಯನ ವರ್ಣನೆ ಬರುತ್ತದೆ. ಅಲ್ಲದೆ ಶಾಸನದಲ್ಲಿ 'ಸಾಳ್ವ' ಎಂಬ ಶಬ್ದದ ಉಲ್ಲೇಖ ನೋಡಿದರೆ ಇವನು ಸಾಳ್ವ ವಂಶದವನಿರಬೇಕೆಂದು ತಿಳಿಸುತ್ತದೆ. ಅದರ ಉಲ್ಲೇಖ ನೋಡಿದರೆ

"ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಕಠಾರಿ–
ಸಾಳ್ವ ಶ್ರೀ ವೀರಪ್ರತಾಪ ಶ್ರೀ ಸದಾಶಿವರಾಯ ಮಹಾರಾಯರೂ",,,

ಎಂಬ ವರ್ಣನೆಯೊಂದಿಗೆ ದಾನ ಧರ್ಮ ನೀಡಿದ ಬಗ್ಗೆ ಉಲ್ಲೇಖ ದೊರೆಯುತ್ತದೆ.

6. ಹಿರೇಕೆರೂರ ಇಲ್ಲೆ ದೊರೆತ ಇನ್ನೊಂದು ಶಾಸನದಲ್ಲಿ ಯಾವುದೇ ರಾಜಕೀಯ ಘಟನೆಗಳ ವಿವರ ಇಲ್ಲವಾದರೂ ಸದಾಶಿವರಾಯನ ಸಾಮಂತ ರಾಜನಾದ ರಾಮರಾಜೇಂದ್ರ ಮಹಾ ಅರಸ ಎಂಬುವನು ಸದಾಶಿವರಾಯನಿಗೆ ಬಲಗೈಯಂತಿದ್ದು ರಾಜ್ಯದ ಗಡಿ ರಕ್ಷಣೆಯಲ್ಲಿ ಭೀಮನಂತಿದ್ದನೆಂದು ಅವನ ಸಾಹಸವನ್ನು ಹೊಗಳಿದೆ.

7. ಇದೇ ಭಾಗದಲ್ಲಿ ರಟ್ಟಿಹಳ್ಳಿಯಲ್ಲಿ ಕ್ರಿ.ಶ 1550ಕ್ಕೆ ಸಂಬಂಧಿಸದಂತೆ ಸದಾಶಿವರಾಯನ ಶಾಸನವೊಂದರಲ್ಲಿ "ರಟ್ಟಿಹಳಿ " ಎಂಬ ಉಲ್ಲೇಖ ಸಹ ಇದೆ.

ಈ ರೀತಿಯಾಗಿ ವಿಜಯನಗರ ಸಾಮ್ರಾಜ್ಯ ಅರಸು ಮನೆತನಗಳ ಶಾಸನಗಳಿಂದ ಹಲವು ಚಾರಿತ್ರಿಕ ಅಂಶಗಳು ಲಭ್ಯವಾಗಿವೆ ಎಂದು ಹೇಳಬಹುದು.

ಭಾರತವು ಪ್ರಾಚೀನ ಕಾಲದಿಂದಲೂ ಸಂಸ್ಕೃತಿಯ ದೃಷ್ಟಿಯಿಂದ ಮಹತ್ವದ ಸ್ಥಾನದಲ್ಲಿದೆ. ಸಂಸ್ಕೃತಿಯ ಸೃಷ್ಟಿ, ರಾಜ್ಯ ಸಾಮ್ರಾಜ್ಯಗಳ ನಿರ್ಮಾಣ ಮತ್ತು ಅವುಗಳ ಜನಜೀವನ, ಮತ್ತು ಆಚರಣೆಗಳ ಹತ್ತು ಹಲವು ಬಗೆಯಲ್ಲಿ ಕರ್ನಾಟಕವೂ ಅಪೂರ್ವವಾಗಿದೆ. ಭಾರತೀಯ ಸಂಸ್ಕೃತಿಯ ಎಲ್ಲ ಅಂಶಗಳನ್ನು ಕರ್ನಾಟಕವೂ ಅಳವಡಿಸಿಕೊಂಡಂತೆ ಹಾವೇರಿ ಪ್ರದೇಶದ (ಜಿಲ್ಲೆ) ಜನಜೀವನದಲ್ಲಿ ಶ್ರೀಮಂತ ಸಂಸ್ಕೃತಿಯು ಇತ್ತು ಎಂದು, ಈ ಪ್ರದೇಶದ ಶಾಸನಗಳ ಅಧ್ಯಯನದಿಂದ ಕಂಡುಬರುತ್ತದೆ.

ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ಹಲವು ಪ್ರದೇಶಗಳಲ್ಲಿಯ ಶಾಸನ & ವೀರಗಲ್ಲುಗಳ ಮೂಲಕವು ವಿಜಯನಗರ ಕಾಲದ ಆಯಗಾರರ ವೈಶಿಷ್ಟತೆ ತಿಳಿಯುತ್ತದೆ. ಈ ಪ್ರದೇಶದಲ್ಲಿ ಪ್ರಾಚೀನ ರಾಜಮನೆತನಗಳಾದ ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಯಾದವರು, ವಿಜಯನಗರ ಅರಸರುಗಳ ಆಳ್ವಿಕೆಗೆ ಒಳಪಟ್ಟದ್ದು ಆಯಾ ರಾಜಮನೆತನಗಳ ಕಾಲಾವಧಿಯಲ್ಲಿ ನಿರ್ಮಿತಗೊಂಡ ಶಾಸನ, ವೀರುಗಲ್ಲುಗಳಲ್ಲಿ ಹಲವಾರು ರಾಜಕೀಯ ಅಂಶಗಳಲ್ಲದೆ, ಸೇವೆ, ತ್ಯಾಗ, ಬಲಿದಾನಗಳ ಬಗ್ಗೆ ಮಾಹಿತಿ ದೊರೆಯುತ್ತದೆ.

ಆಧಾರ ಸೂಚಿ :

1. **ಸೌತ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್** ಸಂಪುಟ–18, 20
2. **ಕರ್ನಾಟಕ ಇನ್ಸ್‌ಕ್ರಿಪ್‌ಷನ್ಸ್** ಸಂಪುಟ–2
3. ಪಾವಟೆ ಚನ್ನಕ್ಕ, **ಬಂಕಾಪುರ ಶೋಧನೆ.**
4. **ಹಾವೇರಿ ತಾಲೂಕ ದರ್ಶನ.**
5. ದೇವಕೊಂಡಾರೆಡ್ಡಿ (ಸಂ): **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ: 3,** ಹಂಪಿ ಶಾಸನಗಳು.
6. ಕಲ್ಬುರ್ಗಿ.ಎಂ.ಎಂ. **ಧಾರವಾಡ ಜಿಲ್ಲೆಯ ಶಾಸನಗಳು.**
7. ಷೇಕ ಅಲಿ ಬಿ. ಮತ್ತು ಅ. ಸುಂದರ, (ಸಂ), **ಕರ್ನಾಟಕ ಚರಿತ್ರೆ, ಸಂಪುಟ–1.**
8. ಡಾ.ಪಾಟೀಲ. ಭೋಜರಾಜ. **ನಾಗರಖಂಡ–70: ಒಂದು ಅಧ್ಯಯನ.**

10. ಇಮ್ಮಡಿ ಹರಿಹರನ ಕಾಲದ ಮಹಾಪ್ರಧಾನರುಗಳ ಧಾರ್ಮಿಕ ಶಾಸನಗಳು (ಕ್ರಿ.ಶ. 1377–1404)

– ಡಾ. ಡಿ.ಎಂ. ನಾಗರಾಜು

ವಿಜಯನಗರದ ಅರಸರು ಹಿಂದೂ ಧರ್ಮದ ಲಕ್ಷಣವಾದ ಪರಮಸಹಿಷ್ಣುತೆಯನ್ನು ಮೈಗೂಡಿಸಿಕೊಂಡು, ಅನ್ಯಮತೀಯರಾದ ಕ್ರೈಸ್ತ, ಇಸ್ಲಾಂ ಧರ್ಮೀಯರಿಗೆ ತಮ್ಮ ಸಾಮ್ರಾಜ್ಯದಲ್ಲಿ ಆಶ್ರಯಕೊಟ್ಟು ಸಲಹಿದರು. ಸಾಮ್ರಾಜ್ಯದ ವಿವಿಧೆಡೆಗಳಲ್ಲೂ ದೇವಸ್ಥಾನಗಳಲ್ಲದೆ ಜೈನಬಸದಿಗಳನ್ನು ಕಾಣಬಹುದು. ಕಾರ್ಕಳ ಮತ್ತು ವೇಣೂರಿನ ಬಾಹುಬಲಿ ವಿಗ್ರಹಗಳು ಈ ಕಾಲದ ರಚನೆ. ವಿಜಯನಗರದ ಅರಸರು ಶೈವ ಇಲ್ಲವೆ ವೈಷ್ಣವ ಪಂಥಕ್ಕೆ ಸೇರಿದವರಾಗಿದ್ದು, ಪಂಥಬೇದಕ್ಕೆ ಅವಕಾಶವಿರಲಿಲ್ಲ. ಹಲವಾರು ಶಿವ ಮತ್ತು ವಿಷ್ಣು ದೇವಾಲಯಗಳು ಕಟ್ಟಲ್ಪಟ್ಟವು.

ಸಂಗಮವಂಶದ ಇಮ್ಮಡಿ ಹರಿಹರನು ಶೈವಧರ್ಮಕ್ಕೆ ಹೆಚ್ಚಿನ ಉತ್ತೇಜನವನ್ನಿತ್ತರು. ಕ್ರಿ.ಶ. 1377ರಿಂದ 1404ರವರೆಗೆ ಆಳಿದ ಇವನು ವಿಜಯನಗರವು ಪ್ರಸಿದ್ಧಿಗೆ ಬಂತು. ಕನ್ನಡ ಸಾಹಿತ್ಯ ಈ ಕಾಲದಲ್ಲಿ "ಮಹಾರಾಜಾಧಿರಾಜ ಪರಮೇಶ್ವರ" ಎಂಬ ಸಾಮ್ರಾಜ್ಯ ಸೂಚಕ ಬಿರುದನ್ನು ಧರಿಸಿದನು. ವಿಜಯನಗರ ಸಾಮ್ರಾಜ್ಯವು ದಕ್ಷ ಆಡಳಿತವನ್ನು ಹೊಂದಿತು. ರಾಜನೇ ಆಡಳಿತ ಕೇಂದ್ರಬಿಂದುವಾಗಿ ನಿರಂಕುಶಾಧಿಕಾರಿಯಾಗಿದ್ದರೂ, ಸಲಹೆ ನೀಡಲು ಯುವರಾಜನೂ ಮಂತ್ರಿಗಳು ಇತರ ಅಧಿಕಾರಿವರ್ಗವೂ ಇತ್ತು. ಮಂತ್ರಿ ಮಂಡಲದಲ್ಲಿ ಪ್ರಧಾನ ಮಂತ್ರಿಯನ್ನು ಮಹಾಪ್ರಧಾನ ಎನ್ನಲಾಗುತ್ತಿತ್ತು. ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ಮಂಡಲ (ಪ್ರಾಂತ್ಯ)ಗಳಾಗಿ ವಿಂಗಡಿಸಲಾಗಿತ್ತು. ಪ್ರಾಂತ್ಯಗಳಿಗೆ ರಾಜವಂಶದವರನ್ನೂ ರಾಜ್ಯಪಾಲರನ್ನಾಗಿ ನೇಮಿಸಿದ್ದರು. ಇವರನ್ನು ಮಹಾಮಂಡಲೇಶ್ವರರೆಂದು ಕರೆಯುತ್ತಿದ್ದರು. ಅವರನ್ನು ದಂಡ ನಾಯಕರೆನ್ನುತ್ತಿದ್ದರು. ಪ್ರತಿಮಂಡಲವನ್ನು 'ಮಹಾರಾಜ್ಯ' ಇಲ್ಲವೆ ರಾಜ್ಯಗಳಾಗಿ ವಿಭಾಗಿಸಲಾಗಿದ್ದಿತು. ಪ್ರತಿಯೊಂದು ರಾಜ್ಯವು ಸೀಮೆ, ನಾಡು, ಗ್ರಾಮ, ಸ್ಥಳ ಎಂದು ಉಪವಿಭಾಗಗಳನ್ನು ಒಳಗೊಂಡಿದ್ದಿತು. ಅರಗ ಇಲ್ಲವೆ ಮಲೆಹರಾಜ್ಯ, ತುಳುರಾಜ್ಯ, ಮಂಗಳೂರು ರಾಜ್ಯ ಮುಂತಾದ ವಿಭಾಗಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಮಂಡಲಗಳ ಆಡಳಿತವನ್ನು ಮಂಡಲೇಶ್ವರರು ನೋಡಿಕೊಳ್ಳುತ್ತಿದ್ದರು. ಸೈನ್ಯದ ಉನ್ನತಾಧಿಕಾರಿಯಾಗಿ ದಂಡನಾಯಕ ಇಲ್ಲವೇ ದಣ್ಣಾನಾಯಕನಿದ್ದನು.

ಶಾಸನಗಳ ಆಧಾರದಿಂದ ಬರುವ ವಿಷಯಗಳು :–

ಕ್ರಿ.ಶ. 1377ರ ನಾಗಲಾಪುರಶಾಸನದಲ್ಲಿ ಲಖಂಣವೊಡೆಯರು ಕಂಕುಶೆನಾಡು ಆಳುತ್ತಿರುವಾಗ ಜೊತೆಗೆ ವಿರುಪಂಣ್ಣವೊಡೆಯರಸರ ನಿರೂಪದಿಂದ ದೇವಾಲಯ ಮತ್ತು ಕೆರೆ, ಅಗ್ರಹಾರ ಜೀರ್ಣೋದ್ಧಾರಕ್ಕೆ 100 ಹೊಂನುಗಳನ್ನು ನಾಗೂರ ಅಶೇಷ– ಮಹಾಜನಗಳಿಗೆ ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1378ರ ಕೋಟೇಶ್ವರ ಶಾಸನದಲ್ಲಿ ಬೊಮ್ಮರಸನು ಬಾರಕೂರ ರಾಜ್ಯವಾಳುತ್ತಿರುವಾಗ ರಾಜನ ಮುಖ್ಯಮಂತ್ರಿ ಮುದೆ–ದಂಣಾಯಕ ಸೂರ್ಯಗ್ರಹಣದ ಸಂದರ್ಭದಲ್ಲಿ ಕೊಡಕೂರ ಕೋಟೇಶ್ವರ ದೇವಾಲಯದ ಒಂದು ದೀಪಾರಾಧನೆ, ದೇವಾಲಯದ ಸೇವಕರ ನಿರ್ವಹಣೆಗಾಗಿ ಭೂಮಿ, ಚಿನ್ನ ಇತರೆ ದಾನ ನೀಡಿದ ವಿವರವಿದೆ. ಇದೇ ಕಾಲದ ಪಡುವರಿ

ಶಾಸನ ಸವೆದಿದೆ. ಮಹಾಪ್ರಧಾನ [ಭ]ರಮರಸವೊಡೆಯರು ಬಾರಕೂರ ರಾಜ್ಯವನ್ನಾಳುತ್ತಿರುವಾಗ, ವಿದ್ಯಾನಾಥ ದೇವರಿಗಳಿಗೆ ಎಂಟು ವೈಯುಕ್ತ ಪ್ರಜೆಗಳು 2 ಸ್ತ್ರೀಯರು ಮತ್ತು ಬಯಿದೂರು ನಾಡಸೇನಬೋವ ಈ ಭೂಮಿ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1379ರ ಕೊಡವೂರ ಶಾಸನದಲ್ಲಿ ಚಕ್ರವರ್ತಿಯ ಆದೇಶದ ಮೇರೆಗೆ ಬೊಮ್ಮರಸಒಡೆಯ ಬಾರಕೂರಿಗೆ ಬಂದಿರುವ ಕಾಲದಲ್ಲಿ ಶಿವನಿಡುಂಬರನ ಮಗ ಅಮಂಣನಿಡುಂಬರನು ಕಂಗುಮಠದ ರಾಮದೇವ ಮತ್ತು ನಾರಾಯಣ ದೇವರುಗಳಿಗೆ ಪೂಜೆ ಅನ್ನ ನೈವೇದ್ಯಕ್ಕೋಸ್ಕರ ನಿಗದಿಪಡಿಸಿದ ನಿವೇಶನ ಭೂಮಿ ದಾನ ನೀಡಿ ಅರ್ಚಕರಾದ ತ್ರೈಲೋಕಭೂಷಣ ತೀರ್ಥಶ್ರೀಪಾದರಿಗೆ ಒಪ್ಪಿಸಿದ ವಿವರವಿದೆ. ಇದೇ ಕಾಲದ ಕೂಡಿಶಾಸನ ಸವೆದಿದೆ. ಬೊಂಮರಸ ಒಡೆಯ ಬಾರಕೂರ ರಾಜ್ಯವಾಳುತ್ತಿರುವಾಗ, ಬ್ರಹ್ಮಾರದ[ಕಂ]ಸಾಹುವಿನ ಮಕ್ಕಳು ನರಸಿಂಹಸಾಹುವಿಗೆ ನಾಗಪ್ಪ ವೊಡೆಯರು ಅವರ ತಮ್ಮ ಸಾಯಂ[ಣ]ನವರು ಆ ನಾಗಪ್ಪನವರ ಮಕ್ಕಳು ನಾಗಂಣದಂಣಾಯ್ಕನೂ ಯಿ ಮೂವರು ಹಾಗೂ ಬೇರೆಯವರು ಸಿದ್ಧನಾಥ ದೇವರಿಗೆ ಭೂಮಿ ದಾನ ನೀಡಿದ ದಾಖಲೆಯಿದೆ. ಹಂಪಿ ಶಾಸನದಲ್ಲಿ ರಾಜನ ಆದೇಶದ ಮೇರೆಗೆ ಮುದ್ದದಂಡೇಶನು ವಿರೂಪಾಕ್ಷದೇವಾಲಯಕ್ಕೆ ಭೂಮಿ ದಾನನೀಡಿದನು.

ಕ್ರಿ.ಶ. 1380ರ ಹೊಮ್ಮ ಶಾಸನದಲ್ಲಿ ಸಂಗಮರಾಜನ ಮಗ ಬಲಪಹದಿನಾಡನಾಧಿಕಾರಿ ಆಳುತ್ತಿದ್ದಾಗ ಮೂಲಸ್ಥಾನ ದೇವರ ಪೂಜೆ, ನೈವೇದ್ಯಕ್ಕೋಸ್ಕರ ಮಹಾಜನರು ಭೂಮಿಯನ್ನು ದತ್ತಿಯಾಗಿ ನೀಡಿದ ವಿಷಯವಿದೆ. ಇದೇ ಕಾಲದ ಗೋಪಾಲಪುರ ಶಾಸನದ ವೀರಚಿಕ್ಕ ಕಂಪಣವೊಡೆಯರ ಕುಮಾರ ನಂಜಂಣ ವೊಡೆಯರು ಪ್ರಿತುವಿರಾಜ್ಯಂಗೆ ಇತ್ತವರಲು ಚೋಳಿ ಅಂಣವೊಡೆಯರ ನಿರೂಪದಿಂದ ಯಿಂಗುಳಿವಾಡಿ ಕುಣಿಗಿಹಳ್ಳಿಯ ಭೂಮಿಯನ್ನು ಪಾಲ್ಗುಣೇಶ್ವರ ಸೇವೆಗೋಸ್ಕರ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1381ರ ಬೇಲೂರು ಶಾಸನದಲ್ಲಿ ರಾಜನ ನಿರೂಪದಿಂದ ಮಹಾಪ್ರಧಾನಿ ಕಂಪಂಣಗಳು ಬೇಲೂರ ಶ್ರೀಚಂನಕೇಶವನಾಥ ದೇವರ ಶುಕನಾಸಿ ಭಾಗದಲ್ಲಿ ನಾಲ್ಕು ಕಂಬಗಳನ್ನು ನಿಲ್ಲಿಸಿದೆ. ಇದೇಕಾಲದ ಬೆಂಗಳೂರು ತಾಮ್ರಶಾಸನದಲ್ಲಿ ವಿರೂಪಾಕ್ಷ ದೇವರ ಮುಂದೆ ರೈತರು, ವ್ಯಾಪಾರಸ್ಥರು, ಇತರರು ಹಸ್ತಿನಾವತಿ, ವಿಜಯನಗರದ ಗ್ರಾಮಗಳನ್ನು ತಮ್ಮ ಆಸ್ತಿಗಳನ್ನು ಅವರ ಗ್ರಾಮದಲ್ಲಿ ಚಲನೆಯಿಲ್ಲದ ಮತ್ತು ಚಲಿಸಲಾಗುವ ರಕ್ಷಾ ಶುಲ್ಕವನ್ನು ರಾಜನ ಮಹಾಪ್ರದಾನ ಮುದ್ದೆದಂಡನಾಯಕ ಪಾವತಿಸಬೇಕೆಂದು ತಿಳಿಸುತ್ತದೆ.

ಕ್ರಿ.ಶ. 1382ರ ಬೇಲೂರ ತಾಮ್ರಶಾಸನದಲ್ಲಿ ಮಹಾಪ್ರಧಾನ ಮಡಿಯದಂಣಾಯಕ, ವ್ಯಾಪಾರಸ್ಥರು, ನಖರಂಗಳು, ಮುಮ್ಮರಿದಂಡಗಳು, ಸಾಲುಮೂಲೆ ಹಲರು ಅನೇಕ ಸ್ಥಳಗಳು ಎಲ್ಲಾ ಸಭೆ ಸೇರಿ ವಿರೂಪಾಕ್ಷ ದೇವರ ಮುಂದೆ ದಾನ ನೀಡಿದ್ದಾರೆ.

ಕ್ರಿ.ಶ. 1383ರ ಸುರಾಲ ಶಾಸನದಲ್ಲಿ ಮಹಾಪ್ರಧಾನ ಜಕ್ಕಂಣ ಒಡೆಯ ಬಾರಕೂರ ರಾಜ್ಯವನು ಆಳುತ್ತಿರುವಾಗ ರಾಜಕಾರಿಯ ನಿಮಿತ್ತವಾಗಿ ಆಂಣನಿಡುಂಬರರು ಸ್ವರ್ಗಸ್ಥರಾದಾಗ ಆತನಮಗ ಶಿವ ನಿಡುಂಬೂರರಿಗೆ ಜನನಮಡಲಿನಲ್ಲಿ ಆ ಹರಿಹರರಾಯನ ಮುದ್ದೆಯದಣ್ಣಾಯಕರ ನಿರೂಪದಿಂದ ಹೊನ್ನಾವರ ಮಲ್ಲೆ ಒಡೆಯನ ಮುಂದೆ ಆದಾಯದಿಂದ ಕೆಲವು ಗ್ರಾಮಗಳನ್ನು ದಾನನೀಡಿದ ವಿವರವಿದೆ.

ಕ್ರಿ.ಶ. 1384ರ ಕನ್ಯಾನ ಶಾಸನದಲ್ಲಿ ಮಹಾಪ್ರಧಾನ ಜಕ್ಕರಸಒಡೆಯರು ಬಾರಕೂರ ರಾಜ್ಯವನ್ನಾಳುತ್ತಿರವಾಗ ರಾಜಾಡಿಬೆಲ್ಲತೂರ ಜನನಿಗಳು ನಿಗದಿಪಡಿಸಿದ ವಿಶೇಷಾಧಿಕಾರವನ್ನು ಮಹಾಜಗತ್ತಿಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1385ರ ಶ್ರವಣಬೆಳಗೊಳ ಶಾಸನದಲ್ಲಿ ಇಮ್ಮಡಿ ಹರಿಹರನ ದಳಪತಿ ಹಾಗೂ ಮಂತ್ರಿಯಾಗಿದ್ದ ಇರುಗಪ್ಪನು ಜೈನಮತಾವಲಂಬಿಯಾಗಿದ್ದನು. ಸಂಸ್ಕೃತದಲ್ಲಿ ವಿದ್ವಾಂಸನಾಗಿದ್ದ ಇರುಗಪ್ಪನು 'ನಾನಾರ್ಥಮಾಲಾ' ಎಂಬ ಶಬ್ದಕೋಶವನ್ನು ರಚಿಸಿದನು. ಜೈನ ವಾಸ್ತುಶಿಲ್ಪದ ಶೈಲಿಯಲ್ಲಿ ಜೈನಮಂದಿರವೊಂದನ್ನು ನಿರ್ಮಿಸಿದನು. ಪಾರ್ಶ್ವಜಿನನಾಥನಿಗಾಗಿ ಗುತ್ತಿಯಲ್ಲಿ ಇನ್ನೊಂದು ಬಸದಿಯನ್ನು ಕಟ್ಟಿಸಿದನು. ಗೊಮ್ಮಟೇಶ್ವರನಿಗಾಗಿ ಒಂದು ಕೆರೆಯನ್ನು ತೋಪನ್ನು ನಿರ್ಮಿಸಿ ದತ್ತಿ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1386–87ರ ಗಣಗನೂರು ಶಾಸನದಲ್ಲಿ ವೀರಹರಿಯಪ್ಪ ಒಡೆಯ ಮತ್ತು ಮುಂದಣ ಒಡೆಯರ, ಕೋವೆಗೆಱೆಯ ಕೆಳಗಣ ಗದ್ದೆ, ಅಡಿಕೆತೋಟ ಧಾರೆಯೆರೆದ ವಿಷಯವಿದೆ.

ಕ್ರಿ.ಶ. 1387ರ ಗೊಳಗೂಡ ಶಾಸನಸವೆದಿದೆ. ಮಾಧವಾಮಾತ್ಯ ಬನವಾಸಿ–12000 ಆಳುತ್ತಿರುವಾಗ ನಾರಾಯಣಭಟ್ಟ ಮತ್ತು ಈಶ್ವರಭಟ್ಟನಾಡು ಭಾಗವಹಿಸಿ ಗಾವುಡುಗಳು ಭೂಮಿ ದಾನನೀಡಿದ ದಾಖಲೆಯಿದೆ. ಇದೇ ಕಾಲದ ನಂದಳಿಕೆ ಶಾಸನದಲ್ಲಿ ಮಹಾಪ್ರಧಾನ ಮಲ್ಲಪ್ಪವೊಡೆಯ ಬಾರಕೂರ ರಾಜ್ಯವಾಳುತ್ತಿರುವಾಗ ರಾಜನ ಆಜ್ಞೆಯಂತೆ ಮತ್ತು ರಾಜಧಾನಿ ದತ್ತಾಳವಂಶದ ಸಂಗಣಜೀಯಗೆ ಒಪ್ಪಿಸಿ, ಸಂಗಣಜಿಯ ಕಾರ್ಕಳ ಬ್ರಹ್ಮೇಶ್ವರ ದೇವರಿಗೆ ದಾನನೀಡಿದ ವಿವರವಿದೆ. ನೀಲಾವರ ಶಾಸನದಲ್ಲಿ ಮನ್ಮಹಾಪ್ರಧಾನ ಬಯಚೆಯ ದಂಣಾಯಕರ ಕುಮಾರ ಇರುಪ್ಪ ಒಡೆಯರ ಮನೆಯ ಮಲ್ಲ ಗೌಡೆಯನ ಮಗ ಬಯಿರಂಣಗಳು ಆ ನಿರುವಾರದ ಮತ್ತು ದೇವಾಲಯದ ಸೇವಕರು ದುರ್ಗಾ ದೇವಿಯ ಜೀರ್ಣೋದ್ಧಾರ ಮಾಡಿಸಿ ಅಂಗ ರಂಗ ಭೋಗ ನಯಿವೇದ್ಯಗೋಸ್ಕರ ಭೂಮಿದಾನ ನೀಡಿದ ದಾಖಲೆಯಿದೆ.

ಇದೇ ಊರಿನ ಕ್ರಿ.ಶ. 1388ರ ಹೊನ್ನಾವೊರದ ಮಲ್ಲಪ್ಪ ಒಡೆಯ ಬರಹಕನ್ಯಾಪುರ ಆಳುತ್ತಿರುವಾಗ ಇರುಗಪ್ಪ ಒಡೆಯನ ಮಗ ಬಐಯಿಚೆಯದಂಣಾಯಕ ಮತ್ತು ನಂತರ ಸೇವಕಬಯಿರಣ್ಣ ದುರ್ಗಾಭಗವತಿ ದೇವಾಲಯಕ್ಕೆ ಸೇವಕರು ಆದಾಯದಿಂದ ಭೂಮಿ ದಾನನೀಡಿ ಅಲ್ಲಿಯ ಗ್ರಾಮದ ನಿವಾಸಿಗಳು ಪೂಜೆ, ಜೀರ್ಣೋದ್ಧಾರಕ್ಕೆ ನೈವೇದ್ಯಕ್ಕೋಸ್ಕರ ದಾನ ನೀಡಿದ ವಿವರವಿದೆ.

ಕ್ರಿ.ಶ. 1390ರ ಉಡುಪಿ ತಾಮ್ರಶಾಸನದಲ್ಲಿ, ಮಂಗಳೂರ ರಾಜ್ಯಪಾಲ ಮಲ್ಲರಸನನ್ನು ತಿಳಿಸುತ್ತದೆ. ಓಮಂಜೂರ ಅಮ್ರಿತನಾಥ ದೇವಾಲಯದ ಪೂಜೆ, ನೈವೇದ್ಯ ಮತ್ತು ಛತ್ರದ ಆಹಾರದ ನಿರ್ವಹಣೆಗೋಸ್ಕರ ಮುಕ್ಕಣ ಕದಂಬವಂಶದ ಕಾಮದೇವರಸನ ಮಗಳು ಪದುಮಲದೇವಿಯ ಒಂದು ಸರ್ವಮಾನ್ಯ ಭೂಮಿಯನ್ನು ದಾನ ನೀಡಿದ ದಾಖಲೆಯಿದೆ.

ಆಂಧ್ರ ಪ್ರದೇಶದ ಕ್ರಿ.ಶ. 1394ರ ಅರಿಕೆಲ ಶಾಸನದಲ್ಲಿ ಮಹಾಮಂಡಳೇಶ್ವರ ಶ್ರೀ ವೀರಯಿಂಮಡಿ ಬುಕ್ಕಣವೊಡೆಯರು ಮುಳುವಾಯ ರಾಜ್ಯವಾಳುತ್ತಿರುವಾಗ, ಮನೆಯ–ನಾಯಕರ ಮಗ ಬ[ಲ್ಪ]ನಾಯ್ಕರು, ಕಂನಗ ಉಡರಮಗ ಸಂಗಗೌಡನಿಗೆ ಕನ್ನಗೆಱೆ ಎಂದು ಕರೆಯುವ ಕೆರೆಕಟ್ಟಲು ಕೆಲವು ಹಣ ದಾನ ನೀಡಿದ್ದನ್ನು ತಿಳಿಸುತ್ತದೆ. ಇದೇಕಾಲದ ಪ್ರೊಡ್ಡತೊರು ಮಂಡಲಂನ ಮಾಲಿಕಿನಾಡಿನಲ್ಲಿರುವ ಭೀಮುನಿಪಾಡುವಿನ ದೇವರಾಯ ಒಡೆಯನ ವಶದಲ್ಲಿರುವ ಲಕ್ಕಿನಾಯಿನಿ (ಲಕ್ಷ್ಮಿನಾಯುಡು) ಮನಕೇಶವನ (ಕೇಶವಣ್ಣನು) ಹನುಮಂತ ದೇವರ ಪ್ರತಿಷ್ಟೆ ಮಾಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1395ರ ಬೇಲೂರು ಶಾಸನದಲ್ಲಿ ಗುಂಡಪದಂಡನಾಯಕ ಮನೆಯ ಪ್ರಧಾನಿ ಕಂಚಿನ ಕಂಭದ ದೇವಿಗೆ[1], ಕಂಚಿಸಿಗೆ 50, ಫಲ 4, ಪಟ್ಟಣದ ಕಂಚಗಾರ ಮಾರಾಳ ನಿಂದೋಜನ ಮಕ್ಕಳು ಕಾಳೋಜ ಮತ್ತು ಅನಕೋಜ ಮಾಡಿಸಿದ ದಾನದ ವಿವರವಿದೆ.

ಕ್ರಿ.ಶ. 1396ರ ಸಂಗೂರ ಶಾಸನದಲ್ಲಿ ಸೇನಾಧಿಪತಿ ಮಾಧವ ಗೋವೆ ಆಳುತ್ತಿರುವಾಗ ಬುಕ್ಕ ರಾಜನ ಮಗ ವೀರಹರಿಹರ ಇರುವಾಗ ಮಂತ್ರಿ ಮಂಗಪ ದಂಡನಾಥ ಚಂಗಪುರ ಗ್ರಾಮವನ್ನು ಮಲ್ಲಪನಿಗೆ ಕೊಟ್ಟು ಮಾಧವ ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1397ರ ಹರದನಹಳ್ಳಿ ಶಾಸನದಲ್ಲಿ ಮಹಾಪ್ರಧಾನ ಒಬ್ಬ ಸಭಾಪತಿ ಮಂಗಪ್ಪದಂಡನಾಯಕ, ಹೊಯ್ಸಳದೇಶ ಆಳುತ್ತಿರುವಾಗ ದೇವರ ನಂನ್ದಾದೀವಿಗೆಗೆ ದಾನ ನೀಡಿದ ವಿವರವಿದೆ. ಹೊಸಾಳಶಾಸನದಲ್ಲಿ ಸಂಕರದೇವವೊಡೆಯ ಬಾರಕೂರ ರಾಜ್ಯವನು ಆಳುತ್ತಿರುವಾಗ ಕೆಲ್ಲಂಗೆಱೆಯ ವಿನಾಯಕ ದೇವರ ಸಮ್ಮುಖದಲ್ಲಿ ಭೂಮಿ ದಾನ ನೀಡಿದ ಬೇರೆ ದೇವತೆಗಳ ಪೂಜೆ, ನೈವೇದ್ಯಗೋಸ್ಕರ ಹಾಗೂ ಬಸದಿಯ ಉಲ್ಲೇಖವಿದೆ. ನಾಲವತ್ತು ನಾಡಿನಲ್ಲಿರುವ ಬೆಳುಗೊಂಡ ಗ್ರಾಮದಲ್ಲಿರುವ ಕೆಲವು ಭೂಮಿ ದಾನ ನೀಡಿದ ದಾಖಲೆಯಿದೆ. ಸಿರಿಯೂರ ಶಾಸನದಲ್ಲಿ ಮಹಾಪ್ರಧಾನ ಶಂಕರ ಬಾರಾಕೂರ ರಾಜ್ಯದ ರಾಜ್ಯಪಾಲ ರಾಜನ ಕಲ್ಯಾಣಕ್ಕೆ ಮತ್ತು ನಾರಾಯಣ ದೇವರ್ಗ್ಗೆ ತೆರಿಗೆಗಳನ್ನು ಮಾನ್ಯಮಾಡಿ ಭೂಮಿ ದಾನ ನೀಡಿದ ವಿವರವಿದೆ. ತಿರುಮಕೂಡಲು ನರಸೀಪುರ ತಾಮ್ರ ಶಾಸನದ ನಾಗರಿಭಾಷೆಯಲ್ಲಿದೆ. ಮಹಾಮಂಡಳೇಶ್ವರ

ಮಲ್ಲಪ್ಪೊಡೆಯನೆಂದು ಕರೆಯಲಾಗಿರುವ ಈ ಮಲ್ಲಪ್ಪನಾಥನಿಗೆ ನಾರಾಯಣದೇವ ಒಡೆಯನೆಂಬೊಬ್ಬ ಮಗನಿದ್ದು ಅವನು ಚನ್ನಪಟ್ಟಣ ಬಳಿಲದೊಳಗಣ ಕೊಲತೂರು ಗ್ರಾಮವನ್ನು ರಾಜನ ಹೆಸರಿನಲ್ಲಿ ಪ್ರತಾಪಹರಿಹರಪುರವೆಂಬ ಹೆಸರಿನಿಂದ ಅಗ್ರಹಾರವನ್ನಾಗಿ ಪರಿವರ್ತಿಸಿ ಅದನ್ನು ವೃತ್ತಿಗಳನ್ನಾಗಿ ಪರಿವರ್ತಿಸಿ, ಈ ದಾನವನ್ನು ಅಗಸ್ತ್ಯನಾಥ ದೇವರ ಮುಂದೆ ದತ್ತಿ ನೀಡಿದ ದಾಖಲೆಯಿದೆ. ಹರದನಹಳ್ಳಿ ಶಾಸನದಲ್ಲಿ ಮಹಾಪ್ರಧಾನ ಮಂಗಪ್ಪದಣ್ಣಾಯಕರ ಬಲದಕಯ್ಯಭಂಡಾರವೆನಿಪ ಅಚಂಣವೊಡೆಯರು ಹೊಇಸಳ ದೇಶವನ್ನಾಳುತ್ತಿದ್ದಾಗ ಅಣಿಲೇಶ್ವರ ನಂದಾದೀವಿಗೆಗೆ ದತ್ತಿ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1398ರ ಮಲ್ಲಿನಾಥಪುರ ಶಾಸನದಲ್ಲಿ ರಾಜನ ನಿರೂಪದಿಂದ ಲಖಂಣ್ಣವೊಡೆಯರು ಕುಡುಕುರ ಮಲ್ಲಿಕಾರ್ಜುನ ದೇವರಿಗೆ ದೇವತಾರ್ಚಣೆ, ವಸ್ತ್ರ, ಸುಗಂಧದ್ರವ್ಯ, ಗಂಧ, ಕರ್ಪೂರ, ಕಸ್ತುರಿ, ಸುಗಂಧಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ, ಪಂಚಪರ್ವದ, ಪೂಜೆಗೆ ನಂದಾದೀವಿಗೆಗೆ ದತ್ತಿನೀಡಿದ ದಾಖಲೆಯಿದೆ. ಕೈಕಿಣಿ ಶಾಸನದಲ್ಲಿ ಮಹಾಪ್ರಧಾನಿ ಮಂಗಪ ದಣಾಯಕರು ತುಟುರಾಜ್ಯದ ಮೇಲೆ ದಂಡೆತ್ತಿ ಬಂದು ಬಿದೀರೆಯಲು ಪಾಳೆಬಿಟ್ಟು ಚವಟರದ ಕಡೆಹಿ ತಾಉ ತಿರಿಗಿ ಪಾಟಿಯವೆತ್ತಿ ಬಹಲ್ಲಿ ಶ್ರೀಮನುಮಹಾಮಂಡಳೇಶ್ವರ ನಗಿರೆಯ ಹಯಿದರಸ ಒಡೆಯರ ಮಂದಿಯನು ಹಿಂದಿಕ್ಕೆ ಬೊಂಮಣನಾಯಕನು ತಂಮನಾಯಕನೂ ತಂದೆ ಮಕ್ಕಳ ಅವರ ವೀರಕಲ್ಲು ಸ್ಥಾಪಿಸಿದನೆಂದು ತಿಳಿಸುತ್ತದೆ. ಇದೇಕಾಲದ ಬೇಲೂರು ಶಾಸನದಲ್ಲಿ ತೆಪ್ಪದ ನಾಗಂಣವೊಡೆಯರು ರಾಮದೇವರಿಗೆ ಮಠದಲ್ಲಿರುವ ಋಷಿಗಳ ಆಹಾರ ಮತ್ತು ಪೂಜೆಗೋಸ್ಕರ ದಾನನೀಡಿದ ವಿವರ ಹಾಗೂ ಗುಂಡಪ್ಪ ದಂಣಾಯಕವೊಡೆಯನ ನಿರೂಪದಿಂದ ಚಉಡಪಪ್ಪನಿಗೆ ಭೂಮಿದಾನ ನೀಡಿದ ವಿಷಯವಿದೆ. ಕುಲಾಯಿ ಶಾಸನದಲ್ಲಿ ಪಂಡರಿದೇವನಮಗ ಹಡಪದಮಾದರಸ ಮಂಗಳೂರ ರಾಜ್ಯ ಆಳುತ್ತಿರುವಾಗ ಬಾಚಪಸೇನಭೂವನ ಮಕ್ಕಳು ಕೇಶವನಾಥ ಸೇನಭೂವ ಮಲಪಶೆಟ್ಟಿಯಿಂದ ಒಂದುಚೂರು ಭೂಮಿಯನ್ನು ಕೊಂಡು ಚಿತ್ರಪುರದ ಮಂಜುನಾಥ ದೇವಾಲಯದ ದೇವರಿಗೆ ಪೂಜೆ ಮತ್ತು ಪುಳುವಿನ ದೇವಾಲಯಕ್ಕೆ ಹೊಂದಿಕೊಂಡಿರುವ ಈ ಛತ್ರಕ್ಕೆ ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1400ರ ಪುಸಲೂರು (ಕುಂಭಮ್ ತಾಲ್ಲೂಕು, ಕರನೂಲ್ ಜಿಲ್ಲೆ, ಆಂಧ್ರಪ್ರದೇಶ) ತೆಲುಗು ಶಾಸನದಲ್ಲಿ ಕೊಟಿಕಂಟಿಪಾದಂಮಗ ಮಹಾಮಂಡಳೇಶ್ವರ ಅಯ್ಯಲರಾ ನರವಾಡಿಯಲ್ಲಿ ಪುಸ್ಸಲೂರುನಿಂದ ಆಳುತ್ತಿರುವಾಗ, ಗ್ರಾಮದಲ್ಲಿರುವ ಮಾಧವದೇವರ್ಗ್ಗೆ ಭೂಮಿ ಮತ್ತು ಒಂದುತೋಟ ದಾನವಾಗಿ ಕೊಟ್ಟ ದಾಖಲೆಯಿದೆ. ಇದೇಕಾಲದ ಬಸರೂರುಶಾಸನದಲ್ಲಿ ಬಸವಣ್ಣ–ಒಡೆಯ ಬಾರಕೂರರಾಜ್ಯವಾಳುತ್ತಿರುವಾಗ ಮದಣ್ಣಶೆಟ್ಟಿಯ ಚಕ್ರವರ್ತಿ ಉಪಾಧ್ಯಾಯನಮಗ ಸಿಂಗಣ್ಣ ಅಯ್ಯಗಳಿಗೆ ನೀಡಿ ಶ್ರೀಶೃಂಗೇರಿ ಮಠದ ಬಸರೂರು ನಖರೇಶ್ವರ ದೇವರ ಮುಂದೆ ಇರುವ ನಂದೀಕೇಶ್ವರ ದೇವರ ನಿತ್ಯಪೂಜೆಗೋಸ್ಕರ ಉಳ್ಳುರದೇವರ ಜಾತ್ರೆಯ ರಥೋತ್ಸವಕ್ಕೆ ಚಿನ್ನ, ಭೂಮಿ ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1401ರ ಬಬ್ಬರವಾಡ ಶಾಸನ ಸವೆದಿದೆ. ಗೋವಿಂದದೇವ ವೊಡೆಯರು ಹಇವೆ, ತುಳು, ಕೊಂಕಣ ರಾಜ್ಯಂಗಳನ್ನು ವಿಭಾಗಗಳನ್ನು ಪ್ರತಿಪಾಲಿಸುತ್ತಿರುವಾಗ ಮಹಾಭಳಭಟ್ಟರ ಕಯ್ಯಲಿಕೊಂಡು ಮಾದಂಣನಮಗಳು ವಿರುಪಾಯಿ ಗೋಕಂರ್ಣ್ನಕ್ಷೇತ್ರದಲ್ಲಿ ಮಾಡಿದ [ಸ]ತ್ರಕ್ಕೆ ಭೂಮಿದಾನ ನೀಡಿದ ವಿವರವಿದೆ. ಬಸರೂರು ಶಾಸನದಲ್ಲಿ ಬಸವಣ್ಣಒಡೆಯ ಬಾರಕೂರ ರಾಜ್ಯವಾಳುತ್ತಿರುವಾಗ ತುಳುವೇಶ್ವರ ದೇವಾಲಯಕ್ಕೆ ತುಳುವಕ ಹೆಗ್ಗಡತಿಯ ಪೂಜೆ, ನಂನ್ದಾದೇವಿಗೆಗೆ ಮತ್ತು ಮನೆಗಳ ಅನ್ನದಾನಕ್ಕೋಸ್ಕರ ಭೂಮಿ ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1402ರ ಯರುಮಲ್‌ಶಾಸನದಲ್ಲಿ ಬಸವಣ್ಣ–ಒಡೆಯ ಬಾರಕೂರ ರಾಜ್ಯವಾಳುತ್ತಿರುವಾಗ ಯಿರಮಾಳ ಜನಾರ್ಧನ ದೇವಾಲಯಕ್ಕೆ ಖಾಸಗಿಯ ವ್ಯಕ್ತಿಗಳಿಂದ ಕೊಂಡು ಲಖ್ಖಪ್ಪನಮಗ ಗಣಪ್ಪನು ಭೂಮಿ ದಾನ ನೀಡಿದ್ದಾನೆ.

ಕ್ರಿ.ಶ. 1403ರ ಚಂತರುಶಾಸನದಲ್ಲಿ ಮಹಾಬಲದೇವ–ಒಡೆಯ ಬಾರಕೂರ ರಾಜ್ಯವಾಳುತ್ತಿರುವಾಗ ವಿದ್ಯಾರಣ್ಯ ಶ್ರೀಪಾದನ ಶಿಷ್ಯ ಶಂಕರರಾಣ್ಯಶ್ರೀಪಾದ ನಿಡುವಂಪಳಿ ಬ್ರಹ್ಮಮಾರಗ್ರಾಮದ ಶಂಕರನಾರಾಯಣ ದೇವಾಲಯಕ್ಕೆ ಒಂದು ಮನೆ ಮತ್ತ ಭೂಮಿ ದಾನನೀಡಿದ ವಿವರವಿದೆ.

ಕ್ರಿ.ಶ. 1404ರ ಚಾನತಾಶಾಸನದಲ್ಲಿ ಮಹಾಬಳದೇವ–ವೊಡೆಯ ಬಾರಕೂರು ಆಳುತ್ತಿರುವಾಗ ನಿಡುವಂಪಳ್ಳಿ ಬ್ರಹ್ಮಮಾರು ಗ್ರಾಮದಲ್ಲಿರುವ ಶಂಕರನಾರಾಯಣ ದೇವಾಲಯಕ್ಕೆ ವಿದ್ಯಾರಣ್ಯ ಶ್ರೀಪಾದರ ಶಿಷ್ಯ ಶಂಕರನಾರಾಯಣ ಶ್ರೀಪಾದ ಭೂಮಿ ದಾನ ಪಡೆದವರು. ಕುಲ್ಯೆ ಶಾಸನದಲ್ಲಿ ಮಾದರಸ ಒಡೆಯನ ಮಗ ನಾಗಣ್ಣಒಡೆಯ ಮಂಗಳೂರ ರಾಜ್ಯವಾಳುತ್ತಿರುವಾಗ ಲಕ್ಷ್ಮಿದೇವಿಯು ಭೂಮಿದಾನ ನೀಡಿದ ವಿವರವಿದೆ. ಇದೇಕಾಲದ ಕುಲಾಯಿ ಶಾಸನದಲ್ಲಿ ಮಾದರಸ ಒಡೆಯರ ಮಗ ನಿಂಗಣ್ಣ–ಒಡೆಯ ಮಂಗಳೂರು ರಾಜ್ಯವಾಳುತ್ತಿರುವಾಗ ಮಂಜುನಾಥದೇವರಿಗೆ ಭೂಮಿದಾನ ನೀಡಿರಬಹುದು. ಆತ್ರಾಡಿ ಶಾಸನದಲ್ಲಿ ಮಹಾಪ್ರಧಾನ ಬಸವಣ್ಣ ಬಾರಕೂರರಾಜ್ಯ ಆಳುತ್ತಿರುವಾಗ ನಾರಾಯಣ ದೇವರಿಗೆ ಒಬ್ಬ ವ್ಯಕ್ತಿ (ಅಧಿಕಾರಿಗಳ ಹೆಸರು ಇಲ್ಲ) ಭೂಮಿ ದಾನನೀಡಿದ ದಾಖಲೆಯಿದೆ. ಪೆದ್ದವಲಗಟೂರು ಪುಂಗನೂರು ತಾಲ್ಲೂಕು, ಚಿತ್ತೂರು ಜಿಲ್ಲೆ ಆಂಧ್ರಪ್ರದೇಶ [ಬಾದ]ರಾಯವೊಡೆಯರ ಕುಮಾರ ಬೊಂಮಣವೊಡೆಯರ ಬಾಗಿಲಪ್ರಧಾನಿ (ಮುಖ್ಯ ಕಾರ್ಯದರ್ಶಿ) ಮುಪೆಯನಾಯಕನ ಕುಮಾರ ಲಖಯನಾಯಕನು ಮುಳುವಾಯ ರಾಜ್ಯದ ಬಡಹುಲಿನಾಡ ಹಿರಿಯವಳಗಟೂರ ಶ್ರೀವರದರಾಜದೇವರ ಪ್ರತಿಷ್ಟೆ ಮಾಡಿ ಅಂಗಭೋಗ, ನಯಿವೇದ್ಯ, ದೀಪಕ್ಕೋಸ್ಕರ ಭೂಮಿ ದಾನನೀಡಿದ ವಿವರವಿದೆ. ಶಂಕರನಾರಾಯಣ ಶಾಸನ ಸವೆದಿದೆ. ಬಸವಣ್ಣ ಒಡೆಯ ಬಾರಕೂರ ರಾಜ್ಯವಾಳುತ್ತಿರುವಾಗ ಮಹಾಪ್ರಧಾನ ಗೋಪೆಯ ದಂಣಾಯಕ ಆದೇಶದ ಮೇರೆಗೆ ಕೊಡಗಿಶಂಕರನಾರಾಯಣ ದೇವರಪೂಜೆ, ನೈವೇದ್ಯಕ್ಕೆ ಕೆಲವರು ವೈಯಕ್ತವಾಗಿ ಭೂಮಿ ಮತ್ತು ಹಣ ದಾನ ನೀಡಿದಾರೆ.

ಕ್ರಿ.ಶ. 1405ರ ಉಳ್ಳೇನಹಳ್ಳಿ ಶಾಸನದಲ್ಲಿ ಕೊಡಲೂರಿನ ಮಹಾಸಾಮಂತಾಧಿಪತಿ ಮಂಚೆಯನಾಯಕ ಮತ್ತು ಎಲ್ಲಾ ಗೌಡಪ್ರಜೆಗಳು, ಕೊಳನಲೂರು ಸ್ಥಳದ ಮಹಾಜನರು ಮಲ್ಲಿಕಾರ್ಜುನದೇವರಿಗೆ ದಾನನೀಡಿದ ವಿವರವಿದೆ.

ಕ್ರಿ.ಶ. 1406ರ ಮಾರೆಹಳ್ಳಿ ಶಾಸನದಲ್ಲಿ ಅರಮನೆಯ ಮಹಾಪ್ರಧಾನ ಮಲ್ಲರಸನು ಹೊಂನಕಳಸ ಚೋಳೇಂದ್ರ ಚತುರ್ವೇದಿಮಂಗಲದ ಶ್ರೀಮತ್ ಲಕ್ಷ್ಮಿನಾರಾಶಿಹ್ವ ದೇವರಿಗೆ ಮಾಡಿಸಿದ ವಿವರವಿದೆ.

ಕಲಿವರ್ಷದ 45[1]5ರ ಭದ್ರಾವತಿಶಾಸನದಲ್ಲಿ ಮಹಾನಾಯಕ ಆಚಾರ್ಯ್ಯ ಎಜಲಖೆ–ನಾಯಕ ದುಮ್ಮಿಯನಾಡು ಬಾನೂರು ಆಳುತ್ತಿರುವಾಗ ಲಕ್ಷ್ಮಿನರಸಿಂಹ ದೇವರಿಗೆ ಬಂಕಿಯಪುರ ಕೆರೆಕಟ್ಟಿಸಿ, ಲಕ್ಷ್ಮಿಪುರ ಮತ್ತು ನರಸಿಂಹಪುರಗಳಿಂದ ಬೇರೆ ಬೇರೆ ತೆರಿಗೆಗಳ ಆದಾಯದಿಂದ ದಾನನೀಡಿದ ದಾಖಲೆಯಿದೆ.

ತೇದಿ ಇಲ್ಲದ ಕಡವೂರ ಶಾಸನದಲ್ಲಿ ಬಾರಕೂರ ರಾಜ್ಯದ ಆಡಳಿತದ ಬಗ್ಗೆ ಮಹಾಪ್ರಧಾನ ಮಲ್ಲಪ್ಪವೊಡೆಯ ರಾಜನ ಆದೇಶದ ಮೇರೆಗೆ ರಾಮದೇವರ ಸೇವೆ ಅಮೃತಪಡಿಗೆ, ಚಕ್ರವರ್ತಿ ಮಲ್ಲಪ್ಪ'ಒಡೆಯ ಮತ್ತು ಕೊಡವೂರ ಜನನಿಗಳು ಹಣ ದಾನ ನೀಡಿದ ವಿವರವಿದೆ.

ಮಂಡಲಗಳ ಆಡಳಿತವನ್ನು ಮಂಡಲೇಶ್ವರರು ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ರಾಜಕುಟುಂಬದ ಸದಸ್ಯರುಗಳಿಗೆ ಆ ಹುದ್ದೆಗಳು ಮೀಸಲಾಗಿದ್ದವು. ಎಚ್.ಕೃಷ್ಣಶಾಸ್ತ್ರಿ ಎಂಬ ವಿದ್ವಾಂಸರ ಹೇಳಿಕೆಯ ಪ್ರಕಾರ ಪ್ರತಿಯೊಂದು ಪ್ರಾಂತ್ಯಕ್ಕೂ ಒಬ್ಬ ನಾಯಕನಿದ್ದನು. ಎಲ್ಲಾ ಪ್ರಾಂತ್ಯಗಳ ಮೇಲ್ವಿಚಾರಕರಾಗಿ ಓರ್ವ ಮಹಾನಾಯಕಾಚಾರ್ಯನಿದ್ದನು.

ಅರಸನಿಗೆ ರಾಜ್ಯಭಾರದಲ್ಲಿ ನೆರವಾಗಲು ಮಂತ್ರಿಮಂಡಲವಿದ್ದಿತು. ಪ್ರಧಾನಾಮಾತ್ಯನೂ ಇತರ ಮಂತ್ರಿಗಳೂ ಇದ್ದರು. ಅಬ್ದುಲ್ ರಝಾಕನು ಅಂದಿನ ಸಚಿವಾಲಯದ ಬಗ್ಗೆ ಕೆಲವು ವಿವರಗಳನ್ನು ಕೊಟ್ಟಿದ್ದಾನೆ.

ಆಧಾರಸೂಚಿ :

1. ಎಸ್.ಐ.ಐ., ಸಂಪುಟ 18
2. ಎ.ಆರ್.ಐ.ಇ, 1927, 1928–29, 1929–30, 1930–31, 1931–32, 1934–35, 1939–40, 1964–65, 1970–71, 1971–72, 1974–75, 1976–77, , 1984–85, 1990–91,
3. ಎ.ಕ. ಸಂಪುಟ 3, 4, 5, 7, 8, 9, 12

11. ಗದಗ : ವಿಜಯನಗರ ಕಾಲದ ಸಾಂಸ್ಕೃತಿಕ ಕೇಂದ್ರ

– ಡಾ. ಕೆ.ಎಸ್. ಪಾಟೀಲ

ಪೀಠಿಕೆ

ಕರ್ನಾಟಕ ಇತಿಹಾಸದಲ್ಲಿ ವಿಜಯನಗರ ಆಳ್ವಿಕೆಯ ಕಾಲ ಕನ್ನಡ ನಾಡಿನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ವಿಶಿಷ್ಟ ಕೊಡುಗೆಗಳನ್ನು ನೀಡಿದೆ. ಕಲೆ ಮತ್ತು ವಾಸ್ತು ಶಿಲ್ಪದಲ್ಲಿ ಹಿಂದೆಂದಿಗಿಂತಲೂ ವಿಭಿನ್ನ ಬೆಳವಣಿಗೆಯನ್ನು ಕರ್ನಾಟಕ ಇತಿಹಾಸ ಕಂಡಿತಲ್ಲದೆ ಅನೇಕ ಅಪರೂಪದ ದೇವಾಲಯಗಳು ನಿರ್ಮಾಣಗೊಂಡವು. ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಪ್ರಾಮುಖ್ಯತೆ ಪಡೆದ ಗದಗ ಪ್ರದೇಶ ಕಲೆಯ ಬೀಡಾಗಿ, ಕವಿಗಳ ನೆಲೆವೀಡಾಗಿ ಶೈಕ್ಷಣಿಕ ಕೇಂದ್ರವಾಗಿ ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತಾ ಬಂದಿದೆ.

ವಿಜಯನಗರ ಕಾಲದ ಆಡಳಿತ ಹಾಗೂ ಧಾರ್ಮಿಕ ಕೇಂದ್ರವಾಗಿ ಗದಗ :

ಗದಗ ಶಾಸನಗಳ ಆಧಾರದ ಮೇಲೆ ರಾಷ್ಟ್ರಕೂಟರು, ಕಲ್ಯಾಣದಚಾಳುಕ್ಯರು, ದೇವಗಿರಿಯ ಯಾದವರು, ಹೊಯ್ಸಳರು ಇನ್ನಿತರ ರಾಜರ ಆಳ್ವಿಕೆಯಲ್ಲಿ ಪ್ರಮುಖ ಆಡಳಿತ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿತ್ತು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಗದಗ ಬೆಳವಲ–300ರ ಭಾಗದ ಮುಳಗುಂದ–12ರ ಆಡಳಿತ ವಿಭಾಗದಲ್ಲಿ ಸೇರಿಕೊಂಡಿತ್ತು. ಆದರೆ ವಿಜಯನಗರ ಕಾಲಕ್ಕೆ ಇಲ್ಲಿನ ಆಡಳಿತದಲ್ಲಿ ಅನೇಕ ಬದಲಾವಣೆಗಳಾಗಿದ್ದವು. ಗದಗ "ಗದಗುದೇಶ" ಎಂದು ಹೆಸರಾಗಿ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಗದಗ ತಾಲೂಕಿನಲ್ಲಿ ವಿಜಯನತಗರ ಕಾಲದ 7 ಶಾಸನಗಳು ದೊರೆತಿವೆ. ಗದಗ ಪ್ರಾಂತಕ್ಕೆ ಸೇರಿದ ಡಂಬಳದಲ್ಲಿನ 1279–80ರ ಶಾಸನವು ವಿಜಯನಗರದ ಅರಸನಾದ ಎರಡನೇಯ ಹರಿಹರನು ಗದಗನ್ನು ವಶಪಡಿಸಿಕೊಂಡಿದ್ದನ್ನು ತಿಳಿಸುತ್ತದೆ.[1] ಈ ಸಮಯದಲ್ಲಿ ವಿಜಯನಗರದಲ್ಲಿ ಆಚರಿಸುವ ವಸಂತೋತ್ಸವ ಹಬ್ಬವನ್ನು 'ವಿರೂಪಾಕ್ಷ ವಸಂತೋತ್ಸವ ಚಂಪೂಕಾವ್ಯ' ಸುಂದರವಾಗಿ ವರ್ಣಿಸುತ್ತದೆ. ಈ ಉತ್ಸವಕ್ಕೆ ಲಕ್ಷ್ಮೇಶ್ವರದಿಂದ ನಾಯಕ ಹಾಗೂ ಡಂಬಳದ ನಾಯಕರು ಉಪಸ್ಥಿತರಿದ್ದರೆಂದು ನಿರೂಪಿಸುತ್ತದೆ. ವಿಜಯನಗರದ ಎರಡನೆ ಹರಿಹರನ ಕ್ರಿ.ಶ 1329ರ ತಾಮ್ರಶಾಸನವೊಂದು ಗದಗು ದೇಶದ 22 ಗ್ರಾಮಗಳನ್ನು ಗದುಗಿನ ದೇವತೆಗಳಾದ ತ್ರಿಕೂಟೇಶ್ವರ ಮತ್ತು ವೀರನಾರಾಯಣರಿಗೆ ಉಂಬಳಿಯಾಗಿ ಕೊಟ್ಟಿದ್ದನ್ನು ವಿವರಿಸುತ್ತದೆ. ಈ ಕಾಲಕ್ಕೆ ಗದಗು ದೇಶವು ಪಂಪಾ, ಹಸ್ತಿನಾವತಿ ಪ್ರಾಂತ್ಯಕ್ಕೆ ಸೇರಿದ 'ಲಕ್ಕುಂಡಿ ಪಿಂಠೆ' ಎಂಬ ರಾಜಕೀಯ ವಿಭಾಗದಲ್ಲಿ ತೊರಗಲ್ಲು ನಾಡಿನ 66 ಗ್ರಾಮಗಳ ಆಳ್ವಿಕೆಯನ್ನು ಒಳಗೊಂಡಿತ್ತೆಂದು ಈ ತಾಮ್ರ ಶಾಸನ ವರ್ಣಿಸುತ್ತದೆ.[2] ಎರಡನೆ ಹರಿಹರನ ಕ್ರಿ.ಶ 1378ರ ದತ್ತಿ ತಾಮ್ರ ಶಾಸನದ ಪ್ರಕಾರ ಶ್ರೀಮದ್ ರಾಜಗುರುಮಂಡಲಾಚಾರ್ಯ ವಾಣಿವಿಲಾಸ ಕ್ರಿಯಾಶಕ್ತಿ ಆಚಾರ್ಯರು ದೊರೆಗಳ ಕುಲಗುರುಗಳಾಗಿದ್ದು ಅವರ ಸೂಚನೆಯ ಮೇರೆಗೆ ಎರಡನೆ ಹರಿಹರನು ದಾನವನ್ನು ನೀಡಿದೆನೆಂದು ಉಲ್ಲೇಖಿಸುತ್ತದೆ.[3] ಇದೇ ಕಾಲದ ಮತ್ತೊಂದು ದಾಖಲೆಯಾದ ಡಂಬಳದ ತಾಮ್ರಪಟ ಶಾಸನದ ಪ್ರಕಾರ ಹರಿಹರ ದೊರೆಯು ಕ್ರಿಯಾಶಕ್ತಿ ಆಚಾರ್ಯರ ಅಪ್ಪಣೆಯ ಮೇರೆಗೆ ಗದಗ ಪ್ರಾಂತವನ್ನು 66 ಗ್ರಾಮಗಳಾಗಿ ವಿಭಾಗಿಸಿ ಕವಿಗಳಿಗೆ, ವಿದ್ವಾಂಸರಿಗೆ ಉಂಬಳಿಯಾಗಿ

ನೀಡಿದನೆಂದು ಉಲ್ಲೇಖಿಸುತ್ತದೆ. ಅವರಲ್ಲಿ ಸೋಮಭಟ್ಟ, ರಂಗಭಟ್ಟ ವೆಂಕಟಶಾಸ್ತ್ರಿ, ವಿರೂಪಾಕ್ಷ ಮುಂತಾದವರಲ್ಲದೆ ಶೃಂಗೇರಿ ಮಠಕ್ಕೆ ಸೇರಿದ ಶೃಂಗೇರಿಭಟ್ಟ ಮತ್ತು ವಿದ್ಯಾಶಂಕರಭಟ್ಟರು ದಾನ ಸ್ವೀಕರಿಸಿದ ಪ್ರಮುಖರೆಂದು ಶಾಸನ ಹೇಳುತ್ತದೆ.[4] ವೀರನಾರಾಯಣ ಗುಡಿಯ ಪ್ರಾಕಾರದ ಹೊರಗೆ ಇರುವ ಕೃಷ್ಣದೇವರಾಯನ ಕಾಲದ ಕ್ರಿ.ಶ 1519ರ ಶಾಸನವೊಂದು ಬಾಗಿನಾಗಿನಾಯಕರ ಮಗ ನಯನಪ್ಪ ನಾಯಕರಿಗೆ ತಿಮ್ಮಪ್ಪ ನಾಯಕರು ಗದುಗಿನ ಸಿಮೇಯ ಬಟ್ಟಕೆರೆಯ (ಆಧುನಿಕ ಬೆಟಗೇರಿ)ಯಲ್ಲಿ ಶ್ರೀ ತ್ರಯಂಬಕ ದೇವರ (ತ್ರಿಕೂಟೇಶ್ವರ) ಹಾಗೂ ವೀರನಾರಾಯಣ ದೇವರ ಪ್ರಿತ್ಯರ್ಥವಾಗಿ ಎರಡು ಅರವಟ್ಟಿಗೆಗಳ ನಿರ್ಮಾಣಕ್ಕಾಗಿ ತುಂಗಭದ್ರಾ ನದಿ ತೀರದಲ್ಲಿ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[5] ತ್ರಿಕೂಟೇಶ್ವರ ದೇವಾಲಯದ ಪ್ರಾಕಾರದಲ್ಲಿ ದೊರೆತ ಅಚ್ಯುತರಾಯನ ಕಾಲದಲ್ಲಿನ ಕ್ರಿ.ಶ 1539ರ ಶಾಸನವು ಬ್ರಾಹ್ಮಣರಿಗೆ 'ಆನಂದ ನಿಧಿ' ದಾನವನ್ನು ದೊರೆಯು ತುಂಗಭದ್ರಾ ನದಿಯ ತೀರದ ವಿಠಲೇಶ್ವರನ ಸನ್ನಿಧಿಯಲ್ಲಿ ನೀಡಿದನೆಂದು ಅದನ್ನು ಗದುಗಿನ ತ್ರಿಯಂಬಕ (ತ್ರಿಕೂಟೇಶ್ವರ) ದೇವರ ಸನ್ನಿಧಿಯಲ್ಲಿರುವ ಶಿಲೆಯಲ್ಲಿ (ಶಾಸನದಲ್ಲಿ) ದಾಖಲಿಸಲಾಯಿತೆಂದು ಉಲ್ಲೇಖಿಸುತ್ತದೆ.[6] ಇದೇ ಕಾಲದ ಕ್ರಿ.ಶ 1539ರ ಮತ್ತೊಂದು ಶಾಸನವು ವೀರನಾರಾಯಣನ ದೇವಸ್ಥಾನದ ಬಾವಿಯ ಹತ್ತಿರವಿರುವ ಪ್ರಾಕಾರದ ಗೋಡೆಯಲ್ಲಿ ದೊರೆತಿದ್ದು ಶ್ರೀ ವೀರನಾರಾಯಣನ ಸನ್ನಿಧಿಯಲ್ಲಿ 'ಆನಂದ ನಿಧಿ' ಎಂಬ ದಾನವನ್ನು ಕೊಟ್ಟದನ್ನು ಶಾಸನದಲ್ಲಿ (ಶಿಲೆಯಲ್ಲಿ) ದಾಖಲಿಸಲಾಗಿದೆ. ಎಂದು ವಿವರಿಸುತ್ತದೆ. ಈ ಆನಂದನಿಧಿ ದಾನ ಮಾಡುವುದರಿಂದ ದೀರ್ಘಾಯಸ್ಸು, ಆರೋಗ್ಯ, ಹಾಗೂ ಸಾಮಾಜ್ಯದ ಪ್ರಭುತ್ವಗಳೂ ಸಿದ್ಧಿಸುತ್ತವೆ. ಈ ಎಲ್ಲ ಕಾರಣಕ್ಕಾಗಿಯೇ ದೊರೆ ಅಚ್ಯುತರಾಯನು ಈ 'ಆನಂದನಿಧಿ' ದಾನವನ್ನು ತುಂಗಭದ್ರಾ ನದಿಯ ಮೇಲಿನ ವಿಠಲೇಶ್ವರ ದೇವಸ್ಥಾನದಲ್ಲಿ ಮಾಧವ ಸಂಪ್ರೀತಿಗಾಗಿ ಈ ದಾನವನ್ನು ಕೈಗೊಂಡನು.[8] ವೀರನಾರಾಯಣ ದೇವಾಲಯದ ಪೂರ್ವ ದಿಕ್ಕಿನ ಪ್ರಾಕಾರದಲ್ಲಿರುವ 1539 ಮತ್ತು 1540ರ ಮತ್ತುಂದು ಶಾಸನವು ಮೇಲಿನಂತೆ ಅಚ್ಯುತರಾಯನ 'ಆನಂದನಿಧಿ' ದಾನವನ್ನು ಬ್ರಾಹ್ಮಣರಿಗೆ ನೀಡಿದ್ದನ್ನು ಉಲ್ಲೇಖಿಸುತ್ತದೆಯಾದರೂ, ಗದಗ ಪರಿಸರದ ಯಾವುದೇ ದೇವಾಲಯಗಳ ಹೆಸರುಗಳು ಇಲ್ಲಿ ಉಲ್ಲೇಖಿತಗೊಂಡಿಲ್ಲ.[9] ಗದಗ ಬೆಟಗೇರಿಯನ್ನು ಉಲ್ಲೇಖಿಸುವ ಈ ಕೆಲವು ಶಾಸನಗಳನ್ನು ಬಿಟ್ಟರೆ ಗದುಗಿನ ಸುತ್ತಮುತ್ತ ವಿಜಯನಗರ ಕಾಲದ ಅನೇಕ ಶಾಸನಗಳು ದೊರೆತಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ 1408ರ ಕಣವಿ ಗ್ರಾಮದ ಹರಿಹರನ ಶಾಸನ, ಸೊರಟೂರು ಗ್ರಾಮದ ಸದಾಶಿವರಾಯನ ಶಾಸನ, ಈ ಶಾಸನಗಳ ಆಧಾರದ ಮೇಲೆ ಗದಗ ವಿಜಯನಗರ ಕಾಲದಲ್ಲಿ ಪ್ರಮುಖ ಆಡಳಿತ, ಸಾಂಸ್ಕೃತಿಕ, ಧಾರ್ಮಿಕ, ಕೇಂದ್ರವಾಗಿದ್ದುಕೊಂಡು ಎರಡನೆ ಹರಿಹರ, ಕೃಷ್ಣದೇವರಾಯ, ಅಚ್ಯುತರಾಯ, ಸದಾಶಿವರಾಯ ಮುಂತಾದ ರಾಜರುಗಳ ಆಳ್ವಿಕೆಯ ಕಾಲದಲ್ಲಿ ಪ್ರಾಮುಖ್ಯತೆ ಪಡೆದು ಮಹಾನ್ ಬ್ರಾಹ್ಮಣರ, ವಿದ್ವಾಂಸರ ಕೇಂದ್ರವಾಗಿತ್ತೆಂದು ಹೇಳಬಹುದು.[10]

ವಿಜಯನಗರದ ಶೈಕ್ಷಣಿಕ ಹಾಗೂ ಸಾಹಿತ್ಯಿಕ ಕ್ಷೇತ್ರಕ್ಕೆ ಗದುಗಿನ ಕಾಣಿಕೆ :

ಗದಗ ಚಾಳುಕ್ಯರ ಕಾಲದಂತೆ ವಿಜಯನಗರ ಕಾಲದಲ್ಲಿಯೂ ಪ್ರಮುಖ ಶೈಕ್ಷಣಿಕ ಕೇಂದ್ರವಾಗಿ ಮುಂದುವರೆಯಿತು. ಈ ಕಾಲದಲ್ಲಿಯೂ ಅಗ್ರಹಾರಗಳು ವೈದಿಕ ವಿದ್ಯೆಯ ಕೇಂದ್ರಗಳಾಗಿದ್ದು, ಮಹಾಜನರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದರು.[11] ತ್ರಿಕೂಟೇಶ್ವರ ದೇವಾಲಯದ ಸಂಕೀರ್ಣದಲ್ಲಿರುವ ಸರಸ್ವತಿ ದೇವಾಲಯದ ಎಡಬದಿಯಲ್ಲಿರುವ ಮಂಟಪವನ್ನು ವ್ಯಾಖ್ಯಾನ ಶಾಲೆಯಂದು ಹಿರಿಯರು ಹೇಳುತ್ತಾರೆ. ಅದು ಬಹುಶಃ ವಿವಿಧ ರಾಜಮನೆತನಗಳ ಕಾಲದಲ್ಲಿ ವಿದ್ಯಾಶಾಲೆಯಾಗಿರಬಹುದೆಂದು ಕೆಲವು ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಕೋಟುಮಚಗಿ ಹನ್ನೊಂದನೆಯ ಶತಮಾನದಿಂದಲೂ ಖ್ಯಾತಿ ಪಡೆದ ಒಂದು ಅಗ್ರಹಾರವಾಗಿತ್ತು. ಜೈನ ಬಸದಿಯ ಹತ್ತಿರ ದೊರೆತ ಶಾಸನವು (ಸುಮಾರು 16ನೇ ಶತಮಾನ) ಕೋಟುಮಚಗಿ ಗ್ರಾಮಕ್ಕೆ ಸದಾಶಿವರಾಯನಸಮುದ್ರ ಎಂಬ ಇನ್ನೊಂದು ಹೆಸರಿತ್ತು. ಎಂಬುದು ನೆನಪಿಸುತ್ತದೆ.[12] ಇದರಿಂದ ಸದಾಶಿವರಾಯನು 'ಕೊಟುಮಚಗಿಯ ಸದಾಶಿವರಾಯನಸಮುದ್ರ' ಎಂಬ ಕೆರೆಯನ್ನು ಕಟ್ಟಿಸಿದನೆಂದು ತಿಳಿಯುತ್ತದೆ.

ವಿಜಯನಗರ ಕಾಲದಲ್ಲಿ ಕನ್ನಡ ಸಾರಸ್ವತ ಲೋಕಕ್ಕೆ ಗದಗ ವಿಶೇಷ ಕಾಣಿಕೆಗಳನ್ನು ನೀಡಿದೆ. ಕನ್ನಡಿಗರ ಖ್ಯಾತ ಕವಿ ಕುಮಾರವ್ಯಾಸ ಗದುಗಿನ ವೀರನಾರಾಯಣನ ಭಕ್ತ. ರೂಪಕ ಸಾಮ್ರಾಜ್ಯದ ಚಕ್ರವರ್ತಿ ಕುಮಾರವ್ಯಾಸನು ವೀರನಾರಾಯಣ ಕಾಲದ ಶಾಸನವು ಬ್ರಾಹ್ಮಣರಿಗೆ 'ಆನಂದನಿಧಿ' ದಾನದ ಪ್ರಸ್ತಾಪವನ್ನು ನೀಡುತ್ತದೆ.

ಕುಮಾರವ್ಯಾಸನ ಸಂಬಂಧದಿಂದ ವಿಶೇಷವಾಗಿ ಪ್ರಸಿದ್ಧವಾದ ವೀರನಾರಾಯಣ ದೇವಾಲಯವು ವಿಸ್ತರವಾದ ಆಯತಾಕಾರದ ಪ್ರಾಕಾರದಿಂದ ಸುತ್ತುವರಿಯಲ್ಪಟ್ಟಿದೆ. ಮುಲತಃ ಸುಮಾರು 11–12ನೇ ಶತಮಾನದಲ್ಲಿ ನಿರ್ಮಾಣವಾಗಿದ್ದಿರಬಹುದಾದರೂ17 ಇದರ ಶಾಸನಗಳು ಹಾಗೂ ಇತಿಹಾಸವನ್ನು ಅವಲೋಕಿಸಿದರೆ ಈ ದೇವಾಲಯವು ಮೂರ್‍ನಾಲ್ಕು ಬಾರಿ ಜೀರ್ಣೋದ್ಧಾರಗೊಂಡಿದೆ. ಬಹುತೇಕ ನಂತರದ ದೇವಾಲಯದ ಭಾಗಗಳು ವಿಜಯನಗರದ ಕಾಲದಲ್ಲಿ ನಿರ್ಮಾಣಗೊಂಡಿವೆ. ಈವರೆಗೆ ದೊರೆತ ವಿವಿಧ ಶಾಸನಗಳನ್ನು ಅವಲೋಕಿಸಿದರೆ ಈಗ ವೀರನಾರಾಯಣ ದೇವಸ್ಥಾನವಿದ್ದ ಸ್ಥಳದಲ್ಲಿ 3 ದೇವಾಲಯಗಳಿದ್ದವೆಂದು ತಿಳಿಯುತ್ತದೆ. ಈ ಮೊದಲು ಇಲ್ಲಿ ಕ್ರಿ.ಶ 1037ರಲ್ಲಿ ವಿಷ್ಣು ದೇವಾಲಯ, (ತ್ರೈಪುರುಷ ದೇವಾಲಯ) ಕ್ರಿ.ಶ. 1184 ರಲ್ಲಿ ಮಾಧವೇಶ್ವರ ದೇವಾಲಯ ಹಾಗೂ ಕ್ರಿ.ಶ. 1100–1231ರಲ್ಲಿ ಕಲಿದೇವ ಮಹಾಸ್ವಾಮಿ ಜಿನಾಲಯವಿತ್ತೆಂದು ಹೇಳಬಹುದಾಗಿದೆ.[18]

ಕ್ರಿ.ಶ. 1037ರ ಶಾಸನದಲ್ಲಿ ಉಲ್ಲೇಖವಾಗಿರುವ ಬಾರನಾರಾಯಣ (ವಿಷ್ಣು) ದೇವಾಲಯವೇ ಪ್ರಸ್ತುತ ವೀರನಾರಾಯಣ ದೇವಾಲಯವಾಗಿದ್ದು, 12ನೇ ಶತಮಾನದಲ್ಲೊಮ್ಮೆ, (ಬಸದಿ ಇದ್ದಾಗ) 14–15ನೇ ಶತಮಾನದಲ್ಲೊಮ್ಮೆ, (ವಿಜಯನಗರ ಕಾಲದಲ್ಲಿ) 19ನೇ ಶತಮಾನದಲ್ಲೊಮ್ಮೆ, (1850ರಲ್ಲಿ) ಹಾಗೂ 1962ರಲ್ಲಿ ನಾಲ್ಕು ಸಲ (ಕೇವಲ ಗೋಪುರ) ವೀರನಾರಾಯಣ ದೇವಾಲಯ ಜೀರ್ಣೋದ್ಧಾರಗೊಂಡಿದೆ. ಹೀಗಾಗಿ ಈ ದೇವಾಲಯವು ಚಾಳುಕ್ಯ, ಹೊಯ್ಸಳ, ವಿಜಯನಗರ ಹಾಗೂ ಆಧುನಿಕ ಶೈಲಿಗಳ ಸಂಗಮವಾಗಿದೆ. ದೇವಾಲಯದ ಗರ್ಭಗೃಹ, ಅರ್ಧಮಂಟಪ ನವರಂಗಗಳು ವಿಜಯನಗರ ಪೂರ್ವೋತ್ತರ ಕಾಲದಲ್ಲಿ ನಿರ್ಮಾಣಗೊಂಡಿರಬಹುದು.[19] ವಿಜಯನಗರ ಕಾಲದಲ್ಲಿ ಸುತ್ತಲೂ ಆಯತಾಕಾರದ ಪ್ರಾಕಾರವನ್ನು ನಿರ್ಮಿಸಲಾಗಿದೆ. ರಂಗಮಂಟಪ ಅಥವಾ ಸಭಾಮಂಟಪದೊಳಗೆ ಎಡಬದಿಯಲ್ಲಿ ಒಂದು ಸಣ್ಣ ಕೋಣೆಯನ್ನು ಹಾಗೂ ಸಭಾಮಂಟಪದ ಮುಂಭಾಗದಲ್ಲಿ ಇನ್ನೂ ಹೆಚ್ಚು ಅಗಲವಾದ ವಿಶಾಲವಾದ ಮಂಟಪವನ್ನು ಕಟ್ಟಲಾಗಿದೆ. ಮಂಟಪದ ಎರಡೂ ಬದಿಯ ಗೋಡೆಗಳನ್ನೇ ಮುಂದುವರೆಸಿ ಮೊದಲಿನ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ವಿಸ್ತರಿಸಲಾಗಿದೆ. ಆದ್ದರಿಂದ ದೇವಾಲಯದ ಮೊದಲಿನ ಭಾಗಗಳು ಹೊರಗಡೆಯಿಂದ ಕಾಣುವುದಿಲ್ಲ. ಗರ್ಭಗುಡಿಯಲ್ಲಿರುವ ಸುಂದರವಾದ ಮಾನವ ಸಹಜಾಕೃತಿಯಲ್ಲಿರುವ ವೀರನಾರಾಯಣನ ಪ್ರತಿಮೆಯು ಮೂರ್ತಿಶಿಲ್ಪದ ಲಕ್ಷಣಗಳಿಂದ ವಿಜಯನಗರ ಕಾಲದ್ದೆಂದು ಹೇಳಬಹುದು.[20] ಈ ಮೂರ್ತಿಯು 8 ಅಡಿ ಎತ್ತರವಿದ್ದು ಅದರ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರದ ಕೆತ್ತನೆಯಿದೆ. ಶ್ರೀ ವೀರನಾರಾಯಣನು ಯೋಗಮುದ್ರೆಯಲ್ಲಿದ್ದು, ಪೀಠದ ಮೇಲಿರುವ ಪದ್ಮದ ಮೇಲೆ ಸ್ಥಾನಕಭಂಗಿಯಲ್ಲಿದ್ದಾನೆ. ಬಲ ಕೈಗಳಲ್ಲಿ ಶಂಖ ಹಾಗೂ ಗಧೆಗಳನ್ನು ಹಿಡಿದಿದ್ದು ಅಭಯ ಮುದ್ರೆಯನ್ನು ನೀಡಿದ್ದಾನೆ. ಎಡ ಕೈಗಳಲ್ಲಿ ಚಕ್ರ ಹಾಗೂ ಪದ್ಮಗಳನ್ನು ಹಿಡಿದಿದ್ದಾನೆ. ಪಾದಗಳ ನಡುವೆ ಸಾಲಿಗ್ರಾಮವಿದೆ. ಬಲಗಡೆ ಗರುಡ ಮತ್ತು ಎಡಗಡೆ ಮಹಾಲಕ್ಷ್ಮೀ ಮೂರ್ತಿಗಳಿವೆ. ಸಭಾಮಂಟಪದಲ್ಲಿ ವಿಜಯನಗರ ಶೈಲಿಯ 20 ಕಂಬಗಳಿವೆ. ಅವುಗಳಲ್ಲಿ ಮಧ್ಯದ ನಾಲ್ಕು ಕಂಬಗಳಲ್ಲಿ ದಶಾವತಾರ ಹಾಗೂ ಇನ್ನಿತರ ದೇವ–ದೇವತೆಗಳ ಉಬ್ಬು ಶಿಲ್ಪಗಳಿವೆ. ಇದರಲ್ಲಿನ ಆಗ್ನೇಯ ದಿಕ್ಕಿನ ಕಂಬಕ್ಕೆ ಒರಗಿ ಕುಮಾರವ್ಯಾಸನು ತನ್ನ ಕಾವ್ಯ ರಚಿಸುತ್ತಿದ್ದನಂತೆ. ಗುಡಿಯ ಸುತ್ತಲಿನ ಪ್ರಾಕಾರದಲ್ಲಿ ಅಲ್ಲಲ್ಲಿ ಅನೇಕ ಶಿಲಾಶಾಸನಗಳು ಕಾಣಸಿಗುತ್ತವೆ. ಬಹುಶಃ ವಿಜಯನಗರ ಅರಸರು ಈ ದೇವಾಲಯದ ಜೀರ್ಣೋದ್ಧಾರ ಮಾಡಿದಾಗ ಪ್ರಕಾರ ಕಟ್ಟಿಸಿದ ವೇಳೆಯಲ್ಲಿ ಇವುಗಳನ್ನು ಕಲ್ಲಿನ ಗೋಡೆಯಲ್ಲಿ ಹಾಕಿ ಕಟ್ಟಿರಬಹುದು. ಈ ದೇವಾಲಯಕ್ಕೆ ಎರಡು ಪ್ರವೇಶ ದ್ವಾರಗಳಿದ್ದು, ದಕ್ಷಿಣದ ಪ್ರದೇಶದ್ವಾರವು ವಿಜಯನಗರ ಪೂರ್ವದಲ್ಲಿ ನಿರ್ಮಾಣವಾಗಿದೆ. ಆದರೆ ಪೂರ್ವದ ದ್ವಾರವು ವಿಶೇಷವಾಗಿದ್ದು ಮೇಲಿಂದ ಮೇಲೆ ಜೀರ್ಣೋದ್ಧಾರಗೊಂಡಿದೆ. ನಂತರ ಕ್ರಿ.ಶ. 1850ರಲ್ಲಿ ಹಾಗೂ ಕ್ರಿ.ಶ 1962ರಲ್ಲಿ ಈ ಗೋಪುರವನ್ನು ಗಾರೆ ಗಚ್ಚುಗಳಿಂದ ಪ್ರಾಚೀನ ಕಾಲದ ರೀತಿಯಲ್ಲಿಯೇ ಪುನರ್ ನಿರ್ಮಿಸಲಾಗಿದೆ. ಕೀರ್ತಿಮುಖಗಳೊಂದಿಗೆ ಐದು ಹಂತದ ರಾಯಗೋಪುರದಲ್ಲಿ ದೇವ–ದೇವತೆಗಳ ಶಿಲ್ಪದೊಂದಿಗೆ ಅನೇಕ ಮಿಥುನ ಶಿಲ್ಪಗಳು ಇವೆ.

ಈ ಎಲ್ಲ ಐತಿಹಾಸಿಕ ಅಂಶಗಳನ್ನು ಸಮಗ್ರವಾಗಿ ಅವಲೋಕಿಸಿದಾಗ ಗದಗ ವಿಜಯನಗರ ಕಾಲದಲ್ಲಿ ಎಂತಹ ಮಹತ್ವದ ಸ್ಥಾನ ಪಡೆದಿತ್ತೆಂಬುದು ತಿಳಿಯುತ್ತದೆ. ಒಂದು ದೇಶದ ಸಾಂಸ್ಕೃತಿಕ ಚರಿತ್ರೆಯಲ್ಲಿ ನಗರಗಳು ಮಹತ್ವದ ಪಾತ್ರ

ವಹಿಸುತ್ತವೆ. ಅವು ಕೇವಲ ಜನವಸತಿಯ ಕೇಂದ್ರಗಳಾಗಿರದೆ ದೇಶದ ಆಡಳಿತ, ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಮಹತ್ವದ ಕೊಡುಗೆಗಳನ್ನು ಸಲ್ಲಿಸುತ್ತವೆಯೆಂದು ತಿಳಿದು ಬರುತ್ತದೆ. ಈ ಎಲ್ಲ ಅಂಶಗಳಿಂದ "ಗದಗುದೇಶ" ವಿಜಯನಗರ ಕಾಲದ ಪ್ರಮುಖ 'ಸಾಂಸ್ಕೃತಿಕ ಕೇಂದ್ರ'ವಾಗಿತ್ತೆಂದು ಹೇಳಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. **Journal of Bombay Branch of Royal Asiatic Society,** Vol. XII, p.338
2. **Gazetteer of Bombay State,** Dharwad District (Revised Edition)1959,Bombay, p.791.
3. **Annual Report of the Mysore Archaeological Department,** 1941-42, No.20
4. **Journal of Bombay Branch of Royal Asiatic Society,** Vol.XII,P.338
5. ARSIE, 1926-27,p.186,and SII XIII No.280.
6. SII, XV,No.252.
7. ಆನಂದನಿಧಿ' ಎಂದರೆ ಅಕ್ಷಯನಿಧಿ ಎಂದರ್ಥ. ಆನಂದನಿಧಿ ದಾನವನ್ನು ಕೆಲವು ವಿಶೇಷ ಸಮಾರಂಭಗಳ ಪೂರ್ವಾರ್ಧವಾದ ನಂತರ ಬ್ರಾಹ್ಮಣ ಪಂಡಿತರಿಗೆ ಕೊಡುಗೆಯನ್ನಿಯುವುದು ಎಂದು 'ಚತುರ್ವರ್ಗಚಿಂತಾಮಣಿ' ಎಂಬ ಪುಸ್ತಕದಲ್ಲಿ ಅದರ ಕರ್ತೃ ಹೇಮಾದ್ರಿ ಹೇಳಿದ್ದಾನೆ.
8. SII XV No.253.
9. SII XVIII NO.283.
10. ಶ್ರೀ ಶಶಿಕಲಾ ಜನ್ನು, **"ವಿಜಯನಗರ ಕಾಲದ ಗದಗು"** ಗದಗ-ಬೆಟಗೇರಿ ಡೈರಕ್ಟರಿ, (ಸಂಪಾದನೆ ಹ.ರಾ. ಕಿದಿಯೂರ,) 1975. ಪು.856.
11. ಡಾ॥ ಎಸ್.ಎಲ್.ಶಾಂತಕುಮಾರಿ, **'ಅಗ್ರಹಾರ ಗದಗ' ಗದಗ-ಬೆಟಗೇರಿ ಡೈರಕ್ಟರಿ,** (ಸಂಪಾದನೆ ಹ.ರಾ. ಕಿದಿಯೂರ,) 1975. ಪು.429.
12. SII XV No.696.
13. ಪಾಂಡರಂಗರಾವ ದೇಸಾಯಿ, "ಕುಮಾರವ್ಯಾಸನನ್ನು ಕೀರ್ತಿಸುವ ಗದುಗಿನ ಶಿಲಾಶಾಸನ" **Journal of K.U.D. Humanities,** Vol.VII, 1963, p.286.
14. ಕರ್ನಾಟಕ ಸಾಹಿತ್ಯಪರಿಷತ್ ಪತ್ರಿಕೆ ಅಕ್ಟೋಬರ 1920, ಪು.15.
15. ಡಾ. ಸೂರ್ಯನಾಥ ಕಾಮತ್, **ಧಾರವಾಡ ಜಿಲ್ಲಾ ಗ್ಯಾಸಿಟಿಯರ್** 1995 ಪು. 925–26.
16. ಪ್ರೋ.ಎಮ್.ಎಚ್.ಹರಿದಾಸ, **ಗದುಗಿನ ಶ್ರೀ ವೀರನಾರಾಯಣ ಹಾಗೂ ಕುಮಾರವ್ಯಾಸ,** ಪು. 53.
17. ಪೂರ್ವೋಕ್ತ.
18. ಡಾ. ಬಾಲಸುಬ್ರಹ್ಮಣ್ಯ **ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ ಕನ್ನಡ ವಿಶ್ವವಿದ್ಯಾಲಯ,** ಹಂಪಿ, ಪು. 53.
19. ಡಾ. ಅ. ಸುಂದರ "ಗದಗ ಬೆಟಗೇರಿಯಲ್ಲಿರುವ ಪ್ರಾಚೀನ ದೇವಾಲಯಗಳು", **ಗದಗ-ಬೆಟಗೇರಿ ಡೈರೆಕ್ಟರಿ,** 1975 (ಸಂಪಾದನೆ ಹ.ರಾ. ಕಿದಿಯೂರ,) ಪು. 481.
20. ಪೂರ್ವೋಕ್ತ.

❑

12. ಕೃಷ್ಣದೇವರಾಯನ ಕಾಲದ ಶಾಸನೋಕ್ತ ಗಾವುಂಡರ ಚಟುವಟಿಕೆಗಳು

- ಡಾ. ಎಸ್. ಶಿವರಾಮು

ವಿಜಯನಗರ ಅರಸರು ಸಾಮ್ರಾಟರಾಗಿ ಆಡಳಿತವನ್ನು ಆರಂಭಿಸಿದ ನಂತರ ತಮ್ಮ ಸಾಮ್ರಾಜ್ಯವನ್ನು ಹಲವಾರು ಆಡಳಿತ ಘಟಕಗಳಾಗಿ ವಿಂಗಡಿಸಿ ಅಧಿಕಾರ ವಿಕೇಂದ್ರಿಕರಣವನ್ನು ಮಾಡಿದರು. ಸ್ಥಳೀಯ ಆಡಳಿತ ವಿಭಾಗದಲ್ಲಿ ಸ್ಥಳೀಯ ಆಡಳಿತಗಾರರು ವಿಜಯನಗರ ಸಾಮ್ರಾಜ್ಯದ ಉನ್ನತಿಯಲ್ಲಿ ಪ್ರಗತಿಪರವಾದ ಕೆಲಸಗಳನ್ನು ಸಾಮ್ರಾಟರಡಿಯಲ್ಲಿ ಮಾಡುತ್ತಿದ್ದರು. ಪ್ರಸ್ತುತ ಪ್ರಬಂಧದಲ್ಲಿ ವಿಜಯನಗರ ಸಾಮ್ರಾಟ ಶ್ರೀ ಕೃಷ್ಣದೇವರಾಯನ ಕಾಲದ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಗೌಡರು ಅಥವಾ ಗಾವುಂಡರ ಕಾರ್ಯ ಚಟುವಟಿಕೆಗಳನ್ನು ಚರ್ಚಿಸಲಾಗಿದೆ.

ಗೌಡರು ಅಥವಾ ಗಾವುಂಡರು ಪ್ರಭುಗಾವುಂಡರ ಅಧೀನದಲ್ಲಿ ಗ್ರಾಮಗಳ ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಒಂದು ಗ್ರಾಮದಲ್ಲಿ ಒಬ್ಬ ಗಾವುಂಡ ಇರುತ್ತಿದ್ದನು. ಕೆಲವು ಗ್ರಾಮಗಳಲ್ಲಿ ಹಲವಾರು ಗಾವುಂಡರಿದ್ದು, ಅವರೆಲ್ಲರ ಮೇಲೆ ಒಬ್ಬ ಪ್ರಧಾನ ಗಾವುಂಡ ಇರುತ್ತಿದ್ದನು.[1] ಗಾವುಂಡತನ ವಂಶಪಾರಂಪರ್ಯವಾಗಿ ಮುಂದುವರೆಯುತ್ತಿತ್ತು. ಅವರು ಗ್ರಾಮದ ಆಡಳಿತ, ರಕ್ಷಣೆ, ಸುಂಕ ಸಂಗ್ರಹಣೆ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಅದರೊಂದಿಗೆ ಗ್ರಾಮಕ್ಕೆ ಕೊಳ್ಳೆಯ ಬಾಧೆ ಮೊದಲಾದ ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಹೋರಾಡುತ್ತಿದ್ದರು.

ದಕ್ಷಿಣ ಭಾರತದ ಗ್ರಾಮಾಡಳಿತದಲ್ಲಿ ಜನರ ಸಹಕಾರ ಗಮನಾರ್ಹವಾದ ಒಂದು ವಿಶೇಷ ಗುಣವಾಗಿತ್ತು. ಈ ಸ್ಥಳೀಯ ಸಂಸ್ಥೆಗಳ ಪ್ರಭಾವ ಮತ್ತು ಅಧಿಕಾರವನ್ನು ವಿಜಯನಗರ ಕಾಲಕ್ಕೆ ಮೊದಲೇ ತಮಿಳುನಾಡು ಮತ್ತು ಕರ್ನಾಟಕದಲ್ಲಿ ರೂಪಿಸಲಾಗಿತ್ತು. ಗ್ರಾಮಗಳ ಪ್ರಜಾ ಸಮುದಾಯದಲ್ಲಿ ಸೌಮ್ಯಜ್ಞಾನವಿತ್ತೆಂದು ಟಿ.ವಿ.ಮಹಾಲಿಂಗಂ ಅಭಿಪ್ರಾಯಪಟ್ಟಿದ್ದಾರೆ.[2] ಗಾವುಂಡ ಅಥವಾ ಮುಖಂಡನು ಗ್ರಾಮಾಡಳಿತದಲ್ಲಿ ಪ್ರಮುಖ ವ್ಯಕ್ತಿಯಾಗಿದ್ದನು.

ಗೌಡಿಕೆ ಅಥವಾ ಗ್ರಾಮ ಮುಖಂಡತ್ವ ಹುದ್ದೆಯು ಆಶಾರ್ಹವಾಗಿತ್ತು. ವಿಜಯನಗರದ ಹಿಂದಿನ ಕಾಲದಲ್ಲಿ ಕರ್ನಾಟಕದಲ್ಲಿ ಗಾವುಂಡ ಅಥವಾ ಗ್ರಾಮ ಮುಖಂಡನು ಗ್ರಾಮಸಭೆಯ ಮುಖ್ಯ ಕಾರ್ಯನಿರ್ವಾಹಕ ಮತ್ತು ಗ್ರಾಮಾಡಳಿತದ ಪ್ರಧಾನ ಅಧಿಕಾರಿಯಾಗಿದ್ದನು. ಗ್ರಾಮಸಭೆ ಯೊಡನೆ ಅವನು ಗ್ರಾಮದ ಅಭ್ಯುದಯಕ್ಕೆ ಜವಾಬ್ದಾರನಾಗಿರುತ್ತಿದ್ದನು. ಗೌಡಿಕೆ ಹುದ್ದೆಯನ್ನು ರಾಜನು ಅಥವಾ ಅಧಿಕಾರಿಗಳು, ಗ್ರಾಮಸ್ಥರು ನಾಡಿನವರು ಗ್ರಾಮ ಅಥವಾ ಗ್ರಾಮಗಳ ಸೇವೆಯಿಂದ ಹೆಸರು ವಾಸಿಯಾದವನಿಗೆ ಕೊಡುತ್ತಿದ್ದರು. ಆತನು ಜನರ ಪ್ರತಿನಿಧಿಯಾಗಿ ಮತ್ತು ಸರ್ಕಾರದ ನಿಯೋಗಿಯಾಗಿ ಕೆಲಸ ಮಾಡುತ್ತಿದ್ದರು. ಅವನ ಸಂಭಾವನೆ ಗೌಡಗೊಡಗೆ ಅಥವಾ ತೆರಿಗೆಯಿಂದ ರಿಯಾಯಿತಿ ಪಡೆದ ಭೂಮಿ, ಆತನು ಗ್ರಾಮದ ದಂಡಾಧಿಕಾರಿಯಾಗಿ ಸಣ್ಣಪುಟ್ಟ ಅಪರಾಧಗಳ ವಿಚಾರಣೆ ನಡೆಸುತ್ತಿದ್ದನು. ಆತನು ಸಾರ್ವಜನಿಕರಿಂದ ಮತ್ತು ಸರ್ಕಾರದಿಂದ ಹಣ ಸಂಗ್ರಹಿಸಿ ಲೋಕೋಪಯೋಗಿ ಕಾರ್ಯಗಳನ್ನು ನಡೆಸುತ್ತಿದ್ದನು.[3]

ವಿಜಯನಗರ ಕಾಲದಲ್ಲಿ ಗೌಡಿಕೆಯನ್ನು ನಾನಾ ವಿಧದಲ್ಲಿ ಪಡೆಯಬಹುದಾಗಿತ್ತು. ರಾಜನು ಹಲವು ವೇಳೆ ಇವರನ್ನು ನೇಮಿಸುತ್ತಿದ್ದನು. ಹೀಗೆ ನೇಮಕಗೊಂಡ ಗೌಡರು ಗ್ರಾಮಗಳ ಸರ್ವತೋಮುಖ ಪ್ರಗತಿಗಾಗಿ ದುಡಿಯುತ್ತಿದ್ದರು. ಕಂದಾಯ,

ಕೆರೆಕಾಲುವೆ, ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ ದೇವಸ್ಥಾನಗಳಿಗೆ ಭೂದಾನ, ಬ್ರಾಹ್ಮಣರಿಗೆ ಭೂದತ್ತಿಗಳು, ಹಾಗೂ ವಿವಿಧ ಜನೋಪಯೋಗಿ ಕಾರ್ಯಗಳನ್ನು ತನ್ನ ಗ್ರಾಮ ಪರಿಮಿತಿಯಲ್ಲಿ ನೆರವೇರಿಸುತ್ತಿದ್ದನು. ವಿಜಯನಗರ ಸಾಮ್ರಾಟ ಶ್ರೀಕೃಷ್ಣದೇವರಾಯನ ಕಾಲದ ಹಲವು ಶಾಸನಗಳು ಗೌಡ ಅಥವಾ ಗಾವುಂಡರ ಕಾರ್ಯಚಟುವಟಿಕೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

ಶ್ರೀಕೃಷ್ಣದೇವರಾಯನ ಆಳ್ವಿಕೆಯ ಕಾಲ ವಿಜಯನಗರದ ಚರಿತ್ರೆಯಲ್ಲಿ ಒಂದು ಸುವರ್ಣಯುಗ, ರಾಯನ ಆಳ್ವಿಕೆಯ ಕಾಲದಲ್ಲಿ ಗೌಡ ಅಥವಾ ಗಾವುಂಡರು ವಿಶಿಷ್ಟವಾದ ಕೊಡುಗೆಗಳನ್ನು ನೀಡಿದ್ದಾರೆ. ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಕಲ್ಯದ ಕ್ರಿ.ಶ.1512ರ ಶಾಸನವು ಮಯಿದೇವನೆಂಬುವನು ಮತ್ತು ಒಬ್ಬ ಗೌಡನು ಕಲನಾಥದೇವರ ಸೇವೆಗೆ ಹೊಲ ಮತ್ತು ಗದ್ದೆಯನ್ನು ದಾನ ನೀಡಿದ ವಿಷಯವಿದೆ. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರ ತಿಳಿದು ಬರುವುದಿಲ್ಲ.[4] ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಗೋಪಾಲಪುರದ ಕ್ರಿ.ಶ. 1513ರ ಶಾಸನವು ಕೃಷ್ಣದೇವರಾಯನ ಪ್ರಧಾನಿ ತಿಮ್ಮರಸರ ನಿರೂಪದಿಂದ ಗಜಪತಿ ನರಸಯ್ಯ ಅರಸರು ರಾಮಯ್ಯಗೌಡನೆಂಬುವವನಿಗೆ ಗೋಪಾಲಪುರ ಗ್ರಾಮವನ್ನು ಕೊಡುಗೆಯಾಗಿ ಕೊಟ್ಟ ವಿಷಯವನ್ನು ಶಾಸನ ತಿಳಿಸುತ್ತದೆ.[5] ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕು ಬಸವನಹಳ್ಳಿಯ ಕ್ರಿ.ಶ. 1520ರ ಶಾಸನವು ಕೃಷ್ಣದೇವರಾಯನ ಕುಮಾರ ಸಿಂನಿಯ ಕೃಷ್ಣನಾಯಕನಿಗೆ ಸರ್ವರಸಯ್ಯ ಎಂಬುವನು ನಿವೇದಿಸಿಕೊಂಡು ಮಳಲೆ ಗ್ರಾಮದ ಚಿಕ್ಕಣ್ಣಗೌಡನ ಮಗ ವೀರಣ್ಣಗೌಡನಿಗೆ ಸೌಬಾಹಳ್ಳಿಯನ್ನು ದಾನವಾಗಿ ನೀಡಿದ್ದಾನೆ. ಈ ದಾನಕ್ಕೆ ತಪ್ಪಿದರೆ ರಾಮನಾಥ ದೇವರು ಸಕಲೇಶ್ವರ ದೇವರು ಮತ್ತು ಜನಾರ್ಧನ ದೇವರುಗಳನ್ನು ಕೊಂದ ಪಾಪಕ್ಕೆ ಒಳಗಾಗುವರೆಂದು ತಿಳಿಸಿದೆ. ಇಲ್ಲಿ ಉಲ್ಲೇಖವಾಗಿರುವ ಸಿಂನಿಯ ಕೃಷ್ಣಪ್ಪನಾಯಕನು ಕೃಷ್ಣದೇವರಾಯನ ಕುಮಾರನೆಂಬ ಉಲ್ಲೇಖವಿದೆ. ಕುಮಾರನೆಂದರೆ ಆಪ್ತ ಅಧಿಕಾರಿ ಪ್ರೀತಿಪಾತ್ರ ಅಧಿಕಾರಿಯೆಂದು ಮಾತ್ರ ತಿಳಿಯಬಹುದು.[6] ಕ್ರಿ.ಶ. 1522 ರಲ್ಲಿ ಮಾಚಗೌಡ ಮತ್ತು ಇತರ ಗೌಡರು ಪ್ರಮುಖ ನಾನಾದೇಶಿಶೆಟ್ಟಿಗಳೊಡನೆ, ಮಹೇಶ್ವರ ದೇವರಿಗೆ ಹೊಳಲ್ಕರೆ ವೃತ್ತಿಯಲ್ಲಿ ಭೂಮಿ ಮತ್ತು ಸಂತೆಯ ಅನೇಕ ಸರಕುಗಳ ಮೇಲಿನ ತೆರಿಗೆಗಳನ್ನು ದಾನ ಮಾಡಿದರು.[7]

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು ಚಿಂದಗೆರೆಯ ಕ್ರಿ.ಶ.1522ರ ಶಾಸನವು ಕೃಷ್ಣದೇವರಾಯನು ಕಗೆರೆಯ ಅಂನಣಗೌಡನೆಂಬುವವನಿಗೆ ಬಿದುರೆಯ ಸೀಮೆಯನ್ನು ಆಳುತ್ತಿದ್ದ ಎಲಪಂಣಗಳ ಮಗ ಎಲಪನಾಯಕ ನುಸತ್ತಿಗೆಯ ಕೊಡಗಿಯಾಗಿ ದಾನ ನೀಡಿದ್ದಾನೆ.[8] ಕ್ರಿ.ಶ. 1523ರಲ್ಲಿ ನಲ್ಲೂರು ನಾಡಿಗೆ ಸೇರಿದ ಮಳಲೂರು ಸ್ಥಳದ ಕುಂಡಲಗುಡಿಕೆ ಗ್ರಾಮದಲ್ಲಿ ವಿವಾಹ ತೆರಿಗೆಯನ್ನು ರದ್ದುಮಾಡಿದ ಒಂದು ಧರ್ಮಶಾಸನವನ್ನು ಸ್ಥಾಪಿಸಲಾಯಿತು. ಈ ತೆರಿಗೆಯನ್ನು ನಾಡಗೌಡರ ಸಮ್ಮುಖದಲ್ಲಿ ರದ್ದುಮಾಡಲಾಯಿತು.[9] ಕ್ರಿ.ಶ.1524ರ ಶಾಸನವೊಂದು ಬೆಂಕೆಚೇಯಗೌಡನೆಂಬುವನು ವೀರಣ್ಣ ಒಡೆಯ ನೆಂಬುವನಿಗೆ ಶಿವದೇವಾಲಯದ ಪೂಜೆಗಾಗಿ ಒಂದು ಪುರವನ್ನು ಕೊಟ್ಟನು ಹಾಗೂ ಇದರಿಂದ ತನ್ನ ತಂದೆ ತಾಯಿಗೆ ಶ್ರೇಯಸ್ಸಾಗುವುದೆಂದು ತಿಳಿಸಿದೆನು. ಹೊಸಪೇಟೆ ತಾಲ್ಲೂಕಿನ ಸಿದ್ದೇನಹಳ್ಳಿ ಗ್ರಾಮಕ್ಕೆ ಸೇರಿದ ಕ್ರಿ.ಶ. 1524ರ ಶಾಸನ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಕುಮಾರಸಾಕ್ಷಿಚಿನ್ನಮನಾಯ್ಕನು ಮುಳವಾಗಿಲು ಸೀಮೆಯೊಳಗಣ ಬೆಟ್ಟಹಳ್ಳಿಯ ಕಳದೊಳನ ಸೀಮೆಯನ್ನು ಪುರವನ್ನಾಗಿ ಮಾಡಿ ಬೆಟ್ಟಹಳ್ಳಿಯ ಬೆಂಕೆಯಗೌಡನು ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಮುಳುವಾಗಿಲು ಸೀಮೆಯ ಬೆಟ್ಟಹಳ್ಳಿಯ ಮೂಡಣ ದೆಸೆಯ ಸ್ಥಳದ ಹೊಸಕೆರೆಯ ಕೆಳಗೆ ಗದ್ದೆಯ ಭೂಮಿಯನ್ನು ಪೂಜೆಯ ವೀರಣ್ಣೊಡೆಯನಿಗೆ ಕೊಟ್ಟು ಶಿವಪೂಜೆ ಮಾಡಿಕೊಂಡಿರುವಂತೆ ಹೇಳಿ ಲಿಂಗಮುದ್ರೆ ಕಲ್ಲು ನೆಟ್ಟು ದಾನ ನೀಡಿರುವುದನ್ನು ಉಲ್ಲೇಖಿಸಿದೆ.[10] ಆನೇಕಲ್ ತಾಲ್ಲೂಕಿನ ಸರ್ಜಾಪುರ ಕೋಟೆಯ ಪಾಳು ಚನ್ನಕೇಶವ ದೇವಾಲಯದ ದಕ್ಷಿಣ ಗೋಡೆಯಲ್ಲಿನ ಶಾಸನವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಒಂದು ಊರನ್ನು ಗೌಡನೊಬ್ಬನಿಗೆ ದಾನಕೊಟ್ಟ ವಿಷಯವಿದೆ. ದಾನ ನೀಡಿದ ಸ್ಥಳ ಮತ್ತು ದಾನ ಪಡೆದ ವ್ಯಕ್ತಿಯ ಹೆಸರು ತ್ರುಟಿತವಾಗಿದೆ.[11] ಹೊನ್ನಾಳಿ ತಾಲ್ಲೂಕು ಚಿಕ್ಕಗೋಣೆಗೆರೆಯ ಕಲ್ಲೇಶ್ವರ ದೇವಾಲಯದ ಬಳಿಯ ಶಾಸನದಲ್ಲಿ ವಿಜಯನಗರ ಕೃಷ್ಣದೇವ ಮಹಾರಾಯರಿಂದ ತಾನು ಉಂಬಳಿಯಾಗಿ ಪಡೆದ ಚಿಕ್ಕಗೋಣೆಗೆರೆ ಎಂಬ ಗ್ರಾಮವನ್ನು ಗಾಜನೂರಿನ ಶರಬರಗೌಡ ಎಂಬುವನು ತನ್ನ ಮಾತಾಪಿತೃಗಳಿಗೆ ಪುಣ್ಯಲಭಿಸಲೆಂದು ತಿರುಮಲೆದೇವಿ ಪಟ್ಟಣದಲ್ಲಿ ನಿವಾಸಿ ಮಠವನ್ನು ಕಟ್ಟಿಕೊಂಡಿರುವ ಸುರಗಿ ಒಡೆಯರಿಗೆ ಶಿವಾರ್ಪಣವಾಗಿ ದಾನಕೊಟ್ಟ ವಿಚರ ತಿಳಿಸುತ್ತದೆ.[12]

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕಾಳಿಂಗನಹಳ್ಳಿಯ ಕ್ರಿ.ಶ. 1526 ರ ಶಾಸನವು ಕೃಷ್ಣದೇವರಾಯನು ಆಳುವಾಗ ಕಾಳಗಿ ರಾಮನಹಳ್ಳಿಯಲ್ಲಿನ ಒಂದು ಭಾಗವನ್ನು ಹಿರಿಯ ತಿರುಮಲ ದೇವರ ಸೇವೆಗಾಗಿ ಗೌಡನೊಬ್ಬನು ದಾನವಾಗಿ ನೀಡಿದ್ದಾನೆ.[13] ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಕ್ರಿ.ಶ. 1527 ರ ಒಂದು ಶಾಸನವು ಕೃಷ್ಣದೇವರಾಯನ ಊಳಿಗದ ಮಾದಿನಾಯಕನೆಂಬುವನು ಒಡೆದು ಹೋಗಿದ್ದ ಉಡುಸಲಂಮನ ಕೆರೆಯನ್ನು ಸರಿ ಮಾಡಿಸಿಕೊಟ್ಟ ಅಂತಾಪುರದ ಪುರಾವತಗೌಡನೆಂಬುವವನಿಗೆ ಕಾಲುವೆ ಕೆಳಗಣ ಆರುಗಳ ಗದ್ದೆಯನ್ನು ಮಾನ್ಯವಾಗಿ ನೀಡುತ್ತಾನೆ. ಇಂದಿಗೂ ಈ ಕೆರೆಯನ್ನು ಉಡುಸಲಮ್ಮನಕೆರೆ ಎಂದೇ ಕರೆಯುತ್ತಿರುವುದು ಗಮನಾರ್ಹ ಅಂಶವಾಗಿದೆ.[14]

ಕ್ರಿ.ಶ. 1528 ರಲ್ಲಿ 'ಗೌಡಿಕೆ–ದಂಡಿಗೆ' ಉಂಬಳಿಯಾಗಿ ಕಮನಹಳ್ಳಿಯನ್ನು ಅಕ್ಕಿಮಂಗಲು ತಮ್ಮಪ್ಪಗೌಡನಿಗೆ ಕೊಡಲಾಯಿತು.[15] ಕ್ರಿ.ಶ.527 ರ ಚನ್ನಪಟ್ಟಣ ತಾಲ್ಲೂಕಿನ ಹೊಸಹಳ್ಳಿ ಶಾಸನ ವಿಜಯಪುರದ ಅಶೇಷ ನಾಡುಗೌಡುಗಳು, 'ಭೈರಪ್ಪನಾಯಕನಿಗೆ ಯಜಮಾನತನಕ್ಕೆ ಕೊಟ್ಟ ಮಾನ್ಯದ ಗದ್ದೆಯನ್ನು ದಾಖಲೆ ಮಾಡಿದೆ.[16] ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೂಕಿನ ಹಾಲಿನಹಾಳು ವೀರಾಪುರದ ಕ್ರಿ.ಶ.1529 ರಲ್ಲಿ ಕೃಷ್ಣದೇವರಾಯನು ರಾಜ್ಯವಾಳುತ್ತಿದಾಗ ಮುದಣನಾಯಕ ನೆಂಬುವವನಿಗೆ ಉಂಬಳಿಯಾಗಿ ಸಕಲಗೌಡು ಪ್ರಜೆಗಳು ಸೇರಿಕೊಂಡು ನೀರಾವರಿ ವ್ಯವಸ್ಥೆಯಿಲ್ಲದೆ ಗ್ರಾಮವು ಹಾಳಾಗಿದ್ದಾಗ ಅಲ್ಲಿ ಒಂದು ಕೆರೆಯನ್ನು ಕಟ್ಟಿಸುತ್ತಾರೆ. ಇದಕ್ಕೆ ಗುಂಡಪನ ಮಗನಾದ ಮಲೆಸಾಣೆಯರಿಗೆ ಮಾನ್ಯವಾಗಿ ಅನೇಕ ಕಡೆ ಭೂಮಿಯನ್ನು ದಾನವಾಗಿ ನೀಡಲಾಗಿದೆ. ದಾನದ ವಿವರವು ತ್ರುಟಿತವಾಗಿದ್ದು, ದಸವಂದದ ಉಲ್ಲೇಖವಿದೆ. ಕೆರೆಯ ಹೆಸರು ಕೋನಸಮುದ್ರವೆಂದು ತಿಳಿದು ಬರುತ್ತದೆ.[17] ಚಾಮರಾಜನಗರ ತಾಲ್ಲೂಕು ಶಂಭುಪುರದ ಕಾಲದ ಉಲ್ಲೇಖವಿಲ್ಲದ ಈ ಶಾಸನದ ಪ್ರಕಾರ ಕೃಷ್ಣರಾಯರ ನಿರೂಪದಿಂದ ಸಾಳುವ ತಿಂಮರಾಜರುವುಂಮತೂರಿಗೆ ಸಲ್ಲುವ ಬದಣಗುಪ್ಪೆಯ ವೀರಪ್ಪಗೌಡನಿಗೆ ಸಂಬಕಿಪುರವನ್ನು ದಾನವಾಗಿ ನೀಡುತ್ತಾನೆ.[18]

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕಿನ ಕ್ರಿ.ಶ.1519ರ ಕಣೆನೂರು ಶಾಸನವು ಕೃಷ್ಣದೇವರಾಯನು ಆಳುತ್ತಿದ್ದಾಗ ಸೋವಂಣವೊಡೆಯನೆಂಬುವನು. ತನ್ನ ಆಳ್ವಿಕೆಗೆ ಸೇರಿದ ವೊರಗಿಹಳ್ಳಿಯನ್ನು ಕುರುಹ ಜಯದೇವಪಗೌಡನ ಮಗನಿಗೆ ವೃತ್ತಿಯಾಗಿ ದಾನ ನೀಡಿದ ವಿಷಯವಿದೆ. ಅದರಿಂದ ಬರುವ ಆದಾಯದಲ್ಲಿ 15 ಗದ್ಯಾಣಗಳನ್ನು ಕೊಡುತ್ತೇವೆಂದು ಹೇಳಲಾಗಿದೆ.[19] ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕು ಮಲೆ ಬೆನ್ನೂರು 1515ರ ಶಾಸನವು ಕೃಷ್ಣದೇವರಾಯನು ಆಳುವಾಗ ಮಲೆಯ ಬೆನ್ನೂರಸೀಮೆಯನ್ನು ಆಳುತ್ತಿದ್ದ ಗಜಪತಿ ಪ್ರತಾಪ ರುದ್ರನ ಮಗನಾದ ಶ್ರೀ ವೀರಭದ್ರ ಮಹಾರಾಯನು ಕೃಷ್ಣದೇವರಾಯನಿಗೆ, ತಂದೆಗೆ ಮತ್ತು ತನಗೆ ಪುಣ್ಯವಾಗಲಿಯೆಂದು ಮಲೆಯ ಬೆನ್ನೂರು ಸೀಮೆ ಮತ್ತು ಲಿಂಗದಹಳ್ಳಿ ಸೀಮೆಯ ಒಳಗಿನ ಮದುವೆಯ ಸುಂಕವನ್ನು ದಾನ ಬಿಟ್ಟ ವಿಷಯವಿದೆ. ಈ ಧರ್ಮಕ್ಕೆ ಬೆನ್ನೂರು ಕೂಲಂಬಿ, ಕುಂಬಲೂರು, ನಿಟ್ಟೂರು ಗ್ರಾಮಗಳ ಅನೇಕ ಗಾವುಂಡರು ಸಹಕರಿಸಿದರೆಂದು ಶಾಸನ ಉಲ್ಲೇಖಿಸಿದೆ.[20]

ವಿಜಯನಗರ ಸಾಮ್ರಾಟ ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಗೌಡ ಅಥವಾ ಗಾವುಂಡರು ಗ್ರಾಮಗಳ ಸರ್ವತೋಮುಖ ಪ್ರಗತಿಗಾಗಿ ದುಡಿಯುತ್ತಿದ್ದರು. ಕಂದಾಯ, ಕೆರೆ, ಕಾಲುವೆ, ದೇವಾಲಯಗಳ ನಿರ್ಮಾಣ ಜೀರ್ಣೋದ್ಧಾರ ದೇವಸ್ಥಾನಗಳಿಗೆ ಭೂದಾನ, ಬ್ರಾಹ್ಮಣರಿಗೆ ಭೂದತ್ತಿಗಳು ಹಾಗೂ ವಿವಿಧ ಜನೋಪಯೋಗಿ ಕಾರ್ಯಗಳನ್ನು ತನ್ನ ಗ್ರಾಮ ಪರಿಮಿತಿಯಲ್ಲಿ ನೆರವೇರಿಸುತ್ತಿದ್ದನು. ಹಳ್ಳಿಗಳಲ್ಲಿ ಗೌಡರು ಶಾಂತಿ ನೆಮ್ಮದಿ ನೆಲೆಗೊಳ್ಳಲು ದುಡಿಯಬೇಕಾಗಿತ್ತು. ತಮ್ಮ ರಾಜ್ಯದ ಸಕಲಪ್ರಜೆ, ಪ್ರಾಣಿಗಳಿಗೆ ಆಹಾರ, ವಸತಿಗಳನ್ನು ಒದಗಿಸುವ ಹೊಣೆ ಇವನದಾಗಿತ್ತು. ಪ್ರಜೆಗಳು ಹದ್ದು ಮೀರದಂತೆ ಸಮಾಜ ಕಂಟಕರಾಗದಂತೆ ಶಾಸನ ಬದ್ಧರಾಗಿ ಬಾಳುವಂತೆ ಮಾಡಬೇಕಾಗಿತ್ತು. ಸಾಮ್ರಾಜ್ಯಕ್ಕೆ ಸೇವೆ, ರಾಜ್ಯದ ರಕ್ಷಣೆ, ಪ್ರಜೆಗಳ ಪಾಲನೆ ಇವುಗಳು ತಮ್ಮ ಪವಿತ್ರ ಧರ್ಮವೆಂದು ಪಾಲಿಸುತ್ತಿದ್ದರು.

ಹೀಗೆ ವಿಜಯನಗರ ಸಾಮ್ರಾಜ್ಯದ ಸ್ಥಳೀಯ ಆಡಳಿತದಲ್ಲಿ ಗಾವುಮಡರು ಅಥವಾ ಗೌಡ ಎಂಬುವವರು ತಮ್ಮ ವ್ಯಾಪ್ತಿಯ ಕಾರ್ಯಕ್ಷೇತ್ರದಲ್ಲಿ ಸಾಮ್ರಾಜ್ಯದ ಪ್ರತಿನಿಧಿಯಾಗಿ ಸೇವೆ ಸಲ್ಲಿಸುತ್ತಿದ್ದರು.

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. ಚಿದಾನಂದಮೂರ್ತಿ– **ಕನ್ನಡ ಶಾಸನಗಳು ಸಾಂಸ್ಕೃತಿಕ ಅಧ್ಯಯನ,** 1279.ಪುಟ.356.357
2. Mahalingam.T.V. (1965) South Indian Polity) Madras.P.335.
3. Dikshit.G.S.(1964) Local Self Government in Medieval Karnataka.Dharwar.PP.59.65
4. E.C.IX.Mg.22
5. E.C.III.Gu.212
6. ಪರಮಶಿವಮೂರ್ತಿ.ಡಿ.ವಿ.(ಸಂ), **ಕೃಷ್ಣದೇವರಾಯನ ಶಾಸನಗಳು**. ಸಂ.1 ಹಂಪಿ, 2010, ಪುಟ.270–271
7. E.C.XII.Tm.107
8. E.C.XII.Gb.51
9. E.C.XSd.79
10. E.C. Hospet.57
11. E.C.IX.An.235
12. E.C.VII.Hn.101
13. E.C.VII.Ng.124
14. ಪರಮಶಿವಮೂರ್ತಿ ಡಿ.ವಿ.(ಸಂ.)–ಪೂರ್ವೋಕ್ತ–ಪು.464
15. E.C.X.Sd.15 P.181
16. MAR.1925.No.5
17. SII.IX.(ii) No.528
18. E.C.IVCh.407
19. E.C.III.Ng.143
20. E.C.XI.Dg.107

❏

13. ಹಂಡೆ ಪಾಳೆಯಗಾರರ ಮೂಲಪುರುಷ ಬಾ(ಬ)ಲದ ಹನುಮಪ್ಪನಾಯಕ

– ಪ್ರೊ. ಎಸ್.ಸಿ. ಪಾಟೀಲ

ಒಂದು ಕಾಲದಲ್ಲಿ ಸಣ್ಣಪುಟ್ಟ ಪಾಳೆಯಗಾರರು, ಮಾಂಡಲಿಕರು, ತಮ್ಮ ತಮ್ಮ ಕ್ಷೇತ್ರದಲ್ಲಿ ಮಹಾರಾಜರಂತೆಯೇ ವೈಭವಪೂರ್ಣವಾಗಿ ಆಳ್ವಿಕೆ ಮಾಡಿದ್ದಾರೆ. ಮಹಾರಾಜರು ಮಾಡುತ್ತಿದ್ದ ಪ್ರಜಾಹಿತವಾದ ಎಲ್ಲ ಕಾರ್ಯವನ್ನು ಇವರು ಸಹ ಅಷ್ಟೇ ನಿಷ್ಠೆಯಿಂದ, ಪ್ರಾಮಾಣಿಕವಾಗಿ ಮತ್ತು ಅನುಕರಣೀಯವಾಗುವಂತೆ ಮಾಡಿ ತೋರಿಸಿದ ಹೆಮ್ಮೆಗೂ ಕಾರಣೀಭೂತರಾಗಿದ್ದಾರೆ. ಜನಸಾಮಾನ್ಯರಿಗೆ ತುಂಬ ಅವಶ್ಯಕವಾಗಿರುವ ಕೆರೆ–ಬಾವಿ, ಅರವಟ್ಟಿಗೆ, ಗುಡಿ–ಗುಂಡಾರ, ಕೋಟೆ–ಕೊತ್ತಲುಗಳನ್ನು ನಿರ್ಮಿಸಿದ್ದಾರೆ. ಜನರಲ್ಲಿ ಸ್ವಾಭಿಮಾನ, ಆತ್ಮಪ್ರಜ್ಞೆ, ದೇಶಾಭಿಮಾನ, ಧೈರ್ಯ, ಉತ್ಸಾಹ, ತ್ಯಾಗ, ದಾನ, ಬಲಿದಾನ, ಧರ್ಮ, ಸಾಹಿತ್ಯ, ಕಲೆಗಳೊಂದಿಗೆ ಸಾಹಿತ್ಯಿಕ ಮೌಲ್ಯಗಳನ್ನು ಸಂರಕ್ಷಿಸಿಕೊಂಡು ಬಂದ ಹೆಮ್ಮೆ ಈ ಪಾಳೆಯಗಾರರಿಗೆ ಸಲ್ಲುತ್ತದೆ. ಹೀಗಾಗಿ ಈ ಪಾಳೆಪಟ್ಟುಗಳ ಅಧ್ಯಯನವೆಂದರೆ ನಮ್ಮ ಸಾಮ್ರಾಜ್ಯಗಳ ಅಡಿಪಾಯದ ಅಧ್ಯಯನವೇ ಆಗಿದೆಯೆಂದರೆ ತಪ್ಪಲ್ಲ.

ಇಲ್ಲಿಯವರೆಗೆ ದೊಡ್ಡ ದೊಡ್ಡ ಮಹಾರಾಜರನ್ನೇ ಮುಖ್ಯವಾಗಿ ಗಮನಿಸುತ್ತ, ಸಣ್ಣಪುಟ್ಟ ಅರಸು ಮನೆತನಗಳನ್ನು ಉಪೇಕ್ಷಿಸುತ್ತ ಬಂದಿದ್ದೇವೆ. ಹೀಗೆ ಉಪೇಕ್ಷೆಗೆ ಒಳಗಾದ ಕರ್ನಾಟಕದ ಬಹುದೊಡ್ಡ ಹೆಮ್ಮೆಯ ಮತ್ತು ಗಮನಾರ್ಹವಾದ ಮನೆತನ ಹಂಡೆ ಅರಸು ಮನೆತನ. ಈ ಮನೆತನ 300 ವರ್ಷಗಳ ದೀರ್ಘಕಾಲ ಬಳ್ಳಾರಿ, ಕುರುಗೋಡು, ಅನಂತಪುರ, ಬಂಕಾಪುರ ಮುಂತಾದ ಕಡೆಗಳಲ್ಲಿ ಆಳ್ವಿಕೆಯನ್ನು ಮಾಡಿದೆ. ಈ ಪಾಳೆಯಗಾರರ ಕುರಿತು ಇನ್ನೂ ಗಂಭೀರವಾದ ಅಧ್ಯಯನಗಳು ನಡೆಯುವ ಅವಶ್ಯಕತೆಯಿದೆ. ಈ ಹಂಡೆ ಪಾಳೆಯಗಾರರ ಮೂಲಪುರುಷ ಹನುಮಪ್ಪನಾಯಕನಾಗಿದ್ದು, ಅವನ ಕುರಿತಾದ ಒಂದಿಷ್ಟು ವಿವರಗಳು ಪ್ರಸ್ತುತ ಲೇಖನದ ವಿಷಯವಾಗಿದೆ.

ಈಗಿನ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಮುತ್ತಗಿ, ವಡವಡಗಿ ಗ್ರಾಮಗಳಲ್ಲಿ ಹಂಡೆ ವಂಶದ ಲಕ್ಕಿ(ಕ್ಕ್ಮಿ)ನಾಯಕನೆಂಬುವವನು ಗೌಡಕಿ ಮಾಡಿಕೊಂಡಿದ್ದನು. ಇವನಿಗೆ ಬಾ(ಬ)ಲದ ಹನುಮಪ್ಪ ನಾಯಕ ಮತ್ತು ಬಳಗನಾಯಕ ಎಂಬ ಇಬ್ಬರು ಮಕ್ಕಳಿದ್ದರು. ಇವರ ಪೂರ್ವಜರು ಹೆಳವರು ಹೇಳುವ ಹಾಗೆ ಮಹಾರಾಷ್ಟ್ರದ ಅಕ್ಕಲಕೋಟ ಸೋಲಾಪೂರ ಪ್ರದೇಶದಿಂದ ಬಂದವರೆಂದು ತಿಳಿದುಬರುತ್ತದೆ. ಹಂಡೆ ವಜೀರರು ತಾವು ರಾಜವಂಶದವರೆಂದು ಈಗಲೂ ಈ ವಂಶ ಪರಂಪರೆಯ ಗೌಡರು ಹೇಳುತ್ತಾರೆ. ಬಳ್ಳಾರಿ, ಕುರುಗೋಡು, ಹಾಗೂ ಅನಂತಪುರ ಪ್ರದೇಶಗಳಲ್ಲಿ ಹಂಡೆ ಪಾಳೆಯಗಾರರ ಆಳ್ವಿಕೆ ಅವಧಿಯಲ್ಲಿ ಹಂಡೆ ಮುಸ್ಲೀಮರು, ಹಂಡೆ ಜೋಯಿಸರು, ಹಂಡೆ ವಟ್ಟುಗಳು, ಹಂಡೆ ಬ್ರಾಹ್ಮಣರು, ಹಂಡೆ ಭಟ್ಟಾಂಗಿನಿಯವರು, ಹಂಡೆ ರಾವುತರು, ಹಂಡೆ ಜೋಗಿಗಳು, ಹಂಡೆ ಕುರುಬರು, ಹಂಡೆ ಕೊರವರು, ಹಂಡೆ ವಾಲ್ಮೀಕಿಗಳು ಹೀಗೆ ಅನೇಕ ಜನಾಂಗದ ಹೆಸರುಗಳಿಗೆ ಹಂಡೆ ಶಬ್ದ ಜೊತೆಯಾಗಿ ಬಂದಿರುವುದನ್ನು ಈಗಲೂ ಗುರುತಿಸಬಹುದಾಗಿದೆ.

ಹಂಡೆ ಹನುಮಪ್ಪನಾಯಕನ ವಂಶಾವಳಿ

ಲಕ್ಕಿನಾಯಕ

↓

↓	↓
ಹನುಮಪ್ಪನಾಯಕ + ಅವ್ವಮ್ಮ, ನೀಲಮ್ಮ	ಬಳಗನಾಯಕ

↓

↓	↓	↓	↓	↓	↓
ಅಂಕುಶರಾಯ	ದೇವಪ್ಪನಾಯಕ	ನಿಚ್ಚಮದುವನಿಗ	ರಾಮಪ್ಪನಾಯಕ	ಹಿರೇಮಲ್ಕಪ್ಪನಾಯಕ	ಚಿಕ್ಕಮಲ್ಕಪ್ಪನಾಯಕ

ಹಂಡೆ ಪಾಳೆಯಗಾರರ ಪೂರ್ವಜರು ಕ್ರಿ.ಶ. 1129ರ ಮುದನೂರು (ಸುರಪುರ ತಾ। ಯಾದಗಿರಿ ಜಿ।) ಶಾಸನದಲ್ಲಿ ಮತ್ತು 1145ರ ಬೇಲೂರು (ಮುದ್ದೇಬಿಹಾಳ ತಾ। ವಿಜಯಪುರ ಜಿ।) ಶಾಸನದಲ್ಲಿಯೂ ಸಹ "ಹಂಡೆ ನಾಯಕ"ನ ಉಲ್ಲೇಖವಿದೆ. ಕ್ರಿ.ಶ. 1182ರಲ್ಲಿ ಹೆಮ್ಮಡಗಿ(ಸುರಪುರ ತಾ। ಯಾದಗಿರಿ ಜಿ।)ಯ ಶಾಸನದಲ್ಲಿ "ಹಂದಿ ಅರಸರು > ಪಂದಿ ಅರಸರು ಪಂದೇಶ್ವರ ದೇವಸ್ಥಾನವನ್ನು ನಿರ್ಮಿಸಿದುದು, ಅದೇ ಶಾಸನದಲ್ಲಿ ಹಂಡೆ ಅರಸರು ಹಂಡೇಶ್ವರ ದೇವಸ್ಥಾನವನ್ನು ಕಟ್ಟಿಸಿದುದಾಗಿ ಹತ್ತಾರು ಕಡೆಗೆ ವಿವರಗಳು ಲಭ್ಯವಿವೆ. ಇಲ್ಲಿ ಹಂದಿ ಅರಸರು > ಪಂದಿ ಅರಸರು > ಹಂಡೆ ಅರಸರು ಒಂದೇ ಎಂಬುದನ್ನು ಈ ಶಾಸನವು ನಮಗೆ ಸ್ಪಷ್ಟಪಡಿಸುತ್ತದೆ. ಪಂದಿ ಅರಸರ ಉಲ್ಲೇಖವೊಂದು ಕ್ರಿ.ಶ. 968ರಲ್ಲಿ ಬೇವಿನಹಳ್ಳಿ (ಚಿತ್ರದುರ್ಗ ಜಿ) ಶಾಸನದಲ್ಲಿ ಮತ್ತು ಕ್ರಿ.ಶ. 1081ರ ಕೊಲ್ಲಾನುಪಾಕ (ಆಂಧ್ರಪ್ರದೇಶ) ಶಾಸನದಲ್ಲಿ, ಕ್ರಿ.ಶ. 1112ರ ನಗನೂರು (ಕರೀಂನಗರ, ಆಂಧ್ರಪ್ರದೇಶ) ಶಾಸನ ಹಾಗೂ ಕ್ರಿ.ಶ. 1113ರ ಮಂಗಳವೇಡೆ (ಸೊಲ್ಲಾಪುರ, ಮಹಾರಾಷ್ಟ್ರ) ಶಾಸನಗಳಲ್ಲಿ 'ಪಂಡನೃಪ', 'ಪಂಡರಸರ', 'ಪಂದರಸರ' ಹೆಸರಿನ ಉಲ್ಲೇಖಗಳು ಕಂಡುಬರುತ್ತವೆ.

ಕ್ರಿ.ಶ. 1116ರ ಕೊಂಡಗುಳಿ (ಜೇವರಗಿ ತಾ। ಕಲಬುರ್ಗಿ ಜಿ।)ಯ ಶಾಸನದಲ್ಲಿ 'ಮನ್ಮಹಾಸಾಮಂತ ಹಂದಿಯರಸರು' ಎಂಬ ಶಬ್ದ ಮೂರು ಬಾರಿ ಉಲ್ಲೇಖಗೊಂಡಿದೆ. ಕ್ರಿ.ಶ. 1142 ಮತ್ತು 1165ರ ಮುತ್ತಗಿ(ಬಸವನ ಬಾಗೇವಾಡಿ ತಾ। ವಿಜಯಪುರ ಜಿ।)ಯ ಶಾಸನದಲ್ಲಿ 'ಹಂದರುಗೆರೆ', 'ಹಂದರುಕೆರೆ' 'ಹಂಡರಗೇರಿ'ಯ ಉಲ್ಲೇಖಗಳಿರುವುದನ್ನು ಕಾಣುತ್ತೇವೆ. ಕ್ರಿ.ಶ. 1194ರ ಚಿಕ್ಕಸುಗೂರು (ರಾಯಚೂರು ಜಿಲ್ಲೆ) ಶಾಸನದಲ್ಲಿ 'ಹಂದರಸ', ಹಾಗೆಯೇ ಕ್ರಿ.ಶ. 1407ರ ಗೂಳಪಾಳ್ಯಂ (ಗುತ್ತಿ, ಆಂಧ್ರಪ್ರದೇಶ) ಶಾಸನದಲ್ಲಿ 'ಹಂಡೆಪನಾಯಕ' ಶಬ್ದ ಉಲ್ಲೇಖವಾಗಿದೆ. ಕ್ರಿ.ಶ. 1500ರ ಕಡದರಬೆಂಚಿ (ಗುತ್ತಿ, ಆಂಧ್ರಪ್ರದೇಶ)ಯಲ್ಲಿ 'ಹಂಡೆ ಹನುಮ ನಾಯಕ'ನ ಶಾಸನವೊಂದು ಕಂಡುಬರುತ್ತದೆ.

ಹೀಗೆ ಮುತ್ತಗಿಯಲ್ಲಿ ಹಂಡೆ ಹನುಮಪ್ಪನಾಯಕನ ಪೂರ್ವಜರ ಪರಂಪರೆಯ ನಿದರ್ಶನವಾಗಿ ಈ ಮೇಲಿನ ಶಾಸನಗಳು ನಮಗೆ ಆಧಾರವನ್ನು ಒದಗಿಸುತ್ತವೆ. ಬಿಜಾಪುರ ಆದಿಲ್ ಷಾಹನ ಕಾಲದಲ್ಲಿ ಈ ಹಂಡೆ ವಂಶದ ಬಾ(ಬ)ಲದ ಹನುಮಪ್ಪ ನಾಯಕ ಸರನಾಡ ಗೌಡನಾಗಿ ತನ್ನ ಶೌರ್ಯ ಸಾಹಸಗಳಿಂದ ದೊರೆಯ ವಿಶೇಷ ಪ್ರೀತಿಯನ್ನು ಸಂಪಾದಿಸಿ, ಆದಿಲ್‌ಶಾಹನ ಆಸ್ಥಾನದ ಸೇನಾಧಿಕಾರಿಯಾಗಿ ರಾಜಕೀಯ ಕಾರ್ಯದಲ್ಲಿ ವಿಶೇಷವಾಗಿ ನೆರವಾದನು. ಈ ಸಂದರ್ಭದಲ್ಲಿ ಬಾದಶಹನು "ವಜೀರಪ್ಪ" ಎಂಬ ಬಿರುದು ಕೊಟ್ಟು ಗೌರವಿಸುತ್ತಾನೆ. ಆ ಬಾದಶಹನು ಆಳುವ ದಕ್ಷಿಣದ ಭಾಗ ಅಂದರೆ ಇಂದಿನ ಹಾವೇರಿ ಜಿಲ್ಲೆಯ ಪ್ರದೇಶಗಳು ಆಗ ತುಂಬ ಅರಾಜಕತೆಯಿಂದ ಅವು ಹಾಳಾಗಿದ್ದವು. ವಿಜಯಪುರದ ಈ ಆದಿಲ್‌ಶಾಹಿಗೆ ಈ ಪ್ರದೇಶಗಳನ್ನು ನಿಯಂತ್ರಿಸುವುದು ತುಂಬ ಕಷ್ಟವಾಗಿತ್ತು. ಈ ಸಂದರ್ಭದಲ್ಲಿ ಬಾದಶಹನು ಶೂರನಾದ

ಬಲದ ಹನುಮಪ್ಪ ನಾಯಕನ ನೇತೃತ್ವದಲ್ಲಿ ಸೈನ್ಯವನ್ನು ಕೊಟ್ಟು ಈ ಪ್ರಾಂತಗಳ ಆಡಳಿತವನ್ನು ನಿರ್ವಹಿಸಲು ಕಳುಹಿಸುತ್ತಾನೆ. ಬಳ್ಳಾರಿ, ತೆಕ್ಕಲುಕೋಟೆ, ಕುರುಗೋಡು ಈ ಮೂರು ಪರಗಣೆಗಳಿಗೆ ಬಾದಶಹ ಸನ್ನದು ಬರೆದುಕೊಟ್ಟು ಸಹ ಕಳುಹಿಸುತ್ತಾನೆ.

ಹನುಮಪ್ಪ ನಾಯಕನು ಈ ಪ್ರದೇಶಗಳ ಮೂಲಕ ಶಾಲಿವಾಹನ ಶಕ 1410ರಲ್ಲಿ ಮೊದಲು ಬಂಕಾಪುರಕ್ಕೆ ಬಂದು ಅಲ್ಲಿ ತಲೆ ಎತ್ತಿದ ಅರಾಜಕತೆಯನ್ನು ಹೋಗಲಾಡಿಸಿ, ಅನೇಕ ಸಾಮಾಜಿಕ ಮತ್ತು ಜನಹಿತವಾದ ಕಾರ್ಯಗಳನ್ನು ಮಾಡಿ ಪ್ರಜೆಗಳ ಅಪಾರ ವಿಶ್ವಾಸ ಗಳಿಸುತ್ತಾನೆ. ಬಂಕಾಪುರದಲ್ಲಿ ಕಿಲ್ಲೆ ಕಟ್ಟಿಸಿ, ಶಾಂತಿ ನೆಲೆಯೂರುವಂತೆ ಮಾಡುತ್ತಾನೆ. ಈತನ ಸೇವಾ ನಿಷ್ಠೆಯನ್ನು ಪರಿಗಣಿಸಿ ಸುಲ್ತಾನನು ಅವನನ್ನು ವಿಜಯಪುರಕ್ಕೆ ಕರೆಯಿಸಿ ಬಹುಮಾನ ಕೊಟ್ಟು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾನೆ. ಮುಂದೆ ತೆಕ್ಕಲುಕೋಟೆ, ಕಣಿಕಲ್ಲು, ಕುಂದರ್ಪಿ, ಧರ್ಮಾವರ, ಅನಂತಪುರ, ನಂದ್ಯಾಲ, ಶಿರಿವಾಳ, ಶಿರಗುಪ್ಪೆ, ಶಿನ್ನೂರು, ನಾಗಲಾಪುರ, ಒಡ್ಡು ದರೋಜಿ, ಕುರುಗೋಡು, ಎತ್ತಿನ ಬೂದಿಹಾಳು, ಮುಂತಾದ ಪರಗಣೆಗಳನ್ನು ಠಾಣ್ಯ ಹಾಕಿಕೊಂಡು ಕೆಲವು ಗ್ರಾಮಗಳಲ್ಲಿ ಕಿಲ್ಲೆಗಳನ್ನು ಕಟ್ಟಿಸಿ ರಾಜ್ಯವನ್ನು ಭದ್ರಪಡಿಸುತ್ತಾನೆ. ಈ ಸಮಾಚಾರವು ವಿಜಯಪುರದ ಬಾದಶಾಹನಿಗೆ ಗೊತ್ತಾಗಿ ಸಂತೋಷಗೊಂಡು ಹನುಮಪ್ಪ ನಾಯಕನನ್ನು ವಿಜಯಪುರಕ್ಕೆ ಕರೆ ಕಳುಹಿಸುತ್ತಾನೆ. ಮೊದಲು ಮೂರು ಪರಗಣೆಗಳಿಗೆ ಒಡೆಯನಾದ ಬಾಲದ ಹನುಮಪ್ಪ ನಾಯಕನು ಬಿಜಾಪುರದ ಆದಿಲ್‌ಷಾಹನಿಗೆ 3000 ಹೊನ್ನುಗಳನ್ನು ಕೊಡುವುದರ ಮೂಲಕ ಮಿಲಿಟರಿ ಸೈನಿಕರ ಸೈನ್ಯ ನಿರ್ವಹಣೆ ನೆರವನ್ನು ಪಡೆದಿದ್ದನು. ಹೀಗೆ ಕಪ್ಪ-ಕಾಣಿಕೆಯನ್ನು ಕೊಟ್ಟು ಒಪ್ಪಂದ ಮಾಡಿಕೊಂಡಿದ್ದರೂ ಅದು ಕೊನೆಯವರೆಗೆ ಉಳಿದಿರಲಿಲ್ಲ. ಹನುಮಪ್ಪನಾಯಕ ಬಳ್ಳಾರಿಯ ಬೆಟ್ಟದ ಮೇಲೆ ಕೋಟೆ, ದೇವಾಲಯ, ಕಂದಕಗಳನ್ನು ನಿರ್ಮಿಸಿ ಶಾಸನ ಬರೆಸಿರುವುದು ತಿಳಿದುಬರುತ್ತದೆ. ಕ್ರಮೇಣ ಹನ್ನೊಂದು ಪರಗಣಿಗಳಿಗೆ ಒಡೆಯನನ್ನಾಗಿ ನೇಮಿಸುತ್ತಾನೆ. ಈತನು ಅತ್ಯಂತ ಶೂರ ಮತ್ತು ಚಾಣಾಕ್ಷನಾಗಿರುವುದನ್ನು ಇದು ಸೂಚಿಸುತ್ತದೆ.

ಹಂಡೆ ಹನುಮಪ್ಪನಾಯಕನ ಐದು ಜನ ಮಕ್ಕಳು

ಬಾಲದ ಹನುಮಪ್ಪ ನಯಕನು ತನ್ನ ಐದು ಜನ ಗಂಡು ಮಕ್ಕಳೊಂದಿಗೆ ಬಾದಶಹನ ಕಾಣಲು ಹೋಗುತ್ತಾನೆ. ಈ ಸಂದರ್ಭದಲ್ಲಿ ನಡೆದ ಒಂದು ರೋಮಾಂಚನಕಾರಿ ಪ್ರಸಂಗವನ್ನು ಬಳ್ಳಾರಿ ಕುರುಗೋಡು ಕೈಫಿಯತ್ತುಗಳು ಹೇಳುತ್ತವೆ.

"ಬಾದುಷಹನು" ಸುಂದರವಾದ ಈ ಐದು ಮಂದಿ ಮಕ್ಕಳನ್ನು ನೋಡಿ ಇದರೊಳಗೆ ಒಬ್ಬ ಮಗನನ್ನು ಕೊಟ್ಟರೆ ಸುಂತಿ ಮಾಡಿ ತನ್ನ ಬಳಿಯಲ್ಲಿಟ್ಟುಕೊಳ್ಳಬೇಕೆಂದು ಮನಸ್ಸಿನಲ್ಲಿ ಮಾಡಿಕೊಂಡು ಹಂಡೆ ಬಾಲದ ಹನುಮಪ್ಪ ನಾಯಕನನ್ನು ಕಂಡು "ನಿನ್ನ ಮಕ್ಕಳೊಳಗೆ ಒಬ್ಬ ಮಗನನ್ನು ನಮಗೆ ಕೊಡು" ಎಂದು ಕೇಳಿದಲ್ಲಿ ಈತನು ಬಹಳ ಕೋಪವಾಗಿ ಬಾದಶಹರವರಿಗೆ "ನಿಮ್ಮ ಜನಾನ ಒಳಗೆ ಒಬ್ಬ ಬೀಬಿಯನ್ನು ಕೊಟ್ಟರೆ ಇಂತಹ ಮಗನನ್ನು ಹುಟ್ಟಿಸಿಕೊಡುತ್ತೇನೆ" ಎಂದು ಹೇಳುತ್ತಾನೆ. ಇದನ್ನು ಕೇಳಿ ಕೆರಳಿದ ಬಾದಷಹನು ಅವನನ್ನು ಹಿಡಿದು ಖಂಡಿಸಲು ಸೈನಿಕರಿಗೆ ಆದೇಶಿಸುತ್ತಾನೆ. ಬಲಾಢ್ಯ ಹಾಗೂ ಶೂರನಾದ ಬಾಲದ ಹನುಮಪ್ಪ ನಾಯಕ ಅಲ್ಲಿಂದ ಪಾರಾಗಿ ಕೃಷ್ಣಾ ನದಿಯನ್ನು ದಾಟಿ ಆಚೆಯ ದಡವನ್ನು ಸೇರುತ್ತಾನೆ. ಸುಲ್ತಾನನ ಸೈನ್ಯ ನದಿಯನ್ನು ದಾಟಲಾರದೆ ಮರಳಿ ವಿಜಯಪುರಕ್ಕೆ ಹೋಗುತ್ತದೆ. ಮುಂದೆ ಹನುಮಪ್ಪನಾಯಕನು ಮಕ್ಕಳೊಂದಿಗೆ ಬಳ್ಳಾರಿಗೆ ಬಂದು ನೆಲೆಸುತ್ತಾನೆ.

ಇದೇ ಸಂದರ್ಭದಲ್ಲಿ ಅನಂತಪುರ ಕೈಫಿಯತ್ತಿನಲ್ಲಿ ಉಲ್ಲೇಖಗೊಂಡಂತೆ - "ಬೊಕ್ಕಸದ ಗೊಲ್ಲ ಕೆಲಸದ ತಿಂಮ್ಮಯ್ಯನೆಂಬುವನು ರಾಜ್ಯವು ಅರಾಜಿತವಾಗಿ ಬೊಕ್ಕಸ ತನ್ನ ಸ್ವಾದೀನದಲ್ಲಿ ಇದ್ದದರಿಂದಾ ಚತುರಂಗ ಬಲವನ್ನು ಭದ್ರ ಮಾಡಿಕೊಂಡು ಅಳಿಯರಾದ ರಾಮರಾಯ ತಿರುಮಲರಾಯರನ್ನು ಹಿಡಿದು ಶೆರೆಯಲ್ಲಿ ಇರಿಸಬೇಕೆಂದು ಯೋಚಿಸಲಾಗಿ, ಯೀ ವರ್ತಮಾನವು ಅವರು ಕೇಳಿ ಆ ದೇಶವನ್ನೇ ಬಿಟ್ಟು ವೋಡಿ ಹೋಗಿ ಪೆನೆಗೊಂಡೆ ಸಂಸ್ಥಾನದಲ್ಲಿ ಸಂಚರಿಸುತ್ತಾ ಕೆಲವು ಸೈನ್ಯವನ್ನು ಕೂಡ್ಡಿಕೊಂಡು ಆದವಾನಿಗೆ ಸೇರಿ ಅಲ್ಲಿ ನಾಲ್ಕು ತಿಂಗಳು ನಿವಾಸಮಾಡಿ ಕಂದನೂಲು (ಕರ್ನೂಲು), ಗದ್ವಾಲ ಆ ಪ್ರಾಂತ್ಯಗಳಲ್ಲಿ ಮತ್ತು ಕೆಲವು ಸೈನ್ಯವನ್ನು ಸೇರಿಸಿಕೊಂಡು ಸಕಲ ಸೇನಾ ಸಮೇತರಾಗಿ ವಿದ್ಯಾನಗರಕ್ಕೆ ದಂಡೆತ್ತಿ ಬಂದರು. ಯೀ ವರ್ತಮಾನವನ್ನು ಪಾಳ್ಯೆಗಾರರಿಂದ ಆ ಸಕಲ (ಸಲಕದ) ತಿಂಮಯ್ಯ ಕೇಳಿ ತನಗೆ ಸಹಾಯಕೋಸ್ಕರ

ಕುದುಪುಷಹಾ 1 ಪರೀದುಷಹಾ 1 ನಿಜಾಂಶಹಾ 1 ಅಲಿದಲ್ ಷಹಾ 1 ಯಿವರು ಮೊದಲಾದವರನ್ನು ನೀವು ಚತುರಂಗ ಬಲ ಸಮೇತರಾಗಿ ಬಂದರೆ ಯೀ ರಾಜ್ಯವೆಲ್ಲಾ ನಿಂಮ ಸ್ವಾದೀನಕ್ಕೆ ಕೊಡುತ್ತೇನೆಂದು ಕಾಗದಗಳು ಬರೆಸಿ ಕಳುಹಿಸಿದನು. ಅವರು ಆ ಕಾಗದ ನೋಡಿಕೊಂಡು ಆ ಪ್ರಕಾರವೆ ಸಕಲ ಸೇನಾಸಮೇತರಾಗಿ ಬಂದು ವಿದ್ಯಾನಗರಕ್ಕೆ ವೊಂದು ಹರದಾರಿ ದೂರ ಯಿಳಿದರು. ಆ ರಾಮರಾಯ ತಿರುಮಲ ರಾಯರು ಯೀ ವರ್ತಮಾನವನ್ನು ತಿಳಿದುಕೊಂಡು ಸೊನ್ನಲಾಪುರದಲ್ಲಿ ಯಿದ್ದ ಹಂಡೆ ಹನುಮಪ್ಪನಾಯಕನು ಬಹಳ ಶೂರನೆಂಬುದಾಗಿ ಕೇಲಿ(ಳಿ) ಆತನನ್ನು ಸೇನಾಸಮೇತ ಕರಶಿ(ಸಿ) ತಂಮ ಬಳಿ ಚಾಕರಿಯಿಟ್ಟುಕೊಂಡು ವಿದ್ಯಾನಗರಕ್ಕೆ ಯರಡು ಹರದಾರಿ ಮ್ಯಾಲೆ ತುಂಗಭದ್ರಿ(ದ್ರಾ) ನದಿ ತೀರದಲ್ಲಿ ಹೋಗಿ ದಂಡು ಯಿಳಿದರು. ಆ ಪಾ(ಬಾ)ದುಷಾಹಗಳ ಸೈಂನ್ಯಕ್ಕೆ ಯೀ ಸ್ಥಳ ಹೊಸದಾದ್ದರಿಂದ ಅವರು ಸಲಕ(ದ) ತಿಂಮ್ಮಯ್ಯನವರ ಸೈನ್ಯವನ್ನು ಮುಂದೆಯಿಟ್ಟುಕೊಂಡು ಯುದ್ಧಕ್ಕೆ ಪ್ರಯತ್ನಬಿದ್ದರು.

ಯೀ ವರ್ತಮಾನ ಆ ರಾಮರಾಯ ತಿರುಮಲರಾಯರವರು ಕೇಳಿ, ಮಟ್ಟ ಮಧ್ಯಾನ ರಣಭೇರಿ ಹಾಕಿಸಿ ಮುಂದೆ ಯಿದ್ದ ಸಲಕದ ತಿಂಮಯ್ಯನ ಸೈನ್ಯದ ಮೇಲೆ ಬಿದ್ದು ಯುದ್ಧವ ಮಾಡಲಾಗಿ, ಆ ಸಲಕದ ತಿಂಮಯ್ಯನ ಸೈನ್ಯದಿಂದ ಗೊಲ್ಲ ಕೆಲಸದ ತಿಂಮ್ಮಯ್ಯನಾಗಿ ಸಂಸ್ಥಾನವನ್ನು ಅಕ್ರಮಿಸಬೇಕಾಗಿ ಪ್ರಯತ್ನ ಮಾಡಿದನು. ಯೀ ರಾಜದ್ರೋಹಿಗೆ ನಾವು ಸಹಾಯ ಮಾಡಿದರೆ ನಮಗೆ ದೇವರ ಸಹಾಯವು ಆಗಲಾರದೆಂದು ನೆನಸಿ ಯುದ್ಧವ ಭೂಮಿಯನ್ನು ಸಲಕದ ತಿಂಮಯ್ಯ ಬಿಟ್ಟು ಹೋದುದರಿಂದ ಆ ಯುದ್ಧದೊಳಗೆ ಸಿಕ್ಕಿ ಪ್ರಾಣವನ್ನು ಬಿಟ್ಟನು.

ಯೀ ವರ್ತಮಾನವು ದೊರೆಸಾನಿಗಳು ಕೇಳಿ ಪ್ರದಾನಿಗಳನ್ನು ಕರೆ ಕಳುಹಿಸಿ, ರಾಮರಾಯ ತಿರುಮಲರಾಯರನ್ನು ಕರಕೊಂಡು ಬಂದು ಪಟ್ಟಣವು ಅವರ ಸ್ವಾಧೀನ ಮಾಡಬೇಕೆಂದು ಅಪ್ಪಣೆ ಕೊಟ್ಟದ್ದರಿಂದ ಪ್ರದಾನಿಗಳು ಅದೇ ಪ್ರಕಾರವೆ ಹೋಗಿ ಯಿದಿರುಗೊಂಡು ಅವರನ್ನ ಕರೆದುಕೊಂಡು ಬಂದು ಪಟ್ಟಣವು ಅವರ ಸ್ವಾಧೀನ ಮಾಡಿದರು. ಯೀ ವರ್ತಮಾನವು ಬಾದುಷಾಗಳಿಗೆ ತಿಳಿತು. ತರುವಾಯ ಆ ರಾಮರಾಯ ತಿರುಮಲರಾಯರು ಆ ಬಾದುಷಾಹಗಳ ಮೇಲೆ ಯುದ್ಧಕ್ಕೆ ಹೋಗಬೇಕೆಂದು ಯೋಚಿಸಿ ಸ್ಥಳದೊಳಗೆ ಯಿದ್ದ ಸೈಂನ್ಯ ತಂಮ ಬಳಿಯಲ್ಲಿದ್ದ ಸೈಂನ್ಯ ಯೀ ಯರಡನ್ನು ಮೂರು ಭಾಗಗಳ ಮಾಡಿ ಸೋನಲಾಪುರ ಹಂಡೆ ಹನುಮಪ್ಪನಾಯಕನ ಕರೆಕಳುಹಿಸಿ, ನೀನು ಬಹು ಶೂರನು ನಿನಗೆ ಕೆಲವು ಸೈಂನ್ಯವನ್ನು ಕೊಡುತ್ತೇನೆ. ನಿಂನ ಬಳಿಯಲ್ಲಿದ್ದ ಸೈಂನ್ಯವನ್ನು ಸಂನಾಹಮಾಡಿಕೊಂಡು ನಿಜಮಷಹಾ ಮೇಲೆ ಹೋಗಿ ಯುದ್ಧವು ನಡೆಸಿ ಬ(ಜ)ಯಸಿ ಬಂದರೆ, ನಿನ್ನ ಮನಸ್ಸಿನ ಪ್ರಕಾರ ಕೊಡಲಾದೀತು. ಯಂದು ಹೇಳಿ ಕೆಲವು ಸೈಂನ್ಯವನ್ನು ಕೊಟ್ಟು ಕಳುಹಿಸಿದರು. ರಾಮರಾಯರವರು ಕೆಲವು ಸೈಂನ್ಯದಿಂದ ಕುದುಪುಷಹಾನ ಮೆ(ೀ)ಲಕ್ಕು ಹೋಗಿ ಆ ಘೋರ ಯುದ್ಧವ ಮಾಡಲಾಗಿ ಬಾದುಷಾಹಗಳು ಯುದ್ಧರಂಗದಲ್ಲಿ ನಿಲ್ಲಲಾರದೆ ಪರಾಜಿತರಾಗಿ ಹೋದರು. ಯೀ ಹಂಡೆ ಹನುಮಪ್ಪನಾಯಕನು ಯುದ್ಧವನ್ನು ಮಾಡಿ ನಿಜಾಂಷಹಾನ್ನ ಹಿಡಿದುಕೊಂಡು ಬಂದು, ರಾಮರಾಯ ತಿರುಮಲರಾಯರವರಿಗೆ ಕಾಣಿಕೆ ಕೊಟ್ಟನು. ಅದರ ಮೇಲೆ ಅವರಿಗೆ ಬಹಾಳ ದಯೆ ಬಂದು ಮೆಚ್ಚಿ ನಿಂನ ಮನಸ್ಸಿನೊಳಗೆ ಯೇನು ಯಿದೆಯೋ ಕೇಳೆಂದು ಹಂಡೆ ಹನುಮಪ್ಪನಾಯಕನಿಗೆ ಅಪ್ಪಣೆ ಕೊಡಲಾಗಿ, ತಾವು ದಯಮಾಡಿ ಯೇನು ಕೊಟ್ಟರು ಸಕಲ ಬಹುಮಾನಗಳು ಕೊಟ್ಟ ಹಾಗೆಯಂದು ಬಿನ್ನಹಮಾಡಿಕೊಂಡನು. ಆಗ ಮೂಡಲು (ಪೂರ್ವ) ದೆಸೆಯಲ್ಲಿ ಇದ್ದ ನಂದೇಲ ಗ್ರಾಮ 1, ಬುಕ್ಕರಾಯಸಮುದ್ರ 1, ಧರ್ಮಾವರ 1, ಕಣುಕಲ್ಲು 1, ಪಶ್ಚಿಮ ಇರುವ ಬಳ್ಳಾರಿ ಕುರುಗೊಡು 1, ಈ ಗ್ರಾಮಗಳನ್ನು ಬಿರುದುಗಳಾಗಿ ಕೊಡಲಾಗಿ ಯೀ ಹಂಡೆ ಹನುಮಪ್ಪನಾಯಕನು ರಾಮರಾಯರವರ ಬಳಿಯಿಂದ ಅಪ್ಪಣೆ ತೆಗೆದುಕೊಂಡು, ಶಾಲಿವಾಹನ ಶಕೆ ವರುಷ 1491 (ಕ್ರಿ.ಶ. 1569) ನೆಯ ಶುಕ್ಲನಾಮ ಸಂವತ್ಸರದ ಮಾರ್ಗಶಿರ ಮಾಸದಲ್ಲಿ ನಂದೇಲಗೆ ಬಂದು ಮುಟ್ಟಿದನು. ಆ ತಾಲೂಕು ವಿಚಾರಿಸಿಕೊಂಡು ಅಲ್ಲಿಯಿಂದ ಬುಕ್ಕರಾಯ ಸಮುದ್ರಕ್ಕೆ ಬಂದು ಅಲ್ಲಿನ ತಟಾಕವನ್ನು ನೋಡಿ ದೊಡ್ಡಕೆರೆಯಂದು ತಿಳಿದುಕೊಂಡು, ಯೀ ಗ್ರಾಮದೊಳಗಿನ ಕೋಟೆಯ ಮುಂದೆ ರಾಜಗೃಹವನ್ನು ಕಟ್ಟಿಸಿ, ಸುತ್ತ ಹಿಂದೆ ಕೋಟೆ ನಿರ್ಮಾಣವು ಮಾಡಿಕೊಂಡು ಎರಡು ರಾಜ್ಯವನ್ನು ವಿಚಾರಿಸುತ್ತಾ ಯಿದ್ದು ಶಾಲಿವಾಹನ ಶಕ ವರುಷ 1505(ಕ್ರಿ.ಶ.1582)ನೆಯ ಚಿತ್ರಭಾನು ಸಂವತ್ಸರದೊಳಗೆ ಮೃತಿ(ತ) ಹೊಂದಿದನು." ಎಂಬ ಮೇಲಿನ ವಿವರವನ್ನು ಅನಂತಪುರ ಕೈಫಿಯತ್ತು ನೀಡುತ್ತದೆ.

ಹನುಮಪ್ಪನಾಯಕ ಬುಕ್ಕರಾಯ ಸಮುದ್ರದಲ್ಲಿ ಬಲವಾದ ಕೋಟೆಯನ್ನು ನಿರ್ಮಾಣ ಮಾಡಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದನು. ಇವನ ಐದು ಜನ ಮಕ್ಕಳನ್ನು ಭಟಾಂಗಿನಿ ಸಾಹಿತ್ಯವು ಪಾಂಡವರಿಗೆ ಹೋಲಿಸಿ ಗುಣಗಾನ ಮಾಡಿದ್ದುದು ಕಂಡುಬರುತ್ತದೆ. "ಧರೆಗೆ ಧರ್ಮಜನಂಕುಶ । ಪರಬಲದೊಳ್ ಭೀಮದೇವ । ಅರ್ಜುನರಾಮ ದುರಧೀರನು ನಕುಲಮಲ್ಲನು । ನೆರೆಗೆಲೆ ಸಹದೇವ ಚಿಕ್ಕಮಲ್ಕವಜೀರ ।"

ಹನುಮಪ್ಪನಾಯಕನ ದಾನಗಳು

ಶಾಲಿವಾಹನ ಶಕ 1439 (ಕ್ರಿ.ಶ. 1517)ರಲ್ಲಿ ಬಾಲದ ಹನುಮಪ್ಪ ನಾಯಕನು ಶ್ರೀ ಕಪ್ಪಿನ ಚನ್ನಬಸವ ಸ್ವಾಮಿಗಳನ್ನು ತಮ್ಮ ರಾಜಗುರುಗಳನ್ನಾಗಿ ಮಾಡಿಕೊಂಡು ಜಗದ್ಗುರು ಕೊಟ್ಟೂರು ಪೀಠಕ್ಕೆ ನಾಲ್ಕು ಬಾರಿ 5 ಗ್ರಾಮದ ಮಾನ್ಯಗಳನ್ನು ನೀಡಿದ್ದು, ಅದೇ ರೀತಿ ಶಾಲಿವಾಹನ ಶಕ 1441 (ಕ್ರಿ.ಶ.1519)ರಲ್ಲಿ ಇದೇ ಸ್ವಾಮಿಗಳಿಗೆ ಎರಡು ಬಾರಿ ಒಂದೊಂದು ಗ್ರಾಮದ ಮಾನ್ಯವನ್ನು ನೀಡಿದ್ದುದು ಮಠದ ದಾಖಲೆಯಿಂದ ತಿಳಿದುಬರುತ್ತದೆ.

ಶಾಲಿವಾಹನ ಶಕ 1442 (ಕ್ರಿ.ಶ.1520)ರಲ್ಲಿ ವಿಕ್ರಮ ಸಂವತ್ಸರದಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮಿಗಳಿಗೆ ಬಳ್ಳಾರಿ ಸೀಮೆಯಲ್ಲಿ ಮಾಘ ಶು.5 ಯಲ್ಲು ಸಿದ್ದೇಶ್ವರ ಸ್ವಾಮಿಗಳವರಿಗೆ ಚರಪಟ್ಟವನ್ನು ಕಟ್ಟಿ 5ಯಲ್ಲಿ ಹನುಮಪ್ಪನಾಯಕ ಮತ್ತು ಅಂಕುಶರಾಯರು ಕಾರ್ತಿಕ ಶು. 2ಯಲ್ಲು ಮಾನ್ಯಗಳು ದಾಸೋಹಕ್ಕೆ ನೀಡಿದ್ದಾರೆ. ಶಾಲಿವಾಹನ ಶಕ 1443 (ಕ್ರಿ.ಶ. 1521)ರಲ್ಲಿ ಹನುಮಪ್ಪನಾಯಕನು ಸಿದ್ದೇಶ್ವರ ಸ್ವಾಮಿಗಳಿಗೆ ಡೋಣಿ ಸಮೀಪದ ಸಂಗನಕಲ್ಲು ಅಡವಿ ಮಠಕ್ಕೆ, ಅಲಕುಂದೆಯ ಮಠಕ್ಕೆ ಆ ಊರ ಮುಂದಿನ ತೋಟ, ಅಂದ್ರಾಳು ಮಠಕ್ಕೆ ಅಂದ್ರಾಳು ಭೂಮಿಯಲ್ಲಿ, ಗೋನಾಳು ಮಠಕ್ಕೆ, ಮುಂಡ್ರಿಗೆ ಮಠಕ್ಕೆ, ಮಿಂಚೇರಿ ಮಠಕ್ಕೆ, ಬೆಳಗಲ್ಲು ಮಠಕ್ಕೆ ಆ ಊರಿನ ತೋಟ, ಬೊಬ್ಬುಕುಂಟೆ ಮಠಕ್ಕೆ, ಬಭರಾಂಪುರ ಮಠಕ್ಕೆ, ಕಪ್ಪುಗಲ್ಲು ಮಠಕ್ಕೆ ನೂರಾರು ಎಕರೆ ಭೂಮಿಯನ್ನು ಕೆಲವು ಊರಿನ ತೋಟಗಳನ್ನು ದಾನವಾಗಿ ನೀಡಿದ್ದುದು ಮಠದ ದಾಖಲೆಗಳಲ್ಲಿ ದಾಖಲಾಗಿವೆ. ಮಸಬುಬಾಲ ಗುಡ್ಡದ ಹೊಂದಿಲಿ ಬೋಳಬಂಡೆ ಮಠದ ಸ್ಥಳದಲ್ಲಿ ಮತ್ತು ಕಾವಲಿಕಟ್ಟೆ ಸಮೀಪದಲ್ಲಿ ಅಂದ್ರಾಳು ಹಳ್ಳದ ಸಮೀಪ ಭೂದಾನ ನೀಡಿದ ವಿವರಗಳು ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಮಠದಲ್ಲಿ ದಾಖಲೆಗಳು ಲಭ್ಯವಿವೆ.

ಹಂಡೆ ಹನುಮಪ್ಪನಾಯಕನ ಜನಪರ ಕಾರ್ಯಗಳು

1. ಬುಕ್ಕರಾಯಸಮುದ್ರ ಮತ್ತು ಅನಂತಸಾಗರ ಕೆರೆ, ಅನಂತಪುರಂ (ಆಂಧ್ರಪ್ರದೇಶ) : ಈ ಹಂಡೆ ವಂಶದ ಪಾಳೆಗಾರರಲ್ಲಿ ಮೂಲ ಪುರುಷನಾದ ಬಲದ ಹನುಮಪ್ಪನಾಯನು ಕ್ರಿ.ಶ. 1569ರಲ್ಲಿ ಅಳಿಯ ರಾಮರಾಯನಿಂದ ಉಂಬಳಿಯಾಗಿ ಪಡೆದ ಅನಂತಪುರ ಬುಕ್ಕರಾಯಸಮುದ್ರ, ನಂದ್ಯಾಳ ಮುಂತಾದ ಪ್ರದೇಶಗಳಲ್ಲಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸುತ್ತಾನೆ. ಬುಕ್ಕರಾಯಸಮುದ್ರವೆಂಬ ವಿಶಾಲವಾದ ಕೆರೆಯ ಅಭಿವೃದ್ಧಿಯನ್ನು ಮೊದಲು ಕೈಗೊಳ್ಳುತ್ತಾನೆ. ಕುಡಿಯುವ ನೀರಿನ ವ್ಯವಸ್ಥೆ ಮತ್ತು ಕೃಷಿಗೆ ನೀರಿನ ಅವಶ್ಯಕತೆಗಾಗಿ ಅನೇಕ ಕಾಲುವೆಗಳ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಕೈಗೊಂಡಿದ್ದುದನ್ನು 'ಅನಂತಪುರದ ಕೈಫಿಯತ್ತು' ತಿಳಿಸುತ್ತದೆ. ಈ ಕೆರೆಯು ಸುಮಾರು 5224 ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಇದರ ಇತಿಹಾಸವನ್ನು ನೋಡಿದರೆ, ಇದನ್ನು ಬುಕ್ಕರಾಯರು ಈ ಹಿಂದೆ ಕಟ್ಟಿಸಿದ್ದು, ಅವನ ಹೆಸರಿನಿಂದಾಗಿಯೇ 'ಬುಕ್ಕಸಮುದ್ರ'ವೆಂದು ಈ ಕೆರೆ ಕರೆಯಿಸಿಕೊಂಡಿದೆ. ಅನೇಕ ಸಲ ಬಾರಿ ಮಳೆಯಿಂದಾಗಿ ಕೆರೆ ಒಡೆದು, ಇದರ ಬದಿಯಲ್ಲಿರುವ ಅನೇಕ ಹಳ್ಳಿಗಳು ಅಪಾರವಾದ ತೊಂದರೆಯನ್ನು ಅನುಭವಿಸುತ್ತಿದ್ದವು. ಹನುಮಪ್ಪನಾಯಕ ಈ ಸಮಸ್ಯೆಗಳನ್ನು ಸರಿಪಡಿಸಲು ಅಲ್ಲಿಯೇ ಭದ್ರವಾದ ಕೋಟೆ ಹಾಗೂ ಅರಮನೆಯನ್ನು ಕಟ್ಟಿಸಿಕೊಂಡು ನೆಲೆನಿಲ್ಲುತ್ತಾನೆ. ಕೆರೆಯ ದುರಸ್ಥಿಯನ್ನು ಮಾಡಿ ಪ್ರಜೆಗಳ ಅಪಾರವಾದ ಪ್ರೀತಿಗೆ ಪಾತ್ರನಾಗುತ್ತಾನೆ. ನೈಸರ್ಗಿಕವಾಗಿರುವ ಕಲ್ಲುಬೆಟ್ಟಗಳ ಮಧ್ಯದ ಪ್ರದೇಶವನ್ನು ಅನಂತಸಾಗರ ಕೆರೆಯೊಂದಿಗೆ ವಿಲೀನಗೊಳಿಸಿ ಅನಂತಸರೋವರವನ್ನಾಗಿ ಮಾಡುತ್ತಾನೆ. ನಿರಂತರವಾಗಿ ನೀರು ಸಂಗ್ರಹಗೊಳ್ಳಲು ಮತ್ತು ನೀರಾವರಿಗಾಗಿ ಎರಡು ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ.

2. ಆದವಾನಿ ದುರ್ಗದ ಕೆರೆ, ಗುತ್ತಿ (ಆಂಧ್ರಪ್ರದೇಶ) : ಆಂಧ್ರಪ್ರದೇಶದ ಆದವಾನಿ ದುರ್ಗದ ಕೆರೆಗೆ ಜೀರ್ಣೋದ್ಧಾರ ಮಾಡಿದ ಕುರಿತು ಶಾಸನೋಲ್ಲೇಖವಿದೆ. ಕ್ರಿ.ಶ. 1577ರ ಗುತ್ತಿ ತಾಲೂಕಿನ ಕಡದರಬೆಂಚಿ ಶ್ರೀ ಮನ್ಮಹಾರಾಜಾಧಿರಾಜ

ರಾಜಪರಮೇಶ್ವರ ಶ್ರೀ ವೀರ ಪ್ರತಾಪ ಶ್ರೀರಂಗರಾಯದೇವ ಮಹಾರಾಯರು ಪೃಥ್ವಿ [ಶಿಂಹಾಸನ] ರೂಢರಾಗಿ ರಾಜ ಶ್ರೀ ಹಂಡೆಹನುಮನಾಯಕ ಅಯ್ಯನವರಿಗೆ ಪಾಲಿಸಿದಂಥಾ ಆದವಾನಿ ದುರ್ಗಕ್ಕೆ ಸಲುವ ಪೆರು.......ಲ [ಕೆರೆ]ಗೆ ಸಲುವ .... ಜೀರ್ಣೋದ್ಧಾರಕ್ಕಾಗಿ ಗ್ರಾಮವೊಂದನ್ನು ಸರ್ವಮಾನ್ಯವಾಗಿ ಕೊಟ್ಟ ಉಲ್ಲೇಖವಿದೆ. ಹಂಡೆ ಬಲದ ಹನುಮಪ್ಪ ನಾಯಕನಿಗೆ ಆರು ಜನ ಸಹೋದರಿಯರಿದ್ದು, ಅವರ ಹೆಸರಿನಲ್ಲಿ ಆರು ಬಾವಿಗಳನ್ನು ಬಳ್ಳಾರಿಯಲ್ಲಿ ನಿರ್ಮಿಸಿರುವುದಾಗಿ ಬಳ್ಳಾರಿ ಗೆಝೆಟಿಯರ್ ಮಾಹಿತಿಯನ್ನು ನೀಡುತ್ತದೆ. ಅವುಗಳನ್ನು ಇಲ್ಲಿ ಒಂದೊಂದಾಗಿ ನೋಡಬಹುದು.

ಅವ್ವಮ್ಮನ ಬಾವಿ : ಬಳ್ಳಾರಿಯಿಂದ ಸು. 2 ಕಿ.ಮೀ ಅಂತರದ ಸಿರುಗುಪ್ಪಾ ರಸ್ತೆಯಲ್ಲಿ ಅವ್ವಮ್ಮನ ಬಾವಿ ಎಂಬ ಬಡವಾಣೆಯ ಪ್ರವೇಶದಲ್ಲಿಯೇ ಎಡಬದಿಯಲ್ಲಿ ಪೂರ್ವಕ್ಕೆ ಪ್ರವೇಶದ್ವಾರವಿದ್ದು, ಕೆಳಗಡೆ ಇಳಿದನಂತರ ಮತ್ತೊಂದು ಕಮಾನಿನ ವ್ಯವಸ್ಥೆಯಿದ್ದು, ಈ ಕೆಳ ಅಂತಸ್ತಿನಿಂದ ಉತ್ತರಾಭಿಮುಖವಾಗಿ ಇನ್ನೂ ಕೆಳಗೆ ಹೋಗುವುದಕ್ಕೆ ಮೆಟ್ಟಿಲುಗಳ ವ್ಯವಸ್ಥೆಯಿದೆ. ಕೆಳಗೆ ಇಳಿದರೆ ವಿಶಾಲವಾದ ಬಾವಿಯಲ್ಲಿ ನೀರು ತುಂಬಿದೆ. ಕೆಳಗೆ ಅತ್ಯಂತ ಶ್ರೇಷ್ಠವಾದ ರೀತಿಯಲ್ಲಿ ತನ್ನ ಕಲಾತ್ಮಕವಾದ ಸೌಂದರ್ಯದಿಂದ ಈಗಲೂ ಪ್ರವಾಸಿಗರನ್ನು, ಅಧ್ಯಯನಕಾರರನ್ನು ತನ್ನತ್ತ ಸೆಳೆಯುತ್ತದೆ. ಬಂಕಾಪುರದ ಪಂಚ ಮಲುಕಪ್ಪನ ಬಾವಿಯ ಹಾಗೆಯೇ ಈ ಬಾವಿಯ ವಿನ್ಯಾಸವು ನಿರ್ಮಿತಗೊಂಡಿದೆ. ಕೆಳ ಅಂತಸ್ತಿನಲ್ಲಿ ಮೆಟ್ಟಿಲುಗಳಿದ್ದು, ಇಳಿದು ಹೋಗಿ ನೀರನ್ನು ತೆಗೆದುಕೊಂಡು ಬರುವ ಅನುಕೂಲತೆಯನ್ನು ಮಾಡಲಾಗಿದೆ. ಇದರ ವಿಶೇಷತೆಯೆಂದರೆ, ಕಲಾತ್ಮಕವಾದ ಕಮಾನುಗಳು, ಮೇಲುಪ್ಪರಿಗೆ ಅಲ್ಲಲ್ಲಿ ಕಮಲ ಹಾಗೂ ಇನ್ನಿತರ ಶಿಲ್ಪ ವಿನ್ಯಾಸಗಳಿಂದ ಆಕರ್ಷಕವಾಗಿ ಗೋಚರಿಸುತ್ತಿದೆ. ಮೇಲುಗಡೆಯಿಂದ ತೋಟಗಾರಿಕೆಗೆ ನೀರನ್ನು ಏತನೀರಾವರಿ ಮೂಲಕ ಎತ್ತಲು ಬರುವ ಹಾಗೆ ವ್ಯವಸ್ಥೆಯಿದೆ. ಹಿಂದೂ–ಮುಸ್ಲಿಂ ವಾಸ್ತುವಿನ್ಯಾಸವನ್ನು ಈ ಬಾವಿ ಹೊಂದಿದೆ. ಈ ಬಾವಿಯ ನೀರನ್ನು ಕುಡಿಯಲು ಹಾಗೂ ಕೃಷಿಗೆ ಉಪಯೋಗಿಸಲು ಎರಡು ರೀತಿಯಲ್ಲಿ ಬಳಕೆಯಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಬಲದ ಹನುಮಪ್ಪನಾಯಕ ಈ ಬಾವಿಯನ್ನು ತನ್ನ ಸಹೋದರಿಯ ಹೆಸರಿನಲ್ಲಿ ನಿರ್ಮಿಸಿದ ಕುರಿತು ಸ್ಥಳೀಯರು ಈಗಲೂ ಮಾಹಿತಿ ನೀಡುತ್ತಾರೆ.

ಸೋದರಿ ಬಾವಿ : ಬಳ್ಳಾರಿಯ ಮುಖ್ಯ ನಗರದ ಮೇದರ ಓಣಿಯಲ್ಲಿ ಮೇಲಿನ ಅವ್ವಮ್ಮನ ಬಾವಿಯ ಶೈಲಿಯನ್ನು ಯಥಾವತ್ತಾಗಿ ಈ ಬಾವಿಯು ಹೊಂದಿದ್ದು, ಪ್ರಸ್ತುತ ಈ ಬಾವಿಯ ಸುತ್ತಲೂ ಮನೆಗಳನ್ನು ನಿರ್ಮಿಸಿದ್ದು, ಈ ಬಾವಿಯಲ್ಲಿನ ನೀರು ಅತ್ಯಂತ ಕಲ್ಮಶವಾಗಿ ಮಲೀನಗೊಂಡಿದೆ. ಇಲ್ಲಿಯೂ ಹಿಂದೂ–ಮುಸ್ಲಿಂ ವಾಸ್ತುಶೈಲಿಯನ್ನು ಕಾಣಬಹುದು. ಇಲ್ಲಿ ನಂದಿ, ಲಿಂಗ, ನರ್ತಕಿ ಹಾಗೂ ಕಮಲದ ವಿನ್ಯಾಸಗಳನ್ನು ಅಲ್ಲಲ್ಲಿ ಬಾವಿಯ ಕಲ್ಲಿನ ಗೋಡೆಯಲ್ಲಿ ಕೆತ್ತಲಾಗಿದೆ. ನೀರೆತ್ತಲು ಇಲ್ಲಿಯೂ ಎರಡು ಏತದ ಕಮಾನುಗಳಿವೆ. ಈ ಬಾವಿಯ ನೀರು ಕುಡಿಯಲು ಮತ್ತು ಕೃಷಿಗಾಗಿ ಬಳಸುತ್ತಿದ್ದುದ್ದಾಗಿ ಸ್ಥಳೀಯರು ಸ್ಪಷ್ಟಪಡಿಸಿದ್ದಾರೆ. ಪ್ರಸ್ತುತ ಈ ಬಾವಿಯ ಹೆಸರನ್ನು ಗುರುತಿಸಲು ಸಾಧ್ಯವಾಗಿಲ್ಲ. ಬಲದ ಹನುಮಪ್ಪನಾಯಕನ ಅಕ್ಕ–ತಂಗಿಯರ ಬಾವಿ ಎಂದು ಸ್ಥಳೀಯರು ಹೇಳುತ್ತಾರೆ.

ಸೋದರಿಯರ ಬಾವಿ : ಬಳ್ಳಾರಿಯಿಂದ 6 ಕಿ.ಮೀ ದೂರದ ಸಿರುಗುಪ್ಪಾ ರಸ್ತೆಯ ಒಕ್ಕರಾಣಿ ಕ್ಯಾಂಪ್‌ನ ಹತ್ತಿರ ಗಾಣಿಗನ ಹಳ್ಳದ ಪಕ್ಕದ ಹುಣಿಸಿ ಗಿಡದ ಬುಡದಲ್ಲಿ ಈ ಬಾವಿಯಿದೆ. ಮೇಲಿನ ಎರಡು ಬಾವಿಗಳ ವಿನ್ಯಾಸ ಹಾಗೂ ಶೈಲಿಯನ್ನು ಯತಾವತ್ತಾಗಿ ಇಲ್ಲಿಯೂ ಅಳವಡಿಸಲಾಗಿದೆ. ಬಾಲದ ಹನುಮಪ್ಪ ನಾಯಕನು ಮೇಲಿನ ಎರಡು ಬಾವಿಗಳನ್ನು ಕಟ್ಟಿಸಿದಂತೆ, ಈ ಬಾವಿಯನ್ನು ತನ್ನ ಸಹೋದರಿಯ ನೆನಪಿಗಾಗಿ ಕಟ್ಟಿಸಿರುವುದಾಗಿ ಸ್ಥಳೀಯರಿಂದ ತಿಳಿದುಬರುತ್ತದೆ. ಮೇಲಿನ ಎರಡು ಬಾವಿಗಳಿಗಿಂತ ಇದು ಚಿಕ್ಕದಾಗಿದ್ದು, ಬಾವಿಯ ವಿನ್ಯಾಸ ಮೇಲಿನ ಎರಡು ಬಾವಿಗಳ ಪಡಿಯಚ್ಚು ಇದ್ದಂತಿದೆ. ಆದರೆ ಇದರ ಪ್ರವೇಶದ್ವಾರ ಪಶ್ಚಿಮಕ್ಕಿದೆ. ಇಲ್ಲಿ ಮಧ್ಯದ ಒಂದು ಕಮಾನಿನಲ್ಲಿ ಎರಡು ನಂದಿಯ ಮಧ್ಯ ಈಶ್ವರ ಲಿಂಗವಿದ್ದು, ಬದಿಗಳಲ್ಲಿ ಕಮಲ, ಮುಂಗುಸಿ, ನವಿಲು, ಆನೆ ಮುಂತಾದ ಶಿಲ್ಪಗಳನ್ನು ಗೋಡೆಯಲ್ಲಿ ಕೆತ್ತಲಾಗಿದೆ. ಪ್ರಸ್ತುತ ಈ ಬಾವಿಯು ಬಿದ್ದು ಹಾಳಾಗಿದೆ. ಬಾವಿಯಲ್ಲಿ ನೀರು ತುಂಬಿದ್ದರೂ ಆ ನೀರನ್ನು ಯಾರೂ ಬಳಸಿಕೊಳ್ಳುತ್ತಿಲ್ಲ. ಸಂಪೂರ್ಣ ಕೃಷಿಗಾಗಿಯೇ ಈ ಬಾವಿಯ ನೀರನ್ನು ಬಳಸಿಕೊಳ್ಳುತ್ತಿರುವಂತಿದೆ. ಹೊಲದ ಮಾಲಕರನ್ನು ಕೇಳಿದಾಗ ಈ

ಬಾವಿಯ ಏತ ನೀರಾವರಿಯಿಂದ ಬಹಳ ಹಿಂದಿನಿಂದಲೂ ತೋಟವನ್ನು ಮಾಡಲಾಗುತ್ತಿತ್ತು ಎಂದು ಮಾಹಿತಿಯನ್ನು ನೀಡಿದ್ದಾರೆ. ಈ ಬಾವಿಯ ನೀರನ್ನು ಹತ್ತಾರು ಹೊಲಗಳಿಗೆ ಉಪಯೋಗಿಸಲಾಗುತ್ತಿತ್ತು ಎಂಬ ಸ್ಥಳೀಯರ ಮಾಹಿತಿಯಿದೆ.

ದೊಡ್ಡ ಬಾವಿ, ಬಳ್ಳಾರಿ : ಬಲದ ಹನು.ಮಪ್ಪನಾಯಕನ ಅಕ್ಕ–ತಂಗಿಯರ ದೊಡ್ಡ ಬಾವಿ ನಗರಕೆರೆ ಬಳ್ಳಾರಿಯ ನಗರಕೆರೆಯ ಹತ್ತಿರವಿರುವ ಈ ಬಾವಿಯೂ ಮೇಲಿನ ಬಾವಿಗಳ ವಾಸ್ತುವಿನ್ಯಾಸ, ಶೈಲಿಯನ್ನು ಹೊಂದಿದೆ. ಈ ಬಾವಿಯ ನೀರನ್ನು ಸಹ ಕೃಷಿಗೆ ಏತ ನೀರವಾರಿಯ ಮೂಲಕ ಉಪಯೋಗಿಸುತ್ತಿದ್ದುದು ಮತ್ತು ಕುಡಿಯಲು ಬಳಸುತ್ತಿದ್ದುದ್ದಾಗಿ ತಿಳಿದುಬರುತ್ತದೆ. ಈಗ ಬಳಕೆಯಿಲ್ಲದಿರುವುದರಿಂದ ಈ ಬಾವಿಯ ನೀರು ಮಲೀನವಾಗಿದೆ. ಪ್ರಸ್ತುತ ದೊಡ್ಡದಾದ ಈ ಬಾವಿಗೆ ಸಹಜವಾಗಿ ನಗರಕೆರೆ ದೊಡ್ಡಬಾವಿ ಎಂದು ಕರೆಯುತ್ತಾರೆ.

ಅಕ್ಕ–ತಂಗಿಯರ ಬಾವಿ, ಪಾರ್ವತಿನಗರ, ಬಳ್ಳಾರಿ : ಬಲದ ಹನುಮಪ್ಪನಾಯಕ ಪಾಳೆಯಗಾರನಿಂದ ನಿರ್ಮಿಸಿದ ಈ ಬಾವಿ ಬಳ್ಳಾರಿಯ ಪಾರ್ವತಿನಗರ ಒಂದನೆಯ ಕ್ರಾಸ್‌ನಲ್ಲಿದ್ದು, ಇಲ್ಲಿ ಅದನ್ನು ಸಂಪೂರ್ಣವಾಗಿ ಕಲ್ಲುಮಣ್ಣಿನಿಂದ ಮುಚ್ಚಿಹಾಕಿದ್ದಾರೆ. ಇದರ ಮೇಲೆ ಶಾಂತಿ ಶಿಸುವಿಹಾರ ಶಾಲೆ ಪ್ರಾರಂಭಿಸಿದ್ದಾರೆ. ಮುಂದುಗಡೆ ಗಾರ್ಡನ್ ಮಾಡಿದ್ದಾರೆ. ಬಾವಿಯ ಯಾವ ಅವಶೇಷಗಳು ಇಲ್ಲಿ ಉಳಿದಿಲ್ಲ. ಸ್ಥಳೀಯರು ಈ ಬಾವಿ ಮತ್ತು ಅವ್ವಮ್ಮನ ಬಾವಿ ಒಂದೇ ರೀತಿ ಇದ್ದುದಾಗಿ ಸ್ಮರಿಸಿಕೊಳ್ಳುತ್ತಾರೆ. ಈಗ ಇಲ್ಲಿ ವನದಲ್ಲಿ ಹನುಮಪ್ಪನಾಯಕ ಕುಳಿತುಕೊಳ್ಳುತ್ತಿದ್ದ ಶಿಲೆಯ ಆಸನವೊಂದು ಕುರುಹು ಆಗಿ ಉಳಿದುಕಕೊಂಡಿದೆ.

ವಡ್ಡರ ಬಂಡೆಯ ದೊಡ್ಡಬಾವಿ, ಬಳ್ಳಾರಿ : ಬಲದ ಹನುಮಪ್ಪನಾಯಕನು ತನ್ನ ಅಕ್ಕ–ತಂಗಿಯರ ನೆನಪಿಗಾಗಿ ಕಟ್ಟಿಸಿದ ಐದು ದೊಡ್ಡ ಬಾವಿಗಳಲ್ಲಿ ಇದೊಂದಾಗಿದೆ. ಮೇಲಿನ ಐದು ಬಾವಿಗಳಲ್ಲಿಯ ಶೈಲಿ ಹಾಗೂ ಶಿಲಾವಿನ್ಯಾಸಗಳನ್ನು ಈ ಬಾವಿಯಲ್ಲಿಯೂ ನಾವು ಕಾಣಬಹುದು. ಅಲ್ಲದೇ ವಡ್ಡರ ಬಂಡೆಯ ಹತ್ತಿರವಿರುವುದರಿಂದ ಇದನ್ನು ವಡ್ಡರ ಬಂಡೆಯ ದೊಡ್ಡಬಾವಿ ಎಂದು ಪ್ರಸಿದ್ಧಿಯಾಗಿದೆ. ಈ ಬಾವಿಯು ಕೃಷಿಗಾಗಿ ಏತ ನೀರಾವರಿ, ಕುಡಿಯಲು ಮತ್ತು ದೈನಂದಿನ ಚಟುವಟಿಕೆಗಳ ಬಳಕೆಗಾಗಿ ಉಪಯೋಗವಾಗುತ್ತಿದ್ದುದಾಗಿ ಸ್ಥಳೀಯರಿಂದ ತಿಳಿದುಬರುತ್ತದೆ. ಒಟ್ಟಾರೆ ಬಲದ ಹನುಮಪ್ಪನಾಯಕನು ಕಟ್ಟಿಸಿದ ಆರು ಬಾವಿಗಳಲ್ಲಿ ಆರು ಜನ ಸಹೋದರಿಯರ ಹೆಸರುಗಳಲ್ಲಿ ಅವ್ವಮ್ಮನ ಹೆಸರಿನ ಒಂದು ಬಾವಿಯನ್ನು ಗುರುತಿಸಲು ಸಾಧ್ಯವಾಗಿದೆ. ಇನ್ನುಳಿದ ಐದು ಜನ ಸಹೋದರಿಯರ ಹೆಸರನ್ನು ಕುರಿತು ಅಧ್ಯಯನ ಮಾಡಬೇಕಾಗಿದೆ.

ಒಟ್ಟಾರೆ ಹಂಡೆ ಪಾಳೆಯಗಾರರ ವಂಶದ ರಾಜ್ಯಸ್ಥಾಪನೆಯ ಮೂಲಪುರುಷನಾದ ಹನುಮಪ್ಪ ನಾಯಕನಲ್ಲಿ ಶೂರತನ, ಧೈರ್ಯ, ಸ್ವಾಭಿಮಾನ, ಛಲ, ಧರ್ಮನಿಷ್ಠೆ, ದಾನಗುಣ, ಸರ್ವಧರ್ಮವನ್ನು ಗೌರವದಿಂದ ಕಾಣುವ ಗುಣಕ್ಕೆ ಹೆಸರುವಾಸಿಯಾಗಿದ್ದುದನ್ನು ದಾಖಲೆಗಳು ತಿಳಿಸುತ್ತವೆ.

ಹಂಡೆ ಹನುಮಪ್ಪನಾಯಕ ಬಿರುದುಗಳು

1. ಹಂಡೆಕುಲ ಚಕ್ರವರ್ತಿ
2. ಧೀರಭೋಗ ದೇವೇಂದ್ರ
3. ಹನುಮಭೂಪಾಲ
4. ಹಂಡೆಯ ಕುಲತಿಲಕ
5. ಭೂಪಾಲ ಕುಲರತ್ನ – ಇತ್ಯಾದಿ ಬಿರುದುಗಳಿದ್ದುದು ತಿಳಿದುಬರುತ್ತದೆ.

ಈತನು ಕ್ರಿ.ಶ. 1517ರಲ್ಲಿ ಬಳ್ಳಾರಿಯ ಕಪ್ಪಿನಚನ್ನಬಸವ ಸ್ವಾಮಿಗಳಿಗೆ ದಾನಬಿಟ್ಟ ಉಲ್ಲೇಖಗಳು ಇದ್ದು, ಇದಕ್ಕಿಂತಲೂ ಪೂರ್ವದಲ್ಲಿ ಅವನು ಸುಮಾರು 30–35 ವರ್ಷಗಳ ಹಿಂದೆ ಜನಿಸಿರುವ ಸಾಧ್ಯತೆಗಳಿವೆ. ಏಕೆಂದರೆ ಬಿಜಾಪುರದ ಆದಿಲ್ ಷಾಹನ ಕಾಲ ಕ್ರಿ.ಶ. 1510–1534 ಇದ್ದು, ಈ ಅವಧಿಯಲ್ಲಿ ಅವನು ಬಾದಷಾನಿಂದ "ವಜೀರ" ಎಂಬ ಬಿರುದು ಪಡೆದಿದ್ದು ಮತ್ತು ಅನೇಕ ಪರಗಣೆಗಳಿಗೆ ಒಡೆಯನನ್ನಾಗಿ ನೇಮಿಸಿದುದನ್ನು ಗಮನಿಸಿದಲ್ಲಿ ಸುಮಾರು ಕ್ರಿ.ಶ. 1482ರಲ್ಲಿ ಜನಿಸಿರಬಹುದಾಗಿದೆ. ಇವನು ಕ್ರಿ.ಶ. 1583ರಲ್ಲಿ ಅನಂತಪುರದಲ್ಲಿ ಮರಣವನ್ನಪ್ಪಿದ ಕುರಿತು ಅನಂತಪುರ ಕೈಫಿಯತ್ತಿನಲ್ಲಿ ದಾಖಲಾಗಿದೆ. ಇನ್ನೂ ಈತನ ಕುರಿತು ಹೆಚ್ಚಿನ ಅಧ್ಯಯನಗಳು ನಡೆಯಬೇಕಾಗಿವೆ. ಇದೊಂದು ಸ್ಥೂಲನೋಟ ಮಾತ್ರ.

ಆಧಾರಸೂಚಿ :

1. ಡಾ. ಎಂ.ಎಂ. ಕಲಬುರ್ಗಿ (ಸಂ.): **ಕರ್ನಾಟಕದ ಕೈಫಿಯತ್ತುಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1994
2. ಡಾ. ಎಸ್.ಸಿ. ಪಾಟೀಲ (ಸಂ.): **ಹಂಡೆ ಪಾಳೆಯಗಾರರ ಕೈಫಿಯತ್ತುಗಳು,** ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ, ಕಲಬುರ್ಗಿ 2014
3. ಡಾ. ದೇವರಕೊಂಡಾರೆಡ್ಡಿ (ಸಂ.) : **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1,** ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1998
4. ಡಾ. ಎಸ್.ಸಿ. ಪಾಟೀಲ (ಸಂ.) : **ಶಾಸನೋಕ್ತ ಹಂಡೆ ಅರಸು ಮನೆತನ,** ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ, ಕಲಬುರ್ಗಿ 2014
5. ಡಾ. ಸಿ. ನಾಗಭೂಷಣ : **ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ,** ಅಮೃತವರ್ಷಿಣಿ ಪ್ರಕಾಶನ, ನಂದಿಹಳ್ಳಿ, ಸಂಡೂರು. 1999

❑

14. ದೇವಚಂದ್ರನು ತನ್ನ ರಾಜಾವಳಿ ಕಥಾಸಾರದಲ್ಲಿ ಕಂಡ ವಿಜಯನಗರ

– ಡಾ. ಎಂ. ಕೊಟ್ರೇಶ್

ದೇವಚಂದ್ರ ಕ್ರಿ.ಶ.1770–1841ರ ಕಾಲಘಟ್ಟದಲ್ಲಿದ್ದ ಕವಿ, ಈತನು ಈ ಕೃತಿಯನ್ನು ಕ್ರಿ.ಶ.1803ರ ಕಾಲಘಟ್ಟದಲ್ಲಿ ರಚಿಸಿದ. (ಈ ಕೃತಿಯನ್ನು ಸಂಪಾದಿಸಿ 1988ರಲ್ಲಿ ಬಿ.ಎಸ್. ಸಣ್ಣಯ್ಯ ಅವರು ಪ್ರಕಟಿಸಿದ್ದಾರೆ)

ದೇವಚಂದ್ರನು ಮೈಸೂರು ಜಿಲ್ಲೆಯ ಚಾಮರಾಜನಗರ ತಾಲೂಕಿನ ಮಲೆಯೂರು ಅಥವಾ ಕನಕಗಿರಿಯವನು. ಈತನ ತಂದೆ ದೇವಯ್ಯ ತಾಯಿ ಕುಸುಮಾಜಮ್ಮ ಈಕೆಗೆ ನಾಲ್ಕು ಜನ ಮಕ್ಕಳು, ನಾಲ್ಕನೇಯವನೇ ದೇವಚಂದ್ರ. ಈತ ಕವಿಯಾಗಿ ನಾಲ್ಕು ಕೃತಿಗಳನ್ನು ರಚಿಸಿದ್ದಾನೆ. 1) ಪೂಜ್ಯಪಾದಚರಿತೆ. 2) ರಾಜಾವಳಿ ಕ–ಸಾರ. 3) ರಾಮಕಥಾವತಾರ. 4) ಭಕ್ತಿಸಾರ ಶತಕತ್ರಯ. ಪೂಜ್ಯಪಾದ ಚರಿತೆಯನ್ನು ಅಣ್ಣ ಪದ್ಮರಾಜನೊಂದಿಗೆ ಸೇರಿ 1792ರಲ್ಲಿ ರಚಿಸಿದ.

ಕರ್ನಲ್ ಮೆಕಂಜಿ ಈಗಾಗಲೇ ಉತ್ತರ ಭಾರತದ ಸಿಕ್ಕಿಂ ಮುಂತಾದ ಪ್ರದೇಶಗಳಲ್ಲಿ ಯಶಸ್ವಿ ಸರ್ವೇಕ್ಷಣೆ ನಡೆಸಿದ್ದ. ಈತತನ್ನ ಸಹಾಯಕ್ಕಾಗಿ ಕೆಲವು ಸ್ಥಳೀಯ ಪಂಡಿತರನ್ನು ಬಳಸಿಕೊಂಡಿದ್ದ. ಆತ ತಾನು ಹೋದಡೆಯಲ್ಲಾ ಭೂ ಸರ್ವೇಕ್ಷಣೆಯ ಜೊತೆಗೆ ಅಲ್ಲಿನ ಜನರ/ಸಮೂದಾಯಗಳ ಬಗೆಗೆ ಆ ಹಳ್ಳಿ/ಊರಿನ/ಪಟ್ಟಣದ ಇತಿಹಾಸ ಐತಿಹ್ಯಗಳನ್ನು ಸಂಗ್ರಹಿಸುತ್ತಿದ್ದ. ಈ ರೀತಿ ಕರ್ನಲ್ ಮೆಕಂಜಿ ಬರೆಯಿಸಿದ ಕೈಫಿಯತ್ತುಗಳು ಸು.2070 ಹಸ್ತಪ್ರತಿಗಳು 1586 ನಕಲು ಮಾಡಿಕೊಂಡ ಶಾಸನಗಳು 8070(ಡಾ.ಎಂ.ಎಂ.ಕಲ್ಬುರ್ಗಿ, 1994)

ಈ ಕಾಲದಲ್ಲಿ ಒಂದು ದಿನ ಲಕ್ಷ್ಮಣರಾಯನ ಜೊತೆ ಕನಕಗಿರಿಗೆ ಬಂದು ಮೆಕಂಜಿ ದೇವಚಂದ್ರನನ್ನು ಸ್ಥಳ ಪುರಾಣಂವುಂಟೆ ಎಂದು ಕೇಳುತ್ತಾನೆ. ನಂತರ ದೇವಚಂದ್ರನ ನೀಡಿದ ಮಾಹಿತಿಗಳನ್ನು/ಕಥಾನಕಗಳನ್ನು ಕೇಳಿ ಕರ್ನಾಟಕದಲ್ಲಿ ನಡೆದ "ಪ್ರಪಂಚು"ಗಳವೆಲ್ಲಾ ಶಾಸನಗಳಲ್ಲಿ ಬರೆದುಕೊಡೆಂದು ಕೇಳುತ್ತಾನೆ. ಬರೆದುಕೊಟ್ಟರೆ ಹಣವನ್ನು ನೀಡುವುದಾಗಿ ಹೇಳುತ್ತಾನೆ. ಹೀಗೆ ರಾಜಾವಳಿಯ ಉದಯವಾಗುತ್ತದೆ. ಅಣ್ಣ ದೇವಚಂದ್ರ ಬರೆದು ಮುಗಿಸುವಷ್ಟರಲ್ಲಿ ಮೆಕಂಜಿ ಬಂಗಾಳಕ್ಕೆ ಹೋಗಿರುತ್ತಾನೆ.

ಮೆಕಂಜಿ ಇಲ್ಲವೆಂದ ಮೇಲೆ ದೇವಚಂದ್ರ ಈ ಕೃತಿಯನ್ನು ಮೈಸೂರು ಒಡೆಯರಿಗೆ ಒಪ್ಪಿಸಿ ತನ್ನ ಜೀವನ ನಿರ್ವಹಣೆಗೆ ಅನುಕೂಲ ಪಡೆಯಲು ಯತ್ನಿಸುತ್ತಾನೆ. ಆದರೆ ಮಹಾರಾಜರ ಮುಖಾಮುಖಿಯಾಗಿರುವುದೇ ಇಲ್ಲ. ಸೂರಿ ಪಂಡಿತನ ನೆರವಿನಿಂದ ಮಹಾರಾಣಿಯ ಭೇಟಿಯಾಗುತ್ತಾನೆ. ಮಹಾರಾಣಿ ರಾಜಾಕಥಾವಳಿಯನ್ನು ಆಲಿಸಿ ಅದರಲ್ಲಿ ಮೈಸೂರು ಒಡೆಯರ ಕಥೆಗಳು ಸರಿಯಾಗಿ ಇಲ್ಲದ್ದನ್ನು ಕಂಡು ಅದನ್ನು ವಿವರವಾಗಿ ಬರೆದು ಸೇರಿಸಲು ಸೂಚಿಸುತ್ತಾಳೆ. ಅಕ್ಷರಶಃ 11ನೇ ಅಧ್ಯಾಯಕ್ಕೆ ಭದ್ರಶುಭಂ ಎಂದು ಮಂಗಳ ಹಾಡಿ ಮುಗಿದು ಹೋಗಿದ್ದ ಕೃತಿ ಮತ್ತೆ ಎರಡು ಅಧ್ಯಾಯ ಬೆಳೆಯುತ್ತದೆ. ಹೀಗೆ ಒಟ್ಟು 13 ಅಧ್ಯಾಯಗಳು ಇವೆ.

ರಾಜಾವಳಿ 19ನೇ ಶತಮಾನದ ಆರಂಭದಲ್ಲಿ ಅಂದರೆ ಬ್ರಿಟಿಷ್ ವಿದ್ವಾಸರಿಂದ ಭಾರತ ಹಿಸ್ಟರಿ ರೂಪಗೊಳ್ಳುತ್ತಿದ್ದ ಸಮಯದಲ್ಲೆ ಒಬ್ಬ ಜೈನ ಪಂಡಿತನಿಂದ ಕನ್ನಡದಲ್ಲಿ ಬರೆಯಲ್ಪಟ್ಟಿದ್ದು ಸಂತೋಷ ಸಂಗತಿ. ಆದರೆ ಇಂದಿನ ಅರ್ಥದಲ್ಲಿ ಇತಿಹಾಸ ತೆಗುದುಕೊಂಡರೆ ಅದೊಂದು ಮತೀಯ ಪೂರ್ವಗ್ರಹದ ನಂಬಲರ್ಹವಲ್ಲದ ಇತಿಹಾಸವಾಗಿ ಅದನ್ನು ಸುಲಭವಾಗಿ

ಮೂಲೆಗೆ ತಳ್ಳಬಹುದು. ಆದರೆ ಆತನು ಕೊಡುವ ಪೂರ್ವ ಪ್ರಪಂಚುಗಳ ಕುರಿತು ಸಾವಿರಾರು ಸಾಕ್ಷಾಧಾರಗಳ ವಿಶ್ಲೇಷಣೆಯಿಂದ ನಿಜವಾದ ಇತಿಹಾಸ ಕಟ್ಟಿಕೊಂಡಿರುತ್ತೆ ಎಂದು ಹೇಳಿ ಕೆಲವು ಅರ್ಥಗಳನ್ನು ಕಳೆದುಕೊಂಡು ಬಿಡುವ ಸಂಭವವಿದೆ.

ಈವರೆಗೆ ನಡೆದ ಅಧ್ಯಯನಗಳು ;

1. ದೇವಚಂದ್ರ ವಿರಚಿತ **ರಾಜಾವಳಿ ಕಥಾಸಾರ**ವನ್ನು ಬಿ.ಎಸ್. ಸಣ್ಣಯ್ಯ ಸಂಪಾದಿಸಿದ್ದಾರೆ. ಇದು ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ,. ಅವರು 1988ರಲ್ಲಿ ಪ್ರಕಟಿಸಿದ್ದಾರೆ.

2. **ದೇವಚಂದ್ರನ ರಾಜಾವಳಿ ಕಥೆ: ಸಾಂಸ್ಕೃತಿಕ ಮುಖಾಮುಖಿ** ಎಂಬ ಶೀರ್ಷಿಕೆ ಅಡಿಯಲ್ಲಿ ಡಾ.ವೆಂಕಟೇಶ್ ಇಂದ್ವಾಡಿಯವರು ಸಂಪಾದಿಸಿದ್ದಾರೆ. ಈ ಕೃತಿಯನ್ನು 2003ರಲ್ಲಿ ಹಂಪಿ ವಿ.ವಿ.ಯು ಪ್ರಕಟಮಾಡಿದೆ.

ಇದರಲ್ಲಿ ಹದಿಮೂರು ಸಂಶೋಧನಾ ಲೇಖನಗಳು ಪ್ರಕಟವಾಗಿವೆ. ರಾಜಾರಾಮ ಹೆಗಡೆ, ರಹಮತ್ ತರೀಕೆರೆ, ವೀರಣ್ಣದಂಡೆ, ಎಸ್.ಎಸ್.ಹೀರೆಮಠ್, ಬಿ.ಎಸ್.ಸಣ್ಣಯ್ಯ, ಶಿವರಾಮಯ್ಯ, ಕೃಷ್ಣಮೂರ್ತಿ ಹನೂರು, ಮಹಾದೇವ ಶಂಕನಪುರ, ಪದ್ಮಾಶೇಖರ್, ಎಂ.ಉಷಾ, ಜಿ.ಬಿ.ಹರೀಶ್, ವಿ.ಬಿ.ತಾರಕೇಶ್ವರ್ ಪ್ರಮುಖರು.

ಮುಂದೆ 2011ರಲ್ಲಿ ದೇವಚಂದ್ರ ಕನ್ನಡ ಭಾಷೆ ಮತ್ತು ಸಂಸ್ಕೃತಿ ಕುರಿತು ಡಾ.ಜಿ.ಬಿ.ಹರೀಶ್‌ರವರು ಬರೆದ ಕೃತಿಯನ್ನ ತುಮಕೂರು ವಿಶ್ವವಿದ್ಯಾನಿಲಯ ಪ್ರಕಟಿಸಿದೆ. ಈ ಮೇಲಿನ ಕೃತಿಗಳಿಗೆ ಇನ್ನು ಅನೇಕ ಪೂರಕ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಈ ಮೇಲಿನ ಎಲ್ಲಾ ಕೃತಿಗಳು ಐತಿಹಾಸಿಕ ಅಂಶಗಳಾಗಿವೆ. ಚಾರಿತ್ರಿಕ ನೋಟಗಳು ಮುಖ್ಯವೆಂದರು ಕೂಡ ಸಾಹಿತ್ಯಕವಾಗಿ ಹೆಚ್ಚು ವಿಮರ್ಶೆಗೆ ದೇವಚಂದ್ರನ ರಾಜಾವಳಿ ಕಥಾಸಾರವನ್ನು ಬಳಸಿಕೊಂಡಿವೆ.

ಈ ಮೇಲಿನ ಹಿನ್ನೆಲೆಯಲ್ಲಿ ರಾಜಾವಳಿ ಕಥಾಸಾರವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಚರ್ಚಿಸುವ ಮತ್ತು ಅದರಲ್ಲಿರುವ ವಿಜಯನಗರಕ್ಕೆ ಸಂಬಂಧಿಸಿದ ಅಂಶಗಳನ್ನು ಹೆಕ್ಕಿ ತೆಗೆಯುವ ಕೆಲಸವನ್ನು ಈ ಸಂಶೋಧನಾ ಲೇಖನ ಮಾಡುತ್ತದೆ.

ವಿಜಯನಗರ ಸ್ಥಾಪನೆ:

(ರಾಜಾವಳಿ ಕಥಾಸಾರದ ನವಮಾಧಿಕಾರಂದಲ್ಲಿದೆ)

ವಿದ್ಯಾದೇವರಾಯನೆಂಬ ಕ್ಷತ್ರಿಯಪುತ್ರಂ ಬಂದಾ ನಿಧಿಯಂ ತೆಗೆಯಲಲ್ಲಿರ್ಧ ಯಕ್ಷಂಕಡಾರದ ಕಸವರಮುಂ ಅಲ್ಲಿ ವಿದ್ಯಾನಂದಮುನಿ ಇದ್ದ ನಿಧಿಯನ್ನು ಪಡೆದು ಗಜಾರಣ್ಯದಲ್ಲಿ ವಿದ್ಯಾನಗರ ಸ್ಥಾಪಿಸಿದ. ಚದುರಂಗ ಬಲ ನಿರ್ಮಿಸಿ 11 ವರ್ಷಗಳ ರಾಜ್ಯಭಾರ ಮಾಡಿದ ವಿಷಯವಿದೆ.

ವಿಜಯನಗರ ರಾಜ್ಯವನ್ನು ವಿದ್ಯಾನಂದಮುನಿ ಸ್ಥಾಪಿಸಿದ. ವಿದ್ಯಾನಂದಮುನಿ ಜೈನಮುನಿ ಎಂಬ ಅಂಶಗಮನಾರ್ಹ. ವಿದ್ಯಾರಣ್ಯರನ್ನು ವಿದ್ಯಾನಂದನೆಂದು ಕರೆದಿರುವನೇ?ಅಥವಾ ದೇವಚಂದ್ರನು ತಾನು ತನ್ನ ಜಾತಿಯ ಹಿನ್ನೆಲೆಯಿಂದ ವಿದ್ಯಾನಂದ ನಿಧಿಯಿಂದ ವಿಜಯನಗರದ ರಾಜ್ಯ ಸ್ಥಾಪನೆ ಆಯಿತೆಂದು ನಿರ್ಣಯಿಸಿರುವನೇ?

ವಿಜಯನಗರ ಕುಮಾರರಾಮ :

ಕುಮ್ಮಟದಲ್ಲಿ ಬೇಡರಪ್ಪ ಕಂಪಿಲ್ಲರಾಯನ ಮಗನಾದ ಕುಮಾರರಾಮನಿಗೆ ಚಿಕ್ಕಮ್ಮಳಾದ ರತ್ನಾಜಿಯು ಮೋಹಿಸಿದೊಡಂ ಕೂಡಲೊಲ್ಲದಕ್ಕೆ ಅವನಿಗೆ ಮುನಿದು ಕೊಲ್ಲಿಸಲು ಪ್ರಯತ್ನಿಸಿದಳು ಎಂಬ ವಿಷಯದಶಮಾಧಿಕಾರದ ಪುಟ 187ರಲ್ಲಿದೆ.

ಡಾ.ಎ.ಎಂ.ಕಲ್ಬುರ್ಗಿ ಅವರು ಕುಮಾರರಾಮನ ಸಾಂಗತ್ಯ ಬರೆಯುವ ಪೂರ್ವದಲ್ಲಿಯೇ ಕುಮ್ಮಟದ ಕುಮಾರರಾಮನ ಮನೆತನದ ವಿಷಯಗಳನ್ನು ದೇವಚಂದ್ರ ತನ್ನ ಕೃತಿಯಲ್ಲಿ ತಂದಿದ್ದಾನೆ. ಕಂಪಿಲರಾಯ ಕುಮಾರರಾಮರು ಯಾದವರೇ ಎಂಬತ್ಯಾದಿ ಗೊಂದಲಗಳಿರುವ ಈ ಸಂದರ್ಭದಲ್ಲಿ ಕಂಪಿಲರಾಯ ಕುಮಾರರಾಮರು ಬೇಡರು ಎಂಬುದನ್ನು ಸ್ಪಷ್ಟವಾಗಿ

ಹೇಳಿದ್ದಾನೆ. ಹರಿಹರರಾಯನು 36 ವರ್ಷ ರಾಜ್ಯವಾಳಿದನು. ಬಳಿಕ ವೀರಬುಕ್ಕರಾಯನು 7ವರ್ಷ ರಾಜ್ಯವಾಳಿದ ನಂತರ ಇಮ್ಮಡಿ ಹರಿಹರ 10ವರ್ಷ ರಾಜ್ಯವಾಳಿದ. 2ನೇ ಬುಕ್ಕರಾಯ ರಾಜ್ಯದಲ್ಲಿ ಆಳ್ವಿಕೆ ಮಾಡುವಾಗ ಕಂಚಿಯಲ್ಲಿ 3 ಕಂಚಿಗಳಾದವು–ಜಿನಕಂಚಿ, ಶಿವಕಂಚಿ, ವಿಷ್ಣುಕಂಚಿ ಮುಂತಾದವು ಎಂದು ಹೇಳಿದ್ದಾನೆ. ಪು.196

ಆನೆಗೊಂದಿಯಲ್ಲಿ ತೆಲುಗು ರಾಜರಾದ ಅಚ್ಯುತರಾಯನಾಳಿದ ನಂತರ ಕ್ಷತ್ರಿಯರಾದ ತಿರುಮಲರಾಯ ಸದಾಶಿವರಾಯನ ಹೆಸರಿನಲ್ಲಿ ರಾಮರಾಜಯ್ಯನು ಆಳ್ವಿಕೆ ಮಾಡಿದ್ದು, ಶಕ 1486 ಅಂದರೆ ಕ್ರಿ.ಶ.1564ರಲ್ಲಿ ಎಂದಿದ್ದಾನೆ. (ದಶಮಾಧಿಕಾರದಲ್ಲಿ ಪು–212) ಶ್ರೀರಂಗರಾಯ ಪ್ರಬಲನಾಗಿ ಅಂಗೀರಸ ಸಂವತ್ಸರದಾರಭ್ಯ ಶ್ರೀರಂಗಪಟ್ಟಣದೋಳಿರ್ದನತ್ತ ವೆಂಕಟಪತಿರಾಯ, ಚಿಕ್ಕರಾಯ 30ವರ್ಷ ಆಳಿದರು.

ವಿಜಯನಗರ ಅರಸರು ಕ್ಷತ್ರಿಯರು ಎಂಬ ಅಂಶವನ್ನು ಒಂದು ಕಡೆ ಹೇಳುತ್ತಾನೆ. ಕುರುಬರು ಎಂಬ ಅಂಶವನ್ನು ಮತ್ತೊಂದು ಕಡೆ ಹೇಳುತ್ತಾನೆ. ದೇವಚಂದ್ರನ ಈ ಹೇಳಿಕೆ ಸ್ವಲ್ಪ ದ್ವಂದ್ವವಾಗಿದೆ.

ವಿಜಯನಗರ ಪರಿಸರ ಹಾಗೂ ಕೋಟೆಯ ಬಗ್ಗೆ ಉಲ್ಲೇಖವಿದೆ, ಉತ್ತರದ ದೇಶ ಎಂದಿದೆ. ಅಲ್ಲಿ ತುಂಗಭದ್ರತಟದೋಳ್ ರಾರಾಜಿಸುತ್ತಿದ್ದ ವಿದ್ಯಾನಗರಿಯನಾಳ್ವ ಪರಿಹರ ವೀರಬುಕ್ಕರು ಮೊದಲಾದ ಕುರುಂಬರಾಯರಿಂದಿತ್ತ ಲಾಳಕುಳಾಧೀಶ್ವರ ಎಂದಿದೆ.ಪು.375 (ದ್ವಾದಶಾಧಿಕಾರಂರಲ್ಲಿ. ಪು--375)

ಹಕ್ಕಬುಕ್ಕರು, ವೀರನರಸಿಂಹ, ನರಸನಾಯಕ, ಕೃಷ್ಣದೇವರಾಯ, ಅಚ್ಯುತರಾಯ, ರಾಮರಾಯ ಆಳಿದ ಬಗ್ಗೆ ಮಾಹಿತಿಗಳು, ಸದಾಶಿವರಾಯನ ಸೇನಾಪತಿ ಆಂಧ್ರಕುಲದ ರಾಮರಾಜನ ಉಲ್ಲೇಖ ಇದೆ. ವಿದ್ಯಾನಗರ ತುರುಷ್ಕರು, ಪೆನಗೊಂಡೆ, ಚಂದ್ರಗಿರಿ, ವೆಂಕಟಪತಿರಾಯ, ಶ್ರೀರಂಗರಾಯ, ತಿರುಮಲರಾಯ ಉಲ್ಲೇಖಗಳಿವೆ.

ಕೃಷ್ಣದೇವರಾಯ :

ದೇವಚಂದ್ರನದಶಮಾಧಿಕಾರಂ ಪು–185ರಲ್ಲಿ ಅನೆಗೊಂದಿ ಹಾಗೂ ವಿದ್ಯಾನಗರಿಯಲ್ಲಿ ಕೃಷ್ಣದೇವರಾಯರು ತಕ್ಕಷ್ಟು ರಾಜ್ಯದೋಳು ಕಪ್ಪಂಗೊಳ್ಳುತ್ತುಮಿರ್ದನತ್ತ ಈ ಸಂದರ್ಭದಲ್ಲಿ ಕೃಷ್ಣದೇವರಾಯನ ಸಾಮಂತರು ಕಪ್ಪಕಾಣಿಕೆ ಸಲ್ಲಿಸುವ ಬಗ್ಗೆ ವ್ಯಾಜ್ಯ ಏರ್ಪಟ್ಟಂತೆ ತೋರುತ್ತದೆ. ಆ ಸಂದರ್ಭದಲ್ಲಿ ರಾಜ್ಯದಲ್ಲಿರುವ ನದಿ, ಅರಣ್ಯ, ಭೂಮಿ, ಎಲ್ಲವೂ ರಾಜನ ಸ್ವತ್ತು ಹಾಗಾಗಿ ಉತ್ಪಾದನೆಯ ಆರರಲ್ಲಿ ಒಂದು ಭಾಗ ಪ್ರಭುಗಳಿಗೆ ಕೊಡಲೇಬೇಕೆಂಬ ಕಟ್ಟಳೆ ಇರುತ್ತದೆ.

ಆನೆಗೊಂದಿ ತೆಲುಗು ಪಟಲಂಗಳೊಳ್ ಅಚ್ಯುತರಾಯನಾಳಿದ ಮೇಲೆ ಕ್ಷತ್ರಿಯ ಪಟಲದ ತಿರುಮಲರಾಯ, ಸದಾಶಿವರಾಯನಿಂದಿತ್ತಲು ರಾಮರಾಜಯ್ಯ ನಾಳ್ದು ಶಕವರುಷ 1486(ಕ್ರಿ.ಶ.1564) ಸದಾಶಿವರಾಯ ಮರಣ ಹೊಂದಿದ ಮಾಹಿತಿ ನೀಡುತ್ತದೆ. ಈ ಕಾಲಘಟ್ಟ ಅಳಿಯ ರಾಮರಾಯನಿಗೆ ಉಚ್ಛ್ರಾಯಸ್ಥಿತಿ. ಕ್ರಿ.ಶ.1565ರಲ್ಲಿ ತಾಳಿಕೋಟೆ ಯುದ್ಧ ನಡೆದಿರುವುದನ್ನು ನೆನಪಿಸಿಕೊಳ್ಳಬಹುದು.

ಶಕ 1505ರಲ್ಲಿ ಶ್ರೀರಂಗಪಟ್ಟಣದಲ್ಲಿ ರಾಜಒಡೆಯರಿಗೆ ಪಟ್ಟವಾಯಿತು ಎಂದಿದೆ. ಕ್ರಿ.ಶ.1583 ಎಂದಾಗುತ್ತದೆ. ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ರಾಜಒಡೆಯರು ಕ್ರಿ.ಶ.1578–1617ರವರೆಗೆ ಆಳ್ವಿಕೆ ಮಾಡುತ್ತಾರೆ. ದೇವಚಂದ್ರ ಉಲ್ಲೇಖಿಸುವ ಕಾಲಘಟ್ಟ ಕ್ರಿ.ಶ.1583, ಕ್ರಿ.ಶ–1578ಕ್ಕೆ ಸಮೀಪ ಇದೆ. ಈ ರೀತಿಯ ಐತಿಹಾಸಿಕ ಮಹತ್ವ ಈ ಕೃತಿಗೆ ಇದೆ.

ಕ್ರಿ.ಶ.1414ರಲ್ಲಿ ಮೈಸೂರು ಭಾಗದಲ್ಲಿ ಬರಗಾಲ ಬಂದಿರುವ ಉಲ್ಲೇಖವಿರುತ್ತದೆ. ಆಗ ಮೈಸೂರಿನವರು ವಿಜಯನಗರದ ಕಡೆ ಹೋದರೆಂಬ ಮಾಹಿತಿಗಳಿವೆ.

ಬುಕ್ಕರಾಯನ ರಾಜ್ಯವಾದ ನಂತರ ಪ್ರೌಢದೇವರಾಯ ಮೊದಲಾದವರು ರಾಜ್ಯವಾಳಿದರು. ವಿಜಯನಗರದ ಮುಚ್ಚುಗವಡಿ ಹಂಡೆಕುರುಬರಜಾತಿ ದೀಪದ ಮಲ್ಲಿಯಲ್ಲಿ ಹುಟ್ಟಿದ ಕೃಷ್ಣದೇವರಾಯನು ಆನೆಗೊಂದಿ ಸಂಸ್ಥಾನವನ್ನು ಪರಾಕ್ರಮದಿಂದ ವಶಪಡಿಸಿಕೊಂಡು ರಾಜ್ಯವಾಳುತ್ತಿದ್ದನು. ಆದರೂ ಹರಿರಾಯದೇವರಾಯ, ಭಜಂಗರಾಯರೆಂಬ ಮೂವರಿಗೆ ದಕ್ಷಿಣದೇಶದ ಪ್ರಭುತ್ವವನ್ನು ಕೊಟ್ಟು ಕಳುಹಿಸಿದರು ಎಂಬ ಮಾಹಿತಿ ಇದೆ.

ಆಧಾರಸೂಚಿ :

1. ಸಣ್ಣಯ್ಯ ಬಿ.ಎಸ್.,1988., **ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ**, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ.
2. ವೆಂಕಟೇಶಇಂದ್ವಾಡಿ(ಸಂ)2003, **ದೇವಚಂದ್ರನ ರಾಜಾವಳಿ ಕಥೆ ಸಾಂಸ್ಕೃತಿಕ ಮುಖಾಮುಖಿ**, ಪ್ರಸಾರಂಗ, ಕನ್ನಡ ವಿ.ವಿ. ಹಂಪಿ.
3. ಹರೀಶ್ ಜಿ.ಬಿ., 2011, **ದೇವಚಂದ್ರರ ಕನ್ನಡ ಭಾಷೆ ಮತ್ತು ಸಂಸ್ಕೃತಿ**, ತುಮಕೂರು.ವಿ.ವಿ., ತುಮಕೂರು.
4. Bhabha, Hormi K., 1994., **Location of Culture**., London/Newyork Routledge.
5. Cohn Bernard S., 1997., **Colonialism& its forms of knowledge**,New-Delhi Loup
6. ಭೋಯಿ ಮ.ಬಾ.(ಅನು) 1999, ತಿರುಮಲಾಯ ವಿರಚಿತ ಚಿಕ್ಕದೇವರಾಯ ವಂಶಾವಳಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
7. ಸಣ್ಣಯ್ಯ ಬಿ.ಎಸ್., 2000, ದೇವಚಂದ್ರನ ರಾಜಾವಳಿ ಕಥಾಸಾರ(ಹೊಸಗನ್ನಡ ಗದ್ಯಭಾಗ ಮಲೆಯೂರು, ಶ್ರೀ ಕನಕಗಿರಿ ಪ್ರಕಾಶನ.
8. ಗುಂಡಾಜೋಯೀಶ್ ಕೆಳದಿ(ಅನು)1976 (1999) ಲಿಂಗಣ್ಣಕವಿಯ ಕೆಳದಿ ನೃಪವಿಜಯ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

❑

15. ಪ್ರೌಢದೇವರಾಯನ ಆಸ್ಥಾನಕವಿ ಚಂದ್ರಶೇಖರನ ಗುರುಮೂರ್ತಿ ಶಂಕರ ಶತಕ

– ಡಾ॥ ಬಿ. ನಂಜುಂಡಸ್ವಾಮಿ

ಕರ್ಣಾಟಕ ಕವಿಚರಿತೆ ರಚಿಸಿದ ಆರ್. ನರಸಿಂಹಾಚಾರ್ಯರು ತಮ್ಮ ದ್ವಿತೀಯ ಸಂಪುಟದಲ್ಲಿ ಚಂದ್ರಶೇಖರಕವಿ ಅಥವಾ ಚಂದ್ರಕವಿ ಬಗ್ಗೆ ಈ ಮಾತುಗಳನ್ನು ಬರೆದಿದ್ದಾರೆ.

ಚಂದ್ರಕವಿ ಸು. 1430

ಈತನು ವಿರೂಪಾಕ್ಷಾಸ್ಥಾನ, ಗುರುಮೂರ್ತಿಶಂಕರಶತಕ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ, ಇವನಿಗೆ ಚಂದ್ರಶೇಖರ ಎಂಬ ಹೆಸರೂ ಉಂಟು. ಅಷ್ಟಭಾಷೆಗಳಲ್ಲಿ ಪ್ರವೀಣನಾಗಿದ್ದನೆಂದು ಹೇಳಿದೆ; ಈ ಭಾಷೆಗಳು ಆವುವೋ ತಿಳಿಯದು. ವಿಜಯನಗರದ ದೊರೆಯಾದ ವಿಜಯರಾಯನ ಮಗ ಗಜವೇಂಟೆಕಾರ ಪ್ರೌಢದೇವರಾಯನ (1416–1446) ಮಹಾಪ್ರಧಾನ ಗುರುರಾಯನ ಆಜ್ಞಾನುಸಾರವಾಗಿ ಈ ಗ್ರಂಥಗಳನ್ನು ಬರೆದಂತೆ ಹೇಳುವುದರಿಂದ ಕವಿ ಸುಮಾರು 1430ರಲ್ಲಿ ಇದ್ದಿರಬಹುದು. ತನ್ನ ಕವಿತೆಯ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ತಿಳಿಸಿದ್ದಾನೆ.

ಅಲರ್ಗಣೆಯಿಂದಿರ್ಮಡಿ ತಂ
ಬೆಲರಿಂ ಮೂವಡಿ ವಸಂತನಿಂ ನಾಲ್ವಡಿ ಕಾ
ದಲರಿಂದಯ್ವಡಿ ಮೋಹಿಪು
ದೆಲೆಚಂದ್ರಕವೀಂದ್ರ ನಿನ್ನ ಕನ್ನಡಗಬ್ಬಂ ॥

ಇವನ ಗ್ರಂಥಗಳಲ್ಲಿ

1) ವಿರೂಪಾಕ್ಷಾಸ್ಥಾನ

ಇದು ಚಂಪೂರೂಪವಾಗಿದೆ; ಪಂಪೆಯ ವಿರೂಪಾಕ್ಷನ ಆಸ್ಥಾನವನ್ನು ವರ್ಣಿಸುವ ಗ್ರಂಥ. ಈ ಗ್ರಂಥರಚನೆಗೆ ಕಾರಣವನ್ನು ಕವಿ ಈ ರೀತಿಯಾಗಿ ಹೇಳಿದ್ದಾನೆ–

ಕುಂತಳದೇಶಸೀಮಂತಮಣಿಯಾದ ವಿಜಯನಗರದೊಳ್ ವಿಜಯನೃಪನ ಮಗಂ ದೇವ ನೃಪತಿಯಾಳ್ದಂ. ಆತಂಗೆ ಪ್ರೌಢದೇವರಾಯನೆಂದುಂ ಪೆಸರ್. ಗಜವೇಂಟೆಕಾಱ ಬಿರುದು ಪ್ರಸಿದ್ಧವಾದ ಆ ಪ್ರೌಢಪ್ರತಾಪದೇವರಾಯನ ಸಭಾ ಸರೋಜವಾಸರೇಂದ್ರನುಂ, ಅತ್ರಿಮುನಿ ಪವಿತ್ರಗೋತ್ರಸುಧಾರ್ಣವಪೂರ್ಣಚಂದ್ರನುಂ, ಅರಸಾಮಾಪ್ಯತನೋಜನುಂ, ಸಕಲಕಲಾಕುಶಲ ನೂತನಭೋಜರಾಜನುಂ, ರಾಯಭಂಡಾರಿ ನಾರಾಯಣಬಿರುದಾಂಕುನುಂ ಎನಿಪ ಗುರುರಾಯ ಮಹಾಪ್ರಧಾನಂ ಎನ್ನಂ ನೋಡಿ ಚಂದ್ರಶೇಖರಕವೀಶ್ವರಂ ನೀಂ ನೆಗೞ್ದ ಅಷ್ಟಭಾಷೆಗಳ್ಗೆ ಅಗರಮಾದೆ; ಕನ್ನಡದ ಬಿನ್ನಣಮಂ ಪಂಪೆಯಾಳ್ದನ ಓಲಗಮಂ ರಚಿಸಿ ತೋಱುವುದು, ಎನಲು ಈ ಗ್ರಂಥಮಂ ಪೇೞ್ದೆಂ. ಈ ಕೃತಿರತ್ನಮಂ ಗುರುರಾಯ ಮಹಾಪ್ರಧಾನಂ ಪಂಪಾರಮಣನ ಚರಣಾಂಬುಜಕರ್ಪಿಸಿದಂ.

ಗ್ರಂಥಾವತಾರದಲ್ಲಿ ಪಂಪೆಯ ವಿರೂಪಾಕ್ಷನ ಸ್ತುತಿಯಿದೆ. ಬಳಿಕ ಕವಿ ಗಣೇಶ, ತಿಟ್ಟಮಾದೇವಿ ಇವರುಗಳನ್ನು ಹೊಗಳಿದ್ದಾನೆ. ಇವನ ಬಂಧವು ಪ್ರೌಢವಾಗಿಯೂ ಮನೋಹರವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ ಎಂದು ಪುಷ್ಪವಾಟ, ಸಂಗೀತ, ಕೊಳಲು ಬಗ್ಗೆ ಬಂದಿರುವ ಮೂರು ವೃತ್ತಗಳನ್ನು ಉಲ್ಲೇಖ ಮಾಡಿದ್ದಾರೆ.

2) ಗುರುಮೂರ್ತಿಶಂಕರ ಶತಕ

ಇದು ವೃತ್ತದಲ್ಲಿ ಬರೆದಿದೆ; ಪ್ರತಿವೃತ್ತವೂ ಗುರುಮೂರ್ತಿಶಂಕರಾ ಎಂದು ಮುಗಿಯುತ್ತದೆ. ಈ ಗ್ರಂಥವನ್ನು "ಭಕ್ತಿಗೆ ವಿರಕ್ತಿಗೆ ಮುಕ್ತಿಗೆ ಬೀಜಮಾಗೆ ಪೇಟ್ವಿದು" ಎಂದು ಗುರುರಾಯ ಮಹಾ ಸಚಿವೇಂದ್ರನು ಆಜ್ಞಾಪಿಸಲು ಬರೆದಂತೆ ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ ಎಂದು 2, 3, 14, 59, 39, 25 ನೇ ವೃತ್ತಗಳನ್ನು ಉಲ್ಲೇಖಿಸಿದ್ದಾರೆ.

ಚಂದ್ರಕವಿ ವಿರಚಿತ "ಶಂಕರ ಶತಕ" ಸಂಪಾದಿಸಿದ ಪ್ರೊ॥ ಸಿ. ಮಹಾದೇವಪ್ಪನವರು ಪ್ರಸ್ತಾವನೆಯಲ್ಲಿ ಈ ಮಾತುಗಳನ್ನು ಹೇಳಿದ್ದಾರೆ.

ವಿಜಯನಗರ ಸಾಮ್ರಾಜ್ಯವನ್ನಾಳಿದ ಸಂಗಮವಂಶದ ರಾಜರಲ್ಲಿ ಬಹು ಪ್ರಖ್ಯಾತನಾದ ಇಮ್ಮಡಿ ದೇವರಾಯನು ವಿಜಯರಾಯನ (ಕ್ರಿ.ಶ. 1413–19) ಹಿರಿಯಮಗ, ಆತನಿಗೆ ದೇವರಾಯ, ಪ್ರೌಢದೇವರಾಯ, ಪ್ರೌಢ ಪ್ರತಾಪದೇವರಾಯ ಎಂಬ ಹೆಸರುಗಳೂ ಇದ್ದುವು. 'ಗಜವೇಂಟೆಗಾರ' ಎಂಬ ಬಿರುದಿನಿಂದ ಪ್ರಸಿದ್ಧಿಹೊಂದಿದ್ದ ಈ ಪ್ರೌಢದೇವರಾಯನನ್ನು ಚಂದ್ರಕವಿ ತನ್ನ ಎರಡು ಕೃತಿಗಳಲ್ಲಿ ಕೊಂಡಾಡಿದ್ದಾನೆ. ಪ್ರೌಢದೇವರಾಯನ ಮಹಾ ಪ್ರಧಾನವಾದ ಗುರುರಾಯನ ಉಪದೇಶದಂತೆ 'ವಿರೂಪಾಕ್ಷಸ್ಥಾನ'ವನ್ನೂ, 'ಶಂಕರಶತಕ'ವನ್ನು ತಾನು ರಚಿಸಿದುದಾಗಿ ಆಯಾಯಾ ಕೃತಿಗಳಲ್ಲಿ ಹೇಳಿರುವ ಕಾರಣ ಚಂದ್ರಕವಿ ಗುರುರಾಯನ ಸಮಕಾಲಿಕನೂ ಹೌದು, ದೇವರಾಯನ ಸಮಕಾಲಿಕನೂ ಹೌದು. ಈ ಗಜವೇಂಟೆಕಾಟಿ ದೇವರಾಯನ ರಾಜ್ಯ ವೈಭವದ ವಿಸ್ತಾರವನ್ನು ಸೈನ್ಯ ಸಂಪತ್ತಿನ ಸೀಮೆಯನ್ನು, ಕಲಾಪ್ರೌಢಿಮೆಯ ಮೋರೆಯನ್ನೂ ಕೀರ್ತಿಯ ಅಪಾರ ವ್ಯಾಪ್ತಿಯನ್ನೂ ಕಣ್ಣಾರೆ ಕಂಡು ಮನಮೆಚ್ಚಿ ಆತನ ವ್ಯಕ್ತಿತ್ವದ ಪ್ರಭಾವವನ್ನು ಕವಿ ಹೀಗೆ ಕೊಂಡಾಡಿದ್ದಾನೆ.

> **ಜಲನಿಧಿ ಸೀಮೆ ರಾಜ್ಯವಿಭವಕ್ಕೆ ದಿಶಾಗಜಾವೆಂಟು ಸೀಮೆ ಮಾ ।**
> **ರ್ಬಲಕರುವತ್ತು ನಾಲ್ಕು ಕಳೆ ಸೀಮೆಯಭಿಜ್ಞತೆಗೆಬ್ಜಜಾಂಡ ಮಂ ।**
> **ಡಲವೃತ ಸೀಮೆ ಕೀರ್ತಿಗೆನೆ ಸೋಮಕುಲ ಕ್ಷಿತಿಪಾಲರಲ್ಲಿ ವೆ**
> **ಗ್ಗಳಿಸಿದೆನೇಳ್ಗೆಯಿಂ ವಿಜಯರಾಯತನೂಭವ ದೇವಭೂವರಂ ॥ 2 ॥**

ವಿಜಯರಾಯನ ತನುಜನಾದ ದೇವರಾಯನು ಚಂದ್ರವಂಶದ ಭೂಪಾಲಕರಲ್ಲಿ ವಿಭವೋನ್ನತವೆನಿಸಿದ್ದನು. ಈತನ ರಾಜ್ಯ ಸಂಪತ್ತಿಗೆ ಸಮುದ್ರವೇ ಸೀಮೆ; ಅರಿ ಭಯಂಕರವಾದ ತನ್ನ ಸೈನ್ಯಕ್ಕೆ ಅಷ್ಟದಿಗ್ಗಜಗಳೆ ಮೇರೆ; ಅರಿವಿಗೆ ಅರವತ್ತುನಾಲ್ಕು ಕಲೆಗಳೆ ಎಲ್ಲೆ; ಕೀರ್ತಿಗೆ ಬ್ರಹ್ಮಾಂಡಮಂಡಲ ವೃತ್ತವೆ ಅವಧಿಯೋ ಎನ್ನುವಂತಿತ್ತು. (ಪ್ರೊ॥ ಸಿ. ಮಹಾದೇವಪ್ಪನವರು ಮೇಲಿನ ಪದ್ಯದ ಗದ್ಯಾನುವಾದ ಮಾಡಿದ್ದಾರೆ.)

ಪ್ರೌಢದೇವರಾಯನ ಆಳ್ವಿಕೆಯ ಕಾಲ (ಕ್ರಿ.ಶ. 1419–1446) ಸಂಗಮವಂಶದ ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲಿ ಒಂದು ಸುವರ್ಣಯುಗ. ರತ್ನ ಸಿಂಹಾಸನದಿಂದ ಕಂಗೊಳಿಸುತ್ತಿದ್ದ ವಿಜಯನಗರ ಆ ಕಾಲದ ಪ್ರಪಂಚದ ಅಗ್ರಗಣ್ಯ ನಗರಗಳಲ್ಲಿ ಒಂದೆನಿಸಿ ವಿಶ್ವವಿಖ್ಯಾತಿಯನ್ನು ಪಡೆದಿದ್ದಿತು. ಗಿರಿನದಿಗಳ ಪ್ರಕೃತಿ ಸೌಂದರ್ಯದ ಹಿನ್ನೆಲೆಯಲ್ಲಿ ಭವ್ಯವಾದ ದೇವಾಲಯಗಳಿಂದಲೂ ಮನೋಹರವಾದ ಪುಷ್ಪೋದ್ಯಾನಗಳಿಂದಲೂ ರಮ್ಯವಾಗಿದ್ದ ವಿಜಯನಗರ ರಾಜಧಾನಿ ಇಮ್ಮಡಿ ದೇವರಾಯನ ಕಾಲದಲ್ಲಿ ಸಂತಸದ ಬೀಡಾಗಿ ಸೌಭಾಗ್ಯದಾಗರವಾಗಿತ್ತೆಂದು ವರ್ಣಿತವಾಗಿದೆ. ಆತನ ಆಸ್ಥಾನವನ್ನು ಅಲಂಕರಿಸಿದ್ದ ಕರ್ಣಾಟಕ ಆಂಧ್ರ ಮತ್ತು ದ್ರಾವಿಡ ಕವಿಗಳಿಂದ ವಿಜಯನಗರ ವಿದ್ಯಾನಗರಿಯೆಂಬ ತನ್ನ ಅನ್ವರ್ಥನಾಮವನ್ನು ಸಾರ್ಥಕ ಪಡಿಸಿಕೊಂಡಿತು ಹನ್ನೆರಡನೇಯ ಶತಮಾನದ ಬಸವಕಲ್ಯಾಣವನ್ನು ನೆನಪಿಗೆ ತಂದ ವಿಜಯನಗರ ಭಕ್ತಿಯ

ಜನ್ಮಭೂಮಿಯಾಗಿ, ವಿಜಯಕಲ್ಯಾಣವಾಗಿ ಕಂಗೊಳಿಸಿದ ಬಗೆಯನ್ನು ಪ್ರೌಢದೇವರಾಯನ ಪರಮಮಿತ್ರನೂ ದಂಡಾಧೀಶನೂ ಆದ ಕವಿ ಲಕ್ಕಣ್ಣ ತನ್ನ ಶಿವತತ್ತ್ವಚಿಂತಾಮಣಿಯಲ್ಲಿ ಹೀಗೆ ವರ್ಣಿಸಿದ್ದಾನೆ.

ಪರಹಿತದ ಬೀಡು ಸತ್ಯದನುಡಿಯ ನಡುನಾಡು
ಕರುಣಾಬ್ಧಿಯಿಕ್ಕೆ ಕಾಮಿತ ಸುಖದ ತಕ್ಕೆ ಶಶಿ
ಧರನ ಸಾಮಥ್ಯದಾಗರ ಸದಾಚಾರಸದ್ಭಕ್ತಿಗಳ ಜನ್ಮಭೂಮಿ
ವುರುತರ ಶಿವಾನುಭವಿಗಳ ಪರಿಮಿತಗೃಹಂ
ಪರಿಕಿಪರಿಗಿದು ವಿಜಯಕಲ್ಯಾಣವಾದುದೀ
ಧರೆಯಟೆಯೆ ದೇವರಾಜೇಂದ್ರಪುರವೆಂಬುವರ ಚರಣಾಂಬುಜಕ್ಕೆ ಶರಣು ॥

ಸಾಮ್ರಾಜ್ಯವ್ಯಾಪಿಯಾಗಿ ಪಶ್ಚಿಮ ಸಮುದ್ರದಿಂದ ಪೂರ್ವಸಮುದ್ರದವರೆಗೆ ವ್ಯಾಪಾರಕೇಂದ್ರಗಳಾಗಿ ಹರಡಿಕೊಂಡಿದ್ದ ಸಮಸ್ತ ಪಟ್ಟಣಗಳ ಸಂಪತ್ತಿನಿಂದ ಕೂಡಿದ ವಿಜಯನಗರವು ಸಿರಿಯ ಬೀಡಾಗಿತ್ತು 'ಸಮಸ್ತ ಪಟ್ಟಾಣಾಧೀಶ್ವರ'ನೆಂದೂ 'ವಿಜಯನಗರೀ ಪುರಂದರ'ನೆಂದೂ ಕೀರ್ತಿವಂತವಾದ ದೇವರಾಯನ ಮಹದೈಶ್ವರ್ಯವನ್ನು ಹೆಚ್ಚಿಸಿದ ಯಶಸ್ಸು ವೀರ ಲಕ್ಕಣದಂಡೇಶನಿಗೆ ಸಲ್ಲುತ್ತದೆ. ದೇವರಾಯನ ರಾಜ್ಯಭಂಡಾರಗಳಷ್ಟೇ ಅಮಿತವಾಗಿ ಧರ್ಮಸ್ಥಲಗಳೆನಿಸಿದ ದೇವಾಲಯಗಳ ಭಂಡಾರವೂ ತುಂಬಿತುಳುಕಾಡುತ್ತಿದ್ದವು.

....ದೇವರಾಯನ ಭಂಡಾರದ ಆಡಳಿತವನ್ನು ನಡೆಸುತ್ತಿದ್ದ ಸಚಿವರಲ್ಲಿ ಭಂಡಾರಿ ಜಕ್ಕಣ್ಣ ಒಡೆಯ, ಭಂಡಾರದ ಅರಸಪ್ಪ ಒಡೆಯ, ಆತನ ಮಗ ರಾಯಭಂಡಾರಿ ನಾರಾಯಣ ಬಿರುದಾಂಕನಾದ ಗುರುರಾಯ ಒಡೆಯರು ಸುಪ್ರಸಿದ್ಧರಾದವರು.

ಪ್ರೌಢದೇವರಾಯನ ಆಸ್ಥಾನದಲ್ಲಿ ಕನ್ನಡ ಸಾಹಿತ್ಯಕ್ಕೆ ದೊರೆತ ಪ್ರೋತ್ಸಾಹ ಬಹುಮುಖವಾದುದು. 'ಭಕ್ತಿಭಂಡಾರಿ'ಯೆಂದು ಪ್ರಸಿದ್ಧವಾದ ಜಕ್ಕಣಾರ್ಯನಿಗೆ ವೀರಶೈವಾಗಮಗಳಲ್ಲಿ ಆಳವಾದ ಪಾಂಡಿತ್ಯವಿತ್ತೆಂಬುದನ್ನು ಆತನ 'ಏಕೋತ್ತರ ಶತಸ್ಥಲೀ' ಗ್ರಂಥದಿಂದ ತಿಳಿಯಬಹುದಾಗಿದೆ. ಆತನು ವೀರಶೈವ ಧರ್ಮಗ್ರಂಥಗಳ ರಚನೆಗೆ ಲಕ್ಷಗಟ್ಟಲೆ ಹೊನ್ನಿತ್ತ ಸಂಗತಿ ಪ್ರಸಿದ್ಧವಾಗಿದೆ. ಲಕ್ಕಣ್ಣದಂಡೇಶ ಸ್ವತಃ ಕವಿಯಾಗಿದ್ದವನು. ಆತನ ಶಿವತತ್ತ್ವ ಚಿಂತಾಮಣಿ ವೇದಾಗಮ ಪುರಾತನೋಕ್ತಿಗಳ ಸಮ್ಮತದ ಸಾರಗ್ರಂಥ, ಶಿವಧರ್ಮವನ್ನು ಸಾರಿದ ಪುರಾತನ ನೂತನರ ಕಥೆಗಳಿಂದ ಕೂಡಿ ಚಾರಿತ್ರಿಕ ಮಹತ್ವವನ್ನು ಹೊಂದಿದ ಆಧಾರಗ್ರಂಥ. ಪ್ರೌಢದೇವರಾಯನ ಆಸ್ಥಾನದಲ್ಲಿದ್ದ ಸುಪ್ರಸಿದ್ಧ ಕನ್ನಡಕವಿ ಚಾಮರಸನ 'ಪ್ರಭುಲಿಂಗಲೀಲೆ' ಪ್ರಭುದೇವರ ಜೀವನದ ಸುಂದರ ರಸನಿರೂಪಣೆಯಾಗಿದೆ. ಮಹಾಲಿಂಗದೇವ, ಕುಮಾರಬಂಕನಾಥ, ಕಲ್ಮಠದ ವೀರಣ್ಣೊಡೆಯ, ಕರಸ್ಥಲನಾಗಿದೇವ, ಗಿರೀಂದ್ರ, ಚಂದ್ರಕವಿಯ ಗುರು ಗುರುರಾಯ ಇವರೇ ಮೊದಲಾದವರು ಸಲ್ಲಿಸಿದ ಧಾರ್ಮಿಕ ಹಾಗೂ ಸಾಹಿತ್ಯ ಸೇವೆ ಅಮೂಲ್ಯವಾದುದು.

ಚಂದ್ರಕವಿ ಅಥವಾ ಚಂದ್ರಶೇಖರಕವಿಯು ರಚಿಸಿರುವ ಪ್ರಕೃತ 'ಗುರುಮೂರ್ತಿಶಂಕರ ಶತಕ' ಅಥವಾ 'ಶಂಕರಶತಕ' ಪ್ರಬಂಧಕ್ಕೂ 'ಶ್ರೀವಿರೂಪಾಕ್ಷಾಸ್ಥಾನ' ಎಂಬ ಚಂಪೂಕಾವ್ಯಕ್ಕೂ ಗುರುರಾಯನೆ ಪ್ರೇರಕನೆಂಬುದು ಆತನ ಕೃತಿಗಳಿಂದಲೇ ವ್ಯಕ್ತವಾಗುತ್ತದೆ. ಆ ಗುರುರಾಯ ಚಂದ್ರಕವಿಯ ಕೃತಿಗಳ ಬರಿಯ ಪ್ರೇರಕಮಾತ್ರವಲ್ಲ. ಆತನ ಆಧ್ಯಾತ್ಮಿಕ ಗುರುವೂ ಆಗಿದ್ದನೆಂಬುದನ್ನು ಶಂಕರಶತಕದ ಈ ಪದ್ಯದಿಂದ ತಿಳಿಯಬಹುದು.

ಸೊರಹುತಲಿಂದ್ರ ಚಂದ್ರನಿವನೆಂದು ನರಸ್ತುತಿಯಲ್ಲ ಚಂದ್ರಶೇ
ಖರ ಕವಿರಾಜ! ಭಕ್ತಿಗೆ ವಿರಕ್ತಿಗೆ ಮುಕತಿಗೆ ಬೀಜಮಾಗೆ ಶಂ।
ಕರಶತಕ ಪ್ರಬಂಧಮನೆ ಪೇಳಿದನೆಂದುಪದೇಶವಿತ್ತ ಮ
ದ್ಗುರು ಗುರುರಾಯನಿಚ್ಚೆವಡೆ ತೀರ್ಚುವೆನಚ್ಚರಿ ಪೆರ್ಚುವಂದದಿಂ ॥ 6 ॥

ಕವಿಯು ವಾಚಾಳಿಯಾಗಿ ಇವನು ಇಂದ್ರ ಚಂದ್ರ ಎಂದು ನರಸ್ತುತಿಯನ್ನು ಮಾಡುವುದು ಯೋಗ್ಯವಲ್ಲ. ಎಲೈ ಚಂದ್ರಶೇಖರ ಕವಿರಾಜನೆ, ಭಕ್ತಿ, ವಿರಕ್ತಿ, ಮುಕ್ತಿ–ಇವುಗಳಿಗೆ ಮೂಲಕಾರಣವಾಗುವಂತೆ ಈ ಶಂಕರಶತಕ ಪ್ರಬಂಧವನ್ನು ಹೇಳು ಎಂಬುದಾಗಿ ಉಪದೇಶವನ್ನಿತ್ತ ನನ್ನ ಗುರುಮೂರ್ತಿಯಾದ ಗುರುರಾಯನು ಮೆಚ್ಚುವಂತೆ ಅತ್ಯಾಶ್ಚರ್ಯವಾಗುವ ರೀತಿಯಲ್ಲಿ ಈ ಶತಕವನ್ನು ಈಡೇರಿಸುವೆನು.

ಕವಿಯ ಪ್ರಥಮ ಕೃತಿಯಾದ ಶ್ರೀವಿರೂಪಾಕ್ಷಾ ಸ್ಥಾನದಲ್ಲಿ ತನ್ನ ಗುರುವನ್ನು ಈ ರೀತಿ ಕೊಂಡಾಡಿದ್ದಾನೆ.

ಆ ಗುರುರಾಯನೆನ್ನನೊಲವಿಂ ನಡೆನೋಡುತೆ ಬಾ ವಚಸ್ಸುಧಾ
ಸಾಗರ ಚಂದ್ರಶೇಖರಕವೀಶ್ವರ ನೀಂ ನೆಗಳ್ದಷ್ಟಭಾಷೆಗ
ಳ್ಗಾಗರಮಾದ ಕನ್ನಡದ ಬಿನ್ನಣಮಂ ನೇಟಿ ತೋಱವೇಳ್ಪುದಿಂ
ಪಾಗಿರೆ ಹಂಪೆಯಾಳ್ದನೆಸೆವೋಲಗಮಂ ರಚಿಸೆಂದನಳ್ತಿಯಿಂ ॥

ಅಲರ್ಗಣೆಯಿಂದಿಮ್ಮಡಿ ತಂ
ಬೆಲರಿಂ ಮೂವಡಿ ಬಸಂತದಿಂ ನಾಲ್ವಡಿ ಕಾ ।
ದಲರಿಂದೈವಡಿ ಮೋಹಿಪು
ದೆಲೆ ಚಂದ್ರಕವೀಂದ್ರ ನಿನ್ನ ಕನ್ನಡಕಬ್ಬಂ ॥

ಎಂದಿಂತು ಸಕಲರಸಿಕಜನ ಸಾರ್ವಭೌಮನೆನಿಪ ಗುರುರಾಯ ಮಹಾಪ್ರಧಾನನೆನ್ನ ಪಸುಳೆತನದ ತೊದಳ್ನುಡಿಯಂ ಕೊಂಡಾಡಿ, ದೇವದೇವೋತ್ತಮನ, ವೇದ ವಿನುತನ, ಹರಿಚತುರಾನನಾದಿ ಸುರನಿಕರ ಪರಿಪೂಜಿತ ಚರಣಾರವಿಂದನ ತುಹಿನ ಗಿರೀಂದ್ರನಂದಿನೀಮುಖಕಮಲಮಣಿಮುಕುರಮಕರಂದನ, ಶರಣಾಗತ ಚಿತ್ತ ಚಕೋರಚಂದ್ರಿಕಾಯಮಾನ ಸಾಂದ್ರತರ ಕಾರುಣ್ಯಕಟಾಕ್ಷನ ಶ್ರೀ ವಿರೂಪಾಕ್ಷನ ಆಸ್ಥಾನಮಂ ಬಿತ್ತರಿಸಿ ಕೇಳ್ವರ ಕಿವಿಗೆ ಸುಧೆಯ ಸೋನೆಯಂ ಸೈಗಱೆಯಿಯವೇಳ್ಕು ಮೆಂದೆಂಬಿನಮಾಮಾತಂ ಮನದೆಕೊಂಡು

ನುಡಿ ಕಡುನುಣ್ಪನಾಳೆ ಪದಬಂಧವಗುಂದಲೆಯಾಗೆ ಭಾವವು
ಗ್ಗಡದ ಪೊಡರ್ಪನಪ್ಪೆ ರಸವುಕ್ಕುವ ಕಾಳ್ಪುರಮಾಗೆ ದೇಸಿ ದ
ಟ್ಟಡಿಯಿಡೆ ಜಾಣ್ಮೆಪೂಣ್ಮೆ ಸಭೆ ಸೈವೆಱಗಿಂ ತಲೆದೂಗೆ ಕಬ್ಬಮಂ
ಗಡಣಿಸಿ ಹಂಪೆಯಾಳ್ದನೆಸೆವೋಲಗಮಂ ಪೊಸತಾಗಿ ಬಣ್ಣಿ ಪೆಂ ॥

ಎಂಬ ಕವಿಯ ಈ ನಿರೂಪಣೆಯಿಂದ ಗುರುರಾಯ ರಸಿಕಚಕ್ರಿಯೆಂದೂ ಅಷ್ಟಭಾಷೆಗಳಿಗೆ ನೆಲೆಯಾದ ಕನ್ನಡದ ಮೃದುಮಧುರವಾದ ನುಡಿಯ ಬೆಡಗಿನಲ್ಲಿ ಆತನಿಟ್ಟ ಪ್ರೇಮ ಅನುಪಮವೆಂದೂ ವ್ಯಕ್ತವಾಗುವುದು. ಅಲ್ಲದೆ ಪಂಪಾವಿರೂಪಾಕ್ಷನಲ್ಲಿ ಆತನು ತಳೆದ ಭಕ್ತಿಭಾವ ಅದ್ವಿತೀಯವಾದುದೆಂಬುದು ಸುಸ್ಪಷ್ಟವಾದ ಸಂಗತಿ.

ಪ್ರೌಢದೇವರಾಯನ ರಾಜಸಭೆಯಲ್ಲಿ ತೇಜಃಪುಂಜನಾದ ಮಂತ್ರಿಯೆಂದರೆ ಅರಸಪಾಮಾತ್ಯ ತನೂಜನಾದ ಗುರುರಾಯ. ಆತನು ಅತ್ರಿಮುನಿ ಗೋತ್ರೋದ್ಭವನೆಂದೂ, ವಿವಿಧ ಭಾಷಾವಿಖ್ಯಾತನೆಂದೂ, ನೂತನ ಭೋಜರಾಜನೆಂದೂ ಕವಿಕುಲ ಕಲ್ಪತರುವೆಂದೂ ಸುಪ್ರಸಿದ್ಧನಾದ ವ್ಯಕ್ತಿ. ಸೌಂದರ್ಯದಲ್ಲಿ ಮಾನವಾಕಾರದ ಮನ್ಮಥನೋ ಎಂಬಂತಿದ್ದ ಆತನು 'ರಾಯಭಂಡಾರಿ ನಾರಾಯಣ' ಎಂಬ ಬಿರುದನ್ನು ಹೊಂದಿ ಕೀರ್ತಿಗಳಿಸಿದ್ದನು. ಆ ಬಗ್ಗೆ ಕವಿ ವರ್ಣಿಸಿರುವ ಬಗೆಯಿದು :–

ಇಂತೆಸೆವ ಚತುಸ್ಸಮುದ್ರಾಧೀಶ್ವರ ರಾಜಾಧಿರಾಜ ರಾಜಪರಮೇಶ್ವರ ಗಜಬೇಂಟೆಕಾಱ ಬಿರುದ ಪ್ರಸಿದ್ಧ ಪ್ರೌಢಪ್ರತಾಪದೇವರಾಯ ಮಹಾರಾಯನ ಸಭಾ ಸರೋಜವಾಸರೇಂದ್ರನುಂ, ಅತ್ರಿಮುನಿ ಪವಿತ್ರಗೋತ್ರಸುಧಾರ್ಣವ ಪೂರ್ಣಚಂದ್ರನುಂ, ನಿಜಚರಣ ಶರಣಾಗತಸಚಿವ ಸಾಮಂತಮುಖನಿಖಿಲಜನ ಸಮೂಹ ಸಮುದ್ಧರಣಧುರೀಣ ಗುಣಗಣನಿಲಸದರಸಪಾಮಾತ್ಯ ತನೂಜನುಂ, ಸಕಲ ಕಲಾ ಕೌಶಲ ನೂತನ ಭೋಜರಾಜನುಂ, ವಿವಿಧಭಾಷಾ ವಿಶೇಷವಿಖ್ಯಾತ ಕವಿಕುಲ ಕಲ್ಪಭೂಜನುಂ, ಮಾನಿನೀಮಾನಸ ಮಾನಾಪಹರಣ ಮಾನವಮೀನಾಂಕಸುಮೆನಿಸಿ ನೆಗಳ್ತೆವೆತ್ತ ಗುರುರಾಯಮಂತ್ರಿಯೋಪ್ಪುತ್ತಿರ್ಪನಂತಲ್ಲ ದೆಯುಂ

ಹೀಗೆ ಜ್ಞಾನಿಯೂ ದಾನಿಯೂ, ಪರೋಪಕಾರಿಯೂ ಸದ್ಗುಣಸಾಗರನೂ ಆದ ಗುರುರಾಯನು ಇಮ್ಮಡಿ ದೇವರಾಯನ ಭೂಪರಿವೃತರಾದ ಮಂತ್ರಿಗಳಲ್ಲೆಲ್ಲ ಮಹೋನ್ನತವಾದ ವ್ಯಕ್ತಿತ್ವವನ್ನು ಗಳಿಸಿದವನು.

'ಶ್ರೀ ವಿರೂಪಾಕ್ಷನ ಆಸ್ಥಾನ' ವರ್ಣನೆಯ ಕಾಲಕ್ಕೆ 'ಪಸುಳೆತನದ ತೊದಳ್ನುಡಿ'ಯಿಂದ ಕೂಡಿದ್ದೆನೆನ್ನುವ ಚಂದ್ರಕವಿಯ ಉಜ್ವಲ ಕವಿತಾಶಕ್ತಿ 'ಶಂಕರಶತಕ'ದ ರಚನಾಕಾಲಕ್ಕೆ ತತ್ತ್ವಜ್ಞಾನಾನುಭವದಿಂದ ಮುಕ್ತಿಗಾಮಿಯಾಗಿ ಪರಿಪಕ್ವಗೊಂಡಿತೆನ್ನಬಹುದು.

ಈ ದೃಷ್ಟಿಯಿಂದ ಚಂದ್ರಕವಿಯ ಉಭಯಕೃತಿಗಳಿಗೂ ಪ್ರೇರಣೆಯಿತ್ತ ಗುರುರಾಯನು ರಸಿಕಜನ ಸಾರ್ವಭೌಮವಾಗಿಯೂ, ಭಕ್ತಿಸಂಪನ್ನನಾದ ಸದ್ಗುರೋತ್ತಮನಾಗಿಯೂ ಕಂಡುಬಂದಿದ್ದಾನೆ.

ವೀರ ಪ್ರತಾಪದೇವರಾಯನ ಆಳ್ವಿಕೆಯ ಶಕ 1369ರ ಪ್ರಭವಸಂವತ್ಸರದ ವೈಶಾಖ ಶುದ್ಧ 15 (ಕ್ರಿ.ಶ. 1447ರ ಏಪ್ರಿಲ್ 30) ರಂದು ಹುಟ್ಟಿದ ಕುಂದಾಪುರದ ಬಳಿಯ ಕೋಟಿನಾಥ ದೇವಾಲಯದಲ್ಲಿನ ಶಿಲಾಶಾಸನವೊಂದು ಗುರುರಾಯನ ಬಗೆಗೆ ಹೆಚ್ಚು ಬೆಳಕು ಬೀರುವ ಸಂಗತಿಗಳನ್ನೊಳಗೊಂಡಿದೆ. ಬಾರಕೂರನ್ನಾಳುತ್ತಿದ್ದ ರುಪ್ಪಣ್ಣ ಒಡೆಯರು ಶ್ರೀ ವೀರಪ್ರತಾಪದೇವರಾಯರ ನಿರೂಪದಂತೆ ಶ್ರೀ ಕೋಟಿನಾಥದೇವರಿಗೆ ಕೊಟ್ಟ ಆ ಧರ್ಮಶಾಸನದಲ್ಲಿ ದೇವರಾಯ ಮಹಾರಾಯರ ಹೆಸರ ಧರ್ಮವಾಗಿ ಭಂಡಾರದ ಗುರುರಾಯ ಒಡೆಯರು ಶ್ರೀ ಕೋಟಿನಾಥ ದೇವರಿಗೆ ದರುಶನಕೆ ಬಂದಲ್ಲಿ ಮಾಡಿದ ಧರ್ಮದ ವಿವರವೂ ಅದೇ ಗುರುರಾಯ ಒಡೆಯರು ಮಾಡಿಸಿದ ಮಠದಲ್ಲಿ ನಡೆಯುತ್ತಿದ್ದ ಛತ್ರಕ್ಕಾಗಿ ದೇವರಾಯರ ಹೆಸರಿನಲ್ಲಿ ಕೋಟಿನಾಥ ದೇವರ ಸನ್ನಿಧಿಯಲ್ಲಿ ಅವರು ಧಾರೆಯೆರೆದ ಧರ್ಮದ ಸಂಗತಿಯೂ ನಿರೂಪಿತವಾಗಿದೆ. ಗುರುರಾಯರ ಧೈವಭಕ್ತಿ, ಧರ್ಮಾನುರಾಗವನ್ನು ಎತ್ತಿ ಹಿಡಿಯುವ ಈ ಶಾಸನದಲ್ಲಿ ಉಕ್ತವಾದ ಭಂಡಾರದ ಗುರುರಾಯ ಒಡೆಯನೂ ಚಂದ್ರಕವಿಯಿಂದ ಸ್ತುತ್ಯನಾದ 'ಗುರುರಾಯ ಮಂತ್ರಿ'ಯೂ ಒಬ್ಬನೇ ವ್ಯಕ್ತಿ ಎಂಬುದರಲ್ಲಿ ಯಾವ ಸಂಶಯವೂ ತೋರದು. ಏಕೆಂದರೆ ಚಂದ್ರಕವಿಯ ಕೃತಿಗಳಲ್ಲಿಯೂ ಈ ಶಾಸನದಲ್ಲಿಯೂ ಇರುವ ಹೆಸರು ಒಂದೇ ಆಗಿದೆ. ಅಲ್ಲದೆ ಶಾಸನದಲ್ಲಿರುವ 'ಭಂಡಾರದ' ಎಂಬ ವಿಶೇಷಣವು 'ರಾಯಭಂಡಾರಿ ನಾರಾಯಣ' ಬಿರುದಾಂಕಿತನಾದ ಕಾವ್ಯೋಕ್ತ ಗುರುರಾಯನ ಸಚಿವ ಕಾರ್ಯವಾದ ಭಂಡಾರದ ರಕ್ಷಣೆಯನ್ನೇ ಸೂಚಿಸುವುದಾಗಿದೆ. ದೇವರಾಯನು ಪ್ರಳಯಹೊಂದಿದ ಕಾಲದಿಂದ ಒಂದು ವರ್ಷಕ್ಕೆ ಸರಿಯಾಗಿ ಹುಟ್ಟಿದ ಕಾರಣ ಮಹತ್ತ್ವಪೂರ್ಣವಾಗಿದೆ. (South Indian Inscriptions (Texts) IX part II No. 451.

ಚಂದ್ರಕವಿ ಅಥವಾ ಚಂದ್ರಶೇಖರ ಕವಿ ವಿರಚಿತ ಕೆಲವು ಪದ್ಯಗಳನ್ನು ಉದಾಹರಣಾರ್ಥವಾಗಿ ಕೊಡಲಾಗಿದೆ.

ಶ್ರೀಪತಿ ಶಾರದಾಪತಿ ಶಚೀಪತಿಪೂಜಿತ ಪಾದಪಂಕಜಂ
ಕೋಪಕೃಶಾನುಕೀಲಶಲಭೀಕೃತ ಶಂಬರವೈರಿನಿಗ್ರಹಂ ।
ತಾಪಸಚಕ್ರವರ್ತಿಚಯ ನಿಶ್ಚಲಚಿತ್ತ ಚಕೋರಚಂದ್ರನೆಂ
ದೀಪರಿ ನಿಮ್ಮನಾಂ ನುತಿಸುತುಂ ನೆನೆವೆಂ ಗುರುಮೂರ್ತಿಶಂಕರಾ ॥ 1 ॥

ಎಲೈ ಗುರುಮೂರ್ತಿಶಂಕರನೆ, ಲಕ್ಷ್ಮೀಪತಿಯಾದ ವಿಷ್ಣು, ವಾಣೀಪತಿಯಾದ ಬ್ರಹ್ಮ, ಶಚೀವಲ್ಲಭನಾದ ಇಂದ್ರ – ಇವರುಗಳಿಂದ ಪೂಜೆಗೊಂಡ ಪಾದ ಕಮಲಗಳನ್ನುಳ್ಳವನು; ತನ್ನ ಕೋಪಾಗ್ನಿ ಜ್ವಾಲೆಗೆ ಮನ್ಮಥನನ್ನು ಪತಂಗವಾಗಿ ಮಾಡಿದವನು; ಯತಿಚಕ್ರವರ್ತಿವೃಂದದ ನಿಶ್ಚಲಚಿತ್ತವೆಂಬ ಚಕೋರ ಪಕ್ಷಿಗೆ ಚಂದ್ರನಾದವನು ಎಂದು ಈ ರೀತಿಯಲ್ಲಿ ನಿಮ್ಮನ್ನು ಸ್ತುತಿಸುತ್ತ ಸ್ಮರಿಸುವೆನು.

ಜನಪತಿ ಮಾತ್ರವೇ ಗುಣದೊಳೀಕ್ಷಿಸೆಯೈದನೆಯಂಬುರಾಶಿಯಾ
ಱನೆಯ ಸುಪರ್ವಭೂಮಿರುಹ ಮೇಳನೆಯಗ್ಗದ ಚಕ್ರವರ್ತಿಯೆಂ
ಟನೆಯ ಕುಲಾದ್ರಿ ಯೊಂಬತನೆಯೊರ್ವ ದಿಶಾಪತಿ ಪೇಳವೇನೊ ಪ
ತ್ತನೆಯ ವಿರಿಂಚಿಯೆಂಬುದು ಜಗಜ್ಜನವೀ ಗಜವೇಂಟೆಕಾಱನಂ ॥ 3 ॥

ಈತನು ನೃಪತಿಮಾತ್ರನೆ? ಗುಣದಲ್ಲಿ ನೋಡಿದರೆ ಐದನೆಯ ಸಾಗರ; ಆರನೆಯ ದೇವತರು; ಏಳನೆಯ ಸಾರ್ವಭೌಮ; ಎಂಟನೆಯ ಕುಲಪರ್ವತ; ಒಂಬತ್ತನೆಯ ದಿಕ್ಪತಿ; ಹೇಳುವುದೇನು? ಹತ್ತನೆಯ ಬ್ರಹ್ಮ! ಎಂದು ಈ ಗಜವೇಂಟಕಾರನನ್ನು ಲೋಕವೇ ಕೊಂಡಾಡುವುದು.

ತರುಗಳೊಳೆಂತು ಕಲ್ಪತರುವದ್ರಿಗಳೊಳ್ಳೆನಕಾದ್ರಿಯೆಂತು ದಿ
ಕ್ಕರಿಗಳೊಳೆಂತು ದೇವಕರಿ ಯಬ್ಧಿಗಳೊಳ್ಕಲಶಾಬ್ಧಿಯೆಂತು ಭೂ ।
ಪರಿವೃತ ದೇವರಾಯನ ಮಹಾಸಚಿವೇಂದ್ರರೊಳೊಪ್ಪುತಿರ್ಪ ನಂ
ತರಸಪಮಂತ್ರಿಸೂನು ಗುರುರಾಯ ಮಹಾಸಚಿವೇಂದ್ರ ಚಂದ್ರಮಂ ॥ 4 ॥

ವೃಕ್ಷಗಳಲ್ಲಿ ಕಲ್ಪವೃಕ್ಷ, ಪರ್ವತಗಳಲ್ಲಿ ಮೇರುಪರ್ವತ, ದಿಗ್ಗಜಗಳಲ್ಲಿ ಇಂದ್ರನ ಐರಾವತ, ಸಮುದ್ರಗಳಲ್ಲಿ ಕಲಶಾಬ್ಧಿ ಹೇಗೂ ಹಾಗೆ ಭೂಮಿಯನ್ನಾವರಿಸಿದ ಪ್ರೌಢದೇವರಾಯನ ಮಹಾ ಮಂತ್ರಿ ಶ್ರೇಷ್ಠರಲ್ಲಿ ಅರಸಪ್ಪ ಮಂತ್ರಿಯ ಪುತ್ರನಾದ ಗುರುರಾಯ ಮಹಾಸಚಿವೋತ್ತಮ ಮೆರೆಯುತ್ತಿರುವನು.

ಅನವರತಂ ಪರೋಪಕೃತಿಗೆಯ್ವುತೆ ತಾನಿರೆ ಹೆತ್ತ ತಂದೆಯಂ
ನೆನೆಯದು ಬೇಡಿದಾಗಳೊಸೆದೀವುತ ತಾನಿರೆ ಪೂಣ್ದ ವಿತ್ತಮಂ ।
ನೆನೆಯದು ಸತ್ಕೃತಾದಿಯನೊಡರ್ಚುತೆ ತಾನಿರೆ ದುಷ್ಕೃತಾದಿಯಂ
ನೆನೆಯದು ಚಿತ್ತ ಮೇವೊಗಳ್ವೆನಾಂ ಗುರುರಾಯ ಮಹಾಪ್ರಧಾನನಂ ॥ 5 ॥

ಎಡೆಬಿಡದೆ ಪರೋಪಕಾರವನ್ನು ಮಾಡುತ್ತ ಆ ಗುರುರಾಯ ಮಹಾ ಪ್ರಧಾನನ ಚಿತ್ತವು ಹೆತ್ತ ತಂದೆಯನು ನೆನೆಯದು; ಬೇಡಿದೊಡನೆ ಅಕ್ಕರೆಯಿಂದ ನೀಡುತ್ತ ಮತ್ತೆ ಕೊಡಲೊಪ್ಪಿದ ಧನವನ್ನು ನೆನೆಯದು; ಸತ್ಕಾರ್ಯವೇ ಮೊದಲಾದುವನ್ನು ಮಾಡುತ್ತ ಆತನ ಚಿತ್ತವು ಅನ್ಯರ ದುಷ್ಕಾರ್ಯವನ್ನು ನೆನೆಯದು ಮಹಾಪ್ರಧಾನನಾದ ಆ ಗುರುರಾಯನನ್ನು ನಾನು ಏನೆಂದು ಕೊಂಡಾಡಲಿ!

ಇದು ಶಿವಭಕ್ತಿಯುಳ್ಳವರ್ಗೆ ಸಂಸ್ಕೃತಿ ಹೇಹಮೆನಿಪ್ಪವರ್ಗೆ ಮೋ
ಕ್ಷದ ಬಗೆಗಾಣ್ಬವರ್ಗೆ ಸೊಗಯಿಪ್ಪದಿದಲ್ಲದೆ ದಾರೆವಟ್ಟಲಂ
ದದಿ ರಸಮಂ ಬಿಡುತ್ತೆ ಕಸಮಂ ಪಿಡಿದಿರ್ಪ ದುರಾಸೆಯರ್ಗೆ ದು
ರ್ಮದರ್ಗೆ ದುರಾತ್ಮಕರ್ಗೆ ಸೊಗಯಿಪ್ಪುದೆ ಕೇಳ್ಗು ಗುರುಮೂರ್ತಿಶಂಕರಾ ॥ 7 ॥

ಎಲೈ ಗುರುಮೂರ್ತಿ ಶಂಕರನೆ, ಈ ಶಂಕರಶತಕವು ಶಿವಭಕ್ತಿ ಸಂಪನ್ನರಿಗೆ, ಸಂಸಾರವು ಹೇಯವೆಂದು ಅರಿತ ವಿರಕ್ತರಿಗೆ ಮೋಕ್ಷಮಾರ್ಗವನ್ನು ಕಾಣಬಲ್ಲವರಿಗೆ ಸೊಗಯಿಸುವುದಲ್ಲದೆ ದಾರೆವಟ್ಟಲಂತೆ ರಸವನ್ನು ಬಿಡುತ್ತ ಕಸವನ್ನು ಹಿಡಿದಿರುವ ದುರಾಸೆಯೇ ಜನರಿಗೆ, ದುರಹಂಕಾರಿಗಳಿಗೆ ಹಾಗೂ ದುರಾತ್ಮರಾದವರಿಗೆ ಸೊಗಯಿಸುವುದೇನು?

ಧರೆ ಜಲವಗ್ನಿ ವಾಯು ಗಗನಂ ಮಿಹಿರಂ ಶಶಿಯಾತ್ಮರೆಂದು ಬಿ
ತ್ತರಿಸುವ ನಿಮ್ಮ ಮೂರ್ತಿಗಳ ಹಂಗಿನದಲ್ತೆ ಸಮಸ್ತಲೋಕದೈ
ಸಿರಿ ಕೆಜೆನೀರನುಂಡು ತೊಜೆಯಂ ಪೊಗಳ್ವಂತೆ ಕೃತಘ್ನರನ್ಯದೇ
ವರ ನುತಿಗೆಂತುಟೋ ಬಯಸಿ ಬೀಳ್ವರಲೈ ಗುರುಮೂರ್ತಿಶಂಕರಾ ॥ 10 ॥

ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮರೆಂದು ವರ್ಣಿಸುವ ನಿಮ್ಮ ಅಷ್ಟಮೂರ್ತಿಗಳ ಹಂಗಿಗೆ ಸಮಸ್ತ ಲೋಕದ ಸಕಲ ಸಂಪತ್ತೂ ಒಳಗಾದುದಲ್ಲವೆ? ಕೆರೆಯ ನೀರನ್ನು ಕುಡಿದು ತೊರೆಯನ್ನು ಹೊಗಳುವಂತೆ ಕೃತಘ್ನರು ಅನ್ಯದೈವಗಳ ಸ್ತುತಿಗೆ ಎಷ್ಟೋ ಹಂಬಲಿಸಿ ಕೆಡುವರಲ್ಲವೆ?

ಸಾವರ ಕಂಡು ಕಂಡು ತನುವಂ ಸ್ಥಿರವೆಂದು ದರಿದ್ರ ದೋಷದೊಳ್
ಬೇವರ ಕಂಡು ಕಂಡು ಸಿರಿಯಂ ನೆಲೆಯೆಂದು ಪೊದಳ್ದ ಮುಪ್ಪಿನೊಳ್ ।
ನೋವರ ಕಂಡು ಕಂಡು ಸವೆ ಯೌವನಮಂ ದಿಟವೆಂದು ಗಾವಿಲರ್
ಭಾವಿಪರೇಕೆ ಕೇಳ್ ಭವಭಯಂಕರನೇ ಗುರುಮೂರ್ತಿಶಂಕರಾ ॥ 99 ॥

ಸಾಯುವವರನ್ನು ಆಗಿಂದಾಗ್ಗೆ ಕಂಡು ಈ ಶರೀರವನ್ನು ಸ್ಥಿರವೆಂದೂ ದಟ್ಟದಾರಿದ್ರ್ಯವೆಂಬ ಬೇಗೆಯಲ್ಲಿ ಬೇಯುವವರನ್ನು ನೋಡಿ ಐಶ್ವರ್ಯ ಸ್ಥಿರವಾದದೆಂದೂ, ಮುಪ್ಪಿನಲ್ಲಿ ನರಳುವವರನ್ನು ನೋಡಿಯೂ ತಾರುಣ್ಯವನ್ನು ದಿಟವೆಂದು ಎಲೇ ಗುರುಮೂರ್ತಿಶಂಕರನೆ, ಏಕೆ ಮೂಢರು ಭಾವಿಸುವರೆಂಬುದನ್ನು ವಿಚಾರಿಸು.

ಈ ತೆಜದಿಂದೆ ಭಕ್ತಿಯ ವಿರಕ್ತಿಯ ಮುಕ್ತಿಯ ಬಿತ್ತೆನಿಪ್ಪ ವಿ
ಖ್ಯಾತಿಯನಾಂತ ಭಕ್ತರ ವಿರಕ್ತರ ಮುಕ್ತರ ಚಿತ್ತದೊಳ್ಕರಂ
ಪ್ರೀತಿಯನಾಂತ ಶಂಕರಪದಾಂಕಿತಮಿೂ ಶತಕ ಪ್ರಬಂಧಮು
ರ್ವೀತಳದಲ್ಲಿ ಪರ್ವಿ ನೆಲಸಲ್ಕೆ ಸುಧಾಕರಸೂರ್ಯರಿರ್ಪಿನಂ ॥ 101 ।

ಈ ಬಗೆಯಿಂದ ಭಕ್ತಿ, ವಿರಕ್ತಿ ಮುಕ್ತಿಗಳ ಬೀಜಕಾರಣವೆಂದು ಪ್ರಖ್ಯಾತಿಯನ್ನು ಹೊಂದಿದ ಈ ಶತಕ ಭಕ್ತರ ವಿರಕ್ತರ ಮುಕ್ತರ ಚಿತ್ತದಲ್ಲಿ ಪ್ರೀತಿಯನ್ನು ಸಂಪಾದಿಸಿದೆ; ಶಂಕರನ ಪಾದಗಳಿಗೆ ಸಮರ್ಪಣೆ ಮಾಡಿದ ಶಂಕರ ಪದದ ಪಾದಮುದ್ರಿಕೆಯುಳ್ಳ ಈ ಶತಕಪ್ರಬಂಧವು ಚಂದ್ರಸೂರ್ಯರಿರುವತನಕ ಭೂಲೋಕವನ್ನೆಲ್ಲ ಆವರಿಸಿ ನೆಲೆಗೊಳ್ಳಲಿ.

ಅಂತು ಶಂಕರ ಶತಕ ಸಂಪೂರ್ಣ

ಮಂಗಳ ಮಹಾಶ್ರೀ

"ಇತಿ ಶ್ರೀ ಚಂದ್ರಶೇಖರ ಮಹಾಕವೀಂದ್ರ ವಿರಚಿತಮಪ್ಪ
ಶಂಕರ ಶತಕ ವಿಪುಲಪ್ರಬಂಧಂ ಭಕ್ತಿ ವಿರಕ್ತಿ ಮುಕ್ತಿ ಸಾಕಲ್ಯವಿಸ್ತಾರಂ
ಭಕ್ತಿಲೋಕೋಯಂ ಯಃ ಪಠೇನ್ನಿರಂತರಂ ಮಂಗಳಂ ಪ್ರಾಪ್ನುಯಾ
ತ್ಸಾಕಲ್ಯಂ ಲಭತೇ ಮಂಗಳಮಹಾಶ್ರೀ
ಶಂಕರ ಶತಕ ಸಮಾಪ್ತಂ ಮಂಗಳಮಸ್ತು ಶ್ರೀ"

ಸಂಗಮ ವಂಶದ ಪ್ರಖ್ಯಾತ ದೊರೆ ಇಮ್ಮಡಿ ದೇವರಾಯ ಅಥವಾ ಪ್ರೌಢದೇವರಾಯ ಅಥವಾ ಪ್ರೌಢಪ್ರತಾಪ ದೇವರಾಯನ ಆಸ್ಥಾನ ಕವಿ 'ಗಜವೇಂಟೆಕಾರ' ಎಂಬ ಬಿರುದಿನಿಂದ ಪ್ರಸಿದ್ಧಿ ಹೊಂದಿದ್ದ ಈ ಪ್ರೌಢದೇವರಾಯನನ್ನು ಚಂದ್ರಕವಿ ತನ್ನ ಎರಡು ಕೃತಿಗಳಲ್ಲಿ ಕೊಂಡಾಡಿದ್ದಾನೆ. ಇಂತಹ ಮಹತ್ತ್ವ ಕೃತಿಯನ್ನು ಮೂರು ಹಸ್ತಪ್ರತಿಗಳಿಂದ ಶತಕ ವೃತ್ತಗಳ ಗದ್ಯಾನುವಾದ ಸಮೇತ ಸಂಪಾದನೆ ಮಾಡಿ 1965ರಲ್ಲಿ ಕನ್ನಡಮ್ಮನ ಮಡಲಿಗೆ ತುಂಬಿದವರು ಪ್ರೊ॥ ಸಿ. ಮಹಾದೇವಪ್ಪನವರು. ಚಂದ್ರಕವಿ ವಿರಚಿತ "ಶಂಕರ ಶತಕ" ಗ್ರಂಥದಲ್ಲಿ ಕನ್ನಡ ಶತಕ ಸಾಹಿತ್ಯದ ಒಂದು ಹೊಸ ಅಧ್ಯಾಯವನ್ನು ವಿದ್ವತ್ ಜನತೆಗೆ ತೋರಿಸಿದ ಕೀರ್ತಿ ಪ್ರೊ॥ ಸಿ. ಮಹಾದೇವಪ್ಪನವರದು. ಈ ಕೃತಿಯಲ್ಲಿ ಇಪತ್ತುಮೂರು ಕನ್ನಡ ಶತಕಗಳ ಪರಿಚಯ ಮಾಡಿ ಕೊಟ್ಟಿದ್ದಾರೆ.

ಮೈಸೂರಿನ ಶ್ರೀ ಜಿ.ಎ. ಶಿವಲಿಂಗಯ್ಯ ಅವರು ಶತಕ ಸಂಪುಟ–1 1995ರಲ್ಲಿ ತಮ್ಮ ಶಿವಕವಿ ಪ್ರಕಾಶನ ಸಂಸ್ಥೆ ಮೈಸೂರುನಿಂದ ಹೊರತಂದಿರುವ ಶತಕ ಸಂಪುಟದಲ್ಲಿ ಚಂದ್ರಕವಿಯ ಶಂಕರ ಶತಕ ಅಥವಾ ಗುರುಮೂರ್ತಿಶಂಕರ ಶತಕವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಅವರು ಸಂಪಾದಿಸಿದ ಶಂಕರ ಶತಕದಲ್ಲಿ 101 ಪದ್ಯಗಳು ಅಲ್ಲದೆ ಎಂಟು ಅಧಿಕ ಪದ್ಯಗಳು ಇವೆ.

ವಿದ್ವಾನ್ ಶ್ರೀ ನ. ಕೃಷ್ಣಜೋಯಿಸರು ಸಂಪಾದಿಸಿದ 1955ರಲ್ಲಿ ಪ್ರಕಟವಾದ ಪಂಪಾಸ್ಥಾನ ವರ್ಣನಂ ಅಥವಾ ವಿರೂಪಾಕ್ಷಾಸ್ಥಾನ ಮುದ್ರಿತ ಪುಸ್ತಕ ಚಂದ್ರಕವಿ ಬಗ್ಗೆ ಸಾಕಷ್ಟು ವಿಷಯವನ್ನು ತಿಳಿಸುತ್ತದೆ. ವಿಜಯನಗರ ಸಾಮ್ರಾಜ್ಯದ Sexcentenary Commemoration Volume 1936 ಪುಸ್ತಕವನ್ನು ಬಳಸಿಕೊಂಡಿದ್ದೇನೆ.

❑

16. ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾಯರು, ಹಂಪಿ : ಗಜೇಂದ್ರಗಡದ ಪಾತ್ರ

– ಡಾ. ಮಲ್ಲಿಕಾರ್ಜುನ ಕುಂಬಾರ

ಅಂದು ಕರ್ನಾಟಕವೆಂದರೆ ಏನೂ ಎಂಬ ಕಲ್ಪನೆಯೇ ಇಲ್ಲದ ಕಾಲದಲ್ಲಿ ಕರ್ನಾಟಕತ್ವದ ಬೀಜವನ್ನು ಬಿತ್ತಿ, ಸಾಮಾನ್ಯ ಮನೆತನದಲ್ಲಿ ಜನಿಸಿ, ಅಸಾಮಾನ್ಯ ಸಾಧನೆಯನ್ನು ಮಾಡಿದ ಕನ್ನಡ ಕುಲಪುರೋಹಿತ ಆಲೂರ ವೆಂಕಟರಾಯರನ್ನು ಅರಿಯದ ಕನ್ನಡಿಗರೇ ಇಲ್ಲ. ಪ್ರಾತಃಸ್ಮರಣೀಯರಾದ ಇವರನ್ನು ನೆನೆಯುವದೇ ರೋಮಾಂಚನಕಾರಿಯಾದ ಅನುಭವ. ತಮ್ಮ ಜೀವನದುದ್ದಕ್ಕೂ ಕರ್ನಾಟಕತ್ವವನ್ನು ಜಪಿಸಿದ; ಇವರಿಗೆ ಕನ್ನಡವು ಉಸಿರಾಗಿತ್ತು. ಅವರ ಜೀವಿತದ ಗುರಿ ಕರ್ನಾಟಕ ಏಕೀಕರಣ, ಕರ್ನಾಟಕ ನಿರ್ಮಾಣದ ಕಲ್ಪನೆಯ ಹೊರತು ಬೇರೇನೂ ಆಗಿರಲಿಲ್ಲ. ಏಕೆಂದರೆ 'ಕರ್ನಾಟಕ' ಎಂಬ ಶಬ್ದದಲ್ಲಿ ಕನ್ನಡ ನಾಡನ್ನೇ ಬಡಿದೆಬ್ಬಿಸುವ ಮಾಂತ್ರಿಕ ಶಕ್ತಿ ಇತ್ತು.

ಕರ್ನಾಟಕ ಏಕೀಕರಣದ ಕಿಡಿ ಹೊತ್ತಿದ್ದು ಮತ್ತು ಅದು ಅಸ್ತಿತ್ವಕ್ಕೆ ಬಂದದ್ದು ಧಾರವಾಡದ ನೆಲದಿಂದ, ಕರ್ನಾಟಕದ ಗತ ವೈಭವದ ಕನಸನ್ನು ಕಂಡು, ಕನ್ನಡದ ಪಾಂಚಜನ್ಯವನ್ನು ಮೊಳಗಿಸಿದ ಕನ್ನಡ ಪುರೋಹಿತ ಆಲೂರ ವೆಂಕಟರಾಯರು ಗದಗ ಜಿಲ್ಲೆಯ ರೋಣ ತಾಲೂಕಿನ ಹೊಳೆಆಲೂರವರು. ಇವರು ಮೂಲತಃ ಬಳ್ಳಾರಿ ಜಿಲ್ಲೆಯವರಾದರೂ ಈ ಮನೆತನದ ಹಿರಿಯರೊಬ್ಬರು ಅಂದಿನ ಆಂಗ್ಲ ಅಧಿಕಾರಿಯೊಬ್ಬರಿಗೆ ತುಂಬಾ ಬೇಕಾದವರಾಗಿದ್ದರು. ಅವರಿಂದ ಈ ಮನೆತನದವರು ಧಾರವಾಡಕ್ಕೆ ಬಂದರು. ಆಗ ವೆಂಕಟರಾಯರ ಅಜ್ಜ ಹೊಳೆಆಲೂರಿನಲ್ಲಿ ಅವರ ಅಳಿಯನ ಜಹಗೀರನ್ನು ನೋಡಿಕೊಳ್ಳುತ್ತಿದ್ದರು. ಹೀಗಾಗಿ ಇವರಿಗೆ 'ಆಲೂರ' ಎಂಬ ಹೆಸರು ಅಂಟಿಕೊಂಡಿತು. ಅವರಿಗೆ ಈ ಊರಿನ ಬಗ್ಗೆ ಎಲ್ಲಿಲ್ಲದ ಮೋಹವಿತ್ತು. ಇದರಿಂದ ಬಹಳಷ್ಟು ದಿನ ಹೊಳೆಆಲೂರಿನಲ್ಲಿದ್ದರು. ವಿದ್ವತ್ತಿನ ಮೇರು ಪರ್ವತದಂತಿದ್ದ ಇವರಿಗೆ ಅಂದು ಇತಿಹಾಸದಲ್ಲಿ ಕರ್ನಾಟಕದ ಬೇರುಗಳನ್ನು ಹುಡುಕುವದೇ ನಿತ್ಯದ ಕೆಲಸವಾಗಿತ್ತು. ಮನುಷ್ಯನ ಜೀವನದಲ್ಲಿ ಬಾಹ್ಯ ಸಂಸ್ಕಾರ, ಆಂತರಿಕ ಸಂಸ್ಕಾರ, ಅನುಕೂಲಕರ ವಾತಾವರಣ ಮುಪ್ಪುರಿಗೊಂಡಾಗ ಅವನ ಜೀವನಕ್ಕೊಂದು ಸರಿಯಾದ ಗುರಿಯನ್ನು ಒದಗಿಸುತ್ತದೆ. ಕಾಲವು ಕೂಡಿಬರಬೇಕೆಂದು ಹೇಳುತ್ತಾರಲ್ಲ ಅದನ್ನೆ, ಅದರಂತೆ ಆಲೂರ ವೆಂಕಟರಾಯರ ಜೀವನಕ್ಕೊಂದು ಹೊಸ ತಿರುವು ಒದಗಿಸುವ ಶುಭ ಗಳಿಗೆ ಬರುತ್ತದೆ. ವೆಂಕಟರಾಯರು ಎಲ್.ಎಲ್.ಬಿ ಓದುತ್ತಿರುವ ಸಮಯ. ಪರೀಕ್ಷೆಯ ನಂತರ ರಜೆಯನ್ನು ಕಳೆಯಲು ಹೊಳೆ ಆಲೂರಿಗೆ ಬಂದಿದ್ದರು. ಅವರದ್ದು ಮುಗ್ಧ ಏನೂ ಅರಿಯದ ಮನಸ್ಸು, ಇವರು ಆಗ ಬಾಲಗಂಗಾಧರ ತಿಲಕರಿಂದ ಪ್ರಭಾವಿತರಾಗಿ, ಸ್ವದೇಶಾಭಿಮಾನವು ಅಂತರಂಗದಲ್ಲಿ ತುಡಿಯುತ್ತಿತ್ತು. ಅವರು ಕರ್ನಾಟಕ ದೇವಿಯನ್ನು ತಮ್ಮ ಹೃದಯದಲ್ಲಿ ಒಡಮೂಡಿಸಿಕೊಂಡ ಆ ದರ್ಶನದ ಫಲವಾಗಿ ಅವರಿಗೆ ಕರ್ನಾಟಕವೆಂದರೆ ತೀಕ್ಷ್ಣವಾದ ಅಭಿಮಾನವು ಹುಟ್ಟಿಕೊಂಡಿತ್ತು.

ಒಂಬತ್ತು ಜನ ಪ್ರಸಿದ್ದ ವೈಷ್ಣವ ಸ್ವಾಮಿಗಳ ನವ ವೃಂದಾವನವುಳ್ಳ ಆನೆಗೊಂದಿಯಲ್ಲಿ ಇವರ ಸಮೀಪದ ಸಂಬಂಧಿಗಳಾದ ಬಲಕುಂದಿ ರಾಮರಾಯರು ಆ ಚಿಕ್ಕ ಸಂಸ್ಥಾನದಲ್ಲಿ ಕಾರಭಾರಿಗಳಾಗಿದ್ದರು. ಅಗ ಆಲೂರ ವೆಂಕಟರಾಯರಿಗೆ ಹಂಪೆಯ

ಹತ್ತಿರವೇ ಆನೆಗೊಂದಿ ಇದೆ ಎಂಬುವದು ಗೊತ್ತಿರಲಿಲ್ಲ. ಗಜೇಂದ್ರಗಡದ ಹೈಕೋರ್ಟಿನ ನ್ಯಾಯಮೂರ್ತಿಗಳಾಗಿದ್ದ ಪಿ.ಬಿ.ಗಜೇಂದ್ರಗಡಕರ ಅವರು ಆಲೂರ ವೆಂಕಟರಾಯರ ಸಮೀಪದ ಆಪ್ತ ಬಂಧುಗಳಾಗಿದ್ದರು. ಪಿ.ಬಿ.ಗಜೇಂದ್ರಗಡಕರವರ ತಂದೆ ಬಾಳಾಚಾರ್ಯರು, ಮತ್ತು ಇವರ ಮನೆಯ ಗುರುಗಳಾದ ಸಮೀರಣಾಚಾರ್ಯರ ಪಾಂಗರಿಯವರು ವೆಂಕಟರಾಯರೊಂದಿಗೆ ವಹಿವಾಟದಂತೆ ಹೊಳೆ ಆಲೂರಲ್ಲಿದ್ದರು. ಇವರು ವೆಂಕಟರಾಯರನ್ನು ಸಹಜವಾಗಿ ಬಂಧುಗಳಾದ ಬಲಕುಂದಿ ರಾಮರಾಯರನ್ನು ಕಾಣಲು ಮೇ.4, 1905 ರಲ್ಲಿ ಆನೆಗೊಂದಿಗೆ ಕರೆದುಕೊಂಡು ಹೋದರು. ಆಗ ಹಂಪಿಯ ಹತ್ತಿರದ ಆನೆಗೊಂದಿಯಲ್ಲಿ ವಿಜಯನಗರದ ಅರಸರಿದ್ದರೆಂದು ಅವರಿಗೆ ಗೊತ್ತಿರಲಿಲ್ಲ. ಈ ಐತಿಹಾಸಿಕ ವಿಜಯನಗರವು, ಪೂರ್ವ ದಂಡೆ ಸಮೀಪದಲ್ಲಿರುವ ಆಂಧ್ರದಲ್ಲಿರುವ ವಿಜಯನಗರವೆಂದು ಇವರ ತಿಳುವಳಿಕೆ. ಕರ್ನಾಟಕಕ್ಕೂ ಆ ಹಂಪೆ ಆನೆಗುಂದಿಗೂ ಏನಾದರೂ ಐತಿಹಾಸಿಕ ಸಂಬಂಧ ಇತ್ತೆಂಬುದರ ಅರಿವಾಗಲಿ, ಆನೆಗೊಂದಿ ಮತ್ತು ವಿಜಯನಗರವು(ಹಂಪೆ) ಕರ್ನಾಟಕದಲ್ಲಿವೆ ಎಂದು ಅವರಿಗೆ ತಿಳಿದಿರಲಿಲ್ಲ. ಹಂಪೆಯು ಗದಗಿನಿಂದ ಕೇವಲ ಎರಡು ಗಂಟೆಗಳ ಹಾದಿ ಎಂಬುದನ್ನು ತಿಳಿದು ಅವರಿಗೆ ಆಶ್ಚರ್ಯವಾಯಿತು.

ಇವರನ್ನು ಆನೆಗೊಂದಿಯ ಪರಿಸರದಲ್ಲಿ ಗಜೇಂದ್ರಗಡದ ಬಾಳಾಚಾರ್ಯ ಗಜೇಂದ್ರಗಡಕರರು ಮತ್ತು ಮನೆ ಗುರುಗಳಾದ ಸಮೀರಣಾಚಾರ್ಯರ ಪಾಂಗರಿಯವರು ಕರೆದುಕೊಂಡು ಸುತ್ತಾಡಿದರು. ಈ ಅಲೆದಾಟ,. ಅವರ ಮನಸ್ಸಿನ ತುಡಿತವನ್ನು ಹೆಚ್ಚಿಸಿತು. ಅಲ್ಲಿನ ದೀನ ಸ್ಥಿತಿಯನ್ನು ಕಂಡು ಮಮ್ಮಲನೆ ಮರುಗಿದರು. ಆಗ ಅವರ ಮನಸ್ಸು ಕರ್ನಾಟಕದ ಬಗ್ಗೆ ಗಹನವಾದ ಆಲೋಚನೆಗೆ ತೊಡಗಿತು. ಕರ್ನಾಟಕದ ಬಗೆಗಿನ ಅಭಿಮಾನ ಶೂನ್ಯತೆಯೆ ಈ ನಾಡಿನ ದುಸ್ಥಿತಿಗೆ ಕಾರಣವೆಂದು ಅರಿತು, ಈ ನಾಡಿನ ಗತವೈಭವವನ್ನು ಕನ್ನಡಿಗರ ಮುಂದಿಡುವದೇ ಇದಕ್ಕೆ ಉಪಾಯವೆಂದು ಮನಗಂಡರು. ಹಂಪೆಯ ಆರಾಧ್ಯ ದೈವ ವಿರೂಪಾಕ್ಷ ಹಾಗೂ ಭುವನೇಶ್ವರಿಯ ಸಾನಿಧ್ಯದಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ಸಂಕಲ್ಪ ತೊಡುತ್ತಾರೆ. ಅಂದಿನ ಪ್ರೇರಣೆಯ ಪ್ರಭಾವದಿಂದ 1907 ರಲ್ಲಿ ತಮ್ಮ ಸಂಪಾದಕತ್ವದಲ್ಲಿ ಧಾರವಾಡದಿಂದ ಹೊರಬರುತ್ತಿದ್ದ 'ಕರ್ನಾಟಕ ವಿದ್ಯಾವರ್ಧಕ ಸಂಘ'ದ ಮುಖವಾಣಿ 'ವಾಗ್ಭೂಷಣ' ಪತ್ರಿಕೆಯಲ್ಲಿ ಕರ್ನಾಟಕದ ಏಕೀಕರಣದ ಬಗ್ಗೆ ಸುದೀರ್ಘವಾದ ಲೇಖನವನ್ನು ಬರೆಯುತ್ತಾರೆ. (1890 ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘವು ಭಾಷೆ, ಸಂಸ್ಕೃತಿಗಳ ರಕ್ಷಣೆಗೆ ಆರಂಭವಾದ ದೇಶದ ಮೊದಲ ಸಂಸ್ಥೆ ಎನ್ನುವದು ಅಭಿಮಾನ ಪಡಬೇಕಾದ ಸಂಗತಿ)ಇದರೊಂದಿಗೆ ಅದೇ ವರ್ಷ ಉತ್ಸಾಹಿ ಕನ್ನಡಿಗರನ್ನು ಒಗ್ಗೂಡಿಸುವ ನಿಟ್ಟಿನಲ್ಲಿ 'ಅಖಿಲ ಕರ್ನಾಟಕ ಗ್ರಂಥ ಕರ್ತರ' ಸಮ್ಮೇಳನವನ್ನು ಸಂಘಟಿಸಿದರು. ಇದು ಇತಿಹಾಸ.

ಇದಾದ ನಂತರ 3–4 ಸಲ ಹಂಪೆಗೆ ಹೋದಾಗ ಅಲ್ಲಿನ ನೆಲದಲ್ಲಿ ಹೂಳು ತುಂಬಿಕೊಂಡಿತ್ತು. ಆಗ ಹಳೆ ಕಟ್ಟಡಗಳ ಸಂರಕ್ಷಣಾ ಕಾನೂನು ಜಾರಿಯಾಗಿ(ಇದನ್ನು 1903ರಲ್ಲಿ ಲಾರ್ಡ ಕರ್ಜನ್ ಜಾರಿಗೆ ತಂದಿದ್ದರು) ಆ ಹೂಳನ್ನು ಹೊರತೆಗೆಯುವ ಕಾರ್ಯ ಭರದಿಂದ ನಡೆದಿತ್ತು. ಕೃಷ್ಣದೇವರಾಯ ಮಂದಿರದ ಎದುರಿನ ರಸ್ತೆಯು 25–30ಅಡಿ ಹೂತು ಹೋದ ಕೆಸರನ್ನು ತೆಗೆಯುತ್ತಿದ್ದರು. ವಿರೂಪಾಕ್ಷ ದೇವಾಲಯದ ಮುಂದಿನ ರಸ್ತೆಯನ್ನು ಮುಳ್ಳುಕಂಟಿ, ಕೆಸರಿನಿಂದ ಮುಕ್ತಗೊಳಿಸುತ್ತಿದ್ದರು. ಈ ಸಂದರ್ಭದಲ್ಲಿ ಆಲೂರ ವೆಂಕಟರಾಯರು ಋಷ್ಯಮೂಕ ಪರ್ವತ, ಮಾತಂಗಪರ್ವತ, ಆಂಜನೇಯ ಬೆಟ್ಟ, ಪಂಪಾಸರೋವರ, ವಾಲಿಕಾಷ್ಠ, ವಾಲಿಭಂಡಾರ, ಶಬರಿ ಗುಹೆಗಳ ಸ್ಥಿತಿಯನ್ನು ನೋಡಿ ಆಶ್ಚರ್ಯಪಡುತ್ತಾರೆ. ವಿಜಯನಗರ ಪತನಾನಂತರ ದೀರ್ಘಕಾಲ ಅಸಹಾಯಕ ಸ್ಥಿತಿಯಲ್ಲಿದ್ದ ಕನ್ನಡಿಗರ ಸಹನೆಯ ಬಗ್ಗೆ ಅಸಹ್ಯ ಪಟ್ಟುಕೊಂಡು, ಕರ್ನಾಟಕದ ಮರ್ಮ ಸ್ಥಾನದಲ್ಲಿರುವ ಹಂಪೆಯ ವೈಭವವನ್ನು ನೆನಪಿಸುವ ಸಂಸ್ಕೃತಿ ಮತ್ತು ವಿದ್ಯಾ ಕೇಂದ್ರವನ್ನಾಗಿಸಿ ಮೆರೆಯಿಸುವ ಸಂಕಲ್ಪವನ್ನು ಹೊಂದುತ್ತಾರೆ. ತಾವು ಶಿಕ್ಷಕ ವೃತ್ತಿಯಲ್ಲಿರುವ ಧಾರವಾಡ ನೆಲದಿಂದ ತಮ್ಮ ನೂರಾರು ವಿದ್ಯಾರ್ಥಿಗಳನ್ನು ಹಂಪೆಗೆ ಕರೆದುಕೊಂಡು ಬಂದು ಅಲ್ಲಿನ ಕೊಳೆಯನ್ನು ಸ್ವಚ್ಛಗೊಳಿಸುವದರೊಂದಿಗೆ ಅಲ್ಲಿ ರಾಷ್ಟ್ರೀಯ ಉತ್ಸವನ್ನು ಏರ್ಪಡಿಸುತ್ತಾರೆ. "ಅಲ್ಲಿ ಭೇಟಿ ನೀಡಿದ, ಅಡಿಹಾಕಿದ, ನನ್ನ ಜೀವನದ ಪಾಡುಮಾವು, ನಾಲ್ಕೆಂಟು ತಿಂಗಳಲ್ಲಿ ಹಣ್ಣಾಯಿತು"ಎಂದು ಮನದುಂಬಿ ಹೇಳುತ್ತಾರೆ. ಮುಂದೆ 1922ರಲ್ಲಿ ನಡೆದ ದಾವಣಗೇರಿ ಸಾಹಿತ್ಯ ಸಮ್ಮೇಳನದಲ್ಲಿ ಪಂಪಾಕ್ಷೇತ್ರದ ಜೀರ್ಣೋದ್ದಾರ

ಸಮಿತಿಯನ್ನು ಹುಟ್ಟುಹಾಕಿದರು, ಮುಂದೆ 1926ರಲ್ಲಿ ಬೆಳಗಾವಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ವಿಜಯನಗರದ 600 ವರ್ಷಗಳ ಸ್ಮಾರಕ ಮಹೋತ್ಸವವನ್ನು ಸರ್ಕಾರ 1929ರಲ್ಲಿ ಮಾಡುವದಾಗಿ ನಿಶ್ಚಯಿಸುತ್ತದೆ. ಆದರೆ ಹಣದ ಕೊರತೆ ಮುಂದೆ ಬಂದಾಗ ಇವರಿಗೆ ಕನ್ನಡನಾಡಿನ ವೃತ್ತಿರಂಗಭೂಮಿಯು ನೆರವಿಗೆ ಬರುತ್ತದೆ. ಬಿಜಾಪೂರದ 'ಲಲಿತ ಕಲೋದ್ಧಾರಕ ನಾಟಕ ಮಂಡಳಿ"ಯಿಂದ ನಾಟಕಕಾರ ಕರ್ನಾಟಕದ ಶೇಕ್ಸಫಿಯರ್ ಖ್ಯಾತಿಯ ಕಂದಗಲ್ಲ ಹನುಮಂತರಾಯರಿಂದ 'ವಿಜಯನಗರ ಸಾಮ್ರಾಜ್ಯ ಸ್ಥಾಪನೆ' ಅಥವಾ 'ವರಪ್ರಧಾನ' ಎಂಬ ನಾಟಕವನ್ನು ಬರೆಯಿಸಿದ್ದಲ್ಲದೇ ಅದನ್ನು ಪ್ರದರ್ಶಿಸಿ ಅದರಿಂದ ಬಂದ ಹಣವನ್ನು (1933) ಪಡೆದುಕೊಂಡು ಮುಂದಿನ ಕಾರ್ಯಕ್ಕೆ ಅಣಿಯಾಗುತ್ತಾರೆ ಇದು ಇತಿಹಾಸ. ವಿಜಯನಗರವನ್ನು 'ಕರ್ನಾಟಕ ರಾಜ್ಯ'ವೆಂದು ಕರೆಯುವದು ವಾಡಿಕೆ. 'ಕರ್ನಾಟಕ ರಾಜ್ಯ ರಮಾರಣ' ಎಂಬ ಬಿರುದಿಗೆ ಭಾಜನನಾದ ಕೃಷ್ಣದೇವರಾಯನು 'ಕರ್ನಾಟಕ ರಾಜ್ಯ ವೃತ್ತಾಂತ' ಕೃತಿ ಬರೆದದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಈ ಕರ್ನಾಟಕತ್ವವು, ಅದರ ಒಳಗಿರುವ ವಿಜಯನಗರ(ಹಂಪೆ)ವೈಭವವು ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾಯರ ಕುತೂಹಲಕ್ಕೆ ಕಾರಣವಾಗಿರಬೇಕು. ಅಲ್ಲಿ ಹರಿಹರನಂತಹ ಕವಿಗಳು. ಪ್ರೌಢರಾಯನಂತಹ ಅರಸರು ತಮ್ಮ ಅಂಕಿತವನ್ನು ವಿರೂಪಾಕ್ಷನೆಂದು ದಾಖಲಿಸಿಕೊಂಡರೆ, ಕರ್ನಾಟಕವೆಂದರೆ ಆಲೂರ ವೆಂಕಟರಾಯರಿಗೆ ವಿಜಯನಗರ, ಹಂಪೆಯ ವೈಭವವೆಂದು ಮನತಣಿಸಿ, ಅದಕ್ಕೆ ಅವರು ಮಾರುಹೋದರು.

ಅಂದು ಆನೆಗೊಂದಿಗೆ ಆಕಸ್ಮಿಕ ಭೇಟಿ ನೀಡದಿದ್ದರೆ ಅವರಲ್ಲಿ ಅಖಂಡ ಕರ್ನಾಟಕತ್ವದ ಕಲ್ಪನೆಯ ಆ ದೃಶ್ಯದ ಉಗಮ ಆಗುತ್ತಿರಲಿಲ್ಲವೇನೋ? ವೆಂಕಟರಾಯರಿಗೆ ಆನೆಗೊಂದಿ ಮತ್ತು ಹಂಪೆಯ ಪರಿಚಯವೇ ಇಲ್ಲದ ಸಂದರ್ಭದಲ್ಲಿ ಆ ಭೇಟಿಗೆ ಕಾರಣರಾಗಿ, ಇವರನ್ನು ಕರೆದುಕೊಂಡು ಹೋದವರಲ್ಲಿ ಅವರ ಮನೆಯ ಗುರುಗಳು ಮತ್ತು ಗಜೇಂದ್ರಗಡದ ಬಾಳಾಚಾರ್ಯ ಗಜೇಂದ್ರಗಡಕರರು ಎಂಬುದನ್ನು ಮರೆಯುವಂತಿಲ್ಲ. 'ಕರ್ನಾಟಕ ದೇವಿ ಮಂದಿರ ಹಂಪೆಯಲ್ಲಿ ಮಂದವಾಗಿ ಉರಿಯುತ್ತಿರುವ ಹೂಬತ್ತಿ ನಾನು' ಎಂದು ವೆಂಕಟರಾಯರು ವಿನೀತರಾಗಿ ನುಡಿಯುತ್ತಾರೆ. ಆ ಹೂಬತ್ತಿಗೆ ತೈಲವನ್ನೆರೆದು ಕರ್ನಾಟಕತ್ವದ ಬೀಜಾಂಕುರ ಹಾಕಿ, ಅವರು ಕನ್ನಡ ದೀಕ್ಷೆಯನ್ನು ತೊಡುವಲ್ಲಿ ಗಜೇಂದ್ರಗಡದ ಪಾತ್ರವೂ ಇತ್ತೆಂಬುವದು ಇದರಿಂದ ಸ್ಪಷ್ಟವಾಗುತ್ತದೆ.

ಆಧಾರಸೂಚಿ :

1) **ಕರ್ನಾಟಕತ್ವದ ವಿಕಾಸ,** ಆಲೂರ ವೆಂಕಟರಾಯರು(ಕಸಾಪ)
2) **ನವಕರ್ನಾಟಕ ನಿರ್ಮಾಪಕರು,** ಭಾಗ.1, ಪಾಟೀಲ ಪುಟ್ಟಪ್ಪ(ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, 1983)
3) 'ವಾಗ್ಭೂಷಣ' ಮಾಸ ಪತ್ರಿಕೆಗಳು ಧಾರವಾಡ(ಸಂ. ಆಲೂರ ವೆಂಕಟರಾಯರು)

❑

17. ಗಂಗಾವತಿ ಪ್ರದೇಶ : ವಿಜಯನಗರ ಕಾಲದ ಜೈನ ಸ್ಮಾರಕಗಳು

- ಡಾ. ಶರಣಬಸಪ್ಪ ಕೋಲ್ಕಾರ

ಕರ್ನಾಟಕಕ್ಕೂ ಜೈನ ಧರ್ಮಕ್ಕೂ ಬಹಳ ನಿಕಟವಾದ ಸಂಬಂಧವಿದೆ. ಜೈನ ತೀರ್ಥಂಕರರೆಲ್ಲರೂ ಉತ್ತರ ಭಾರತದವರಾದರೆ, ಜೈನಾಚಾರ್ಯರಾದ ಕುಂದಕುಂದ, ಸುಮಂತಭದ್ರ, ಪೂಜ್ಯಪಾದ, ಕವಿ ಪರಮೇಷ್ಠಿ, ಅಕಲಂಕ ಮುಂತಾದವರು ಕರ್ನಾಟಕದವರಾಗಿರುವುದು ವಿಶೇಷವಾಗಿದೆ. ಇವರೆಲ್ಲರೂ ಮುನಿ ಧರ್ಮವನ್ನು ಆಚರಿಸಿ 'ಶ್ರಾವಕ ಧರ್ಮ'ವನ್ನು ಬೋಧಿಸಿದರು. ಶ್ರವಣಬೆಳಗೊಳದ ಒಂದು ಶಾಸನ ಕ್ರಿ.ಪೂ. 3ನೇ ಶತಮಾನದಲ್ಲಿ ಉತ್ತರದಿಂದ ದಕ್ಷಿಣ ದೇಶಕ್ಕೆ ಬಂದ ಭದ್ರಬಾಹು ಮುನಿಗಳೂ ಅವರ ಶಿಷ್ಯನಾದ ಚಂದ್ರಗುಪ್ತ ಮೌರ್ಯನು ಕಟವಪ್ಪ ಅಥವಾ ಕಳ್ವಪ್ಪು (ಚಂದ್ರಗಿರಿ) ಎಂಬ ಬೆಟ್ಟದಲ್ಲಿ ಸಲ್ಲೇಖನ ವೃತ್ತದಿಂದ ಸಮಾಧಿ ಹೊಂದಿದನೆಂದು ಹೇಳಿದೆ.[1] ಈ ಸಂಗತಿಗಳಿಂದ ಕರ್ನಾಟಕ ಅತೀ ಪ್ರಾಚೀನ ಕಾಲದಿಂದಲೂ ಜೈನಧರ್ಮದ ವಿಕಾಸಕ್ಕೆ ಆಶ್ರಯಸ್ಥಾನವಾಗಿದೆ ಎಂದು ಹೇಳಬಹುದು. ಕೊಪ್ಪಳ ಪ್ರದೇಶವು ಪ್ರಾಚೀನ ಕಾಲದಿಂದಲೂ ಜೈನರ ಆವಾಸ ಸ್ಥಾನವಾಗಿದೆ. ಕೊಪ್ಪಳವು ಸುಮಾರು 9ನೇ ಶತಮಾನದಿಂದ 14ನೆಯ ಶತಮಾನದವರೆಗೆ ಶ್ರವಣಬೆಳಗೊಳಕ್ಕೆ ಸರಿಸಮಾನವೆನ್ನುವಂತೆ ಒಂದು ಪ್ರಸಿದ್ಧ ದಿಗಂಬರ ಪಂಥದ ಜೈನ ಕ್ಷೇತ್ರವಾಗಿದ್ದಿತು. ಅದು ತೀರ್ಥಕ್ಷೇತ್ರ, ಆದಿತೀರ್ಥ, ಮಹಾತೀರ್ಥ ಎಂಬ ವಿಶೇಷ ಅಭಿದಾನಗಳನ್ನು ಹೊಂದಿತ್ತು. ಕವಿ ರನ್ನ ತನ್ನ ಅಜಿತನಾಥ ಪುರಾಣದಲ್ಲಿ 'ನೆಗಳ್ದ ಕೊಪಣಾಚಲದಂತೆ ಪವಿತ್ರ ಮತ್ತಿಮಬ್ಬೆಯ ಚರಿತಂ' ಎಂದು ಹೇಳಿರುವುದು. ಜೈನ ಧರ್ಮದಲ್ಲಿ ಕೊಪ್ಪಳ ಕ್ಷೇತ್ರದ ಪಾವಿತ್ರ್ಯತೆಯನ್ನು ಪ್ರತಿಬಿಂಬಿಸುತ್ತದೆ.[2] ಕೊಪ್ಪಳ ಜಿಲ್ಲೆಯ ಒಂದು ತಾಲೂಕಾದ ಗಂಗಾವತಿ ಪ್ರದೇಶವೂ ಕೂಡಾ ಪ್ರಾಚೀನ ಕಾಲದಿಂದಲೂ ಜೈನಧರ್ಮದ ನೆಲೆಯಾಗಿತ್ತು ಎಂಬುದಕ್ಕೆ ಇಲ್ಲಿ ದೊರೆವ ಜೈನ ಬಸದಿ, ಶಾಸನ, ಶಿಲ್ಪಗಳು ಸಾಕ್ಷಿಯಾಗಿವೆ. ಈ ಎಲ್ಲ ಆಕರಗಳನ್ನು ಇರಿಸಿಕೊಂಡು ಗಂಗಾವತಿ ಪ್ರದೇಶದ ವಿಜಯನಗರ ಕಾಲದ ಜೈನ ಸಂಸ್ಕೃತಿಯನ್ನು ಗುರುತಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಹಿನ್ನೆಲೆ :

ಗಂಗಾವತಿ ಪ್ರದೇಶವು ವಿಜಯನಗರ ಪೂರ್ವದಿಂದಲೂ ಜೈನ ಧರ್ಮಿಯರ ಆವಾಸದ ನೆಲೆಯಾಗಿತ್ತು. ತಾಲೂಕಿನ ಹೆಬ್ಬಾಳ ಗ್ರಾಮದಲ್ಲಿರುವ ಕ್ರಿ.ಶ 10ನೆ ಶತಮಾನದ ತ್ರುಟಿತ ಶಾಸನದಲ್ಲಿ[3] ಸತ್ಯವಾಕ್ಯ ಕೊಂಗುಣಿ, ಕೋಳಾಲ ಪುರವರಾಧೀಶ್ವರ ಪದ್ಮಾವತಿ ವರಲಬ್ಧ ವರಪ್ರಸಾದ ಮುಂತಾದ ಶಬ್ದಗಳಿರುವುದರಿಂದ ಇದು ತಲಕಾಡಿನ ಗಂಗರ ಶಾಸನವೆಂಬುದು ಸ್ಪಷ್ಟ. ಕೊಪ್ಪಳವನ್ನು ಅನುಲಕ್ಷಿಸಿಕೊಂಡು ಹೇಳುವುದಾದರೆ ಜೈನರಾದ ಗಂಗರೊಂದಿಗೆ ಜೈನಧರ್ಮ ತಾಲೂಕು ಪ್ರದೇಶದಲ್ಲಿ ಪ್ರವೇಶ ಪಡೆದುಕೊಂಡಿರುವುದನ್ನು ತರ್ಕಿಸಬಹುದು.

ತಾಲೂಕಿನ ಹೇರೂರು ಗ್ರಾಮದಲ್ಲಿರುವ ಹನ್ನೆರಡನೆಯ ಶತಮಾನದ ವೀರಗಲ್ಲಿನಲ್ಲಿ ಪೆರ್ಗ್ಗಡೆ ಜಿನಯ್ಯ ಯುದ್ಧದಲ್ಲಿ ವೀರಮರಣ ಹೊಂದಿದ್ದನ್ನು ಅನುಸರಿಸಿ ಆತನ ಮಡದಿ ಕಾವಬ್ಬೆ ಮಡಿದ (ಸತಿಹೋದ) ವಿಷಯವನ್ನು ತಿಳಿಸುತ್ತದೆ.[4] ಈ ವೀರ ಜೈನ ಧರ್ಮಿಯನಾಗಿರಬಹುದೆಂದು ಆತನ ಹೆಸರಿನಿಂದ ಹೇಳಬಹುದಾಗಿದೆ. ಇದೇ ಗ್ರಾಮದ ಕಲ್ಲೇಶ್ವರ ದೇವಾಲಯದ

ಮುಂದೆ ಒಂದು ಜೈನ ನಿಸದಿ ಶಿಲ್ಪವಿದೆ. ಮೇಲೆ ಜಿನ ಬಿಂಬವಿದ್ದು ಮೇಲೆ ಮುಕ್ಕೊಡೆ ಎರಡು ಬದಿಯಲ್ಲಿ ಚಾಮರಗಳಿವೆ. ಕೆಳ ಬಾಗದಲ್ಲಿ ಭೋದಿಸುತ್ತಿರುವ ಗುರು ಅತನ ಮುಂದೆ ಆಲಿಸುತ್ತಿರುವ ಶಿಷ್ಯನ ಶಿಲ್ಪವಿದೆ. ಹೀಗಾಗಿ ಇದು ಸಲ್ಲೇಖನ ವೃತ ಗೈದ ವ್ಯಕ್ತಿಯ ಸ್ಮರಣಾರ್ಥ ಹಾಕಿಸಿದ ನಿಸದಿಗಲ್ಲು ಎಂದು ಹೇಳಬಹುದು.

ನಿಷದಿ ಶಾಸನಗಳು :

ಗಂಗಾವತಿ ತಾಲೂಕು ಪ್ರದೇಶದಲ್ಲಿ ಈವರೆಗೆ ಹತ್ತು ನಿಷಧಿ ಶಾಸನಗಳು ಕಂಡು ಬಂದಿವೆ. ಆನೆಗೊಂದಿಯ ಗವಿರಂಗನಾಥ ದೇವಾಲಯದ ಬಳಿ ರಸ್ತೆಯಲ್ಲಿ ಎಡಗುಂಡಿನ ಮೇಲೆ ಕ್ರಿ.ಶ.1371 ರಲ್ಲಿ ಮೂಲ ಸಂಘ ಬಲಾತ್ಕಾರಗಣದ ಧರ್ಮಭೂಷಣ ಭಟ್ಟಾರಕರ ಪ್ರಿಯಶಿಷ್ಯ ಬೂಚಣನು ನಿಷದಿಯಾದುದನ್ನು ತಿಳಿಸುತ್ತದೆ.[5] ದೇವಾಲಯದ ಮೆಟ್ಟಿಲು ಬಲಬಂಡೆಯಲ್ಲಿರುವ ಶಾಸನ ಅಸ್ಪಷ್ಟವಿದ್ದು, ಶಕವರ್ಷ 1312ರ ಉಲ್ಲೇಖವಿದೆ.[6] ಅಲ್ಲಿಯ ಇನ್ನೊಂದು ಶಾಸನವು ವ್ಯಕ್ತಿಯೊಬ್ಬ ನಿಷಧಿಯಾದುದನ್ನು ಉಲ್ಲೇಖಿಸುತ್ತದೆ.[7] ಮತ್ತೊಂದು ಶಾಸನ ಕ್ರಿ.ಶ.1375ಕ್ಕೆ ಸರಿ ಹೊಂದುತ್ತಿದ್ದು, ಮೂಲಸಂಘ ಬಲಾತ್ಕಾರ ಗಣದ ಮದನ ಕೀರ್ತಿರವುಳನ ಪ್ರಿಯ ಶಿಷ್ಯ ಬೆನ್ನೂರು ಚಿಕ್ಕಣ್ಣನ ಮಗ ನಾಗಪ್ಪ ನಿಷದಿಯಾದುದನ್ನು ತಿಳಿಸುತ್ತದೆ.[8] ಎರಡನೆಯ ಶಾಸನ ಕ್ರಿ.ಶ.1366ರ ಕಾಲದ್ದು, ಮೂಲ ಸಂಘ ದೇವಿಗಣದ ನರೇಂದ್ರಸೇನನ ಪ್ರಿಯಶಿಷ್ಯ ಹಾನಿಯ ಲಖ್ಖಿಸೆಟ್ಟಿಯ ಮಗ ಗೋಪಿಶೆಟ್ಟಿ ನಿಷಧಿಯಾದದ್ದನ್ನು ತಿಳಿಸುತ್ತದೆ.[9] ಆರನೇ ಶಾಸನದ ವಿವರ ಹಾಳಾಗಿದ್ದು, ಸ್ವಸ್ತಿಶ್ರೀ ಶಕವರ್ಷ 1391 ಎಂದಿದೆ.[10] ಏಳನೆಯ ಶಾಸನ ಕ್ರಿ.ಶ. 1371ರ ಕಾಲದ್ದು, ಹೊನ್ನಹಟ್ಟಿಯ ಸಮಿತಿಯ ಮಗಳು ಸೊಯಿಸೆಟ್ಟಿಯು ನಿಷದಿಯಾದುದ್ದನ್ನು ಉಲ್ಲೇಖಿಸಿದೆ.[11] ಆನೆಗೊಂದಿಯ ಚಿಂತಾಮಣಿ ಮಠದ ಮುಂದೆ ನದಿ ಮಧ್ಯದ ಗುಂಡಿನಲ್ಲಿ ಕ್ರಿ.ಶ.1357ರ ಕಾಲದ ಶಾಸನದಲ್ಲಿ ಪ್ರಧಾನೋತ್ತಮ ಬುಳ್ಳರಾಜನ ಪತ್ನಿ ಕಾಳುಬಾಯಿಯ ಸಮ್ಯಕ್ತ್ ವೃತ ಪೂರ್ವಕವಾಗಿ ಬಾಲಚಂದ್ರಯೋಗಿಂದ್ರನ ಪದಕಮಲಗಳಲ್ಲಿ ದೀಕ್ಷೆ ಸ್ವೀಕರಿಸಿ ಮುಡುಪಿದುದನ್ನು ತಿಳಿಸುತ್ತದೆ.[12] ಆನೆಗೊಂದಿಯ ನವವೃಂದಾವನಕ್ಕೆ ತೆರಳುವ ಮಾರ್ಗದಲ್ಲಿ, 64 ಕಂಬಗಳ ಮಂಟಪದ ಈಶಾನ್ಯಕ್ಕಿರುವ ಬಂಡೆಯಲ್ಲಿರುವ ಶಾಸನ ಕ್ರಿ.ಶ.1325ರ ಕಾಲದ್ದು, ಲಳಿತಕೀರ್ತಿ ಬಟ್ಟಾರಕನ ಶಿಷ್ಯೆಯೂ, ಗೋಪಿಸೆಟ್ಟಿಯ ಸೊಸೆಯಾದ ಸೋವಿಯಕ್ಕನ ನಿಷಧಿಯನ್ನು ತಿಳಿಸುತ್ತದೆ.[13] ಹಿರೇಜಂತಕಲ್ ಗ್ರಾಮದ ವೀರಭದ್ರೇಶ್ವರ ಬೆಟ್ಟದಲ್ಲಿಯ ನಿಷದಿ ಶಾಸನ ಶಿಲ್ಪ ಸಮೇತ ಇದೆ. ಬೋಧಿಸುತ್ತಿರುವ ಗುರು, ಆಲಿಸುತ್ತಿರುವ ಶಿಷ್ಯ, ತೀರ್ಥಂಕರ ಹಾಗೂ ಗ್ರಂಥದ ಶಿಲ್ಪಗಳಿವೆ. ಪ್ರಾಯಶಃ ಕಂಪಿಲೆಯ ವ್ಯಕ್ತಿಯೋರ್ವನ ಸ್ವರ್ಗಲೋಕ ಪ್ರಾಪ್ತಿಯನ್ನು ತಿಳಿಸುತ್ತದೆ.[14] ಈ ನಿಷದಿಗಳಿಂದ ವಿಜಯನಗರ ಪೂರ್ವ ಹಾಗೂ ವಿಜಯನಗರ ಕಾಲಗಳಲ್ಲಿ ಜೈನ ಗೃಹಸ್ಥರು, ಮಹಿಳೆಯರು ಸಲ್ಲೇಖನ ವೃತವನ್ನು ಆಚರಿಸಿ ಮಡಿದ ಸಂಗತಿಗಳ ಜೊತೆಗೆ ಸಮಕಾಲೀನ ಜೈನ ಧರ್ಮಾಚಾರ್ಯರು, ಜೈನ ಗಣಗಳ ಬಗೆಗೂ ತಿಳಿಯುತ್ತದೆ. ತುಂಗಭದ್ರಾ ನದಿ ತೀರ, ಬೆಟ್ಟ ಗುಡ್ಡಗಳ ಪ್ರದೇಶವಾದ ಗಂಗಾವತಿ–ಆನೆಗೊಂದಿಗೆ ಸಲ್ಲೇಖನ ವ್ರತಕ್ಕಾಗಿ ಬೇರೆ ಬೇರೆ ಸ್ಥಳಗಳಿಂದ ಜೈನರು ಬರುತ್ತಿದ್ದರೆಂಬ ಸಂಗತಿಯನ್ನು ನಿಷಧಿಗಳು ಉಲ್ಲೇಖಿಸುತ್ತವೆ. ಆನೆಗೊಂದಿ ಗವಿರಂಗನಾಥ ದೇವಾಲಯ ಬಳಿಯ ಕ್ರಿ.ಶ 1371ರ ಕಾಲದ ಶಾಸನದಲ್ಲಿ ನಿಷದಿಯಾದ ಸೊಯಿಸೆಟ್ಟಿಯ ಹೊನ್ನಹಟ್ಟಿಯ ಸಯಿತಿಯ ಮಗಳೆಂದಿದೆ. ಇಲ್ಲಿಯ ಹೊನ್ನ ಹಟ್ಟಿ ಇಂದಿನ ಚಿನ್ನದ ಗಣಿಯ 'ಹಟ್ಟಿ'ಯಾಗಿದೆ ಆನೆಗೊಂದಿಯ ಕಡೇಬಾಗಿಲ ಬಳಿ ಕ್ರಿ.ಶ. 1561ರ ಕಾಲದ ತ್ರುಟಿತ ಶಾಸನವೊಂದಿದ್ದು,[15] 'ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛನಂ ಜೀಯಾ ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ' ಎಂಬ ಜೈನ ಪ್ರಾರ್ಥನಾ ಶ್ಲೋಕವನ್ನು ಮಾತ್ರ ಹೊಂದಿದೆ.

ಜೈನಬಸದಿಗಳು :

ಗಂಗಾವತಿ ತಾಲ್ಲೂಕಿನ ಎರಡು ಶಾಸನಗಳಲ್ಲಿ ಜೈನಬಸದಿಗಳ ಉಲ್ಲೇಖ ಬರುತ್ತವೆ. ಹಣವಾಳ ಗ್ರಾಮದ ಕ್ರಿ.ಶ. 1335ರ ಕಾಲದ ತ್ರುಟಿತ ಶಾಸನದಲ್ಲಿ ಜೀರ್ಣ ಜಿನಾಲಯದ ಉಲ್ಲೇಖ ಬರುತ್ತದೆ.[16] ಆದರೆ ಪ್ರಸ್ತುತ ಹಣವಾಳ ಗ್ರಾಮ ಅಥವಾ ಸುತ್ತಲಿನ ಗ್ರಾಮಗಳಲ್ಲಿ ಯಾವುದೇ ಜಿನಾಲಯಗಳಿರುವುದಿಲ್ಲ. ಕ್ರಿ.ಶ.1342ರ ಆನೆಗೊಂದಿ ಶಾಸನವು[17] ಹರಿಹರನ ದಂಡನಾಯಕನಾದ ಬೈಚದಂಡನಾಯಕನ ಮಗ ಇರುಗಪನು ಶಿಲಾ ಚೈತ್ಯಾಲಯವನ್ನು ನಿರ್ಮಿಸಿದ ಬಗ್ಗೆ ತಿಳಿಸುತ್ತದೆ. ಪ್ರಸ್ತುತ ಶಾಸನವಿರುವ ಬಸದಿಯೇ ಈ ಶಿಲಾಚೈತ್ಯಾಲಯವಾಗಿದೆ. ಈ ಬಸದಿಯು ಮುಖಮಂಟಪ, ಸಭಾಮಂಟಪ

ಮತ್ತು ಮೂರು ಗರ್ಭಗೃಹಗಳು ಅವುಗಳ ಮುಂದೆ ಅಂತರಾಳಗಳನ್ನು ಹೊಂದಿದ ತ್ರಿಕೂಟ ಮಾದರಿಯಾಗಿದೆ. ಮುಖಮಂಟಪದ ತೆರೆದಿದ್ದು ಸಭಾಮಂಟಪದಷ್ಟೇ ಅಗಲವಾಗಿದೆ. ಇಲ್ಲಿ ವೃತ್ತಾಕಾರದ ನಾಲ್ಕು ಕಂಭಗಳಿವೆ. ಕಕ್ಷಾಸನವೂ ಇದೆ. ಸಭಾಮಂಟಪದಲ್ಲಿ ನಾಲ್ಕು ಕಂಭಗಳು, ನಾಲ್ಕು ಮೂಲೆಗಂಭಗಳು ಮತ್ತು ಎಂಟು ಅರ್ಧಗಂಭಗಳಿವೆ, ಮುಖಮಂಟಪ, ಸಭಾಮಂಟಪಗಳ ದ್ವಾರಗಳ ಲಲಾಟದಲ್ಲಿ ಜನಬಿಂಬಗಳಿವೆ. ಮೂರು ಗರ್ಭಗೃಹಗಳು ಪೂರ್ವ, ದಕ್ಷಿಣ ಮತ್ತು ಉತ್ತರಕ್ಕೆ ಮುಖಮಾಡಿವೆ. ಉತ್ತರದ ಗರ್ಭಗೃಹ ಭಾಗಶಃ ಹಾಳಾಗಿದೆ. ಪೂರ್ವಾಭಿಮುಖವಾಗಿರುವ ಪ್ರಧಾನ ಗರ್ಭಗೃಹದ ಬಾಗಿಲ ಲಲಾಟದಲ್ಲಿ ಬೌತಿ ಚಂದ್ರನ ಚಿಹ್ನೆ ಇದೆ. ಇದರಿಂದ ಇದು ಚಂದ್ರಪ್ರಭ ತೀರ್ಥಂಕರರ ಗೃಹವೆಂದು ಹೇಳಬಹುದು. ಪ್ರಸ್ತುತ ಈ ಬಸದಿಯನ್ನು ದುರಸ್ತಿಗೊಳಿಸಲಾಗಿದೆ. ತಾಲೂಕಿನ ಈ ಎರಡು ಶಾಸನಗಳಲ್ಲಿ ಬಸದಿಗಳನ್ನು ಕ್ರಮವಾಗಿ ಜಿನಾಲಯ ಹಾಗೂ ಶಿಲಾಚೈತ್ಯಾಲಯಗಳೆಂದು ಉಲ್ಲೇಖಿಸಿರುವುದು ವಿಶೇಷವೆನಿಸುತ್ತದೆ.

ಜೈನರ ಉಲ್ಲೇಖ :

ಶ್ರವಣಬೆಳಗೊಳದ ಬುಕ್ಕಾರಾಯನ ಕ್ರಿ.ಶ.1368ರ ಕಾಲದ ಶಾಸನವು ವೈಷ್ಣವರು ಮತ್ತು ಜೈನರ ಮಧ್ಯದ ವ್ಯಾಜ್ಯವನ್ನು ಬುಕ್ಕರಾಯನು ಪರಿಹರಿಸಿದ ಸಂಗತಿಯನ್ನು ಸೂಚಿಸುತ್ತದೆ.[19] ಶಾಸನದನ್ವಯ ಹೊಸಪಟ್ಟಣ, ಪೆನುಗೊಂಡ ಸಹಿತ ಆನೆಗೊಂದಿಯ ಜೈನರು ತಮಗೆ ಶ್ರೀವೈಷ್ಣವರಿಂದ ಆಗುತ್ತಿದ್ದ ಅನ್ಯಾಯಗಳ ಬಗ್ಗೆ ದೂರನ್ನು ಸಲ್ಲಿಸಿದ ಸಂಗತಿ ಇದೆ. ಇದರಿಂದ ಆನೆಗೊಂದಿಯ ಜೈನರು ಅಲ್ಲಿಯ ವೈಷ್ಣವರಿಂದ ತೊಂದರೆಯನ್ನು ಅನುಭವಿಸಿದ ವಿಷಯ ಸ್ಪಷ್ಟವಾಗುತ್ತದೆ (ಅದಾಗಲೇ ಆನೆಗೊಂದಿಯಲ್ಲಿ ಜೈನ ಬಸದಿ (ಶಿಲಾಚೈತ್ಯಾಲಯ) ಹಾಗೂ ಶ್ರೀವೈಷ್ಣವರ ರಂಗನಾಥ ದೇವಾಲಯಗಳು ನಿರ್ಮಾಣವಾಗಿದ್ದವು). ಪ್ರಸ್ತುತ ಆನೆಗೊಂದಿಯಲ್ಲಿ ಜೈನರಿಲ್ಲ ಹಾಗೂ ಕೇವಲ ರಂಗನಾಥ ದೇವಾಲಯದ ಅರ್ಚಕರು ಮಾತ್ರ ಶ್ರೀ ವೈಷ್ಣವರಿದ್ದಾರೆ.

ಶ್ರವಣಬೊಳಗೋಳದ ಶಾಸನ ತಾಲೂಕಿನ ಜೈನ ಮತ್ತು ಶ್ರೀ ವೈಷ್ಣವರ ಸಂಘರ್ಷವನ್ನು ಸೂಚಿಸಿದರೆ ಹರಿಹರ ಕವಿಯ ರಗಳೆಯೊಂದು ಜೈನ ಮತ್ತು ಶೈವರ ವೈವಾಹಿಕ ಸಂಬಂಧವನ್ನು ವಿವರಿಸುತ್ತದೆ. ಹರಿಹರನ ಹೇರೂರು ಹೆಣ್ಣಿನ ರಗಳೆಯಲ್ಲಿ ಹೇರೂರಿನ ಜೈನ ಕನ್ಯೆಗೂ ಮತ್ತು ಶೈವ ವರನಿಗೂ ವಿವಾಹವನ್ನು ಸ್ವತಃ ಕವಿಯೇ ಮಾಡಿಸಿದ ವಿಷಯವಿದೆ.[20] ಇಲ್ಲಿಯ ಹೇರೂರು ಗಂಗಾವತಿ ತಾಲೂಕಿನ ಅದೇ ಹೆಸರಿನ ಗ್ರಾಮವೆಂದು ಗುರುತಿಸಲಾಗಿದೆ. ಮೇಲೆ ಗಮನಿಸಿದಂತೆ ಹೇರೂರು ಗ್ರಾಮದಲ್ಲಿ ಜೈನ ಅವಶೇಷಗಳಿರುವುದು ಈ ಅಭಿಪ್ರಾಯವನ್ನು ಪುಷ್ಟಿಕರಿಸುತ್ತವೆ.

ಜೈನ ಶಾಸನ, ಶಿಲ್ಪಗಳು: ಹೊಸ ಶೋಧ :

ಗಂಗಾವತಿ ತಾಲೂಕು ಪ್ರದೇಶದಲ್ಲಿ ನಡೆದ ಪೂರ್ವದ ಅಧ್ಯಯನಗಳನ್ವಯ ಮೇಲ್ಕಂಡಂತೆ ವಿಜಯನಗರ ಪೂರ್ವ ಹಾಗೂ ವಿಜಯನಗರ ಕಾಲದ ಜೈನ ಧರ್ಮದ ಸಾಂಸ್ಕೃತಿಕ ಪರಂಪರೆಯನ್ನು ಅರಿತುಕೊಳ್ಳಲು ಸಾಧ್ಯವಾಯಿತು. ಮುಂದುವರೆದ ಶೋಧನೆಯಲ್ಲಿ ಜೈನ ಶಾಸನ, ಶಿಲ್ಪಗಳು ಕಂಡು ಬಂದಿದ್ದು, ಗಂಗಾವತಿ ತಾಲೂಕು ಪ್ರದೇಶದ ಜೈನಧರ್ಮದ ಬಗೆಗೆ ಮತ್ತಷ್ಟು ತಿಳಿದುಕೊಳ್ಳಲು ಆಸ್ಪದವಾಗಿದೆ.

ಪಾದದ ಚಿತ್ರ ಹಾಗೂ ಶಾಸನ :

ಗಂಗಾವತಿಯ ಪಂಪಾನಗರಕ್ಕೆ ಹೊಂದಿಕೊಂಡಂತೆ ದೊಡ್ಡ ಬೆಟ್ಟವಿದೆ. ಈ ಬೆಟ್ಟದ ಉತ್ತರ ಬದಿಯಲ್ಲಿ ಸುಮಾರು ಹತ್ತು ಅಡಿ ಎತ್ತರದಲ್ಲಿ ವಿಶಾಲವಾದ ಬಾಗಶಃ ಸಮತಟ್ಟಾದ ಹಾಸಲು ಬಂಡೆಯಿದೆ. ಅದರ ಮೇಲೆ ಸ್ವತಂತ್ರವಾಗಿರುವ ಮೂರು ಗುಂಡುಗಳಿವೆ. ಅವುಗಳಲ್ಲಿ ದೊಡ್ಡ ಗುಂಡೊಂದರ ಮೇಲ್ಭಾಗದಲ್ಲಿ ಎರಡು ಪಾದಗಳ ಚಿತ್ರಗಳನ್ನು ಕೆತ್ತಲಾಗಿದೆ. ಪಾದಗಳು ಉಬ್ಬು ಶಿಲ್ಪಗಳಾಗಿವೆ. ಈ ಪಾದಚಿತ್ರದ ಎರಡು ಬದಿಗೆ (ಮೇಲೆ, ಕೆಳಗೆ) ಬಂಡೆಯ ತುದಿಯಲ್ಲಿ ಒಂದು ಕಡೆ (ಪಾದದ ಬಳಿ) ಶ್ರೀ ಮತುಕೊಂಡ ಕುಂಡಾ ಜಯ ಗಬಿಬಲುತಾರ ಗಣಾಗ್ರ ಗಣ್ಯರು

ಮ॥ ವಿದೂರಾನಂದ ಸ್ವಾಮಿಗಳ ಪಾದವು ಶ್ರೀ ಶ್ರೀ ಶ್ರೀ ಎಂದು ಹಾಗೂ ಮತ್ತೊಂದು ತುದಿಯಲ್ಲಿ 'ಪಿನಿಬುಸಿ ಮಾಯಣ್ಣ' ಎಂದು ಬರೆದಿದೆ. ಈ ಬರಹದಿಂದ ಪ್ರಸ್ತುತ ಪಾದಗಳ ಚಿತ್ರವು ಶ್ರೀ ವಿದೂರಾನಂದ ಸ್ವಾಮಿಗಳ ಪಾದದ ಚಿಹ್ನೆಗಳು ಎಂಬುದನ್ನು ಸ್ಪಷ್ಟವಾಗುತ್ತದೆ. ಇವರು ಜೈನ ಸನ್ಯಾಸಿಗಳಾಗಿದ್ದರೆಂಬುದನ್ನು ಅವರ ಹೆಸರಿನಿಂದ ತರ್ಕಿಸಬಹುದು. ಲಿಪಿ ಲಕ್ಷಣಗಳಿಂದ ಇದು ವಿಜಯನಗರ ಕಾಲದ್ದೆಂದು ಸ್ಪಷ್ಟವಾಗಿ ಹೇಳಬಹುದು.

ಜೈನ ಗವಿಯ ಶಿಲ್ಪಗಳು :

ಗಂಗಾವತಿಯ ಪಂಪಾನಗರದ ಮೇಲೆ ಗಮನಿಸಿದ ಗುಡ್ಡದಲ್ಲಿ ಈ ಗವಿ ಇದೆ. ಪಾದದ ಚಿತ್ರಗಳಿರುವ ಗುಂಡುಗಳಿಂದ ಬೆಟ್ಟದಲ್ಲಿ ಸುಮಾರು 300 ಅಡ್ಡಿ ಎತ್ತರದಲ್ಲಿ ಪ್ರಸ್ತುತ ಗವಿ ಉತ್ತರಾಭಿಮುಖಿಯಾಗಿದೆ. 15 ಫೀಟ್ ಅಗಲ, 12 ಫೀಟ್ ಆಳ 6 ಫೀಟ್ ಎತ್ತರದ ವಿಸ್ತಾರದಲ್ಲಿ ಗವಿ ಇದೆ. ಇದರ ಹಿಂಬದಿಯ ಗೋಡೆ ಬಂಡೆಯಲ್ಲಿ 8 ಫೀಟ್ ಎತ್ತರದ ವಿಸ್ತಾರದಲ್ಲಿ ಗವಿ ಇದೆ. ಇದರ ಹಿಂಬದಿ ಗೋಡೆ ಬಂಡೆಯಲ್ಲಿ 8 ಫೀಟ್ ಅಗಲ 2 ಫೀಟ್ ಎತ್ತರ ಅಳತೆಯಲ್ಲಿ ಮೂರು ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಈ ಶಿಲ್ಪಗಳನ್ನು ಭಗ್ನ ಗೊಳಿಸಲಾಗಿದೆ. ಮಧ್ಯದಲ್ಲಿ ಧ್ಯಾನಸ್ಥ ತೀರ್ಥಂಕರ ಶಿಲ್ಪವಿದೆ ಪದ್ಮಾಸನದಲ್ಲಿ ಕುಳಿತ ನಗ್ನ ತೀರ್ಥಂಕರನ ಸುತ್ತಲೂ ಪ್ರಭಾವಳಿ, ಮೇಲೆ ಕೀರ್ತಿಮುಖವಿದೆ. ಸಾಮಾನ್ಯವಾಗಿ ತೀರ್ಥಂಕರ ಶಿಲ್ಪದಲ್ಲಿ ಈ ರೀತಿ ಪ್ರಭಾವಳಿ ಇರುವುದು ಅಪರೂಪ. ತೀರ್ಥಂಕರನ ಮುಖವನ್ನು ಭಗ್ನಗೊಳಿಸಲಾಗಿದೆ. ತೀರ್ಥಂಕರನ ಎಡಭಾಗದಲ್ಲಿ ಸವ್ಯಲಲಿತಾಸನದಲ್ಲಿ ಕುಳಿತ ಚತುರ್ಭುಜಳಾದ ದೇವಿಯ ಶಿಲ್ಪವಿದೆ. ಆಕೆಯ ಹಿಂದಿನ ಕೈಗಳಲ್ಲಿ ಪಾಶ ಅಂಕುಶಗಳು ಇವೆ. ಮುಂದಿನ ಕೈಗಳು ಅಭಯ, ವರದ ಮುದ್ರಯಲ್ಲಿವೆ. ಹಾಗಾಗಿ ಈಕೆ ಸರಸ್ವತಿ ಎಂಬುದು ಸ್ಪಷ್ಟ. ತೀರ್ಥಂಕರನ ಬಲಬದಿಯಲ್ಲಿ ಮೊದಲಿಗೆ ಫಲಭರಿತ ಕಲ್ಪವೃಕ್ಷದ ಚಿತ್ರವಿದೆ. ಚತುರ್ವಿಂಶತಿ ತೀರ್ಥಂಕರಲ್ಲಿ 16ನೇ ತೀರ್ಥಂಕರನಾದ ಶೀಥಲನಾಥರ ಲಾಂಛನವು ಕಲ್ಪವೃಕ್ಷವಾಗಿರುವುದರಿಂದ, ಇಲ್ಲಿಯ ತೀರ್ಥಂಕರರು ಶೀಥಲನಾಥರೆಂದೆ ಗುರುತಿಸಬಹುದು. ಕಲ್ಪವೃಕ್ಷದ ಬಲಬದಿಗೆ ಅಶ್ವಾರೋಹಿಯೊಬ್ಬನ ಶಿಲ್ಪವಿದೆ. ಈತನ ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಕುದುರೆ ಮುಂದಿನ ಎಡಗಾಲನ್ನು ಮೇಲಕ್ಕೆತ್ತಿದೆ. ಅಶ್ವಾರೋಹಿಯ ತಲೆಯ ಮೇಲೆ ಕಿರೀಟ, ಕೈಯಲ್ಲಿ ಖಡ್ಗ ಹಾಗೂ ಅಶ್ವದ ಅಲಂಕರಣೆಯನ್ನು ಗಮನಿಸಿದರೆ ಆತ ರಾಜನಿರಬೇಕೆಂದು ತೋರುತ್ತದೆ. ಈ ಗವಿಯ ಶಿಲ್ಪಗಳು ಹಾಗೂ ಕೆಳ ಗುಂಡಿನ ಪಾದ ಚಿಹ್ನೆ ಹಾಗೂ ಬರಹ ಪರಸ್ಪರ ಪೂರಕ ಹಾಗೂ ಸಮಕಾಲೀನವಾಗಿರಬೇಕು.

ಈ ಗವಿಯಿಂದ ಅನತಿ ದೂರದಲ್ಲಿ ಈಗೀನ ಸರಕಾರಿ ಜೂನಿಯರ್ ಕಾಲೇಜ ಹಿಂಭಾಗದ ಬೆಟ್ಟದ ಮತ್ತೊಂದು ಬದಿಯ ಗವಿಯಲ್ಲಿ ತೀರ್ಥಂಕರರ ಎರಡು ದೊಡ್ಡ ಪ್ರತಿಮೆಗಳಿದ್ದವು. ಆದರೆ ಅವು ಇಂದು ಅಲ್ಲಿಂದ ಕಣ್ಮರೆಯಾಗಿವೆ.

ತೀರ್ಥಂಕರ ಶಿಲ್ಪ:

ಗಂಗಾವತಿ ನಗರದ ಕೋಟೆ ಪ್ರದೇಶದಲ್ಲಿ ಇಂದಿನ ವೀರಭದ್ರೇಶ್ವರ ದೇವಾಲಯ ಸನಿಹದಲ್ಲಿ ಕಲ್ಲು, ಗಾರೆಯಿಂದ ಕಟ್ಟಿದ ಒಂದು ಕೊಠಡಿ ಇದೆ (ಚೌಕ ವಿನ್ಯಾಸದ ಈ ಕೊಠಡಿಯ ಛತ್ತು ಅರಳು ಕಮಲದಾಕೃತಿಯನ್ನು ಹೊಂದಿರುವುದರಿಂದ ಇದು ಒಳಗಿರುವ ತೀರ್ಥಂಕರ ಶಿಲ್ಪಕ್ಕಾಗಿಯೇ ನಿರ್ಮಿಸಿರುವ ಕಟ್ಟಡ ಅಂದರೆ ಬಸದಿ ಎನ್ನಬಹುದು) ಇದನ್ನು ಸ್ಥಳೀಯ ಮುಸ್ಲಿಂರು ಇದನ್ನು ನಿಜಾಮಕಾಲದ ಬಾರುದ್ ಖಾನಾ ಅಂದರೆ ಮದ್ದಿನ ಮನೆ ಎನ್ನುತ್ತಾರೆ. ಅವರ ಈ ಅಭಿಪ್ರಾಯಕ್ಕೆ ಈ ಕಟ್ಟಡದ ಪೂರ್ವಬದಿಯಲ್ಲಿ ನಿಜಾಂ ಕಾಲದ ಪೋಲಿಸ್ ಠಾಣೆ ಎನ್ನುವ ಕಟ್ಟಡ ಇಂದಿಗೂ ಇದ್ದು, ಅದನ್ನು ಮನೆಯನ್ನಾಗಿ ಪರಿವರ್ತಿಸಿಕೊಂಡು ಕೆಲವರು ವಾಸಿಸುತ್ತಿದ್ದಾರೆ.

ಬಸದಿಯ ಪಶ್ಚಿಮಾಭಿಮುಖಿಯಾಗಿದೆ. ಒಳಗೆ ಹಿಂದಿನ ಗೋಡೆಗೆ ಹೊಂದಿಕೊಂಡಂತೆ ಚೌಕ ಪೀಠದ ಮೇಲೆ ತೀರ್ಥಂಕರನ ಶಿಲ್ಪವಿದೆ. ಕಪ್ಪುಕಲ್ಲಿನ (ಡೊಲರೈಟ್) ಈ ಶಿಲ್ಪ ತೊಡೆಯ ಭಾಗದಲ್ಲಿ ತುಂಡಾಗಿದೆ. ತೀರ್ಥಂಕರ ಶಿಲ್ಪವು ಸ್ಥಾನಕ ಭಂಗಿಯಲ್ಲಿದ್ದು, ಎರಡು ಕೈಗಳನ್ನು ಇಳಿಬಿಟ್ಟಿದೆ. ಇದಕ್ಕೆ ಕಾಯೋತ್ಸರ್ಗ ಭಂಗಿ ಎಂದು ಹೆಸರು. ತಲೆಯ ಮೇಲೆ ಮುಕ್ಕೊಡೆ ಹಾಗೂ ಮುಖದ ಎರಡೂ ಬದಿಯಲ್ಲಿ ಚಾಮರಗಳಿವೆ. ಒಟ್ಟು ಶಿಲ್ಪವು 1.3 ಮೀಟರ್ ಎತ್ತರ 0.19

ಮಿ(ಸೆಂಮಿ) ಅಗಲವಾಗಿದೆ. ಪೀಠದ ಮುಂಬದಿಯಲ್ಲಿ ಸಿಮೆಂಟಿನಿಂದ ಕಟ್ಟಿರುವುದರಿಂದ ಪ್ರಾಯಶಃ ಅದರ ಮೇಲಿದ್ದ ಲಾಂಛನ ಗೋಚರವಾಗುತ್ತಿಲ್ಲ. ಹಾಗಾಗಿ ಈ ಶಿಲ್ಪವು ಯಾವ ತೀರ್ಥಂಕರದ್ದೆಂದು ಹೇಳಲು ಆಸ್ಪದವಾಗಿಲ್ಲ. ಇವುಗಳಲ್ಲದೇ ತಾಲೂಕಿನ ಹೆಬ್ಬಾಳ, ವೆಂಕಟಗಿರಿ ಮುಕ್ಕುಂಪಿ, ಗುಂಡೂರು, ಕಾರಟಗಿ–ಚೆಳ್ಳೂರು ರಸ್ತೆಯ ಪಿಳ್ಳಿಗುಂಡು, ಕಲ್ಕೆರೆಗಳಲ್ಲಿ ಜೈನ ಶಿಲ್ಪಗಳ ಅವಶೇಷಗಳಿವೆ. ಕಾರಟಗಿಯ ಪಿಳ್ಳಿಗುಂಡಿನ ಪಶ್ಚಿಮ ಬದಿಯಲ್ಲಿ ಮುಕ್ಕೊಡೆ ಹಾಗೂ ಎರಡು ಬದಿಗೆ ಚಾಮರಗಳ ಕೊರೆದ ಚಿತ್ರಗಳಿವೆ. ವೆಂಕಟಗಿರಿಯ ಬೆಟ್ಟದ ಗವಿಯಲ್ಲಿ ವೆಂಕಟೇಶ್ವರ ಶಿಲ್ಪದ ಜೊತೆ ಭಗ್ನ ತೀರ್ಥಂಕರನ ಶಿಲ್ಪವಿದೆ. ಹಳೇ ಮುಕ್ಕುಂಪಿಯಲ್ಲಿ ಸೂರ್ಯ ಶಿಲ್ಪದ ಬಳಿ ಭಗ್ನ ತೀರ್ಥಂಕರನ ಪ್ರತಿಮೆ ಹಾಗೂ ಬರಹಗಳಿಲ್ಲದ ಎರಡು ನಿಷದಿಗಲ್ಲುಗಳಿವೆ.

ಸಮಾರೋಪ :

ಪ್ರಸ್ತುತ ಶೋಧನೆ ಹಾಗೂ ಅಧ್ಯಯನಗಳಿಂದ ಗಂಗಾವತಿ ಪ್ರದೇಶದಲ್ಲಿ 10ನೇ ಶತಮಾನದಿಂದಲೇ ಜೈನಧರ್ಮದ ಕುರುಹುಗಳು ಕಂಡು ಬರುತ್ತವೆ. ಅಂದರೆ ಆ ಹೊತ್ತಿಗಾಗಲೇ ಜೈನರು ಇಲ್ಲಿ ಬಂದು ನೆಲೆಸಿರುವುದು ಸ್ಪಷ್ಟವಾಗುತ್ತದೆ. ಹೆಗಡೆ (ಪೆರ್ಗ್ಗಡೆ)ಯಂತರಹ ಹುದ್ದೆಗಳ ಮೂಲಕ ಗ್ರಾಮಾಡಳಿತದಲ್ಲಿ ಪ್ರಮುಖ ಪಾತ್ರವಹಿಸಿದ್ದು ಮತ್ತು ಅವರು ಯುದ್ಧದಲ್ಲಿ ಭಾಗಿಯಾಗಿ ಹುತಾತ್ಮರಾದದ್ದು ಹಾಗೂ ಅವನ ಧರ್ಮಪತ್ನಿ ಸತಿ ಪದ್ಧತಿಯನ್ನು ಆಚರಿಸಿದ್ದು, ಹೇರೂರಿನ ವೀರಗಲ್ಲಿನಿಂದ ತಿಳಿಯುತ್ತದೆ. ಗಂಗಾವತಿ ಆನೆಗೊಂದಿ ಪ್ರದೇಶವು ತುಂಗಭದ್ರಾ ನದಿ ಬೆಟ್ಟಗುಡ್ಡಗಳಿಂದ ಆವೃತವಾಗಿರುವುದರಿಂದ ಸಲ್ಲೇಖನ ವೃತ ಆಚರಿಸಲು ಪ್ರಶಸ್ತ ಸ್ಥಳವಾಗಿತ್ತು ಹಾಗಾಗಿ ಸುತ್ತಮುತ್ತಲಿನ ಅನೇಕ ಜೈನ ಮುನಿಗಳು, ಗೃಹಸ್ಥರು ಬಂದು ಸಲ್ಲೇಖನದಿಂದ ಮಡಿದುದು ತಿಳಿಯುತ್ತದೆ.

ವಿಜಯನಗರದ ಆರಂಭ ಕಾಲದ ಹೊತ್ತಿಗಾಗಲೇ ಜೈನರು ಆನೆಗೊಂದಿಯಲ್ಲಿ ಅಧಿಕ ಸಂಖ್ಯೆಯಲ್ಲಿದ್ದರಬೇಕು. ಹಾಗಾಗಿಯೇ ಹರಿಹರನ ಕಾಲದಲ್ಲಿ ಅವನ ದಂಡನಾಯಕ ಬೈಚದಂಡನಾಯಕನ ಮಗ ಇರುಗಪನು ಬಸದಿಯೊಂದನ್ನು ನಿರ್ಮಿಸಿರುವುದನ್ನು ಮನಗಾಣಬಹುದು. ಇದಕ್ಕೆ ರಾಜ ಹರಿಹರನ ಆಶ್ರಯ ಇಲ್ಲದಿಲ್ಲ. ಆದರೆ ಹರಿಹರನ ನಂತರ ಬಂದ ಬುಕ್ಕರಾಯನ ಕಾಲದಲ್ಲಿ ಸ್ಥಳೀಯ ಶ್ರೀ ವೈಷ್ಣವರಿಗೆ ಜೈನರ ಬಗ್ಗೆ ಅಸಹನೆ ಮೂಡಲಾರಂಭಿಸಿತು. ಪರಿಣಾಮವಾಗಿ ಶ್ರೀವೈಷ್ಣವರು ಜೈನರಿಗೆ ಕಿರುಕುಳ ಕೊಡಲಾರಂಭಿಸಿದರು. ಈ ಸಂಗತಿ ಶ್ರವಣಬೆಳಗೊಳ ಶಾಸನದಿಂದ ಸ್ಪಷ್ಟವಾಗುತ್ತದೆ. ಈ ಘಟನೆಯ ನಂತರ ಕ್ರಮೇಣ ಜೈನರು ಆನೆಗೊಂದಿಯನ್ನು ತೊರೆದಿರಬೇಕು. ಇಂದು ಅಲ್ಲಿ ಜೈನರು ಇರುವುದಿಲ್ಲ. ಗಂಗಾವತಿಯಲ್ಲಿ ಜೈನ ಮುನಿಗಳಾದ ಶ್ರೀ ವಿದೂರಾನಂದರ ಪಾದಗಳ ಚಿತ್ರಗಳು ಮತ್ತು ಗವಿಯೊಂದರಲ್ಲಿ ಶೀತಲನಾಥ ತೀರ್ಥಂಕರರ ಶಿಲ್ಪವಿರುವುದು ಗಮನಾರ್ಹ ಸಂಗತಿಯಾಗಿದೆ. ಗಂಗಾವತಿ ಪ್ರದೇಶದ ಜೈನ ಧರ್ಮದ ಬಗ್ಗೆ ಮತ್ತಷ್ಟು ಅರಿತುಕೊಳ್ಳಲು ಇದರಿಂದ ಸಹಾಯಕವಾಗುತ್ತದೆ. ಪ್ರಾಯಶಃ ಈ ಭಾಗದಲ್ಲಿ ಶೀತಲನಾಥ ತೀರ್ಥಂಕರರ ಶಿಲ್ಪ ಮೊದಲ ಬಾರಿಗೆ ಕಾಣಿಸಿಕೊಳ್ಳುತ್ತದೆ. ಆ ಮೂಲಕ ವಿಜಯನಗರ ಕಾಲದ ಶಿಲ್ಪ ಪರಂಪರೆಗೆ ಇದು ಗಂಗಾವತಿಯ ಕೊಡುಗೆ ಎನ್ನಬಹುದಾಗಿದೆ. ಅದೇ ರೀತಿ ವಿಜಯನಗರ ಕಾಲದ ತೀರ್ಥಂಕರ ಶಿಲ್ಪವೊಂದನ್ನು ಆರಾಧಿಸಲು ಸ್ಥಳೀಯ ಜೈನರ ಕೋರಿಕೆಯ ಮೇರೆಗೆ ಶಿಲ್ಪದ ಪ್ರತಿಷ್ಠಾಪನೆಗಾಗಿ ಒಂದು ಕೊಠಡಿಯನ್ನು ಹೈದರಾಬಾದ್ ನಿಜಾಮನು ಬಿಟ್ಟು ಕೊಟ್ಟಿರುವುದು ಮಹತ್ವದ ಸಂಗತಿ. ಅದರೆ ರಜಾಕಾರರ ದಬ್ಬಾಳಿಕೆಯ ಸಂದರ್ಭದಲ್ಲಿ ಈ ಶಿಲ್ಪವನ್ನು ಭಗ್ನಗೊಳಿಸಲಾಯ್ತು. ಪರಿಣಾಮವಾಗಿ ಭಗ್ನ ಶಿಲ್ಪ ಸಹಿತ ಜೈನ ಬಸದಿ(?) ದುಃಸ್ಥಿತಿಯಲ್ಲಿ ಇದೆ. ಒಟ್ಟಾರೆ ಗಂಗಾವತಿ ಪ್ರದೇಶದಲ್ಲಿದ್ದ ಜೈನಧರ್ಮದ ಪ್ರಾಚೀನತೆ, ಪರಂಪರೆ ಮತ್ತು ಅವರ ಚಟುವಟಿಕೆಯನ್ನು ಅರಿಯಲು ಮೇಲೆ ಗಮನಿಸಿದ ಎಲ್ಲ ಜೈನ ಶಾಸನ, ಶಿಲ್ಪ ಹಾಗೂ ಸ್ಮಾರಕಗಳು ಅಮೂಲ್ಯವಾದ ಆಕರಗಳಾಗಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. ಮಿರ್ಜಿ ಅಣ್ಣಾರಾಯ, 1975, **'ಕರ್ನಾಟಕದಲ್ಲಿ ಜೈನಧರ್ಮ'** ಪು.1–21, ಕರ್ನಾಟಕ ಮತ್ತು ಜೈನ ಸಂಸ್ಕೃತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

2. ಸಿದ್ದಲಿಂಗಪ್ಪ ಕೊಟ್ನೆಕಲ್, 2010, **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ**, ಮೇಘನಾ ಪ್ರಕಾಶನ, ಬಿ.ಟಿ.ಪಾಟೀಲ್ ನಗರ, ಕೊಪ್ಪಳ.

3. ದೇವರ ಕೊಂಡಾರೆಡ್ಡಿ (ಸಂ), 1999, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2**, ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕು, ಹೆಬ್ಬಾಳ ಶಾಸನ ಸಂಖ್ಯೆ, 102, ಕ.ವಿ.ವಿ. ಹಂಪಿ.

4. Patil, C.S., 1998, **Inscription of Koppal District**, Gangavathi Taluku, Heruru Ins.No.66, Directorate of Archaeology and Museums, Mysore.

5 ರಿಂದ 17, ದೇವರ ಕೊಂಡಾರೆಡ್ಡಿ (ಸಂ), ಪೂರ್ವೋಕ್ತ. ಗಂಗಾವತಿ ತಾಲ್ಲೂಕು. ಆನೆಗೊಂದಿ ಶಾಸನ ಸಂಖ್ಯೆ 45, 46, 87, 48, 49, 50,51, 34, 58 ಕಡೇಬಾಗಿಲು, 21

18. ಸುರೇಶ ಕೆ.ಎಂ. ಹಾಗೂ ಇತರರು (ಸಂ), 2001, **ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹಾಗೂ ಶರಣಬಸಪ್ಪ ಕೋಲ್ಕಾರ, 2013, ವಿಜಯನಗರದ ಮಾತೃಸ್ಥಾನ ಆನೆಗೊಂದಿ ಬಸವಪ್ರಕಾಶನ, ಗುಲಬರ್ಗಾ

19. **Epigraphia Carnatica**, Vol. II, Shravanabelagola 135, Magati-18

20. ಕಲಬುರ್ಗಿ, ಎಂ.ಎಂ. (ಸಂ), 2003, **ಹರಿಹರನ ರಗಳೆಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

❑

18. ಹಂಪಿ ಪರಿಸರದ ಪರಶುರಾಮನ ಶಿಲ್ಪಗಳು

ಡಾ. ಸಿ.ಎಸ್. ವಾಸುದೇವನ್

ಎಲ್ಲರಿಂದ ಒಪ್ಪಿತ ಮತ್ತು ಪ್ರಸಿದ್ಧವಾದ ವಿಷ್ಣುವಿನ ಅವತಾರಗಳು ಹತ್ತು. ಅವುಗಳನ್ನು ದಶಾವತಾರ ಎಂದು ಕರೆಯಲಾಗುತ್ತದೆ. ಈ ಪ್ರಪಂಚಕ್ಕೆ ಅಸುರರುಗಳಿಂದ ಆಪತ್ತು ಒದಗಿದಾಗ ವಿಷ್ಣುವು ವಿವಿಧ ಕಾಲಘಟ್ಟಗಳಲ್ಲಿ ಹತ್ತು ಅವತಾರಗಳನ್ನು ತಾಳಿ ಅಸುರರನ್ನು ನಿಗ್ರಹಿಸಿ ತಪ್ಪು ದಾರಿಯಲ್ಲಿದ್ದವರನ್ನು ಸರಿ ದಾರಿಗೆ ತಂದನು. ಧರ್ಮವನ್ನು ಸ್ಥಾಪಿಸಲು ಇಂತಹ ಅವತಾರಗಳನ್ನು ವಿಷ್ಣುವು ತಾಳಿದನು. ವಿಷ್ಣುವಿನ ದಶಾವತಾರಗಳು ಇಂತಿವೆ: ಮತ್ಸ್ಯ (ಮೀನು), ಕೂರ್ಮ (ಆಮೆ), ವರಾಹ (ಹಂದಿ), ನರಸಿಂಹ (ಮನುಷ್ಯ–ಸಿಂಹ), ವಾಮನ (ಕುಬ್ಜ), ತ್ರಿವಿಕ್ರಮನನ್ನು ಒಳಗೊಂಡಂತೆ ಪರಶುರಾಮ, ರಘುರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ. ಕೆಲವು ಹಿಂದೂ ಸಂಪ್ರದಾಯವಾದಿಗಳು ಬುದ್ಧನನ್ನು ವಿಷ್ಣುವಿನ ಅವತಾರ ಅಲ್ಲವೆಂದು ವಾದಿಸಿ ಅವನ ಸ್ಥಳದಲ್ಲಿ ಬಲರಾಮನನ್ನು ಉಲ್ಲೇಖಿಸುತ್ತಾರೆ. ಇವನು ಕೃಷ್ಣನ ಅಣ್ಣ.[1]

ಪರಶುರಾಮ ವಿಷ್ಣುವಿನ ಹತ್ತು ಅವತಾರಗಳಲ್ಲಿ ಆರನೆಯ ಅವತಾರವಾಗಿದೆ. ವೈದಿಕ ಸಾಹಿತ್ಯದಲ್ಲಿ ಪ್ರಮುಖವಾಗಿ ಉಲ್ಲೇಖವಾಗಿರುವ ಈತನು ಭೃಗು ವಂಶಕ್ಕೆ ಸೇರಿದವನಾಗಿದ್ದು ಅವನನ್ನು ಸಾಮಾನ್ಯವಾಗಿ ಭಾರ್ಗವರಾಮನೆಂದು ಕರೆಯಲಾಗಿದೆ. ಇವನು ಚಾರಿತ್ರಿಕ ವ್ಯಕ್ತಿಯೆಂದು ಪರಿಗಣಿಸಲಾಗಿದೆ. ವಿಷ್ಣುವಿನ ಹಿಂದಿನ ಐದು ಅವತಾರಗಳು ದೇವರೆಂದು ಪರಿಗಣಿಸಲಾಗಿದ್ದರೂ ಈತನು ಹಿಂದಿನ ಅವತಾರಗಳಿಗೆ ಹೋಲಿಸಿದಲ್ಲಿ ಪರಶುರಾಮನ ಅವತಾರದಲ್ಲಿ ಅವನನ್ನು ಅವತಾರ ಪುರುಷನ ಬದಲಾಗಿ ಓರ್ವ ಚಾರಿತ್ರಿಕ ವ್ಯಕ್ತಿಯಾಗಿಯೇ ಪರಿಗಣಿತನಾಗಿದ್ದಾನೆ. ಪ್ರಾಯಶಃ ಆತನು ಹೋರಾಟ ಮಾಡುವ ಬುಡಕಟ್ಟು ವರ್ಗಕ್ಕೆ ಸೇರಿದವನಾಗಿದ್ದು ಅವನ ಶೌರ್ಯ ಪರಾಕ್ರಮಗಳಿಂದ ಅವನನ್ನು ಅವತಾರ ಪುರುಷನೆಂದು ನಂತರ ಪ್ರಮುಖ ಹಾಗೂ ಪ್ರಸಿದ್ಧ ದೇವತೆಯ ಸ್ಥಾನಕ್ಕೆ ಉನ್ನತೀಕರಿಸಲಾಯಿತು. ವೇದಗಳಲ್ಲಿ ಅವನ ಕುರಿತ ಉಲ್ಲೇಖಗಳಿಲ್ಲ.

ವೈವಸ್ವತಮನ್ವಂತರದ ಹತ್ತೊಂಬತ್ತನೆಯ ತ್ರೇತಾಯುಗದಲ್ಲಿ ನಡೆದ ಪರಶುರಾಮಾವತಾರದ ಕಥೆಯು ಅನೇಕ ಪುರಾಣಗಳಲ್ಲಿ ಉಲ್ಲೇಖಗೊಂಡಿದೆ. ಬ್ರಹ್ಮ, ವಾಯು, ಮತ್ಸ್ಯ, ಪದ್ಮ ಪುರಾಣಗಳಲ್ಲೂ ದೇವಿಭಾಗವತ, ಭಾಗವತ, ರಾಮಾಯಣ, ಮಹಾಭಾರತಗಳಲ್ಲೂ ವರ್ಣಿಸಲಾಗಿರುವ ಭಾಗಗಳು ಪರಶುರಾಮನ ಮಾನವೀಯ ವ್ಯವಹಾರಗಳನ್ನೇ ಎತ್ತಿ ತೋರಿಸಿವೆ. ಮೊದಲು ಆಜ್ಞಾಪಾಲನೆ ಅನಂತರ ವಿಮರ್ಶೆ ಎಂಬ ಯೋಧನ ಶಿಸ್ತಿನಂತೆ ತಂದೆಯ ಅಪ್ಪಣೆಯನ್ನು ಶಿರಸಾವಹಿಸುವಲ್ಲಿ, ಪರಶುರಾಮನ ವಿಧೇಯತೆಯು ಗಮನಾರ್ಹ.[2]

ಪರಶು ಎಂಬ ಬುಡಕಟ್ಟು ಜನರ ಬಗೆಗೆ ಪಾಣಿನಿಯು ಉಲ್ಲೇಖಿಸುತ್ತಾನೆ. ಆದರೆ ಪರಶುರಾಮನಿಗೂ ಮತ್ತು ಪರಶು ಬುಡಕಟ್ಟು ಜನರ ನಡುವೆ ಸಂಬಂಧವಿತ್ತೇ? ಎಂಬುದು ಹೇಳುವುದು ಕಷ್ಟಸಾಧ್ಯ. ಪಾಣಿನಿಯು ಪರಶುವನ್ನು ನಾಮಪದವಾಗಿ ಬಳಸಿರುವಂತೆ ತೋರುತ್ತದೆ. ಏಕೆಂದರೆ ರಾಮ, ಭಾರ್ಗವ ಅಥವಾ ಜಮದಗ್ನೇಯ ಎಂಬುದಾಗಿ ಬಳಸಲಾಗಿದೆ. ಪರಶುವಿನಿಂದ ತನ್ನ ತಂದೆಯ ಆಜ್ಞೆಯಂತೆ ತಾಯಿಯನ್ನು ಕೊಂದ ಕಾರಣ ಪರಶು ಅಥವಾ ಕೊಡಲಿಯನ್ನು ಪರಶುರಾಮನೊಂದಿಗೆ ಸೇರಿಸುವುದರಿಂದ ಅವನನ್ನು ಪರಶುರಾಮ ಎಂದು ಕರೆಯಲಾಗುತ್ತದೆ.

ಮಹಾಭಾರತವು ಪರಶುರಾಮನ ಕಥೆಯನ್ನು ಪೂರ್ಣವಾಗಿ ವಿವರಿಸುತ್ತದೆ. ಅದರಂತೆ ಜಮದಗ್ನಿ ಮತ್ತು ರೇಣುಕೆಯ ಐದು ಪುತ್ರರುಗಳಲ್ಲಿ ಪರಶುರಾಮನು ಕೊನೆಯವನು. ಯಾಗಕ್ಕೆ ಬೇಕಾದ ಫಲಗಳನ್ನು ತರಲು ನದಿಯ ಕಡೆಗೆ ಒಮ್ಮೆ ರೇಣುಕೆಯು ತೆರಳಿದಳು: ಅಲ್ಲಿ ರಾಜ ಚಿತ್ರರಥನು ನದಿಯಲ್ಲಿ ಸಂತೋಷದಿಂದ ಜಲಕ್ರೀಡೆಯನ್ನು ಆಡುತ್ತಿದ್ದುದನ್ನು

ಕಂಡಳು. ಅಲ್ಲಿಯೇ ನಿಂತ ರೇಣುಕೆಯು ಕೆಲ ಕಾಲ ಈ ಕ್ರೀಡೆಯನ್ನು ವೀಕ್ಷಿಸಿ ನಂತರ ಆಶ್ರಮಕ್ಕೆ ಹಿಂತಿರುಗಿದಳು. ಆದರೆ ಅವಳಲ್ಲಿ ಉಂಟಾದ ಭಾವೋದ್ವೇಗದಲ್ಲಿ ಅನೇಕ ನೀಚ ಯೋಚನೆಗಳೊಂದಿಗೆ ಹಿಂದಿರುಗಿದ ರೇಣುಕೆಯನ್ನು ನೋಡಿದ ಮುನಿಯು ಅವಳನ್ನು ದೂರವಿರಿಸಿ ತನ್ನ ಪ್ರತಿ ಪುತ್ರರಿಗೆ ಅವಳನ್ನು ಕೊಲ್ಲಲು ಆದೇಶಿಸಿದನು. ಆದರೆ ತಂದೆಯ ಆಜ್ಞೆಯನ್ನು ಅವರು ಕಾರ್ಯಗೊಳಿಸದ ಕಾರಣ ನಾಲ್ವರು ಪುತ್ರರು ಮರಣ ಶಾಪಕ್ಕೆ ಗುರಿಯಾದರು. ಅವರುಗಳಲ್ಲಿಯೇ ಕಿರಿಯವನಾದ ಪರಶುರಾಮನು ತಂದೆಯ ಆದೇಶವನ್ನು ಪಾಲಿಸಿ ತಾಯಿ ರೇಣುಕೆಯನ್ನು ಕೊಂದನು. ಇದರಿಂದ ಸುಪ್ರೀತನಾದ ಜಮದಗ್ನಿಯು ವರವನ್ನು ಕೋರಲು ಮಗನಿಗೆ ಹೇಳಿದನು. ತನ್ನ ತಾಯಿ ಮತ್ತು ಸಹೋದರರನ್ನು ಬದುಕಿಸುವಂತೆ ಪರಶುರಾಮನು ವರವನ್ನು ಕೋರಿದನು.

ಜಮದಗ್ನಿ, ರೇಣುಕ ಮತ್ತು ಪರಶುರಾಮರ ಕಥೆಯು ಉತ್ತರ ಕರ್ನಾಟಕ ಮತ್ತು ಪಶ್ಚಿಮದ ಕರಾವಳಿಯ ಭಾಗಗಳಲ್ಲಿ ಹೆಚ್ಚು ಪ್ರಚಲಿತ ಮತ್ತು ಪ್ರಸಿದ್ಧವಾಗಿದೆ. ಕರ್ನಾಟಕದ ಬೆಳಗಾವಿ ಜಿಲೆಯ ಸವದತ್ತಿ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಚಿಕ್ಕಮಗಳೂರು ಜಿಲ್ಲೆಯ ಹಿರೇಮಗಳೂರು, ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ ಮುಂತಾದ ಎಡೆಗಳಲ್ಲಿ ಇವರುಗಳಿಗೆ ದೇವಾಲಯಗಳ ನಿರ್ಮಾಣ ಮತ್ತು ಆರಾಧನೆಯು ಇಂದು ಪ್ರಚಲಿತದಲ್ಲಿದೆ. ಬೆಳಗಾವಿಯ ಸವದತ್ತಿಯಲ್ಲಿರುವ ಪರಶುರಾಮನ ಶಿಲ್ಪವು ಗಮನಾರ್ಹವಾಗಿದೆ. ಅದರಲ್ಲಿ ಅವನ ಕೈಗಳಲ್ಲಿ ಚೌಡಿಕೆಯನ್ನು ಹಿಡಿದಿರುವನು; ಅವನ ಇಕ್ಕೆಲಗಳಲ್ಲಿ ಪರಶು ಮತ್ತು ತ್ರಿಶೂಲಗಳನ್ನು ತೋರಿಸಲಾಗಿದೆ. ಸವದತ್ತಿಯಲ್ಲಿ ಜಮದಗ್ನಿ ಮತ್ತು ರೇಣುಕೆಯ ದೇವಾಲಯಗಳಿವೆ. ಈ ದೇವಾಲಯವನ್ನು ಸವದತ್ತಿ ಎಲ್ಲಮ್ಮ ಎಂದು ಪ್ರಸಿದ್ಧಿಯನ್ನು ಪಡೆದಿದೆ. ರೇಣುಕ ಮತ್ತು ಪರಶುರಾಮ, ಜಮದಗ್ನಿ ಆರಾಧನೆಯು ಬಹುತೇಕ ಬ್ರಾಹ್ಮಣೇತರರಲ್ಲಿ ಮತ್ತು ಕೆಲವು ಬ್ರಾಹ್ಮಣರಲ್ಲಿ ಪ್ರಚಲಿತವಿದೆ. ಕೊಂಕಣ ಮತ್ತು ಉತ್ತರ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಇಂದಿಗೂ ಜನರಲ್ಲಿ ಪ್ರಚಲಿತವಾಗಿದೆ. ಕೆಲವು ಜನರು ಎಲ್ಲಮ್ಮ (ರೇಣುಕ) ಮತ್ತು ಪರಶುರಾಮರ ಆರಾಧನೆಗೆ ಬ್ರಹ್ಮಚರ್ಯ ಪಾಲಿಸುತ್ತಾ ತಮ್ಮ ಜೀವನವನ್ನು ಮುಡುಪಾಗಿಸಿದ ಸಂಕೇತವಾಗಿ ಚೌಡಿಕೆಯನ್ನು ಒಯ್ಯುತ್ತಾರೆ. ಇವರುಗಳನ್ನು ಜೋಗಪ್ಪ ಮತ್ತು ಜೋಗಮ್ಮ ಎಂದು ಕರೆಯಲಾಗುತ್ತದೆ. ಕೊಂಕಣವು ಪರಶುರಾಮನಿಗಾಗಿ ಪ್ರಸಿದ್ಧವಾಗಿದ್ದು ಅಲ್ಲಿನ ದೇವಾಲಯಕ್ಕೆ ದೇಶದ ವಿವಿಧೆಡೆಯಿಂದ ಭಕ್ತಾದಿಗಳು ಪ್ರತಿ ವರ್ಷ ಅಲ್ಲಿ ಬಂದು ಸೇರುತ್ತಾರೆ. ಸೌದತ್ತಿಯು ಮುಖ್ಯ ಧಾರ್ಮಿಕ ಕ್ಷೇತ್ರವಾಗಿದ್ದು ಮಹಾರಾಷ್ಟ್ರ ಮತ್ತು ಕರ್ನಾಟಕದ ಮತ್ತು ಇತರೆ ಪ್ರದೇಶದ ಭಕ್ತಾದಿಗಳು ಇಲ್ಲಿಗೆ ಭೇಟಿ ನೀಡುತ್ತಾರೆ.[3]

ಪರಶುರಾಮನ ಕಥೆಯ ಇನ್ನೊಂದು ನಿರೂಪಣೆಯಂತೆ ಪರಶುರಾಮನು ಇಲ್ಲದಿರುವಾಗ ಜಮದಗ್ನಿಯ ತಲೆಯನ್ನು ಅರ್ಜುನನ ಮಕ್ಕಳು ಕಡಿಯುತ್ತಾರೆ. ಇದರಿಂದ ಪರಶುರಾಮನು ಕ್ಷತ್ರಿಯ ಕುಲವನ್ನು ನಾಶ ಮಾಡುತ್ತೇನೆ ಎಂದು ಶಪಥ ಮಾಡುತ್ತಾನೆ. ಅದರಂತೆ ಪರಶುರಾಮನು ಕ್ಷತ್ರಿಯ ಕುಲವನ್ನು ಮೂರು, ಏಳು ಅಥವಾ ಇಪ್ಪತ್ತೊಂದು ಬಾರಿ ನಿರ್ಮೂಲ ಮಾಡಿ ಪ್ರಪಂಚದಿಂದ ವಿರಮಿಸಿದನು.

ಕೆಲವು ವಿದ್ವಾಂಸರುಗಳು ಪರಶುರಾಮನು ಓರ್ವ ಚಾರಿತ್ರಿಕ ವ್ಯಕ್ತಿ ಎಂದು ಪರಿಗಣಿಸುತ್ತಾರೆ. ಕೆ.ಎಂ. ಮುನ್ಷಿಯವರು ಅವನು ಓರ್ವ ಚಾರಿತ್ರಿಕ ವ್ಯಕ್ತಿ ಎಂದು ಬಲವಾಗಿ ವಾದಿಸುತ್ತಾರೆ ಮತ್ತು ಅವನ ಧಾರ್ಮಿಕ ಬದ್ಧತಾ ಗುಣವು ನಂತರದ ಬೆಳವಣಿಗೆ ಎಂದು ವಾದಿಸುತ್ತಾರೆ. ಅಂತಹದೇ ಅಭಿಪ್ರಾಯವನ್ನು ಜಾರ್ಟ್‌ಚಾರ್ ಪೆನ್‌ಟಿಯರ್ ಅವರು ಮುಂದುವರಿಸಿ ಪರಶುರಾಮನ ಅವತಾರವು ಆರ್ಯನ್‌ರು ದಕ್ಷಿಣ ಭಾರತಕ್ಕೆ ಪ್ರವೇಶ ಪಡೆದು ಪಸರಿಸಿದರ ಸೂಚಕ ಎಂದು ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾರೆ.[4]

ಪರಶುರಾಮನ ಶಿಲ್ಪಗಳು ಮಧ್ಯಮ ದಶಾತಾಲದಲ್ಲಿರಬೇಕು. ಅದು 120 ಅಂಗುಲ ಉದ್ದ ಮತ್ತು ಎರಡು ಕೈಗಳನ್ನು ಹೊಂದಿ ಅದರ ಬಲಗೈಯಲ್ಲಿ ಪರಶು ಹಿಡಿದಿದ್ದು ಮತ್ತು ಎಡಗೈ ಸೂಚಿ ಮುದ್ರೆಯಲ್ಲಿರಬೇಕು. ತಲೆಯಲ್ಲಿ ಜಟಾಮಕುಟ ಮತ್ತು ಯಜ್ಞೋಪವೀತವು ಪ್ರಮುಖವಾಗಿ ದೇಹದ ಮೇಲೆ ಇರಬೇಕು ಹಾಗೆಯೇ ಇನ್ನಿತರೆ ಅನೇಕ ಆಭರಣಗಳು ಇರಬೇಕು. ವಿಷ್ಣುಧರ್ಮೋತ್ತರ ಪುರಾಣದಂತೆ ಅವನಿಗೆ ತಲೆಯಲ್ಲಿ ಜಟೆಯಿರಬೇಕು ಹಾಗೂ ಅವನ ಗುರುತಾಗಿ ಪರಶು ಅಥವಾ ಕೊಡಲಿಯಿರಬೇಕು. ಪರಶುರಾಮನ ಶಿಲ್ಪಗಳಲ್ಲಿ ನಾಲ್ಕು ಕೈಗಳು ಇರಬೇಕು ಹಾಗೂ ಅವುಗಳಲ್ಲಿ ಬಿಲ್ಲು, ಬಾಣ,

ಪರಶು ಮತ್ತು ಕತ್ತಿ ಇರಬೇಕು ಎಂದು ಅಗ್ನಿಪುರಾಣವು ಸೂಚಿಸಿದೆ. ಹಿಮಾಚಲ ಪ್ರದೇಶದ ಚಂಬಾದಲ್ಲಿ ದೊರತಿರುವ ಮಧ್ಯಯುಗೀನ ಕಾಲದ ಪರಶುರಾಮನ ಶಿಲ್ಪದಲ್ಲಿ ನಾಲ್ಕು ಕೈಗಳಿದ್ದು, ಅವುಗಳಲ್ಲಿ ಬಾಣ, ಪರಶು, ಬಿಲ್ಲು ಮತ್ತು ಶಂಖಗಳಿವೆ.

ಹಂಪಿ ಪರಿಸರದಲ್ಲಿ ಪರಶುರಾಮನ ಸ್ವತಂತ್ರ ಶಿಲ್ಪಗಳು ದೊರೆತಿಲ್ಲ. ಆದರೆ ವಿಷ್ಣುವಿನ ದಶಾವತಾರ ಶಿಲ್ಪಗಳಲ್ಲಿ ಪರಶುರಾಮನನ್ನು ಸೇರಿಸಲಾಗಿರುವುದು ಕಂಡುಬಂದಿದೆ. ಅಂತಹ ಎರಡು ಪ್ರಧಾನ ಉಬ್ಬು ಶಿಲಾಫಲಕಗಳಲ್ಲಿ ಪರಶುರಾಮನನ್ನು ತೋರಲಾಗಿದೆ. ವಿಜಯನಗರ ಕಾಲದ ಶಿಲ್ಪಿಗಳು ಶಾಸ್ತ್ರಗ್ರಂಥ ಅಥವಾ ಪಠ್ಯಗಳನ್ನು ಹೊರತುಪಡಿಸಿ ಶಿಲ್ಪಗಳನ್ನು ಕೆತ್ತಿರುವರು. ಹಜಾರರಾಮಚಂದ್ರ ದೇವಾಲಯದಲ್ಲಿರುವ ಪರಶುರಾಮನ ಶಿಲ್ಪವನ್ನು ಓರ್ವ ಕ್ಷತ್ರಿಯ ಅಥವಾ ಅರಸನಂತೆ ತೋರಲಾಗಿದೆ. ಇದರಲ್ಲಿ ಅವನು ಸಮಭಂಗಿಯಲ್ಲಿ ನಿಂತಿದ್ದು ಅವನಗೆ ಎರಡು ಕೈಗಳಿವೆ. ಬಲಗೈಯಲ್ಲಿ ಪರಶು ಮತ್ತು ಎಡಗೈಯಲ್ಲಿ ಹಿಡಿದಿರುವ ಬಿಲ್ಲು ಅವನ ತಲೆಯವರೆಗೆ ಉದ್ದವಾಗಿ ಇರುವಂತೆ ತೋರಲಾಗಿದೆ. ಶಿಲ್ಪದಲ್ಲಿ ಆತನು ಕಿರೀಟಮಕುಟ ಧರಿಸಿದ್ದು ಕಿವಿಯೋಲೆ, ಎದೆಯ ಮೇಲೆ ಹಾರ, ಉದ್ದನೆಯ ವೈಜಯಂತಿಮಾಲೆ, ನೆರಿಗೆಯುಳ್ಳ ಧೋತಿ, ಸೊಂಟಪಟ್ಟಿ, ಕಾಲ್ಗಡಗ, ಕೈಗಡಗ ಮತ್ತು ಇತರೆ ಆಭರಣಗಳನ್ನು ಧರಿಸಿರುವನು.

ಹಂಪಿ ಪರಿಸರದ ದೇವಾಲಯಗಳಲ್ಲಿರುವ ಪರಶುರಾಮನ ಶಿಲ್ಪಗಳ ಕೋಷ್ಟಕ

	ಹಜಾರರಾಮ ಚಂದ್ರ ಕ್ರಿ.ಶ. 14–15ನೇ ಶತಮಾನ	ಕೃಷ್ಣ (ಕ್ರಿ.ಶ. 1513)	ವಿಠಲ ಕ್ರಿ.ಶ.1422–46)	ಪಟ್ಟಾಭಿರಾಮ (ಕ್ರಿ.ಶ.1530–42)	ಮಾಲ್ಯವಂತ ರಘುನಾಥ (ಕ್ರಿ.ಶ. 1534–42)	ಚಕ್ರತೀರ್ಥ ಮತ್ತು ಕಮಲ ಮಹಲ್ ಹಿಂಭಾಗದ ಬೆಟ್ಟದಲ್ಲಿ	ಒಟ್ಟು
ಪರಶುರಾಮ	1	1	3	3	1	2	11

ಕೋಟಿಲಿಂಗದ ಬಳಿಯಿರುವ ದಶಾವತಾರ ಶಿಲಾಪಟ್ಟಿಕೆಯಲ್ಲಿ ಅವನು ತ್ರಿಭಂಗಿಯಲ್ಲಿ ನಿಂತಿರುವನು. ಅವನಗೆ ಎರಡು ಕೈಗಳಿದ್ದು ಅದರಲ್ಲಿ ಬಲಗೈ ಪರಶುವನ್ನು ಹಿಡಿದಿರುವನು ಮತ್ತು ಎಡಗೈಲ್ಲಿರುವ ಬಿಲ್ಲು ಅವನ ಎತ್ತರಕ್ಕೆ ಇರುವಂತೆ ತೋರಲಾಗಿದೆ. ಇದರಲ್ಲಿಯೂ ಅವನು ಕಿರೀಟಮಕುಟ, ಹಾರ, ಧೋತಿ, ಕೈಗಡಗ ಮತ್ತಿತರೆ ಆಭರಣಗಳನ್ನು ಧರಿಸಿರುವನು. ಹಣೆಯಲ್ಲಿ ವೀರರೇಖೆಯು ಅಸ್ಪಷ್ಟವಾಗಿ ಕಾಣುತ್ತದೆ. ವಿಜಯನಗರ ಕಾಲದಲ್ಲಿ ಶ್ರೀವೈಷ್ಣವರ ಪ್ರಭಾವಕ್ಕೆ ಒಳಗಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ವಿಠಲ ದೇವಾಲಯದ ಕಲ್ಯಾಣಮಂಟಪದಲ್ಲಿ ಪರಶುರಾಮ ಮತ್ತು ರಾಮನು ಒಟ್ಟಿಗೆ ಇರುವ ಶಿಲ್ಪವಿದೆ. ಇದರಲ್ಲಿ ಇವರಿಬ್ಬರೂ ಒಟ್ಟಿಗೆ ನಿಂತಿರುವರು. ಪರಶುರಾಮನು ಆಯತಾಕಾರದ ಪೀಠದ ಮೇಲೆ ತ್ರಿಭಂಗಿಯಲ್ಲಿ ನಿಂತಿರುವನು. ಅವನಗೆ ಎರಡು ಕೈಗಳಿದ್ದು ಬಲಗೈಯಲ್ಲಿ ಪರಶು ಮತ್ತು ಎಡಗೈಯಲ್ಲಿ ಉದ್ದನೆಯ ಬಿಲ್ಲು ಅವನ ಎಡ ಭುಜದ ಮೇಲೆ ಇರುವಂತೆ ಕೆತ್ತಲಾಗಿದೆ. ಅವನು ಕಿರೀಟಮಕುಟ, ಕಂಠಹಾರ, ಹಾರ, ಸೊಂಟಪಟ್ಟಿ, ಉದ್ದನೆಯ ವನಮಾಲ ಮತ್ತು ಇತರೆ ಆಭರಣಗಳನ್ನು ಧರಿಸಿರುವನು. ಅವನ ಎಡಭಾಗದಲ್ಲಿ ರಾಮನು ದ್ವಿಭಂಗಿಯಲ್ಲಿ ಅದೇ ಆಯತಾಕಾರದ ಪೀಠದ ಮೇಲೆ ನಿಂತಿರುವನು. ಅವನಿಗೆ ಎರಡು ಕೈಗಳಿದ್ದು, ಅದರ ಬಲಗೈಯಲ್ಲಿ ಬಾಣವನ್ನು ಹಿಡಿದಿರುವನು ಮತ್ತು ಎಡಗೈಲ್ಲಿ ಉದ್ದನೆಯ

ಬಿಲ್ಲು ಅವನ ಎಡ ಭುಜದ ಮೇಲೆ ಒರಗಿದಂತೆ ತೋರಲಾಗಿದೆ. ಅವನು ಸಹ ಕಿರೀಟಮುಕುಟ, ಹಾರ, ಉದ್ದನೆಯ ವನಮಾಲ ಮತ್ತು ಇತರೆ ಆಭರಣಗಳನ್ನು ದೇಹದ ಮೇಲೆ ಧರಿಸಿರುವನು. ಸುಂದರ ಮತ್ತು ಪ್ರಮಾಣಬದ್ಧವಾಗಿ ರಾಮ ಮತ್ತು ಪರಶುರಾಮರ ಶಿಲ್ಪಗಳನ್ನು ಕೆತ್ತಲಾಗಿದೆ. ಇವರ ನಡುವಿನ ಒಂದೇ ಒಂದು ವ್ಯತ್ಯಾಸವೆಂದರೆ ಪರಶುರಾಮನು ಪರಶು ಮತ್ತು ಬಿಲ್ಲು ಹಿಡಿದಿರುವನು ಆದರೆ ಬಾಣವಿಲ್ಲ. ಪರಶುರಾಮನಲ್ಲಿ ರಾಮ ಇರುವನೆಂಬುದನ್ನು ಸಾಂಕೇತಿಕವಾಗಿ ಅವರ ಗುರುತುಗಳಿಂದ ಸೂಚಿಸಿದ್ದು, ಪರಶುರಾಮನು ರಾಮನೊಂದಿಗಿರುವ ಲಕ್ಷ್ಮಣನ್ನು ಪ್ರತಿನಿಧಿಸುತ್ತದೆ ಎಂದು ಅಭಿಪ್ರಾಯಿಸುವ ಸುರೇಶ್ ಅವರು ಇಂತಹ ವ್ಯತ್ಯಾಸಗಳು ಶಿಲ್ಪಿಯ ನಿರೂಪಣಾ ಶೈಲಿಯಿಂದ ಆಗಿದೆ ಎಂದು ತಿಳಿಸುತ್ತಾರೆ.[5]

ಪಟ್ಟಾಭಿರಾಮ ದೇವಾಲಯದ ಕಲ್ಯಾಣಮಂಟಪದಲ್ಲಿರುವ ಒಂದು ಕಂಬದಲ್ಲಿ ದಶಾವತಾರದ ಶಿಲ್ಪಗಳಿವೆ. ಕಂಬದ ನಾಲ್ಕು ಭಾಗಗಳಲ್ಲಿ ಶಿಲ್ಪಗಳನ್ನು ಕೆತ್ತಲಾಗಿದೆ. ಪರಶುರಾಮನ ಉಬ್ಬುಶಿಲ್ಪವನ್ನು ದಶಾವತಾರ ಶಿಲ್ಪಗಳ ಸರಣಿಕೆಯಲ್ಲಿ ತೋರಲಾಗಿದೆ. ಅದರಲ್ಲಿ ಪರಶುರಾಮನು ತನ್ನ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿರುವನು. ಬಿಲ್ಲು ಪರಶುರಾಮನ ಸಮಕ್ಕೆ ಎತ್ತರವಾಗಿ ಇರುವಂತೆ ನಿರೂಪಿಸಲಾಗಿದ್ದು ಬಿಲ್ಲಿನ ಒಂದು ತುದಿಯು ನೆಲದ ಮೇಲಿದೆ. ಪರಶುವಿನ ಹಿಡಿಕೆಯ ದಂಡ ಭಾಗವನ್ನು ಬಲಗೈಯಲ್ಲಿ ಪರಶುರಾಮನು ಹಿಡಿದಿರುವನು ಹಾಗೂ ಅದರ ಮತ್ತೊಂದು ತುದಿಯು, ಪರಶುವಿನ ಭಾಗ, ನೆಲಕ್ಕೆ ತಾಗುವಂತೆ ಕೆತ್ತಲಾಗಿದೆ. ಪರಶುರಾಮನು ತಲೆಯಲ್ಲಿ ಕಿರೀಟ ಮತ್ತು ಕಿವಿಯಲ್ಲಿ ಕುಂಡಲಗಳನ್ನು ಧರಿಸಿರುವನು. ಅವನು ಧೋತಿ, ಕಟಿಬಂಧ ಹಾಗೂ ನೀಳ ವನಮಾಲೆಯನ್ನು ಧರಿಸಿರುವನು. ಉಳಿದ ಯಾವುದೇ ಆಭರಣಗಳನ್ನು ಶಿಲ್ಪದಲ್ಲಿ ತೋರಿಲ್ಲ.

ಇದೇ ಮಂಟಪದ ಮತ್ತೊಂದು ಕಂಬದಲ್ಲಿ ಪರಶುರಾಮನ ಮತ್ತೊಂದು ಶಿಲ್ಪವು ಇದೆ. ಈ ಶಿಲ್ಪವು ಮೇಲೆ ವಿವರಿಸಿದ ಶಿಲ್ಪಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಇದರಲ್ಲಿ ಪರಶುರಾಮನು ತನ್ನ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿರುವನು. ಬಿಲ್ಲು ಪರಶುರಾಮನ ಸಮಕ್ಕೆ ಎತ್ತರವಾಗಿ ಇರುವಂತೆ ನಿರೂಪಿಸಲಾಗಿದ್ದು ಬಿಲ್ಲಿನ ಒಂದು ತುದಿಯು ನೆಲದ ಮೇಲಿದೆ. ಪರಶುವಿನ ಹಿಡಿಕೆಯ ದಂಡ ಭಾಗವನ್ನು ಬಲಗೈಯಲ್ಲಿ ಪರಶುರಾಮನು ಹಿಡಿದಿರುವನು ಹಾಗೂ ಅದರ ಮತ್ತೊಂದು ತುದಿಯು, ಪರಶುವಿನ ಭಾಗ, ನೆಲಕ್ಕೆ ತಾಗುವಂತೆ ಕೆತ್ತಲಾಗಿದೆ. ಪ್ರಸ್ತುತ ಶಿಲ್ಪದಲ್ಲಿ ಪರಶುರಾಮನು ಧೋತಿ ಧರಿಸಿರುವನು. ಕಿವಿಯಲ್ಲಿ ಕುಂಡಲಗಳು ಮತ್ತು ತಲೆಯಲ್ಲಿ ಕಿರೀಟಮಕುಟವಿದೆ. ಕಿವಿಯಲ್ಲಿ ಕುಂಡಲಗಳು ಭುಜದವರೆಗೆ ಇಳಿಬಿದ್ದಿದೆ. ಕೊರಳಲ್ಲಿ ಕಂಠಹಾರವಿದೆ. ಮೇಲಿನ ಶಿಲ್ಪದಲ್ಲಿ ವನಮಾಲೆಯನ್ನು ಧರಿಸಿದ್ದರೆ, ಈ ಶಿಲ್ಪದಲ್ಲಿ ಅದನ್ನು ಇವನು ಧರಿಸಿಲ್ಲ. ಎರಡೂ ಶಿಲ್ಪಗಳ ನಡುವಿನ ವ್ಯತ್ಯಾಸವೆಂದರೆ ಕಿರೀಟಗಳಲ್ಲಿನ ಭಿನ್ನತೆ ಹಾಗೂ ಆಭರಣಗಳ ಧರಿಸುವಿಕೆಯಲ್ಲಿ ಕಾಣಬಹುದು.

ಪಟ್ಟಾಭಿರಾಮ ದೇವಾಲಯದ ಕಂಬಗಳಲ್ಲಿ ರಾಮನ ಉಬ್ಬುಶಿಲ್ಪಗಳನ್ನು ಕಾಣಬಹುದು. ರಾಮ ಮತ್ತು ಪರಶುರಾಮನ ನಡುವಿನ ವ್ಯತ್ಯಾಸಗಳನ್ನು ಶಿಲ್ಪಿಯು ಅತ್ಯಂತ ಸೂಕ್ಷ್ಮವಾಗಿ ಹಾಗೂ ಸ್ಪಷ್ಟವಾಗಿ ನಿರೂಪಿಸಿರುವುದು ಗಮನಾರ್ಹ. ರಾಮನ ಶಿಲ್ಪಗಳು ಪರಶುರಾಮನನ್ನು ಹೋಲುತ್ತವೆಯಾದರೂ ಅವರು ಹಿಡಿದಿರುವ ಆಯುಧಗಳಲ್ಲಿ ವ್ಯತ್ಯಾಸಗಳನ್ನು ಗುರುತಿಸಬಹುದು. ರಾಮನು ಪರಶುರಾಮನಂತೆ ಎಡಗೈಯಲ್ಲಿ ತನ್ನ ಕಿರೀಟದವರೆಗೆ ಇರುವ ಉದ್ದನೆಯ ಬಿಲ್ಲನ್ನು ಮತ್ತು ಬಲಗೈಯಲ್ಲಿ ಬಾಣದ ಮೊನೆಯು ಮೇಲೆ ಇರುವಂತೆ ಬಾಣವನ್ನು ಹಿಡಿದಿರುವನು. ಬಾಣದ ಮತ್ತೊಂದು ತುದಿಯು ನೆಲಕ್ಕೆ ತಾಗಿದಂತೆ ಇದೆ.

ಮತ್ತೊಂದು ಶಿಲ್ಪದಲ್ಲಿ ಬಾಣವನ್ನು ಸ್ವಲ್ಪ ಮೇಲಕ್ಕೆ ನೆಲಕ್ಕೆ ತಾಗದಂತೆ ರಾಮನು ಹಿಡಿದಿರುವನು. ರಾಮನು ತ್ರಿಭಂಗಿಯಲ್ಲಿದ್ದರೆ ಪರಶುರಾಮನು ದ್ವಿಭಂಗಿಯಲ್ಲಿರುವನು. ರಾಮನ ಬಿಲ್ಲಿನಲ್ಲಿ ಹೂಡುವ ದಾರವನ್ನು ಸ್ಪಷ್ಟವಾಗಿ ತೋರಲಾಗಿದೆ. ಪರಶುರಾಮನ ಬಿಲ್ಲಿನಲ್ಲಿ ದಾರವನ್ನು ತೋರಿಲ್ಲ. ರಾಮನ ಒಂದು ಶಿಲ್ಪದಲ್ಲಿ ರಾಮನ ಬಲಭುಜದ ಹಿಂಬದಿಯಲ್ಲಿ ಬತ್ತಳಿಕೆಯನ್ನು ತೋರಲಾಗಿದೆ. ಈ ಕೆಲವು ವ್ಯತ್ಯಾಸಗಳ ಮೂಲಕ ರಾಮ ಮತ್ತು ಪರಶುರಾಮನ ಶಿಲ್ಪಗಳನ್ನು ಗುರುತಿಸಬಹುದು.

ಮಾಲ್ಯವಂತ ರಘುನಾಥ ದೇವಾಲಯದ ಪೂರ್ವ ದಿಕ್ಕಿನ ಪ್ರವೇಶದ್ವಾರ ಗೋಪುರದ ಅಧಿಷ್ಠಾನದಲ್ಲಿ ದಶಾವತಾರದ ಕಿರು ಉಬ್ಬುಶಿಲ್ಪಗಳಿವೆ. ಅವುಗಳಲ್ಲಿ ರಾಮನ ಶಿಲ್ಪದ ಕೆಳಭಾಗದಲ್ಲಿ ಪರಶುರಾಮನ ಶಿಲ್ಪವಿದೆ. ಪರಶುರಾಮನು ತೋರಣಗಳ ನಡುವೆ ದ್ವಿಭಂಗಿಯಲ್ಲಿ ನಿಂತಿರುವನು. ಅವನು ಕಿರೀಟಮಕುಟ, ಚೆನ್ನವೀರ, ಕೊರಳಲ್ಲಿ ಹಾರ, ಕಟಿಬಂಧ, ನೀಳ

ವನಮಾಲೆ, ಕಾಲ್ಗಡಗ, ಕಿವಿಯಲ್ಲಿ ಕುಂಡಲಗಳನ್ನು ಧರಿಸಿರುವನು. ಎಡಗೈಯಲ್ಲಿ ತನ್ನ ಕಿರೀಟದವರೆಗೆ ಇರುವ ದಪ್ಪಗಿರುವ ಉದ್ದನೆಯ ಬಿಲ್ಲನ್ನು ಹಿಡಿದಿರುವನು. ಬಲಗೈಲ್ಲಿ ಪರಶುರಾಮನು ತನ್ನ ಕಿರೀಟದವರೆಗೆ ಇರುವಂತೆ ಎತ್ತಿ ಹಿಡಿದಿರುವನು. ಪರಶು ಅತ್ಯಂತ ಸ್ಪಷ್ಟವಾಗಿ ತೋರಲಾಗಿದೆ. ರಾಮನು ತ್ರಿಭಂಗಿಯಲ್ಲಿ ನಿಂತಿರುವನು. ಅವನು ಹಿಡಿದಿರುವ ಬಿಲ್ಲು ತೆಳ್ಳಗಿದ್ದು ರಾಮನ ಕಿರೀಟದವರೆಗೆ ಇದೆ. ರಾಮನು ಬಲಗೈಲ್ಲಿ ಬಾಣವನ್ನು ಹಿಡಿದಿರುವನು. ಅದರ ಕೆಳ ತುದಿಯು ನೆಲಕ್ಕೆ ತಾಗಿದಂತೆ ಇದ್ದು ಬಾಣದ ಮೊನೆಯ ಭಾಗವು ಮೇಲ್ಮುಖವಾಗಿದೆ. ರಾಮನು ಧೋತಿ, ಕಿರೀಟಮಕುಟ, ಕುಂಡಲಗಳು, ಕಂಠಹಾರ, ನೀಳ ವನಮಾಲೆ, ಕಾಲ್ಗಡಗ ಮತ್ತಿತರೆ ಆಭರಣಗಳನ್ನು ಧರಿಸಿರುವನು.

ಹಂಪಿ ಪರಿಸಿರದಲ್ಲಿನ ಕೃಷ್ಣ ದೇವಾಲಯದಲ್ಲಿನ ಶಿಲ್ಪವು ಪಟ್ಟಾಭಿರಾಮ ದೇವಾಲಯದ ಶಿಲ್ಪವನ್ನು ಹೋಲುತ್ತದೆ. ಆನೆಗೊಂದಿ, ಅನಂತಶಯನಗುಡಿ ಹೊಸಪೇಟೆಯ ವಡಕರಾಯನ ದೇವಾಲಯಗಳಲ್ಲಿಯೂ ಪರಶುರಾಮನ ಶಿಲ್ಪಗಳು ಇದ್ದು ಅವುಗಳು ಪಟ್ಟಾಭಿರಾಮ ದೇವಾಲಯದ ಶಿಲ್ಪಗಳ ಶೈಲಿಯನ್ನೇ ಹೊಂದಿವೆ.[6] ಹಂಪಿ ಪರಿಸರದಲ್ಲಿ 11ಕ್ಕೂ ಅಧಿಕ ಪರಶುರಾಮನ ಶಿಲ್ಪಗಳು ಹಂಪಿ ಪರಿಸರದಲ್ಲಿ ದೊರಕಿವೆ. ಈ ಎಲ್ಲಾ ಶಿಲ್ಪಗಳು ಆಗಮಗಳ ಉಲ್ಲೇಖಗಳಂತೆ ಇಲ್ಲದೆ ಶಿಲ್ಪಿಯು ಸ್ವತಂತ್ರನಾಗಿ ಶಿಲ್ಪಗಳನ್ನು ಕೆತ್ತಿರುವುದು ಗಮನಾರ್ಹ.

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. ಗೋಪಿನಾಥರಾವ್, ಟಿ.ಎ. **ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ, ಸಂ.1,** ಪು. 19, 60–61, 119–120 ಮತ್ತು 180–186; ಸುರೇಶ್ ಕೆ.ಎಂ., ಸ್ಕಲ್ಚರಲ್ ಆರ್ಟ್ ಆಫ್ ಹಂಪಿ, ಪು. 100–102.
2. ಶತಪಥ ಬ್ರಾಹ್ಮಣ, ಪು. 15–20, 27–29; ಶ್ರೀನಿವಾಸ ಪಾಡಿಗಾರ, **ಪೂರ್ವೋಕ್ತ,** ಪು. 208–215, 220–221; ಗೋಪಿನಾಥರಾವ್ ಟಿ.ಎ., ಪೂರ್ವೋಕ್ತ, ಪು. 19, 60–61, 119–120 ಮತ್ತು 180–186; ಪದ್ಮಜಾ ದೇಸಾಯಿ, ಹಂಪಿ ಪರಿಸರದ ವೈಷ್ಣವ ಶಿಲ್ಪಗಳು, (ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 178–180.
3. ಸುರೇಶ್ ಕೆ.ಎಂ., ಪೂರ್ವೋಕ್ತ, ಪು. 100–102.
4. ಅದೇ
5. ಅದೇ
6. ಹಂಪಿಯ ಕೇಂದ್ರ ವಲಯದಲ್ಲಿ 11ಕ್ಕೂ ಅಧಿಕ ಪರಶುರಾಮನ ಶಿಲ್ಪಗಳು ದೊರಕಿವೆ. ಹಂಪಿ ಬಫರ್ ಪ್ರದೇಶಗಳಲ್ಲಿರುವ ಪರಶುರಾಮನ ಶಿಲ್ಪಗಳನ್ನು ಪ್ರಸ್ತುತ ಲೇಖನದ ವ್ಯಾಪ್ತಿಯಲ್ಲಿ ಚರ್ಚಿಸಿಲ್ಲ. ಆ ಪ್ರದೇಶದಲ್ಲಿರುವ ದೇವಾಲಯಗಳಲ್ಲಿಯೂ ಪರಶುರಾಮನ ಶಿಲ್ಪಗಳು ದೊರಕಿವೆ. ಅವುಗಳನ್ನು ಸೇರಿದರೆ 16ಕ್ಕೂ ಅಧಿಕ ಶಿಲ್ಪಗಳು ಲಭ್ಯವಿದೆ. ವಿರೂಪಾಕ್ಷ ದೇವಾಲಯದ ರಂಗಮಂಟಪದ ಛಾವಣಿಯಲ್ಲಿ ವರ್ಣಚಿತ್ರಗಳಿವೆ. ಅದರಲ್ಲಿರುವ ವಿಷ್ಣುವಿನ ದಶಾವತಾರ ನಿರೂಪಣೆಯಲ್ಲಿ ಪರಶುರಾಮನನ್ನು ತೋರಲಾಗಿದೆ.

❑

19. ಹಂಪೆಯ ಪ್ರಸನ್ನ ವಿರೂಪಾಕ್ಷ ದೇವಾಲಯದಲ್ಲಿರುವ ಅಪರೂಪದ ಬ್ರಹ್ಮನ ಶಿಲ್ಪ

– ಡಾ. ಪದ್ಮಜಾ ದೇಸಾಯಿ

ಪ್ರಸ್ತಾವನೆ :

ಕ್ರಿ.ಶ. 14ನೆಯ ಶತಮಾನದ ಪೂರ್ವಾರ್ಧದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯು ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವದ ಘಟನೆಯಾಗಿದೆ. ದಕ್ಷಿಣ ಭಾರತವನ್ನಾಳಿದ ರಾಜ ಮನೆತನಗಳಾದ ವಾರಂಗಲ್ಲಿನ ಕಾಕತೀಯರು, ಮಧುರೆಯ ಪಾಂಡ್ಯರು, ದೇವಗಿರಿಯ ಯಾದವರು ಮತ್ತು ದ್ವಾರಸಮುದ್ರದ ಹೊಯ್ಸಳರು, ಅಲ್ಲಾ–ಉದ್–ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರನ ದಾಳಿಗೆ ತುತ್ತಾದರು. ಇದರ ಪರಿಣಾಮವಾಗಿ ಎಲ್ಲೆಡೆ ರಾಜಕೀಯ ಅಸ್ಥಿರತೆ, ಕ್ಷೋಭೆ ಮತ್ತು ಧಾರ್ಮಿಕ ವಿಪ್ಲವಗಳು ಕಾಣಿಸಿಕೊಂಡವು. ಈ ಸನ್ನಿವೇಶದಲ್ಲಿ ಹಿಂದೂ ಧರ್ಮ ಮತ್ತು ಭಾರತಿಯ ಸಂಸ್ಕೃತಿಯನ್ನು ರಕ್ಷಿಸುವ ಸಾಧನೆ ವಿಜಯನಗರ ಸಾಮ್ರಾಜ್ಯದಿಂದಾಯಿತು. ಈ ಸಾಮ್ರಾಜ್ಯವು ಧರ್ಮರಕ್ಷಣೆಗಾಗಿ ಹುಟ್ಟಿಕೊಂಡಿತು. ಸರಿ ಆದರೆ ವಿಜಯನಗರದ ಅರಸರು ರಕ್ಷಿಸಬಯಸಿದ ಧರ್ಮ ಕೇವಲ ಹಿಂದೂ ಧರ್ಮವಷ್ಟೇ ಅಲ್ಲಾ ಎಲ್ಲಾ ಧಾರ್ಮಿಕ ಪಂಥಗಳನ್ನು ಬೆಳೆಸಿ ಪೋಶಿಸಿದ್ದಕ್ಕೆ ಸಾಕ್ಷಿಗಳೇ ಸ್ಮಾರಕಗಳು ಮತ್ತು ಶಿಲ್ಪಗಳು ಇಡೀ ಸಾಮ್ರಾಜ್ಯದಲ್ಲಿ ಹರಡಿವೆ.[1]

ಪ್ರಸ್ತುತ ಪ್ರಬಂಧದ ಶೀರ್ಷಿಕೆಯು "ಹಂಪೆಯ ಪ್ರಸನ್ನ ವಿರೂಪಾಕ್ಷ ದೇವಾಲಯದಲ್ಲಿರುವ ಅಪರೂಪದ ಬ್ರಹ್ಮನ ಶಿಲ್ಪ", ಎಂಬುದಾಗಿದ್ದು, ಈ ಶಿಲ್ಪವು ಆಗಮ ಸಹಿತವಾಗಿ ರಚನೆಯಾಗಿದೆಯೋ ಅಥವಾ ಆಗಮ ರಹಿತವಾಗಿದೆಯೋ ಎಂಬುದನ್ನು ಚರ್ಚಿಸುವುದು, ಈ ಲೇಖನದ ಉದ್ದೇಶವಾಗಿದೆ.

ಬ್ರಹ್ಮನ ಶಿಲ್ಪದ ಇತಿಹಾಸ ಮತ್ತು ಪೌರಾಣಿಕ ಹಿನ್ನೆಲೆ :

ಹಿಂದೂ ಧರ್ಮದ ತ್ರಿಮೂರ್ತಿಗಳಲ್ಲಿ ಬ್ರಹ್ಮ ವಿಷ್ಣು ಮತ್ತು ಮಹೇಶ್ವರ. ಈ ಮೂರು ದೇವತೆಗಳು ಹಿಂದೂ ಪಂಥವನ್ನು ಪ್ರತಿನಿಧಿಸುವ ದೇವತೆಗಳಾಗಿದ್ದಾರೆ ಎಂಬುದು ವೇದಗಳ ಕಾಲದಿಂದಲೂ ಈ ದೇವತೆಗಳು ಅಸ್ತಿತ್ವದಲ್ಲಿದ್ದಾರೆ. ಬ್ರಹ್ಮ–ಸೃಷ್ಟಿಕರ್ತ, ವಿಷ್ಣು–ರಕ್ಷಕ, ಶಿವ–ಲಯಕರ್ತ, ಹೀಗೆ ಇಡೀ ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ ಮತ್ತು ಲಯ ಕಾರ್ಯಗಳನ್ನು ಈ ತ್ರಿಮೂರ್ತಿಗಳು ನಿರ್ವಹಿಸುತ್ತಾರೆ. ಬ್ರಹ್ಮನನ್ನು ಬಂಗಾರದ ತತ್ತಿಯಿಂದ ಜನಿಸಿದವನೆಂದು ಅವನನ್ನು ಹಿರಣ್ಯಗರ್ಭನೆಂದು ಸಂಬೋಧಿಸಲಾಗಿದೆ. ನೀರಿನಲ್ಲಿ ಬೆಳೆಯುವ ಕಮಲದಲ್ಲಿ ಕಮಲಜ ಹುಟ್ಟಿದನೆಂದು ಗುರುತಿಸಲಾಗಿದೆ. ದಕ್ಷನ ತಂದೆ ಪ್ರಜಾಪತಿಯೆಂದು ಪರಿಗಣಿಸಲಾಗಿದೆ. 'ಅಜ' ಅಂದರೆ ಬ್ರಹ್ಮ, ಕಲಿಯುಗದಲ್ಲಿ ಬ್ರಹ್ಮನು ಮತ್ಸ್ಯಾವತಾರದಲ್ಲಿ ಜಗತ್ತನ್ನು ರಕ್ಷಿಸಿದನು.[2]

ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಈ ಮೂರು ದೇವತೆಗಳಲ್ಲಿ ಶ್ರೇಷ್ಠತೆ ಬಗ್ಗೆ ವಾದಗಳು ನಡೆಯುತ್ತವೆ. ಬ್ರಹ್ಮ ನಾನು ಸೃಷ್ಟಿಮಾಡುತ್ತೇನೆ, ಎಂದು ಹೇಳುತ್ತಾನೆ, ವಿಷ್ಣು ನಾನು ಸ್ಥಿತಿಕಾರನಾಗಿದ್ದೇನೆ, ಎಂದು ಹೇಳುತ್ತಾನೆ. ಆದರೆ ಶಿವ ಲಯಕಾರ ಎಂದು ತಿಳಿಸಿ ಈ ವಾದದಲ್ಲಿ ಸೋಲನ್ನು ಅನುಭವಿಸದೆ ವಿಷ್ಣು ಮತ್ತು ಬ್ರಹ್ಮನ ಮಧ್ಯ ಅಗ್ನಿ ಸ್ತಂಭವಾಗಿ ನಿಂತು ಹೇಳುತ್ತಾನೆ. ಈ ಅಗ್ನಿಸ್ತಂಭದ ಆದಿ ಮತ್ತು ಅಂತ್ಯವನ್ನು ಹುಡುಕಿ ಎಂದು ಹೇಳಿದಾಗ, ವಿಷ್ಣುವು ವರಾಹ ರೂಪವನ್ನು

ಹೊಂದಿ ಭೂಮಿಯ ಆಳದಲ್ಲಿ ಅಗೆಯುತ್ತಾನೆ. ಬ್ರಹ್ಮನು ಹಂಸವಾಹನನಾಗಿ ಸ್ತಂಭದ ತುದಿಯನ್ನು ಗುರುತಿಸುವಲ್ಲಿ ಇಬ್ಬರು ಸೋತು ಶರಣಾಗುತ್ತಾರೆ. ಬ್ರಹ್ಮನ ಐದು ತಲೆಗಳಲ್ಲಿ ಒಂದು ತಲೆಯನ್ನು ಕತ್ತರಿಸುತ್ತಾನೆ. ಬ್ರಹ್ಮನು ಅಗ್ನಿಸ್ತಂಭದ ತುದಿಯನ್ನು ಗುರುತಿಸದೆ ಸೋತ ನಂತರ ಅತ್ರಿಋಷಿ ಮತ್ತು ಅನುಸೂಯರಿಂದ ಜನ್ಮವನ್ನು ಪಡೆದು ದತ್ತಾತ್ರೇಯ ರೂಪವನ್ನು ಪಡೆಯುತ್ತಾನೆ. ದತ್ತಾತ್ರೇಯ ಶಿಲ್ಪಕ್ಕೆ ನಾಲ್ಕು ಮುಖಗಳಿರುತ್ತವೆ.[3]

ಶಿವನ ಲೀಲಾಮೂರ್ತಿಗಳಲ್ಲಿ ಸಂಹಾರ ಮೂರ್ತಿಯಾದ ತ್ರಿಪುರಾಂತಕ ರೂಪದ ಮೂರ್ತಿಯ ಉಪಕಥೆಯಲ್ಲಿ ಬ್ರಹ್ಮನು ಶಿವನ ರಥದ ಸಾರಥಿಯಾಗಿರುತ್ತಾನೆ. ಶಿವನ ಲಿಂಗೋದ್ಭವ ರೂಪದಲ್ಲಿ ಅಗ್ನಿಸ್ತಂಭದ ತುದಿಯನ್ನು ಗುರುತಿಸುವ ಕಾರಣಕ್ಕೆ ಬ್ರಹ್ಮನನ್ನು ಹಂಸದ ರೂಪದಲ್ಲಿ ತೋರಿಸಲಾಗುತ್ತದೆ.

ವೈಷ್ಣವ ಶಿಲ್ಪಗಳಲ್ಲಿ ರಂಗನಾಥನ ಶಿಲ್ಪದಲ್ಲಿ ಬ್ರಹ್ಮನನ್ನು ರಂಗನಾಥನ ನಾಭಿಯಿಂದ ಹೊರಬಂದ ಕಮಲದಲ್ಲಿ ಕುಳಿತಿರುವ ಚತುರ್ಮುಖ ಬ್ರಹ್ಮನನ್ನು ತೋರಿಸಲಾಗುತ್ತದೆ.[4]

ಹಿಂದೂ ದೇವತೆಗಳಾದ ತ್ರಿಮೂರ್ತಿಗಳಲ್ಲಿರುವ ವಿಷ್ಣು ಮತ್ತು ಶಿವನಿಗಿರುವ ಸ್ಥಾನವು ಬ್ರಹ್ಮನಿಗೆ ಇಲ್ಲ. ಬ್ರಹ್ಮನಿಗೆ ಸ್ವತಂತ್ರ ದೇವಾಲಯಗಳಿಲ್ಲ. ಬ್ರಹ್ಮನ ಶಿಲ್ಪಗಳನ್ನು ವಿಷ್ಣು ಮತ್ತು ಶಿವ ದೇವಾಲಯಗಳಲ್ಲಿ ಪರಿವಾರ ದೇವತೆಯಾಗಿ ಸ್ಥಾಪನೆ ಮಾಡಲಾಗುತ್ತದೆ. ಶೈವರು ಶಿವನ್ನು ಆರಾಧಿಸಿ ಶೈವ ಪಂಥಕ್ಕೆ ಸೇರುತ್ತಾರೆ, ವೈಷ್ಣವರು ವಿಷ್ಣುವನ್ನು ಆರಾಧಿಸಿ ವಿಷ್ಣು ಪಂಥಕ್ಕೆ ಸೇರುತ್ತಾರೆ. ಆದರೆ ಬ್ರಹ್ಮನನ್ನು ಆರಾಧಿಸುವವರು ಬ್ರಹ್ಮನ ಪಂಥಕ್ಕೆ ಸೇರಬೇಕು. ಆದರೆ ಬ್ರಹ್ಮನನ್ನು ಆರಾಧಿಸುವವರು ಇಲ್ಲ. ಅವನ ಪಂಥವು ಇಲ್ಲ. ಬ್ರಹ್ಮನ ಶಿಲ್ಪಗಳು ಅಲ್ಲಲ್ಲಿ ಕಂಡುಬರುತ್ತವೆ ವೈಷ್ಣವ ಧರ್ಮ, ಶೈವಧರ್ಮಗಳು ಇದ್ದಂತೆ ಬ್ರಹ್ಮಧರ್ಮ ಎಂಬುದು ತ್ರಿಮೂರ್ತಿ ಅಥವಾ ತ್ರಯಕತ್ವದಲ್ಲಿ ಇಲ್ಲ. ಆದರೆ ಪ್ರಾಚೀನ ಕಾಲದಿಂದಲೂ ಅಸ್ಥಿದಲ್ಲಿದ್ದ ಶೈವ ಮತ್ತು ವೈಷ್ಣವ ಧರ್ಮಗಳಿಗೆ ಶ್ರೇಷ್ಠತೆಗೋಸ್ಕರ ಸಂಘರ್ಷಗಳು ನಡೆದು, ಶೈವ ಮತ್ತು ವೈಷ್ಣವ ದೇವಾಲಯಗಳನ್ನು ನಿರ್ಮಿಸಿ ಶಿವ ಮತ್ತು ವಿಷ್ಣುವನ್ನು ಆರಾಧಿಸುವುದನ್ನು ಇತಿಹಾಸದುದ್ದಕ್ಕೂ ಕಾಣುತ್ತೇವೆ.[5]

ಶಿವನ ಸಂಹಾರ ಮೂರ್ತಿಗಳಲ್ಲಿ ಒಂದಾದ ಬ್ರಹ್ಮಶಿರಶ್ಛೇದಕ ಮೂರ್ತಿಯ ಬಗ್ಗೆ ವರಾಹ ಪುರಾಣವು ವಿವರಿಸುವಂತೆ. ಶಿವನಿಂದ ಬ್ರಹ್ಮನ ಐದನೇ ತಲೆಯು ಎಡಗೈಯ ಹೆಬ್ಬಟ್ಟಿನಿಂದ ಕತ್ತರಿಸಲ್ಪಟ್ಟಿತ್ತು. ಬ್ರಹ್ಮಹತ್ಯಾ ದೋಷದಿಂದ ಶಿವನು ಕಾಪಾಲಿಕನಾದ. ಬ್ರಹ್ಮನ ಐದನೇ ತಲೆಯು ಶಿವನ ಅಂಗೈಗೆ ಅಂಟಿಕೊಂಡಿತ್ತು. 12 ವರ್ಷವಿರುವ ಶಾಪದ ನಂತರ ಆ ತಲೆಯು ಕೆಳಗೆ ಕಳಚಿ ಬಿದ್ದಿತು ನಂತರ ಶಿವನು ಕಪಾಲ ವಿಮೋಚನಾದನು.

ಕೂರ್ಮ ಪುರಾಣದ ಪ್ರಕಾರ ಬ್ರಹ್ಮನನ್ನು ತಪಸ್ವಿಗಳಾದ ಋಷಿಗಳು ಕೇಳಿದರು. ಬ್ರಹ್ಮಾಂಡದ ಮೂಲ ಯಾವುದು ಎಂದು, ಆದರೆ ಬ್ರಹ್ಮನು ಕೋಪಗೊಂಡನು ಅಲ್ಲಿ ಶಿವನು ಪ್ರತ್ಯಾಕ್ಷನಾಗಿ ನಂತರ ಇಬ್ಬರಿಗೂ ವಾದಗಳಾದವು. ನಂತರ ಶಿವನು ಉಗ್ರರೂಪ ಭೈರವನ ಅವತಾರವನ್ನು ತಾಳಿ. ಬ್ರಹ್ಮನ ತಲೆಯನ್ನು ಕತ್ತರಿಸಿದನು. ಎಂದು ಈ ಪುರಾಣ ವಿವರಿಸುತ್ತಾರೆ.[6]

ಶ್ರೀತತ್ವನಿಧಿಯ ಪ್ರಕಾರ ಶಿವನ ರೂಪವು ಉಗ್ರವಾಗಿರಬೇಕು. ಮೂರುಕಣ್ಣುಗಳು, ನಾಲ್ಕು ಕೈಗಳಿರಬೇಕು. ಜಟಾಮಕುಟವನ್ನು ಹೊಂದಿರಬೇಕು. ಕಿವಿಗಳಲ್ಲಿ ಮಕರಕುಂಡಲ ಮತ್ತು ಪತ್ರಕುಂಡಲಗಳಿರಬೇಕು. ಮೇಲಿನ ಬಲಗೈಯಲ್ಲಿ ವಜ್ರ ಮತ್ತು ಮೇಲಿನ ಎಡಗೈಯಲ್ಲಿ ಪರುಶು, ಕೆಳಗಿನ ಎಡಗೈಯಲ್ಲಿ ಬ್ರಹ್ಮನ ತಲೆಯಿರಬೇಕು ಮತ್ತು ಬಲಗೈಯಲ್ಲಿ ಶೂಲವಿರಬೇಕು. ಎಂಬ ಲಕ್ಷಣವನ್ನು ತಿಳಿಸುತ್ತದೆ. ಈ ಎಲ್ಲಾ ಪುರಾಣ ಕಥೆಗಳಿಂದ ಬ್ರಹ್ಮನ ಐದು ತಲೆಗಳಲ್ಲಿ ಒಂದು ತಲೆ ಕತ್ತರಿಸಿದಾಗ ಅವನು ಚತುರ್ಮುಖ ಬ್ರಹ್ಮನಾದ, ಆದರೆ ಪುರಾಣಗಳಲ್ಲಿ ಆಗಮಗಳಲ್ಲಿರುವ ವಿಧಿಯಂತೆ ಭಗ್ನ ಮೂರ್ತಿಯನ್ನುಪೂಜಿಸುವುದು ನಿಷೇಧವಿದೆ. ಅದಕ್ಕಾಗಿ ಬ್ರಹ್ಮನಿಗೆ ಪೂಜೆ ಇಲ್ಲವೆಂದು ಊಹಿಸಬಹುದು.[7]

ಬ್ರಹ್ಮನಿಗೆ ಪೂಜೆ ಇಲ್ಲ ಎಂಬುದು ಸತ್ಯ. ಆದರೆ ಶಿವ ಮತ್ತು ವಿಷ್ಣು ದೇವಾಲಯಗಳಲ್ಲಿ ಉತ್ತರ ಗೋಡೆಯ ಕೋಷ್ಟಕದಲ್ಲಿ ಬ್ರಹ್ಮನ ಶಿಲ್ಪವಿರಬೇಕೆಂದು ನಿಯಮವಿದೆ. ಬ್ರಹ್ಮನಿಗೂ ಇತರದೇವತೆಗಳಂತೆ ಪೂಜೆ ನಡೆಯಬೇಕೆಂಬ ನಿಯಮವಿದೆ. ಪರಿವಾರ ದೇವತೆಗಳಲ್ಲಿ ಪ್ರಮುಖನೆಂದು ಪರಿಗಣಿಸಿ, ಶಿವ ಅಥವಾ ವಿಷ್ಣು ದೇವಾಲಯದ ಮೊದಲನೆಯ ಪ್ರಾಕಾರದಲ್ಲಿ ಬ್ರಹ್ಮನ ಚಿಕ್ಕ ದೇವಾಲಯ ಇರಬೇಕೆಂಬುದು ಇದೆ. ಇಡೀ ಭಾರತದಲ್ಲಿ ಬ್ರಹ್ಮನಿಗಾಗಿ ಸ್ವತಂತ್ರ ದೇವಾಲಯಗಳು

ಇರುವುದು ವಿರಳ. ಆದರೆ ರಾಜಸ್ಥಾನದ ಪುಷ್ಕರದಲ್ಲಿ ಬ್ರಹ್ಮನಿಗಾಗಿ ಸ್ವತಂತ್ರ ದೇವಾಲಯವಿದೆ. ಆದರೆ ಕರ್ನಾಟಕದಲ್ಲಿ ಬ್ರಹ್ಮನಿಗಾಗಿ ದೇವಾಲಯವಿದ್ದ ಉಲ್ಲೇಖವಿಲ್ಲ.[8]

ಬಾದಾಮಿ ಚಾಲುಕ್ಯರ ಕಾಲದ ತ್ರೈಪುರುಷ ದೇವಾಲಯವು ಕ್ರಿ.ಶ.699 ರಲ್ಲಿ ನಿರ್ಮಾಣವಾದ ಪ್ರಾಚೀನ ದೇವಾಲಯವಾಗಿದ್ದು ತ್ರೈಪುರುಷರನ್ನು ಪ್ರತಿನಿಧಿಸುತ್ತದೆ.

ಪ್ರತಿಮಾ ಶಾಸ್ತ್ರದ ವಿವರ :

ಶಿಲ್ಪಶಾಸ್ತ್ರ ಗ್ರಂಥವಾದ ರೂಪಮಂಡನದ ಪ್ರಕಾರ ಬ್ರಹ್ಮನ ದೇವಾಲಯದ ಬಗ್ಗೆ ಸಂಪೂರ್ಣವಾಗಿ ವಿವರಣೆಯನ್ನು ನೀಡುತ್ತದೆ. ಬ್ರಹ್ಮನನ್ನು ಪರಿವಾರ ದೇವತೆಯನ್ನಾಗಿ ಪೂಜಿಸಬೇಕೆಂದು ವಿವರಿಸುತ್ತದೆ. ಇದರಿಂದ ಬ್ರಹ್ಮನಿಗಾಗಿ ಸ್ವತಂತ್ರ ದೇವಾಲಯಗಳು ಇಲ್ಲ ಎಂಬುದು ತಿಳಿದು ಬರುತ್ತದೆ.

ರೂಪಂಡನದ ಪ್ರಕಾರ ಬ್ರಹ್ಮನ ಶಿಲ್ಪದ ಪ್ರತಿಮಾಲಕ್ಷಣವನ್ನು ಈ ರೀತಿಯಾಗಿ ವಿವರಿಸುತ್ತದೆ. ಬ್ರಹ್ಮನಿಗೆ ಶಾಂತನೋಟವಿರುವ ನಾಲ್ಕು ಮುಖಗಳು ಇರಬೇಕು, ಈ ನಾಲ್ಕು ಮುಖಗಳು, ನಾಲ್ಕು ವೇದಗಳನ್ನು, ನಾಲ್ಕು ಯುಗಗಳನ್ನು ಮತ್ತು ನಾಲ್ಕು ವರ್ಣಗಳನ್ನು ಸಂಕೇತಿಸುತ್ತವೆ. ಆದರೆ ಬ್ರಹ್ಮನಿಗೆ ಐದು ತಲೆಗಳು ಒಂದು ತಲೆಯನ್ನು ಶಿವನು ಕತ್ತರಿಸಿದ ಎಂಬುದನ್ನು ಆಗಲೇ ಬ್ರಹ್ಮಶಿರಶ್ಛೇದಕ ಶಿಲ್ಪದ ವಿವರಣೆಯನ್ನು ಪೌರಾಣಿಕ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಬ್ರಹ್ಮನ ನಾಲ್ಕು ತಲೆಗಳು ಚತುರ್ಥಾಂಶವನ್ನು ಪ್ರತಿಬಿಂಬಿಸುತ್ತವೆ. ಬ್ರಹ್ಮನ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿ, ಕುಳಿತ (ಪದ್ಮಾಸನ) ಭಂಗಿಯಲ್ಲಿ ಪದ್ಮಪೀಠದ ಮೇಲೆ ಅಥವಾ ಹಂಸದ ಮೇಲೆ ಕುಳಿತಿರಬೇಕು, ಎಂಬುದನ್ನು ರೂಪಮಂಡನ ವಿವರಿಸುತ್ತದೆ.[9]

ಶಿಲ್ಪರತ್ನದ ಪ್ರಕಾರ ಬ್ರಹ್ಮನ ಶಿಲ್ಪದ ಪ್ರತಿಮಾ ಲಕ್ಷಣವು ಈ ರೀತಿಯಾಗಿದೆ. ಬ್ರಹ್ಮನು ಲಂಬಕೂರ್ಚಾಸನದ ಮೇಲೆ ಕುಳಿತಿರಬೇಕು, ಲಂಬಕೂರ್ಚಾಸನದ ಸಾಹಿತ್ಯಿಕ ಅರ್ಥವು ಬ್ರಹ್ಮನು ಕುಳಿತಿರುವ ಪೀಠವು ಉದ್ದವಾದ ಹುಲ್ಲಿನ ಚಾಪೆ ಎಂದು ಅರ್ಥ. ಈ ಪೀಠದ ಮೇಲೆ ಬ್ರಹ್ಮನು ಯೋಗಾಸನ ಭಂಗಿಯಲ್ಲಿ ಕುಳಿತಿರಬೇಕು ಎಂದು ತಿಳಿಸುತ್ತದೆ. ಬ್ರಹ್ಮನ ಶಿಲ್ಪವು ನಿಂತ ಭಂಗಿಯಲ್ಲಿದ್ದರೆ, ಪದ್ಮ ಪೀಠದ ಮೇಲೆ ನಿಂತಿರಬೇಕು ಕೆನೆ–ಹಳದಿ ಬಣ್ಣವನ್ನು ಹೊಂದಿರಬೇಕು, ಕಣ್ಣುಗಳು ಕೆಂಪು ಮತ್ತು ಹಳದಿ ಬಣ್ಣ ಮಿಶ್ರಿತ (ಆರೆಂಜ್‌ಕಲರ್) ಇರಬೇಕು, ಬ್ರಹ್ಮನು ಜಟಾಮಕುಟವನ್ನು ಹೊಂದಿರಬೇಕು. ಯಜ್ಞೋಪವೀತವು ಬಿಳಿಯ ಬಣ್ಣವಿರಬೇಕು, ಬಿಳಿಯ ಬಣ್ಣದ ಗಂಧದಿಂದ ಅವನ ದೇಹಕ್ಕೆ ಲೇಪನವಾಗಿರಬೇಕು, ಬಿಳಿ ಬಣ್ಣದ ಹೂವಿನ ಹಾರವನ್ನು ಧರಿಸಿ, ಕಟಿಯ ಸುತ್ತ ಸಿಂಹದ ಚಿತ್ರವಿರುವ ಕಟಿಸೂತ್ರ, ಕಟಿಭಾಗದಿಂದ ಕೆಳಗಿನ ವಸ್ತ್ರವು ಬಿಳಿಯದಾಗಿರಬೇಕು, ಕಟಿಯಿಂದ ಮೇಲಿನ ಭಾಗವು ಜಿಂಕೆಯ ಚರ್ಮವು ಉಪವೀತದ ಮಾದರಿಯನ್ನು ಹೊಂದಿರಬೇಕು. ಕಿವಿಗಳಲ್ಲಿ ಬಂಗಾರದ ಅಥವಾ ಮಾಣಿಕ್ಯದಿಂದ ರಚಿತವಾದ ಕುಂಡಲಗಳನ್ನು ಧರಿಸಿರಬೇಕು.[10]

ಸುಪ್ರಭೇದಾಗಮದ ಪ್ರಕಾರ ಬ್ರಹ್ಮನ ತಲೆಯ ಮೇಲೆ ಧರಿಸಿರುವ ಜಟಾಮಕುಟದ ಬಣ್ಣವು ಕೆಂಪುಬಣ್ಣವನ್ನು ಹೊಂದಿರಬೇಕು, ಶಿಲ್ಪರತ್ನ ಮತ್ತು ವಿಷ್ಣುಪುರಾಣದ ಪ್ರಕಾರ ಬಿಳಿ ಮತ್ತು ಕುಂಕುಮ ಬಣ್ಣವನ್ನು ಹೊಂದಿರಬೇಕು. ಕಣ್ಣಗಳನ್ನು ಮುಚ್ಚಿ ಧ್ಯಾನದಲ್ಲಿ ಮಗ್ನವಾಗಿರುವಂತೆ ಇರಬೇಕೆಂದು ತಿಳಿಸಿದೆ.[11]

ರೂಪಮಂಡನವು ಬ್ರಹ್ಮನ ಶಿಲ್ಪವು ಗಡ್ಡಧಾರಿಯಾಗಿರಬೇಕು, ಹಂಸದ ಮೇಲೆ ಕುಳಿತಿರಬೇಕು, ಬ್ರಹ್ಮನ ಎಡ ಮತ್ತು ಬಲಕ್ಕೆ ಅವನ ಪತ್ನಿಯರಾದ ಸರಸ್ವತಿ ಮತ್ತು ಸಾವಿತ್ರಿ ಇರಬೇಕು, ಅವರು ವಸ್ತ್ರ ಮತ್ತು ಆಭರಣಗಳನ್ನು ಧರಿಸಿ ತ್ರಿಭಂಗಿಯಲ್ಲಿರಬೇಕೆಂದು ತಿಳಿಸುತ್ತದೆ.[12]


ಬ್ರಹ್ಮನು ನಾಲ್ಕು ಕೈಗಳಲ್ಲಿಹಿಡಿದಿರುವ ವಸ್ತುಗಳನ್ನು ಪರಿಕರಗಳು ಎಂದು ಕರೆಯಬಹುದು. ಅವುಗಳಲ್ಲಿ ಪ್ರಮುಖವಾಗಿ ಸ್ರುವ, ಸ್ರುಕ್, ಅಜ್ಜಸ್ಥಾಲಿ(ತುಪ್ಪದಿಂದ ತುಂಬಿದ ಮಡಿಕೆ) ಅಥವಾ ಕಮಂಡಲ, ಅಕ್ಷಮಾಲೆ(ಜಪಮಾಲೆ), ಕುರ್ಚಾ(ಹುಲ್ಲಿನ ಕಟ್ಟು), ಪುಸ್ತಕ(ತಾಳೆ ಎಳೆಯ ಕಟ್ಟು), ವರದ ಮತ್ತು ಅಭಯ ಹಸ್ತಗಳು, ಈ ರೀತಿಯಾದ ಪರಿಕರಗಳು ನಾಲ್ಕು ಕೈಗಳನ್ನು ಹೊಂದಿರುವ ಬ್ರಹ್ಮನ ಕೈಯಲ್ಲಿದ್ದರೆ, ಬ್ರಹ್ಮನ ಪ್ರತಿಮಾಲಕ್ಷಣವಾಗಿರುತ್ತದೆ. ಆ ಶಿಲ್ಪವನ್ನು ಬ್ರಹ್ಮನೆಂದು ಗುರುತಿಸಬಹುದು. ಆದರೆ ಆಗಮಗಳು ನಿರ್ದಿಷ್ಟವಾದ ಆಯುಧಗಳನ್ನು ನಿರ್ದೇಶಿಸುತ್ತವೆ. ಬ್ರಹ್ಮನಿಗಿರುವ ನಾಲ್ಕು ಕೈಗಳಲ್ಲಿ ಇವೇ ಪರಿಕರಗಳು

ಇರಬೇಕೆಂದು ಹೇಳುವ ಆಗಮ ಇಲ್ಲ. ಆದರೆ ಬ್ರಹ್ಮನ ದೇವಾಲಯದ ಬಗ್ಗೆ ರೂಪಮಂಡನ ವಿವರಿಸಿದೆ. ವಿಷ್ಣು ಪುರಾಣ ಮತ್ತು ಸುಪ್ರಭೇದಾಗಮವು ಬ್ರಹ್ಮನು ಹೊಂದಿರುವ ಬಣ್ಣ ಮತ್ತು ವಸ್ತ್ರ ಆಭರಣಗಳ ಬಗ್ಗೆ ತಿಳಿಸಿದೆ ಆದರೆ ಪರಿಕರಗಳ ಬಗ್ಗೆ ವಿವರಿಸಿಲ್ಲ.[13]

ಶಿಲ್ಪಶಾಸ್ತ್ರ ತಜ್ಞರಾದ ಟಿ.ಎ.ಗೋಪಿನಾಥರಾವ್, ರವರು "ಎಲಿಮೆಂಟ್ಸ್ ಆಫ್ ಹಿಂದೂ ಐಕೋನೋಗ್ರಫಿ" ಸಂ.2, ಭಾಗ–2ರಲ್ಲಿ ಬ್ರಹ್ಮನ ಶಿಲ್ಪದ ವಿವರಣೆಯನ್ನು ಶಿಲ್ಪಶಾಸ್ತ್ರಗ್ರಂಥಗಳು & ಆಗಮದ ಹಿನ್ನೆಲೆ ನೀಡಿದ್ದಾರೆ. ಆದರೆ ಬ್ರಹ್ಮನ ಕೈಯಲ್ಲಿರುವ ಪರಿಕರಗಳ ಬಗ್ಗೆ ವಿವರಣೆ ನೀಡುವಾಗ ಅವರು ವಿವಿಧ ಪ್ರದೇಶದಲ್ಲಿ ದೊರೆತ ಬ್ರಹ್ಮನ ಶಿಲ್ಪಗಳ ಛಾಯಚಿತ್ರಗಳನ್ನು ಕೂಡಾ ನೀಡಿದ್ದಾರೆ. ಆ ಶಿಲ್ಪಗಳು ಶಿಲ್ಪಶಾಸ್ತ್ರಗ್ರಂಥಗಳಿಗೆ ಭಿನ್ನವಾಗಿವೆ. ಕುಳಿತ ಮತ್ತು ನಿಂತ ಭಂಗಿಯಲ್ಲಿರುವ ಬ್ರಹ್ಮನ ಶಿಲ್ಪದಲ್ಲಿ ಇರುವ ಪರಿಕರಗಳು ಕೂಡ ವಿವಿಧತೆಯಿಂದ ಕೂಡಿವೆ.[14]

ಶಿಲ್ಪದ ವಿವರಣೆ :

ಪ್ರಸ್ತುತ ಈ ಬ್ರಹ್ಮನ ಶಿಲ್ಪವು ಪ್ರಸನ್ನ ವಿರೂಪಾಕ್ಷ (ಭೂಮಟ್ಟದ ಶಿವ) ದೇವಾಲಯದಲ್ಲಿದೆ. ದಣ್ಣಾಯಕ ಆವರಣದ ಪಶ್ಚಿಮ ತುದಿಯ ಭಾಗದಲ್ಲಿ ಪೂರ್ವಾಭಿಮುಖವಾಗಿರುವ ಈ ದೇವಾಲಯ ಕ್ರಿ.ಶ.14ನೇ ಶತಮಾನದ್ದಾಗಿದೆ. ಈ ದೇವಾಲಯದ ದಕ್ಷಿಣ ಭಾಗದಲ್ಲಿ ಪೂರ್ವಾಭಿಮುಖವಾಗಿರುವ ಕಲ್ಯಾಣ ಮಂಟಪದ 2ನೇ ಕಂಬದ ಮಧ್ಯಭಾಗದಲ್ಲಿ ಉತ್ತರಾಭಿಮುಖವಾಗಿರುವ ಬ್ರಹ್ಮನ ಉಬ್ಬು ಶಿಲ್ಪವು ವಿಶೇಷತೆಯಿಂದ ಕೂಡಿದೆ.



ಬ್ರಹ್ಮನ ಶಿಲ್ಪ

ಈ ಬ್ರಹ್ಮನ ಶಿಲ್ಪವು ಕೀರ್ತಿಮುಖದ ಪ್ರಭಾವಳಿಯಲ್ಲಿ ಸಾದಾ ಪೀಠದ ಮೇಲೆ ಪದ್ಮಾಸನ ಭಂಗಿಯಲ್ಲಿದ್ದು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಬಲ ಹಿಂದಿನ ಕೈಯಲ್ಲಿ ಅಕ್ಷಮಾಲೆ, ಮೇಲಿನ ಎಡ ಹಿಂದಿನ ಕೈಯಲ್ಲಿ ಅಜ್ಜಸ್ಥಾಲಿ(ತುಪ್ಪದಿಂದ ತುಂಬಿದ ಮಡಿಕೆ), ಕಮಂಡಲು ಇದೆ. ಮುಂಭಾಗದ ಬಲ ಮತ್ತು ಎಡ ಭಾಗದ ಕೈಗಳು ಧ್ಯಾನಮುದ್ರೆಯಲ್ಲಿವೆ. ಬ್ರಹ್ಮನ ಕಣ್ಣುಗಳನ್ನು ಮುಚ್ಚಿರುವುದು ಸಂಪೂರ್ಣ ಧ್ಯಾನಮಗ್ನತೆಯನ್ನು ತೋರಿಸುತ್ತವೆ.

ವಸ್ತ್ರ ಮತ್ತು ಆಭರಣ :

ಈ ಬ್ರಹ್ಮನ ಶಿಲ್ಪಕ್ಕೆ ಗೋಚರಿಸುವ ಮೂರು ತಲೆಗಳ ಮೇಲೆ ಕೀರಿಟಮಕುಟವನ್ನು ಧರಿಸಿದೆ. ಆದರೆ ಬ್ರಹ್ಮನ ತಲೆಯ ಮೇಲೆ ಜಟಾಮಕುಟಗಳಿರಬೇಕೆಂಬ ನಿಯಮವಿದೆ. ಆದರೆ ಈ ಬ್ರಹ್ಮನ ಶಿಲ್ಪಕ್ಕೆ ಕೀರಿಟಮಕುಟಗಳು ಇರುವುದು ವಿಶೇಷಕಿವಿಗಳಲ್ಲಿ ಮಾಣಿಕ್ಯದಿಂದ ಕೂಡಿದ ಕುಂಡಲಗಳಿವೆ. ಕೊರಳಲ್ಲಿ ಕಂಠಹಾರ, ವಕ್ಷಬಂಧ, ಯಜ್ಞೋಪವೀತ, ಬಾಹುವಲಯ, ಭುಜಬಂಧ, ಕೇಯೂರ, ತೋಳ್ಬಂದಿಗಳು, ಕೈಗಡಗಗಳು ಕಟಿಭಾಗದಲ್ಲಿರುವ ಆರಭರಣ ಗೋಚರಿಸುತ್ತವೆ. ಆದರೆ ಕುಳಿತ ಭಂಗಿಯಲ್ಲಿರುವುದರಿಂದ ಗುರುತಿಸುವುದು ಕಷ್ಟ. ಕಟಿಭಾಗದಿಂದ ಇರುವ ಧೋತಿಯ ನೆರಿಗೆಗಳು

ಗೋಚರಿಸುತ್ತವೆ. ಬ್ರಹ್ಮನ ಶಿಲ್ಪದಲ್ಲಿನ ನಾಲ್ಕು ಕೈಗಳಲ್ಲಿರುವ ಪರಿಕರಗಳು(ವೈದಿಕ ಆಚರಣೆಯಲ್ಲಿರುತ್ತವೆ) ಯೋಗಮುದ್ರೆ ಮತ್ತು ಆಭರಣಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಈ ರೀತಿಯಾದ ಶಿಲ್ಪ ದೊರೆತರೆ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಗುರುತಿಸಿ ಅಧ್ಯಯನ ಮಾಡಿದರೆ ಖಚಿತವಾಗಿ ಈ ಶಿಲ್ಪ ಶಿಲ್ಪಶಾಸ್ತ್ರಗ್ರಂಥಗಳನ್ನು ಮತ್ತು ಆಗಮಗಳನ್ನು ಅನುಸರಿಸಿ ಶಿಲ್ಪಿಯು ಶಿಲ್ಪವನ್ನು ಕೆತ್ತಿದ್ದಾನೆ ಎಂಬುದು ಸುಲಭವಾಗಿ ಗುರುತಿಸಬಹುದು. ವಿಜಯನಗರದ ಶಿಲ್ಪಿಗಳು ಬೆಣಚುಕಲ್ಲಿನಲ್ಲಿ ಇಷ್ಟೊಂದು ಸ್ಪಷ್ಟವಾಗಿರುವ ಶಿಲ್ಪಗಳನ್ನು ನಿರ್ಮಾಣ ಮಾಡುವುದು ಕಷ್ಟದ ಕೆಲಸ, ಆದರೆ ಈ ಶಿಲ್ಪವು ಸ್ಪಷ್ಟವಾಗಿ ಕೆತ್ತಲ್ಪಟ್ಟಿದೆ.

ಹಂಪಿಯಲ್ಲಿ ಬ್ರಹ್ಮನ ಶಿಲ್ಪಗಳು ದೊರೆತಿರುವುದು ವಿರಳ. ವಿಜಯನಗರಪೂರ್ವಕಾಲಕ್ಕೆ ಸೇರುವ ಹೇಮಕೂಟದ ಬೆಟ್ಟದ ಮೇಲೆ ಇರುವ ತ್ರಿಕೂಟ ದೇವಾಲಯ ಮಧ್ಯದ ಶಿಖರದಲ್ಲಿರುವ ಶಿಲ್ಪಪಟ್ಟಿಕೆಯಲ್ಲಿ ಬ್ರಹ್ಮನ ಶಿಲ್ಪವಿದೆ. ಮತ್ತೊಂದು ಶಿಲ್ಪ ತುಂಗಭದ್ರಾ ತೀರದಲ್ಲಿರುವ ಶೈವ ದೇವಾಲಯದಲ್ಲಿರುವ ಮುಚ್ಚಿದ ಮಂಟಪದ ಕಂಬದಲ್ಲಿದೆ. ಈ ಕಂಬದ ಮೇಲ್ಭಾಗದಲ್ಲಿದೆ ಉಮಾಮಹೇಶ್ವರ, ಮಧ್ಯದಲ್ಲಿ ಲಕ್ಷ್ಮೀನಾರಾಯಣ, ಕೆಳಭಾಗದಲ್ಲಿ ಬ್ರಹ್ಮನ ಶಿಲ್ಪವಿದೆ, ಪದ್ಮಾಸನ ಭಂಗಿಯಲ್ಲಿ ಕುಳಿತ ಬ್ರಹ್ಮನ ಶಿಲ್ಪ ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಬಲಗೈಯಲ್ಲಿ ಅಕ್ಷಮಾಲೆ, ಮೇಲಿನ ಎಡಗೈಯಲ್ಲಿ ಕಮಂಡಲು, ಕೆಳಗಿನ ಎಡ ಮತ್ತು ಬಲಗೈಗಳು ಅಭಯ ಮತ್ತು ವರದ ಹಸ್ತಗಳಾಗಿವೆ. ಆದರೆ, ವಿಷ್ಣು ಮತ್ತು ಶಿವನನ್ನು ಪತ್ನಿ ಸಮೇತ ತೋರಿಸಿ ಬ್ರಹ್ಮನನ್ನು ಪತ್ನಿಸಮೇತ ತೋರಿಸಿಲ್ಲ. ವಿಜಯನಗರ ನಂತರ ಕಾಲದಲ್ಲಿ ರಚನೆಯಾದ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದಲ್ಲಿರುವ ವರ್ಣಚಿತ್ರಗಳಲ್ಲಿ ಬ್ರಹ್ಮನನ್ನು ತೋರಿಸಲಾಗಿದೆ. ಆದರೆ ವಿಜಯನಗರ ಕಾಲಕ್ಕೆ ಸೇರುವ ಶೈವ ಮತ್ತು ಶಾಕ್ತ ಶಿಲ್ಪಗಳ ಗುಂಪಿನಲ್ಲಿರುವ ಶಿಲ್ಪಗಳನ್ನು ಕೆತ್ತಲಾಗಿದೆ. ಅಲ್ಲಿರುವ ಮೂರು ಬೆಟ್ಟಗಳಲ್ಲಿ(ಓಟಥ/2) ಒಂದು ಬೆಟ್ಟದ ಈಶಾನ್ಯ ಭಾಗದಲ್ಲಿ ಕಮಾನಿನಲ್ಲಿ ಈ ಬ್ರಹ್ಮನ ಶಿಲ್ಪದ ಕೆಳಭಾಗದಲ್ಲಿ ಕಮಲವನ್ನು ಕೆತ್ತಲಾಗಿದೆ. ಮೂರು ತಲೆಗಳ ಮೇಲೆ ಕಿರೀಟಮಕುಟ ಹೊಂದಿ, ಆಭರಣಗಳನ್ನು ಹೊಂದಿ, ನಾಲ್ಕು ಕೈಗಳಲ್ಲಿ ಮೇಲಿನ ಬಲಗೈ ಕಮಲ ಮೇಲಿನ ಎಡಗೈ ಸ್ರುವ, ಕೆಳಗಿನ ಬಲಗೈ ಅಕ್ಷಮಾಲೆ, ಕೆಳಗಿನ ಎಡಗೈಯಲ್ಲಿ ಕಮಂಡಲು ಇದೆ.[15]

ಮತ್ತೊಂದು ಬ್ರಹ್ಮನ ಶಿಲ್ಪವು ಅನಂತಶಯನ ಗುಡಿಗ್ರಾಮದಲ್ಲಿರುವ ಅನಂತಶಯನ ದೇವಾಲಯ ಮಹಾಮಂಟಪದಲ್ಲಿರುವ ಕಂಬದಲ್ಲಿ ತ್ರಿಮೂರ್ತಿ(ತ್ರೈಪುರುಷ) ಶಿಲ್ಪವಿದೆ. ಈ ಶಿಲ್ಪವು ಬ್ರಹ್ಮ ವಿಷ್ಣು ಮಹೇಶ್ವರ ಶಿಲ್ಪ ಸಂಯುಕ್ತ ಶಿಲ್ಪವಾಗಿದೆ. ಮೂರು ತಲೆಗಳು ಕಿರೀಟಮಕುಟವನ್ನು ಧರಿಸಿವೆ ನಾಲ್ಕು ಕೈಗಳು ಇವೆ. ಮಧ್ಯದ ಶಿಲ್ಪ ಬ್ರಹ್ಮನು ಧ್ಯಾನ ಮುದ್ರೆಯಲ್ಲಿದ್ದಾನೆ. ಮೇಲಿನ ಬಲಕ್ಕೆ ಪಾಶ(ಶಿವನ ಮುಖವಿದೆ) ಮೇಲಿನ ಎಡಗೈಯಲ್ಲಿ ಶಂಖವಿದೆ ಇದು (ವಿಷ್ಣುವಿನ ಮುಖವಿದೆ) ಇವುಗಳನ್ನು ಹೊರತುಪಡಿಸಿದರೆ ಬ್ರಹ್ಮನ ಶಿಲ್ಪಗಳು ಇರುವುದು ವಿರಳ. ಈ ಶಿಲ್ಪವನ್ನು ಅನ್ನಾಡೆಲ್ಲಾ ಪಿಕ್ಕೊಲ್ಲಾ ಮತ್ತು ಅನಿಲಾವರ್ಗೀಸ್, ರವರು "ಸ್ಕಲ್ಪಚರ್ ಆ್ಯಟ ವಿಜಯನಗರ, ಐಕೋನೋಗ್ರಫಿ ಆ್ಯಂಡ ಸ್ಟೈಲ್", ಎಂಬ ಗ್ರಂಥದಲ್ಲಿರುವ "ಮೈನರ್ ಡಿವೈನಿಟೀಸ್", ಎಂಬ 8ನೇ ಅಧ್ಯಾಯದಲ್ಲಿ ಪು.70–71 ರಲ್ಲಿ ತ್ರೈಪುರುಷ ಶಿಲ್ಪವನ್ನು ಬ್ರಹ್ಮನ ಶಿಲ್ಪವೆಂದು ತಪ್ಪಾಗಿ ಗುರುತಿಸಿದ್ದಾರೆ. ಲೇಖಕಿ ಆದ ನಾನೇ ಪದ್ಮಜಾ ದೇಸಾಯಿ. ಈ ಶಿಲ್ಪವನ್ನು ಮರುಪರಿಶೀಲಿಸಿ ಈ ಶಿಲ್ಪವನ್ನು ತ್ರೈಪುರುಷ ಶಿಲ್ಪವೆಂದು, ಆಯುಧ, ಭಂಗಿ, ಮುದ್ರೆಗಳ ಗಮನಿಸಿ, ಆಗಮಗಳ ಹಿನ್ನೆಲೆಯಲ್ಲಿ ರಚನೆಯಾಗಿದೆಯೋ ಅಥವಾ ಆಗಮವನ್ನು ಹೊರತುಪಡಿಸಿ ರಚನೆಯಾಗಿದೆಯೋ ಎಂಬುದನ್ನು ಪರಿಕ್ಷೀಸಿ. ಈ ಶಿಲ್ಪವನ್ನು ತ್ರೈಪುರುಷ ಎಂದು ಗುರುತಿಸಿದ್ದೇನೆ.[16] [ನೋಡಿ: ವಿಜಯನಗರ ಅಧ್ಯಯನ, ಸಂ.19 ರಲ್ಲಿ ಪ್ರಕಟವಾಗಿದೆ.]

ಶೈವ ಮತ್ತು ವೈಷ್ಣವ ಶಿಲ್ಪದ ಪ್ರತಿಮಾ ಲಕ್ಷಣದ ವಿವರಣೆಯನ್ನು ನೀಡುವಾಗ ಪೌರಾಣಿಕ ಸಂಧರ್ಭವನ್ನು ವಿವರಿಸುವಾಗ ಬ್ರಹ್ಮನ ಶಿಲ್ಪವನ್ನು ಕುರಿತು ನೀಡಿದ ವಿದ್ವಾಂಸರ ವಿವರಣೆಯು ಈ ಕೆಳಗಿನಂತಿವೆ

1) ಕೆ.ಎಮ್.ಸುರೇಶ, ರವರು 'ಸ್ಕಲ್ಪಚರಲ್ ಆರ್ಟ ಆಫ್ ಹಂಪಿ', ಎಂಬ ಗ್ರಂಥದ 5ನೇ ಅಧ್ಯಾಯವಾದ "ಶೈವ ಶಿಲ್ಪಗಳು" ಎಂಬುದರಲ್ಲಿ ಶಿವನ ತ್ರಿಪುರಾಂತಕ ರೂಪದ ವರ್ಣಚಿತ್ರವು ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದಲ್ಲಿದೆ. ಈ ವಿವರಣೆ ನೀಡುವಾಗ ಬ್ರಹ್ಮನ ವರ್ಣನೆ ಇದೆ, ಮತ್ತು ಅದೇ ಗ್ರಂಥದ "ವೈಷ್ಣವ

ಶಿಲ್ಪಗಳು" ಎಂಬ 6ನೇ ಅಧ್ಯಾಯದಲ್ಲಿ ವಿಷ್ಣುವಿನ ಶಯನ ಶಿಲ್ಪದ ವಿವರಣೆಯನ್ನು ನೀಡುವಾಗ ವಿಷ್ಣುವಿನ ನಾಭಿಯಿಂದ ಬಂದ ಬ್ರಹ್ಮ ಶಿಲ್ಪದ ವಿವರಣೆಯನ್ನು ಸಾಂಧರ್ಭಿಕವಾಗಿ ನೀಡಿದ್ದಾರೆ. ಆದರೆ ಸ್ವತಂತ್ರ ಶಿಲ್ಪಗಳ ಬಗ್ಗೆ ವಿವರಣೆಯಿಲ್ಲ.[17]

2) ಶ್ರೀನಿವಾಸ ವಿ. ಪಾಡಿಗಾರ, ರವರು "ವಿಷ್ಣು ಕಲ್ಪ ಇನ್ ಕರ್ನಾಟಕ", ಎಂಬ ಗ್ರಂಥದಲ್ಲಿ 9ನೇ ಅಧ್ಯಾಯವಾದ ಪ್ರತಿಮಾಲಕ್ಷಣ ಎಂಬುದರಲ್ಲಿ ವಿಷ್ಣುವಿನ ಶಯನ ರೂಪವನ್ನು ತೋರಿಸುವಾಗ ವಿಷ್ಣುವಿನ ನಾಭಿಯಿಂದ ಬಂದ ವಿವಿಧ ರೀತಿಯ ಬ್ರಹ್ಮನ ಶಿಲ್ಪಗಳನ್ನು ವಿವರಿಸಿದ್ದಾರೆ.[18]

3) ಟಿ.ಎ.ಗೋಪಿನಾಥರಾವ್, ರವರು. "ಎಲಿಮೆಂಟ್ಸ್ ಆಫ್ ಹಿಂದೂ ಐಕೋನೋಗ್ರಫಿ", ಎಂಬ ಗ್ರಂಥದಲ್ಲಿ ಸಂ.2, ಭಾಗ–2 ರಲ್ಲಿ ಬ್ರಹ್ಮನ ಶಿಲ್ಪದ ಸಂಪೂರ್ಣ ವಿವರಣೆ ನೀಡಿ ವಿವಿಧ ಪ್ರದೇಶಗಳಲ್ಲಿ ದೊರೆತ ಬ್ರಹ್ಮನ ಶಿಲ್ಪದ ಛಾಯಾಚಿತ್ರಗಳನ್ನು ನೀಡಿ, ಬ್ರಹ್ಮಶಿರಶ್ಛೇದಕ ಶಿಲ್ಪದ ವಿವರಣೆಯನ್ನು ನೀಡಿದ್ದಾರೆ.[19]

4) ಅನ್ನಾಡೆಲ್ಲಾಪಿಕ್ಕೊಲ್ಲಾ ಮತ್ತು ಅನಿಲಾ ವರ್ಗೀಸ್, ರವರ "ಸ್ಕಲ್ಪಚರ್ ಆ್ಯಟ್ ವಿಜಯನಗರ, ಐಕೋನೋಗ್ರಫಿ ಆ್ಯಂಡ್ ಸ್ಟೈಲ್", ಎಂಬ ಗ್ರಂಥದ ಅಧ್ಯಾಯ 8, ಮೈನರ್ ಡಿವೈನಿಟೀಸ್ ಎಂಬುದರಲ್ಲಿ ಬ್ರಹ್ಮನ ಶಿಲ್ಪದ ಅಲ್ಪ ವಿವರಣೆ ನೀಡಿದ್ದಾರೆ. ಆದರೆ ಆಗಮಗಳ ಹಿನ್ನೆಲೆಯಲ್ಲಿ ವಿವರಿಸಿಲ್ಲ.[20]

5) ದೇವದತ್ತ ಪಟ್ನಾಯಕ, "ವಿಷ್ಣುವಿನ ಎಳು ರಹಸ್ಯಗಳು", ಎಂಬ ಗ್ರಂಥದ 1ನೇ ಅಧ್ಯಾಯವಾದ ಮೋಹಿನಿ ರಹಸ್ಯ, ಎಂಬುದರಲ್ಲಿ ರಂಗನಾಥನ ಶಿಲ್ಪಗಳ ವಿವರಣೆ ನೀಡುವಾಗ ವಿಷ್ಣುವಿನ ನಾಭಿಯಿಂದ ಬಂದ ಬ್ರಹ್ಮನ ಶಿಲ್ಪವನ್ನು ವಿವರಿಸಿ ಬೇಲೂರಿನ ಚನ್ನಕೇಶವ ದೇವಾಲಯದಲ್ಲಿರುವ ನಿಂತಭಂಗಿಯ ಬ್ರಹ್ಮನ ಶಿಲ್ಪದ ಛಾಯಾಚಿತ್ರ ನೀಡಿ ವಿವರಿಸಿದ್ದಾರೆ.[21]

6) ಹೇಮಾವತಿ ಮೆಣಸಿಗಿ, ರವರ " ರೋಣ ತಾಲೂಕಿನ ವಿಶಿಷ್ಟ ತ್ರೈಪುರುಷ ಶಿಲ್ಪ" ಎಂಬ ಲೇಖನವು ಇತಿಹಾಸ ದರ್ಶನ ಸಂ.26ರಲ್ಲಿ ಪ್ರಕಟವಾಗಿದೆ. ಸವಡಿಯ ಬ್ರಹ್ಮೇಶ್ವರ ದೇವಾಲಯದ ಗರ್ಭಗೃಹದಲ್ಲಿ ಒಂದೇ ಪೀಠದಲ್ಲಿ ಮೂರು ದೇವತೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಅದು ವಾಹನ ಸಹಿತವಾಗಿ ಸ್ಥಾನಿಕ ಭಂಗಿಯಲ್ಲಿದ್ದು ಸ್ಪಷ್ಟವಾದ ಶಿಲ್ಪಗಳಿವೆ. ಗೇರಾಲ್ಡ ಫೊಕೇಮಾರವರು ಚಾಲುಕ್ಯನ್ ಆರ್ಕಿಟೆಕ್ಚರ್ ಸಂ.1 ರಲ್ಲಿ ಈ ದೇವಾಲಯ ಮತ್ತು ಶಿಲ್ಪದ ವಿವರಣೆ ನೀಡಿದ್ದಾರೆ.[22] [ನೋಡಿ: ಹೆಚ್ಚಿನ ಮಾಹಿತಿಗಾಗಿ, ಹೇಮಾವತಿ ಮೆಣಸಗಿ ರವರ ಅಪ್ರಕಟಿತ ಎಂ.ಫಿಲ್. ಪ್ರಬಂಧ "ರೋಣ ತಾಲೂಕಿನ ಶೈವ ದೇವಾಲಯಗಳು", ಕನ್ನಡವಿಶ್ವವಿದ್ಯಾಲಯ ಹಂಪಿ. 2009]

7) ಕೆ.ವಸಂತಲಕ್ಷ್ಮೀರವರ "ಕರ್ನಾಟಕದ ಶೈವ ಶಿಲ್ಪಗಳು", ಎಂಬ ಗ್ರಂಥದ ಅಧ್ಯಾಯ ನಾಲ್ಕರಲ್ಲಿ ಸಂಹಾರ ಮೂರ್ತಿಗಳಲ್ಲಿ ತ್ರಿಪುರಾಂತಕ ಶಿಲ್ಪದ ವಿವರಣೆಯಲ್ಲಿ ಬ್ರಹ್ಮನ ಶಿಲ್ಪದ ಬಗ್ಗೆ ಮತ್ತು ಬ್ರಹ್ಮಶಿರಶ್ಛೇದಕ ಮೂರ್ತಿಯ ಬಗ್ಗೆ ವಿವರಿಸಿದ್ದಾರೆ.[23]

ಈ ಮೇಲೆ ವಿವರಿಸಿರುವ ಅಂಶಗಳಲ್ಲಿ ಬ್ರಹ್ಮನ ಶಿಲ್ಪದ ಬಗ್ಗೆ ಸಾಂದರ್ಭಿಕವಾಗಿ ವಿವರಿಸಿ, ಪುರಾಣ ಕಥೆಗಳಲ್ಲಿ ಬರುವ ಬ್ರಹ್ಮನನ್ನು ಕಾಣುತ್ತವೆ. ಆದರೆ ಸ್ವತಂತ್ರ ವಾದ ಶಿಲ್ಪಗಳ ವಿವರಣೆ ಇಲ್ಲ.

ಉಪಸಂಹಾರ :

ಒಟ್ಟಾರೆಯಾಗಿ ಹಂಪಿಯಲ್ಲಿ ದೊರೆತ ಬ್ರಹ್ಮನ ಶಿಲ್ಪವು ಅಪರೂಪದ್ದಾಗಿದೆ. ತ್ರಿಮೂರ್ತಿಗಳಲ್ಲಿ ಬ್ರಹ್ಮನು ಪ್ರಮುಖ ದೇವತೆ ಎಂದು ಪರಿಗಣಿಸಲಾಗಿದೆ. ಇಡೀ ಬ್ರಹ್ಮಾಂಡವನ್ನು ಸೃಷ್ಟಿಸುವ ಕಾರ್ಯ ಬ್ರಹ್ಮನದು ಆದರೆ ತ್ರಯಕತ್ವದಲ್ಲಿ ಬ್ರಹ್ಮನಿಗೆ ಸ್ವತಂತ್ರ ದೇವಾಲಯಗಳಿಲ್ಲ, ಶಿಲ್ಪಗಳು ವಿರಳ. ಆದರೆ ಉಳಿದ ತ್ರಯಕತ್ವದ ಸದಸ್ಯರಾದ ವಿಷ್ಣು–ಸ್ಥಿತಿಕರ್ತ, ಶಿವ–ಲಯಕರ್ತ, ಇವರಿಗೆ ಸ್ವತಂತ್ರ ದೇವಾಲಯಗಳು ಉಂಟು. ಬಿಡಿ ಶಿಲ್ಪ, ಉಬ್ಬು ಶಿಲ್ಪಗಳಲ್ಲಿ ಈ ದೇವತೆಗಳನ್ನು ಆಗಮದ ಜೊತೆಗೆ ಪುರಾಣದ ಕಥೆಗಳ ಹಿನ್ನೆಲೆಯಲ್ಲಿ ಶಿಲ್ಪಿಯು ಈ ದೇವತೆಗಳ ಶಿಲ್ಪವನ್ನು ಕೆತ್ತಿದ್ದಾನೆ. ಹಿಂದೂ ಧರ್ಮದಲ್ಲಿ

ಪ್ರಮುಖ ದೇವತೆಗಳಾಗಿದ್ದಾರೆ. ಬ್ರಹ್ಮನು ಈ ಸೃಷ್ಟಿಗೆ ಮೂಲ ಕಾರಣ ಹೌದು, ಆದರೆ ಸೃಷ್ಟಿಯೇ ಇರದಿದ್ದರೆ, ಸ್ಥಿತಿ ಮತ್ತು ಲಯಗಳು ಹೇಗಾಗುತ್ತವೆ ಎಂಬ ಪಶ್ನೆಯು ಉದ್ಭವಿಸುವುದು ಸಹಜ.

ಬ್ರಹ್ಮನಿಗಾಗಿ ಸ್ವತಂತ್ರ ದೇವಾಲಯಗಳಿರುವ ಸಾಕ್ಷ್ಯಾಧಾರಗಳನ್ನು ಅರಿಯಬೇಕಾದರೆ ಮದ್ರಾಸ್ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಲಾದ ಬ್ರಹ್ಮನ ಶಿಲ್ಪವು ಕಂಚಿನಿಂದ ರಚಿತವಾಗಿದೆ. ಈ ಶಿಲ್ಪವು ಮೂರು ತಲೆಗಳ ಮೇಲೆ ಕೀರಿಟಮಕುಟವನ್ನು ಹೊಂದಿದೆ. ನಾಲ್ಕು ಕೈಗಳಲ್ಲಿ ಮೇಲಿನ ಬಲಗೈಯಲ್ಲಿ ಅಕ್ಷಮಾಲೆ ಮೇಲಿನ ಎಡಗೈಯಲ್ಲಿ ಕಮಂಡಲು ಕೆಳಗಿನ ಬಲಕೈ ಅಭಯ, ಎಡಕೈ ವರದ ಹಸ್ತವಾಗಿದೆ. ಲಲಿತಾಸನದಲ್ಲಿ ಕೀರ್ತಿಮುಖದ ಪ್ರಭಾವಳಿಯಲ್ಲಿ ಪೀಠದ ಮೇಲೆ ಕುಳಿತಿದೆ. ಈ ಶಿಲ್ಪವನ್ನು ಗಮನಿಸಿದಾಗ ಬ್ರಹ್ಮನಿಗೆ ದೇವಾಲಯಗಳಿಲ್ಲ ಎಂಬ ವಾದವು ಸುಳ್ಳಾಗುತ್ತದೆ. ಏಕೆಂದರೆ ಲೋಹದ ಶಿಲ್ಪಗಳು, ಚಲ ಶಿಲ್ಪಗಳು, ಅವುಗಳನ್ನು ಉತ್ಸವ ಮೂರ್ತಿಗಳೆಂದು ಪರಿಗಣಿಸಲಾಗುತ್ತದೆ. ಆದರೆ ಧೃವಬೇರು (ಶಿಲಾಮೂರ್ತಿ) ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿರುತ್ತದೆ. ಅಲ್ಲಿಯೇ ಪೂಜಾ ವಿಧಿಗಳು ನಡೆಯುತ್ತವೆ. ಆದರೆ ಲೋಹದ ಮೂರ್ತಿಗಳನ್ನು ಉತ್ಸವದ ಸಂದರ್ಭದಲ್ಲಿ ಮೆರವಣಿಗೆಯಿಂದ ತೆಗೆದುಕೊಂಡು ಹೋಗಿ ಉತ್ಸವದ ಮಂಟಪದಲ್ಲಿ ಪೂಜೆ ನಡೆಯುತ್ತದೆ. ಈ ಲೋಹದ ಶಿಲ್ಪ ದೊರಕಿದ್ದರಿಂದ ಬ್ರಹ್ಮನಿಗೆ ಸ್ವತಂತ್ರ ದೇವಾಲಯಗಳು ಇದ್ದು, ಶಿಲ್ಪಗಳು ಇದ್ದವು ಎಂಬುದು ಬ್ರಹ್ಮನ ಶಿಲ್ಪಗಳ ಹೆಚ್ಚಿನ ಅಧ್ಯಯನದಿಂದ ತಿಳಿದು ಬರುತ್ತದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಬ್ರಹ್ಮನು ಹಂಸದ ಮೇಲೆ ಕುಳಿತ ಶಿಲ್ಪವು ಐಹೊಳೆಯಲ್ಲಿ ದೊರೆತಿದೆ. ಹೊಯ್ಸಳರ ಕಾಲದಲ್ಲಿ ಕುಳಿತ ಮತ್ತು ನಿಂತ ಭಂಗಿಯ ಶಿಲ್ಪಗಳು ದೊರೆತಿವೆ. ಹೊಯ್ಸಳರ ಕಾಲದ ಬೇಲೂರಿನ ಚೆನ್ನಕೇಶವ ದೇವಾಲಯದ ಉತ್ತರದ ಭಿತ್ತಿಯಲ್ಲಿರುವ ಬ್ರಹ್ಮನ ಶಿಲ್ಪವು ನಿಂತ ಭಂಗಿಯಲ್ಲಿದ್ದು, ಬ್ರಹ್ಮನ ಮೂರು ತಲೆಗಳ ಮೇಲೆ ಕೀರಿಟಮಕುಟಗಳಿದ್ದು, ನಾಲ್ಕು ಕೈಗಳಲ್ಲಿ ಮೇಲಿನ ಬಲಕೈಯಲ್ಲಿ ಸ್ರುವ, ಮೇಲಿನ ಎಡಗೈಯಲ್ಲಿ ಸೃಕ್, ಕೆಳಗಿನ ಬಲಗೈಯಲ್ಲಿ ಅಕ್ಷಮಾಲೆ, ಕೆಳಗಿನ ಎಡಕೈಯಲ್ಲಿ ಕಮಂಡಲು ಹಿಡಿದು ಗಡ್ಡಧಾರಿಯಾಗಿರುವ ಶಿಲ್ಪ ವಿವಿಧ ಆಭರಣಗಳನ್ನು ಧರಿಸಿದೆ. ಬ್ರಹ್ಮನ ಪತ್ನಿಯರಾದ ಸರಸ್ವತಿ ಮತ್ತು ಸಾವಿತ್ರಿಯನ್ನು ಎಡಬಲದಲ್ಲಿ ತೋರಿಸಲಾಗಿದೆ. ಇದು ಅಪೂರ್ವವಾದ ಶಿಲ್ಪ, ಈ ಮೇಲಿನ ಎಲ್ಲಾ ವಿವರಣೆಗಳಿಂದ ಬ್ರಹ್ಮನಿಗೆ ಸ್ವತಂತ್ರ ದೇವಾಲಯವಿರುವುದು ಖಚಿತಗೊಳಿಸುತ್ತದೆ ಈ ಎಲ್ಲಾ ಸಾಕ್ಷಾಧಾರಗಳಿಂದ ಬ್ರಹ್ಮನಿಗೂ ತ್ರಿಮೂರ್ತಿಗಳಂತೆ ಪ್ರಮುಖವಾದ ಸ್ಥಾನವಿತ್ತೆಂದು ಅರಿಯಬಹುದು. ಆದರೆ ಪ್ರಾಚೀನ ಕಾಲದ ತ್ರಿಕೂಟ ಮತ್ತು ತ್ರೈಪುರುಷ ದೇವಾಲಯಗಳಲ್ಲಿ ಬ್ರಹ್ಮ ವಿಷ್ಣು ಮತ್ತು ಶಿವನ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗುತಿತ್ತು. ನಂತರದ ಕಾಲದಲ್ಲಿ ಬ್ರಹ್ಮನಿಗೆ ಪೂಜೆ ಇಲ್ಲವೆಂದು, ಬ್ರಹ್ಮನ ಬದಲಾಗಿ ಸೂರ್ಯ ಶಿಲ್ಪವನ್ನು ಪ್ರತಿಷ್ಠಾಪಿಸಿದ್ದನ್ನು ಕಾಣುತ್ತೇವೆ.

ಹಂಪಿಯಲ್ಲಿ ದೊರೆತ ಬ್ರಹ್ಮನ ಶಿಲ್ಪವನ್ನು ಶಿಲ್ಪಿಯು ಶಿಲ್ಪಶಾಸ್ತ್ರಗ್ರಂಥಗಳು ಮತ್ತು ಆಗಮದ ಕೆಲವು ನಿಯಮಗಳನ್ನು ಮಾತ್ರ ಇಲ್ಲಿ ಬಳಸಿಕೊಂಡು ಈ ಶಿಲ್ಪವನ್ನು ರಚಿಸಿದ್ದಾನೆ ಎಂಬುದು ಈ ಶಿಲ್ಪದ ಸೂಕ್ಷ್ಮವಾದ ಅಧ್ಯಯನದಿಂದ ತಿಳಿದುಬರುತ್ತದೆ. ಸಂಪೂರ್ಣವಾದ ನಿಯಮಗಳಿಗೆ ಅನುಸಾರವಾಗಿ ಈ ಶಿಲ್ಪವನ್ನು ರಚಿಸಿಲ್ಲ.

ಆಧಾರಸೂಚಿ ಮತ್ತು ಟಿಪ್ಪಣಿಗಳು :

1) ಪಿ.ಬಿ.ದೇಸಾಯಿ, **"ಕರ್ನಾಟಕದ ಇತಿಹಾಸ"**, ಪು.12–14
2) ಟಿ.ಎ.ಗೋಪಿನಾಥರಾವ್, **"ಎಲಿಮೆಂಟ್ಸ ಆಫ್ ಹಿಂದೂ ಐಕೋನೋಗ್ರಫಿ"**, ಸಂ.2 ಭಾಗ.2, ಪು.501.
3) ಅದೇ., ಪು.502.
4) ಅನ್ನಾಡೆಲ್ಲಾಪಿಕ್ಕೊಲ್ಲಾ, ಅನಿಲಾವರ್ಗೀಸ್ **"ಸ್ಕಲ್ಪಚರ್ ಆರ್ಟ್ ವಿಜಯನಗರ ಐಕೋನೋಗ್ರಫಿ ಆ್ಯಂಡ್ ಸ್ಟೈಲ್"**, ಪು.70.
5) ಅದೇ., ಪು.71.
6) ಟಿ.ಎ.ಗೋಪಿನಾಥರಾವ್, ಪೂರ್ವೋಕ್ತ, ಪು.503.
7) ಟಿ.ಎ.ಗೋಪಿನಾಥರಾವ್, ಪೂರ್ವೋಕ್ತ, ಸಂ.2. ಭಾಗ.1, ಪು.174.

8) ಅದೇ., ಪು.175.
9) ಅದೇ., ಪು.177.
10) ಟಿ.ಎ.ಗೋಪಿನಾಥರಾವ್, ಪೂರ್ವೋಕ್ತ,ಪು.503.
11) ಅದೇ., ಪು.504.
12) ಅದೇ., ಪು.505.
13) ಅದೇ., ಪು.506.
14) ಅದೇ., ಪು.507.
15) ಅದೇ., ಪು.508.
16) ಅನ್ನಾಡೆಲ್ಲಾಪಿಕ್ಕೊಲ್ಲಾ, ಅನಿಲಾವರ್ಗೀಸ್, ಪೂರ್ವೋಕ್ತ,ಪು.72.
17) ಪದ್ಮಜಾ ದೇಸಾಯಿ, **"ಅನಂತಶಯನ ದೇವಾಲಯದ ತ್ರೈಪುರುಷ ಶಿಲ್ಪ"**, **ವಿಜಯನಗರ ಅಧ್ಯಯನ** ಸಂ.19, ಪು.167–168.
18) ಕೆ.ಎಮ್ ಸುರೇಶ, **"ಸ್ಕಲ್ಪಚರಲ್ ಆರ್ಟ್ ಆಫ್ ಹಂಪಿ"**, ಪು.82–83.
19) ಶ್ರೀನಿವಾಸ ವಿ. ಪಾಡಿಗಾರ್, **"ವಿಷ್ಣು ಕಲ್ಟ ಇನ್ ಕರ್ನಾಟಕ"**, ಪು.168–174.
20) ಟಿ.ಎ.ಗೋಪಿನಾಥರಾವ್, **"ಎಲಿಮೆಂಟ್ಸ ಆಫ್ ಹಿಂದೂ ಐಕೋನೋಗ್ರಫಿ"**, ಸಂ.1 ಭಾಗ–1, ಪು.174–182, ಸಂ.2 ಭಾಗ–2 ಪು.501–512.
21) ಅನ್ನಾಡೆಲ್ಲಾ ಪಿಕ್ಕೊಲ್ಲಾ, ಅನಿಲಾ ವರ್ಗೀಸ್, **"ಸ್ಕಲ್ಪಚರ ಆ್ಯಟ್ ವಿಜಯನಗರ, ಐಕೋನೋಗ್ರಫಿ ಆ್ಯಂಡ್ ಸ್ಟೈಲ್"**, ಪು.70–71.
22) ದೇವದತ್ತ ಪಟ್ನಾಯಕ, **"ವಿಷ್ಣುವಿನ ಏಳು ರಹಸ್ಯಗಳು"**, ಪು.12–17.
23) ಹೇಮಾವತಿ ಮೆಣಸಗಿ, **"ರೋಣ ತಾಲೂಕಿನ ವಿಶಿಷ್ಟ ತ್ರೈಪುರುಷ ಶಿಲ್ಪ"**, **ಇತಿಹಾಸ ದರ್ಶನ** ಸಂ.26, ಪು.122–124.
24) ಕೆ.ವಸಂತಲಕ್ಷ್ಮೀ, **"ಕರ್ನಾಟಕದ ಶೈವ ಶಿಲ್ಪಗಳು"**, ಪು.73–74.

❑

20. ವಿಜಯನಗರ ಸಾಮ್ರಾಜ್ಯದ ಅವಧಿಯ ದೇವಾಲಯಗಳು ಇತ್ಯಾದಿಗಳ ಜೀರ್ಣೋದ್ಧಾರ

– ಡಾ. ಪಿ. ಜಯಸಿಂಹ

ವಿಜಯನಗರ ಸಾಮ್ರಾಜ್ಯವು ಸನಾತನ ಸಂಸ್ಕೃತಿ ಮತ್ತು ಧರ್ಮವನ್ನು ರಕ್ಷಿಸಲು ಹುಟ್ಟಿಕೊಂಡ ಮಹಾಸಾಮ್ರಾಜ್ಯವಾಗಿದೆ. ದಕ್ಷಿಣ ಭಾರತವು ಮುಸಲ್ಮಾನರ ದಾಳಿಯಿಂದ ತತ್ತರಗೊಂಡ ಸ್ಥಿತಿಯಲ್ಲಿ ಇದ್ದಾಗ ಈ ಮಹಾಸಾಮ್ರಾಜ್ಯದ ಉದಯವಾಯಿತು. ತೀರಾ ಛಿದ್ರವಾಗಿದ್ದ ಧರ್ಮ, ಸಂಸ್ಕೃತಿ, ಆರ್ಥಿಕ ಸ್ಥಿತಿ, ಜನ–ಜೀವನವನ್ನು ಸುಧಾರಿಸುವುದು ಮೊದಲ ಕೆಲಸವಾಗಿತ್ತು. ಈ ಕೆಲಸವನ್ನು ಕೈಗೊಳ್ಳಲು ಇದ್ದ ಒಂದು ಶಕ್ತಿಯೆಂದರೆ ದೇವಾಲಯಗಳು, ಮಠಗಳು ಮುಂತಾದವುಗಳು. ಇವುಗಳೇ ಹಾಳುಬಿದ್ದಾಗ ಇವುಗಳನ್ನು ಉದ್ಧರಿಸುವುದು ಒಂದು ಸಾಹಸದ ಕೆಲಸವಾಗಿತ್ತು. ವಿಜಯನಗರದ ಪೂರ್ವದೊರೆಗಳು ಕಾಲದ ದೇವಾಲಯಗಳನ್ನು ಪುನರ್ ನಿರ್ಮಿಸುವುದರೊಂದಿಗೆ, ಹೊಸ ದೇವಾಲಯಗಳನ್ನೂ ಕಟ್ಟಿಸಿದರು. ಪೂರ್ವ ದೇವಾಲಯಗಳ ಜೀರ್ಣೋದ್ಧಾರಕಾರ್ಯ ಅಷ್ಟು ಸುಲಭವಲ್ಲ. ವಿಜಯನಗರ ಸಾಮ್ರಾಜ್ಯದಅವಧಿಯಲ್ಲಿ ನಡೆದಿರುವ ದೇವಾಲಯಗಳು, ಬಸದಿಗಳು ಮುಂತಾದವುಗಳ ಜೀರ್ಣೋದ್ಧಾರಕಾರ್ಯವು ವಿಶೇಷ ಅಧ್ಯಯನಕ್ಕೆ ಅರ್ಹವಾದುದು. ಕೆಲವೊಂದು ಸಣ್ಣಪುಟ್ಟ ವಿವರಗಳು ಕೂಡ ಈ ಅವಧಿಯ ವ್ಯಾಪಕತೆಯ ಮೇಲೆ ಬೆಳಕು ಚಲ್ಲುತ್ತವೆ. ಪ್ರಕೃತ ಲೇಖನದಲ್ಲಿ ಲಭ್ಯವಿರುವ ಮಾಹಿತಿಗಳ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ನಡೆದಿರುವ ಜೀರ್ಣೋದ್ಧಾರ ಅಥವಾ ಪುನರ್ ನಿರ್ಮಾಣದ ಬಗೆಗೆ ಸಂಕ್ಷಿಪ್ತವಾಗಿ ಸಮೀಕ್ಷೆ ನಡೆಸಲಾಗಿದೆ.

ದೇವಾಲಯಗಳ ಜೀರ್ಣೋದ್ಧಾರ : ಜೀರ್ಣೋದ್ಧಾರಎಂದರೆ ಪಾಳು ಬಿದ್ದಿರುವ, ಶಿಥಿಲಾವಸ್ಥೆ ತಲುಪಿರುವ, ದಾಳಿಗಳಿಂದಾಗಿ ಹಾಳಾಗಿರುವ ದೇವಾಲಯಗಳನ್ನು ಪೂಜಾ ಕೈಂಕರ್ಯಗಳು ನಡೆಯಲು ಯೋಗ್ಯವಾಗುವಂತೆ ಪುನಾರಚಿಸುವುದು ಎಂದು ಸ್ಥೂಲವಾಗಿ ಹೇಳಬಹುದು.

ಜೀರ್ಣೋದ್ಧಾರದ ವಿವಿಧ ಸ್ತರಗಳು : ದೇವಾಲಯಗಳ ಜೀರ್ಣೋದ್ಧಾರವು ಅನೇಕ ಹಂತಗಳಲ್ಲಿ ನಡೆದಿರುವುದು ವಾಸ್ತುಶಿಲ್ಪದ ಅಧ್ಯಯನದಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಇದರಲ್ಲಿ ವಿಜಯನಗರ ಸಾಮ್ರಾಜ್ಯದ ಕಾಲದ ಜೀರ್ಣೋದ್ಧಾರ ಎಂದು ಗುರುತಿಸಲು ಹೇಗೆ ಸಾಧ್ಯ ಎಂಬ ಪ್ರಶ್ನೆ ಏಳಬಹುದು.ಇದಕ್ಕೆ ಕೆಳಗಿನಂತೆ ಕ್ರಮವಾಗಿ ವಿವರಣೆ ನೀಡಬಹುದಾಗಿದೆ.

1. ಮೊದಲೇ ಇದ್ದ ದೇವಾಲಯವೊಂದರಲ್ಲಿಗರ್ಭಗುಡಿ, ಶುಕನಾಸಿ, ನವರಂಗ, ಅರ್ಧಮಂಟಪ ಮಾತ್ರ ಇದ್ದು, ವಿಜಯನಗರ ಸಾಮ್ರಾಜ್ಯದಕಾಲದಲ್ಲಿಇದಕ್ಕೆ ಮತ್ತಷ್ಟು ಸೇರ್ಪಡೆಗಳನ್ನು ಮಾಡುವುದರ ಮೂಲಕ ವಿಸ್ತೃತಗೊಳಿಸಿರುವುದು ಕಂಡುಬರುತ್ತದೆ. ಇಲ್ಲಿಯೂಕೂಡ ಮೂಲ ದೇವಾಲಯದ ಸೊಬಗು ಸ್ವಲ್ಪವಾದರೂ ಹಾಳಾಗದಂತೆ ಜೀರ್ಣೋದ್ಧಾರ ಮಾಡಿರುವುದುಕಂಡುಬರುತ್ತದೆ.

2. ವಿಜಯನಗರ ಸಾಮ್ರಾಜ್ಯದ ಕಾಲದ್ದೇಜೀರ್ಣೋದ್ಧಾರ ಎಂದು ಗುರುತಿಸಲು ಇರುವ ಅಂಶಗಳೆಂದರೆ ಬೃಹತ್ ರಾಯಗೋಪುರಗಳ ಸೇರ್ಪಡೆ, ಪ್ರಾಕಾರದಲ್ಲಿ ಕಂಬಗಳ ಮಂಟಪಗಳು, ಹೇರಳವಾಗಿ ಗಾರೆಯ ಬಳಕೆ, ದ್ವಾರಗೋಪುರದ ಬಳ್ಳಿಗಳ ರಚನೆ, ಆಗಮ ಶಾಸ್ತ್ರಕ್ಕೆ ಎಲ್ಲಿಯೂಧಕ್ಕೆ ಬರದಂತೆ ಕೈಗೊಂಡಿರುವಕಾರ್ಯ.

3. ದಾಳಿಗಳಿಂದ ಹಾಳಾಗಿ ಬಿದ್ದಿರುವ ಕಲ್ಲುಗಳನ್ನೇ ಬಳಸಿ ಕೆಲವೊಂದು ದೇವಾಲಯಗಳ ಭಾಗಗಳನ್ನು ಪುನರ್ ನಿರ್ಮಿಸಲಾಗಿದೆ. ಇದಕ್ಕೆ ಪೋಷಕವಾಗಿ ಪೂರ್ವದೇವಾಲಯಗಳ ಕೆಲವೊಂದು ಭಾಗಗಳ ಮೇಲೆ ಅಕ್ಷರಗಳ ಜೊತೆಗೆ ಸಂಖ್ಯೆಗಳನ್ನು ಕೆತ್ತಿರುವುದನ್ನು ಕಾಣಬಹುದು.

ಉದಾಹರಣೆಗೆ : ಮಾಗಡಿ ಸೋಮೇಶ್ವರ ದೇವಾಲಯದದ್ವಾರ ಗೋಪುರ {ಇದು ಕೆಂಪೇಗೌಡನ ಕಾಲದ ನಿರ್ಮಿತಿಯೆಂದು ಪ್ರಚಲಿತವಿದ್ದರೂ ಇದರ ಶೈಲಿ ಮತ್ತು ದ್ವಾರಗೋಪುರದಲ್ಲಿ ಕಂಡುಬಂದಿರುವ ಬಳ್ಳಿಗಳು ಹಾಗೂ ಮಾಗಡಿ-ತಿರುಮಲೆಯ ರಂಗನಾಥಸ್ವಾಮಿ ದೇವಾಲಯದ ದ್ವಾರಮಂಟಪ ಕಂಬಗಳು ಇತರ ವಿಜಯನಗರ ಕಾಲದ ವಾಸ್ತುಶೈಲಿಗೆ ಹೋಲುವುದರಿಂದ ಇವು ವಿಜಯನಗರ ಕಾಲದ ಜೀರ್ಣೋದ್ಧಾರ ಎಂದು ಹೇಳಬಹುದು}, ನಂದಿಯ ಭೋಗನಂದೀಶ್ವರ ದೇವಾಲಯ, ಲಕ್ಷ್ಮೇಶ್ವರದ ಸ್ವಯಂಭೂ ಸೋಮೇಶ್ವರ, ಕೊರಟಗೆರೆ ತಾಲ್ಲೂಕಿನ ಅಕ್ಕಿರಾಮಪುರ, ಕೋಲಾರದ ಕೋಲಾರಮ್ಮ, ಸೋಮೇಶ್ವರ ದೇವಾಲಯಗಳು, ಕೈದಾಳದ ಚನ್ನಕೇಶವ, ತಮಿಳುನಾಡಿನ ತಿರುವಣ್ಣಾಮಲೈನ ಅರುಣಾಚಲೇಶ್ವರ, ಚಿದಂಬರಂನ ನಟರಾಜ, ಮಧುರೈ ಮೀನಾಕ್ಷೀ ಇತ್ಯಾದಿಗಳು

4. ವಿಜಯನಗರ ಕಾಲದಲ್ಲಿ ವ್ಯಾಪಕವಾಗಿ ಗಾರೆಯ ಬಳಕೆ ಕಂಡುಬರುತ್ತದೆ. ಇದು ನಮಗೆ ರಾಯಗೋಪುರ, ಶಿಲ್ಪಗಳು ಮುಂತಾದವುಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ : ಬೇಲೂರಿನ ಚನ್ನಕೇಶವ, ಹಂಪೆಯ ವಿರೂಪಾಕ್ಷ ಇತ್ಯಾದಿಗಳು. ಗಾರೆಯು ವ್ಯಾಪಕವಾಗಿ ಬಳಕೆಯಾಗಲು ಇರುವ ಪ್ರಮುಖ ಕಾರಣವೆಂದರೆ ದಾಳಿಗಳಿಂದ ಸಂಪೂರ್ಣವಾಗಿ ಹಾಳಾಗಿದ್ದ/ಹಾಳಾಗುತ್ತಿದ್ದ ದೇವಾಲಯಗಳನ್ನು ತುರ್ತಾಗಿ ಪುನರ್ ನಿರ್ಮಾಣ ಮಾಡುವುದು. ಕಲ್ಲಿನ ಬಳಕೆಯೇ ಆದಲ್ಲಿ ವಿಳಂಬಗತಿ ಕಾರ್ಯವಾಗುತ್ತಿತ್ತು. ಸಾಮಾಜಿಕವಾಗಿ ನಿರಂತರ ದಾಳಿಗಳಿಂದ ಅಸ್ತವ್ಯಸ್ತವಾಗಿದ್ದ ಸಮಾಜದ ಮರುನಿರ್ಮಾಣ ಮತ್ತು ಜನಜೀವನದ ಚೇತರಿಕೆ ಸಮರೋಪಾದಿಯಲ್ಲಿ ನಡೆಯುವುದು ಪ್ರಥಮ ಆದ್ಯತೆಯಾಗಿತ್ತು. ಕೆರೆ-ಕಾಲುವೆ, ಅಣೆಕಟ್ಟುಗಳ ಮರುನಿರ್ಮಾಣ ಮತ್ತು ಹೊಸ ನಿರ್ಮಾಣಗಳಿಂದಾಗಿ ಜನತೆಗೆ ಉದ್ಯೋಗಸೃಷ್ಟಿ ಮತ್ತು ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಭದ್ರತೆ ಇವುಗಳಿಂದ ಸಾಧ್ಯವಾಯಿತು.

5. ಹಳೆಯಬೀಡಿನ ಹೊಯ್ಸಳೇಶ್ವರ ದೇವಾಲಯವು ತುರುಕ ಸೆಳಾರನಿಂದ ದಾಳಿಗೊಳಪಟ್ಟ ವಿಷಯ ಶಾಸನದಲ್ಲಿ ದಾಖಲಾಗಿದೆ. ಈ ಸಮಯದಲ್ಲಿ ದೇವಾಲಯವು ಬಹಳವಾಗಿ ಹಾಳಾಗಿತ್ತು ಎನ್ನಲು ಆಧಾರಗಳಿವೆ. ಈ ದೇವಾಲಯದ ನವರಂಗದಲ್ಲಿ ಪ್ರೌಢದೇವರಾಯನ ಕಂಬವೆಂದು ಕರೆಯಲ್ಪಡುವ ಕಂಬವೊಂದಿದೆ. ಈ ಕಂಬವು ವಾಸ್ತವವಾಗಿ ಹೊಯ್ಸಳರ ಕಾಲದ್ದೇ ಆದರೂ ಹೊಯ್ಸಳೇಶ್ವರ ದೇವಾಲಯಕ್ಕೆ ಸೇರಿದ್ದಲ್ಲ. ಹೊಯ್ಸಳೇಶ್ವರ ದೇವಾಲಯ ಮತ್ತು ಸುತ್ತುಮುತ್ತಲಿನ ದೇವಾಲಯಗಳು ದಾಳಿಗೊಳಗಾಗಿ ಅವುಗಳ ಕಂಬಗಳು, ತೊಲೆಗಳು ಮುಂತಾದ ಭಾಗಗಳು ಛಿದ್ರಛಿದ್ರವಾಗಿ ಎಲ್ಲೆಂದರಲ್ಲಿ ಬಿದ್ದು, ಹಾಳಾಗುತ್ತಿದ್ದ ಪರಿಸ್ಥಿತಿಯಿತ್ತು. ಇದನ್ನು ಕಂಡು ಪ್ರೌಢದೇವರಾಯನು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿರಬೇಕು. ಈ ಕಾರಣಕ್ಕಾಗಿಯೇ ಈ ಕಂಬವನ್ನು ಪ್ರೌಢದೇವರಾಯ ಕಂಬವೆಂದು ಕರೆಯುತ್ತಿದ್ದಿರಬೇಕು. ದೇವಾಲಯಗಳ ಜೀರ್ಣೋದ್ಧಾರದ ಇತಿಹಾಸದಲ್ಲಿ ಇಂತಹ ಅಂಶಗಳನ್ನು ತಪ್ಪದೇ ಬಳಸಿಕೊಳ್ಳಬೇಕು.ಇಂತಹ ಅನೇಕ ಉದಾಹರಣೆಗಳು ಉಳಿದುಕೊಂಡು ಬಂದಿವೆ.

6. ಸಂಗಮ ವಂಶದದೊರೆಮೊದಲನೆಯ ವೀರಬುಕ್ಕರಾಯನ ಸೊಸೆ ಗಂಗಾದೇವಿಯ ಮಧುರಾವಿಜಯಂ ಅಥವಾ ವೀರಕಂಪರಾಯಚರಿತಂ ಎಂಬ ಕಾವ್ಯದಲ್ಲಿದಕ್ಷಿಣ ಭಾರತದ ದೇವಾಲಯಗಳ ಸ್ಥಿತಿಗತಿ ಮನಕರಗುವಂತೆ ದಾಖಲಾಗಿದೆ. ಹಾಳಾಗಿದ್ದ, ಹಾಳಾಗುತ್ತಿದ್ದ ಅನೇಕ ದೇವಾಲಯಗಳ ವಿವರದೊರಕುತ್ತದೆ. ದಾಳಿಗಳಿಂದಾಗಿ ಶ್ರೀರಂಗಂನ ಉತ್ಸವಮೂರ್ತಿಯನ್ನು ತಿರುಪತಿಗೆ ಸ್ಥಳಾಂತರಿಸಲಾಗಿತ್ತು. ಆನಂತರ ಮರುಪ್ರತಿಷ್ಠಾಪನೆ ಮಾಡಲಾಯಿತು. ಇದಕ್ಕೆ ಕಾರಣನಾದ ಗೋಪದಂಡನಾಯಕನನ್ನು ವೇದಾಂತ ದೇಶಿಕರು ಹೊಗಳಿ ರಚಿಸಿರುವ ಪದ್ಯಗಳು ಶ್ರೀರಂಗಂನ ಶಾಸನದಲ್ಲಿ ದಾಖಲಾಗಿದೆ. ಇಲ್ಲೆಲ್ಲ ಪ್ರಾಕಾರಗಳ ಹೊಸ ನಿರ್ಮಾಣ, ಗೋಪುರಗಳ ನಿರ್ಮಾಣ ಮುಂತಾದವು ವಿಜಯನಗರ ಕಾಲದ ಸೇರ್ಪಡೆಗಳಾಗಿವೆ.

ಶಾಸನಗಳಲ್ಲಿ ಜೀರ್ಣೋದ್ಧಾರದ ಸಂಗತಿಗಳು : ಶಾಸನಗಳಲ್ಲಿಯೂ ಸೇರ್ಪಡೆ ಮತ್ತು ಜೀರ್ಣೋದ್ಧಾರಗಳ ಮಾಹಿತಿಗಳು

ದೊರಕುತ್ತವೆ. ಆಂಧ್ರ ಪ್ರದೇಶದ ಪೂರ್ವಗೋದಾವರೀ ಜಿಲ್ಲೆಯ ದ್ರಾಕ್ಷಾರಾಮದ ಎರಡು ಮೂರು ಶಾಸನಗಳಲ್ಲಿ ವಿಜಯನಗರ ಕಾಲದ ಸೇರ್ಪಡೆಯ ವಿಷಯ ದಾಖಲಾಗಿದೆ. ಇದರಲ್ಲಿ ಮುಖಮಂಟಪ, ಪ್ರದಕ್ಷಿಣಪಥ ಇವುಗಳನ್ನು ಹೊಸದಾಗಿ ನಿರ್ಮಿಸಿದ ಬಗೆಗೆ ವಿವರವಿದ್ದು, 'ಪಾಳುಬಿದ್ದಿರ್ಪ ಪ್ರಾಕಾರಸಾಲೆಗಳಂ ಉದ್ಧರಿಸಿ, ಪೂಜಾಕೈಕಂರ್ಯವಂಕೈಕೊಂಡ' ಎಂಬ ವಿವರವಿದೆ. ಎರಡನೆಯ–ದೇವರಾಯನ ಸೇನಾಧಿಪತಿಯಾದ ಲಕ್ಕಣ್ಣದಂಡೇಶನು ತನ್ನ ಮುಳುವಾಯಿ ರಾಜ್ಯದಲ್ಲಿ ಅನೇಕ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದ ಸಂಗತಿ ಶಾಸನಗಳಲ್ಲಿ ದಾಖಲಾಗಿದೆ. ತಮಿಳುನಾಡಿನ ಕೆಲವು ದೇವಾಲಯಗಳ ತಮಿಳು ಶಾಸನಗಳಲ್ಲಿ ವಿಜಯನಗರ ಕಾಲದ ಜೀರ್ಣೋದ್ಧಾರಕಾರ್ಯವನ್ನೇ ಹೇಳಲಾಗಿದೆ. ಉದಾಹರಣೆಗೆ ತಿರುವಣ್ಣಾಮಲೈನ ಅರುಣಾಚಲೇಶ್ವರ ದೇವಾಲಯದ ಮಂಟಪವು ದಾಳಿಗೆ ಸಿಲುಕಿ ಹಾಳಾಗಿದ್ದಾಗ ಅದನ್ನು ವೀರಕಂಪಣರಾಯನು ಜೀರ್ಣೋದ್ಧಾರಗೊಳಿಸಿಕೊಟ್ಟನೆಂದು 1358 ರ ಶಾಸನವೊಂದು ಹೇಳುತ್ತದೆ (ಜೀರ್ಣ್ಣಧರನ್ ಸೇವ್ವಿತ್ತಾನ್). ಶ್ರೀರಂಗಂನ 1446 ರ ಶಾಸನವೊಂದರಲ್ಲಿ 'ಮಂಟಪತ್ತಿಲ್ ವಿನಾಯಗಮೂರ್ತಿ ಸೇವಿಕ್ಕಿರಾನ್, ನವರಂಕತ ಜಿಣ್ಣಮಕರನ್' ಎಂದಿದೆ. ಕರ್ನಾಟಕದ ಬೆಳಗಾವಿಯಲ್ಲಿ ದೊರೆತಿರುವ 1403 ರ ಶಾಸನದಲ್ಲಿ (ದೊರೆತಸ್ಥಳ ತಿಳಿಯದು) ಲಕ್ಷ್ಮೀಅರಸನ ಸ್ಥಾನವನ್ನು (ವಿಷ್ಣುವಿನ ದೇವಾಲಯವನ್ನು) ಭದ್ರಗೊಳಿಸಿದನೆಂದು ತಿಳಿಸುತ್ತದೆ. ಕೋಲಾರದ ಕೋಲಾರಮ್ಮ ಮತ್ತು ಸೋಮೇಶ್ವರ ದೇವಾಲಯಗಳ ಶಾಸನಗಳಲ್ಲಿ ಮುಂಭಾಗದ ಮಂಟಪ ಮತ್ತು ಚಂದ್ರಶಾಲೆಯನ್ನು ಮಾಧವಮಂತ್ರಿಯೆಂಬವನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಇಲ್ಲಿ ಅನೇಕ ಭಾಗಗಳ ಸೇರ್ಪಡೆಯ ಉಲ್ಲೇಖಗಳು ದೊರೆತಿದ್ದರೂ ಅವುಗಳು ಇಂದು ಸ್ಥಾನಪಲ್ಲಟಗೊಂಡಿವೆ. ಕುರುಡುಮಲೆಯಲ್ಲಿ ಚೋಳರ ಕಾಲದ ನಿರ್ಮಿತಿಗಳು ದೊರಕಿದ್ದರೂ ವಿಜಯನಗರಕಾಲದಲ್ಲಿ ನವರಂಗ, ಪ್ರಾಕಾರ ಮುಂತಾದವುಗಳನ್ನು ಹೊಸದಾಗಿ ನಿರ್ಮಿಸಿ, ಮೊದಲೇಇದ್ದ ಪ್ರದಕ್ಷಿಣಾಪಥವನ್ನು ಮರುನಿರ್ಮಿಸಲಾಗಿದೆ. ದಕ್ಷಿಣಕನ್ನಡ ಜಿಲ್ಲೆಯ ಶಾಸನಗಳಲ್ಲಿ ಅನೇಕ ಬಸದಿಗಳ, ಜೈನಬಿಂಬಗಳ ನಿರ್ಮಾಣ ಮತ್ತು ಜೀರ್ಣೋದ್ಧಾರದ ಬಗೆಗೆ ಮಾಹಿತಿ ದೊರಕುತ್ತದೆ. ಈಚೆಗೆ ಪ್ರಕಟವಾಗಿರುವ ಮೂಡಬಿದರೆಯ ಬಸ್ತಿಯಲ್ಲಿರುವ ಬಿಂಬಗಳ ಲೆಕ್ಕ ಪುಸ್ತಕದಲ್ಲಿ ಅನೇಕ ಬಸದಿಗಳ ವಿವರಗಳು, ಅದರಲ್ಲಿರುವ ಜಿನಬಿಂಬಗಳು, ಜೀರ್ಣೋದ್ಧಾರದ ದಿನಾಂಕಗಳು ಮುಂತಾದ ಅನೇಕ ಅಂಶಗಳು ವಿಶದವಾಗಿ ದಾಖಲಾಗಿದ್ದು, ಸಂಶೋಧಕರಿಗೆ ಒಂದು ಅಮೂಲ್ಯವಾದ ಗಣಿಯಂತಿದೆ. ಆನೆಗೊಂದಿಯಲ್ಲಿರುವ ಮಹಾವೀರ ತೀರ್ಥಂಕರನ ಬಸದಿಯ ಕಾಲ ಕ್ರಿ.ಶ. ಸು12 ನೆಯ ಶತಮಾನ ಎಂದು ಹೇಳಬಹುದಾಗಿದ್ದು, ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ.

ಜೀರ್ಣೋದ್ಧಾರಕಾರ್ಯವು ಪಾಶ್ಚಾತ್ಯರಿಂದ ನಮಗೆ ಬಂದುದೆಂದು ಹಲವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ನಮ್ಮಲ್ಲಿ ದೇವಾಲಯಗಳಿಂದ ಹಿಡಿದು ಕೆರೆ–ಕಾಲುವೆ, ಅಣೆಕಟ್ಟುಗಳ ವರೆಗೂ ಅನೇಕ ರೀತಿಗಳಲ್ಲಿ ಜೀರ್ಣೋದ್ಧಾರ ನಡೆದಿದೆ. ಈ ಜೀರ್ಣೋದ್ಧಾರವೂ ಮೂಲ ಸ್ವರೂಪವನ್ನು ಹಾಳುಮಾಡದೆ ನಡೆಸಿರುವ ಕಾರ್ಯವಾಗಿದೆ. ಈ ಅಂಶವು ಭಾರತೀಯರಿಗೆ ಜೀರ್ಣೋದ್ಧಾರ ಕಾರ್ಯದ ಸ್ಪಷ್ಟತೆ ಇತ್ತು ಎಂಬುದಕ್ಕೆ ಉತ್ತಮವಾದ ಉದಾಹರಣೆಗಳಾಗಿವೆ. ಆದರೆ ಇಂದು ಜೀರ್ಣೋದ್ಧಾರದ ಹೆಸರಿನಲ್ಲಿ ಆಯಾ ದೇವಾಲಯಗಳ ಮೂಲಸ್ವರೂಪವನ್ನೇ ಹಾಳುಮಾಡಲಾಗುತ್ತಿದೆ. ವಿಜಯನಗರದ ಅರಸರಿಗೆ ಸಾಮಾಜಿಕವಾಗಿ ನಿರಂತರ ದಾಳಿಗಳಿಂದ ಅಸ್ತವ್ಯಸ್ತವಾಗಿದ್ದ ಸಮಾಜದ ಮರುನಿರ್ಮಾಣ ಮತ್ತು ಜನಜೀವನದ ಚೇತರಿಕೆ ಸಮರೋಪಾದಿಯಲ್ಲಿ ನಡೆಯುವುದು ಪ್ರಥಮ ಆದ್ಯತೆಯಾಗಿತ್ತು. ಗುಡಿ–ಗೋಪುರಗಳು, ಕೆರೆ–ಕಾಲುವೆ, ಅಣೆಕಟ್ಟೆಗಳ ಮೂಲಕ ಸಮಾಜದ ಶುಶ್ರುಷೆ ಪ್ರಥಮ ಕರ್ತವ್ಯವಾಗಿದ್ದ ಕಾರಣ ಅದನ್ನು ಕೈಗೊಂಡು ನವನಿರ್ಮಾಣವನ್ನು ಮಾಡಿದರು. ಜೀರ್ಣೋದ್ಧಾರ ಎಂಬ ಕಾರ್ಯವನ್ನು ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ರಾಜವಂಶಗಳೂ ನಡೆಸಿಕೊಂಡು ಬಂದಿವೆ. ಅಷ್ಟೇ ಅಲ್ಲದೆ ಬೇರೆ ಬೇರೆ ರಾಜವಂಶಗಳು ಕೂಡ ಇಂತಹುದೇ ಕಾರ್ಯವನ್ನು ಮಾಡಿರುವುದಕ್ಕೆ ಉದಾಹರಣೆಗಳು ಲಭ್ಯವಾಗಿವೆ. ಉದಾಹರಣೆಗೆ ಕೆಳದಿಯ ವೆಂಕಟಪ್ಪನಾಯಕನು ಶೃಂಗೇರಿಯ ದೇಗುಲಗಳ ಪುನರ್ ಪ್ರತಿಷ್ಠೆಯಂ ಮಾಡಿದ ಎಂಬಂತಹ ಸಂಗತಿಗಳು ಶಾಸನೋಕ್ತವಾಗಿವೆ. ಮೈಸೂರು ಅರಸರುತಮ್ಮ ಆಳ್ವಿಕೆಯ ಪ್ರದೇಶಗಳಲ್ಲಿ ಅನೇಕ ದೇವಾಲಯಗಳ ಜೀರ್ಣೋದ್ಧಾರ ನಡೆಸಿರುವುದು ದಾಖಲಾಗಿದೆ. ಇಂತಹ ಅನೇಕ ಆಯಾಮಗಳ ಹಿನ್ನೆಲೆಯಲ್ಲಿ ಜೀರ್ಣೋದ್ಧಾರದ ಬಗೆಗೆ ಅಧ್ಯಯನ ನಡೆಯಬೇಕಿದೆ.

ಮಾಗಡಿ ಸೋಮೇಶ್ವರ ಗುಡಿಯ ದ್ವಾರ ಗೋಪುರದಲ್ಲಿ ಜೀರ್ಣೋದ್ಧಾರಗೊಂಡಿರುವ ಚಿಹ್ನೆಗಳು



ಆಧಾರಸೂಚಿ ಮತ್ತು ಟಿಪ್ಪಣೆಗಳು :

1. **ಎಪಿಗ್ರಾಫಿಯಾ ಕರ್ನಾಟಿಕ** (ಪರಿಷ್ಕೃತ ಸಂಪುಟಗಳು, 1–13), ಮೈಸೂರು ವಿಶ್ವವಿದ್ಯಾನಿಲಯ
2. **ಗಂಗಾದೇವಿಯ ಮಧುರಾ ವಿಜಯಂ**–(ಅನುವಾದ) ಕೆ. ಕುಶಾಲಪ್ಪಗೌಡ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2015
3. ಶಾಸನಕವಿ ಮಾಧವ ವಿಬುಧ–ಎಂ. ಹನುಮಂತರಾವ್, **ಪ್ರಬುದ್ಧ ಕರ್ನಾಟಕ** 57–3, 1975, ಪುಟ 1–8
4. **ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್**, ಸಂಪುಟ–24 {Inscriptions of the Sri Ranganatha Swamy Temple, Sri Rangam}
5. Tiruvannamalai **Arunachaleswara Temple A Study**-Arunagiri, J (UnPublished PHD Work)

6. ತುಳುನಾಡಿನ ಶಾಸನಗಳು (ಸಂಪುಟ–1)–(ಸಂ) ಕೆ.ವಿ. ರಮೇಶ್, ಎಂ.ಜೆ. ಶರ್ಮ, ಗೀತಾ ಬುಕ್ ಹೌಸ್, ಮೈಸೂರು–1978
7. ಮೂಡಬಿದರೆ ಬಸದಿಗಳಲ್ಲಿರುವ ಬಿಂಬಗಳ ಲೆಕ್ಕ ಪುಸ್ತಕ–(ಸಂ)ಸುಗುಣಾ ಶೆಟ್ಟಿ, ಕರ್ನಾಟಕರಾಜ್ಯ ಪತ್ರಾಗಾರ ಇಲಾಖೆ–2007
8. ಕೃಷ್ಣದೇವರಾಯನ ದಿನಚರಿ–ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು–1987
9. **South Indian Inscriptions Volumes**
10. **Epigraphia Indica Volumes**
11. **Inscriptions of Vijayanagara Rulers** {Volume-1, Parts 1 to 5, Kannada Inscriptions} - (Ed) SrinivasaRitti, B.R. Gopal, I.C.H.R. andNorthern Book Centre, New Delhi, 2004.
12. **Inscriptions of Vijayanagara Rulers** {Volume-2, Kannada Inscriptions,A.D.1466-1587} - (Ed) SrinivasaRitti, B.R. Gopal, I.C.H.R., 2008.
13. **Inscriptions of Vijayanagara Rulers** {Volume-3, Kannada Inscriptions}(Ed) SrinivasaRitti, B.R. Gopal, I.C.H.R., 2009.
14. **Inscriptions of Vijayanagara Rulers** {Volume-4,Telugu Inscriptions} -(Ed) P.V. ParabramhaShastri, I.C.H.R., 2009.
15. **Gangadevi's Madhuravijayam** – A literary Study, Doddamani. B.A, Sharada Publishing House, Delhi 2008.
16. **Sources of Vijayanagar history**, S. Krishnaswami Aiyangar, Madras.1919
17. **Vijayanagara progress of Research** 1979-83, (Ed) M.S. Nagaraja Rao, D.A.M., Mysore, 1983.
18. **Vijayanagara progress of Research** 1983-84,(Ed) M.S. Nagaraja Rao, D.A.M.,Mysore, 1985.
19. **Vijayanagara Progress of Research** 1984-87, (Ed) D.V. Devaraj and C.S. Patil, D.A.M., Mysore, 1991.
20. **Vijayanagara Progress of Research** 1987-88, (Ed) D.V. Devaraj and C.S. Patil, D.A.M., Mysore, 1991.
21. **Vijayanagara Progress of Research** 1988-91, (Ed) D.V. Devaraj and C.S. Patil, D.A.M., Mysore, 1996.

❑

21. ವಿಠಲ ದೇಗುಲದ ಗೋಪುರದಲ್ಲಿನ ಚಿನ್ನದ ಕಳಶಗಳು, ಶಾಸನಗಳು ಮತ್ತು ಪುರಾತತ್ವೀಯ ಆಧಾರಗಳು

– ಟಿ.ಎಂ. ಕೇಶವ

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ತಾನು ನಡೆಸುವ ಉತ್ಖನನ, ಸಂರಕ್ಷಣಾ ಕಾರ್ಯದಲ್ಲಿ ವಿಜಯನಗರ ಇತಿಹಾಸಕ್ಕೆ ಪೂರಕವಾದ ಅನೇಕ ಭೂಮಿಗತವಾಗಿದ್ದ ಪುರಾತತ್ವೀಯ ಮಾಹಿತಿಗಳನ್ನು ಬೆಳಕಿಗೆ ತಂದಿದ್ದು ಅಂದಿನ ಶಾಸನಗಳಲ್ಲಿ ಕಾಲದ ಸಾಹಿತ್ಯದಲ್ಲಿ ಲಿಖಿತಗೊಂಡು ಇದುವರೆಗೂ ಗೋಚರವಾಗದಿದ್ದ ಮಾಹಿತಿಯನ್ನು ಹೊರಗೆಡಹುತ್ತಲೇ ಬಂದಿದ್ದಾರೆ. ಇದೇ ಲೇಖಕರ ಅನೇಕ ಲೇಖನಗಳು ಕರ್ನಾಟಕ ರಾಜ್ಯ ಸರ್ಕಾರದ ಅಧೀನ ಇಲಾಖೆ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ವಿಭಾಗವು ಪ್ರತಿ ವರ್ಷ ಹಂಪಿ ಉತ್ಸವ ನಡೆಸುವ ಸಂದರ್ಭದಲ್ಲಿ, ಆಯೋಜಿಸುವ "ವಿಜಯನಗರ ಅಧ್ಯಯನ"ಗೋಷ್ಠಿಗಳಲ್ಲಿ ಪ್ರಸ್ತುತಪಡಿಸುತ್ತಲೇ ಬಂದಿದ್ದಾರೆ.

ಈ ಲೇಖನದಲ್ಲಿ, ವೆಂಕಟಾಪುರದ ವಿಠಲ ದೇಗುಲದಲ್ಲಿನ ಪೂರ್ವ ಹಾಗೂ ಉತ್ತರ ದಿಕ್ಕಿನ ಮಹಾದ್ವಾರ ಗೋಪುರಕ್ಕೆ ಸಂಬಂಧಿಸಿದ ಶಾಸನಗಳು ಮತ್ತು ದೊರೆತಿರುವ ಪುರಾತತ್ವೀಯ ಆಧಾರಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಮೊದಲಿಗೆ ಗೋಪುರಗಳ ಬಗ್ಗೆ ಶಾಸನದ ಮಾಹಿತಿಯನ್ನು ಕಲೆಹಾಕಿದಾಗ ಕೃಷ್ಣದೇವರಾಯನ ಪಟ್ಟದರಸಿಯರಾದ ಚಿನ್ನಾದೇವಿ ಅಮ್ಮನವರು ಮತ್ತು ತಿರುಮಲದೇವಿ ಅಮ್ಮನವರು 11.3.1513ರಲ್ಲಿ ವಿಠಲದೇವರಿಗೆ ಗೋಪುರಗಳನ್ನು ಕಟ್ಟಿಸಿ ದೇವರ ಪೂಜೆ-ಪುನಸ್ಕಾರಗಳಿಗೆ ಅನೇಕ ದಾನಗಳನ್ನು ಕೊಟ್ಟ ಮಾಹಿತಿಯಿರುವ ಶಾಸನಗಳು[1] ವಿಠಲ ದೇವಾಲಯದ ರಂಗಮಂಟಪ ಮತ್ತು ಸಭಾಮಂಟಪದಲ್ಲಿ ದೊರೆತಿವೆ.

ತದನಂತರ, ಅಚ್ಯುತದೇವರಾಯನ ಆಳ್ವಿಕೆಯಲ್ಲಿ, ಒಂದೇ ವರ್ಷದಲ್ಲಿ ಗೋಪುರಗಳಿಗೆ ಹೊನ್ನಿನ ಕಳಶವನ್ನು ಕೂಡಿಸಿದ ಮಾಹಿತಿ ಇರುವ ಎರಡು ಶಾಸನಗಳು ಅದೇ ದೇವಾಲಯದ ಪೂರ್ವ ಹಾಗೂ ಉತ್ತರ ದಿಕ್ಕಿನ ಗೋಪುರದಲ್ಲಿಯ ಶಾಸನಗಳು[2] ತಿಳಿಸಿಕೊಡುತ್ತವೆ.

ಮೇ ತಿಂಗಳ 13ನೇ ತೇದಿ (ಶಾಸನ ಸಂಖ್ಯೆ 198) 1538ರ ಶಾಸನ-ಪೂರ್ವ ದಿಕ್ಕಿನ ಗೋಪುರದ ಬಲಭಾಗದಲ್ಲಿದ್ದು "ಅಚ್ಯುತದೇವರಾಯನು ರಾಜ್ಯವನ್ನಾಳುತ್ತಿದ್ದಾಗ, ಶ್ರೀ ವಿಠಲ ದೇವರಿಗೆ ಪೂರ್ವ ದಿಕ್ಕಿನ ಗೋಪುರದ ಸುವರ್ಣ ಕಲಶವನ್ನು ಉಧಿಯ ತಿಮ್ಮಪ್ಪನಾಯಕನ ಮಗ ಹಿರಿಯ ತಿಮ್ಮಪನಾಯಕನು ರಾಜನಾದ ಅಚ್ಯುತರಾಯನೈಗೆ ಮತ್ತು ಚಿಕ್ಕರಾಯನಿಗೆ ಪುಣ್ಯವಾಗಬೇಕೆಂದು ವಿಠಲದೇವರ ಪೂರ್ವ ದಿಕ್ಕಿನ ಗೋಪುರಕ್ಕೆ ಸುವರ್ಣ ಕಲಶವನ್ನಿಡಿಸಿದಂತೆ ತಿಳಿಯುತ್ತದೆ." ಇವರ ಕಾಲದಲ್ಲೇ ತೇದಿ 18, ಸಿತಂಬರ್, 1538ರಲ್ಲಿ ಅಂದರೆ ಮೂರು ತಿಂಗಳ ನಂತರ ಉತ್ತರದ (ಶಾಸನ ಸಂಖ್ಯೆ 197) ಚಿನ್ನದ ಕಲಶವನ್ನು ರಾಜನ ಒಳಿತಿಗಾಗಿ ಮಾಡಿಸಿರುವ ಮಾಹಿತಿ ದೊರಕುತ್ತದೆ.

ವಿಜಯನಗರದ ಅರಸರು ತಮ್ಮ ಕಾಲದಲ್ಲಿ ನಿರ್ಮಿತವಾದ ದೇಗುಲಗಳ ವಿಶೇಷ ಅಲಂಕರಣೆಗೆ (ಶಾಸನ 191)[3], ಪೂಜೆ-ದೈನಂದಿನ ಧಾರ್ಮಿಕ ವಿಧಿಗಳು ಸುಗಮವಾಗಿ ನಡೆಯಲು ದ್ರವ್ಯ, ಹೊಲ, ಗದ್ದೆ ಮಾನ್ಯಗಳು, ಪರಿಕರಗಳು, ಆಭರಣಗಳು ದೇವತಾ ಮೂರ್ತಿಗಳು ಮತ್ತು ಪರಿಚಾರಕರುಗಳನ್ನು ನೀಡುತ್ತಿದ್ದ ಅನೇಕ ಶಾಸನಗಳಿವೆ.

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ವಿಠಲ ದೇಗುಲದ ಪೂರ್ವ ಮಹಾದ್ವಾರದ ಎದುರಿನ ಬಜಾರು

ಮಂಟಪದ ನೈರುತ್ಯ ಮೂಲೆಯಲ್ಲಿ 2006–07ರಲ್ಲಿ ಪ್ರವಾಸೀ ಉಪಯೋಗ ಹೇತು ಒಂದು ಟಿಕೇಟ್ ಕೌಂಟರ್ ಮಾಡಲು, ಪ್ರಾಯೋಗಿಕ ಕುಳಿ (ಚಿತ್ರ–1) ತೆರೆದಾಗ ಅವುಗಳಲ್ಲಿ ಕೆಲವು ಚಿನ್ನದ ರೇಕುಗಳು ದೊರೆತಿದ್ದು (ಚಿತ್ರ–2)ಅವುಗಳ ಸೂಕ್ಷ್ಮ ಪರಿಶೀಲನೆಗೆ ಒಳಪಡಿಸಿದಾಗ ಇವು ಯಾವುದೇ ಆಭರಣಗಳ ಭಾಗವಾಗಿಲ್ಲದಿದ್ದರೂ ಅದ್ದರಲ್ಲಿರುವ ಚಿತ್ರಕಾರಿಕೆ ಕುತೂಹಲವನ್ನು ಮೂಡಿಸಿತು.

ಛಿದ್ರ ಛಿದ್ರವಾದ ಈ ತುಣುಕುಗಳನ್ನು ಸ್ವಲ್ಪ ನೇರಗೊಳಿಸಿ ನೋಡಿದಾಗ ಅವುಗಳಲ್ಲಿ ಒಂದು ತುಂಡು ಮೊಗ್ಗಿನ ಒಂದು ಎಸಳಿನಾಕಾರದಲ್ಲಿದ್ದು ಅದರ ಅಂಚಿನಲ್ಲಿ ಕರಾರುವಾಕ್ಕಾಗಿ ಒಂದು ಬದಿಯಲ್ಲಿ ಮೊಳೆ ಹೊಡೆದ ರಂಧ್ರಗಳಿದ್ದುದು ಕಂಡು ಬಂದವು. ಮತ್ತೂ ಸೂಕ್ಷ್ಮವಾಗಿ ಈ ರಂಧ್ರಗಳ ಪರಿಶೀಲಿಸಿದಾಗ ಯಾವುದಾದರೂ ಒತ್ತಡ ಹೇರಿ ಅವುಗಳನ್ನು ಬಲಪ್ರಯೋಗದಿಂದ ಕಿತ್ತು ಹಾಕಿರುವಂತೆ ಆ ಮೊಳೆ ಹೊಡೆದ ರಂಧ್ರಗಳು ಹರಿದು ಹೋಗಿರುವಂತೆ ಕಂಡು ಬಂದಿದ್ದು ಬಲಪ್ರಯೋಗದಿಂದ ಇದನ್ನು ನಷ್ಟಗೊಳಿಸಿದಂತೆ ಕಂಡುಬರುತ್ತದೆ.(ಚಿತ್ರ 3,4)

ಚಿತ್ರ 1–ಚಿನ್ನದ ರೇಕುಗಳು ದೊರೆತ ದೇವಾಲಯ ಪೂರ್ವ ಬಜಾರು ಮಂಟಪದ ಪ್ರಾಯೋಗಿಕ ಕುಳಿ




ಇದೇ ಆಕಾರದ ಮತ್ತೊಂದು ಚೂರಿನಲ್ಲಿ ಮೊಳೆಗಳ ರಂದ್ರದ ಗುರುತಿಲ್ಲದಿದ್ದರೂ, ನಮಗೆ ಆ ರೇಕಿನ ಆಕಾರ ಮೊಗ್ಗಿನ ಎಸಳಿನಂತೆ ಇದ್ದು ತಳಭಾಗದಲ್ಲಿ ಹೂ ಬಳ್ಳಿ ಮತ್ತು ಮಣಿಗಳ ಅಲಂಕರಣೆಯನ್ನು ಕಾಣಬಹುದು (ಚಿತ್ರ 3,7 ಮತ್ತು 8). ಒಟ್ಟು 6 ಚೂರುಗಳು (ಚಿತ್ರ –2) ದೊರೆತಿದ್ದು ಅವುಗಳಲ್ಲಿ ನಮಗೆ ಮೊಳೆಗಳನ್ನು ಕೂರಿಸುವ ರಂಧ್ರಗಳನ್ನು ಕಾಣಬಹುದು.


ಕಲಶಗಳಲ್ಲಿ 12 ಭಾಗಗಳಿರುತ್ತವೆ ಎಂಬುದು ಸರ್ವರಿಗೂ ತಿಳಿದ ವಿಷಯವೇ. ಇಡೀ ಪ್ರಕೃತಿಯ ದ್ಯೋತಕವಾಗಿರುವ ಕಳಶಗಳ ಕುಂಭಗಳಲ್ಲಿ ಸಿರಿಧಾನ್ಯಗಳನ್ನು ಇರಿಸಿರುವುದೂ ತಿಳಿದ ವಿಷಯವೇ. ಈ ಸಿರಿಧಾನ್ಯಗಳು ಆ ಪ್ರದೇಶದಲ್ಲಿ ಭೀಕರ

ಬರಗಾಲ ಬಂದಿದ್ದು ಮತ್ತೆ ಕ್ಷಾಮದ ಪರಿಸ್ಥಿತಿ ತಿಳಿಯಾದಾಗ ಅವುಗಳನ್ನು ಗ್ರಾಮದ ಸಲುವಾಗಿ ಬಿತ್ತನೆ ಬೀಜವನ್ನಾಗಿಯೂ ಉಪಯೋಗಿಸುತ್ತಿದ್ದರು. ಇದೇ ಅಲ್ಲದೆ ಕಲಶ ಪ್ರತಿಷ್ಠಾಪನೆಯ ಸಮಯದಲ್ಲಿ, ಯಂತ್ರಗಳು, ಪಂಚ ಲೋಹ, ನವರತ್ನಗಳು, ಪಾದರಸ,ಇತ್ಯಾದಿಗಳನ್ನು ಧಾನ್ಯಗಳೊಂದಿಗೆ ಇರಿಸುವುದು ವಾಡಿಕೆ. ಕಲಶವು ಅಮೃತದ ಸಂಕೇತ. ಅರ್ಥಾತ್ ಜೀವನಾಧಾರ ಮೂಲ. ಹೀಗಾಗಿ ಜೀವಿಸುವುದಕ್ಕೆ ಅಗತ್ಯವಾದ ಧಾನ್ಯಗಳನ್ನು ಕೂಡಿಸುತ್ತಿದ್ದರು.


ಚಿತ್ರ 2– ಸಂರಕ್ಷಣಾ ಕಾರ್ಯದಲ್ಲಿ ವಿಠಲ ದೇಗುಲದ ಬಳಿ ದೊರೆತ ಚಿನ್ನದ ತುಣುಕುಗಳು



ಚಿತ್ರ 3– ಮೊಗ್ಗಿನಾಕಾರದ ರಂಧ್ರವುಳ್ಳ ಮತ್ತು ಮಣಿಗಳ ಅಲಂಕರಣೆ ಇರುವ ರೇಕುಗಳು




ಚಿತ್ರ–4 ಮೊಗ್ಗಿನ ತುದಿ




ಚಿತ್ರ – 5– ವಿಜಯನಗರ ತಾಮ್ರ ಕಲಶ, ಬೇಲೂರು




ಚಿತ್ರ–6 ಕಲಶದ ಅಲಂಕೃತತ ಮಧ್ಯಭಾಗ; ಇದರಲ್ಲಿ ಸುರುಳ್ ಬಳ್ಳಿಯ ಚಿತ್ರಣವಿದೆ.



ಚಿತ್ರ– 7 ಮಣಿಗಳ ಅಲಂಕರಣೆ ಇರುವ ರೇಕು



ಚಿತ್ರ–8 ಹೂ–ಬಳ್ಳಿ ಚಿತ್ರ ಅಲಂಕರಣೆ ಇರುವ ರೇಕು



ಇಂದಿನ ಕಾಲದ ಚಿನ್ನದ ಕಲಶ



ಮೊದಲೇ ತಿಳಿಸಿದಂತೆ ವಿಠಲ ದೇಗುಲದ ಶಾಸನಗಳಲ್ಲಿ ನಮಗೆ ಪೂರ್ವ ಮಹಾದ್ವಾರ ಗೋಪುರಗಳನ್ನು ಮಹಾರಾಣಿ ಚಿನ್ನಾ ದೇವಿ ಮತ್ತು ತಿರುಮಲದೇವಿಯರು 11.3.1513ರಲ್ಲಿ ಕಟ್ಟಿಸಿದರು. ಅನಂತರ ಮೇ ತಿಂಗಳ 13ನೇ ತೇದಿ (ಶಾಸನ ಸಂಖ್ಯೆ 198) 1538ರ ಶಾಸನ–ಪೂರ್ವ ದಿಕ್ಕಿನ ಗೋಪುರದ ಬಲಭಾಗದಲ್ಲಿದ್ದು "ಅಚ್ಯುತದೇವರಾಯನು ರಾಜ್ಯವನ್ನಾಳುತ್ತಿದ್ದಾಗ,ಶ್ರೀ ವಿಠಲ ದೇವರಿಗೆ ಪೂರ್ವ ದಿಕ್ಕಿನ ಗೋಪುರದ ಸುವರ್ನ ಕಲಶವನ್ನು ಉಧಿಯ ತಿಮ್ಮಪ್ಪನಾಯಕನ ಮಗ ಹಿರಿಯ ತಿಮ್ಮಪನಾಯಕನು ರಾಜನಾದ ಅಚ್ಯುತರಾಯನ್ನೆಗೆ ಮತ್ತು ಚಿಕ್ಕರಾಯನಿಗೆ ಪುಣ್ಯವಾಗಬೇಕೆಂದು ವಿಠಲದೇವರ ಪೂರ್ವ ದಿಕ್ಕಿನ ಗೋಪುರಕ್ಕೆ ಸುವರ್ಣ ಕಲಶವನ್ನಿಡಿಸಿದಂತೆ ತಿಳಿಯುತ್ತದೆ."

ಈಗ ನಮಗೆ ದೊರತಿರುವುದು 1538ರ ಶಾಸನದ ಪ್ರಕಾರ ಕೂಡಿಸಿರುವ ಚಿನ್ನದ ಕಳಶದ ತ್ರುಟಿತ ಭಾಗಗಳು. ವಿಜಯನಗರದರಸರ ದುರಹಂಕಾರಕ್ಕೆ ಮತ್ತು ಅದರ ವೈಭೋಗ ನೆರೆ ರಾಜ್ಯದವರಿಗೆ ಸಹಿಸಲಾರದ ಮಟ್ಟಕ್ಕೆ ಹೋದಾಗ ಅವರ ದ್ವೇಷದ ದಳ್ಳುರಿಗೆ ವಿಜಯನಗರದ ಜನರಿಂದ ಹಿಡಿದು ಮೂಕ ದೇವಾಲಯಗಳು, ಗುಡಿ ಗೋಪುರಗಳು, ಮಹತ್ವ ಪೂರ್ಣ ರಾಜವಾಡೆಯ ಕಟ್ಟಡಗಳ ಲಂಕಾದಹನಕ್ಕೆ ಕಾರಣವಾಯಿತು. ಬಾಹುಬಲಿ ಹನುಮಂತನ ನಾಡಿನಲ್ಲಿ ಇದು ನಡೆದದ್ದು ಇದು ವಿಪರ್ಯಾಸ ಮತ್ತು ಕಾಕತಾಳಿಯ. ನಾನು ಹಂಪೆಯಲ್ಲಿ ರಾಜ ವಾಡೆಯ ಹತ್ತಿರ,ಕ್ರಿಷ್ಣವಿಠಲ ದೇವಾಲಯಗಳ ಸಂರಕ್ಷನೇಯ ಕಾಲದಲ್ಲಿ ಅಗ್ನಿಗಾಹುತಿಯಾಗಿದ್ದ ಈ ಅವಶೇಷಗಳನ್ನು ನೋಡಿ ಅತೀವ ಖತಿಗೊಂಡಿದ್ದೇನೆ. ಚಿನ್ನದ ಕಲಶಕ್ಕಾಗಿ ನಿಧಾನವಾಗಿ ಲೂಟಿಕೋರರು ಕೆಲಸ ಮಾಡಲಿಲ್ಲ,ಮಹಾದ್ವಾರದ ಅಧಿಷ್ಠಾನದ,ನೈರುತ್ಯ ಮೂಲೆಗಳನ್ನು ಹಾರೆ ಕೋಲುಗಳಿಂದ ಚಿಮ್ಮಿ ಎಬ್ಬಿಸಿ ಗೋಡೆಗಳನ್ನು ಕ್ಷತಿಗೊಳಿಸಿ ಗೋಪುರಕ್ಕೆ ಅಗ್ನಿಸ್ಪರ್ಶ ಮಾಡಿ ಕಲಶಗಳು ಉದುರಿ ಬೀಳುವಂತೆ ಮಾಡಿ ಅವುಗಳನ್ನು ಹರಿದು ಛಿದ್ರಮಾಡಿ ಹಂಚಿಕೊಂಡಿರುವಂತೆ ಕಾಣುತ್ತದೆ. ಚಿನ್ನದ ರೇಕುಗಳು ಬೆಂಕಿಯಲ್ಲಿ ಸುಟ್ಟ ಅಥವಾ ಕರಗಿದಂತೆ ಕಾಣುವುದಿಲ್ಲ. ಆದರೆ ಹರಿಯಲ್ಪಟ್ಟಿರುವುದು ತಿಳಿದು ಬರುತ್ತದೆ. ಒಂದು ಕಡೆ ಮನಸಿಗೆ ಘಾಸಿಯಾದರೂ ಶಾಸನದಲ್ಲಿ ತಿಳಿಸಿರುವಂತೆ ವಿಠಲ ದೇವಾಲಯದ ಪೂರ್ವ ದಿಕ್ಕಿನ ಮಹಾದ್ವಾರ ಗೋಪುರಕ್ಕೆ ಚಿನ್ನದ ಕಲಶಗಳನ್ನು ಕೂಡಿಸಿರುವುದು ಪುರಾತತ್ವೀಯವಾಗಿ ರುಜುವಾತಾಗುತ್ತದೆ.

ಇಂಥ ವಿಜಯನಗರದ ಕಡೇ ದಿನಗಳ ಬಗ್ಗೆ ಬೆಳಕು ಚೆಲ್ಲುವ ಪುರಾತತ್ವೀಯ ಅಂಶಗಳೊಂದಿಗೆ ಸಮಕಾಲೀನ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ವಿವರಣೆಗಳ ಬಗ್ಗೆ ಬೆಳಕು ಚೆಲ್ಲುವ ಕಾರ್ಯವನ್ನು ವಿದ್ವಾಂಸರುಗಳು ಮಾಡಬೇಕಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. ಶಾಸನ ಸಂಖ್ಯೆ 181, 182; ಪುಟ 130–134; **ಹಂಪಿ ಶಾಸನಗಳು**, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ:3; ಸಂ.ಡಾ.ದೇವರಕೊಂಡಾ ರೆಡ್ಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000
2. ಅದೇ, ಶಾಸನ ಸಂಖ್ಯೆ 197–198, ಪುಟ 152–154.
3. ಅದೇ, ಶಾಸನ ಸಂಖ್ಯೆ 191; ಸತ್ತಿಗೆ, ಪತಾಕಿ, ಬಾವುಟ ಇತ್ಯಾದಿಗಳಿಂದ ಪರಾಂಕುಶ (ಗೆಜ್ಜಾಲೆ) ಮಂಟಪವನ್ನು ಅಲಂಕರಿಸಲಾಗುತ್ತಿತ್ತು ಎಂಬುದಾಗಿ ತಿಳಿದು ಬರುತ್ತದೆ.

❑

22. ವಿರೂಪಾಕ್ಷಪುರದ ವಿರೂಪಾಕ್ಷ ದೇವಾಲಯ ಮತ್ತು ಲಕ್ಕಣ ದಂಡೇಶ

– ಡಾ. ಕೂ.ಸ. ಅಪರ್ಣ

ವಿರೂಪಾಕ್ಷಪುರ ಅಥವಾ ವಿರೂಪಾಕ್ಷಿ ಎಂಬ ಗ್ರಾಮವು ಈಗಿನ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿಗೆ ಸೇರಿದೆ. ಮುಳಬಾಗಿಲಿನ ಸೋಮೇಶ್ವರ ಪಾಳ್ಯದಿಂದ 3 ಕಿ.ಮೀ. ದೂರದಲ್ಲಿರುವ ಈ ಊರು ಹಿಂದೆ ಆವನಿ ಹೋಬಳಿಗೆ ಸೇರಿತ್ತು. ವಾಲೀಸ್ ಮೆಡೀಸ್ ಎಂಬುವವನ ನೇತೃತ್ವದಲ್ಲಿ ಬಂದ ಮುಸ್ಲಿಂ ದರೋಡೆಕೋರರಿಂದ ಈ ಗ್ರಾಮವು ಹಾಳಾಯಿತೆಂದು ಹೇಳಲಾಗಿದೆ[1]. ಪ್ರಾಚೀನ ಕಾಲದಲ್ಲಿ ಕೋಲಾರ ಜಿಲ್ಲೆಯು 'ಮುಳವಾಗಿಲು ರಾಜ್ಯ'ದ ಒಂದು ಭಾಗವಾಗಿತ್ತು. ಮುಳವಾಗಿಲು ರಾಜ್ಯಕ್ಕೆ ಕೋಲಾರ, ಸೇಲಂ, ಧರ್ಮಪುರಿ, ಉತ್ತರ ಆರ್ಕಾಟ್ ಹಾಗೂ ದಕ್ಷಿಣ ಆರ್ಕಾಟ್ ಜಿಲ್ಲೆಗಳು ಸೇರಿದ್ದವು. ಮುಳವಾಗಿಲು, ನಿಗರಿಲಿ ಚೋಳಮಂಡಲದ ರಾಜಧಾನಿ ಆಗಿತ್ತು; ಆನಂತರ ಪೆನುಗೊಂಡೆ ಪ್ರಾಂತ್ಯಕ್ಕೆ ಸೇರಿತು. ಈ ಪ್ರದೇಶವನ್ನು ಎರಡನೇ ಕಂಪಣ, ಅವನ ಮಗ ಜೊಮ್ಮಣ, ಇಮ್ಮಡಿ ಬುಕ್ಕ, ವಿಜಯರಾಯ, ಎರಡನೇ ದೇವರಾಯ ಮುಂತಾದವರು ಆಳಿದ್ದಾರೆ; ಕೆಲಕಾಲ ನಾಗಣ್ಣ ದಂಡನಾಯಕರು ಆಳುತ್ತಿದ್ದರು[2]. ಸಂಗಮ ದೊರೆ ಎರಡನೇ ದೇವರಾಯನ ಕಾಲದಲ್ಲಿ (ಕ್ರಿ.ಶ.1425–46) ಕೆಲಕಾಲ ಈ ಪ್ರದೇಶವನ್ನಾಳುತ್ತಿದ್ದವನು–ಮಹಾಪ್ರಧಾನಿ ಲಕ್ಕಣದಂಡೇಶ[3]. ಸಂಗಮ ವಂಶದಲ್ಲಿ, ರಾಜರಾಗುವ ಮೊದಲು, ಯುವರಾಜರು ಮುಳಬಾಗಿಲಿನಲ್ಲಿಯೇ ಆಡಳಿತ ನಿರ್ವಹಿಸುತ್ತಿದ್ದು, ಮುಳವಾಗಿಲು ಒಂದು ರೀತಿಯಲ್ಲಿ ರಾಜರ ತರಬೇತಿ ಕೇಂದ್ರವಾಗಿತ್ತು ಎನಿಸುವಂತಿದೆ[4]. ಹೀಗಾಗಿ ಮುಳವಾಗಿಲು ರಾಜಕೀಯವಾಗಿ ಮುಖ್ಯ ಪ್ರದೇಶವಾಗಿತ್ತು.

ಕೋಲಾರ ಜಿಲ್ಲೆಯ ಶಾಸನಗಳನ್ನು ಗಮನಿಸಿದರೆ, ಮುಳವಾಗಿಲು ಪ್ರದೇಶವು ಪ್ರಾಚೀನ ಕಾಲದಿಂದಲೂ ದೇವಾಲಯಗಳ ದೃಷ್ಟಿಯಿಂದ ಗಮನಾರ್ಹವಾಗಿರುವುದು ಕಂಡುಬರುತ್ತದೆ. ಸು.40 ವರ್ಷ ಆವನಿ ಸ್ಥಾನವನ್ನಾಳುತ್ತಿದ್ದ ತ್ರಿಭುವನ ಕರ್ತಾರ ದೇವನು ಸು.50 ದೇವಾಲಯಗಳನ್ನು ಕಟ್ಟಿಸಿದನೆಂದು ಕ್ರಿ.ಶ. 931ರ ಶಾಸನದಲ್ಲಿದೆ[5]. ಅದೇ ರೀತಿ, ಮುಳವಾಗಿಲು ರಾಜ್ಯದಲ್ಲಿ 18 ದೇವಾಲಯಗಳಿದ್ದುದು ಶಾಸನದಿಂದ ತಿಳಿದುಬರುತ್ತದೆ[6]. ನಂದಿಯ ಭೋಗನಂದೀಶ್ವರ, ಆವನಿಯ ರಾಮೇಶ್ವರ, ಕೈವಾರದ ಅಮರನಾರಾಯಣ, ಮುಳವಾಗಿಲಿನ ಸೋಮೇಶ್ವರ ಮತ್ತು ಆಂಜನೇಯ, ದೇವರಗುಡಿಪಳ್ಳಿಯ ವೆಂಕಟರಮಣ, ಬೆಳ್ಳೂರಿನ ರಾಮನಾಥ ಮತ್ತು ಕಣ್ವೇಶ್ವರ, ಕುರುಡುಮಲೆಯ ಸೋಮೇಶ್ವರ ಮುಂತಾದ ದೇವಾಲಯಗಳು ಲಕ್ಕಣನು ದೇವಾಲಯ ಕಟ್ಟಿಸುವ ಮೊದಲೇ ಅಸ್ತಿತ್ವದಲ್ಲಿದ್ದವು; ಅವು ಇಂದಿಗೂ ಪ್ರಸಿದ್ಧಿಯಲ್ಲಿವೆ. ಇಂತಹ ಒಂದು ಪಾರಂಪರಿಕ ಧಾರ್ಮಿಕ ಪ್ರದೇಶದ ಭಾಗವಾಗಿತ್ತು–ಮುಳವಾಗಿಲು.

ಇಂತಹ ಒಂದು ಪ್ರದೇಶಕ್ಕೆ ಸೇರಿದ ವಿರೂಪಾಕ್ಷಿಯಲ್ಲಿ ಮಹಾಪ್ರಧಾನಿ ಲಕ್ಕಣ ದಂಡೇಶನು ಕಟ್ಟಿಸಿದ ಒಂದು ಗಮನಾರ್ಹ ದೇವಾಲಯವೇ – ಪ್ರಸನ್ನ ವಿರೂಪಾಕ್ಷ ದೇವಾಲಯ. ಇದನ್ನು ಲಕ್ಕಣನು ಸೋದರ ಮಾದಂಣನೊಂದಿಗೆ ಸಾಧಾರಣ ಸಂವತ್ಸರ, ಫಾಲ್ಗುಣ ಶು.10, ಅಂದರೆ, ಕ್ರಿ.ಶ.1431, ಫೆಬ್ರವರಿ 21ರಂದು ನಿರ್ಮಿಸಿದನೆಂದು, ಅಲ್ಲಿನ ಎರಡನೇ ಗೋಪುರದ ತಳಪಾಯದ ಕಲ್ಲಿನಲ್ಲಿರುವ ಶಾಸನ ಹೇಳಿದೆ[7]. ಇದೇ ವಿಷಯವು ಇಲ್ಲಿನ ತಾಮ್ರ ಶಾಸನದಲ್ಲೂ[8] ಇದೆ.

ಇವುಗಳಲ್ಲಿ ಕೆಲವು ವ್ಯತ್ಯಾಸಗಳೂ ಇವೆ. ಶಿಲಾಶಾಸನದಲ್ಲಿ 'ವಿಜಯರಾಯರ ಮಗ ದೇವರಾಯರ ಧರ್ಮದಿಂದ' ಎಂದಿದ್ದರೆ, ತಾಮ್ರಶಾಸನದಲ್ಲಿ 'ವಿಜಯರಾಯರ ಧರ್ಮದಿಂದ' ಎಂದಿದೆ. ಶಿಲಾಶಾಸನದಲ್ಲಿ ಮಾದಂಣಗಳು ಎಂದಿರುವುದು, ತಾಮ್ರಶಾಸನದಲ್ಲಿ ಮಾದಂಣ ದಂಣಾಯಕರು ಎಂದಿದೆ. ಶಿಲಾಶಾಸನದಲ್ಲಿ ದೇವಾಲಯದ ರಚನೆಯ ಬಗ್ಗೆ ಮಾತ್ರ ವಿವರವಿದ್ದರೆ, ತಾಮ್ರ ಶಾಸನದಲ್ಲಿ ಮುಂದುವರಿದು, ಪೂಜೆಗಾಗಿ ಆರು ಹಳ್ಳಿಗಳನ್ನು ದಾನ ಕೊಟ್ಟಿದ್ದನ್ನೂ ಉಲ್ಲೇಖಿಸಲಾಗಿದೆ. ಶಿಲಾಶಾಸನದ 'ಭಿಕ್ಷಾಮಠ'ವು ತಾಮ್ರ ಶಾಸನದಲ್ಲಿ ಭಿಕ್ಷಾಮಂಟಪ ಎಂದಾಗಿದೆ; ಕಾಲದ ಉಲ್ಲೇಖ ಮಾತ್ರ ಎರಡರಲ್ಲೂ ಒಂದೇ ಇದೆ.

ಎರಡೂ ಶಾಸನಗಳ ಪ್ರಕಾರ, ಇವರು ಪ್ರಸನ್ನ ವಿರೂಪಾಕ್ಷ ದೇವರಿಗೆ ದೇವಾಲಯ, ಪ್ರಾಕಾರ, ಗೋಪುರ, ಶಿಖರದ ಚಿನ್ನದ ಹೊದಿಕೆ, ಮನ್ಮಥ ಪುಷ್ಕರಿಣಿ, ಮಂಟಪಗಳು, ಭಿಕ್ಷಾಮಂಟಪ ಎಲ್ಲವನ್ನೂ ನಿರ್ಮಿಸಿದ್ದಾರೆ. ಇದೊಂದು ವಿಶಾಲವಾದ ದೇವಾಲಯವೆಂಬುದನ್ನು ಶಾಸನಗಳೇ ಸೂಚಿಸಿವೆ. ಕರ್ನಾಟಕದಲ್ಲಿ ಈ ಅವಧಿಯಲ್ಲಿ ಕಟ್ಟಲ್ಪಟ್ಟ ದೇವಾಲಯಗಳಲ್ಲಿ ಇದು ಅತಿ ದೊಡ್ಡ ದೇವಾಲಯವೆಂದು ಹೇಳಲಾಗಿದೆ[9]. ಪ್ರಧಾನ ದೇವಾಲಯದ ಹಿಂದೆ ಗಣೇಶ ಮತ್ತು ಕೇಶವನಗುಡಿಗಳೂ(ಇದನ್ನು ಜಾತ್ರೆ ಸಮಯದಲ್ಲಿ ತೆಗೆಯುತ್ತಾರೆ), ಎಡಭಾಗದಲ್ಲಿ ಪಾರ್ವತೀ ಗುಡಿಯೂ[10], ಸುತ್ತ ಪ್ರಾಕಾರವೂ ಇದೆ. ಪ್ರಾಕಾರದ ಹೊರಗೆ ಪಾರ್ವತೀ ದೇವಾಲಯಕ್ಕೆ ಸಮಾನಾಂತರವಾಗಿ ವಾಯವ್ಯದಲ್ಲಿ ದುರ್ಗಾ ದೇವಾಲಯವೂ, ಆಗ್ನೇಯದಲ್ಲಿ ಮನ್ಮಥ ಪುಷ್ಕರಿಣಿ ಮತ್ತು ಮಂಟಪವೂ ಇದೆ. ಇವುಗಳಲ್ಲಿ ಕೆಲವು ಕಾಲಾನಂತರದ ಸೇರ್ಪಡೆಗಳಲ್ಲದೆ, ಈ ದೇವಾಲಯದ ಮೇಲ್ಕಟ್ಟಡ, ಗರ್ಭಗೃಹ, ನವರಂಗದ ವಿತಾನ– ಇವು ಜೀರ್ಣೋದ್ಧಾರಗೊಂಡಿವೆ.

ಈ ವಿರೂಪಾಕ್ಷ ದೇವಾಲಯವು ಪೂರ್ವಾಭಿಮುಖವಾಗಿದೆ; ವಿಶಾಲವಾಗಿದ್ದರೂ ಸರಳ ರಚನೆಯನ್ನು ಹೊಂದಿದೆ. ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ (Greenish Stone) ಕಟ್ಟಲಾಗಿದೆ. ಇದು 'ದಾಕ್ಷಿಣಾತ್ಯ ಸಂಪ್ರದಾಯದ ಷಡ್ವರ್ಗ' ರೀತಿಯ ದೇವಾಲಯ. ಅಂದರೆ, ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬರುವಂತೆ, ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ತೂಪಿ–ಎಂಬ ಆರು ವರ್ಗಗಳನ್ನು ಊರ್ಧ್ವಮುಖ ಕ್ರಮದಲ್ಲಿ ಕಾಣಬಹುದಾಗಿದೆ[11]. ಈ ದೇವಾಲಯದ ಅಧಿಷ್ಠಾನವು 'ಮಂಚಕ' ಪ್ರಕಾರಕ್ಕೆ ಸೇರುತ್ತದೆ[12] (ಇಲ್ಲಿ ಪ್ರನಾಳವೂ ಇದೆ). ಮುಂದಿನ ಭಾಗವಾಗಿ ಸರಳ ಭಿತ್ತಿ ಮತ್ತು ಪ್ರಸ್ತರಗಳಿದ್ದು, ಇಲ್ಲಿಯವರೆಗಿನ ಭಾಗಗಳವರೆಗೆ ಮೂಲ ರಚನೆಯು ಉಳಿದು ಬಂದಿದೆ. ಇದರ ಮೇಲಿರುವ 'ಮೇಲ್ಕಟ್ಟಡ'ವು (Superstructure) ಜೀರ್ಣೋದ್ಧಾರಗೊಂಡಿದ್ದು, ಅದನ್ನು ಹಿಂದಿದ್ದಂತೆಯೇ ಪುನಃ ರಚಿಸಿರುವ ಸಾಧ್ಯತೆಗಳಿವೆ. ಷಡ್ವರ್ಗದ 5ನೇ ಭಾಗವಾಗಿರುವ ಶಿಖರವು ಚೌಕಾಕಾರವಾಗಿದ್ದು, 'ಬ್ರಹ್ಮಛಂದಶಿಖರ' (–ದ್ರಾವಿಡ ಶಿಖರ) ಎನಿಸಿದೆ. ಈಗ ಕಾಣುತ್ತಿರುವ ಶಾಲಾ ನಾಸಿಕೋಷ್ಠಗಳನ್ನು ಗಮನಿಸಿದರೆ, ಅದನ್ನು ಹಿಂದೆ ಇದ್ದಂತೆಯೇ ಕಟ್ಟಿರುವಂತೆ ತೋರುತ್ತದೆ. ಇದರಲ್ಲಿ ಶಾಲಾ–ಕೂಟಗಳ ಒಂದು ತಲ/ಹಾರವಿರುವುದರಿಂದ ಇದು 'ದ್ವಿತಲ' ದೇವಾಲಯವಾಗಿದೆ. ತಲಗಳ ಸಂಖ್ಯೆ, ಶಾಲಾ–ಕೂಟ–ನಾಸಿಗಳ ಸಂಖ್ಯೆ, ತಲ, ಗ್ರೀವ ಮತ್ತು ಶಿಖರದ ಆಕಾರ–ಇವೆಲ್ಲದರ ಆಧಾರದಿಂದ ಇದು ಮೂಲತಃ 'ದ್ವಿತಲ ಸ್ವಸ್ತಿಕ' ಪ್ರಕಾರದ ದೇವಾಲಯ ಆಗಿದ್ದಿರಬೇಕೆನಿಸುತ್ತದೆ[13].

ದೇವಾಲಯದ ಒಳಭಾಗದಿಂದ, ಅಂದರೆ ತಿರ್ಯಙ್ಮುಖ ಕ್ರಮದಲ್ಲಿ ಗಮನಿಸಿದರೆ, ಗರ್ಭಗೃಹ, ಮುಚ್ಚಿದ ಅಂತರಾಳ, ಅರ್ಧಮಂಟಪ, ನವರಂಗ, ಮುಖಮಂಟಪ, ಮತ್ತೊಂದು ಮಂಟಪ ಇವೆ. ಗರ್ಭಗೃಹದ ಒಳಭಾಗ ಜೀರ್ಣೋದ್ಧಾರವಾಗಿರುವುದು ಸ್ಪಷ್ಟವಾಗುತ್ತದೆ. ಗರ್ಭಗೃಹದಲ್ಲಿ ಎರಡು ಲಿಂಗಗಳಿವೆ. ಇವುಗಳಲ್ಲಿ ಮುಂದೆ ಇರುವುದು– ಚಿಕ್ಕದು. ಇದನ್ನು 'ಆತ್ಮಲಿಂಗ' ಎನ್ನುತ್ತಾರೆ. ಇದರ ಹಿಂದೆ ನಾಗರ ಹೆಡೆ ಇದೆ. ಇದರ ಮುಂದೆ ಮತ್ತು ಪಕ್ಕದಲ್ಲಿ ಬಸವಣ್ಣನ ಬಿಂಬಗಳಿವೆ. ಇಲ್ಲಿರುವ ಇನ್ನೊಂದು ಲಿಂಗವು ಇತ್ತೀಚೆಗೆ ಇಟ್ಟಿರುವುದು. ಇದು ಎರಡು ಅಡಿ ಎತ್ತರವಾಗಿದ್ದು, ಇದನ್ನು 'ಕಾಶಿಲಿಂಗ' ಎನ್ನುತ್ತಾರೆ. ಇಲ್ಲಿ ಗಣಪತಿ ಶಿಲ್ಪವೂ ಇದೆ. ಗರ್ಭಗೃಹದ ವಿತಾನದಲ್ಲಿ ಕಮಲದ ಅಲಂಕರಣವಿದೆ. ಇದಕ್ಕೆ ಕಾಲಾನಂತರದಲ್ಲಿ ವರ್ಣಲೇಪನವಾಗಿದೆ. ಗರ್ಭಗೃಹದ ಬಾಗಿಲು ಕೂಡಾ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಿಂದ ಎಡಕ್ಕೆ ಒಂದು ವಿಸ್ತರಣೆ ರಚಿತವಾಗಿದ್ದು, ಅಲ್ಲಿಯೂ ಅರೆಬಾಗಿಲಿದೆ. ಗರ್ಭಗೃಹದ ನಂತರ 'ಮುಚ್ಚಿದ ಅಂತರಾಳ'ವಿದೆ; ಇದರ ಒಳಗೋಡೆಯಲ್ಲಿ ಎಡಬಲಗಳಲ್ಲಿ ಅರೆದ್ವಾರಗಳಿವೆ (ಇವುಗಳನ್ನು ಆವನಿ ಮತ್ತು ಕುರುಡುಮಲೆಗೆ ದಾರಿ ಎಂದು

ಹೇಳಲಾಗಿದೆ; ಇಲ್ಲಿ ಗವಿ ಇದೆ ಎಂದೂ ಹೇಳುತ್ತಾರೆ). ಈ ಅಂತರಾಳದಲ್ಲಿಯೂ ವರ್ಣಲೇಪಿತ ಕಮಲ ವಿತಾನವಿದೆ; ಇದೂ ಕೂಡಾ ಜೀರ್ಣೋದ್ಧಾರಗೊಂಡಿದೆ. ಇದರ ದ್ವಾರದಲ್ಲಿ ಏಕಶಾಖೆ ಇದ್ದು, ಅದು ಪದ್ಮಗಳಿಂದ ಅಲಂಕೃತಗೊಂಡಿದೆ (–'ಪದ್ಮಶಾಖೆ'). ದ್ವಾರದ ಒಳಭಾಗದಲ್ಲಿ ಕೂಡಾ ಕಮಲಶಾಖೆ ಇದೆ. ಅಂತರಾಳದ ಮುಂದೆ ಅರ್ಧಮಂಟಪವಿದ್ದಿರಬೇಕು. ಈಗ ಎರಡು ಕಂಬಗಳ ಬೋದಿಗೆ ಮಾತ್ರ ಉಳಿದಿದೆ (ಜೀರ್ಣೋದ್ಧಾರ ಮಾಡುವಾಗ ಕಂಬವನ್ನು ತೆಗೆದಿರಬೇಕು).

ಇದರ ಮುಂದಿನ ರಂಗಮಂಟಪ/ನವರಂಗವು ಸ್ವಲ್ಪ ವಿಶಾಲವಾಗಿಯೇ ಇದೆ. ನವರಂಗದಲ್ಲಿ ಮಧ್ಯೆ ವೇದಿಕೆ ಇದ್ದಿರಬೇಕು. ಮತ್ತು ಮಧ್ಯೆ ವೃತ್ತಾಕಾರದ ಕೆತ್ತನೆ ಇದ್ದಿರಬೇಕು (ಈಗ ಅವು ಸ್ಪಷ್ಟವಾಗಿಲ್ಲ). ನಾಲ್ಕು ಕಂಬಗಳು ಸಾಮಾನ್ಯವಾಗಿ ವೇದಿಕೆಯ ಮೇಲಿರುತ್ತವೆ. ಇಲ್ಲಿ ಈಗಿರುವ ವೇದಿಕೆಯ ಸುತ್ತ ದೂರದಲ್ಲಿವೆ. ಅಂದರೆ, ವೇದಿಕೆಯು ಬಹುಶಃ ಮೊದಲಿಗೆ ಅಲ್ಲಿಯವರೆಗೂ ಇದ್ದಿರಬೇಕು; ಏಕೆಂದರೆ, ಕಂಬಗಳು ಮೊದಲಿದ್ದ ಸ್ಥಳದಲ್ಲೇ ಈಗಲೂ ಇರುವಂತಿದೆ. ನವರಂಗದಲ್ಲಿ ನಾಲ್ಕು ಪ್ರಧಾನ ಕಂಬಗಳಿವೆ. ಈ ಕಂಬಗಳು 'ಚಿತ್ರಖಂಡ' ಪ್ರಕಾರದ ಕಂಬಗಳಾಗಿವೆ. ಇಂತಹ ಸ್ತಂಭಗಳಲ್ಲಿ ಮಧ್ಯೆ ಚತುರಶ್ರಾಕಾರದ ಫಲಕಗಳೂ (–'ಚತುರಶ್ರ'), ವಿವಿಧ ಆಕಾರದ ಪಟ್ಟಿಕೆಗಳೂ (–'ಮಧ್ಯಪಟ್ಟ') ಇರುತ್ತವೆ; 'ಚತುರಶ್ರ'ಗಳ ಮೇಲೆ ವಿವಿಧ ಶಿಲ್ಪಗಳ ಕೆತ್ತನೆ ಇರುತ್ತದೆ. ಇಂತಹ ಸ್ತಂಭಗಳನ್ನು 'ಚಿತ್ರಖಂಡ' ಪ್ರಕಾರದ ಸ್ತಂಭಗಳೆಂದು 'ಮಯಮತ' ಗ್ರಂಥವು ಗುರುತಿಸಿದೆ[14]. ಇಲ್ಲಿನ ಕಂಬಗಳಲ್ಲಿ 'ಪೀಠ' ಭಾಗ ಈಗ ಇಲ್ಲ; 'ಪಾದ' ಭಾಗ ಅಲಂಕೃತಗೊಂಡಿದೆ. ಇದರ ಮೇಲೆ ಚತುರಶ್ರ ಮತ್ತು 16 ಮುಖದ 'ಮಧ್ಯಪಟ್ಟಿ'ಗಳಿದ್ದು (–'ಶ್ರೀವಜ್ರ' ಪ್ರಕಾರ) ಅವುಗಳ ಮಧ್ಯೆ ಪುಷ್ಪಪಟ್ಟಿ ಇದೆ. ಚತುರಶ್ರಗಳಲ್ಲಿ ಎಲ್ಲೆಡೆಯೂ ದೇವತಾ ಬಿಂಬಗಳಿವೆ. ಲಿಂಗ ಹಿಡಿದಿರುವ ಭಕ್ತ, ಲಕ್ಷ್ಮೀ, ಪಾರ್ವತೀ, ಶಿವನ ವಿವಿಧ ಭಂಗಿಗಳು, ಗಜಾಸುರ ಸಂಹಾರ, ವೀರಭದ್ರ, ಕಂಕಾಳಮೂರ್ತಿ, ಜಲಂಧರ, ಗಣಪತಿ, ಷಣ್ಮುಖ, ಚಂದ್ರಶೇಖರ, ವೃಷಭವಾಹನ ಮುಂತಾದ ಶಿಲ್ಪಗಳಿವೆ. ಕಂಬದ ಅಂತ್ಯದಲ್ಲಿ ಎರಡು ಮುಖಗಳಲ್ಲಿ ಪುಷ್ಪಬೋದಿಗೆಗಳಿವೆ. ಇನ್ನೆರಡು ಕಡೆಯಲ್ಲಿ 'ಮಧ್ಯಭದ್ರ'ದಲ್ಲಿ ಕಮಲದ ಅಲಂಕರಣವಿದೆ. ಸಾಮಾನ್ಯವಾಗಿರುವಂತೆ, ಈ ನವರಂಗದ ಭಿತ್ತಿಯಲ್ಲಿ 12 ಕಂಬಗಳಿಲ್ಲ, 4 ಕಂಬಗಳಷ್ಟೇ ಇದ್ದು, ಅವೂ ಸರಳರೂಪದ್ದಾಗಿವೆ. ಇವುಗಳನ್ನು 'ಮಿಶ್ರಕ' ಪ್ರಕಾರದ ಸ್ತಂಭಗಳೆಂದು ಗುರುತಿಸಬಹುದಾಗಿದೆ. ಇದರ 'ಫಲಕ' ಭಾಗವು ಸರಳವಾಗಿದ್ದು, ಅಂತ್ಯದಲ್ಲಿ ಸೀಳುಬೋದಿಗೆ ಇದೆ. ಒಂದು ಸಾಲಿನಲ್ಲಿ ಮಾತ್ರ 'ತುಲಾ'(Beams) ಉಳಿದಿದ್ದು, ಉಳಿದೆಡೆಯ ಸಾಲಿನ 'ತುಲಾ' ಕಿತ್ತಿದೆ. 'ವಿತಾನ'ವೂ ಜೀರ್ಣೋದ್ಧಾರಗೊಂಡಿದೆ. ನವರಂಗದ ದ್ವಾರವೂ ಕೂಡಾ ಹೆಚ್ಚು ಅಗಲವಾಗಿಲ್ಲ; ಸರಳವಾಗಿದ್ದು, ಪದ್ಮಶಾಖೆ ಮಾತ್ರ ಇದೆ; ಲಲಾಟಬಿಂಬವೂ ಇಲ್ಲ. ನವರಂಗಕ್ಕೆ ಹೋಗಲು ಮೆಟ್ಟಿಲುಗಳಿದ್ದು, ಅಕ್ಕಪಕ್ಕ 'ಹಸ್ತಿಹಸ್ತ'ವಿದೆ, ಹಸ್ತಿಹಸ್ತದಲ್ಲಿ ಕಮಲದ ಅಲಂಕರಣವಿದೆ.

ನವರಂಗದಲ್ಲಿ ಬಲಭಾಗದಲ್ಲಿ ಒಂದು ಕಟ್ಟೆ ಇದ್ದು, ಅಲ್ಲಿ ಚಂಡಿಕೇಶ್ವರ, ವಿಷ್ಣುರೂಪ ಹಾಗೂ ರಾಮನ ಬಿಂಬಗಳಿವೆ; ಇವು ನಂತರದ ಕಾಲದ್ದು. ಅಲ್ಲಿಯೇ ವೀರಭದ್ರನ ಒಂದು ಬಿಂಬವಿದ್ದು, ಅದು ಮಾತ್ರ ಈ ದೇವಾಲಯ ರಚನೆಯ ಕಾಲಕ್ಕೇ ಸೇರುತ್ತದೆ. ನವರಂಗದಲ್ಲಿರುವ ಈ ವೀರಭದ್ರನ ಶಿಲ್ಪವೂ ಗಮನಾರ್ಹವಾಗಿದೆ. ಈ ಶಿಲ್ಪವು ನೀಳಕಾಯದ ಸೌಮ್ಯಮೂರ್ತಿಯಂತಿದೆ. ವೀರಭದ್ರನು 'ಪದ್ಮಪೀಠ'ದ ಮೇಲೆ ಸಮಭಂಗಿಯಲ್ಲಿ ನಿಂತಿದ್ದಾನೆ. ದೇವನ ಕೈಗಳಲ್ಲಿ (ಮುಂಬಲಗೈನಿಂದ ಆರಂಭಿಸಿ) ಕ್ರಮವಾಗಿ ಖಡ್ಗ, ಬಾಣ, ಧನಸ್ಸು, ಗುರಾಣಿ–ಇವೆ. ಆಯುಧಗಳನ್ನು ಅಗಲವಾಗಿ ಮತ್ತು ಉದ್ದವಾಗಿ ಬಿಡಿಸಿದೆ. ಜಟಾಮಕುಟಧಾರಿಯಾದ ದೇವನಿಗೆ ಸರಳವಾದ ಪ್ರಭಾವಳಿ ಇದೆ. ಅಗಲವಾದ ಓಲೆ, ಕೊರಳಲ್ಲಿ 3 ಅಡ್ಡಿಕೆ, ಯಜ್ಞೋಪವೀತ, ಉದರಬಂಧ–ಈ ಅಲಂಕರಣಗಳೂ ಇವೆ. ಬಿಡಿಬಿಡಿಯಾದ ಮಣಿಗಳಿಂದ ಕೂಡಿದ ಮೇಖಲೆ, ಮತ್ತು ಮಂಡಿಯವರೆಗೆ ರುಂಡಮಾಲೆ ಇದೆ. ಕಟಿಯ ಬಳಿ ವಸ್ತ್ರವಿದ್ದು, ಅದು ಎರಡು ಕಡೆ ಇಳಿಬಿದ್ದಿದೆ. ಕೈಗಳಲ್ಲಿ ಬಾಹುಪೂರ, ತೋಳ್ಬಂದಿ ಮತ್ತು ಕಡಗಗಳಿವೆ. ಕಾಲುಗಳಲ್ಲಿ ತೋರಗೆಜ್ಜೆ, ಅಂಗುಲೀಯಕಗಳಿವೆ. ದೇವನ ಬಲಭಾಗದಲ್ಲಿ ಕುರಿತಲೆಯ ದಕ್ಷ ಇದ್ದಾನೆ.

ನವರಂಗದಿಂದ ಮುಂದೆ ಮುಖಮಂಟಪವಿದೆ ಮತ್ತು ಅದರಿಂದ ಮುಂದೆ ಮತ್ತೊಂದು ವಿಶಾಲಮಂಟಪವಿದೆ. ಇದರಲ್ಲಿರುವ ಕಂಬಗಳು ನಂತರದ ಕಾಲಕ್ಕೆ ಸೇರುತ್ತವೆ. ಇಲ್ಲಿ ಭೈರವ ಮತ್ತು ನಂದಿಯ ಶಿಲ್ಪಗಳಿವೆ. ಇಲ್ಲಿ ಯಾಗಶಾಲೆ,

ನವಗ್ರಹ ಶಾಲೆಗಳಿರುವುದಲ್ಲದೆ, ಎದುರಿಗೆ ಬಲಿಪೀಠ, ಧ್ವಜಸ್ತಂಭಗಳಿವೆ. ದೇವಾಲಯದ ಹಿಂಭಾಗದಲ್ಲಿ/ಪಶ್ಚಿಮದಲ್ಲಿ ಗಣಪ ಹಾಗೂ ಗರ್ಭಗೃಹದ ಹಿಂಭಿತ್ತಿಗೆ ಸೇರಿದಂತೆ ಕೇಶವನ ಸಣ್ಣ ಗುಡಿಯೂ ಇದೆ; ಇವು ನಂತರದ ಕಾಲದವು. ಮೂಲ ದೇವಾಲಯದ ಎಡಭಾಗದಲ್ಲಿ ಪಾರ್ವತಿಯ ದೇವಾಲಯವಿದೆ; ಇದನ್ನು ಶಾಸನದಲ್ಲಿ 'ವಿರುಪಮ್ಮ' ಎಂದೂ ಕರೆದಿದೆ. ಈ ದೇವಿಯ ಮುಂದೆ ಸಿಂಹಶಿಲ್ಪವಿದೆ. ಶಿವ ದೇವಾಲಯದ ಮುಂದೆ ನಂದಿ ಇರುವಂತೆ, ಅಪರೂಪಕ್ಕೆ ಇಲ್ಲಿ ದೇವಿಯ ಮುಂದೆ ಸಿಂಹಶಿಲ್ಪವಿದೆ. ಇದೂ ಕೂಡಾ ಗರ್ಭಗೃಹ, ಅಂತರಾಳ, ನವರಂಗಗಳನ್ನು ಹೊಂದಿದೆ.

ಇವುಗಳನ್ನು ಸುತ್ತುವರಿದಂತೆ ದೇವತಾ ಮಂಟಪ(–'ದೇವಕುಲಿಕಾ')ಗಳಿರುವ ಪ್ರಾಕಾರವಿದ್ದು(–'ಅಂತರ್ಮಂಡಲ') ಇದಕ್ಕೆ ಮಹಾದ್ವಾರ, ಗೋಪುರವೂ(–'ದ್ವಾರಶೋಭಾ') ಇದೆ. ಇದರ 'ಪ್ರತೋಲಿ'ಯು ಸರಳವಾಗಿದೆ; ಸಾಮಾನ್ಯವಾಗಿರುವ ಗಂಗಾ ಯಮುನಾ ಶಿಲ್ಪಗಳೂ ಇಲ್ಲಿಲ್ಲ. ಪ್ರತೋಲಿಯ ಪ್ರವೇಶದಲ್ಲಿ 'ಹಸ್ತಿಹಸ್ತ'ಯುಕ್ತ ಸೋಪಾನವಿದೆ. ಇದರ ಮೇಲಿರುವ ಗೋಪುರದಲ್ಲಿ 3 ತಲಗಳಿವೆ. ಎತ್ತರವಾಗಿರುವ 'ತಲ'ಗಳಲ್ಲಿ ಕೂಟ, ಶಾಲಾ, ನಾಸಿಕೋಷ್ಠಗಳಿವೆ; ಹಾಗೂ ಬಸವನ ಶಿಲ್ಪವಿದೆ. ಅಂತ್ಯದಲ್ಲಿ ಶಾಲಾಶಿಖರವಿದೆ. ಗೋಪುರದಲ್ಲಿ ದ್ವಾರಗಳ ಅಕ್ಕಪಕ್ಕ ಮಾತ್ರ ದ್ವಾರಪಾಲಕ ಶಿಲ್ಪಗಳಿವೆ. ಇನ್ನೆಲ್ಲೂ ಶಿಲ್ಪಾಲಂಕರಣವಿಲ್ಲ.

ಈ ಮೊದಲ ಪ್ರಾಕಾರದ ಹೊರಭಾಗದಲ್ಲಿ, ದೇವಾಲಯದ ಬಲಭಾಗಕ್ಕೆ ಅಂದರೆ, ಆಗ್ನೇಯ ದಿಕ್ಕಿನಲ್ಲಿ ಮನ್ಮಥ ಪುಷ್ಕರಿಣಿ(ಮನ್ಮುಖ ಪುಷ್ಕರಿಣಿ?) ಇದೆ, ಇದರ ಪಕ್ಕ ಹಾಗೂ ನೈಋತ್ಯ ದಿಕ್ಕಿನ ಬಳಿ(ಇದು ನಂತರದ ಕಾಲದ್ದು) ಮತ್ತು ಈಶಾನ್ಯ ದಿಕ್ಕಿನಲ್ಲಿ ಮಂಟಪಗಳಿದ್ದರೂ, ಆ ಮಂಟಪಗಳ ನಿರ್ಮಾಣದ ಉದ್ದೇಶ ಸ್ಪಷ್ಟವಿಲ್ಲ; ಇವುಗಳಲ್ಲೊಂದು, ಶಾಸನವು ಹೇಳುವ ಭಿಕ್ಷಾಮಂಟಪವಾಗಿರಬೇಕು. ದೇವಾಲಯದ ವಾಯುವ್ಯ ದಿಕ್ಕಿನಲ್ಲಿ ಒಂದು ದುರ್ಗಾ ದೇವಾಲಯವಿದೆ. ಗರ್ಭಗೃಹದಲ್ಲಿ, ಸಿಂಹದ ಮೇಲೆ ಕುಳಿತಿರುವ ದುರ್ಗೆಯ 5 ಅಡಿ ಎತ್ತರದ ಬಿಂಬವಿದೆ. ಕೈಗಳಲ್ಲಿ ಖಡ್ಗ, ಚಕ್ರ, ಶಂಖ ಹಾಗೂ ತ್ರಿಶೂಲಗಳಿವೆ. ಗರ್ಭಗೃಹದಿಂದ ಮುಂದೆ ಅಂತರಾಳ, ರಂಗಮಂಟಪ / ನವರಂಗಗಳಿದ್ದು, ದೇವಾಲಯವು ದಕ್ಷಿಣ ದಿಕ್ಕಿನೆಡೆಗೆ ಮುಖಮಾಡಿದೆ; ಅಂದರೆ ಪ್ರಧಾನ ದೇವಾಲಯದ ಕಡೆಯಿಂದ ಇದಕ್ಕೆ 'ಪ್ರವೇಶ'ವಿದೆ. ಇವೆಲ್ಲವುಗಳ ಸುತ್ತ ಅಪರೂಪವಾಗಿ ಎರಡನೇ ಪ್ರಾಕಾರವಿದೆ(–'ಅಂತರ್ನಿಹಾರ'); ಇದರ 'ಮಹಾದ್ವಾರ'ವೂ ಸ್ವಲ್ಪ ಹಾಳಾಗಿದೆ. ಸ್ವಲ್ಪ ದೂರದಲ್ಲಿ ಮತ್ತೊಂದು ಮಹಾದ್ವಾರ–ಗೋಪುರವಿದ್ದು(–'ದ್ವಾರಪ್ರಾಸಾದ') ಇಲ್ಲೂ ಪ್ರಾಕಾರ ಕಟ್ಟುವ ಯೋಚನೆ ಇದ್ದಿರಬೇಕು.

ಈ ಎಲ್ಲ ರಚನೆಯನ್ನು ಗಮನಿಸಿದರೆ, ಹಂಪೆಯ ವಿರೂಪಾಕ್ಷ ದೇವಾಲಯ ರಚನೆಯನ್ನು ಇದು ಕೆಲಮಟ್ಟಿಗೆ ಹೋಲುತ್ತಿರುವುದು ಕಂಡುಬರುತ್ತದೆ. ಈ ದೇವಾಲಯವನ್ನು ಕಟ್ಟುವ ಹೊತ್ತಿಗೆ ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ಅರ್ಧಮಂಟಪ ಮತ್ತು ರಂಗಮಂಟಪ/ನವರಂಗಗಳ ರಚನೆ ಇತ್ತು (ಅದರ ಮುಂದಿನ ಮಹಾಮಂಟಪ–ಕೃಷ್ಣದೇವರಾಯನ ಕಾಲದ್ದು); ಅಲ್ಲಿಯೂ ಪ್ರಾಕಾರ–ಗೋಪುರವಿತ್ತು; ಎರಡು ದೇವೀ ದೇವಾಲಯಗಳಿದ್ದವು; ಮನ್ಮಥ (ಮನ್ಮುಖ) ಪುಷ್ಕರಿಣಿ ಇತ್ತು. ಇಲ್ಲೂ ಅದೇ ರೀತಿ ಇರುವುದನ್ನು ಅವಲೋಕಿಸಿದರೆ, ಬಹುಶಃ ಲಕ್ಕಣನಿಗೆ ಅಲ್ಲಿನಂತೇ ಕಟ್ಟಬೇಕೆಂಬ ಆಶಯ ಇದ್ದಂತೆ ತೋರುತ್ತದೆ. ಜೊತೆಗೆ, ಇಲ್ಲಿರುವ 'ಚಿತ್ರಖಂಡ' ಸ್ತಂಭಗಳು, ಎರಡು ದೇವೀ ದೇವಾಲಯಗಳು, ವಿವಿಧ ಮಂಟಪಗಳು, ಪ್ರಾಕಾರ–ಗೋಪುರಗಳು, ಗ್ರಾನೈಟ್ ಬಳಕೆ– ಇವು ವಿಜಯನಗರ ಕಾಲದ ಲಕ್ಷಣಗಳನ್ನೂ ಸೂಚಿಸುತ್ತಿವೆ. ಆದರೆ ಈ ಕಾಲದ ಹೊತ್ತಿಗೆ ಇತರ ಸುಂದರ ದೇವಾಲಯಗಳಿದ್ದರೂ, ಇಲ್ಲಿ ಸರಳ ರಚನೆಗೆ ಹೆಚ್ಚು ಪ್ರಾಮುಖ್ಯತೆ ನೀಡಿದೆ.

ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಸಾಹಿತ್ಯಿಕ ಉಲ್ಲೇಖಗಳು ನನ್ನ ಗಮನಕ್ಕೆ ಬಂದಿಲ್ಲ. ಈ ದೇವಾಲಯ ನಿರ್ಮಾತೃವಾದ ಲಕ್ಕಣ ದಂಡೇಶನೇ 'ಶಿವತತ್ತ್ವ ಚಿಂತಾಮಣಿ' ಎಂಬ ಕೃತಿಯನ್ನು ರಚಿಸಿದ್ದಾನೆ; ಇದರ ರಚನಾ ಕಾಲವು ಕ್ರಿ.ಶ.1450 ಎಂದು ನಿರ್ಧರಿಸಲಾಗಿದೆ[15]. ಇದಕ್ಕೆ ಮೊದಲೇ ಈ ದೇವಾಲಯ ನಿರ್ಮಾಣವಾಗಿದ್ದರೂ, ಈ ಬಗ್ಗೆ ಅವನ ಗ್ರಂಥದಲ್ಲಿ ಉಲ್ಲೇಖವಿಲ್ಲ. ಈ ದೇವಾಲಯದ ಸ್ಥಳಪುರಾಣವನ್ನು ಗಮನಿಸಿದರೆ, ಎರಡು ಉಲ್ಲೇಖಗಳು ದೊರೆಯುತ್ತವೆ. ಈ ಸ್ಥಳವು, ಅತ್ರಿಮುನಿಗಳು ವಾಸಮಾಡಿದ ಸ್ಥಳವೆಂಬ ನಂಬಿಕೆ ಇದೆ. ಅವರು ಪೂಜಿಸುತ್ತಿದ್ದ ಇಲ್ಲಿನ ಉದ್ಭವಲಿಂಗವನ್ನು

(–'ಆತ್ಮಲಿಂಗ'?) 'ಅತ್ರಿವಿರೂಪಾಕ್ಷ' ಎಂದೂ ಕರೆಯುತ್ತಾರೆ (ಅಲ್ಲದೆ, ಈ ದೇವಾಲಯದ ಬಳಿ ಇರುವ ದುರ್ಗಾದೇವಿಗೆ ಆಯುಧಗಳನ್ನು ತಂದುಕೊಟ್ಟವನು ಬೇತಾಳನೆಂಬ ಉಲ್ಲೇಖವೂ ದೊರೆಯುತ್ತದೆ)[17]. 'ಅರ್ಚನಾ ನವನೀತ'ವೆಂಬ ಗ್ರಂಥದ ಪ್ರಕಾರ ದೇವಾಲಯಗಳಲ್ಲಿ ನಾಲ್ಕು ವಿಧ: ತಾನಾಗೇ ಉದ್ಭವಿಸಿದ ಸ್ವಯಂವ್ಯಕ್ತ ಮೂರ್ತಿಗಳಿಗಾಗಿ ಕಟ್ಟಿದ್ದು–ಸ್ವಯಂವ್ಯಕ್ತ; ದೇವತೆಗಳಿಂದ ಪ್ರತಿಷ್ಠಿತವಾದದ್ದು–ದೈವತ; ಋಷಿಗಳಿಂದ ನಿರ್ಮಿತವಾದುದು ಆರ್ಷ; ಮನುಷ್ಯ ನಿರ್ಮಿತವಾದುದು–ಮಾನುಷ[18]. ಈ ದೇವಾಲಯದಲ್ಲಿ, ಲಿಂಗವು ಉದ್ಭವವಾದುದೆಂದೂ, ಅದು ಋಷಿ–ಪೂಜಿತವೆಂದೂ ಹೇಳಿರುವುದರಿಂದ ಇದನ್ನು 'ಸ್ವಯಂವ್ಯಕ್ತ ಲಿಂಗ'ವೆಂದು ಗುರುತಿಸಬಹುದಾಗಿದೆ. ಹೀಗೆ ತಮ್ಮ ದೇವರ ಬಗ್ಗೆ ವಿಶೇಷವಾಗಿ ಹೇಳುವುದರ ಮೂಲಕ ದೇವಾಲಯದ ಪಾವಿತ್ರ್ಯತೆಯನ್ನು ಎತ್ತಿಹಿಡಿಯುವುದು ಇದರ ಉದ್ದೇಶವಾಗಿದೆ.

ಈ ದೇವಾಲಯಕ್ಕೆ ಬಂದ ದಾನಗಳನ್ನು ಶಾಸನಗಳು ದಾಖಲಿಸಿವೆ. ಈ ದೇವಾಲಯದ ನಿರ್ಮಾಣವನ್ನು ಹೇಳುವ ಶಿಲಾಶಾಸನದಲ್ಲಿ, ಆ ದೇವಾಲಯಕ್ಕೆ ಅಂಗ–ರಂಗಭೋಗ ವೈಭವಗಳಿಗಾಗಿ ಅಗ್ರಹಾರಗಳನ್ನು ದಾನ ನೀಡಿದ ವಿಷಯ ಸೂಕ್ಷ್ಮವಾಗಿದೆ. ಅದೇ, ಈ ಸಂಬಂಧದ ತಾಮ್ರ ಶಾಸನದಲ್ಲಿ, ಇದರೊಂದಿಗೆ, ಕೊಟ್ಟ ದಾನದ ಊರುಗಳನ್ನೂ ಹೆಸರಿಸಿದೆ. ಮುಳುವಾಯಿ ಸೀಮೆಗೆ ಸಲ್ಲುವ ವಿರೂಪಾಕ್ಷಪುರ, ಗುಟ್ಟೆಹಳ್ಳಿ, ಸೂರಾದೇವಿಹಳ್ಳಿ, ಮಹಾದೇವನಹಳ್ಳಿ, ಕುಮುದೇವನಹಳ್ಳಿ, ಕುಂಚಿಬಂಡೆತೆರವು ಹೀಗೆ ಆರು ಹಳ್ಳಿಗಳನ್ನು ಈ ವಿರೂಪಾಕ್ಷ ದೇವರಿಗೆ ದಾನ ನೀಡಲಾಗಿದೆ. ಇವುಗಳನ್ನು ಅಗ್ರಹಾರ ಮಾಡಿ ನೀಡಿರಬಹುದೇ ಎಂಬ ಅನುಮಾನವಿದೆ. ಈ ನಂತರ ಕ್ರಿ.ಶ.1527ರಲ್ಲಿ (ಕೃಷ್ಣರಾಯನ ಕಾಲ) ಉತ್ಥಾನದ್ವಾದಶಿಯಂದು, ರಾಯದುರ್ಗದ ತಿಪ್ಪರಸರ ಮಗ ಭೋಗರಸರು, ಮುಳುವಾಯಿ ಚಾವಡಿಗೆ ಸಲುವ ಕುಂದಾಣಿ ಸೀಮೆಯಲ್ಲಿರುವ ಮುಕುಂದ ಸಾಗರದ ತಿಪ್ಪಸಮುದ್ರವೆಂದು ಪ್ರತಿನಾಮವಾದ ಕಳವೆಕಲ್ಲು ಗ್ರಾಮವನ್ನು ದಾನ ನೀಡುತ್ತಾರೆ[19]. ಅದೇ, ಅಚ್ಯುತರಾಯನ ಕಾಲದಲ್ಲಿ, ಹಿಂದೆ ಈ ದೇವಾಲಯಕ್ಕೆ ನೀಡಿದ್ದ ವಿರೂಪಾಕ್ಷಪುರವನ್ನು ಲೇಪಾಕ್ಷಿಯ ವೀರೇಶ್ವರನಿಗೆ ದಾನ ನೀಡಲಾಯಿತು[20]. ಮುಂದೆ, ಕ್ರಿ.ಶ.1547ರಲ್ಲಿ, ಸದಾಶಿವರಾಯನ ನಿರೂಪದಂತೆ, ಮುಳುವಾಯಿ ರಾಜ್ಯದ 18 ದೇವಾಲಯಗಳಿಗೆ ದಾನ ನೀಡಿರುವುದರಿಂದ, ಅದರಲ್ಲಿ ಈ ದೇವಾಲಯಕ್ಕೂ ದಾನ ಬಂದಿರುವುದಾಗಿ ತಿಳಿಯಬಹುದು[21]. ಕ್ರಿ.ಶ.16ನೇ ಶತಮಾನದ ಉತ್ತರಾರ್ಧದಿಂದ ಈ ದೇವಾಲಯಕ್ಕೆ ಹೆಚ್ಚಿನ ದಾನ ಬಂದಿಲ್ಲ. ದೇವಾಲಯದ ಬಳಿ ತೆಲುಗು, ತಮಿಳು ಶಾಸನಗಳಿದ್ದು[22], ಅದರಲ್ಲಿ ಹೆಚ್ಚಿನ ವಿವರಗಳಿರಬಹುದು. ಇಲ್ಲಿ ನೆಲದ ಮೇಲೆ ಭಕ್ತರ ರೇಖಾಚಿತ್ರಗಳೂ ಇವೆ.

ಈ ದೇವಾಲಯದಲ್ಲಿ ನಡೆಯುತ್ತಿದ್ದ ಪೂಜಾ ವಿಧಿಗಳೆಂದರೆ, ನಿತ್ಯಪೂಜಾ ವಿಧಿಗಳಾದ ಎರಡು ನಂದಾದೀಪ, ಅಂಗಭೋಗ, ಪಡಿತರ ದೀಪಾರಾಧನೆ, ಯಿಬ್ಬಳ್ಳ ಅಕ್ಕಿ ನೈವೇದ್ಯ, ರಂಗಭೋಗ ಮುಂತಾದವು. ಅಲ್ಲದೆ, ದೇವಾಲಯ ನಿರ್ಮಾಣದ ಶಾಸನದಲ್ಲಿ, ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ರಥೋತ್ಸವಕ್ಕೆಂದೂ ದಾನ ನೀಡಲಾಗಿದೆ. ದೇವಾಲಯ ಪ್ರತಿಷ್ಠಾಪನೆಯಾದ ನಂತರ, 15 ದಿನ ನಿತ್ಯವೂ ಉತ್ಸವ (–'ನಿತ್ಯೋತ್ಸವ') ನಡೆಸಬೇಕಲ್ಲದೆ, ನಂತರ 15 ದಿನಗಳಿಗೊಮ್ಮೆ ಪಕ್ಷೋತ್ಸವವನ್ನೂ, ನಂತರ ತಿಂಗಳಿಗೊಮ್ಮೆ ಮಾಸೋತ್ಸವವನ್ನೂ ನಡೆಸಿ, ವರುಷಾಂತ್ಯದಲ್ಲಿ ರಥೋತ್ಸವವನ್ನು ನಡೆಸಬೇಕು (ಆನಂತರ ಪ್ರತೀ ವರುಷಕ್ಕೊಮ್ಮೆ ರಥೋತ್ಸವ ನಡೆಸಬೇಕು.) ಈ ದೇವಾಲಯದಲ್ಲಿ ಈ ಎಲ್ಲಾ ಉತ್ಸವಗಳನ್ನೂ ನಡೆಸಿದರೆಂದು ಹೇಳಬಹುದು. ಉತ್ಥಾನ ದ್ವಾದಶಿಯಂದು ದಾನ ನೀಡಿರುವುದರಿಂದ ಆ ಆಚರಣೆಯೂ ಇಲ್ಲಿದ್ದಿರಬಹುದು. ಈಗಲೂ ಈ ದೇವಾಲಯದಲ್ಲಿ ಕಾರ್ತಿಕಮಾಸದಲ್ಲಿ ದೀಪಾರಾಧನೆಯೂ, ರಥಸಪ್ತಮಿಯಂದು ರಥೋತ್ಸವವೂ ನಡೆಯುವುದಾಗಿ ತಿಳಿದುಬರುತ್ತದೆ[23]. ಶಾಸನದಲ್ಲಿ ಭಿಕ್ಷಾಮಠ/ಭಿಕ್ಷಾಮಂಟಪ ಎಂಬ ಉಲ್ಲೇಖವಿದೆ. ಮೊದಲೇ ಹೇಳಿದಂತೆ, ದೇವಾಲಯದ ಎರಡನೇ ಪ್ರಾಕಾರದಲ್ಲಿರುವ ಮಂಟಪಗಳಲ್ಲಿ ಒಂದು ಭಿಕ್ಷಾಮಂಟಪವಾಗಿರಬೇಕು. ಗುರುಗಳು ಅಥವಾ ಯತಿಗಳ ಭೋಜನಕ್ಕೆಂದು ಗೊತ್ತುಮಾಡಿದ ಸ್ಥಳವೇ ಭಿಕ್ಷಾಮಂಟಪ[24]. ಯತಿಗಳು ಈ ಮಂಟಪದಲ್ಲಿ ಭಿಕ್ಷೆ ಸ್ವೀಕರಿಸುತ್ತಿದ್ದುದನ್ನು ಈ ರಚನೆ ಸೂಚಿಸುತ್ತದೆ; ಈ ದೇವಾಲಯದಲ್ಲಿ ಮಠವೂ, ಪಾಕಶಾಲೆಯೂ ಇದ್ದಿರಬಹುದು.

ವಿರೂಪಾಕ್ಷ ಹೆಸರಿನ ಇತರ ದೇವಾಲಯಗಳ ಬಗ್ಗೆಯೂ ಇಲ್ಲಿ ಗಮನಹರಿಸಬಹುದು: 'ವಿರೂಪಾಕ್ಷ' ಎಂಬ ಶಿವನ ಹೆಸರು ಪುರಾಣ ಪ್ರಸಿದ್ಧವಾದುದು. ಮೂರು ಕಣ್ಣುಗಳಿರುವುದರಿಂದ ಶಿವನು 'ವಿರೂಪಾಕ್ಷ'ನೆನಿಸಿದ್ದಾನೆ. ಆ ಮೂರು

ಕಣ್ಣುಗಳು ಸೂರ್ಯ, ಚಂದ್ರ ಮತ್ತು ಅಗ್ನಿಯನ್ನು ಸಂಕೇತಿಸುತ್ತವೆ[24A]. ದೇವಾಲಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಈ ಮೊದಲು ಇಟಗಿ[25], ಹೇಮಾವತಿ(ಶಿರಾ.ತಾ)[26], ಕೊಂಡಜ್ಜಿಗಳಲ್ಲಿ[27] ವಿರೂಪಾಕ್ಷ ದೇವಾಲಯಗಳಿದ್ದವು. ಬಾದಾಮಿಯ ದಕ್ಷಿಣಗುಡ್ಡದ ಕೆಳಗಿರುವ ಅಗಸ್ತ್ಯತೀರ್ಥದ ಪಶ್ಚಿಮ ದಂಡೆಯ ಮೇಲೆ ವಿರೂಪಾಕ್ಷ ದೇವಾಲಯವಿದೆ[28]. ಹಾಸನ[29], ಹೊಸಂಗಡಿ[31](ಕುಂದಾಪುರ ತಾ.) ದೊಡ್ಡಗದ್ದವಳ್ಳಿಗಳಲ್ಲೂ ವಿರೂಪಾಕ್ಷ ದೇವಾಲಯಗಳಿದ್ದುದು ತಿಳಿದುಬರುತ್ತದೆ. ಕೆಲವು ದೇವಾಲಯಗಳ ಕಾಲ ಸ್ಪಷ್ಟವಿಲ್ಲ. ಕ್ರಿ.ಶ.12ನೇ ಶತಮಾನದ ಹೊತ್ತಿಗೆ ತುಂಗಭದ್ರಾನದಿಯ ಇಕ್ಕೆಲಗಳಲ್ಲಿ ಈ ಹೆಸರಿನ ಅನೇಕ ದೇವಾಲಯಗಳು ರಚಿತವಾಗಿದ್ದವು[32]. ಹಂಪೆಯ ಪ್ರಸನ್ನ ವಿರೂಪಾಕ್ಷ ದೇವಾಲಯ[33] (Underground Temple) ಹಾಗೂ ಬುಕ್ಕಾಂಬುದಿಯ ವಿರೂಪಾಕ್ಷ ದೇವಾಲಯಗಳು[34] ಬುಕ್ಕನ ಕಾಲದ ನಿರ್ಮಾಣಗಳಾಗಿವೆ[34](ಬುಕ್ಕಾಂಬುದಿಯಲ್ಲಿ ಹಂಪೆಯ ಜಾತ್ರೆಯ ಸಮಯದಲ್ಲೇ ಜಾತ್ರೆಯಾಗುತ್ತದೆ). ಮಧುಗಿರಿ ತಾಲೂಕಿನ ಹಂಪಸಂದ್ರದ ಶಾಸನದಲ್ಲಿ 'ಹಂಪೆವಿರೂಪಾಕ್ಷನಾಲಯ' ಎಂದಿದೆ[35]. ಕೆ.ಆರ್.ನಗರ ತಾಲೂಕಿನ ಹಂಪಾಪುರದಲ್ಲಿ ವಿರೂಪಾಕ್ಷ ಮತ್ತು ಹಂಪಾಪುರದಮ್ಮನ ದೇವಾಲಯಗಳಿದ್ದು, ಇವು ವಿಜಯನಗರ ಕಾಲದ ದೇವಾಲಯಗಳೆಂದು ಹೇಳಲಾಗಿದೆ[36]. ಈ ಕೆಲವು ದೇವಾಲಯಗಳು ಹಂಪೆಯ ವಿರೂಪಾಕ್ಷನನ್ನೇ ನೆನಪಿಸುತ್ತವೆ[37]. ಹಂಪೆ ವಿರೂಪಾಕ್ಷನ ಪ್ರಸಿದ್ಧಿ ಪಾವಿತ್ರ್ಯಗಳನ್ನು ಕಂಡು ಇಲ್ಲಿನ ದೇವರಿಗೂ ಅದೇ ಹೆಸರನ್ನಿಟ್ಟಿರುವುದು ಇಲ್ಲಿ ವೇದ್ಯವಾಗಿದೆ.

ಈ ಸಂಬಂಧದಲ್ಲಿ ಒಂದೆರಡು ಶಾಸನಗಳನ್ನಿಲ್ಲಿ ಗಮನಿಸಬಹುದು ಚಿಕ್ಕಮಗಳೂರು ತಾಲೂಕಿನ ಮುತ್ತಿನಪುರದ ಶಿವನ ದೇವಾಲಯಕ್ಕೆ ಸಂಬಂಧಿಸಿದಂತೆ ಎರಡು ಶಾಸನಗಳಿವೆ. ಕ್ರಿ.ಶ.1202ರ ಶಾಸನದಂತೆ[38], ಅಲ್ಲಿ ಬ್ರಹ್ಮೇಶ್ವರನ ದೇವಾಲಯವನ್ನು ಕಟ್ಟಲಾಗಿದೆ. ಅದೇ, ಕ್ರಿ.ಶ.1615ರಲ್ಲಿ ಅರವೀಡು ರಾಮರಾಯನು ಆ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ, 'ವಿರೂಪಾಕ್ಷಲಿಂಗ' ಸ್ಥಾಪಿಸಿದನೆಂದಿದೆ[39]. ಇದೇ ರೀತಿ, ರಾಮಸಾಗರ ಶಾಸನದ ಸೋಮೆಯ ದೇವರು[40], ಕುರ್ತುಕೋಟಿ ಶಾಸನದ(ಗದಗ ತಾ.) ದಾಸೇಶ್ವರ[41], ಪಟ್ಟದಕಲ್ಲಿನ ಶಾಸನದ ಲೋಕೇಶ್ವರ[42] ಈ ಎಲ್ಲವೂ ನಂತರದ ಕಾಲದಲ್ಲಿ ವಿರೂಪಾಕ್ಷ ದೇವಾಲಯಗಳೆನಿಸಿರುವುದು ಗಮನಾರ್ಹವಾಗಿದೆ. ಯಾವುದೋ ಒಂದು ಕಾಲದಲ್ಲಿ ದೇವಾಲಯಕ್ಕೆ 'ವಿರೂಪಾಕ್ಷ' ದೇವರ ಹೆಸರನ್ನಿಡುವ ಆಶಯ ಹೆಚ್ಚಾಗಿರಬೇಕು.

ಇಷ್ಟಾದರೂ, ಮುಳುವಾಯಿ ಪ್ರದೇಶಕ್ಕೆ ಸೇರಿದ ಯಾವುದೇ ಪ್ರದೇಶದಲ್ಲೂ ಈ ಮೊದಲು ವಿರೂಪಾಕ್ಷನ ದೇವಾಲಯಗಳಿದ್ದಂತೆ ತೋರುವುದಿಲ್ಲ (ನಂತರದ ಕಾಲದಲ್ಲಿವೆ). ಆದರೆ, ಲಕ್ಕಣನು ಈ ಒಂದು ಆಶಯ ತೋರಿದ್ದಾನೆ. ಅವನು ಇಲ್ಲಿ ದೇವಾಲಯ ಕಟ್ಟುವುದಕ್ಕೂ, ವಿರೂಪಾಕ್ಷನ ಹೆಸರಿಡುವುದಕ್ಕೂ ಕಾರಣವಿದೆ. ಸಂಗಮ ಅರಸರ ಕಾಲದಲ್ಲಿ ಮುಳವಾಯಿ ರಾಜ್ಯವು ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತು. ವಿಜಯನಗರ ರಾಜಧಾನಿಯಷ್ಟೇ ಪ್ರಮುಖ ಸ್ಥಾನವನ್ನು ಮುಳವಾಯಿ ಪ್ರದೇಶವು ಗಳಿಸಿದ್ದು, ಒಂದು ರೀತಿಯಲ್ಲಿ ಎರಡನೆಯ ರಾಜಧಾನಿಯೇ ಆಗಿತ್ತು. ಕ್ರಿ.ಶ.1356ರಲ್ಲಿ ಅಂದರೆ, ಸಂಗಮರ ರಾಜ್ಯೋದಯದ ದಶಕದಲ್ಲಿ ಪ್ರಧಾನಿ ಸೋಮಪನೆಂಬುವವನು ದೋಮಸಂದ್ರದಲ್ಲಿ (ಕೋಲಾರ ತಾ.) ಸೋಮೇಶ್ವರ ದೇವಾಲಯವನ್ನು ನಿರ್ಮಿಸಿದ್ದನ್ನಿಲ್ಲಿ ನೆನೆಯಬಹುದು[43](ತುಳುವ ಅರಸರ ಕಾಲದಲ್ಲೂ ಈ ಪರಂಪರೆ ಮುಂದುವರಿದಿದ್ದು ಇಲ್ಲಿನ ದೇವಾಲಯಗಳಿಗೆ ದಾನ ನೀಡಲಾಗಿದೆ)[44]. ಸಂಗಮ ಅರಸರ ಕಾಲದ ಬಹುಮುಖ್ಯ ದೇವಾಲಯಗಳೆಂದರೆ, ಹಂಪೆಯ ವಿರೂಪಾಕ್ಷ ಮತ್ತು ಶೃಂಗೇರಿಯ ವಿದ್ಯಾಶಂಕರ ದೇವಾಲಯಗಳು. ಈಗಾಗಲೇ ಮುಳವಾಗಿಲಿನಲ್ಲಿ ವಿದ್ಯಾಶಂಕರ(ಹಾಗೂ ವಿಠಲ) ದೇವಾಲಯವಿತ್ತು[45](ಈ ದೇವಾಲಯಕ್ಕೆ ಇಮ್ಮಡಿ ಬುಕ್ಕನು ದಾನನೀಡಿದ್ದಾನೆ)[46]. ಲಕ್ಕಣನು ಹಂಪೆಯ ವಿರೂಪಾಕ್ಷನ ಬಗ್ಗೆ ಅತೀವ ಭಕ್ತಿಯುಳ್ಳವನಾಗಿದ್ದನೆಂದು 'ಶಿವತತ್ತ್ವ ಚಿಂತಾಮಣಿ'ಯಿಂದ ತಿಳಿದುಬರುತ್ತದೆ. ಇದು ಅವನ ಆಳ್ವಿಕೆಯ ಪ್ರದೇಶವೂ ಆಗಿದ್ದುದರಿಂದ ಆ ವಿರೂಪಾಕ್ಷನ ಹೆಸರಲ್ಲಿ ಇಲ್ಲಿ ದೇವಾಲಯ ನಿರ್ಮಿಸಿದನು. ಇದು ಅವನ ಹುಟ್ಟೂರಾದ್ದರಿಂದ ಇಲ್ಲಿ ದೇವಾಲಯ ಕಟ್ಟಿಸಿದನೆಂದೂ ಒಂದೆಡೆ ಪರೋಕ್ಷವಾಗಿ ಹೇಳಲಾಗಿದೆ[46A]. ವಿರೂಪಾಕ್ಷನ ಹೆಸರಲ್ಲಿ ಹಂಪೆಗೆ ಸಮಾನಾಂತರವಾಗಿ ದೇವಾಲಯ ನಿರ್ಮಿಸಿದ ಏಕೈಕ ಪ್ರಧಾನಿ–ಲಕ್ಕಣ ದಂಡೇಶ. ತೇಕಲ್ಲಿನ ವರದರಾಜ(ಸಂಗಮ ಪೂರ್ವಕಾಲ), ಗಡಿದಂ ಶ್ರೀನಿವಾಸ (ಕ್ರಿ.ಶ.1391), ಕೈವಾರದ


ಅಮರನಾರಾಯಣ (ಕ್ರಿ.ಶ.1283ಕ್ಕೆ ಮುಂಚೆ), ಬೇತಮಂಗಲದ ವಿಜಯೇಂದ್ರ (ಕ್ರಿ.ಶ.950ಕ್ಕೂ ಮುಂಚೆ?) ಮುಂತಾದ ವೈಷ್ಣವ ದೇವಾಲಯಗಳು ಮುಳಬಾಗಿಲಿನ ಸುತ್ತಮುತ್ತಲಲ್ಲಿ ಈಗಾಗಲೇ ಪ್ರಸಿದ್ಧವಾಗಿದ್ದವು. ಇವುಗಳ ನಡುವೆ ಲಕ್ಕಣನು ಒಂದು ಶೈವ ದೇವಾಲಯ ನಿರ್ಮಿಸಿದ್ದು ವಿಶೇಷವಾಗಿದೆ. ಬುಕ್ಕ(I)ನನ್ನು ಬಿಟ್ಟರೆ, ಯಾವ ರಾಜ/ಅಧಿಕಾರಿಗಳೂ, ಬೇರೆ ಹೆಸರಿನ ಶೈವ ದೇವಾಲಯ ನಿರ್ಮಿಸಿದ್ದರೂ, ವಿರೂಪಾಕ್ಷನ ಹೆಸರಲ್ಲಿ ದೇವಾಲಯ ನಿರ್ಮಿಸಲಿಲ್ಲ.

ಈ ವಿರೂಪಾಕ್ಷಿಯ ವಿರೂಪಾಕ್ಷ ದೇವಾಲಯ ನಿರ್ಮಾತೃವಾದ ಲಕ್ಕಣನ ಬಗ್ಗೆ ಇಲ್ಲಿ ಗಮನಿಸಬಹುದು. ಲಕ್ಕಣನನ್ನು ಕುರಿತು 17ರಿಂದ 20 ಶಾಸನಗಳು ದೊರೆತಿದ್ದು, ಇವು ಕ್ರಿ.ಶ.1410ರಿಂದ ಕ್ರಿ.ಶ. 1444ರ ಕಾಲಕ್ಕೆ ಸೇರುತ್ತವೆ. ಇವು ಕೋಲಾರ, ಬೆಂಗಳೂರು, ಚಿಕ್ಕಮಗಳೂರು, ದಕ್ಷಿಣಕನ್ನಡ, ಹಾಸನ, ಮಂಡ್ಯ, ತಂಜಾವೂರು, ತಿರುಚಿರಪಳ್ಳಿ, ಸೇಲಂ ಮುಂತಾದ ಕಡೆಗಳಲ್ಲಿ ದೊರೆತಿವೆ. ಉಳುಮಾನಪಲ್ಲೆಯ ಶಾಸನದಲ್ಲಿ[47] (ಕ್ರಿ.ಶ.ಸು.16ನೇ ಶ) ಹಾಗೂ ಕ್ರಿ.ಶ.1463ರ ಬಾರಕೂರು ಶಾಸನದಲ್ಲಿ[47A] ಇವನ ಉಲ್ಲೇಖವಿದ್ದರೂ, ಅವು ಹಿಂದಿನ ದಾನದ ವಿಷಯವನ್ನು ಹೇಳುತ್ತಿವೆ[47B]. ಇವನನ್ನು ಶಾಸನವೊಂದು 'ಹೊಸಪಟ್ಟಣದ ಲಖಂಣ' ಎಂದು ಕರೆದಿದೆ[48]. ಇವನು ವಿಷ್ಣುವರ್ಧನ ಗೋತ್ರದ ಹೆಗ್ಗಡೆದೇವ ಮತ್ತು ವೊಂಮಾಯಮ್ಮಗಳ ಮಗ[49]. ಇವನ ಸೋದರರು ಮಾದಂಣ ದಂಡನಾಯಕ[50] ಹಾಗೂ ಕಂಕುಶನಾಡನ್ನಾಳುತ್ತಿದ್ದ ತಿಪ್ಪಣ್ಣವೊಡೆಯರು[51]. ಲಕ್ಕಣನು ಸೋದರ ಮಾದಂಣ ದಂಡನಾಯಕರೊಂದಿಗೆ ಕೆಲಕಾಲ ಮುಳವಾಯಿ ರಾಜ್ಯವನ್ನಾಳುತ್ತಿದ್ದನು[52]. ನಂತರ ಹೊನ್ನಾಉರರಾಜ್ಯ, ಬಾರಕೂರು ರಾಜ್ಯಗಳಿಗೆ ಇವನು ಅಧಿಪತಿಯಾಗಿದ್ದನು. ಇವನು ಶೂರನಾಗಿದ್ದು, ಸಿಂಹಳ ದ್ವೀಪದವರೆಗೆ ವಿಜಯನಗರದ ಅಧಿಪತ್ಯವನ್ನು ವಿಸ್ತರಿಸಿದನು. ಈ ಕಾರಣವಾಗಿ ಅವನಿಗೆ 'ದಕ್ಷಿಣ ಸಮುದ್ರಾಧಿಪತಿ' ಎಂಬ ಬಿರುದು ಬಂದಿದ್ದನ್ನು ತಮಿಳುನಾಡಿನ ಶಾಸನಗಳು ತಿಳಿಸಿವೆ[53].

ಲಕ್ಕಣನು ಎರಡನೇ ದೇವರಾಯನ ಮಹಾಪ್ರಧಾನಿ ಹಾಗೂ ಆಪ್ತ ಗೆಳೆಯನಾಗಿದ್ದನೆಂಬುದು ಸರ್ವವಿದಿತ. ರಾಜನಿಗೆ ಧರ್ಮವಾಗಬೇಕೆಂದು 'ಅನ್ನದಾತ' ಎಂಬುವವನಿಗೂ[54], ರಾಜನ ಆಯಸ್ಸು, ಆರೋಗ್ಯ, ಐಶ್ವರ್ಯಕ್ಕೆಂದು ತಲಕಾಡಿನ ವೈದ್ಯನಾಥ ದೇವಾಲಯಕ್ಕೂ[55] ದಾನ ನೀಡಿದ್ದಾನೆ. ಇವನ ಅಪೇಕ್ಷೆಯಂತೆ ತಲಕಾಡಿನ ಕೀರ್ತಿನಾರಾಯಣ ದೇವಾಲಯಕ್ಕೂ ದಾನ ನೀಡಲಾಗಿದೆ[56]. ಲಕ್ಕಣನು ತಿರುಕುರಂಗಾಡುತುರೈ ಗ್ರಾಮದ ಕುರುರಂ ಪೊರುತ್ತರುಳಿಯ ನಾಯನಾರ್ ದೇವಾಲಯಕ್ಕೂ ದಾನ ನೀಡಿರುವುದು ಶಾಸನೋಕ್ತವಾಗಿದೆ[57]. ಸಿಂಹಳ ದ್ವೀಪದ ವಿಜಯದ ನಂತರ 'ಸಮುದ್ರಯಾತ್ರಾದಾನ' ಮಾಡುತ್ತಾನೆ[58]. ದೇವರಾಯನ ನಿರೂಪದಂತೆ, ಲಕ್ಕಣ ಮತ್ತು ಮಾದಂಣವೊಡೆಯರು, ಸಾಳುವ ಗೋಪರಾಜನಿಗೆ ತೇಕಲ್ಲನ್ನು ನೀಡುತ್ತಾರೆ[59]. ಮರಗಲ್ಲು ಗ್ರಾಮದ ಶಾಸನದಂತೆ[59A], ಲಕ್ಕಂಣವೊಡೆಯರು, ಸಂತೆಯ ಕಟ್ಟಿಸಿದ ಸಂಬಂಧ ಪಟ್ಟಣಸಾಮಿ ಚೇಯಿಯ ಬಸೆಟ್ಟಿಗೆ ದಾನ ನೀಡಿರುವುದೂ ಇದೆ.

ಲಕ್ಕಣನು ಈ ಪ್ರಸನ್ನವಿರೂಪಾಕ್ಷ ದೇವಾಲಯ ಮಾತ್ರವಲ್ಲದೆ, ಗುಹಾರಣ್ಯ ಕ್ಷೇತ್ರದ ಪ್ರಸನ್ನಪುರದಲ್ಲಿ ವಸಂತಮಲ್ಲೇಶ ದೇವಾಲಯ ಕಟ್ಟಿಸಿದ ಉಲ್ಲೇಖವು 'ಶಿವತತ್ತ್ವ ಚಿಂತಾಮಣಿ'ಯಲ್ಲಿದೆ (38.133). ಇದು, ಹಂಪೆಯ ದಕ್ಷಿಣಕ್ಕಿರುವ ಕಡ್ಡಿರಾಂಪುರದ ಹತ್ತಿರದ ಬೆಟ್ಟದ ಮೇಲಿನ ಮಲ್ಲಿಕಾರ್ಜುನ ದೇವಾಲಯ (ಗುಹಾದೇವಾಲಯ)ವೆಂದು ಕೊಟ್ರಯ್ಯ ಅವರು ಗುರುತಿಸಿದ್ದಾರೆ[60]. ಲಕ್ಕಣನಿಗೇ ಶುಭವಾಗಲೆಂದು ದೇವಣನಾಯಕ ಎಂಬ ಅಧಿಕಾರಿಯು ದಾನ ನೀಡುತ್ತಾನೆ; ಅಂತೇ, ನಾಗರಸ ಎಂಬುವವನೂ ಲಕ್ಕಣನ ಶ್ರೇಯಸ್ಸಿಗೆಂದು ತಿರುವರೂರ್ ದೇವಾಲಯದ ಗೋಪುರ ಕಟ್ಟಿಸುತ್ತಾನೆ[61]. ಗೊರ್ರಪಲ್ಲೆಯ ಶಾಸನದಲ್ಲಿರುವ ಲಕ್ಕಣಪುರ[62] ಈ ಲಕ್ಕಣ ದಂಡೇಶನಿಗೆ ಸಂಬಂಧಿಸಿದೆಯೇ ಎಂಬುದನ್ನು ಪರಿಶೀಲಿಸಬೇಕಾಗಿದೆ. ಸಿದ್ಧನಂಜೇಶನು ತನ್ನ 'ಗುರುರಾಜ ಚರಿತ್ರೆ'ದಲ್ಲಿ (10.5) ಇವನನ್ನು 'ಹರಭಕ್ತ'ನೆಂದು ಸ್ಮರಿಸಿದ್ದಾನೆ. ಇವನ ಹೆಸರಿನಲ್ಲಿ ನಾಣ್ಯವನ್ನೂ ಟಂಕಿಸಲಾಗಿತ್ತೆಂದು ಹೇಳಲಾಗಿದೆ[63]. ಇಷ್ಟೆಲ್ಲಾ ಅಭಿಮಾನವನ್ನು ಗಳಿಸಿದ್ದರೂ ಅವನು ತನ್ನ ಬಗ್ಗೆ ಹೆಚ್ಚೇನನ್ನೂ ಹೇಳಿಕೊಂಡಿಲ್ಲ; ತಾನು, ದೇವರಾಜೇಂದ್ರನ ಮಹಾಪ್ರಧಾನಿ ಮತ್ತು ಗೆಳೆಯನೆಂದಷ್ಟೇ ಹೇಳಿಕೊಂಡಿರುವುದು ಅವನ ಸೌಜನ್ಯಕ್ಕೆ ಸಾಕ್ಷಿಯಾಗಿದೆ, ಇವನು ಕವಿಯೂ ದಾರ್ಶನಿಕನೂ ಆಗಿದ್ದನೆಂಬುದನ್ನು ಅವನು ರಚಿಸಿದ 'ಶಿವತತ್ತ್ವ ಚಿಂತಾಮಣಿ' ಕೃತಿಯು ಸೂಚಿಸುತ್ತದೆ. ಅವನು ರಚಿಸಿದ ದೇವಾಲಯಗಳು, ನೀಡಿದ ದೇವದಾನಗಳು ಅವನ ಧರ್ಮಾಭಿಮಾನವನ್ನೂ, ರಾಜ್ಯಾಭಿಮಾನವನ್ನೂ ಎತ್ತಿಹಿಡಿದಿವೆ. ಅಂತೇ, ವಿರೂಪಾಕ್ಷಿಯ ಈ ವಿರೂಪಾಕ್ಷ ದೇವಾಲಯ ನಿರ್ಮಾಣದ ಮೂಲಕ ಲಕ್ಕಣ ದಂಡೇಶನು ಸಂಗಮರ ಕಾಲದ ದೇವಾಲಯ ನಿರ್ಮಾಣಕ್ಕೆ ತನ್ನ ಕೊಡುಗೆಯನ್ನು ಸಲ್ಲಿಸಿದನೆನ್ನಬಹುದು.

ವಿರೂಪಾಕ್ಷಪುರದ ವಿರೂಪಾಕ್ಷ ದೇವಾಲಯ–ಪ್ರಧಾನ ದೇವಾಲಯ ಮತ್ತು ದೇವೀ ಗುಡಿಗಳು–ತಳವಿನ್ಯಾಸ



ಆಧಾರಸೂಚಿ ಮತ್ತು ಟಿಪ್ಪಣಿಗಳು :

1. MAR 1930, p.14
2. ಎರಡನೇ ಕಂಪಣ – ಎಕ.X–ಕೋಲಾರ. 222, 162, 205 (ಕ್ರಿ.ಶ.1356, 1366, 1373–ಕ್ರಮವಾಗಿ) ಜೊಮ್ಮಣ – ಅದೇ. ಚಿಂತಾಮಣಿ. 94 (ಕೈವಾರ) ಕ್ರಿ.ಶ. 1375 ಎರಡನೇ ಬುಕ್ಕ – ಅದೇ, ಬೌರಿಂಗ್‌ಪೇಟೆ. 17 (ರಾಯಸಂದ್ರ), ಕ್ರಿ.ಶ. 1388 ಮತ್ತು ಮುಳಬಾಗಿಲು.74 (ಆವನಿ), ಕ್ರಿ.ಶ. 1397 ವಿಜಯರಾಯ – ಅದೇ. ಮುಳಬಾಗಿಲು. 175 (ವೊಳಕೆರೆ), ಕ್ರಿ.ಶ. 1408 ನಾಗಣ್ಣದಂಡನಾಯಕ – ಅದೇ. ಮುಳಬಾಗಿಲು. 7 (ಮುಳಬಾಗಿಲು) ಕ್ರಿ.ಶ. 1416 ಎರಡನೇ ದೇವರಾಯ – ಅದೇ. ಬೌರಿಂಗಪೇಟೆ. 15 (ಕೊಡಿಗೇಹಳ್ಳಿ) ಕ್ರಿ.ಶ. 1420
3. ಅದೇ. ಬೌರಿಂಗ್‌ಪೇಟೆ.72 (ಮರಗಲ್ಲು), ಕ್ರಿ.ಶ. 1430 ಕೋಲಾರ. 104 (ಅಚಟ್ಟನಹಳ್ಳಿ) ಕ್ರಿ.ಶ. 1428 ಮುಳಬಾಗಿಲು. 96 (ವಿರೂಪಾಕ್ಷಪುರ) ಕ್ರಿ.ಶ. 1431 ಮುಳಬಾಗಿಲು. 2 (ಮುಳಬಾಗಿಲು) ಕ್ರಿ.ಶ. 1431
4. ಅಪರ್ಣ, ಕೂ.ಸ. – ಸಂಗಮರ ದೇವಾಲಯಗಳು, ಪು.30
5. ಎಕ.X – ಮುಳಬಾಗಿಲು. 65 (ಆವನಿ), ಕ್ರಿ.ಶ. 931. ಇದೇ ಮುಳಬಾಗಿಲಿನ ಶಾಸನ ಸಂಖ್ಯೆ 93, 94 ಮತ್ತು 264ರ ಪ್ರಕಾರ, ತ್ರಿಭುವನ ಕರ್ತ್ತನು ನೊಳಂಬ ದೊರೆ ದಿಲೀಪಯ್ಯನ ಕೈಕೆಳಗೆ ಆಳುತ್ತಿದ್ದನೆಂದೂ, ತ್ರಿಭುವನ ಕರ್ತ್ತ ಎಂಬುದು ಆ ಸ್ಥಳದ ದೊಡ್ಡ ಅರ್ಚಕನ ಪದವಿ ಎಂದೂ ಹೇಳಲಾಗಿದೆ (EC-X-Introduction, p-XXII).

6. ಎಕ.X – ಮುಳಬಾಗಿಲು.4 (ಮುಳಬಾಗಿಲು) ಕ್ರಿ.ಶ. 1547
7. ಅದೇ. ಮುಳಬಾಗಿಲು. 96 (ವಿರೂಪಾಕ್ಷಪುರ), ಕ್ರಿ.ಶ. 1431
8. ಅದೇ. ಮುಳಬಾಗಿಲು. 2 (ಮುಳಬಾಗಿಲು), ಕ್ರಿ.ಶ. 1431
9. Kolar Gazetteer, p.557
10. ಇದನ್ನು ಶಾಸನದಲ್ಲಿ 'ಗುಡಿ ಪಾರ್ವತಿ ಅಮ್ಮ', 'ಗುಡಿವಿರುಪಮ್ಮ' ಎನ್ನಲಾಗಿದೆ (ಎಕ.XVII – ಮುಳಬಾಗಿಲು. 325, 326 (ವಿರೂಪಾಕ್ಷಪುರ) – ಕಾಲ ಹೇಳಿಲ್ಲ.
11. ಕೂ.ಸ.ಅಪರ್ಣ – ದೇವಾಲಯ ವಾಸ್ತುಶಿಲ್ಪ ಪರಿಚಯ, ಪು.11, 50
12. ಎಲ್ಲ ಅಧಿಷ್ಠಾನಗಳನ್ನೂ, ಅದರಲ್ಲಿರುವ ಕುಮುದ ಎಂಬ ಅಂಗದ ಆಧಾರದ ಮೇಲೆ, ಮೂರು ಪ್ರಭೇದಗಳಾಗಿ ಶಾಸ್ತ್ರಗ್ರಂಥಗಳು ವಿಂಗಡಿಸಿವೆ: ಅವು, ಪಾದಬಂಧ, ಪ್ರತಿಬಂಧ ಮತ್ತು ಮಂಚಕ. ಯಾವುದೇ ಅಧಿಷ್ಠಾನದಲ್ಲಿ, ತ್ರಿಪಟ್ಟ ಕುಮುದವಿದ್ದರೆ, ಅದು ಪಾದಬಂದ ಅಧಿಷ್ಠಾನ ಪ್ರಭೇದ. ಅದೇ ರೀತಿಯಾಗಿ, 'ವೃತ್ತಕುಮುದ' ಇದ್ದರೆ, ಅದು 'ಪ್ರತಿಬಂಧ' ಪ್ರಭೇದದ ಅಧಿಷ್ಠಾನ. ಇವುಗಳಲ್ಲೂ ಬೇರೆ ಬೇರೆ ಪ್ರಕಾರಗಳಿದ್ದು, ತ್ರಿಪಟ್ಟ ಕುಮುದವಿರುವ ಎಲ್ಲ ಪ್ರಕಾರದ ಅಧಿಷ್ಠಾನಗಳು 'ಪಾದಬಂಧ' ಪ್ರಭೇದಕ್ಕೂ, ವೃತ್ತಕುಮುದವಿರುವ ಎಲ್ಲ ಪ್ರಕಾರದ ಅಧಿಷ್ಠಾನಗಳು 'ಪ್ರತಿಬಂಧ' ಪ್ರಭೇದಕ್ಕೂ ಸೇರುತ್ತವೆ(ಪಾದಬಂಧ, ಪ್ರತಿಬಂಧ ಎಂಬ ಪ್ರತ್ಯೇಕ ಪ್ರಕಾರಗಳೂ ಇವೆ). 'ಮಂಚಕ' ರೀತಿಯಲ್ಲಿ ಹೆಚ್ಚಿನ ಅಂಗಗಳಿರುವುದಿಲ್ಲ; ಹಾಗೂ 'ಕುಮುದ'ವೆಂಬ ಅಂಗವೂ ಇರುವುದಿಲ್ಲ; ಇದರಲ್ಲಿ ಉಪಪ್ರಕಾರಗಳೂ ಇಲ್ಲ.
13. ವಿವರಗಳಿಗೆ ನೋಡಿ: ಕೂ.ಸ.ಅಪರ್ಣ – 'ದಾಕ್ಷಿಣಾತ್ಯ ದೇವಾಲಯಗಳ ವರ್ಗೀಕರಣ' (ಲೇ.)–ಗುಣಮಧುರ ಪು.568–581
14. ಕೂ.ಸ.ಅಪರ್ಣ – ದೇವಾಲಯ ವಾಸ್ತುಶಿಲ್ಪ ಪರಿಚಯ, ಪು. 91 – 93
15. ಎಸ್. ಬಸಪ್ಪ (ಸಂ) – ಲಕ್ಕಣದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಉಪೋದ್ಘಾತ, ಪು.9
17. ಕೆ.ಆರ್.ನರಸಿಂಹನ್ – ಕೋಲಾರ ಜಿಲ್ಲೆಯ ದೇವಾಲಯಗಳು, ಪು. 29, 21
18. (ಉದ್ಧೃತ) ಎಸ್.ಕೆ.ರಾಮಚಂದ್ರರಾವ್ – ಭಾರತದ ದೇವಾಲಯ: ನೆಲೆ – ಹಿನ್ನೆಲೆ, ಪು. 52–53
19. ಎಕ.X – ಮುಳಬಾಗಿಲು. 97 (ಬಲ್ಲ), ಕ್ರಿ.ಶ.1527
20. ಅದೇ. ಬೌರಿಂಗ್‌ಪೇಟೆ .5 (ಬೇತಮಂಗಲ), ಕ್ರಿ.ಶ.1528
21. ಅದೇ. ಮುಳಬಾಗಿಲು. 4 (ಮುಳಬಾಗಿಲು) ಕ್ರಿ.ಶ. 1547
22. ಅದೇ. 98 (ವಿರೂಪಾಕ್ಷಪುರ) ಕ್ರಿ.ಶ. 1703 ಇತ್ಯಾದಿ.
23. ತುಷಾರ, ಆಗಸ್ಟ್ 1994, ಪು.51
24. ಕೂ.ಸ.ಅಪರ್ಣ – ಸಂಗಮರ ದೇವಾಲಯಗಳು, ಪು. 229–30
24A. ಕೆ. ವಸಂತಲಕ್ಷ್ಮಿ–ಕರ್ನಾಟಕದ ಶೈವಶಿಲ್ಪಗಳು, ಪು.7
25. ಧಾರವಾಡ ಜಿಲ್ಲಾ ಶಾಸನಸೂಚಿ, ರಾಣಿಬೆನ್ನೂರ ತಾ. ಸಂಖ್ಯೆ 9 (ಇಟಗಿ), ಕ್ರಿ.ಶ.1070
26. ಎಕ.XII – ಶಿರಾ. 30 (ಹೇಮಾವತಿ), ಕ್ರಿ.ಶ. 1135
27. ಎಕ.XI – ದಾವಣಗೆರೆ. 78 (ಕೊಂಡಜ್ಜಿ), ಕ್ರಿ.ಶ. 1367
28. ಕರ್ನಾಟಕದ ದೇವಾಲಯಗಳು – ಪು. 348
29. ಅದೇ. ಪು. 237
31. South Canara Gazetteer-p.733; ಕರ್ನಾಟಕದ ದೇವಾಲಯಗಳು, ಪು.277.
32. ದೇವರಕೊಂಡಾ ರೆಡ್ಡಿ–(ಸಂ). ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3, ಪ್ರ. ಪುಟ.93
33. ಕೂ.ಸ.ಅಪರ್ಣ–ಸಂಗಮರ ದೇವಾಲಯಗಳು, ಪು.59–60
34. Chikmagalur Gazetteer-p.572
35. MAR.1929-107 (Madhugiri)-15th C.A.D.
36. Mysore Gazetteer, p.853

37. 'ವಿರೂಪಾಕ್ಷ' ಹೆಸರನ್ನು ಬಿಟ್ಟರೆ, 'ತ್ರಯಂಬಕ' ಹೆಸರಿನ ದೇವಾಲಯಗಳು ವಾಗಟ, ಸಿರಸಿ, ಗದಗ, ತ್ರಯಂಬಕಪುರ, ಕವಿತಾಳ(ಮಾನ್ವಿ ತಾ.)ಗಳಲ್ಲೂ ಇವೆ (ಕರ್ನಾಟಕದ ದೇವಾಲಯಗಳು). ಇದೂ 'ವಿರೂಪಾಕ್ಷ' ಎಂಬುದರ ಪರ್ಯಾಯ ಪದವೇ ಆಗಿದೆ.
38. ಎಕ.XI (ಪ)–ಚಿಕ್ಕಮಗಳೂರು.192(ಮುತ್ತಿನಪುರ), ಕ್ರಿ.ಶ. 1202
39. ಅದೇ. ಸಂಖ್ಯೆ–191(ಮುತ್ತಿನಪುರ), ಕ್ರಿ.ಶ. 1615
40. ಎಕ.X – ಬೌರಿಂಗ್‌ಪೇಟೆ.11 (ರಾಮಸಾಗರ), ಕ್ರಿ.ಶ. 1444
41. ಧಾರವಾಡ ಜಿಲ್ಲಾ ಶಾಸನಸೂಚಿ–ಗದಗ ತಾ. ಸಂಖ್ಯೆ.28(ಕುರ್ತಕೋಟಿ), ಕ್ರಿ.ಶ. 1087
42. ಬಿಜಾಪುರ ಜಿಲ್ಲಾ ಶಾಸನಸೂಚಿ–ಬಾದಾಮಿ ತಾ. ಸಂಖ್ಯೆ.35, 39(ಪಟ್ಟದಕಲ್ಲು)–ಎರಡನೇ ವಿಕ್ರಮಾದಿತ್ಯನ ಕಾಲ
43. ಎಕ.X – ಕೋಲಾರ.222(ದೋಮಸಂದ್ರ), ಕ್ರಿ.ಶ. 1356
44. ಅದೇ. ಮುಳಬಾಗಿಲು.19 ಮತ್ತು 20(ಮುಳಬಾಗಿಲು), ಕ್ರಿ.ಶ. 1518 ಮತ್ತು 1468
45. ತೀರ್ಥಹಳ್ಳಿ ತಾಲೂಕಿನ ಕವಲೇದುರ್ಗದಲ್ಲಿ ವಿರೂಪಾಕ್ಷ, ಭುವನೇಶ್ವರಿ, ವಿಜಯವಿಠಲ ಮತ್ತು ವೀರಭದ್ರ ದೇವಾಲಯಗಳಿರುವುದೂ ಗಮನಾರ್ಹವಾಗಿದೆ.
46. ಎಕ.X – ಮುಳಬಾಗಿಲು.11 (ಮುಳಬಾಗಿಲು), ಕ್ರಿ.ಶ.1389

46A. ಎಸ್.ಬಸಪ್ಪ – ಪೂರ್ವೋಕ್ತ, ಉಪೋದ್ಘಾತ, ಪು.1

47. AR.1971-72, B.208 (Ulumanapalle), Hosur Tq., 16th C.AD.

47A. ಎಸ್. ಬಸಪ್ಪ–ಪೂರ್ವೋಕ್ತ, ಅನುಬಂಧ–2, ಶಾ.ಸಂಖ್ಯೆ.17(ಬಾರಕೂರು), ಕ್ರಿ.ಶ.1463

47B. ಈ ಶಾಸನದ ಆಧಾರದಿಂದ ಲಕ್ಕಣನ ಕಾಲವನ್ನು ಕ್ರಿ.ಶ.1463ರವರೆಗೆ ಎಂದು ಹೇಳಲಾಗುವುದಿಲ್ಲ. ಕ್ರಿ.ಶ.1444ರ ನಂತರ ದೊರೆತಿರುವುದು ಕ್ರಿ.ಶ.1463ರ ಶಾಸನವಾದ್ದರಿಂದ, ಅಲ್ಲಿ 19 ವರ್ಷಗಳ ಅಂತರವಿದೆ. ಅವನು ಅಧಿಕಾರದಲ್ಲಿದ್ದಿದ್ದರೆ, ಈ ಮಧ್ಯೆ ಶಾಸನ ದೊರೆಯುತ್ತಿತ್ತು. ಹಾಗಿಲ್ಲದಿರುವಾಗ, ಅವನು ಕ್ರಿ.ಶ.1444ರ ನಂತರದ ಕೆಲವರ್ಷಗಳು ಮಾತ್ರ ಅಧಿಕಾರದಲ್ಲಿದ್ದನೆಂದೂ, ಉಳಿದವು ಕೇವಲ ಸಾಂದರ್ಭಿಕ ಉಲ್ಲೇಖಗಳೆಂದೂ (ಬೇರೆ ಶಾಸನ ದೊರೆಯುವವರೆಗೂ) ಹೇಳಬೇಕಾಗುತ್ತದೆ.

48. ಎಕ.XI–ಹೊಳಲ್ಕೆರೆ.75(ರಾಮಗಿರಿ), ಕ್ರಿ.ಶ.1405

    ಹೊಸಪಟ್ಟಣ ಅಥವಾ ವಿರೂಪಾಕ್ಷಿಯು ಇವನ ಹುಟ್ಟೂರೆಂದೂ ಬಸಪ್ಪ ಅವರು ಹೇಳಿದ್ದಾರೆ(ಪೂರ್ವೋಕ್ತ). ಆದರೆ, ಹೊಸಪಟ್ಟಣ ಮತ್ತು ವಿರೂಪಾಕ್ಷಿ(=ಅವರ ಪ್ರಕಾರ ವಿರೂಪಾಕ್ಷಪಟ್ಟಣ?) ಎರಡೂ ಬೇರೆ ಬೇರೆಯ ಸ್ಥಳಗಳು.ಇವುಗಳ ವಿವರಗಳಿಗೆ ನೋಡಿ: ಕೂ.ಸ.ಅಪರ್ಣ–ಹೊಸಪಟ್ಟಣ ಮತ್ತು ವಿರೂಪಾಕ್ಷ ಪಟ್ಟಣ: ಸ್ಥಳಶೋಧನೆ(ಲೇ.)–ವಿಜಯನಗರ ಅಧ್ಯಯನ–ಸಂ.14–ಪು.188–216.

49. ಎಕ.X–ಮುಳಬಾಗಿಲು.96(ವಿರೂಪಾಕ್ಷಪುರ), ಕ್ರಿ.ಶ. 1431
50. ಅದೇ.
51. ಎಕ.VI–ಕೊಪ್ಪ.19(ನಾಗಲಾಪುರ), ಕ್ರಿ.ಶ. 1437 (ಪರಿಷ್ಕೃತ ಆವೃತ್ತಿ ಸಂ.12ರಲ್ಲಿ ಈ ಶಾಸನವಿಲ್ಲ)
52. ಒಂದು ಶಾಸನದಲ್ಲಿ 'ಮುಳವಾಗಿಲ ಮಾದಣಾಯ್ಕರು' ಎಂದೇ ಹೇಳಲಾಗಿದ್ದು (ಎಕ.X–ಚಿಂತಾ.157(ತಡಗೋಡ್ಲು), ಕ್ರಿ.ಶ. 1442), ಇವನು ಪಾಪಟಣವನ್ನು ಗೆದ್ದದ್ದಕ್ಕಾಗಿ ರಾಜನಿಂದ, ಆವನಿಯ ರಾಮೇಶ್ವರ ದೇವರಿಗೆಂದು ದಾನವನ್ನು ಪಡೆಯುತ್ತಾನೆ.
53. ಎಸ್. ಬಸಪ್ಪ–ಪೂರ್ವೋಕ್ತ, ಅನುಬಂಧ–2, ಶಾ.ಸಂಖ್ಯೆ.13(ತಿರುವರೂರು), ಕ್ರಿ.ಶ. 1440 ಮತ್ತು ಶಾ.ಸಂಖ್ಯೆ.15(ಸಿಕ್ಕೈಲ್), ಕ್ರಿ.ಶ. 1444.
54. ಎಕ.X–ಕೋಲಾರ.104(ಅಚಟ್ನಹಳ್ಳಿ), ಕ್ರಿ.ಶ. 1428
55. ಎಕ.VII–(ಪ)–ಮಳವಳ್ಳಿ.102(ಕಿರಗಸೂರು), ಕ್ರಿ.ಶ.1440
56. ಅದೇ.134(ಕ್ಯಾತನಹಳ್ಳಿ), ಕ್ರಿ.ಶ.1439
57. ಎಸ್. ಬಸಪ್ಪ–ಪೂರ್ವೋಕ್ತ, ಪು.605 (ಉದ್ಧೃತ) ಶಾ.ಸಂಖ್ಯೆ.12(ಅಡುತುರೈ), ಪೆರಂಬಲೂರು ತಾ. ಕ್ರಿ.ಶ. 1440

58. H.M. Nagaraju-Devaraya II and his times, p.98
59. ಎಕ.X–ಮಾಲೂರು.1(ತೇಕಲ್ಲು) ಕ್ರಿ.ಶ. 1434
59A. ಅದೇ. ಬೌರಿಂಗ್‌ಪೇಟೆ.72(ಮರಗಲ್ಲು); ಕ್ರಿ.ಶ. 1430
60 ಸಿ.ಟಿ.ಎಂ.ಕೊಟ್ರಯ್ಯ–(ಲೇ). 'ಹಂಪೆಯಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ದೇವತಾರಾಧನೆ' ವಿಜಯನಗರ ಅಧ್ಯಯನ ಸಂ.7, ಪು.163–172
61. AR.1905-p.58, 1400 AD
62. Inscriptions of Andhradesa, No.181, 1538 AD
63. H.M. Nagaraju-op.cit. p.125

ಗ್ರಂಥಋಣ :

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳು

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–III

ಧಾರವಾಡ ಜಿಲ್ಲಾ ಶಾಸನಸೂಚಿ–(ಸಂ). ಕಲಬುರ್ಗಿ–ಎಂ.ಎಂ.

ಬಿಜಾಪುರ ಜಿಲ್ಲಾ ಶಾಸನಸೂಚಿ–(ಸಂ). ಕಲಬುರ್ಗಿ–ಎಂ.ಎಂ.

ಎಸ್.ಬಸಪ್ಪ–(ಸಂ) ಲಕ್ಕಣದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ, ಮೈಸೂರು ವಿಶ್ವವಿದ್ಯಾಲಯ, 1960

ಅಪರ್ಣ, ಕೂ.ಸ. : ಸಂಗಮರ ದೇವಾಲಯಗಳು(ನಿಬಂಧ), ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2008

——〃—— : ದೇವಾಲಯ ವಾಸ್ತುಶಿಲ್ಪ ಪರಿಚಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999

ರಾಮಚಂದ್ರರಾವ್, ಎಸ್.ಕೆ. : ಭಾರತದ ದೇವಾಲಯ: ನೆಲೆ–ಹಿನ್ನೆಲೆ, ಐಬಿಹೆಚ್ ಪ್ರಕಾಶನ, ಬೆಂಗಳೂರು, 1980

ನರಸಿಂಹನ್, ಕೆ.ಆರ್. : ಕೋಲಾರ ಜಿಲ್ಲೆಯ ವೈಷ್ಣವ ದೇವಾಲಯಗಳು

—— : ಕರ್ನಾಟಕದ ದೇವಾಲಯಗಳು

ವಸಂತಲಕ್ಷ್ಮಿ, ಕೆ. : ಕರ್ನಾಟಕದ ಶೈವ ಶಿಲ್ಪಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2008

ಅಪರ್ಣ, ಕೂ.ಸ. : (ಲೇ.)– **'ಹೊಸಪಟ್ಟಣ ಮತ್ತು ವಿರೂಪಾಕ್ಷಪಟ್ಟಣ': ಸ್ಥಳಶೋಧನೆ–** ವಿಜಯನಗರ ಅಧ್ಯಯನ, ಸಂ.14, 2010

ಅಪರ್ಣ, ಕೂ.ಸ. : (ಲೇಖನ) – **'ದಾಕ್ಷಿಣಾತ್ಯ ದೇವಾಲಯಗಳ ವರ್ಗೀಕರಣ'** (ಸಂ). ಪಿ.ವಿ. ಕೃಷ್ಣಮೂರ್ತಿ ಮುಂ. 'ಗುಣಮಧುರ' (ದೇವರಕೊಂಡಾರೆಡ್ಡಿ ಅಭಿನಂದನ ಗ್ರಂಥ), ಅಭಿನಂದನ ಸಮಿತಿ, ಬೆಂಗಳೂರು, 2010

ಕೊಟ್ರಯ್ಯ, ಸಿ.ಟಿ.ಎಂ. : (ಲೇ.)– **'ಹಂಪೆಯಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ದೇವತಾರಾಧನೆ'**, ವಿಜಯನಗರ ಅಧ್ಯಯನ, ಸಂ.7, 2003

Nagaraju .H.M : Devaraya II and His Times, Mysore University, 1991

George Michell : (Article)-**'Virupaksha: Virupaksha Temple'**(Ed)-George Michell and U.S. Moorthi, Vol.I, Pt.4A-(South India-Upper Dravidadesa-later phase)-American Institute of Indian Studies, New Delhi, 2001, p.71-73

MAR and Gazetteers

23. ಕಮಲಾಪುರದ ಗಾಳೆಮ್ಮನ ಸತಿ ಸ್ಮಾರಕ ಶಿಲೆ

– ಡಾ. ಎಚ್. ತಿಪ್ಪೇಸ್ವಾಮಿ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಕೇಂದ್ರದಿಂದ ಸು. 12 ಕಿ.ಮೀ. ದೂರದಲ್ಲಿ ಕಮಲಾಪುರವಿದೆ. ಸಮುದ್ರ ಮಟ್ಟಕ್ಕಿಂತ 457 ಮೀ. ಎತ್ತರವಿರುವ ಇದು ರೇಖಾಂಶ 15.400 ಹಾಗೂ ಉತ್ತರ ಅಕ್ಷಾಂಶ 75.150 ಡಿಗ್ರಿಗಳ ನಡುವೆ ಕೇಂದ್ರಿಕೃತವಾಗಿದೆ. 29.60 ಚ.ಕಿ.ಮೀ. ವಿಸ್ತಾರ ಹೊಂದಿರುವ ಕಮಲಾಪುರ ಪ್ರಸ್ತುತಾ ಪಟ್ಟಣ ಪಂಚಾಯತಿ ಕೇಂದ್ರವಾಗಿದ್ದು. ಇಲ್ಲಿ 29 ಸಾವಿರಕ್ಕಿಂತಲೂ ಹೆಚ್ಚಿನ ಜನ ವಾಸಿಸುತ್ತಿದ್ದಾರೆ. ವಿಶ್ವವಿಖ್ಯಾತ 'ಹಂಪಿ'ಯ ಸಮೀಪದಲ್ಲಿರುವ ಕಮಲಾಪುರವು ಪ್ರಾಗೈತಿಹಾಸಿಕ ಹಾಗೂ ಚಾರಿತ್ರಿಕ ಕಾಲಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲಿ ಇದು ಆಡಳಿತ ಕೇಂದ್ರವಾಗಿ, ಅದರ ಉಪನಗರವಾಗಿ ಅಲ್ಲದೇ ಅಂದು ಸಾಂಸ್ಕೃತಿಕ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು ಎಂಬುದನ್ನು ಇಲ್ಲಿನ ಪ್ರಾಚ್ಯ ಅವಶೇಷಗಳು ದೃಢಪಡಿಸಿವೆ. ಇಂದಿನ ಕಮಲಾಪುರದ ವಿವಿದೆಡೆ ಚರಿತ್ರೆ ಆಕರಗಳಾದ ವಿಭಿನ್ನ ಕಾಲದ ಕೋಟೆ – ಕೊತ್ತಲುಗಳು, ದೇವಾಲಯಗಳು ಮೂರ್ತಿಗಳು, ಭಗ್ನಾವಶೇಷಗಳು ಇದ್ದು, ಇದೊಂದು ಪ್ರಾಚೀನ ನೆಲೆ ಎಂಬುದನ್ನು ಸೂಚಿಸುತ್ತವೆ. ಇಲ್ಲಿ ಹೇಮಗಿರಿ ಆಂಜನೇಯ, ಕಾಳಮ್ಮ, ನಗರೇಶ್ವರ, ಚಪ್ಪರದೇವರು, ಕೃಷ್ಣಸ್ವಾಮಿ, ವೀರಭದ್ರ, ಗಾರೆ ಬಾಗಿಲು ಆಂಜನೇಯ, ಶೂರನಳ್ಳಿ ಆಂಜನೇಯ, ಬ್ರಹ್ಮ, ಹನುಮಂತರಾಯ, ಕಲ್ಮಠ, ಕಾಶೀಮಠ, ಕಿರೀಟ ಯಲ್ಲಮ್ಮ, ಈಶ್ವರ, ಪಟ್ಟಾಭಿರಾಮ, ವೇಣುಗೋಪಾಲ, ಪಾಂಡುರಂಗಸ್ವಾಮಿ, ವೀರಭದ್ರ, ಕೋಟೆ ಆಂಜನೇಯ, ಗಾಳೆಮ್ಮ, ನೀಲಪ್ಪ, ದುರುಗಮ್ಮ, ಕೆಂಚಮ್ಮ, ನಿಜಲಿಂಗಮ್ಮ ಮೊದಲಾದ ದೇವಾಲಯಗಳಿವೆ. ಅಲ್ಲದೇ ಇಲ್ಲಿ ವಿವಿಧಧಾರ್ಮಿಕ ಪಂಥಗಳಿಗೆ ಸೇರಿದ ಕೆಲವು ವಿಶಿಷ್ಟ ಶಿಲಾ ಮೂರ್ತಿಗಳಿದ್ದು, ಅವು ಅಧ್ಯಯನ ಯೋಗ್ಯವಾಗಿವೆ. ಜನರ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಇಲ್ಲಿನ ವಿಜಯನಗರ ಕಾಲದ ಗಾಳೆಮ್ಮನ ಗುಡಿಯಲ್ಲಿರುವ ಸತಿ ಸ್ಮಾರಕ ಶಿಲೆ ಮತ್ತು ಅದರ ವೈಶಿಷ್ಟ್ಯತೆ ಹಾಗೂ ಆ ಸ್ಮಾರಕ ಶಿಲೆಗೆ ಸಂಬಂಧಿಸಿದಂತೆ ಇರುವ ಮೌಖಿಕ ನಂಬಿಕೆ, ಆಚರಣೆ, ಪರಂಪರೆಯನ್ನು ಈ ಪ್ರಬಂಧದಲ್ಲಿ ಪ್ರಾಥಮಿಕವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಈ ಮುಂದಿನಂತೆ ಮಾಡಲಾಗಿದೆ.

ಕಮಲಾಪುರದ ಹೆಸರಿನ ಹಿನ್ನಲೆ

'ಕಮಲಾಪುರ'ವನ್ನು ಉಲ್ಲೇಖಿಸುವ ಕೆಲ ಶಾಸನಗಳು ಪ್ರಾಪ್ತವಾಗಿವೆ. ಅವುಗಳಲ್ಲಿ ಕ್ರಿ.ಶ. 1540ರ ಶಾಸನವೊಂದು 'ಕಮಲಾಪುರ' ಕೆರೆಯ ಕೆಳಗಿನ ಹೂವಿನ ಸಿದ್ದಯ್ಯನ ಗದ್ದೆ ಮತ್ತು ಆ ಗದ್ದೆಗಳ ಉತ್ಪತ್ತಿಯ ಕೆಲ ಭಾಗಗಳನ್ನು ಹಾಗೂ ತೆಂಗಿನ ಮರಗಳನ್ನು ವರದ ರಾಜಮ್ಮನ ಪಟ್ಟಣದ 'ನಾಥ ದೇವರಿಗೆ' ನೀಡಿದ ವಿವರವನ್ನು ದಾಖಲಿಸಿದೆ. ಅದೇ ರೀತಿ ಕ್ರಿ.ಶ. 1581ರ ಶಾಸನವೊಂದು ಅಚ್ಯುತದೇವರಾಯನ ಆಳ್ವಿಕೆಯಲ್ಲಿ ಸಾಳುವ ದಣ್ಣಾಯಕ ತನ್ನ ಆಡಳಿತದಲ್ಲಿದ್ದ 'ಕಾಮಲಾಪುರ' ಸ್ಥಳದ ಕೊಂಡ ಮಾರಸಯ್ಯ ಪಾಳೆಯದ ಭೂಮಿಯನ್ನು ಲಕ್ಷ್ಮೀನರಸಿಂಹ ದೇವರ ದೀಪರಾಧನೆಗೆ ದಾನ ನೀಡಿದ ವಿಷಯವನ್ನು ಉಲ್ಲೇಖಿಸಿದೆ. ಈ ವಿವರಣೆಯಿಂದ ವಿಜಯನಗರ ಕಾಲಕ್ಕಾಗಲೇ 'ಕಮಲಾಪುರವು' ಅಸ್ತಿತ್ವದಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಕಮಲಾಪುರ ಎಂಬ ಹೆಸರು ಪ್ರಾಪ್ತವಾದ ಬಗೆಗೆ ವಿದ್ವಾಂಸರಲ್ಲಿ, ವಿಭಿನ್ನ ಅಭಿಪ್ರಾಯಗಳಿವೆ. ವಸುಂದರಾ ಫಿಲಿಯೋಜಾರವರು 'ಅಳಿದುಳಿದ ಹಂಪೆ' ಎನ್ನುವ ತಮ್ಮ ಕೃತಿಯಲ್ಲಿ "ಕೃಷ್ಣದೇವರಾಯನು ತನ್ನ ಹೆಂಡತಿ 'ಕಮಲಾದೇವಿ'ಯ ಹೆಸರಿನಲ್ಲಿ ನಗರವೊಂದನ್ನು ನಿರ್ಮಿಸಿ ಅದಕ್ಕೆ ಕಮಲಾಪುರವೆಂದು ಕರೆದನು" ಎಂದು ಅಭಿಪ್ರಾಯಪಟ್ಟಿದ್ದಾರೆ.[5] ಪ್ರೌಢದೇವರಾಯನ ಪತ್ನಿ ಕಮಲಾದೇವಿಯಿಂದಾಗಿಯೂ ಈ ಹೆಸರು ಪ್ರಾಪ್ತವಾಗಿರಬಹುದೆಂಬುದು ವೀಣಾ ಎಂ.ಪಿ. ಅವರ ಅಭಿಪ್ರಾಯ.[6] ಕಾಮಲ ಎಂದರೆ 'ಉತ್ತಮ ಸ್ತ್ರೀ', ಲಕ್ಷ್ಮಿ ಎಂಬ ಅರ್ಥವಿದೆ. 'ಲಕ್ಷ್ಮಿ' ಶ್ರೇಷ್ಠ ಸ್ತ್ರೀಯಾಗಿದ್ದರಿಂದ ಎಲ್ಲರೂ ದೈವ ಭಾವನೆಯಿಂದ ಇವಳ ಜ್ಞಾಪಕಾರ್ಥವಾಗಿ ಈ ಪುರಕ್ಕೆ 'ಕಮಲಾಪುರ' ಎಂದು ಕರೆದಿರಬಹುದೆಂಬುದು ಮತ್ತೊಬ್ಬ ಹಿರಿಯ ವಿದ್ವಾಂಸರ ಅಭಿಪ್ರಾಯ[7] ಕಮಲಾಪುರ ಎಂಬುದು ಬಿಡಿಸಿದಾಗ ಕಮಲ = ನೀರಿನಲ್ಲಿ ಅರಳುವ ಪುಷ್ಪ, ತಾವರೆ. ಪುರ = ನಗರ, ಪಟ್ಟಣ ಎಂಬ ಅರ್ಥಗಳು ಬರುತ್ತವೆ. ಅಂದರೆ 'ತಾವರೆ ಹೂವಿನ' ನಗರ ಎಂದು ಅರ್ಥವಾಗುತ್ತದೆ. ಪ್ರಾಯಶಃ ಇಲ್ಲಿರುವ ಕೆರೆಯಲ್ಲಿ ಅಂದು ಹೆಚ್ಚಾಗಿ ಶ್ವೇತ ತಾವರೆಗಳನ್ನು ಬೆಳೆಯುತ್ತಿದ್ದಿರಬೇಕು? ಅಲ್ಲದೆ ಇಲ್ಲಿನ ಪುಷ್ಪಗಳನ್ನು ಅಂದಿನ ಅರಮನೆ, ಗುರು ಮನೆಗಳಿಗೆ ರವಾನಿಸುತ್ತಿದ್ದ ಸೂಚಕವಾಗಿ ಈ ಹೆಸರು ಬಂದಿದೆ ಎಂದು ಹೇಳಬಹುದಾಗಿದೆ.

ಗಾಳೆಮ್ಮನ ಗುಡಿ :

"ಮಾದಿಗರ ಗುಡಿ"ಯೆಂದು ಸ್ಥಳೀಯರಿಂದ ಕರೆಯಲ್ಪಡುವ ಈ ಗುಡಿಯು ಪ್ರಸ್ತುತಾ ಕಮಲಾಪುರದ ಅಂಬೇಡ್ಕರ್ ಸರ್ಕಲ್‌ನಿಂದ ಮ್ಯೂಸಿಯಂ ಮಾರ್ಗದ ರಸ್ತೆಯ (ಹಳೆ ಆಸ್ಪತ್ರೆ ಕಟ್ಟಡಕ್ಕೆ ಎದುರಾಗಿ) ಬಲ ಬದಿಯಲ್ಲಿದೆ. ಸಣ್ಣ ಸಣ್ಣ ಗಾತ್ರದ ಸಾಧಾರಣವಾಗಿರುವ ಸಮತಟ್ಟಾದ ಮತ್ತು ಚಪ್ಪಟೆಯಾದ ಕಣ ಶಿಲೆಗಳನ್ನು ಬಳಸಿ ಸುಮಾರು 10*20 ಅಡಿ ವಿಸ್ತೀರ್ಣದಲ್ಲಿ ಈ ಗುಡಿಯನ್ನು ನಿರ್ಮಿಸಲಾಗಿದೆ. ಇದರ ಭಿತ್ತಿಯ ಒಳ ಭಾಗದಲ್ಲಿ ಕೆಲವು ದೀಪದ ಗೂಡುಗಳನ್ನು ಮಾತ್ರ ಮಾಡಲಾಗಿದೆ. ಆದರೆ ಇದರ ಹೊರಭಾಗದ ಭಿತ್ತಿಗೆ ಯಾವುದೇ ಪ್ಲಾಸ್ಟರಿಂಗ್ ಮಾಡಿಲ್ಲದೇ ಇರುವುದರಿಂದ ಅದು ಸರಳವಾಗಿದೆ. ಈ ಗುಡಿಯು ಮೂಲದಲ್ಲಿ ಗರ್ಭಗುಡಿ ಮತ್ತು ಮುಖಮಂಟಪವನ್ನೊಂದಿತ್ತು. ಪ್ರಸಕ್ತ ಗರ್ಭಗುಡಿ ಮತ್ತು ಮುಖ ಮಂಟಪದ ಕೆಲ ಭಾಗಗಳು ಮಾತ್ರ ಉಳಿದಿದ್ದು, ಅದರ ಮೇಲ್ಚಾವಣೆ ಸಂಪೂರ್ಣ ಬಿದ್ದು ಹೋಗಿದೆ. ಈ ಗುಡಿಯ ಗರ್ಭಗುಡಿಯಲ್ಲಿ ವಿಶೇಷವಾಗಿ ಪೀಠದ ಮೇಲಿರುವ ಸತಿ ಸಹಗಮನ(ವೀರ ಮಾಸ್ತಿ) ಪ್ರಸಂಗವೊಂದನ್ನು ನಿರೂಪಿಸುವ ಶಿಲೆಯೊಂದಿದ್ದು, ನಮ್ಮ ಗಮನವನ್ನು ಸೆಳೆಯುತ್ತದೆ. ದೇವಾಲಯದ ಮುಂಭಾಗಕ್ಕೆ ಎರಡು ಜೊತೆ ಪಾದುಕೆಗಳಿದ್ದು, ಅದನ್ನು ಒಂದು ಹೆಡೆ ಬಿಚ್ಚಿದ ನಾಗ ಸುತ್ತುವರಿದಿದೆ8. ಇದರ ಮುಂಭಾಗದಲ್ಲಿ ಮತ್ತೊಂದು ಹೆಡೆ ಬಿಚ್ಚಿದ ನಾಗದ ಅಲಂಕಾರವಿರುವ ಶಿಲಾಫಲಕವಿದೆ.

ಸತಿ ಸಹಗಮನ(ಮಾಸ್ತಿ) ಶಿಲೆಯ ವಿವರ :–

ಗರ್ಭಗುಡಿಯಲ್ಲಿ ಗಾಳೆಮ್ಮನ ಸತಿ ಸ್ಮಾರಕ ಶಿಲೆ ಇದೆ. ಗ್ರಾನೈಟ್ ಶಿಲೆಯನ್ನು ಬಳಸಿಕೊಂಡು ಮಾಡಲಾಗಿರುವ ಈ ಶಿಲೆಯು ಸು.0.93 ಮೀಟರ್ ಎತ್ತರ ಮತ್ತು ಸು. 0.64 ಮೀಟರ್ ಅಗಲವನ್ನೊಂದಿದೆ. ಸುತ್ತಲೂ ಕೀರ್ತಿಮುಖದ ಮಾದರಿಯ ಸರಳ ರಚನೆಯಿದ್ದು, ಅದರಲ್ಲಿ ಯಾವುದೇ ಅಲಂಕಾರಗಳಿಲ್ಲ. ಶಿಲಾ ಫಲಕದ ಮಧ್ಯದಲ್ಲಿ ಈ ವೀರ ಮಾಸ್ತಿಯನ್ನು ಮತ್ತು ಆಕೆಯೊಂದಿಗೆ ಆಕೆಯ ಪತಿಯನ್ನು ಅಕ್ಕ ಪಕ್ಕದಲ್ಲಿ (ಸತಿ ಮತ್ತು ಪತಿಯನ್ನು) ಸುಂದರವಾಗಿ ಕೆತ್ತಲಾಗಿದೆ. ಈ ವೀರಮಾಸ್ತಿಯ ಬಲಭಾಗಕ್ಕೆ (ನಮ್ಮ ಎಡಭಾಗಕ್ಕೆ) ತನ್ನ ಎರಡು ಪಾದಗಳನ್ನು ಸ್ವಲ್ಪ ಪಕ್ಕಕ್ಕೆ ತಿರುಗಿಸಿ ಸ್ಥಾನೀಕನಾಗಿರುವ ವೀರ ಪುರುಷನನ್ನು (ವೀರಮಾಸ್ತಿಯ ಪತಿಯನ್ನು) ಕೆತ್ತಲಾಗಿದೆ. ಆ ವೀರನು ತನ್ನ ಕೊರಳಲ್ಲಿ ಹಾರವನ್ನು, ಕೈ ಮತ್ತು ಕಾಲಿನಲ್ಲಿ ಕಡಗಳನ್ನು ಧರಿಸಿದ್ದು, ಕಿವಿಯಲ್ಲಿ ಕುಂಡಲ ಮತ್ತು ಉದರದಲ್ಲಿ ಉದರಬಂಧ ಧರಿಸಿದ್ದಾನೆ. ತನ್ನ ಎಡಭಾಗಕ್ಕೆ ತನ್ನ ಜಟೆಯನ್ನು ತುರುಬಿನ ರೀತಿಯಲ್ಲಿ ಕಟ್ಟಿರುವ ಈತನು ತನ್ನ ಬಲಗೈಯಲ್ಲಿ ಕಠಾರಿ(ರಂಪಿಗೆಯೇ?)ರೀತಿಯ ಆಯುಧವೊಂದನ್ನು ಹಿಡಿದು, ತನ್ನ ಎಡಗೈನ್ನು ಕೆಳಗೆ ಇಳಿಬಿಟ್ಟಿದ್ದಾನೆ.

ಈ ವೀರ ಪುರುಷನ ಎಡಬದಿಯಲ್ಲಿ ಅಂಜಲಿ ಹಸ್ತಳಾಗಿ ನಿಂತಿರುವ ಸತಿಯಾದ ಸ್ತ್ರೀಯ (ಆತನ ಪತ್ನಿಯ) ಶಿಲ್ಪವನ್ನು ಕೆತ್ತಲಾಗಿದೆ. ಆಕೆ ತನ್ನ ಕೈಗಳಲ್ಲಿ ಕೈಬಳೆ ಮತ್ತು ಕೈ ಕಡಗ, ಭುಜಗಳಿಗೆ ಭುಜಬಂಧಗಳನ್ನು ಹಾಗೂ ಕಾಲಿನಲ್ಲಿ ಕಾಲ್ಕಡಗ, ಪಾದಗಳಲ್ಲಿ ಪಾದಸರಗಳನ್ನು ಧರಿಸಿದೆ. ಅಲ್ಲದೇ ನೆರಿಗೆಗಳಿರುವ ಅಲಂಕಾರಿಕ ಲಂಗವನ್ನು ಮತ್ತು ಅದರ ಮೇಲ್ಭಾಗಕ್ಕೆ ಸೊಂಟಪಟ್ಟಿ ಹಾಗೂ ಕುಪ್ಪಸವನ್ನು ಧರಿಸಿದೆ. ಈ ಶಿಲ್ಪದ ತಲೆಯ ಎಡಬದಿಯಲ್ಲಿ ಕೂದಲನ್ನು ವೃತ್ತಕಾರವಾಗಿ ಮಡಚಿ ತುರಬನ್ನು ಕಟ್ಟಲಾಗಿದೆ. ಈ ಸತಿ ಸ್ಮಾರಕ ಶಿಲೆಯ ಶೈಲಿ ಮತ್ತು ಇದರ ಆಕರ್ಷವಾಗಿರುವ ಮುಖ ಭಾವ ಮತ್ತು ಅಂಗ ಸೌಷ್ಠವವನ್ನು ಗಮನದಲ್ಲಿಟ್ಟಿಕೊಂಡು ಇದು ಕ್ರಿ.ಶ.15–16ನೇ ಶತಮಾನದಲ್ಲಿ (ವಿಜಯನಗರದ ಅಂತ್ಯಕಾಲದಲ್ಲಿ) ನಿರ್ಮಾಣವಾಗಿರಬಹುದೆಂದು ಹೇಳಬಹುದಾಗಿದೆ.

ಸತಿ ಸ್ಮಾರಕ ಶಿಲೆಯ ಕುರಿತ ಐತಿಹ್ಯ :–

ಈ ಸತಿ ಸ್ಮಾರಕಕ್ಕೆ ಸಂಬಂಧಿಸಿದಂತೆ ಕಮಲಾಪುರದಲ್ಲಿ ಪ್ರಸಕ್ತ ವಾಸವಾಗಿರುವ ಮಾದಿಗ ಸಮುದಾಯದಲ್ಲಿ ಕೆಲವು ನಂಬಿಕೆ ಮತ್ತು ಐತಿಹ್ಯಗಳಿವೆ. ಅಲ್ಲದೇ ಇದಕ್ಕೆ ಸಂಬಂಧಿಸಿದಂತೆ ಕೆಲ ಆಚರಣೆಗಳನ್ನು ಸಹಾ ಆ ಸಮುದಾಯದವರು ಕೆಲ ವಿಶೇಷ ದಿನಗಳಂದು ಆಚರಿಸುತ್ತಾರೆ. ಅದಕ್ಕೆ ಸಂಬಂಧಿಸಿದ ವಿವರ ಈ ಮುಂದಿನಂತಿದೆ.

1) ಹಿಂದೆ ಈರಪ್ಪ ಎನ್ನುವ ಈ ಸಮುದಾಯದ ವ್ಯಕ್ತಿಯೂರ್ವ ವಿಜಯನಗರದ ಅರಸರಿಗೆ ಬೇಕಾದ ಚಪ್ಪಲಿ ಮತ್ತು ಪಾಪೂಸುಗಳನ್ನು ಹಾಗೂ ವಿಜಯನಗರದ ಸೈನ್ಯಕ್ಕೆ ಬೇಕಾದ ಚವ್ಮಟಿಗೆ (ಆಯುಧ), ಚರ್ಮದ ಪಟ್ಟಿಕೆ, ಚರ್ಮದ ಕವಚ ಮತ್ತು ನೀರಿನ ಚೀಲ, ಪಾದರಕ್ಷೆ ಮುಂತಾದವುಗಳನ್ನು ಮಾಡಿ ಅವರಿಗೆ ಪೂರೈಸುತ್ತಿದ್ದನಂತೆ. "ಒಮ್ಮೆ ಪಕ್ಕದ ರಾಜ್ಯವೊಂದನ್ನು ಗೆಲ್ಲಲು ವಿಜಯನಗರದರಸರು ತಮ್ಮ ಸೇನೆಯೊಂದಿಗೆ ತೆರಳಿದ್ದರು. ಯುದ್ಧದ ತುರ್ತು ಕೆಲಸಗಳಿಗೆ ನೆರವಾಗಬಹುದೆಂದು ಈರಪ್ಪನನ್ನು ವಿಜಯನಗರದರಸರು ತಮ್ಮ ಸೇನೆಯೊಂದಿಗೆ ತಮ್ಮ ಸೈನಿಕ ಠಾಣೆಗೆ ಕರೆದು ಕೊಂಡು ಹೋಗಿದ್ದರು. ಸೈನಿಕ ಠಾಣೆಯ ಸ್ವಲ್ಪ ಅನತಿ ದೂರದಲ್ಲಿ ಈತ ಡೇರಿಯಲ್ಲಿ ವಾಸವಾಗಿದ್ದ ದಿನಗಳಲ್ಲಿ ಒಂದು ಮಧ್ಯರಾತ್ರಿ (ಸುಮಾರು 1–2 ಗಂಟೆ) ಸಮಯದಲ್ಲಿ ಶತ್ರು ಸೈನಿಕರು ಹಠಾತ್ತನೇ ವಿಜಯನಗರದ ಸೈನಿಕ ಠಾಣೆಯ ಮೇಲೆ ಧಾಳಿಮಾಡಿದರು. ಈ ಸುದ್ದಿಯನ್ನು ತಿಳಿದು ಈರಪ್ಪ ತನ್ನ ಕಡೆಯ ವಿಜಯನಗರ ಸೈನ್ಯಕ್ಕೆ ಈ ಮಾಹಿತಿ ತಲುಪಿಸಲು ಓಡೋಡಿ ಹೋಗುತ್ತಿದ್ದ ಈರಪ್ಪನ ಮೇಲೆ ಶತ್ರುವೊಬ್ಬ ದೂರದಿಂದಲೇ ಈಟಿ (ಭರ್ಚಿ)ಯನ್ನು ಅವನ ಮೇಲೆ ಎಸದ ಪರಿಣಾಮ ಅವನು ಸ್ಥಳದಲ್ಲೇ ಹತನಾದ. ಸ್ವಲ್ಪ ದಿನಗಳ ತರುವಾಯ ಈ ಕೆಟ್ಟ ಸುದ್ದಿಯನ್ನು ತಿಳಿದ ಆತನ ಹೆಂಡತಿ ಗಾಳೆಮ್ಮ ಅನುಗಮನ ಪದ್ಧತಿಯನ್ನು ಅನುಸರಿಸಿ ಉರಿಯುವ ಬೆಂಕಿಯಲ್ಲಿ ಸತಿ (ಮಾಸ್ತಿ)ಯಾದಳು". ಇದರ ಪ್ರತೀಕವಾಗಿ ಈ ವೀರ ಮಾಸ್ತಿಯನ್ನು ನಿರ್ಮಿಸಲಾಗಿದೆ ಎಂಬುದು ಸ್ಥಳೀಯರ ಐತಿಹ್ಯವಾಗಿದೆ[9].

ಜನರ ನಂಬಿಕೆ ಮತ್ತು ಆಚರಣೆಗಳು :–

1. ಇಂದಿಗೂ ಅಂಬೇಡ್ಕರ್ ನಗರದಲ್ಲಿ ವಾಸವಾಗಿರುವ ದಲಿತ ಸಮುದಾಯದವರು ವಿಶೇಷವಾಗಿ ಮಾದಿಗ ಸಮುದಾಯದವರು ಯಾವುದೇ ಶುಭ ಸಮಾರಂಭಗಳನ್ನು ಆರಂಭಿಸುವ ಪೂರ್ವದಲ್ಲಿ ಈ ಗುಡಿಗೆ ಬಂದು ಪೂಜಿಸಿಕೊಂಡು ಹೋದ ನಂತರವಷ್ಟೇ ತಮ್ಮ ಉಳಿದ ಕಾರ್ಯವನ್ನು ಆರಂಭಿಸುತ್ತಾರೆ.

2. ಇಂದಿಗೂ ಈ ಸಮುದಾಯದಲ್ಲಿ ನಡೆಯುವ ಮದವೆಗಳಲ್ಲಿ ಬರುವ ಗಂಡಿನ ಅಥವಾ ಹೆಣ್ಣಿನ ದಿಬ್ಬಣವಾಗಲಿ ಮತ್ತು ಮದುವೆಯ ಜೋಡಿ ದಿಬ್ಬಣವಾಗಲಿ ಇಲ್ಲಿ ಸ್ವಲ್ಪ ಸಮಯ ವಿಶ್ರಮಿಸಿಕೊಂಡು ನಂತರ ಗಾಳೆಮ್ಮನನ್ನು ಪೂಜಿಸಿಕೊಂಡು ಮಂಗಳ ವಾದ್ಯಗಳ ಸಮೇತ ತಮ್ಮ ದಿಬ್ಬಣದ ಮೆರವಣಿಗೆಯನ್ನು ಆರಂಭಿಸುತ್ತಾರೆ.

3. ಪ್ರತಿ ಮಂಗಳವಾರ ಮತ್ತು ಶುಕ್ರವಾರದಂದು ಈ ಕೇರಿಯ ಜನರು ಈ ಗುಡಿಗೆ ಬಂದು ಪೂಜಿಸಿಕೊಂಡು ಹೋಗುತ್ತಾರೆ. ಇತ್ತೀಚಿಗೆ ಊರಿನ ಕೆಲ ಇತರ ಸಮುದಾಯದವರು (ಅಂದರೆ ಈ ಗುಡಿಯ ಸುತ್ತಲೂ ವಾಸವಾಗಿರುವವರು) ಬಂದು ಪೂಜಿಸುವ ಸಂಪ್ರದಾಯವನ್ನು ಆರಂಭಿಸಿದ್ದಾರೆ.

4. ಮಕ್ಕಳು ರಂಪಾಟ ಮತ್ತು ಆಳುತ್ತಿರುವಾಗ, ಹಟ ಮಾಡುತ್ತಿರುವಾಗ ಇಲ್ಲಿಗೆ ಬಂದು ಪೂಜಿಸಿಕೊಂಡು ಹೋದರೆ ಮಕ್ಕಳ ರಂಪಾಟ ಕಡಿಮೆ ಆಗುತ್ತದೆ ಎಂಬ ನಂಬಿಕೆ ಇಲ್ಲಿನ ಜನರಲ್ಲಿದೆ.

5. ಇಲ್ಲಿ ದಸರೆಯ ನವರಾತ್ರಿಯ ದಿನ ಕೇರಿಯ ದುರುಗಮ್ಮ ಮತ್ತು ಕೆಂಚಮ್ಮ, ಕೀರಿಟ ಯಲ್ಲಮ್ಮ, ನೀಲಪ್ಪ ಮೊದಲಾದ ದೈವಗಳ ಪಲ್ಲಕ್ಕಿಗಳೊಂದಿಗೆ ಮಾದಿಗ ಸಮುದಾಯದವರು ಇಲ್ಲಿಗೆ ಆಗಮಿಸಿ ಮೊದಲು ಗಾಳೆಮ್ಮನನ್ನು ಪೂಜಿಸಿಕೊಂಡು ನಂತರ ಧರ್ಮದ ಬನ್ನಿ ಆಚರಣೆಗಾಗಿ ಕಳ್ಳಿರಾಂಪುರ ಸಮೀಪ (ಕಾಳಘಟ್ಟ–ನಾಗೇನಹಳ್ಳಿ ಮಾರ್ಗದ ಮಾಗಾಣಿ ಬಳಿ) ಇರುವ ಧರ್ಮದ ಗುಡ್ಡಕ್ಕೆ ತೆರಳಿ ಅಲ್ಲಿ ಇಡೀ ರಾತ್ರಿ ತಂಗಿ ಅಲ್ಲಿ ನಡೆಯುವ ಆಚರಣೆಗಳಲ್ಲಿ ಭಾಗವಹಿಸಿ ಆಲ್ಲಿನ ದೈವದಿಂದ ಧರ್ಮದ ಬನ್ನಿಯನ್ನು ಪಡೆದು ಮರು ದಿನ ಮುಂಜಾನೆ ಕಮಲಾಪುರದೆಡೆ ತಮ್ಮ ಪಲ್ಲಕ್ಕಿಗಳೊಂದಿಗೆ ಕಾಲು ನಡಿಗೆಯಲ್ಲಿಯೇ ವಾಪಾಸು ಆಗುತ್ತಾರೆ. ಈ ರೀತಿ ಹಿಂತಿರುಗಿ ಬಂದಾಗ ಸಹಾ ಇದೇ ದೇವಾಲಯದ ಮುಂಭಾಗದಲ್ಲಿ ಆ ಎಲ್ಲಾ ದೈವಗಳ ಪಲ್ಲಕ್ಕಿಯನ್ನು ಸಲಾಗಿಟ್ಟು ಮತ್ತೊಮ್ಮೆ ಗಾಳೆಮ್ಮನನ್ನು ಪೂಜಿಸಿ ಆಕೆಯ ಅಪ್ಪಣೆ ಪಡೆದು ತಮ್ಮ ಕೇರಿಗೆ ಹೋಗಿ ಅಲ್ಲಿನ ಪ್ರತಿ ಮನೆಗೆ ಭೇಟಿ ನೀಡಿ ತಾವು ತಂದಿದ್ದ ಬನ್ನಿಯನ್ನು ಹಂಚಿ ಕೊನೆಯಲ್ಲಿ ತಮ್ಮ ತಮ್ಮ ಮೂಲ ನೆಲೆಗಳಿಗೆ ಆ ದೈವಗಳು ಹಿಂತಿರಿಗುತ್ತವೆ.

ಉಪಸಂಹಾರ : ವಿಜಯನಗರ ಸಾಮ್ರಾಜ್ಯದ ರಾಜಧಾನಿಯ ಹೃದಯ ಭಾಗಕ್ಕೆ ಅಂಟಿಕೊಂಡಂತಿರುವ ಕಮಲಾಪುರವು ಚಾರಿತ್ರಿಕ ಕಾಲಗಳಲ್ಲಿ ತನ್ನದೆ ಆದ ಪಾತ್ರ ನಿರ್ವಹಿಸಿರುವುದನ್ನು ಇಲ್ಲಿನ ದೊರೆತ ಪುರಾತತ್ವೀಯ ವಸ್ತುಗಳು ಸ್ಪಷ್ಟೀಕರಿಸುತ್ತವೆ. ಅದರಂತೆ ಇಲ್ಲಿರುವ ಗಾಳೆಮ್ಮನ ಸ್ಮಾರಕ ಶಿಲೆಯನ್ನು ಆಧಾರವಾಗಿಟ್ಟುಕೊಂಡು ವಿಜಯನಗರ ಕಾಲದ ಸಾಂಸ್ಕೃತಿಕ ಇತಿಹಾಸ ಮತ್ತು ಸಮುದಾಯಿಕ ಜೀವನವನ್ನು ಪುನರ್ ರಚಿಸಬಹುದು. ಈ ಸ್ಮಾರಕ ಶಿಲೆಗೆ ಸಂಬಂಧಿಸಿದಂತೆ ಇರುವ ಐತಿಹ್ಯ ಮತ್ತು ನಂಬಿಕೆ ಮತ್ತು ಆಚರಣೆಗಳ ಆಧಾರದ ಮೇಲೆ ವಿಶೇಷವಾಗಿ ಸತಿಯಾದ ಗಾಳೆಮ್ಮ ಮತ್ತು ಆಕೆಯ ಪತಿ ಈರಪ್ಪ ಇವರು ಮಾದಿಗ ಸಮುದಾಯದ ಸಾಂಸ್ಕೃತಿಕ ವೀರರಾಗಿರುವ ಸಾಧ್ಯತೆ ಇದೆ. ಇಲ್ಲವೇ ಅವರು ಮಾದಿಗ ಸಮುದಾಯದ ವಿಜಯನಗರ ಕಾಲದ ಇಲ್ಲಿನ ಮೂಲ ವ್ಯಕ್ತಿಗಳಾಗಿರುವ ಸಾಧ್ಯತೆ ಇದೆ.

ವಿಜಯನಗರ ಕಾಲದಲ್ಲಿ ವಿವಿಧ ಸಮುದಾಯದ ಜನರು ಜೀವಿಸಿದ್ದರು. ವಿಜಯನಗರದರಸರು ತಮ್ಮ ಅಧೀನದಲ್ಲಿ ದುಡಿದ ಮತ್ತು ದುಡಿಯುತ್ತಿದ್ದ ಕೆಲವು ಕಸಬುದಾರರಿಗೆ (ಆಯಾಗಾರರಿಗೆ) ಅನೇಕ ರೀತಿಯ ಬಹುಮಾನ ಮತ್ತು ಉಂಬಳಿಗಳನ್ನು ಹಾಗೂ ಅವರ ಜೀವನ ನಿರ್ವಹಣೆಗಾಗಿ ಕೆಲ ಭೂಮಿಗಳನ್ನು ದಾನವಾಗಿ ನೀಡಿದ ಉದಾಹರಣೆಗಳಿವೆ. ಅದರಂತೆ ಮಾದಿಗ ಸಮುದಾಯವು ಸಹಾ ವಿಜಯನಗರ ಕಾಲದಲ್ಲಿ ತಾನು ನಿರ್ವಹಿಸಿದ ವಿವಿಧ ವೃತ್ತಿಗಳಿಗಾಗಿ ಕೆಲ ದಾನಗಳನ್ನು ವಿಜಯನಗರದ ದೊರೆಗಳಿಂದ ಪಡೆದಿರುವುದನ್ನು ಕೆಲ ಶಾಸನಗಳು ಉಲ್ಲೇಖಿಸಿವೆ. ಕಮಲಾಪುರ ಪಟ್ಟಣ ಪಂಚಾಯಿತಿಯ ಪ್ರಸಕ್ತ ಉಪಾಧ್ಯಕ್ಷರಾಗಿರುವ ಶ್ರೀ. ಗೋಪಾಲ್‌ರವರ ತಾತಂದರು ಹಂಪಿಯ ವಿರೂಪಾಕ್ಷ ದೇವಾಲಯ ಮತ್ತು ಹಂಪಿಯ ಬೀದಿಯಲ್ಲಿ ಸ್ವಚ್ಛತಾ ಕಾರ್ಯ ನೇರವೇರಿಸಿದ್ದಕ್ಕಾಗಿ ಮತ್ತು ವಿರೂಪಾಕ್ಷ ದೇವರ ರಥದ ಹಗ್ಗಗಳನ್ನು ವಸೆದು ಕೊಟ್ಟ ಅವರಿಗೆ ಕೆಲ ಮಾಗಣಿ ಭೂಮಿಯನ್ನು ದಾನವಾಗಿ ವಿಜಯನಗರದರಸರು ನೀಡಿದ್ದರು. ಇವುಗಳ ಆಧಾರದ ಮೇಲೆ ಮಾದಿಗ ಸಮುದಾಯವು ಸಹಾ ವಿಜಯನಗರದ ಚರಿತ್ರೆಗೆ ತನ್ನದೇ ಆದ ಕೊಡುಗೆ ನೀಡಿರುವುದನ್ನು ಗುರುತಿಸಬಹುದಾಗಿದೆ.ಚಾರಿತ್ರಿಕ ಘಟನೆಯೊಂದನ್ನು ತನ್ನ ಒಡಲಾಳದಲ್ಲಿ ಹುದಿಗಿಸಿಟ್ಟು ಕೊಂಡಿರುವ ಈ ಸತಿ ಸ್ಮಾರಕ ಶಿಲೆ ಮತ್ತು ಅದರ ಸುತ್ತಲಿರುವ ಗುಡಿ ತೀರಾ ದುಸ್ಥಿತಿಯನ್ನು ತಲುಪಿದ್ದು, ಅದನ್ನು ರಕ್ಷಿಸಬೇಕಾದ ಅವಶ್ಯಕತೆ ಇದೆ. ಅಲ್ಲದೇ ಇಂದಿನ ಸಾಬಾಲ್ಟರ್ನ್ ಇತಿಹಾಸ ರಚನಾಕ್ರಮಕ್ಕೆ ಪೂರಕ ಅಧ್ಯಯನ ಸಾಮಾಗ್ರಿಯಾಗಿರುವ ಮತ್ತು ಐತಿಹಾಸಿಕ ಆಕರವಾದ ಈ ಸತಿ ಸ್ಮಾರಕ ಶಿಲೆಯನ್ನು ಮುಂದಿನ ಪೀಳಿಗೆಗೆ ಉಳಿಸಿಕೊಡುವ ಜವಾಬ್ದಾರಿ ನಮ್ಮೆಲ್ಲಾರ ಮೇಲಿದೆ.

(ಲೇಖನ ತಯಾರಿಸಲು ಸಹಕರಿಸಿದ ಇಲಾಖೆಯ ನೌಕರರಾದ ಶ್ರೀ.ಹನುಮಂತಪ್ಪ ಮತ್ತು ಶ್ರೀ. ಮಿಲಿಟರಿ ವೆಂಕಟೇಶ್ ಮತ್ತು ಹಿರಿಯರಾದ ಶ್ರೀ.ಯಲ್ಲಪ್ಪ, ಶ್ರೀ.ಕಾಡೆಪ್ಪ, ಶ್ರೀ.ಕೊಲ್ಲಾರಪ್ಪ, ಶ್ರೀ.ಕರಿಯಪ್ಪ ಗುಡಿಮನಿ, ಶ್ರೀ.ಹೊನ್ನೂರುಸ್ವಾಮಿ, ಶ್ರೀ.ದಲ್ಲಾಳಿ ದುರುಗಪ್ಪ ಇವರಿಗೆ ಧನ್ಯವಾದಗಳು)

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. 1991ರ ಜನಗಣತಿ ಮತ್ತು ಪಟ್ಟಣ ಪಂಚಾಯ್ತಿ ದಾಖಲೆ
2. ಇದು ವಿಜಯನಗರ ಕಾಲದ ಪಟ್ಟಣ ಮತ್ತು ಅದರ ಉಪನಗರವಾಗಿತ್ತು. – **ವಿಜಯನಗರ ಅಧ್ಯಯನ** ಸಂ. 2, ಪು. 101
3. ಡಾ.ಎಚ್.ತಿಪ್ಪೇಸ್ವಾಮಿ,. ಕಮಲಾಪುರದ ವಿಜಯನಗರ ಕಾಲದ ಶಿಲಾಮೂರ್ತಿಗಳು, 2007, ಡಾ.ಗೋಪಾಲ್.ಆರ್. ಮತ್ತು ಇತರರು (ಸಂ) **ವಿಜಯನಗರ ಅಧ್ಯಯನ** ಸಂ.19, ಪು.47–56
4. **ಇಂಡಿಯನ್ ಆಂಟಿಕ್ವರಿ,** 1889, ನಂ. 16 ಮತ್ತು ಅದೇ, 1904, ನಂ.22
5. ವಸುಂಧರಾ ಫಿಲಿಯೋಜಾ, 1982, **ಅಳಿದುಳಿದ ಹಂಪಿ,** ಪು.99
6. ವೀಣಾ. ಎಂ.ಪಿ., 2002, **ಮನೆ ಮತ್ತು ಸಮಾಜ,** ಪು.22
7. ಡಾ. ದೇವರ ಕೊಂಡಾರೆಡ್ಡಿ, (ಸಂ.), 2000, **ಕನ್ನಡ ವಿವಿ ಶಾಸನ ಸಂ.3 ಹಂಪಿ ಶಾಸನಗಳು,** ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ
8. ಡಾ. ಪುರುಷೋತ್ತಮ ಬಿಳಿಮಲೆ, 1996, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
9. ಡಾ. ತಿಪ್ಪೇಸ್ವಾಮಿ,ಎಚ್. 2006 **ಹಂಪಿ ಪ್ರಾಧಿಕಾರ ವ್ಯಾಪ್ತಿಯ ಸ್ಮಾರಕಗಳು,** ಮಾಲತೇಶ ಪ್ರಕಾಶನ, ಬೆಂಗಳೂರು
10. ಡಾ. ಶ್ರೀಕಂಠಯ್ಯ, 1986, **ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ,** ಮೈಸೂರು
11. ಡಾ. ಸೋಮಶೇಖರ್.ಎಸ್.ವೈ., 2009, ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ, ಸಂಚಿಕೆ ಪ್ರಕಾಶನ, ಚಿತ್ರದುರ್ಗ.
12. ಮೊದಲು ಕಟ್ಟಿಗೆಯ ಗುಡಿಯಾಗಿದ್ದ ಪ್ರಸಕ್ತ ಗುಡಿಯನ್ನು ಸುಮಾರು 300 ವರ್ಷಗಳ ಹಿಂದೆ ನಿರ್ಮಿಸಲಾಯಿತು ಮತ್ತು ಕಮಲಾಪುರದ ಕಾಡಪ್ಪ ಎನ್ನುವವರು ಹಿಂದೆ ಈ ವೀರಮಾಸ್ತಿ ಶಿಲೆಯನ್ನು ಪ್ರತಿಷ್ಠಾಪಿಸಿದರೆನ್ನುವ ಅಭಿಪ್ರಾಯವಿದೆ.
13. ಇದು ರಾಯಚೂರು ಮುತ್ತಿಗೆ ಆಗಿರಬಹುದೇ?
14. ಕಮಲಾಪುರದ ಇಲಾಖೆಯ ನೌಕರರಾದ ಶ್ರೀ.ಹನುಮಂತಪ್ಪ(45) ಮತ್ತು ಮಿಲಟರಿ ವೆಂಕಟೇಶ್‌ರವರು(53) ಈ ಮಾಹಿತಿ ನೀಡಿದ್ದಾರೆ.
15. ಬಸಮ್ಮ ಮತ್ತು ಶಿವಮ್ಮ ನವರು ಹಾಡುವ ಗಾಳೆಮ್ಮನನಿಗೆ ಸಂಬಂಧಿಸಿದ ಜಾನಪದ ಹಾಡೊಂದರಲ್ಲಿ ಈ ಸತಿ ಪ್ರಸಂಗದ ಉಲ್ಲೇಖಗಳಿವೆ.
16. Anila Verghes - 2002, **Hampi Monumental Legacy,** Oxford University Press, New Delhi.
17. Diwakar.R.R & Karmarkar D.P, **Vijayanagara Sexcentenary commomration Volum,** Dharwar
18. George Michell - 1990, **Vijayanagara Architectural Inventory of the Urban Core**, Vol. 1 & 2 Directorate of Archaeology & Museums, Mysore
19. Mahalingam. T.V.,1957, **Administration and Social Life under Vijayanagara**, Part-I &II, University of madras, Madras
20. Narasimhaih.B,1992, **Vijayanagara Significance Of Remains of Cetidel,** Book India Publishers & co. Delhi
21. Robert Sewell, 1900, **A Forgetten Empire (Vijayanagara),** Swan Sinnon Shilon & co, London
22. Setter.s,1990, **Hampi A Medieval Metropolis**, Kalayatra, Bangalore
23. Patil C.S. and Vinoda Patil. 1997, **Inscriptions of Bellary Districts,** Directorate of Archaeology and Museum, Mysore

❑

24. ವಿಜಯನಗರ ಕಾಲದ ರಾಜನೀತಿ ಲಕ್ಷಣಗಳ ಪ್ರಸ್ತುತತೆ

– ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ರಾಜನೀತಿ ಎಂಬುದು ಅರಸನಿಗೆ ಅಥವಾ ರಾಜ್ಯದ ಆಡಳಿತಕ್ಕೆ ಸಂಬಂಧಿಸಿದ ನೀತಿ : ಆಡಳಿತ ವ್ಯವಹಾರ : ರಾಜಕಾರಣ ಸಾಮವೆಂಬುದು ರಾಜನೀತಿಗೆ ತಾ ಮನೋಹರ ರೂಪ ಬದುಕುವ ಭೂಮಿ ಪಾಲರಂತ ವಿಭವಕೆ ಬೀಜಮಂತ್ರವಿದು' ಎಂದು ಕನ್ನಡ ನಿಘಂಟಿನಲ್ಲಿ ಕುಮಾರವ್ಯಾಸ ಭಾರತದಲ್ಲಿನ ಉಲ್ಲೇಖವನ್ನು ಗಮನಿಸಬಹುದಾಗಿದೆ. (ಕನ್ನಡ ನಿಘಂಟು, ಏಳನೆಯ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1993 ಪು,75 97)

ರಾಜನೀತಿಯರಿತು ಸಮಯೋಚಿತವಾಗಿ ಮಾತನಾಡಬಲ್ಲದು ಎಂಬುದು ವಚನಗಳಿಂದ ತಿಳಿದು ಬರುತ್ತದೆ. ಹಾಗೆಯೇ ಇನ್ನಿವನ ಜೀವದಿಂದಿರಲೀನ ಕರುಣೆಯೇತರ ರಾಜನೀತಿ ಎಂಬುದು ಗೋಲ್ಕೊತಾ(3–160) ಕೃತಿಯಿಂದ ವೇಧ್ಯವಾಗುವುದು.

ಒಂದು ಬಗೆಯ ಲೆಕ್ಕದಲ್ಲಿಯ ರಾಜನೀತಿಯ ಪಾತ್ರ ಅಂತರ್ಗತವಾಗಿರುತ್ತದೆ. ಕರ್ನಾಟಕದ ವಾರ್ತೆಯಲ್ಲಿ ಅಷ್ಟಾದಶ ಗಣಿತಣಗಳುಂಟು. ಆವಾವೆಂದೊಡೆ ಮಗ್ಗಿ ಗಣಿತ ಕ್ಷೇತ್ರಗಣಿತ ಮಂಗಳ ಅಳತೆ ರಾಜನೀತಿ ಬಣ್ಣಾಂತರ ಪದ್ಮನಾಭ.... ಮುತ್ತಿನಲ್ಲಿನ ಗಣಿತವು ಅಷ್ಟಾದಶಗಣಿತಂಗಳು (ಕ್ಷೇತ್ರ ಗಣಿತ 2.3) ಎಂದು ದಾಖಲಾಗಿದೆ.

ರಾಜನೀತಿಯನ್ನು ಬಲ್ಲವನಿಗೆ ರಾಜನೀತಿಜ್ಞ ಎನ್ನುವರು. ರಾಜ್ಯದ ಆಡಳಿತ ವ್ಯವಹಾರವನ್ನು ತಿಳಿದವನು ಆಂಗ್ಲ ರಾಜನೀತಿಜ್ಞರು, ನಿರೂಪಿಸಿದ ವಿದ್ಯಾಭ್ಯಾಸ ವಿನ್ಯಾಸ ಇವೆರಡಕ್ಕೂ ಪುಷ್ಟಿಕೊಟ್ಟಿತು. ರಾಜನೀತಿಯನ್ನು ಇಂಗ್ಲಿಷ್‌ನಲ್ಲಿ ರಾಯಲ್ ಕಂಡೆಕ್ಟ್ ಅಥವಾ ಪಾಲಿಸಿದ ಆಡ್ಮಿನಿಷ್ಟ್ರಿಷನ್ ಆಫ್ ಗವರ್ನಮೆಂಟ್, ಪಾಲಿಟಿಕ್ಸ್ ಎಂದು ಅರ್ಥೈಸಲಾಗಿದೆ. ಹಾಗೆಯೇ ರಾಜ ಧರ್ಮ ಕುರಿತಂತೆ ರಿಟೆಲ್ ಅವರು 'ಕಿಂಗ್ಸ್ ಡೂಟಿ ಎ ಲಾ ಆಸ್ ಪ್ರಸ್ಕ್ರೈಬ್ಡ್ ಇನ್ ದಿ ಶಾಸ್ತ್ರಸ್ ಫಾರ್ ದಿ ಗೈಡೆಸ್ಸ್ ಆಫ್ ಕಿಂಗ್ಸ್ ಇನ್ ದಿ ಆಡ್ಮಿನಿಷ್ಟ್ರೇಷನ್ ಆಫ್ ಗವರ್ನಮೆಂಟ್ ಎಂದು ಹೇಳಿದ್ದಾರೆ. (ಎ ಕನ್ನಡ– ಇಂಗ್ಲಿಷ್ ಡಿಕ್ಸನರಿ ಕೆ. ಎಫ್.ಕಿಟ್ಟೆಲ್, 1999, ಪು,1336)

ರಾಜ್ಯಾಳ್ವಿಕೆಯಲ್ಲಿ ರಾಜನಿಗೆ ಆಡಳಿತ ನಡೆಸುವ ಸೂತ್ರ ಅಥವಾ ಪರಿಕಲ್ಪನೆ ಇರಬೇಕಾಗುತ್ತದೆ. ಇಲ್ಲಿ ರಾಜ ಅಥವಾ ಮಹಾರಾಜನ ಅರ್ಹತೆ ಮತ್ತು ಕರ್ತವ್ಯಗಳನ್ನು ಅವಲೋಕಿಸುವುದು ಸೂಕ್ತ. ರಾಜನೀತಿ ಮೂಲಕ ಸಮಾನತೆ, ಪ್ರಾದೇಶಿಕತೆ, ವರ್ಣ, ಧರ್ಮ, ಭಾಷೆ, ಕುಟುಂಬ ಅಸ್ಥಿರತೆ, ಸ್ವಾತಂತ್ರ್ಯ, ಸಹೋದರತೆ(ಭ್ರಾತೃತ್ವ), ಸಹಿಷ್ಣತೆ, ಐಕ್ಯತೆ, ಸಮನ್ವಯತೆ, ಸ್ವಾರ್ಥ, ಅನುವಂಶೀಯ ಆಳ್ವಿಕೆ, ಪಿತೃವಾಕ್ಯ ಪರಿಪಾಲನೆ, ತ್ಯಾಗ, ಆದರ್ಶ, ಸಂಘರ್ಷ, ಯುದ್ಧ, ಸಾಮರಸ್ಯ, ಬರಗಾಲ, ಕ್ಷಾಮ ಮೊದಲಾದ ಸಂಗತಿಗಳನ್ನು ವಿಶ್ಲೇಷಿಸಬಹುದಾಗಿದೆ.

ಸೂಚನೆ : ಬೆಂಗಳೂರಿನಲ್ಲಿ ನೆಲೆಸಿರುವ ಕೂಡ್ಲಿಗಿ ತಾಲೂಕಿನ ಕೆಂಚಮ್ಮನಹಳ್ಳಿ ಗ್ರಾಮದ ವಿದ್ವಾಂಸರಾದ ಡಾ. ಬಿ.ಎಂ. ಚಂದ್ರಶೇಖರಯ್ಯನವರು ಮಾಲೂರು ಗ್ರಾಮದ ಶಾಸನವನ್ನು ಓದಲು ನನಗೆ ತಿಳಿಸಿದ್ದರು. ಅದನ್ನು ಓದಿದಾಗ ಹೊಳೆನೂರು(ಚಿಕ್ಕಮಲ್ಲನಹೊಳೆ) ಮತ್ತು ಮಾಲೂರು ಗ್ರಾಮಗಳ ಗಡಿ ಭಾಗದ ವಿವಾದವನ್ನು ವಿಜಯನಗರದ ಅರಸರು ಬಗೆಹರಿಸಿದ ವಿಷಯ ತಿಳಿಯಿತು. ಇದರಿಂದ ಸ್ಫೂರ್ತಿಗೊಂಡು ರಾಜನೀತಿ ಬಗ್ಗೆ ಈ ಲೇಖನವನ್ನು ಬರೆಯಲಾಯಿತು.

ರಾಜ ತನ್ನ ಪ್ರಜೆಗಳನ್ನು ಹೇಗೆ ನಡೆಸಿಕೊಂಡು ಬಂದಿದ್ದ ಎಂಬುದು ಮುಖ್ಯ. ಅಧಿಕಾರಿ, ಮಂತ್ರಿ, ಋಷಿಮುನಿ, ಪರಿಚಾರಕ, ರಾಣಿ, ಬ್ರಾಹ್ಮಣ, ತಂದೆ–ತಾಯಿಗಳೊಂದಿಗೆ ಹೇಗಿರಬೇಕೆಂಬುದು ರಾಜನೀತಿಯ ಲಕ್ಷಣವಾಗಿದೆ.

ಅಧಿಕ ಜ್ಞಾನ ಸಂಪಾದನೆ, ಅಸೂಯೆರಹಿತ, ವಿಮರ್ಶಾಗುಣ, ಯಜ್ಞಯಾಗಾದಿಗಳ ಆಚರಣೆ, ಬ್ರಾಹ್ಮಣರಿಗೆ ದಾನ ಮಾಡುವುದು ರಾಜನ ಲಕ್ಷಣಗಳಾಗಿದ್ದವು.

ರಾಜನಾದವನು ಮಾತಾಪಿತೃಗಳನ್ನು, ಗುರುಗಳನ್ನು ಗೌರವಿಸುತ್ತಿದ್ದ ಉದಾಹರಣೆಗಳಿವೆ. ಎಲ್ಲ ಶಾಸ್ತ್ರ, ಪಂಡಿತನಾಗಿದ್ದ ಮಂತ್ರಿಯಿದ್ದರೆ ರಾಜನ ಕರ್ತವ್ಯ ಸುಲಭವಾಗಿತ್ತು. ರಾಜನೀತಿಯ ಲಕ್ಷಣಗಳೆಂದರೆ

1. ರಾಜನಾದವನು ಜಾಸ್ತಿ ನಿದ್ದೆ ಮಾಡಬಾರದು
2. ಬೆಳಗಿನ ಜಾವ ಬೇಗ ಏಳಬೇಕೆಂಬ ನೀತಿ–ನಿರ್ಬಂಧಗಳಿವೆ
3. ರಾಜ ರಾತ್ರಿ ಮಲಗುವ ಮುನ್ನ ದ್ರವ್ಯಾರ್ಜನೆ ಸಂಪಾದನೆ, ಉಪಾಯ ಕುರಿತು ಯೋಚಿಸಬೇಕು
4. ರಾಜ ಅಥವಾ ಪ್ರಜೆ ಒಬ್ಬನೇ ಕುಳಿತಾಗಲಿ, ಬಹುಜನರೊಡನಾಗಲಿ ಮಂತ್ರಾಲೋಚನೆ ನಡೆಸಬೇಕಾಗುತ್ತದೆ. ಈ ಮಂತ್ರಾಲೋಚನೆ ವಿಷಯವು ದೇಶದಲ್ಲೆಲ್ಲಾ ಹರಡಬೇಕು.
5. ತಾತ, ತಂದೆ ಕಾಲದಿಂದ ವಂಶಪಾರಂಪರ್ಯವಾಗಿ ಬಂದ ಶುದ್ಧರಾದ ಉತ್ತಮ ಮಂತ್ರಿಗಳನ್ನು ಉತ್ತಮ ಕೆಲಸಗಳಿಗೆ ನೇಮಿಸಲಾಗುತ್ತದೆ. ಮಂತ್ರಿಗೆ ಪಾರಂಪರಿಕ ಜ್ಞಾನ, ಅನುಭವ ಇತ್ತು.
6. ಪ್ರಜಾಪೀಡನೆಯನ್ನು ಮಂತ್ರಿಯಾಗಲಿ, ರಾಜನಾಗಲಿ ಮಾಡಬಾರದು
7. ರಾಜನಿಗೆ ಸರ್ವಸಂಗಗಳ ಬಗ್ಗೆ ಎಚ್ಚರಿಕೆ ಇರಬೇಕು
8. ರಾಜನನ್ನು ಯಾರು ಹಿಯಾಳಿಸಬಾರದು
9. ರಾಜ ನೈತಿಕತೆಯನ್ನು ಕಾಪಾಡಿಕೊಳ್ಳಬೇಕು
10. ರಾಜನಿಗೆ ದುಷ್ಟ ಶಿಕ್ಷಣ ಶಿಷ್ಟ ರಕ್ಷಣ ನೀತಿ ಇರಬೇಕು
11. ಗೆದ್ದರೆ ರಾಜ್ಯ/ ಸತ್ತರೆ ಸ್ವರ್ಗ ಎಂಬ ಕಲ್ಪನೆ, ತ್ಯಾಗ, ಬಲಿದಾನಗಳನ್ನು ಸಂಕೇತಿಸುತ್ತದೆ
12. ರಾಜನು ಸಾಕ್ಷಾತ್ ದೇವರೆಂದು ಬಿಂಬಿತವಾಗಿದ್ದು

ರಾಜನೀತಿಯಲ್ಲಿ 18 ಆಡಳಿತ ವಿಭಾಗದ ಅಧಿಕಾರಿಗಳು ಇರುತ್ತಿದ್ದರು. ಇವರಿಗೆ ಹದಿನೆಂಟು ತೀರ್ಥರು ಎಂದು ಕರೆಯುತ್ತಿದ್ದರು. ವಾಲ್ಮೀಕಿ ರಾಮಾಯಣದಲ್ಲಿ ಈ ಸಂಗತಿಗಳು ತಿಳಿದು ಬರುತ್ತವೆ.[1]

1. ಮಂತ್ರಿ	2. ಪುರೋಹಿತ
3. ಯುವರಾಜ	4. ಸೇನಾಧಿಪತಿ
5. ದೌವಾರಿಕ	6. ಅಂತರ್ವಂಶಿಕ
7. ಸೆರೆಮನೆಯ ಲೆಕ್ಕಚಾರ	8. ಭಂಡಾರದ ಅಧಿಕಾರಿ
9. ಕಾರ್ಯನಿಯೋಜಕ	10. ಪ್ರಾಡ್ವಿವಾಕ
11. ಸೇನನಾಯಕ	12. ನಗರಾಧ್ಯಕ್ಷ
13. ಕರ್ಮಾಂತಿಕ	14. ಸಭ್ಯಕ
15. ಧರ್ಮಾಧ್ಯಕ್ಷ	16. ದಂಡಪಾಲ
17.ದುರ್ಗಪಾಲ	18. ರಾಷ್ಟ್ರಾಂತಪಾಲ

ಪ್ರಾಚೀನ ಕಾಲದಿಂದಲೂ ಈ ಹದಿನೆಂಟು ಹುದ್ದೆ, ಕರ್ತವ್ಯ, ನೀತಿ ಬದ್ಧತೆಗಳು ವಿಜಯನಗರ ಕಾಲದಲ್ಲಿ ಹೇಗಿದ್ದವೆಂಬುದನ್ನು ಪರಿಶೀಲಿಸಬಹುದಾಗಿದೆ.

1. ರಾಜ ಶತ್ರು ಸಂಹಾರಕ ಆಗಿದ್ದರೂ ಶತ್ರು ಸೋತು ಮರಳಿಬಂದಾಗ ಅವನನ್ನು ದುರ್ಬಲನೆಂದು ತಿಳಿದು ಪ್ರೀತಿಸಬೇಕು. ಕೃಷ್ಣದೇವರಾಯ ಉದಾಹರಣೆಯಾಗಿದ್ದಾನೆ.
2. ವಿಜಯನಗರದ ರಾಜಧಾನಿ, ನಗರ, ಪಟ್ಟಣ, ಹಳ್ಳಿ, ಬೀದಿ ಇತರೆ ನಾಗರೀಕ ಲಕ್ಷಣಗಳು ಹೇಗಿದ್ದವೆಂಬುದನ್ನು ಪರಿಶೀಲಿಸಬೇಕಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

3. ನಾಸ್ತಿಕ ಬ್ರಾಹ್ಮಣರ ನೇಮಕ ಮತ್ತು ಪ್ರೋತ್ಸಾಹ ಇತ್ತು. ರಾಜ ಪ್ರತ್ಯಕ್ಷವಾಗಿ ಅನುಮಾನ ಪ್ರಮಾಣಗಳನ್ನು ಇವರಿಂದ ನಂಬುತಿದ್ದ.
4. ದುರ್ಬುದ್ಧಿ ಜನರನ್ನು ರಾಜ ಎಚ್ಚರಿಕೆಯಿಂದ ದೂರ ಇಡಬೇಕಾಗಿತ್ತು
5. ರಾಜ ವ್ಯಾಪಾರಿಗಳಿಗೆ ಆಶ್ರಯ ನೀಡುತ್ತಿದ್ದನು. ರಾಜ್ಯದ ಆದಾಯ ಅಧಿಕವಾಗಿರಬೇಕಿತ್ತು. ಆದಾಯ ಜಾಸ್ತಿ, ಖರ್ಚು ಕಡಿಮೆ ಇರಲು ರಾಜನೀತಿಯಾಗಿದೆ.
6. ಬೊಕ್ಕಸದ ಹಣದ ಖರ್ಚು ದೇವತೆಗಳಿಗೆ, ಪಿತೃಗಳಿಗೆ, ಬ್ರಾಹ್ಮಣರಿಗೆ, ಅತಿಥಿಗಳಿಗೆ, ಸೈನಿಕರಿಗೆ, ಮಿತ್ರರಿಗೆ ವಿನಿಯೋಗಿಸುತ್ತಿದ್ದರು.
7. ಸಜ್ಜನ ಕಳ್ಳತನ ಮಾಡಿದರೆ ಧರ್ಮಶಾಸ್ತ್ರ ಪ್ರಮಾಣದಿಂದ ವಿಚಾರಣೆ ನಡೆಸುತ್ತಿದ್ದರು.
8. ಕಳ್ಳತನ ಮಾಡಿದವನನ್ನು ವಿಚಾರಣೆ ಮಾಡದೇ ಕೊಲ್ಲಿಸಬಾರದು
9. ಶ್ರೀಮಂತರು–ಬಡವರ ನಡುವಿನ ವಿವಾದ ಬಗೆಹರಿಸಬೇಕಾಗಿರುವುದು ರಾಜನ ಕರ್ತವ್ಯ.
10. ರಾಜನು ವೃದ್ದರು, ಬಾಲಕರು ಮತ್ತು ಮುಖ್ಯ ವೈದ್ಯರನ್ನು ದಾನ–ಧರ್ಮಗಳಿಂದ ಒಳ್ಳೆಯ ನಡೆ–ನುಡಿಗಳಿಂದ ಕಾಣಬೇಕು.
11. ಗುರುಗಳು, ವೃದ್ದರೂ, ತಪಸ್ವಿಗಳೂ, ದೇವತೆಗಳು, ಅತಿಥಿಗಳು ಮತ್ತು ಬ್ರಾಹ್ಮಣರು ಸೇರಿ ನಾಲ್ಕು ರಸ್ತೆ ಸೇರುವ ಜಾಗದಲ್ಲಿ ಅಶ್ವತ್ಥ ವೃಕ್ಷವನ್ನು ನೆಟ್ಟು ನಮಸ್ಕರಿಸಬೇಕು.
12. ಕಾಲಚಕ್ರದಲ್ಲಿ ರಾಜನಾದವನು ಧರ್ಮ, ಅರ್ಥ, ಕಾಮವನ್ನು ವಿಭಾಗ ಮಾಡಿ ಪೂರೈಸಿಕೊಳ್ಳಬೇಕು
13. ಹದಿನಾಲ್ಕು ವಿಧದ ರಾಜದ್ರೋಹಗಳನ್ನು ರಾಜ ಕೈಬಿಡಬೇಕಾಗಿತ್ತು. ಹಣದಿಂದ ಧರ್ಮ, ಸುಖ, ಆಸೆ ಮತ್ತು ಕಾಮದಿಂದ ನೋಡಬಾರದು. ಬ್ರಾಹ್ಮಣ, ಪಟ್ಟಣಿಗ, ಗ್ರಾಮಾಂತರ ನಿವಾಸಿಗಳನ್ನು ವಿಚಾರಿಸಬೇಕು. ರಾಜ ವಿವೇಚನೆ ಇಲ್ಲದೆ ಕೆಲಸ ಮಾಡಬಾರದು. ಅಸಹ್ಯ, ಅಲಸ್ಯ, ಸುಳ್ಳು, ನಾಸ್ತಿಕತೆ, ಕೋಪ, ಅಜಾಗರೂಕತೆ, ವಿಧಾನ ಕೆಲಸ ಬಾವಿಗಳನ್ನು ತೋಡಿಸದೇ ಇರುವುದು ಅಲಸ್ಯ ಪಂಚೇಂದ್ರಿಯಗಳಿಗೆ ದಾಸನಾಗಿರುವುದು, ಆರ್ಥಿಕ ವಿಚಾರಗಳನ್ನು ತಾನೊಬ್ಬನೇ ಯೋಚನೆ ಮಾಡುವುದು, ಲೋಕವ್ಯವಹಾರ ಇಲ್ಲದವರೊಡನೆ ಸಮಾಲೋಚನೆ ಮಾಡಬಾರದು. ಕೆಲವು ವಿಚಾರಗಳನ್ನು ಗೌಪ್ಯವಾಗಿಡಬೇಕು. ಎಲ್ಲರಿಗೂ ಎದ್ದು ಗೌರವಿಸಬೇಕು.
14. ರಾಜನಾದವನು ದಶವರ್ಗಗಳಾದ ಬೇಟೆ, ಪಗಡೆ, ಹಗಲುನಿದ್ದೆ, ನಿಂದೆ, ಸ್ತ್ರೀಸಂಗ, ಸುರಪಾನ, ನೃತ್ಯ, ಗೀತ, ವಾದ್ಯ, ವ್ಯರ್ಥವಾಗಿ ಅಲೆದಾಟ ಕೈಬಿಡಬೇಕು.
15. ಪಂಚವರ್ಗಗಳಾದ ಜಲ, ಪರ್ವತ, ಅರಣ್ಯ, ವೃಕ್ಷ, ಶಸ್ತ್ರ, ಈ ಐದು ದುರ್ಗಗಳನ್ನು ರಕ್ಷಿಸಬೇಕು. ರಕ್ತ ಸಂಬಂಧ ಮಿತ್ರರನ್ನು, ಆಪತ್ತಿನಲ್ಲಿರುವವರನ್ನು ರಕ್ಷಿಸಬೇಕು. ರಾಜ, ಮಂತ್ರಿ, ರಾಷ್ಟ್ರ, ದುರ್ಗ, ಕೋಶ, ಸೈನ್ಯ, ಮಿತ್ರರ ಬಗ್ಗೆ ಆಸಕ್ತಿ ಇರಬೇಕು.

16. ಕೃಷಿ, ವಾಣಿಜ್ಯ, ಸೇತುವೆ, ಆನೆ ಸಂಗ್ರಹ, ಗಣಿಗಳ ಕೆಲಸ, ಕಂದಾಯ ಶೂನ್ಯ ಪ್ರದೇಶವನ್ನು ವಾಸಯೋಗ್ಯವಾಗಿ ಮಾಡುವುದು ರಾಜನ ಜವಾಬ್ದಾರಿಯಾಗಿತ್ತು.
17. ರಾಜ ವೇದ, ಕೃಷಿ, ಗೋರಕ್ಷೆ, ವಾಣಿಜ್ಯ ದಂಡನೀತಿ, ಅಥವಾ ಯುದ್ಧಶಾಸ್ತ್ರ ಅರಿತಿರಬೇಕು. ಅಗ್ನಿ, ಪ್ರವಾಹ, ವ್ಯಾಧಿ, ಭೂಕಂಪ ಅಲ್ಲದೇ ದ್ರೋಹ, ಕಳ್ಳಕಾಕರು, ಶತೃಗಳು, ರಾಜ ಬಂದುಗಳು, ರಾಜನ ಲೋಭಗಳಿಂದಾಗುವ ಪರಿಣಾಮಗಳನ್ನು ರಾಜ ಎದುರಿಸಬೇಕು.
18. ರಾಜ ಮೂರು ಅಥವಾ ನಾಲ್ಕು ಜನ ಮಂತ್ರಿಗಳೊಡನೆ, ಪ್ರತ್ಯೇಕ ರಹಸ್ಯ ಸಂಭಾಷಣೆ ಮಾಡಬೇಕು. ಜನರು, ಸ್ತ್ರೀಯರು, ಪರಿವಾರದವರು, ತೃಪ್ತರಾಗಿರಬೇಕೆಂದು ತಿಳಿಯಬೇಕು.
19. ರುಚಿಕರವಾದ ಮೃಷ್ಟಾನ್ನ ಬೋಜನವನ್ನು ರಾಜನೊಬ್ಬನೇ ಮಾಡಬಾರದು. ಇತರರಿಗೂ ಕೊಡಬೇಕು. ಅಸಮಾನತೆ ಹೋಗಲಾಡಿಸಿ ಪ್ರತಿಯೊಬ್ಬರೂ ಸ್ವೇಚ್ಛೆಯಿಂದ ಬದುಕುವ ಹಕ್ಕು ಇದೆ ಎಂಬುದನ್ನು ರಾಜನೀತಿ ತಿಳಿಸುತ್ತದೆ.

ವಿಜಯನಗರ ಕಾಲದ ರಾಜನೀತಿಯ ಪ್ರಸ್ತುತತೆ

1. ವಿಜಯನಗರ ಪೂರ್ವಕಾಲೀನ ರಾಜನೀತಿ
2. ವಿಜಯನಗರ ಕಾಲದ ರಾಜನೀತಿ ಮತ್ತು
3. ವಿಜಯನಗರೋತ್ತರ ಕಾಲದ ರಾಜನೀತಿಯ ಪ್ರಕ್ರಿಯೆಗಳನ್ನು ಅವಲೋಕಿಸಬಹುದಾಗಿದೆ.

ವಿಜಯನಗರ ಪೂರ್ವದಲ್ಲಿ ಬಾದಾಮಿ ಮತ್ತು ಕಲ್ಯಾಣಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ರಾಜ್ಯಾಳ್ವಿಕೆ ಮಾಡುವಾಗ ಅನುಸರಿಸಿದ ರಾಜನೀತಿಗೂ ಇವರಿಗೂ ವ್ಯತ್ಯಾಸವಿತ್ತು. ಹಿಂದೆ ಇದ್ದ ಶುಕ್ರನೀತಿಸಾರ, ಚಾಣಕ್ಯ, ಕೌಟಿಲ್ಯನ ಅರ್ಥಶಾಸ್ತ್ರದಂತೆ ರಾಜನೀತಿ ರೂಪಿಸಬೇಕಾಗಿತ್ತು.

ವಿಜಯನಗರ ಕಾಲದ ರಾಜನೀತಿ ವೈದಿಕಶಾಹಿ ಹಾಗೂ ವೈಷ್ಣವ ಧರ್ಮದ ಪ್ರಭಾವದಿಂದ ಕೂಡಿತ್ತು. ಹೆಚ್ಚಾಗಿ ಪುರೋಹಿತಶಾಹಿಯನ್ನು ಓಲೈಸುವ ಪರಿ ಎದ್ದು ಕಾಣುತ್ತದೆ.

ರಾಜನೀತಿಯಲ್ಲಿ ಸ್ನೇಹ, ವಿವಾಹವು ಪ್ರಮುಖ ಕಾರಣವಾಗಿದೆ. ಕ್ರಿ.ಶ 1518 ರಲ್ಲಿ ಗಜಪತಿಯ ರಾಜ್ಯಧಾನಿ ಕಟಕನ್ನು ಮುತ್ತಿಗೆ ಹಾಕಿ ಪ್ರತಾಪರುದ್ರನೊಂದಿಗೆ ಒಪ್ಪಂದ ಮಾಡಿಕೊಂಡು ತನ್ನ ಮಗಳು ಜನನ್ನೋಹಿನಿಯನ್ನು ಕೃಷ್ಣದೇವರಾಯನಿಗೆ ಮದುವೆ ಮಾಡಿಕೊಟ್ಟರು ಇಬ್ಬರಲ್ಲೂ ಮೈತ್ರಿ, ಸ್ನೇಹಭಾವ ಬೆಳೆಯಿತು.(ಕೃ.ದೇ.2014, ಪು.25)

ವಿಜಯಪುರದ ಮೇಲೆ ದಾಳಿ ಮಾಡಿ ಸುಲ್ತಾನನ್ನು ಸೋಲಿಸಿ ರಾಯಚೂರನ್ನು ಪಡೆದ ಕೃಷ್ಣದೇವರಾಯ (1523) ಗುಲ್ಬರ್ಗಾದವರೆಗೂ ಯುದ್ಧಮಾಡಿದ ಗೆದ್ದ ರಾಜ್ಯವನ್ನು ಮರಳಿ ಸುಲ್ತಾನನಿಗೆ ಬಿಟ್ಟುಕೊಟ್ಟು ಅದಕ್ಕೆ 'ಯವನರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದು ಪಡೆದನು.

ಕೃಷ್ಣದೇವರಾಯನ ಪೂರ್ವದ ಅರಸರು ಅನುಸರಿಸಿದ ರಾಜನೀತಿಗೂ ಮತ್ತು ರಾಯನಿಗೂ ವ್ಯತ್ಯಾಸವಿದೆ. ರಾಯನ ನಂತರದ ಅರಸರು ರಾಜನೀತಿಯ ಸಡಲಿಕೆಯಿಂದ ಬಳಲಿ ರಾಜಕೀಯ ಅಸ್ಥಿರತೆ ಉಂಟಾಗಲು ಕಾರಣವಾಯಿತು.[3] ಇಲ್ಲಿ ರಾಜನೀತಿಯ ಲಕ್ಷಣಗಳು ಬುಡಮೇಲಾಗುವ ಸಾಧ್ಯತೆಗಳಿವೆ. 1. ಏಕಪತ್ನಿತ್ವ 2. ವಂಶಪಾರಂಪರ್ಯ ರಾಜಾಳ್ವಿಕೆ 3. ಪುತ್ರಸಂತಾನ 4. ಪಟ್ಟಾಭಿಷೇಕ 5. ಅಧಿಕಾರ ಹಂಚಿಕೆ 6. ಸ್ತ್ರೀಪುರುಷ ತಾರತಮ್ಯತೆ 7. ಅವಿಭಕ್ತ ಕುಟುಂಬ 8. ಪಿತೃ–ಮಾತೃ ವಾಖ್ಯೆಗಳ ಪರಿಪಾಲನೆ 9. ದಾನಧರ್ಮ 10. ವಿರೋಧಿಗಳ ಪೀಡನೆ 11. ಅಮರನಾಯಕರ ನೇಮಕ – ಕರ್ತವ್ಯಗಳು 12. ವರ್ಣಾಶ್ರಮ ಧರ್ಮದ ಪರಿಪಾಲನೆ ಇವು ವಿಜಯನಗರ ಕಾಲದ ರಾಜನೀತಿಯ ಲಕ್ಷಣಗಳಾಗಿವೆ. ಸಂಬಂಧಿದಲ್ಲಿಯೇ ವೈವಾಹಿಕತೆ, ಅಧಿಕಾರ ಹಂಚಿಕೆಯಾಗಿದ್ದು ವಿಜಯನಗರ ಸಾಮ್ರಾಜ್ಯದಲ್ಲಿ ಸಾಮಾನ್ಯವಾಗಿತ್ತು.

ಕೃಷ್ಣದೇವರಾಯ ಕೊನೆಗಾಲದಲ್ಲಿ ತನ್ನ ಮಗ ತಿರುಮಲ ಯುವರಾಜನಾಗಿ ಮಾಡಿದ. ಇವನ ಮಂತ್ರಿ ಸಾಳುವ ಸಾಳುವ ತಿಮ್ಮರಸನ ಮಗ ತಿಮ್ಮ ದಂಡನಾಯಕ ವಿಷ ಪ್ರಯೋಗ ಮಾಡಿದ್ದರಿಂದ ಈ ಬಾಲಕ ಮೃತನಾದ ಕೊಚ್ಚಿಗೆದ್ದ ರಾಯ ತಂದೆ ಮಕ್ಕಳಿಬ್ಬರನ್ನು ಸೆರೆಗೆ ಹಾರುತ್ತಾನೆ. ತಿಮ್ಮ ಸೆರೆಯಿಂದ ತಪ್ಪಿಸಿಕೊಂಡು ಗುತ್ತಿಗೆ ದಂಗೆ ಏಳುತ್ತಾರೆ ಎಂದು ನ್ಯೂನಿಜ್ ಹೇಳುತ್ತಾರೆ.

ವಿಜಯನಗರದ ಕೃಷ್ಣದೇವರಾಯನ ಕಾಲ ಎಂಬ ಲೇಖನವನ್ನು ಸಿ.ವಿ. ರಂಗಸ್ವಾಮಿ ಬರೆದಿದ್ದಾರೆ. ಇವರು ಮಹಾಭಾರತ ಅರ್ಥಶಾಸ್ತ್ರ, ಧರ್ಮಶಾಸ್ತ್ರ ಗ್ರಂಥಗಳಲ್ಲಿ ರಾಜನೀತಿಯ ಬಗೆಗೆ ಕಾಲ ಕಾಲಕ್ಕೆ ವಿಧಿಸಿದ ನಿಯಮಗಳಿಗೆ ಅನುಸಾರವಾಗಿ ಕೃಷ್ಣದೇವರಾಯನು ಉಚ್ಚ ಆದರ್ಶಗಳಿಂದ ಕೂಡಿದ ರಾಜ ಜೀವನ ನಡೆಸಿದನು (ಕೃಷ್ಣದೇವರಾಯ (ಸಂ), ಪು, 28)

ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ ಜನ ಸಾಮಾನ್ಯರಿಗೆ ಅಧಿಕಾರದ ಹಂಚಿಕೆಯಾದ ಬಗೆಯನ್ನು ಗಮನಿಸಬಹುದು. ಸೌಕರ್ಯಕ್ಕೋಸ್ಕರ ಸಾಮ್ರಾಜ್ಯವನ್ನು ಪ್ರಾಂತ್ಯ, ಮಂಡಲ, ಸೀಮಾ, ಸ್ಥಳ ಎಂದು ವಿಭಾಗಿಸಲಾಗಿತ್ತು.

ವಿಜಯನಗರ ಕಾಲದ ನ್ಯಾಯಾಡಳಿತ ಕುರಿತು ಕೆ.ಎ. ನೀಲಕಂಠಶಾಸ್ತ್ರಿ ಹೀಗೆ ಹೇಳುತ್ತಾರೆ.[4] : Justice was administreted by a hierarch of courts the emperor's sabha being highest appellate authority. some of these courts appear to have been peripatetic being held wherever the officers concerned Were encamped. The smriti of YAJNAVALKYA and Madhava's great commentary on Parasara's code commonded special authority in the decision of doubtful legle points, minor offences and violation of caste and trade rules were dealt with in the first instance by village courts and caste and geuild organizations and perhaps seldom found their way to the courts of the crown. when human evidence faild trial ordeal was not unknow. By modern standards punishments were harsh and even barbaraous including as they did in extreme cases mutilation impalement and being thrown to the elephants.

1. ಗೂಢಾಚಾರ ಪದ್ದತಿ
2. ನರಸನಾಯಕ + ನಾಗಲಾದೇವಿ + ಓಬಾಂಬೆ + ಗೌರಾಂಬಿಕೆ
3. ಕೃಷ್ಣದೇವರಾಯ + ತಿರುಮಲಾದೇವಿ+ಚಿನ್ನಾದೇವಿ+ಜಗನ್ಮೋಹಿನಿ
   ತಿರುಮಲ ಕೃಷ್ಣದೇವರಾಯ ತಿರುಮಲಾಂಬೆ–ರಾಮರಾಯ ತಮ್ಮ
   (ಆರು ತಿಂಗಳೊಳಗೆ ಸತ್ತ) (18 ತಿಂಗಳೊಳಗೆ ಸತ್ತ) ವೆಂಗಳಾಂಬೆ–ತಿರುಮಲಾಂಬೆ
4. ಕೃಷ್ಣದೇವರಾಯನ ಮಗ ಸಿಂಹಾಸನವೇರಿ ಆರು ತಿಂಗಳಲ್ಲಿ ಅಸುನೀಗಿದ್ದ. ಇದಕ್ಕೆ ಕಾರಣ ಕೃಷ್ಣದೇವರಾಯನ ಮಂತ್ರಿ ತಿಮ್ಮರಸ ಆತನ ಮಗ ತಿಮ್ಮದಂಡನಾಯಕ ವಿಷ ಉಣಿಸಿದ್ದ. ಸಿಟ್ಟಿಗೆದ್ದ ಕೃಷ್ಣದೇವರಾಯ ತಿಮ್ಮರಸ ಮತ್ತು ಅವನ ಮಕ್ಕಳಾದ ತಿಮ್ಮದಂಡನಾಯಕ ಹಾಗೂ ಗೋವಿಂದರಾಜ ಮೂವರನ್ನು ಸೆರೆಮನೆಗೆ ಹಾಕಿದ. ತಿಮ್ಮರಸನ ಕಣ್ಣನ್ನು ಕೀಳಿಸಲು, ಸತ್ತುಹೋದ. ತಿಮ್ಮದಂಡನಾಯಕ, ಗೋವಿಂದರಾಜ ಅನೇಕ ವರ್ಷ ಸೆರೆಮನೆಯಲ್ಲಿದ್ದರು (ಇದಕ್ಕೆ ಖಚಿತ ಆಧಾರವಿಲ್ಲ 1524)
5. 16.02.1487 ಕೃಷ್ಣದೇವರಾಯನ ಜನನ
6. 27.01.1519 ಕೃಷ್ಣದೇವರಾಯನ ಅಮುಕ್ತ ಮಾಲ್ಯದ ರಚನೆ
7. 20.11.1529 ಕಾಳಹಸ್ತಿಯಲ್ಲಿ ಅಚ್ಯುತರಾಯನ ಪಟ್ಟಾಭಿಷೇಕ

8. 1535 ರಾಯವಾಚಕಂ ರಚನೆ
9. ವಿದೇಶಿ ನಿಯೋಗಿಗಳನ್ನು ಪ್ರೀತಿ ಗೌರವಗಳಿಂದ ಕೃಷ್ಣದೇವರಾಯ ಕಾಣುತ್ತಿದ್ದ. ಉಡುಗೊರೆ, ಸನ್ಮಾನಗಳನ್ನು ಅವರಿಗೆ ಮಾಡುತ್ತಿದ್ದ.
10. ಕೃಷ್ಣದೇವರಾಯನ ಕಾಲದ ಬೇಹಿನವರು ಮತ್ತು ಕಾಹಿನವರು ರಾಜನೀತಿಯಲ್ಲಿ ಪಾತ್ರವಹಿಸಿದ್ದರು.[5]
11. ಕುಹುಯೋಗ (ಕುಹುಯೋಗ ಬಂದಾಗ ರಾಜ ಮರಣ ಹೊಂದುತ್ತಿದ್ದರೆಂಬ ನಂಬಿಕೆ) ವ್ಯಾಸರಾಯರು ಅಮವಾಸೆ ಕಳೆದು ಶುಕ್ಲಪಕ್ಷ ಪ್ರಾರಂಭ– 12ನೇ ಸ್ಥಾನದಲ್ಲಿ ನಾಲ್ಕು ಗ್ರಹಗಳು ಒಟ್ಟಿಗೆ ಸೇರಿ ಚಾಂಡಾಲತ್ವವನ್ನು ಪಡೆದು ಕ್ರೂರವಾಗಿ ದುಶ್ಫಲವನ್ನು ಕೊಡುವುದಕ್ಕೆ ಕುಹುಯೋಗ ಎನ್ನಬಹುದಾಗಿದೆ. ಕೃಷ್ಣದೇವರಾಯನಿಗೆ ಒದಗಿದ ಕುಹುಯೋಗವನ್ನು ವ್ಯಾಸರಾಯರು ಒಂದುವರೆ ಗಂಟೆ ಕಾಲ ವಿಜಯನಗರ ಸಿಂಹಾಸನವನ್ನೇರಿ ಸಾಮ್ರಾಜ್ಯ ಪರಿಪಾಲಿ ಹೊರಗೆ ಬಂದ ದೃಷ್ಟಗ್ರಹ ಭಾದೆಯನ್ನು ವಿವಾರಿಸಿ, ಮರಳಿ ಅವರಿಗೆ ಸಿಂಹಾಸನ ಹಿಂತಿರುಗಿಸಿದರು ಎಂದು ಹೇಳುತ್ತಾರೆ. ಇದರಿಂದ ವ್ಯಾಸರಾಯರಿಗೆ ವ್ಯಾಸ ರಾಜರೆಂದು ಕರೆದರು.

ಕೃಷ್ಣದೇವರಾಯನ ದಿನಚರಿ ಅಮುಕ್ತ ಮಾಲ್ಯದ ಎಂಬ ಲೇಖನದಲ್ಲಿ ಡಾ. ನಿರುಪಮ ಅವರು ಯುದ್ದಕ್ಕೆ ಹೋಗುವಾಗ ತಳವಾರರು ಮುಂದೆ ಇರುತ್ತಿದ್ದರು ಎಂದಿದ್ದಾರೆ.[6] ರಾಜನಗರಿಯಲ್ಲಿ ಪರಿಮಳ ದ್ರವ್ಯದಿಂದ ಅಂಗಮರ್ಧನ ಮಾಡಿಕೊಂಡು ಬಿಸಿನೀರಿನಲ್ಲಿ ಸ್ನಾನ ಮಾಡಿ ಬಿಳಿಯ ದೋತ್ರ ಉಟ್ಟು ಮುತ್ತಿನ ಹಾರ ಧರಿಸುತ್ತಿದ್ದರು. ಸಣ್ಣಕ್ಕಿ ಅನ್ನ, ಬೇಟೆಯಾಡಿ ತಂದ ಅಡವಿ ಮೃಗ, ಪಕ್ಷಿಗಳ ಮಾಂಸದ ಅಡಿಗೆಯನ್ನು ಆಗತಾನೆ ಕಾಸಿದ ಬೆಣ್ಣೆಯಿಂದ ಊಟ ಮಾಡುತ್ತಿದ್ದರು.

ಕೃಷ್ಣದೇವರಾಯ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ನೀತಿಶಾಸ್ತ್ರ ಅಭ್ಯಾಸ ಮಾಡಿ ವಿಶಾಲ ಹೃದಯ , ದೂರದೃಷ್ಠಿ ಬಹುಮುಖ ಪ್ರತಿಭೆ, ಹೊಂದಿದ್ದರೂ ತಾನೇ ರೂಪಿಸಿದ ರಾಜನೀತಿಯನ್ನು ರಾಯ ಅನುಸರಿಸಿದ್ದನು. ರಾಯ ತನ್ನ ಅಕ್ಕ ಪಕ್ಕದ 50 ಕ್ಕೂ ಹೆಚ್ಚು ರಾಜ್ಯಗಳ ಮೇಲೆ ಗೂಢಚಾರಿಗಳನ್ನು ಕಳುಹಿಸಿದ್ದ.

ವಿಜಯನಗರ ಕಾಲದ ರಾಜನೀತಿ ಮಧ್ಯಕಾಲೀನ ಭಾರತದ ರಾಜನೀತಿಯ ಲಕ್ಷಣಗಳನ್ನು ಹೊಂದಿತ್ತು. ಹೆಚ್ಚಾಗಿ ಚಾಣಕ್ಯ, ಶುಕ್ರನೀತಿಸಾರ ವೈದಿಕ ಹಾಗೂ ಪುರೋಹಿತಶಾಹಿಯಿಂದ ಕೂಡಿದ್ದು ರಾ. ರಾಜನೀತಿ, ಕೃಷ್ಣದೇವರಾಯನ ಕಾಲಕ್ಕೆ ಬದಲಾಯಿತು. ಆನಂತರ ಇನ್ನೆಷ್ಟು ಪರಿಷ್ಕರಣೆಗೊಳಿಸಲಾಯಿತು. ಚರಿತ್ರೆ ಮತ್ತು ರಾಜಕೀಯ ಕ್ಷೇತ್ರಗಳ ಲಕ್ಷಣಗಳು ರಾಜನೀತಿಯಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದವು.

ಸಂಪ್ರದಾಯಕ್ಕೆ ಗೌರವ ಇತ್ತು. ರಾಯ ಯುದ್ಧಕ್ಕೆ ಹೊರಡುವ ಮುನ್ನ ಶಕುನ, ಶುಭ–ಅಶುಭ ಫಲ ಮೂಹೂರ್ತ ತಿಳಿದುಕೊಂಡು ಹೋಗುತ್ತಿದ್ದರು.[7]

ಸಂಜಯನೀತಿ, ವಿಧುರನೀತಿ, ಚಾಣಕ್ಯನೀತಿ ಭತೃಹರಿಯ ಶತಕಗಳನ್ನು ಓದುತ್ತಿದ್ದನಂತೆ.[8]

ಸಭಾ, ಸಮಿತಿಗಳು ಕಾರ್ಯ ಮಾಡುತ್ತಿದ್ದರು. ರಾಜ ಸೀಮೆ ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ತಾನೇ ವಿಚಾರಣೆ ನಡೆಸಿ ತೀರ್ಪು ಕೊಡುತ್ತಿದ್ದ.

ಪ್ರೊ. ಬಿ. ರಾಮಸ್ವಾಮಿಯವರು ಶ್ರೀಕೃಷ್ಣದೇವರಾಯನ ಆಮುಕ್ತ ಮಾಲ್ಯದದಲ್ಲಿ ರಾಜನೀತಿ ಎಂಬ ಲೇಖನ ಪ್ರಕಟಿಸಿದ್ದಾರೆ.(ಕೃಷ್ಣದೇವರಾಯ ಪುಟ–240)

ಶ್ರೀಕೃಷ್ಣದೇವರಾಯನ ದಿನಚರಿ ರಚಿಸಿದವರು ಮುಕ್ಕಂ ತಿಮ್ಮಯ್ಯ ಮತ್ತು ಮಾದಯ್ಯನವರ ಮಲ್ಲಯ್ಯ ಇವರ ಬರಹಗಳಿಂದ ರಾಜನೀತಿಯ ಪ್ರಕ್ರಿಯೆಗಳು ತಿಳಿದುಬರುತ್ತವೆ.

ಅಮುಕ್ತ ಮಾಲ್ಯದದಲ್ಲಿ ರಾಜನೀತಿಯಲ್ಲಿ ರಾಜನ ದಿನಚರಿ ಬಗ್ಗೆ ವಿವರಗಳನ್ನು ಹೀಗೆ ತಿಳಿಸಲಾಗಿದೆ.[9]

1. ಬೆಳಗ್ಗೆ ಬ್ರಾಹ್ಮಣರ ದರ್ಶನ ಮಾಡಬೇಕು
2. ನಂತರ ಮಂತ್ರಿ–ಸಾಮಂತರೊಡನೆ ಧನಾರ್ಜನಯುಕ್ತರಾದ ಶ್ಯಾನುಭೋಗರೊಂದಿಗೆ ಗುಪ್ತಸಮಾಲೋಚನೆ–

ಆಯವ್ಯಯದ ಬಗ್ಗೆ ಮಾತಾಡುವುದು

3. ವ್ಯಾಯಾಮ, ಸ್ನಾನ, ಬೇಟೆಯಿಂದ ತಂದ ಪ್ರಾಣಿಮಾಂಸ ಸೇವನೆ
4. ಮದ್ಯಾಹ್ನ ದೇವರ ಪೂಜೆ/ದೇವಾರ್ಚನೆ–ಹಿರಿಯರು ಧರ್ಮಾಧಿಕಾರಿಗಳೊಂದಿಗೆ ಸನ್ಯಾಸಿಗಳೊಂದಿಗೆ ಚರ್ಚೆ. ಭೋಜನ ನಂತರ ವಿಧೂಷಕರೊಂದಿಗೆ ವಿನೋದ ಕವಿಗಳೊಂದಿಗೆ ಸಲ್ಲಾಪ ನಂತರ ಸಂಗೀತ, ನೃತ್ಯ, ವಿನೋದ, ರಾತ್ರಿ ಪ್ರೇಯಸಿಯರೊಂದಿಗೆ ಸಲ್ಲಾಪವನ್ನು ನಡೆಸಿ ಸುಖವಾಗಿ ನಿದ್ರಿಸಬೇಕು.
5. ರಾಜನು ಜ್ಯೋತಿಷಿ, ಪಂಡಿತರು, ಕವಿಪುಂಗವರು, ಪುರೋಹಿತರ ಹಿತವನ್ನು ಬಯಸುತ್ತಾರೆ.
6. ಅಪಹರಿಸಿದ ರಾಜ್ಯದ ಹಣವನ್ನು ಮರಳಿಸಲು ಪ್ರಯತ್ನಿಸಬೇಕು
7. ವೈಷ್ಣವರಿಗೆ ಧನ ಕನಕಾದಿಗಳನ್ನು ದಾನವಾಗಿತ್ತು/ಪಿತೃಗಳಿಗೆ ಉತ್ತಮವಾಗಲೆಂದು ಹಾರೈಸುತ್ತಿದ್ದರು.
8. ರಾಜ ಅಪಾತ್ರರಿಗೆ, ಅಧಮರಿಗೆ ಶ್ರಾದ್ಧದ ಫಲವನ್ನು ಕೊಡಬಾರದು
9. ಶೋಡಷಾದಿ ಮಹಾದಾನಗಳು ಬ್ರಾಹ್ಮಣರ ಪೋಷಣೆಗಳಿಗೂ ಮಾಡಬೇಕು
10. ರಾಜ ಭೋಜನ ಒಳ್ಳೆಯದಿರಬೇಕು ಧರ್ಮಾರ್ಥಕಾಮಗಳಿಗೆ ರಾಜನು ಹಣವನ್ನು ಸಮವಾಗಿ ಖರ್ಚುಮಾಡಬೇಕು
11. ಪಾಪನಿವಾರಣೆಗೆ ನ್ಯಾಯಾನ್ಯಾಯಗಳ ವೀಕ್ಷಣೆ, ಶರಣಾಗತರ ರಕ್ಷಣೆ ಆಗಬೇಕಿತ್ತು.
12. ಕೃಷ್ಣದೇವರಾಯನ ರಾಜನೀತಿ ಯಮುನಾಚಾರ್ಯರು ತನ್ನ ಮಗನಿಗೆ ಉಪದೇಶಿಸಿದ ಹಾಗೆಯೇ ಮಾಡಬೇಕು. ತಾವು ಭೋಗಗಳನ್ನು ತ್ಯಜಿಸಿ ಸನ್ಯಾಸಿಯಾಗಿ ತನ್ನ ಕುಮಾರರಿಗೆ ಪಟ್ಟಕಟ್ಟುವ ರಾಜನೀತಿಯಲ್ಲಿ ಉಪದೇಶಿಸಲಾಗಿದೆ.
13. ಕೃಷ್ಣದೇವರಾಯನ ರಾಜನೀತಿಯನ್ನು ಪಾಲಿಸಿದನು/ಶುಕ್ರನೀತಿಸಾರ ಮತ್ತು ಚಾಣಕ್ಯನ ಅರ್ಥಶಾಸ್ತ್ರದಿಂದ ಗ್ರಹಿಸಬೇಕಾಗಿದೆ./ ಮಹಾಭಾರತದ ಉದ್ಯೋಗಪರ್ವದಲ್ಲಿ ಶ್ರೀಕೃಷ್ಣನು ಕೌರವ ಪಾಂಡವರಿಗೆ ಹೇಳುವ ರಾಜನೀತಿಯ ಬಹು ಪ್ರಾಮುಖ್ಯತೆಯಿಂದ ಕೂಡಿದೆ.

ರಾಜ ಸದಾ ಪ್ರಜಾ ರಕ್ಷಣೆಯಲ್ಲಿರಬೇಕು, ಯಾವ ಕಾರಣಕ್ಕೂ ಬೇಸರ ಪಡಬಾರದು, ತೊಂದರೆ, ವಿಪತ್ತಿಗೊಳಗಾದವರಿಗೆ ಪರಿಹಾರ ಕೊಡಲು ದುರ್ಜನರನ್ನು ನೇಮಿಸಬಾರದು. ರಾಜನ ಶ್ರೇಯಸ್ಸನ್ನು ಪ್ರಜೆಗಳು ಬಯಸುತ್ತಾರೆ. ರಾಜನು ಪ್ರಜಾಭಿಪ್ರಾಯವನ್ನು ಪ್ರಜೆಗಳು ಗೌರವಿಸುತ್ತಾರೆ. ರಾಜಾಜ್ಞೆಗೆ ಎಲ್ಲರೂ ಬದ್ದರಾಗಿರಬೇಕಿತ್ತು. ದಂಡನೆಯು ಲೋಕ ವ್ಯವಹಾರಕ್ಕೆ ಸೀಮಿತವಾಗಿತ್ತು.

ಮರದ ಮೇಲೆ ಕರಡಿ ನಿದ್ರಿಸುವಂತೆ. ಒಂದೇ ಕಣ್ಣಿನಿಂದ ರಾಜ ನಿದ್ರಿಸುತ್ತಾ ಇನ್ನೊಂದು ಕಣ್ಣಿನಿಂದ ರಾಜ್ಯದ ಆಗುಹೋಗುಗಳನ್ನು ಶತೃ ಕಳ್ಳರನ್ನು ನೋಡಬೇಕಿತ್ತು. ಸತಿಯನ್ನು ಹೊಂದಿದ್ದರೂ ಬ್ರಹ್ಮಚಾರಿಯಾಗಿ, ಉಂಡುವಾಸ ವಾಸಿಯಾಗಿ ಸೋತರೂ ಗೆದ್ದವನಂತೆ, ಗೆದ್ದರೂ ಸೋತವನಂತೆ, ಖರ್ಚು ಮಾಡಿದರು ಶ್ರೀಮಂತನಂತೆ, ರಾಜ ತನ್ನ ದೇಹದ ಆರೋಗ್ಯವನ್ನು ಸಮಚಿತ್ತವಾಗಿಟ್ಟುಕೊಳ್ಳಬೇಕಿತ್ತು. ರಾಜ ಚಾಡಿ ಮಾತುಗಳನ್ನು ನಂಬದೇ ವಿಮರ್ಶೆಗೊಳಪಡಿಸಬೇಕು. ನೆರೆಯ ರಾಜ ಸ್ವಯಂಕೃತ ಅಪರಾದಗಳಿಂದ ವಿನಾಶಹೊಂದುತ್ತಿದ್ದರೆಂದು ಹೇಳಬಹುದು. ರಾಣಿವಾಸದವರನ್ನು ತವರ ಮನೆಯಲ್ಲಿರುವಂತೆ ನೆಮ್ಮಂದಿಯಿಂದಿರಬೇಕು. ಬೇರೆ ಬೇರೆ ರಾಜ್ಯಗಳಲ್ಲಿ ರಹಸ್ಯಗಳನ್ನು ತನ್ನ ಗೂಢಚಾರಿಗಳ ಮೂಲಕ (ನಿಯೋಗ) ರಾಜ ತಿಳಿಯಬೇಕಿತ್ತು. ರಾಜ ಕೃಷಿ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಬೇಕು.

ರಾಜನೀತಿಯ ಲಕ್ಷಣಗಳನ್ನು ಹೀಗೆ ಪಟ್ಟಿಮಾಡಬಹುದಾಗಿದೆ.

1. ಕಾಡುಜನರಾದ ಬೇಡರು, ಚೆಂಚರು, ಗೊಲ್ಲರು, ಭಿಲ್ಲರಿಗೆ, ಕಾಡಿನಲ್ಲಿ ನೆಲೆಸಲು ರಾಜನ ಆಜ್ಞೆ ಇತ್ತು.
2. ದೂರುಗಳ ಪತ್ರವನ್ನು ಬ್ರಾಹ್ಮಣರಿಗೆ ಕೊಡಬೇಕು
3. ಕೆಟ್ಟವರನ್ನು ರಾಜ ಎಲ್ಲಾ ದೃಷ್ಟಿಯಿಂದಲೂ ದೂರ ಇಡಬೇಕು

4. ಜಾತಿ ಭ್ರಷ್ಟನಾದ ಬ್ರಾಹ್ಮಣನನ್ನು ಕೆಲಸ ತೆಗೆದುಕೊಳ್ಳಬಾರದು
5. ರಾಜನಿಗೆ ತಾನೇ ರಾಜನೀತಿ ಅನುಸರಿಸಬೇಕು
6. ಕುಲಹೀನರನ್ನು ಮಂತ್ರಿ ಮಾಡಬಾರದು
7. ಸಾಮಂತರಿಗೆ ದಾರಾಳವಾಗಿ ಹಣಕೊಡಬೇಕು
8. ದೇವಾಲಯದ ಆದಾಯದಲ್ಲಿ ಜ್ಯೋತೀಷಿ, ಆರ್ಚಕರನ್ನು ನೇಮಿಸಬೇಕು
9. ರಾಜ್ಯದಲ್ಲಿ ಕಿರಿ ಕಿರಿ ಉಂಟು ಮಾಡುತ್ತಿದ್ದ ಕಿರಾತರನ್ನು ಯುದ್ದಕ್ಕೆ ಶತೃಗಳನ್ನು ಸೋಲಿಸಲು ಬಳಿಸಿಕೊಳ್ಳುವುದು
10. ರಾಜ ಸೈನ್ಯವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕು
11. ಕೆರೆ ಕಟ್ಟಿಸಿ ಜಲಚರಗಳಿಗೆ ಹಾಗೂ ವ್ಯವಸಾಯಕ್ಕೆ ಆದ್ಯತೆ ನೀಡಬೇಕು
12. ಆಧಾಯವನ್ನು ನಾಲ್ಕು ವಿಭಾಗ ಮಾಡಬೇಕು ಯಾತ್ರೆ ರಾಜಕೋಶಗಳ ತಳಾರರಿಗೆ ಚಿಕ್ಕಮುಟ್ಟ ಉಡುಗೊರೆ ಕೊಡಬೇಕು
13. ಕಳ್ಳರನ್ನು ಹಿಡಿದು ಶಿಕ್ಷಿಸಬೇಕು
14. ಅಜಾತಶತ್ರ ಬಹಿಷ್ಕೃತರನ್ನು ಕಂಡುಕೊಳ್ಳಬೇಕು
15. ಅರ್ಧರಾಜ್ಯ ಕೊಟ್ಟರು ರಾಜ್ಯಕ್ಕೆ ಕಂಟಕವಾಗಿರುವವರನ್ನು ನಾಶಗೊಳಿಸಬೇಕು
16. ಸಾಮ, ದಾನ, ಭೇದ, ದಂಡಿಸಬೇಕು
17. ಕಾಡು ಜನರ ದುರ್ಗುಣಗಳನ್ನು ತಿದ್ದಬೇಕು, ಶಿಕ್ಷಿಸಬೇಕು
18. ಬೇಡರಿಂದ ಕೊಳ್ಳೆಹೊಡೆಸಲು ವಿರೋಧಿಗಳು ಹೆದರುತ್ತಿದ್ದರು
19. ಸರಿಯಾದವರೊಡನೆ ಗೆಳೆತನ ಬೆಳೆಸಬೇಕು
20. ವರ್ಣಾಶ್ರಮ ಧರ್ಮಗಳು ತಪ್ಪಿಹೋಗದ ಹಾಗೆ ಬ್ರಾಹ್ಮಣರನ್ನು ಗೌರವಿಸಬೇಕು
21. ಮೇಲ್ವರ್ಗದ ಹೆಣ್ಣನ್ನು ಕೆಳವರ್ಗದ ಗಂಡು ಬೋಗಿಸುವಂತಿರಲಿಲ್ಲ. ಹಾಗೆಯೇ ಕೆಳವರ್ಗದ ಹೆಣ್ಣನ್ನು ಯಾರು ಬೇಕಾದರೂ ಬೋಗಿಸುವ ಹಕ್ಕನ್ನು ಹೊಂದಿದ್ದರು.
22. ಸಾಮಾಜಿಕವಾಗಿ ದಬ್ಬಾಳಿಕೆಗೊಳಗಾದ ಸಮಾಜಗಳು ಪ್ರಜಾಪ್ರಭುತ್ವಕ್ಕಾಗಿ ಹೋರಾಟ ನಡೆಸಿದರೆ ಅವರನ್ನು ನಿರಂಕುಶ ಪ್ರಭುಗಳು ನಿರ್ಧಾಕ್ಷೀಣ್ಯವಾಗಿ ಕ್ರಮಕೈಗೊಳ್ಳುತ್ತಿದ್ದ

ಕೃಷ್ಣದೇವರಾಯ ಆಮುಕ್ತ ಮೌಲ್ಯದಲ್ಲಿ ತಿಳಿಸಿ ರಾಜನೀತಿಯನ್ನು ಪ್ರೊ.ಬಿ. ರಾಮಸ್ವಾಮಿ ಅವರು ಹೀಗೆ ತಿಳಿಸಿದ್ದಾರೆ : ಮಧುರೆಯ ಪಾಂಡ್ಯನಾಡು ವತ್ಸ್ಯ ಧ್ವಜನು ಸಂಧಿವಿಗ್ರಹಾದಿ ಷಟ್ತಂತ್ರಗಳನ್ನು ಬಲ್ಲವನು ಸಾಮದಾನಾದಿ ಚತುರೋಪಾಯ ಪರಿಣಿತ, ಸಮರ್ಥ,ನೀತಿಮಾರ್ಗವನ್ನು ತಪ್ಪದವನು ಪ್ರಜೆಗಳನ್ನು ಸಂಕಟಪಡಿಸದೆ ತೆರಿಗೆಗಳನ್ನು ಪಡೆಯುವವನು ಚಾಡಿಮಾತುಗಳನ್ನು ಕೇಳಿವಿಚಾರ ಮಾಡದೆ ಯಾರನ್ನು ಹಿಂಸಿಸದವನು ಮುಖಸ್ತುತಿಯಿಂದ ಹಿಗ್ಗುವವನಲ್ಲ ಪರಾಕ್ರಮಿಯಾದರೂ ಹೇಡಿಯನ್ನು ಕೂಡ ಹೀನಾಯವಾಗಿಕಾಣನು ಮಿತಭಾಷಿ, ಆತ್ಮಶ್ಲಾಘಾವಿಮುಖ ಪ್ರತಿಪಕ್ಷವನ್ನು ಹರಿಹಾಸಯುತವಾದ ಮಾತುಗಳಿಂದ ಭಂಗಿಸಬಲ್ಲವನು ಮೃಧು, ಮಧುರವಾಗಿ ಮಾತನಾಡುವವನು ಕೀರ್ತಿಶಾಲಿ, ಶಿವಭಕ್ತ, ಈ ರೀತಿ ಬಾಧೆಗಳಲ್ಲದೆ ರಾಜ್ಯ ಪರಿಪಾಲನೆ ಮಾಡುತ್ತಿದ್ದ ಬಗ್ಗೆ ರಾಯ ಚಿತ್ರಿಸಿದ್ದಾನೆ. (ಪು–240 ಕೃ. ದೇ)

ಶತ್ರುರಾಜ ಸೋತು ಕಾಡು ಸೇರುವುದು ಶತ್ರುಸಿಕ್ಕಿರುವಾಗ ಕೊಲ್ಲಬೇಕು. ಶತ್ರು ನಿಗ್ರಹ, ಧನಾರ್ಜನೆ, ಪ್ರಜಾ ರಕ್ಷಣೆ ಇವು ರಾಜನಿಗೆ ವಿಹಿತವಾದ ಧರ್ಮಗಳು ಎಂದು ತಿಳಿಸಲಾಗಿದೆ. (ಅದೇ,ಪು–241)

ಹಿರಿಯರು (ರಾಜ, ಮಂತ್ರಿ) ಅನುಭವಿಗಳು ರಾಜ್ಯಭಾರವನ್ನು ತಮ್ಮ ಮಕ್ಕಳಿಗೆ ವಹಿಸುವಾಗ ರಾಜನೀತಿಯನ್ನು

ಉಪದೇಶಿಸುವುದು ವಾಡಿಕೆ. ರಾಜ/ಪ್ರಭು ತಾನು ಸುಖವಾಗಿರಲು/ಸಂಪತ್ತನ್ನು ಅನುಭವಿಸಲು ಇನ್ನೊಬ್ಬರ ದುಡಿಮೆಯನ್ನು ನಿರೀಕ್ಷಿಸುತ್ತಿದ್ದರು.

ವಿಜಯನಗರದಲ್ಲಿ ಪ್ರಾಣಿಬಲಿ ಆಚರಣಾತ್ಮಕವಾಗಿ ಚಾಲ್ತಿಯಲ್ಲಿತ್ತು. ನವರಾತ್ರಿಯಲ್ಲಿ 250 ಕೋಣ, 4500 ಕುರಿಗಳನ್ನು ಬಲಿಕೊಡುತ್ತಿದ್ದರು. ವಿದೇಶಿ ಯಾತ್ರಿಕರು ವಿಜಯನಗರದ ಅರಸರು ಧರ್ಮನಿಷ್ಠರಾಗಿದ್ದರು ಎನ್ನುತ್ತಾರೆ. ಧಾರ್ಮಿಕ ಪಂಥಗಳ ನಡುವೆ ಸೌಹಾರ್ದತೆ ಇತ್ತು. ವಿಜಯನಗರ ಮತ್ತು ಮುಸಲ್ಮಾನರ ನಡುವೆ ರಾಜಕೀಯ ಸಂಘರ್ಷವಿತ್ತು, ಧಾರ್ಮಿಕವಾಗಿ ಇಸ್ಲಾಂಧರ್ಮವನ್ನು ಪೋಷಿಸುತ್ತಿದ್ದರು.

ರಾಜಕೀಯದಲ್ಲಿ ಕೃಷ್ಣದೇವರಾಯ ತನ್ನ ಮಗಳನ್ನು ಕೊಟ್ಟು ಅಳಿಯ ರಾಮರಾಯನಿಗೆ ಪ್ರೋತ್ಸಾಹ ಕೊಡುತ್ತಾನೆ. ದಾಯಾದಿಗಳ ದ್ವೇಷ, ಅಸೂಯೆ, ಸಂಘರ್ಷಗಳು, ಮತ್ಸರ, ಅಸ್ಥಿರತೆ, ದಾಹ ಮೊದಲಾದ ಕಾರಣಗಳಿಂದ ರಾಜ್ಯವು ತತ್ತರಿಸಿತು. ಅಧಿಕಾರಕ್ಕಾಗಿ ಅಣ್ಣ–ತಮ್ಮಂದಿರನ್ನು ಸೆರೆಯಲ್ಲಿಡುವುದು ಉಪಟಳವನ್ನು ಅಡಗಿಸಲು ನಾನಾಪ್ರಯತ್ನಗಳನ್ನು ಮಾಡುತ್ತಾರೆ.

ಕೃಷ್ಣದೇವರಾಯ ರಾಜಗುರು ಮಂತ್ರಿಗಳಿಂದ ವಿಷಯಗಳನ್ನು ರಾಜನೀತಿಗಳನ್ನು ತಿಳಿದುಕೊಳ್ಳುತ್ತಿದ್ದ ತಾನೆ ಸ್ವತಃ ರಾಜ್ಯ ಸೂತ್ರಗಳನ್ನು ವಹಿಸಲು ಅವಶ್ಯಕವಾದ ರಾಜನೀತಿಯನ್ನು ತಿಳಿದುಕೊಂಡನು. ಅಲ್ಲದೇ ಸಂಜಯನೀತಿ, ವಿಧುರನೀತಿ, ಚಾಣಕ್ಯನೀತಿ ಮೊದಲಾದ ಗ್ರಂಥಗಳನ್ನು ವ್ಯಾಸಂಗ ಮಾಡಿ ತನ್ನ ಬುದ್ಧಿ ಕೌಶಲ್ಯವನ್ನು ಬೆಳೆಸಿಕೊಂಡನು. ಈ ರಾಜನೀತಿ ಸಾರವನ್ನು ಮನಸ್ಸಿಗೆ ತಂದುಕೊಂಡು ಕೃಷ್ಣದೇವರಾಯನು ರಾಜನಾದ ಕೂಡಲೆ ವಿಜಯನಗರ ರಾಜ್ಯಕ್ಕೆ ಸೇರಿದ ಕೋಟೆ, ದುರ್ಗ,ಕೋಶ ಮೊದಲಾದ ರಾಜ್ಯ ರಕ್ಷಣೆಗೆ ಅವಶ್ಯಕವಾದ ಸಾಧನಗಳ ಸ್ಥಿತಿ–ಗತಿಗಳ ವಿವರಗಳನ್ನು ತರಿಸಿ ತಿಳಿದುಕೊಂಡನು.

ರಾಜನೇ ಸರ್ವೋಚ್ಚ ನ್ಯಾಯದಾತನಾಗಿದ್ದರೂ ನ್ಯಾಯದಾನಕ್ಕಾಗಿ ನ್ಯಾಯಸ್ಥಾನಗಳು ಮತ್ತು ನ್ಯಾಯಾಧಿಕಾರಿಗಳು ಇದ್ದರು ರಾಜ್ಯಾಸ್ಥಾನಕ್ಕೆ 'ಪ್ರಾಡ್ವಿವೇಕ' ಮತ್ತು ಇಬ್ಬರು ಸಭ್ಯರು ಸಹಾಯ ಸಲ್ಲಿಸುತ್ತಿದ್ದರು.

ರಾಜ್ಯಪಾಲರು ಮತ್ತು ಅಮಾತ್ಯರು ಕೂಡ ನ್ಯಾಯ ವಿಚಾರಣೆ ನಡೆಸುತ್ತಿದ್ದರು. ಅಪರಾಧ ಸಂಬಂಧೀಯ ತೀರ್ಪುಗಳನ್ನು ಬೇಗನೆಯೇ ಕೊಟ್ಟು ಬಿಡಲಾಗುತ್ತಿತ್ತು. ಮತ್ತು ಅವು ಉಗ್ರವಾಗಿರುತ್ತಿದ್ದವು. ನ್ಯಾಯದಾನವು ಪ್ರಾಚೀನರು ಹಾಕಿಕೊಟ್ಟ ಪರಂಪರಾಗತ ಶಾಸನ ನಿಯಮಗಳನ್ನು ಆಧರಿಸುತ್ತಿದ್ದಿತ್ತು. ವಿಚಾರಣೆಯಲ್ಲಿ ಕಠಿಣ ಪರೀಕ್ಷೆ ಪದ್ಧತಿಗಳನ್ನೇ ವಾಡಿಕೆಯಾಗಿ ಅನುಸರಿಸಲಾಗುತ್ತಿತ್ತು. ಅಪರಾಧಿಗಳಿಗೆ ದಂಡನೆಗಳು ಉಗ್ರವಾಗಿರುತ್ತಿದ್ದವು. ಗಂಭೀರ ಸ್ವರೂಪದ ಅಪರಾಧಗಳಿಗೆ ಮರಣ ದಂಡನೆ ಅಥವಾ ಅವಯವ ಖಂಡನೆಯನ್ನೇ ವಿಧಿಸಲಾಗುತ್ತಿತ್ತು. ನಾಡಿನಲ್ಲಿ ಕಳ್ಳರು ಏಳಿಗೆ ಹೊಂದಲು ಸಾಧ್ಯವೇ ಇರಲಿಲ್ಲ. (ಕೃಷ್ಣದೇವರಾಯ ಪು.30)

ಡೊಮಿಗ್ ಪಯಾಸ್ ಹೇಳುವಂತೆ 'ವಿಜಯನಗರ ಕಾಲದಲ್ಲಿ ಮಹಿಳೆಯರು ಬಂಗಾರದ ಆಭರಣಗಳನ್ನು ಬಳಸುತ್ತಿದ್ದರಂತೆ. ತೆಲುಗು ಕವಿ ಪೆದ್ದಣ್ಣ ಹೇಳುವಂತೆ ಮಹಿಳೆಯರು ವಿದ್ಯೆ ಹಾಗೂ ನೃತ್ಯದಲ್ಲಿ ಅಪ್ರತಿಮೆ ರೂಪಿಸಿದ್ದರು. ಇಷ್ಟೇ ಅಲ್ಲ ಸ್ತ್ರೀಯರು ಶಸ್ತ್ರವಿದ್ಯೆ, ಕುಸ್ತಿ, ಜ್ಯೋತಿಷ್ಯ, ಸಂಗೀತ ಕ್ಷೇತ್ರಗಳಲ್ಲಿ ನಿಷ್ಣಾತರಾಗಿದ್ದರು ಮತ್ತು ಅಂಗ ರಕ್ಷಕರಾಗಿಯೂ ಅಡಿಗೆಯವರಾಗಿಯೂ ಕೆಲಸ ಮಾಡುತ್ತಿದ್ದರು ಅವರು ಸಮಾಜದಲ್ಲಿ ಉನ್ನತ ಸ್ಥಾನಮಾನ ಹೊಂದಿ ನ್ಯಾಯಾಧೀಶರ ಸ್ಥಾನ ಅಲಂಕರಿಸಿದ್ದು ಉಂಟು. ಇದೇ ಬಗೆಯಾಗಿ ಮಹಿಳೆಯರು ಪೇದೆಗಳಾಗಿ ಕಾವಲುಗಾರರಾಗಿಯೂ ಕೆಲಸ ಮಾಡಿತ್ತಿದ್ದರು. ನ್ಯೂನಿಜ್ ಸತಿಪದ್ಧತಿ ಇದ್ದು ವೇಶ್ಯಾವೃತ್ತಿ ಬಳಕೆಯಲ್ಲಿತ್ತು ಶ್ರೀಮಂತರಲ್ಲಿ ಬಹುಪತ್ನಿತ್ವ ಸರ್ವಸಾಮಾನ್ಯವಾಗಿತ್ತು. (ಪು.32)

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. ನೋಡಿ; ವಿರೂಪಾಕ್ಷಿ ಪೂಜಾರಹಳ್ಳಿ, 2017, **ಮಹರ್ಷಿ ವಾಲ್ಮೀಕಿಯ ಲೋಕದೃಷ್ಟಿ ಮತ್ತು ವಿಚಾರಧಾರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಯುದ್ಧನೀತಿ, ಸೈನ್ಯಾಡಳಿತ, ರಾಜತಾಂತ್ರಿಕತೆಯ ಬಗ್ಗೆ ಅಧ್ಯಯನಗಳಾಗಿವೆ. ಆದರೆ ವಿಜಯನಗರ ರಜನೀತಿಯ ಬಗ್ಗೆ

ಹೆಚ್ಚಿನ ವಿವರಗಳಿಲ್ಲ.

3. ಡಾ. ಬಿ.ಸಿ. ಮಹಾಬಲೇಶ್ವರಪ್ಪನವರು ಕೃಷ್ಣದೇವರಾಯನ ವಿದೇಶಿನೀತಿಯ ಹಿನ್ನೆಲೆಯಲ್ಲಿ ವಿಜಯನಗರ ವಿಘಟನೆಯ ಅಧ್ಯಯನ ಕುರಿತು ವಿಜಯನಗರ ಅಧ್ಯಯನ ಲೇಖನದಲ್ಲಿ ಪ್ರಕಟಿಸಿದ್ದಾರೆ.
4. ಕೆ.ಎ. ನೀಲಕಂಠಶಾಸ್ತ್ರಿ, **ಹಿಸ್ಟರಿ ಆಫ್ ಸೌತ್ ಇಂಡಿಯಾ,** ಪು.309
5. ಕೃಷ್ಣದೇವರಾಯ ಆಯ್ದ ಲೇಖನ ಸಂಪುಟದಲ್ಲಿ ಪಿ. ಯಶೋಧ ರಾಜಶೇಖರಪ್ಪ ಅವರು ಕೃಷ್ಣದೇವರಾಯನ ಕಾಲದ ಬೇಹಿನವರು ಮತ್ತು ಕಾಹಿನವರು ಎಂಬ ಲೇಖನ ಪ್ರಕಟಿಸಿದ್ದಾರೆ. (ಪುಟ.281)
6. ಅದೇ, ಪುಟ 230ರಲ್ಲಿ ಡಾ.ನಿರುಪಮಾ ಅವರು ಕೃಷ್ಣದೇವರಾಯನ ದಿನಚರಿ ಆಮುಕ್ತ ಮಾಲ್ಯದ ಎಂಬ ಲೇಖನವನ್ನು ಗಮನಿಸಬಹುದು
7. ಅದೇ, ಪು.232
8. ಅದೇ, ಪು.233
9. ಅದೆ, 240ರಲ್ಲಿ ಪ್ರೊ. ಬಿ. ರಾಮಸ್ವಾಮಿ ಅವರು 'ಶ್ರೀಕೃಷ್ಣದೇವರಾಯ ಆಮುಕ್ತ ಮಾಲ್ಯದಲ್ಲಿ ರಾಜನೀತಿ' ಎಂಬ ಲೇಖನ ಪ್ರಕಟಿಸಿದ್ದಾರೆ

ಆಧಾರಸೂಚಿ :

1. ಅನುಪಮ(ಅನು) : 1979, ಶ್ರೀಕೃಷ್ಣದೇವರಾಯನ ಆಮುಕ್ತ ಮಾಲ್ಯದ, ಶ್ರೀಪ್ರಕಾಶನ, ಬೆಂಗಳೂರು.
2. ಗೋಪಾಲ್ ಆರ್. : 2010, ಶ್ರೀಕೃಷ್ಣದೇವರಾಯರ ಜೀವನ ಮತ್ತು ಸಾಧನೆಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು.
3. ದಾಸೇಗೌಡ ಹೆಚ್.ಆರ್. : 1988, ಭಾರತದ ಸಂವಿಧಾನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
4. ನರ್ಪಾಜೆ ಭೀಮಭಟ್ಟ(ಅನು) : 2002, ಕಲ್ಹಣನ ರಾಜತರಂಗಿಣಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
5. ಭುವನೇಶ್ವರ ಪ್ರಸಾದ್ : 2008, ತಿರುಕ್ಕುರುಳ್‌ನಲ್ಲಿ ರಾಜನೀತಿ, ಶಬರಿಮಲಯನ್ ಬುಕ್ ಡಿಸ್ಟ್ರಿಬ್ಯೂಟರ್, ಬೆಂಗಳೂರು
6. ಮುರಿಗೆಪ್ಪ ಎ(ಸಂ) : 2015, ಶ್ರೀಕೃಷ್ಣದೇವರಾಯನ ಆಯ್ದ ಲೇಖನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ಸಿವೆಲ್ ರಾಬರ್ಟ್(ಅನು) ಸದಾನಂದ ಕನವಳ್ಳಿ : 2010(1900–1992), ಮರೆತುಹೋದ ಮಹಾ ಸಾಮ್ರಾಜ್ಯ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ವಿರೂಪಾಕ್ಷಿ ಪೂಜಾರಹಳ್ಳಿ : 2010, ವಾಲ್ಮೀಕಿ ಮತ್ತು ತಿರುವಳ್ಳುವರ್ : ರಾಜನೀತಿಯ ಪರಿಕಲ್ಪನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ವಿರೂಪಾಕ್ಷಿ ಪೂಜಾರಹಳ್ಳಿ : 2015, ವಿಜಯನಗರ ಕಾಲದ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
10. ವಿರೂಪಾಕ್ಷಿ ಪೂಜಾರಹಳ್ಳಿ : 2016, ಕೃಷ್ಣದೇವರಾಯನ ತೀರ್ಥಯಾತ್ರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
11. ಸೀತರಾಮಯ್ಯ ಎಂ.ವಿ. : 1983, ಕೃಷ್ಣದೇವರಾಯನ ದಿನಚರಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.
12. ಸದ್ಯೋಜಾತ ಸ್ವಾಮೀಜಿ : 1971, ವಿಜಯನಗರ ಕಾಲದ ಧಾರ್ಮಿಕ ಜೀವನ, ಕೊಟ್ಟೂರು ಸಂಗನಬಸವೇಶ್ವರ ಮಠ, ಹೊಸಪೇಟೆ.
13. ಶಿವಣ್ಣ ಕೆ. ಎಸ್.(ಸಂ) : 1997, ಕರ್ನಾಟಕ ಚರಿತ್ರೆ, ಸಂಪುಟ–3, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
14. ರಾಮಚಂದ್ರ ರಾವ್ ಸಿ.ವಿ. (ಸಂ) :1982.ರಾಯವಾಚಕಮು, ಹೈದ್ರಾಬಾದ್.

25. ವಿಜಯನಗರ ಸಾಮ್ರಾಜ್ಯದ ನೀರಾವರಿ ಚೌಕಟ್ಟಿಗೆ ವಡ್ಡರ ಕೊಡುಗೆಗಳು

– ಡಾ. ಟಿ.ವಿ. ನಾಗರಾಜ

ವಿಜಯನಗರ ಸಾಮ್ರಾಜ್ಯದ ಇತಿಹಾಸ ಕುರಿತಂತೆ ಗಣನೀಯ ಪ್ರಮಾಣದ ಅಧ್ಯಯನಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಮತ್ತು ರಾಜ್ಯಮಟ್ಟದಲ್ಲಿ ದಾಖಲಾಗಿವೆ. ಬಹುತೇಕ ಅಧ್ಯಯನಗಳು ಸೈದ್ಧಾಂತಿಕ ನೆಲೆಯಲ್ಲಿ ಕಂಡುಬಂದಿವೆ. ಚರಿತ್ರೆಯ ಅಧ್ಯಯನ ಕಾಲಕಾಲಕ್ಕೆ ಹಲವು ಪ್ರವೃತ್ತಿಗಳನ್ನು ಮೈಗೂಡಿಸಿಕೊಳ್ಳುತ್ತಾ ಬೆಳೆದು ಬಂದಿದೆ. ಅದಕ್ಕೆ ವಿಜಯನಗರ ಸಾಮ್ರಾಜ್ಯದ ಇತಿಹಾಸ ಹೊರತಾದುದೇನಲ್ಲ. ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ ಕುರಿತಂತೆ ಸಿ.ಟಿ.ಎಂ. ಕೊಟ್ರಯ್ಯ, ಸರಸ್ವತಿ, ಕುಪ್ಪುಸ್ವಾಮಿ, ಜಿ.ಎಸ್. ದೀಕ್ಷಿತ್ ಮತ್ತು ವಿದೇಶಿ ಬರಹಗಾರರಾದ ಡಾ.ಮೇನಿಖ್, ಜಿ, ಜಿನ್‌ಕಿನ್ಸ್ ಮುಂತಾದವರು ಸಹ ವಿಸ್ತೃತವಾಗಿ ಅಧ್ಯಯನ ನಡೆಸಿದ್ದಾರೆ.ಬಹುತೇಕ ಅಧ್ಯಯನಗಳು ಪ್ರಭುತ್ವ ಕೇಂದ್ರಿತ ಚರಿತ್ರೆಯ ಸಾಂಪ್ರದಾಯಿಕ ಚೌಕಟ್ಟಿನ ಮಿತಿಯಲ್ಲಿ ನಡೆದಿರುವುದು ಸರಿಯಷ್ಟೇ!ಎಂಬತ್ತರ ದಶಕದಲ್ಲಿ ಹುಟ್ಟಿಕೊಂಡ ಸಬಾಲ್ಟ್ರನ್ ಚಿಂತನೆ ಹಲವು ಆಯಾಮಗಳಿಗೆ ದಾರಿಮಾಡಿಕೊಟ್ಟಿತು. ಈ ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಇತಿಹಾಸ ಕುರಿತಂತೆ ಸಂಶೋಧನಾ ಪ್ರಯತ್ನಗಳು ಗಣನೀಯ ಪ್ರಮಾಣದಲ್ಲಿ ಕಂಡು ಬಂದಿಲ್ಲ!

ಈ ಹಿನ್ನೆಲೆಯಲ್ಲಿ ಪಾರಂಪರಿಕವಾಗಿ ದಕ್ಷಿಣ ಭಾರತದಾದ್ಯಂತ ವ್ಯಾಪಕ ಪ್ರಮಾಣದಲ್ಲಿ ನೀರಾವರಿ ಚೌಕಟ್ಟು ನಿರ್ಮಾಣಗೊಂಡಿದ್ದು, ವ್ಯವಸ್ಥಿತ ಕಾರ್ಯಾಚರಣೆಗೆ ಸಾಕ್ಷಿಭೂತವೆಂಬಂತೆ ಅಸ್ತಿತ್ವದಲ್ಲಿದೆ.

ಈ ಬೃಹತ್ ಪ್ರಮಾಣದ ನೀರಾವರಿ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ ಪ್ರಕ್ರಿಯೆಗಳಲ್ಲಿ ತಲೆತಲಾಂತರಗಳಿಂದ ಸಕ್ರಿಯವಾಗಿ ತೊಡಗಿಕೊಂಡಿದ್ದ ವಡ್ಡ–ಬೋವಿಗಳ ಪಾತ್ರ ಚರಿತ್ರೆಯ ಪುಟಗಳಲ್ಲಿ ಅಲಕ್ಷಗೊಂಡಿರುವುದು ಕಂಡುಬಂದಿದೆ. ವಿಜಯನಗರ ಸಾಮ್ರಾಜ್ಯದ ನೀರಾವರಿ ಚೌಕಟ್ಟನ್ನು ಅರ್ಥೈಸಲು ನೂರಾರು ಶಾಸನಗಳು, ಅನೇಕ ಸಾಹಿತ್ಯಕ ಆಧಾರಗಳು ಲಭ್ಯವಾದರೂ, ಅವುಗಳಲ್ಲಿ ತಳಸಮುದಾಯಗಳ ಚಿತ್ರಣ, ಪಾತ್ರ ಗೋಚರವಾಗುವುದೇ ಇಲ್ಲ! ಬಹುತೇಕ ಕಾಮಗಾರಿಗಳು ಜನ ಸಮುದಾಯದ ಪಾಲ್ಗೊಳ್ಳುವಿಕೆಯಿಂದಲೇ ಅಸ್ತಿತ್ವ ಪಡೆದಿದ್ದರೂ ಸಹ, ಅವುಗಳ ಉಲ್ಲೇಖ ಶಾಸನಗಳಲ್ಲಾಗಲಿ ಅಥವಾ ಸಾಹಿತ್ಯಿಕ ಆಕರಗಳಲ್ಲಾಗಲಿ ದಾಖಲಾಗಿಲ್ಲದಿರುವದು ಸೋಜಿಗವೆ ಆಗಿದೆ! ಶಾಸನಗಳಲ್ಲಿ ಕೆರೆ, ಕಟ್ಟೆ, ಕಾಲುವೆಗಳ ನಿರ್ಮಾಣ, ದುರಸ್ತಿ, ನಿರ್ವಹಣೆಯಂತಹ ಕಾಮಗಾರಿಗಳ ಅನುಷ್ಠಾನದಲ್ಲಿ, ಪ್ರಾಯೋಜಿಸಿದವರ ವಂಶಾವಳಿ, ಅಷ್ಟೇ ಅಲ್ಲದೆ ಉದ್ದೇಶ, ಸ್ವರೂಫ, ಫಲಾನುಭವಿಗಳು ಮತ್ತು ಅದರ ವಿವರಗಳು ದಾಖಲಾಗಿವೆ. ಮಧ್ಯಕಾಲೀನ ಘಟ್ಟದ ಎಲ್ಲಾ ನೀರಾವರಿ ಕಾಮಗಾರಿಗಳಿಗೂ ಚಾರಿತ್ರ್ಯಕ ಆಧಾರಗಳು ಇಲ್ಲವಾದರೂ, ಕನಿಷ್ಟ ಪ್ರಾತಿನಿದಿಕವೆಂಬಂತ. ದೇವಾಲಯದ ಧರ್ಮೋದ್ದೇಶ, ರಾಜಕೀಯ, ಸಾಮಾಜಿಕ, ಆರ್ಥಿಕ ಪ್ರತಿಷ್ಟೆಗಾಗಿ ಹೊರಡಿಸಲಾದ ದಾಖಲಿಸುವ ದಾಖಲೆಗಳಾಗಿ ಶಾಸನಗಳು ಮೂಡಿಬಂದಿವೆ. ಬೂದಾನಗಳು, ಅವುಗಳ ಫಲಾನುಭವಿಗಳು ಮತ್ತಿತರ ವಿವರಗಳು ದಾಖಲಿಸುವ ಪ್ರಕ್ರಿಯೆಯಲ್ಲಿ ದಾಖಲಾಗಿವೆ. ಹೀಗಾಗಿ ಅವುಗಳಿಗೆ ಶ್ರಮ, ಬೆವರು, ದುಡಿಮೆಗೈದ ಸಾಮಾನ್ಯರ ಉಲ್ಲೇಖ ಶಾಸನಗಳ ಕತೃಗಳಿಗಾಗಲೀ, ಅಂದಿನ ಆಡಳಿತಗಾರರಿಗಾಗಲಿ ಅವಶ್ಯಕವಾಗಿರಲಿಲ್ಲ. ಇನ್ನು ಸಾಹಿತ್ಯಕ ಆಕರಗಳಿಗೂ ಅವರ ಆಶಯಗಳಿಗೂ ಜನಸಾಮಾನ್ಯರ ಶ್ರಮಜೀವಿಗಳ ಉಲ್ಲೇಖದ ಅಗತ್ಯ ಇರಲಿಲ್ಲವೇನೂ? ಹೀಗಾಗಿ ಜನ ಸಾಮಾನ್ಯರ, ಅಸಮಾನ್ಯ ಸಂಗತಿಗಳು ಹೋಗಲಿ ಸಾಮಾನ್ಯ ಸಂಗತಿಗಳಿಗೂ ಚರಿತ್ರೆಯ ಬರವಣಿಗೆಗೆ ಆಧಾರ ಹುಡುಕುವ ಪ್ರಯತ್ನಗಳಿಗೆ ಯಶಕಾಣದೆ ಹೋದವು.

ಮಧ್ಯಕಾಲೀನ ಕಾಲಘಟ್ಟದ ವೇಳೆಗೆ ದೊಡ್ಡ ಪ್ರಮಾಣದಲ್ಲಿ ನೀರಾವರಿ ಕಾಮಗಾರಿಗಳು ಸ್ಪಷ್ಟರೂಪು ಪಡೆದಿದ್ದವು ಗೋಚರವಾಗಿದೆ. ದಕ್ಷಿಣ ಭಾರತದಾದ್ಯಂತ (ಕರಾವಳಿ ಪ್ರದೇಶದಲ್ಲಿ ಅತಿವಿರಳವಾಗಿ) ಕೆರೆ ಸಾಂದ್ರತೆ ತೀಕ್ಷ್ಣವಾಗಿ ಕಂಡುಬಂದಿದೆ. ಇವುಗಳ ನಿರ್ಮಾಣದಲ್ಲಿ, ನಿರ್ವಹಣೆಯಲ್ಲಿ ಪಾಲ್ಗೊಂಡ ಕುಶಲಕರ್ಮಿಗಳು, ಅವರ ತಾಂತ್ರಿಕ ನೈಪುಣ್ಯತೆ, ಕೌಶಲ್ಯ ಬಹುತೇಕ ಅಧ್ಯಯನಗಳಲ್ಲಿ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ.ಪಾರಂಪರಿಕವಾಗಿ, ತಲೆತಲಾಂತರಗಳಿಂದ, ಕಲ್ಲು ಕುಟುಕರು, ಕಬ್ಬಿಣ ಕೆಲಸಗಾರರು, ಮಣ್ಣು ವಡ್ಡರ ತಮ್ಮ ದೈಹಿಕ ಶ್ರಮದೊಂದಿಗೆ, ತಾಂತ್ರಿಕ ಕೌಶಲ್ಯವನ್ನು ಧಾರೆಯೆರೆದು ನಿರ್ವಹಿಸಿರುವ ಅಗಾದ ಪ್ರಮಾಣದ ನೀರಾವರಿ ಕಾಮಗಾರಿಗಳು ದಕ್ಷಿಣ ಭಾರತದಾದ್ಯಂತ ಇಂದಿಗೂ ಅವುಗಳ ಉದ್ದೇಶಿತ ಕಾರ್ಯಚಟುವಟಿಕೆಗಳಿಗೆ ಸಾಕ್ಷಿಯಾಗಿದೆ.ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ವಡ್ಡ/ಬೋವಿಗಳು ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ನೀಡಿದ ಕೊಡುಗೆಗಳನ್ನೆ ಗ್ರಹಿಸಿವ, ಅವರ ಚರಿತ್ರೆ ಕಟ್ಟಿಕೊಡುವ ಸಣ್ಣ ಪ್ರಯತ್ನವೊಂದನ್ನು ಹಲವು ಮಿತಿಗಳೊಡನೆ ಮಾಡಲಾಗಿದೆ.

ಆದರೆ ಚರಿತ್ರೆಯ ರಚನೆಯ ಸಂದರ್ಭದಲ್ಲಿ ಮೌಖಿಕ ಪರಂಪರೆ, ಈ ನಿಟ್ಟಿನಲ್ಲಿ ಆಶಾದಾಯಕವಾಗಿ ಕಂಡು ಬಂದಿದೆ. ಜಗತ್ತಿನಾದ್ಯಂತ ಮೌಖಿಕ ಪರಂಪರೆಯನ್ನು ದಾಖಲಿಸುವ ಪ್ರವೃತ್ತಿ ಆದರೆ ಆದರ ಮಿತಿಗಳೊಡನೆ ಇತಿಹಾಸ ರಚನೆಶಾಸ್ತ್ರದಲ್ಲಿ ಮಹತ್ವದ ಸ್ಥಾನ ಪಡೆಯಿತು. ಶಿಷ್ಟ ಪರಂಪರೆಯಿಂದ ಬಂದ ವಿಚಾರಗಳಿಗೆ ಚರಿತ್ರೆಯ ರಚನೆಯಲ್ಲಿ ಹೆಚ್ಚಿನ ಮಾನ್ಯತೆ ಸಿಕ್ಕಿದೆ. ಜನಪರ ಪರಂಪರೆಯಿಂದ ಬಂದ ವಿಚಾರಗಳು ಈವರೆವಿಗೂ ಕಡೆಗಣಿಸಲ್ಪಟ್ಟಿರುವುದು ಜನಪರ ಮೌಖಿಕ ಪರಂಪರೆ (ಲಾಣಿ, ಕಥೆ, ಕಾವ್ಯ), ಮತ್ತು ಜನಪರ ಭೌತಿಕ ಪರಂಪರೆ (ಕಟೆ, ಕೆರೆ, ಬಾವಿ–ಇತ್ಯಾದಿ)ಗಳ ಪರಾಮರ್ಶನ ಶಿಷ್ಟ ಆಕಾರಗಳಿಗೆ ಪೂರಕವಾಗಿ ಬಳಸಿಕೊಳ್ಳದ ಮೂಲಕ ಚರಿತ್ರೆ ರಚನಾ ಪ್ರಕ್ರಿಯೆಗೆ ಸಹಾಯಕವಾಗಬಲ್ಲದು.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನಕ್ಕೆ ಶಾಸನ, ಸಾಹಿತ್ಯಿಕ ಆಧಾರಗಳಷ್ಟೆ ಅಲ್ಲದೆ, ಮೌಖಿಕ ಪರಂಪರೆಯನ್ನು ಒಂದು ಪ್ರಮುಖ ಆಕರವೆಂದೆ ಇರುವ ಇತಿ–ಮಿತಿಗಳು ಸಾಂಪ್ರದಾಯಿಕ ಆಕರಗಳ ಬಳಕೆಯಲ್ಲಿಯೂ ಇವೆ ಎಂಬ ವಾಸ್ತವ ಅಂಶವನ್ನು ನಾವು ಮರೆಯುವಂತಿಲ್ಲ.

14ನೇ ಶತಮಾನದ ಪಾರ್ಣಮಿಲ್ಲ ಶಾಸನದಲ್ಲಿ ಅಂದಿನ ಕಾಲಘಟ್ಟದ ನೀರಾವರಿ ಕ್ಷೇತ್ರದ ತಾಂತ್ರಿಕ ಪರಿಜ್ಞಾನದ ಸ್ಪಷ್ಟ ಚಿತ್ರಣ ದಾಖಲಾಗಿದೆ.ಈ ಶಾಸನದಲ್ಲಿ ನೀರಾವರಿ ಕಾಮಗಾರಿ ಕೈಗೊಳ್ಳಬೇಕಾದಲ್ಲಿ ಅಗತ್ಯವಾಗಿ ಬೇಕಾದ ಗುಣಾವಗುಣಗಳು ಉಲ್ಲೇಖಿತವಾಗಿವೆ. ಅತ್ಯಂತ ಅಗತ್ಯವಾಗಿ ಇರಬೇಕಾದ ಗುಣಗಳಲ್ಲಿ 12ನ್ನು ನಮೂದಿಸಿದೆ. ಕೊನೆಯದಾದರೂ ಅತ್ಯಂತ ಪ್ರಮುಖವಾದ "ಇದನ್ನೆಲ್ಲಿ ಮಾಡಲು ತಕ್ಕ ಮಾನವ ಸಂಪನ್ಮೂಲ ಇರಬೇಕು" ಎಂಬುದು. ಈ ಮಾನವ ಸಂಪನ್ಮೂಲವೇ ಆಗಿದ್ದ ವಡ್ಡರು/ಬೋವಿಗಳು ಸಾಮ್ರಾಜ್ಯದಾದ್ಯಂತ ಅಸ್ತಿತ್ವಕ್ಕೆ ಬಂದ ನೀರಾವರಿ ಕಾಮಗಾರಿಗಳ ನಿರ್ಮಾಣ, ನಿರ್ವಹಣೆಯಲ್ಲಿ ಪ್ರದಾನ ಪಾತ್ರವಹಿಸಿರುವುದು ಗೋಚರಿಸುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕೊನೆಯ ಅಂಶವಾದರೂ "ತಕ್ಕ ಮಾನವ ಸಂಪನ್ಮೂಲ" ಇಲ್ಲಿ ಪಾರಂಪರಿಕವಾಗಿ ಕಾಮಗಾರಿಗಳ ನಿರ್ಮಾಣದಲ್ಲಿ ಕಲ್ಲು–ಮಣ್ಣಿನ ಕೆಲಸಗಳಲ್ಲಿ ಕೌಶಲ್ಯ ಹೊಂದಿದ್ದ ವಡ್ಡರಲ್ಲಿದೆ ಮತ್ಯಾರು ಇರಲಿಲ್ಲ! ಈಗಾಗಿ ಪ್ರದಾಮ ಪಾತ್ರವಹಿಸುವ ತಮ್ಮ ಶ್ರಮ ಆಧಾರಿತ ಕೌಶಲ್ಯ ಹೊಂದಿರುವ ಸಮುದಾಯ ಅಧ್ಯಯನಗಳಲ್ಲಿ ಅಲಕ್ಷಿತವಾಗಿಯೇ ಉಳಿದಿವೆ!

ಚಿಕ್ಕಬಳ್ಳಾಪುರ ತಾಲ್ಲೂಕಿನ ಕ್ರಿ.ಶ. 1397ರ ತಿರುಮಣಿ ಶಾಸನದಲ್ಲಿ ಉಲ್ಲೇಖಿಸಿರುವಂತೆ, ಬುಕ್ಕರಾಯನ ಮೊಮ್ಮಗಳು ಬೊಮ್ಮಾದೇವಿ ತಿರುಮಣಿ ಗ್ರಾಮದ ಮುಂದೆ ಒಂದು ನಾಲೆ ತೋಡಿಸಲು ಆದೇಶಿಸಿದ್ದಳು. ಆ ಕಾಮಗಾರಿಯ ಗುತ್ತಿಗೆಯನ್ನು ಪೇದ್ದಬೊಯಿವೂಜ ಮತ್ತು ಚಿನ್ನಿಬೊಯಿವೂಜ ಎಂಬ ಇಬ್ಬರು ಕಲ್ಲು ಕೆಲಸದವರಿಗೆ ವಹಿಸಲಾಗಿದ್ದಿತು. ನಾಲೆ ತೋಡಿ ತೂಬನ್ನು ನಿರ್ಮಿಸಿದರೆಂದು, ಪೂರ್ವ ಷರತ್ತಿನಂತೆ ಯೋಜನೆ ಯಶಸ್ವಿಯಾದರೆ, ಆ ಕಲ್ಲು ಕೆಲಸಗಾರರಿಗೆ 130 ಗದ್ಯಾಣ, ಸ್ವಲ್ಪ ಭೂಮಿ, ಒಂದು ಕುದುರೆ ಹಾಗೂ ಕೈಗಡಗಳು ಸಲ್ಲುತ್ತವೆ. ಒಂದು ವೇಳೆ ವಿಫಲವಾದರೆ ಅವರು ಅವೆಲ್ಲವನ್ನು ಹಿಂದಿರುಗಿಸಬೇಕಾಗಿದ್ದಿತು.ಈ ಷರತ್ತನ್ನು ಆಧರಿಸಿ ಗುತ್ತಿಗೆ ಯಶಸ್ವಿಯಾಗಿ ಅನುಷ್ಠಾನಗೊಂಡಿದ್ದ ಕಾಮಗಾರಿಗಳ ಕೌಶಲ್ಯ ಅನನ್ಯವಾಗಿದ್ದಿತು. ಒಂದು ಕೆರೆಯ ಒಡ್ಡು ಒಡೆದಾಗ ಕಲ್ಲು ಮತ್ತು ಮಣ್ಣಿನ ಕಾಮಗಾರಿಗಳಲ್ಲಿ ಕೌಶಲ್ಯವುಳ್ಳ ವಡ್ಡರನ್ನು ದುರಸ್ತಿಗಾಗಿ ನಿಯೋಜಿಸಿದ್ದಿದು ಟೇಕಲ್ ಶಾಸನದಲ್ಲಿ ಉಲ್ಲೇಖಿತವಾಗಿದೆ.

ಮುಳಬಾಗಿಲು ತಾಲ್ಲೂಕಿನ ರಾಜಗೂಂಡ್ಲಿಹಳ್ಳಿಯ ಕ್ರಿ.ಶ. 1496ರ ಶಾಸನದಲ್ಲಿ "ಹೊಸಕೆರೆಯ ನಿರ್ಮಾಣ, ಹೆಚ್ಚು ಮಣ್ಣಿನಿಂದ ನಿರ್ಮಿಸಿದ ಏರಿ, ಕಟ್ಟೆಯನ್ನು ಕಲ್ಲಿನಿಂದ ಬಿಗಿಗೊಳಿಸಿದ, ಕಲ್ಲಿನ ತೂಬನ್ನು ಹೊಂದಿಸಿ, ಇಟ್ಟಿಗೆ ಮತ್ತು ಗಾರೆಯಿಂದ ಬದ್ರಗೊಳಿಸಲಾಗಿದೆ" ಇಲ್ಲಿ ಕಾಮಗಾರಿಯ ಪೂರ್ಣ ವಿವರಗಳು ವಡ್ಡರ ಕೌಶಲ್ಯ ಆಧಾರಿತ ನೈಪುಣ್ಯತೆಯ ವಿವರಗಳು ದಾಖಲಾಗಿರುವುದು ಕಂಡುಬಂದಿದೆ.

ಕರ್ನೂಲ್ ಜಿಲ್ಲೆಯ ಶಾಸನವೊಂದರಲ್ಲಿ ಮುಮ್ಮಯ್ಯ ಮತ್ತು ಬಸಯ್ಯ ಎಂಬ ಇಬ್ಬರು ವಡ್ಡರು ಬಾವಿ ತೋಡಿದ್ದಕ್ಕಾಗಿ ಅಚ್ಚುತರಾಯನಿಂದ ಭೂಮಿಯನ್ನು ಕೊಡುಗೆಯಾಗಿ ಪಡೆದಿದ್ದಾರೆ. ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಕ್ರಿ.ಶ. 1456ರ ಶಾಸನದಲ್ಲಿ ದೇವಾಲಯದ ಮುಂದೆ ಬಾವಿ ನಿರ್ಮಿಸಿದ ಸಂದರ್ಭದಲ್ಲಿ, 20 ವರಾಹ ಕಲ್ಲು ಕಾಮಗಾರಿ, 20 ವರದಹ ಮಣ್ಣು ಕಾಮಗಾರಿಗೆ ನೀಡಿದ್ದನ್ನು ಉಲ್ಲೇಖಿಸುತ್ತಾ ಯಗಟಬೋವಿ, ರಾಮನಬೋವಿ, ತಮ್ಮನಬೋವಿ, ತಿರುಜಿನ ಬೊವಿ ಎಂಬ ನಾಲ್ಕು ಜನ ವಡ್ಡ ಕುಶಲಿಗರ ಹೆಸರುಗಳು ದಾಖಲಾಗಿವೆ. ನೆಲ್ಲೂರು ಜಿಲ್ಲೆಯ ಭುಜನೆಲ್ಲೂರು ಶಾಸನದಲ್ಲಿ ವೆಂಕಟಪತಿರಾಯನ ಆಳ್ವಿಕೆಯಲ್ಲಿ ಅವನ ತಾಯಿ ಪ್ರಾಯೋಜಿಸಿದ ಅನಂತಸಾಗರದ ಅಗ್ರಹಾರದ ಮುದ್ದಲಕೆರೆಯು, ದುಸ್ತಿತಿಯಲ್ಲಿದ್ದು ಅದನ್ನು ಸ್ಥಳೀಯ ವಡ್ಡರಿಂದ ಕೊಡಿಸಿ 33 ಕಲ್ಲಿನ ಕಂಬಗಳನ್ನು ಇರಿಸಿ, ಕೋಡಿಯ ಎರಡೂ ಬದಿಗೆ ಮೆಟ್ಟಿಲುಗಳನ್ನು ಇರಿಸಿ, ದುರಸ್ತಿಪಡಿಸಿದ್ದನ್ನು ದಾಖಲಿಸಿದೆ. ಈಗಾಗಿ ನಿರ್ಮಾಣ ಕಾಮಗಾರಿಗಳಷ್ಟೆ ಅಲ್ಲದೆ ದುರಸ್ತಿ ಕಾಮಗಾರಿಗಳನ್ನು ಸಹ ಸ್ಥಳೀಯ ಹಂತದ ವಡ್ಡರೆ ನಿರ್ವಹಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಒಮ್ಮೆ ಶಿವ ಪಾರ್ವತಿಯರು ಭೂಲೋಕದಲ್ಲಿ ಸಂಚರಿಸುತ್ತಿರುವಾಗ ತೀವ್ರ ಬಿಸಿಲಿನ ತಾಪದಿಂದ ಬಾಯಾರಿರುತ್ತಾರೆ. ಆಗ ಶಿವನ ಬೆವರಿನಿಂದ ಒಬ್ಬ ಪುರುಷ ಮತ್ತು ಪಾರ್ವತಿಯ ಬೆವರಿನಿಂದ ಒಬ್ಬ ಮಹಿಳೆಯನ್ನು ಹಾರೆ-ಗಡಾರಿ, ಮಕ್ಕರಿಗಳೊಂದಿಗೆ ಸೃಷ್ಟಿಸಿದರು. ಈ ದಂಪತಿಗಳು ತಮ್ಮ ಪರಿಶ್ರಮದಿಂದ ಬಾವಿಯೊಂದನ್ನು ತೋಡಿ, ನೀರನ್ನು ಪಡೆದು ಶಿವ-ಪಾರ್ವತಿಯರ ದಾಹ ತಣಿಸಿದರೆಂದು, ಇದರಿಂದ ತೃಪ್ತರಾದ ಶಿವ-ಪಾರ್ವತಿಯರು ವರವೊಂದನ್ನು ನೀಡಿದರೆಂದು, ಇದರಿಂದ ತೃಪ್ತರಾಗದ ದಂಪತಿಗಳು ಗೊಣಗಾಡಿದ ಪರಿಣಾಮ ಶಿವ-ಪಾರ್ವತಿಯರು ಬೇಸರಗೊಂಡು. ಅವರ ಮಕ್ಕಳಿಗೆ ಕೆರೆ-ಬಾವಿಗಳನ್ನು ತೋಡಿ ಜೀವನ ನಿರ್ವಹಿಸಬೇಕೆಂದು ಎಂದು ಶಾಪ ನೀಡಿದರೆಂದು ಹೇಳಲಾಗಿದೆ.

ಮತ್ತೊಂದುಕಥೆಯಲ್ಲಿ ಶಿವ ಬೇಸರಗೊಂಡ ವಡ್ಡನಿಗೆ ಚಿನ್ನದ ನಾಣ್ಯಗಳನ್ನು ತುಂಬಿದ ಕೊಳವೆಯೊಂದನ್ನು ನೀಡಿದನೆಂದು, ಅವನ ಅದನ್ನು ಹೆಂಡಕ್ಕಾಗಿ ಅಡಇಟ್ಟನೆಂದು ಬಿಂಬಿಸಲಾಗಿದೆ. ಆಗ ಶಿವ ಮತ್ತೊಂದು ಆಟವಾಡಿದ. ಅದರಂತೆ ಒಂದು ಕುಂಬಳಕಾಯಿಯಲ್ಲಿ ಚಿನ್ನದ ನಾಣ್ಯಗಳನ್ನು ತುಂಬಿ ವಡ್ಡರು ಮಣ್ಣು ಕೆಲಸ ಮಾಡುವ ಸ್ಥಳದಲ್ಲಿ ಹೂತಿಟ್ಟನೆಂದು ಗುಡ್ಡೆ ಆಕಾರದಲ್ಲಿ ಕಂಡ ವಡ್ಡರು ಅದನ್ನು ಹಾಗೆಯೆ ಉಳಿಸಿ ತಾವು ಅಗೆದ ಮಣ್ಣಿನ ಪ್ರಮಾಣಕ್ಕೆ ತೀರುವ ಗುಡ್ಡೆ ಆಗಿಯೆಬಿಟ್ಟರೆಂದು ಹೇಳಲಾಗಿದೆ. ಆ ಗುಡ್ಡೆಯನ್ನು ಎಮ್ಮೆಯೊಂದು ಬೀಳಿಸಿತೆಂದು, ಆ ಕುಂಬಳಕಾಯಿಯಲ್ಲಿ ಚಿನ್ನದ ನಾಣ್ಯಗಳನ್ನು ಗಮನಿಸದೆ ಸ್ಥಳೀಯ ವರ್ತಕರೊಬ್ಬರೇ ಹೋರಾಟ ಮಾಡಿದರೆಂದು ಹೇಳಲಾಗಿದೆ.

ಹೀಗೆ ಪಾರಂಪರಿಕವಾಗಿ ವಡ್ಡರು ತಾವು ಶಾಪಗ್ರಸ್ಥರಾಗಿರುವ ಹಣೆಬರಹವನ್ನು ಶಪಿಸುತ್ತಾ ಬಂದಿದ್ದೇವೆ ಎಂದು ಹೇಳಿಕೊಳ್ಳುತ್ತಾರೆ.

ಜನಪದ ನಾಯಕ(ಮುದ್ದ) 'ಡಣ್ಣಾನಾಯಕ' ಮುದ್ದ ಹಂಪಿಯ ಸುತ್ತ ಹಲವು ಕೆರೆಗಳನ್ನು ಕಟ್ಟಿಸಿದ ಬಗ್ಗೆ ಪ್ರತೀತಿ ಇದೆ. ಗ್ರಾಮ ಮುಖಂಡರ ಹೆಣ್ಣು ಮಕ್ಕಳನ್ನು ಕೆರೆಗೆ ಹಾರ ನೀಡಿದ ದುಷ್ಟಾಂತಗಳು ಇವೆ. ಈ ರೀತಿಯ ಜನಪದ ಕಥೆಗಳು, ಈ ಬಗೆಯ ಮೌಖಿಕ ಐತಿಹ್ಯಗಳು ವಡ್ಡರ ಸೇವೆ ಶ್ರಮಗಳನ್ನು ವ್ಯಾಪಕವಾಗಿ ಬಳಸಿಕೊಂಡು ಶೋಷಿತ ಪ್ರವರ್ಗದಲ್ಲೆ ಇಟ್ಟಿರುವುದು ಕಂಡುಬರುತ್ತಿದೆ. ದಕ್ಷಿಣ ಭಾರತ-ಕರ್ನಾಟಕದಲ್ಲೂ ಸಹ 'ಬಿಟ್ಟಿ' ಸೇವೆಯ ಹೆಸರಿನಲ್ಲಿ ರಾಜಕೀಯ ಪ್ರಾಬಲ್ಯದಿಂದ ಪ್ರತಿಷ್ಠಿತ ವರ್ಗಗಳಲ್ಲಿ 'ವಿಷ್ಟಿ' ಪಡೆದು ಕಾಮಗಾರಿಗಳನ್ನು ನಡೆಸಿರುವುದನ್ನು ಹಲವು ಅಧ್ಯಯನಗಳು ಸಾಬೀತುಪಡಿಸಿವೆ. ಇನ್ನೂ ಚರ್ಚೆಗೊಳ್ಳುತ್ತಿರುವ ವಿಷಯವೆಂದರೆ, ಈ ಬಗೆಯ 'ವಿಷ್ಟಿ' ಬಿಟ್ಟಿ ಸೇವೆಯ ಸ್ವರೂಪ ಮತ್ತು ಪ್ರಮಾಣಗಳೆಷ್ಟು! ಒತ್ತಾಯವಾಗಿ ಸೇವೆ ಪಡೆಯಲಾಗುತ್ತಿತ್ತು? ಅಥವಾ ತೆರಿಗೆಗೆ ಪರ್ಯಾಯವಾಗಿ ಶ್ರಮ ಪಡೆಯುತ್ತಿದ್ದರೆ? ಭೂದಾನ

ಪಡೆದಂತಹ ಪ್ರಭಾವಿ ಫಲಾನುಭವಿಗಳು ಇಂತಹ ಒಟ್ಟು ಸೇವೆಯನ್ನು ಹೇರುತ್ತಿದ್ದರು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. (ಪು–517). ಹೀಗಾಗಿ ವಿಜಯನಗರ ಕಾಲಘಟ್ಟದ ಬಹುತೇಕ ನೀರಾವರಿ ಕಾಮಗಾರಿಗಳು ಸಮುದಾಯ ಪಾಲ್ಗೊಳ್ಳುವಿಕೆಯಿಂದ ನಿರ್ಮಾಣವಾದುದಲ್ಲಿ, ಅದು ಪ್ರತಿಷ್ಠಿತ ವರ್ಗ ವಡ್ಡರ ಶ್ರಮ–ಕೌಶಲ್ಯದ ಸಮರ್ಪಣೆಯೊಂದಿಗೆ ನಿರ್ಮಾಣವಾದುದು ಎಂದು ಈಶಾಷಾ ಅಭಿಪ್ರಾಯಪಟ್ಟಿದ್ದಾರೆ. (ಪು.518)

ಕನ್ನವೀರಾಂಭ ಕಥನದಲ್ಲಿ ಗ್ರಾಮದ ಮುಖಂಡ ಏಳುನೂರು ಜನ ವಡ್ಡರನ್ನು ಕೆರೆ ನಿರ್ಮಿಸಲು ಆಹ್ವಾನಿಸಿದನೆಂದು, (ಡಣ್ಣಾಯಕನ ಕೆರೆ ಪರಿಸರದ), ಸಾರುತ್ತಿದೆ.ಮತ್ತೊಂದು ಕೆರೆ ಹುನ್ನಾಲ್ಮಿ ಕಥನದಲ್ಲಿ 3000 ಜನ ವಡ್ಡರೊಂದಿಗೆ ಸ್ಥಳೀಯ ನಾಯಕ ವಿವರವಾದ ಒಪ್ಪಂದಕ್ಕೆ ಬಂದನೆಂದು ಸಾರಿದೆ.

ಜಾನಪದನಾಯಕ ಡಣ್ಣಾಯಕ ಮುದ್ದನನ್ನು ಕುರಿತಾದ ಮತ್ತೊಂದು ಕಥನದಲ್ಲಿ ಒಂದಾನೊಂದು ಕಾಲದಲ್ಲಿ ಮುದ್ದಿನ ರಾಜ್ಯವಾಳುತ್ತಿರುವಾಗ ತನ್ನ ಪ್ರಜೆಗಳ ಯೋಗಕ್ಷೇಮ ಕಾಣಲು ಸಂಚಾರ ಹೊರಟಾಗ ಹರಗನೂರು ಬಳಿ ಕೆರೆ ನಿರ್ಮಿಸಲು ಅತ್ಯಂತ ಸೂಕ್ತವಾದ ಸ್ಥಳವೆಂದು ನಿರ್ದರಿಸಿದನು. ಸುಮಾರು ಹನ್ನೆರಡು ವರ್ಷಗಳ ಕಾಲ ಸ್ಥಳೀಯ ಅಧಿದೇವ ಆಂಜನೇಯ ಸ್ವಾಮಿಯನ್ನು ಪ್ರಾರ್ಥನೆಗೈದು ಪರಿಣಾಮ ದೈವ ಸಂಕಲ್ಪದಂತೆ, ಅವನ ಪೂರ್ವಯೋಜಿತ ಉದ್ದೇಶದ ಬದಲಾಗಿ 12 ಗ್ರಾಮ ಮೇಲ್ದಂಡೆಯಲ್ಲಿ, 12 ಗ್ರಾಮ ಕೆಳಸ್ಥರದಲ್ಲಿ ಮುಳುಗಡೆಯಾಗುವುದನ್ನು ತಪ್ಪಿಸಿ ಕೇವಲ 3 ಗ್ರಾಮಗಳನ್ನು ಮಾತ್ರ ಸ್ಥಳಾಂತರಿಸುವ ಕಾರ್ಯಕ್ಕೆ ಚಾಲನೆ ನೀಡಲು ನಿರ್ಧರಿಸಿದನು. ಮುದ್ದನು 7 ಗ್ರಾಮಗಳಿಂದ ವಡ್ಡರನ್ನು ಕೆರೆ ನಿರ್ಮಿಸಲು ನಿಯೋಜಿಸಿ ಅವರ ಕೂಲಿ ನೀಡಲು ಹಣ ಇಲ್ಲವೆಂದು ದೈವ ನಿವೇದನೆಗೈದ.ಆಗ ದೈವ ವಡ್ಡರಿಗೆ ನೀಡಬೇಕಾದ ಕೂಲಿ ಲೆಕ್ಕ ಇಡಬಾರದೆಂದು, ಪಾವತಿಸುವುದು ಬೇಡವೆಂದು ತಿಳಿಸಿತು.ಕಾಮಗಾರಿ ಪೂರ್ಣಗೊಂಡ ನಂತರ ದೈವ ಸೂಚಿಸಿದಂತೆ ಮುದ್ದ ವಡ್ಡರನ್ನು ಕರೆದು ತಮ್ಮ ಮುಂದೆ ಮರಳಿನ ಹುಡ್ಡೆಗಳನ್ನು ಮಾಡಲು ಸೂಚಿಸಿದನು.ಒಂದು ದಂಡವನ್ನು ನೀಡಿ ಅದರಿಂದ ಎಲ್ಲಾ ಮರಳಿನ ಗುಡ್ಡೆಗಳನ್ನು ಸ್ಪರ್ಶಿಸಿದನು.ಆ ಮರಳು 'ಗುಗ್ಗರಿ'ಯಾಗಿ ದೊರೆಯಿತು.ಅವರ ಶ್ರಮ ಮತ್ತು ಬದ್ದತೆಗೆ ಅನುಗುಣವಾಗಿ ಚಿನ್ನದ ನಾಣ್ಯಗಳು ದೊರಕಿದವು.

ಕಾಮಗಾರಿ ಪೂರ್ಣಗೊಂಡಿತಾದರೂ, ಕೆರೆಗೆ ನೀರು ಬರಲೇ ಇಲ್ಲ, ತುಂಬಲೂ ಇಲ್ಲ. ಆಗ ದೈವ ಹತ್ತಿರದ ಹಳ್ಳಿಯ ಕುಟುಂಬದ ಏಳು ಜನರ ಬಲಿ ನೀಡಬೇಕೆಂದು ಅಪೇಕ್ಷಿಸಿತು.ಕುಟುಂಬದ ಮುಖ್ಯಸ್ಥರ ಮನಒಲಿಸಿ ಆ ಹೆಣ್ಣು ಮಕ್ಕಳನ್ನು ಮೆರವಣಿಗೆಯಲ್ಲಿ ಕೇರಿಯ ಏರಿಗೆ ಕರೆದೊಯ್ಯಲಾಯಿತು.ಪೂಜಾ ಕೈಂಕರ್ಯಗಳ ನಂತರ ಅವರುಗಳನ್ನು ಏರಿಯ ಮೇಲಿನ ಏಳು ಸಣ್ಣ ಕೊಠಡಿಗಳಲ್ಲಿ ಇರಿಸಿ, ಬಾಗಿಲು ಮುಚ್ಚಲಾಯಿತು.ಒಂದು ಹೆಣ್ಣಿನ ವಿಗ್ರಹವೊಂದನ್ನು ತೂಬಿನ ಬಳಿ ಪ್ರತಿಷ್ಠಾಪಿಸಿ, ಕನೇರಮ್ಮ ಎಂದು ಹೆಸರಿಸಿ, ಪೂಜೆಗೈವ ಸಂಪ್ರದಾಯ ಬೆಳೆಯಿತು.

ಮುದಗದ ಕೆಂಚಮ್ಮ, ಕೆರೆ ಹೊನ್ನಮ್ಮ, ಅಣಜಿ ಹೊನ್ನಮ್ಮ, ಕನೇರಮ್ಮ... ಹೀಗೆ ಅನೇಕ ಜಾನಪದ ಹಾಡಿನ, ಕಾವ್ಯ, ಲಾವಣಿಗಳು ಕನ್ನಡ ಜಾನಪದ ಸಾಹಿತ್ಯದಲ್ಲಿ ಪ್ರದಾನವಾಗಿ ಕಾಣಿಸಿಕೊಂಡಿವೆ.

'ವಡ್ಡರ ಬೊಯಿ' ಕಥನ : ಗೌಡ ವಡ್ಡರ ಮುಖಂಡ ಬೊಯಿಯನ್ನು ಕರೆಸಿ ಒಂದು ವಾರದೊಳಗೆ ಕೆರೆ ನಿರ್ಮಿಸಲು ಹೇಳುತ್ತಾರೆ. ಬೊಯಿ ಮಾತುಕತೆ ನಡೆಸಿ, ಒಪ್ಪಿಗೆ ಸೂಚಿಸುತ್ತಾನೆ. ಮೂರು ವಾರದ ನಂತರ ವಾಪುಸು ಬಂದ ಬೋಯಿ, ಕಟ್ಟೆ ನಿಲ್ಲುತ್ತಿಲ್ಲವೆಂದು, ನರಬಲಿ ನೀಡಬೇಕಾಗಿದೆಯೆಂದು ಹೇಳುತ್ತಾನೆ. ಗೌಡ ಯಾರನ್ನು ಬಲಿ ನೀಡಬೇಕೆಂದು ಕೇಳಿದಾಗ ಬೊಯಿ ಗೌಡನ ಹಿರಿಯ ಮಗನನ್ನೆ ಬಲಿ ನೀಡಬೇಕೆನ್ನುತ್ತಾನೆ. ಕೊನಗೆ ಬೋಯಿ ಕೆರಿಮನಿ, ಕಿರಿ ಸೊಸೆ, ಗೌಡನ ಪುತ್ರಿ, ಕೊನೆಗೆ ಗೌಡನನ್ನೆ ಕೊಟ್ಟರು ಸರಿಯೇ? ಎನ್ನುತ್ತಾನೆ. ಅಂತಿಮವಾಗಿ ಗೌಡನ ಹಿರಿಯ ಸೊಸೆಯನ್ನು ಬಲಿಕೊಡಲು ನಿರ್ಧಾರವಾಗುತ್ತದೆ.

ಒಂದಾನೊಂದು ಕಾಲದಲ್ಲಿ ಏಳು ನೂರೆಡೆಯ ಹಾವೊಂದು ಏಳು ಕೊಪ್ಪರಿಗೆ ಚಿನ್ನದ ನಾಣ್ಯಗಳನ್ನು ಗಾವುಂಡ ಮುದ್ದಣ್ಣನಿಗೆ ನೀಡಿತೆಂದು, ಏಳುನೂರು ಜನ ವಡ್ಡರನ್ನು ಕರೆಯಿಸಿ ಕೆರೆ ನಿರ್ಮಿಸಲು ಆದೇಶಿಸಿದನು. ಏಳು ವರ್ಷಗಳಲ್ಲಿ ಏಳು ತೂಬುಗಳನ್ನು ನಿರ್ಮಿಸಿದರು. ಏಳು ನರಬಲಿಗಳಲ್ಲಿನ ಐದು ಸಾವುಗಳು ಘಟಿಸಿದ್ದು ಕಥನದಲ್ಲಿ ಮುದ್ದಣ್ಣನ ಹಿರಿಮೆ ಗರಿಮೆಗಳ ಸಾರಿ ಹೇಳಲ್ಪಟ್ಟಿವೆ. ಅಷ್ಟೇ ಅಲ್ಲದೆ ಕನ್ನೆ ದೇವತೆಯನ್ನು ಹೊಗಳಿ ಹಾಡಿದ್ದಿದೆ.

ಇದೇ ಸಂದರ್ಭದಲ್ಲಿ ಇಲ್ಲಿನ ಪರಿಸರದಲ್ಲಿ ರೂಢಿಯಲ್ಲಿರುವ ನೀರಗಂಟ ಸಾವಿನ ವೃತ್ತಾಂತದ ಕಥೆ, ನೀರಾವರಿ ಜಾನಪದ ಕಥನಗಳಲ್ಲಿ ದಾಖಲಾಗಿದೆ. ಒಬ್ಬ ನೀರಿಗಂಟೆ, ಕೆರೆಯ ನೀರಿನ ಹಂಚಿಕೆ ನಿರ್ವಾಹಣೆ ಮತ್ತು ಏರಿಯ ಪಾಲನೆಯಲ್ಲಿ ಇದ್ದಾಗ ಭಾರಿ ಮಳೆಯಿಂದ ಕೆರೆ ತುಂಬಿ ಏರಿ ಒಡೆದು ಹೋಗುವ ಸಂದರ್ಭದಲ್ಲಿ ಗಂಗಮ್ಮನನ್ನು ಪ್ರಾರ್ಥಿಸುತ್ತೇನೆ. ನೀರುಗಂಟಿ ನಾನು ಊರಿನ ಗೌಡರಿಗೆ ಭರವಸೆ ಕೊಟ್ಟಿದ್ದೇನೆ. ಏರಿ ಕಾಯಿವೆನೆಂದು, ಅವರಿಗೆ ತಿಳಿಸಿ ಬರುತ್ತೇನೆ. ಗಂಗಮ್ಮ "ನೀನು ಬರುವವರೆಗೆ ನಾನು ತಡೆಯುವ ಭರವಸೆ ನೀಡುತ್ತೇನೆ" ಎಂದು ಹೇಳಿದಳು. ನೀರಗಂಟಿ ಗ್ರಾಮಕ್ಕೆ ಹೋಗಿ ಗಂಗಮ್ಮನ ಭರವಸೆ ತಿಳಿಸಿದನು. ತುರ್ತು ಸಭೆ ಸೇರಿದ ಗೌಡರು ಚರ್ಚಿಸಿ ನೀರಗಂಟಿಯನ್ನು ಸಾಯಿಸಿ, ಮೂರು ಭಾಗಗಳಾಗಿ ಕತ್ತರಿಸಿ ತಲೆಯನ್ನು ಉತ್ತರ ದಿಕ್ಕಿಗೂ, ದೇಹವನ್ನು ದಕ್ಷಿಣಕ್ಕೂ, ಕಾಲುಕೈಗಳನ್ನು ಪಶ್ಚಿಮಕ್ಕೂ, ದಿಕ್ಪಾಪಾಲಾಗಿ ಎಸೆಯುತ್ತಾರೆ. ಹೀಗಾಗಿ ನೀರಗಂಟಿ ಹಿಂದಿರುಗಲೇ ಇಲ್ಲ. ಗಂಗಮ್ಮ ತಾನು ನೀಡಿದ್ದ ಭರವಸೆಯಂತೆ ವಡ್ಡನ್ನು ರಕ್ಷಿಸುತ್ತಲೇ ಬಂದಿದ್ದಾಳೆ.

ದಕ್ಷಿಣ ಭಾರತದಾದ್ಯಂತ ಮಧ್ಯಕಾಲೀನ ಕಾಲಘಟ್ಟದ ವೇಳೆಗೆ ಅಗಾದ ಪ್ರಮಾಣದ ವೈವಿಧ್ಯಮಯ ಸ್ವರೂಪದ ನೀರಾವರಿ ಕಾಮಗಾರಿಗಳು ಅಸ್ತಿತ್ವ ಪಡೆದಿದ್ದವು. ರಾಜ ಪ್ರಯೋಜಿತ ಕಾಮಗಾರಿಗಳಷ್ಟೇ ಅಲ್ಲದೆ ಅಧಿಕಾರಿಗಳು, ಸಾಮಂತರು, ಮಹಿಳೆಯರು, ವ್ಯಾಪಾರಿಗಳು, ವ್ಯಕ್ತಿಗಳು, ಧಾರ್ಮಿಕ ಮಹೋನ್ನತಿ ಉದ್ದೇಶದಿಂದ ಕೈಗೊಂಡಿದ್ದರು. ಅಸ್ತಿತ್ವ ಪಡೆದ ನೀರಾವರಿ ಕಾಮಗಾರಿಗಳಲ್ಲಿ ಶಾಸನೋಕ್ತಿ ಆಧಾರಗಳು ಇಲ್ಲಿ ವಾದ ದೃಷ್ಟಿಯಿಂದ ನೋಡಿದಾಗ ಸ್ಥಳೀಯ ಜನ ಸಮುದಾಯಗಳು ದೊಡ್ಡ ಪ್ರಮಾಣದಲ್ಲಿ ಇಂತಹ ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದಾರೆ. ಸಂಪನ್ಮೂಲ ಕ್ರೋಢೀಕರಣದ ಜೊತೆ ಜೊತೆಗೆ ಅಗತ್ಯವಾದ ತಾಂತ್ರಿಕ ಕೌಶಲ್ಯ ಪರಿಗಣಿಸಿ ಒದಗಿಸಿದ ವಡ್ಡರು ಮತ್ತು ಅವರ ಕೊಡುಗೆಗಳು ಅವಶ್ಯ. ಶಿಷ್ಟ ಪರಂಪರೆಯಿಂದ ಬಂದ ವಿಚಾರಗಳಿಗೆ ಚರಿತ್ರೆಯ ರಚನೆಯಲ್ಲಿ ಹೆಚ್ಚಿನ ಮಾನ್ಯತೆ ಸಿಕ್ಕರೆ, ಜನಪದ ಪರಂಪರೆಯಿಂದ ಬಂದ ವಿಚಾರಗಳು ಕಡೆಗಣಿಸಿದ ಪರಿಣಾಮ ಇಂತಹ ಸಮುದಾಯಗಳ ಕೊಡುಗೆಗಳು ನಿರ್ಲಕ್ಷಕ್ಕೆ ಒಳಗಾಗಿದೆ. ಪ್ರಸ್ತುತ ಅಧ್ಯಯನಗಳಲ್ಲಿ ಜನಪರ ಮೌಖಿಕ ಪರಂಪರೆ, ಕ್ರಿಯಾ ಪರಂಪರೆ, ಭೌತಿಕ ಪರಂಪರೆಗಳ ಪರಾಮರ್ಶನ ಶಿಷ್ಟ ಆಕರಗಳಿಗೆ ಪೂರಕವಾಗಿ ಒಳಗೊಳ್ಳುವ ಪ್ರಾಮಾಣಿಕ ಪ್ರಯತ್ನ ಅಗತ್ಯವಾಗಿದೆ. ಹಲವು ಜಾನಪದ ಸಂಸ್ಕೃತಿಯ ನೆಲೆಯ ಅಧ್ಯಯನಗಳು ನಡೆದಿದ್ದು, ಚಾರಿತ್ರ್ಯಕ ಚೌಕಟ್ಟಿಗೆ ಸಂವಾದಿಯಾಗಿ ನಡೆದರೆ ಸಾಮಾನ್ಯರ ಅಸಾಮಾನ್ಯ ಕೊಡುಗೆಗಳು ಸಹ ಚರಿತ್ರೆಯ ಪುಟಗಳು ಸೇರಬಲ್ಲವು!

ಆಧಾರಸೂಚಿ :

1. Annual reports of Indian epigraphy.
2. Annual reports of South Indian Inscriptions.
3. South India Inscriptions.
4. Thirumala Thirupathi Devasthanam Series.
5. **The Irrigation and water supply systems**, Dominic Jenker – K
6. **Irrigation under Vijayanagar Emphire**, K.T.M. Kotraiah, Dept. of Archeology and Museums in Karnataka
7. **Irrigation Systems under Vijayanagar** : Saraswathi, unpublished thesis, submitted to University of Mysore.
8. **ಮೌಖಿಕ ಇತಿಹಾಸ** : ಎಂ.ವಿ. ವಸು, ಅಂಕಿತಪುಸ್ತಕ, ಬೆಂಗಳೂರು.
9. **ಸಮುದಾಯ ಮತ್ತು ಸಹಭಾಗಿತ್ವ** : (ಸಂ) ಚಂದ್ರಪುಜಾರಿ, ಕನ್ನಡ ವಿವಿ. ಹಂಪಿ.
10. **ಕೆರೆ ನೀರಾವರಿ ನಿರ್ವಹಣೆ : ಚಾರಿತ್ರ್ಯಕ ಅಧ್ಯಯನ** (ಸಂ) ರಾಜರಾಮ್ ಹೆಗ್ಗಡೆ.
11. **ಡಣಾಯಕನ ಕೆರೆ** : ಎಂ. ಸೋಮೇಶ್, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
12. **ಕರ್ನಾಟಕ ಕೆರೆ ನೀರಾವರಿ** : ಜಿ.ಎಸ್. ದೀಕ್ಷಿತ್ ಮತ್ತು ಇತರರು (ಅನು) ನೀ. ಕಸ್ತೂರಿ. ಕನ್ನಡ ವಿವಿ ಹಂಪಿ.

26. ತೀರ್ಥಹಳ್ಳಿ ಕುರುವಳ್ಳಿಯ ಶ್ರೀ ಗಂಗಾ ವಿಶ್ವೇಶ್ವರ ದೇವಾಲಯ

– ಡಾ. ಕೆಳದಿ ವೆಂಕಟೇಶ್ ಜೋಯಿಸ್

ಶಿವಮೊಗ್ಗ ಜಿಲ್ಲೆಯಲ್ಲಿ ತೀರ್ಥಹಳ್ಳಿ ಐತಿಹಾಸಿಕವಾಗಿ ಗಮನ ಸೆಳೆಯುವ ತಾಲ್ಲೂಕುಗಳಲ್ಲೊಂದು. ಇತಿಹಾಸ ಆರಂಭಕಾಲದಿಂದಾರಂಭಿಸಿ ಬ್ರಿಟಿಷ್ ಆಡಳಿತ ಕಾಲದವರೆಗಿನ ಅವಶೇಷಗಳು, ಸ್ಮಾರಕಗಳು ತಾಲ್ಲೂಕಿನಾದ್ಯಂತ ಹರಡಿವೆ. ಹಿಂದೆ ಈ ತಾಲ್ಲೂಕಿನ ಕವಲೆದುರ್ಗ ತಾಲ್ಲೂಕು ಕೇಂದ್ರವಾಗಿತ್ತು. ತೀರ್ಥಹಳ್ಳಿ ಕೊಪ್ಪ ರಸ್ತೆಯಲ್ಲಿ ಮುಖ್ಯರಸ್ತೆಯಿಂದ ಎರಡು ಕಿ.ಮಿ. ದೂರದ ಕುರುವಳ್ಳಿ ಎಂಬಲ್ಲಿ ವಿಜಯನಗರ ಕಾಲದ ಶ್ರೀ ಗಂಗಾ ವಿಶ್ವೇಶ್ವರ ದೇವಾಲಯವಿದೆ.

ಐತಿಹಾಸಿಕ ಹಿನ್ನೆಲೆಯಲ್ಲಿ ತೀರ್ಥಹಳ್ಳಿ ತಾಲ್ಲೂಕು

ಕ್ರಿ.ಶ. 7ನೇ ಶತಮಾನದಿಂದ 14ನೇ ಶತಮಾನದವರೆಗೆ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಹೊಂಬುಜವನ್ನು ರಾಜಧಾನಿ ಮಾಡಿಕೊಂಡು, ಅನಂತರ ಕ್ರಿ.ಶ. 1209ರಲ್ಲಿ ಚಿಕ್ಕಮಗಳೂರು ಜಿಲ್ಲೆ ಕಳಸವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ ಸಾಂತಾರರ ಜಿನದತ್ತ ಉಗ್ರವಂಶನು ಸ್ಥಳಿಕರನ್ನು ಜಯಿಸಿ ಸಾಗರ ತಾಲ್ಲೂಕಿನ ಗೋವರ್ಧನಗಿರಿ ಪ್ರದೇಶದಲ್ಲಿ ಆಡಳಿತ ನಡೆಸಿದ ಸಾಂತಾರರ ಆಡಳಿತಕ್ಕೂ ಈ ಪ್ರದೇಶ ಒಳಗೊಂಡಿತ್ತು. ಕ್ರಿ.ಶ.1022ರಲ್ಲಿ ಸಾಂತಾರ ನನ್ನಿ ಎಂಬವನು ಚಾಲುಕ್ಯ ಚಕ್ರವರ್ತಿಯಿಂದ ಗೌರವಿಸಲ್ಪಟ್ಟಿದ್ದಿದೆ. ಅನಂತರದಲ್ಲಿ ವಿಜಯನಗರ, ಆರಗ ಅರಸರು ಈ ಪ್ರದೇಶವನ್ನು ಆಳಿದರು. ಕ್ರಿ. ಶ. 1606ವರೆಗೆ ಹಾಡುವಳ್ಳಿ, ಗೇರುಸಪ್ಪೆ, ನಗಿರೆ ಮೊದಲಾಗಿ ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ ಹೈವರಸ ಸಂತತಿಯ ಸಾಳುವ ಅರಸರು, ಅನಂತರದಲ್ಲಿ ಕೆಳದಿ, ಮೈಸೂರು ರಾಜ್ಯದ ಆಡಳಿತಕ್ಕೆ ಈ ಪ್ರದೇಶ ಒಳಪಟ್ಟಿತ್ತು. ತೀರ್ಥಹಳ್ಳಿ ಹಿಂದೆ ತೀರ್ಥರಾಜಪುರ ಎಂದು ಕರೆಯಲ್ಪಡುತ್ತಿತ್ತು.

ಶ್ರೀ ಅಮರೇಂದ್ರ ಪುರಿ ಮಠ

ತೀರ್ಥಹಳ್ಳಿಯ ತುಂಗಾನದಿಯ ತಟದಲ್ಲಿ ಈ ಶ್ರೀ ಪುರಿ ಪರಂಪರೆಯ ಮಠವಿದೆ. ಈ ಮಠದ ಆರಾಧ್ಯ ದೈವ ಲಕ್ಷ್ಮೀನರಸಿಂಹ. ಈ ಮಠದ ಕೊನೆಯ ಗುರುಗಳಾದ ಅಮರೇಂದ್ರ ಪುರಿಗಳಿಗೆ ಶ್ರೀ ರಾಮಚಂದ್ರಾಪುರ ಮಠದ 32ನೆಯ ಗುರುಗಳಾದ ಶ್ರೀ ರಘುನಾಥ ಭಾರತಿಗಳು ಕ್ರಿ.ಶ. 1850–51ರಲ್ಲಿ ಸಂನ್ಯಾಸ ದೀಕ್ಷೆ ನೀಡಿದರು. ಇವರು ಕ್ರಿ.ಶ. 1858ರಲ್ಲಿ ತೀರ್ಥಹಳ್ಳಿಯ ಈ ಮಠದ ಸರ್ವಾಧಿಕಾರವನ್ನು ಶ್ರೀ ರಾಮಚಂದ್ರಾಪುರ ಮಠಕ್ಕೆ ವಹಿಸಿಕೊಟ್ಟರು. ಈ ಮಠದ ಬಲಭಾಗದಲ್ಲಿ ಕುರುವಳ್ಳಿ ಎಂಬ ಅಗ್ರಹಾರದ್ದು ಅಲ್ಲಿ ಶ್ರೀ ಗಂಗಾವಿಶ್ವೇಶ್ವರ ದೇವಸ್ಥಾನವಿದೆ. ಈ ದೇವಾಲಯದ ಆಡಳಿತವು ಮೊದಲು ಶ್ರೀ ಅಮರೇಂದ್ರ ಪುರಿ ಮಠಕ್ಕೆ ಸೇರಿತ್ತು. ಆ ಮಠವು ಶ್ರೀ ರಾಮಚಂದ್ರಾಪುರ ಮಠದೊಡನೆ ವಿಲೀನವಾದ ಮೇಲೆ ದೇವಾಲಯವೂ ಸಹ ರಾಮಚಂದ್ರಾಪುರ ಮಠದ ಅಧೀನಕ್ಕೊಳಪಟ್ಟಿದ್ದಾಗಿ ತಿಳಿದುಬರುತ್ತದೆ. ಶ್ರೀ ಮಠದ ಆವರಣದಲ್ಲಿ ಹಿಂದಿನ ಗುರುಗಳ ಮೂರು ಸಮಾಧಿಗಳಿವೆ. (ಹವ್ಯಕರ ಇತಿಹಾಸ ದರ್ಶನ ಪುಟ 94–95 ಎಚ್.ಎಂ.ತಿಮ್ಮಪ್ಪ, ಕಲಸಿ, ಹವ್ಯಕ ಅಧ್ಯಯನ ಕೇಂದ್ರ, ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು 2012)

ಈ ಮಠದ ಮುಂಭಾಗದಲ್ಲಿ ವಿಜಯನಗರದ ಎರಡನೇ ದೇವರಾಯನ ಕಾಲದ ಎರಡು ಶಾಸನವಿದೆ. ಇವು ಶ್ರೀ ಅಮರೇಂದ್ರ ಪುರಿ ಮಠಕ್ಕೆ ವಿಜಯನಗರದರಸರು ಬಿಟ್ಟಿರುವ ದಾನವನ್ನು ತಿಳಿಸುತ್ತವೆ. (151 /8 ತೀರ್ಥ 1). ಒಂದು ಶಾಸನ ಶಾ.ಶ. 1353ನೇ ವಿರೋಧಿಕೃತು ಸಂವತ್ಸರ ಅಂದರೆ ಕ್ರಿ.ಶ. 1431–32ರದ್ದಾಗಿದೆ. ತೃಟಿತಗೊಂಡಿರುವ ಈ ಶಾಸನ ಗಂಗಧರಪುರಿ ಶ್ರೀಪಾದರಿಗೆ ಈಶ್ವರ ಸ್ವರೂಪ ಒಡೆಯರ ಹೆಸರಲ್ಲಿ ಕೊಟ್ಟಿರುವ ದಾನವನ್ನು ತಿಳಿಸುತ್ತದೆ. ಇದರಲ್ಲಿ ಪಾರುಪತ್ಯಗಾರ ಮತ್ತು ಇತರರಿಗೆ ನಿಗಧಿತ ಹಣವನ್ನು ಪಾವತಿಸಿರುವುದನ್ನು ದಾಖಲಿಸಲಾಗಿದೆ. ಅಂತಯೇ (152 /8 ತೀಥ –2) ಎರಡನೆ ಶಾಸನವು ಶಕ ವರ್ಷ 1346ರ ಶುಭಕೃತ ಸಂವತ್ಸರದ ಚೈತ್ರ ಶು 1 ಭಾನುವಾರ ಅಂದರೆ ಮಾರ್ಚ 22, 1422ಕ್ಕೆ ಸರಿಹೊಂದುತ್ತದೆ. ಆದರೆ ಇದು ಶಕ ವರ್ಷ 1344 ಆಗುತ್ತದೆ. ಇದು ಆರಗ ರಾಜ್ಯವನ್ನು ಸಿರಿಗಿರಿನಾಥದೇವನು ರಾಜ್ಯಪಾಲನಾಗಿ ಕಾರ್ಯ ನಿರ್ವಹಿಸಿದ್ದನ್ನು ತಿಳಿಸುತ್ತದೆ. ಶಾಸನವು ಗಂಗಾಧರ ಪುರಿ ಶ್ರೀಪಾದರ ದೇವೇಂದ್ರಪುರಿ ಶ್ರೀಪಾದರು ಸುಬ್ರಹ್ಮಣ್ಯಭಟ್ಟ ಮತ್ತು ಚೆನ್ನಮಾಂಬರ ಮಗ ರಾಮಣ್ಣನಿಂದ ಆರಗ ವೇಂಟೆಗೆ ಸೇರಿದ ಹೆನ್ನರಿಗಿ, ಬುಕ್ಕರಾಜಪುರ ಗ್ರಾಮದಲ್ಲಿ ಭೂಮಿಯನ್ನು ತೀರ್ಥಹಳ್ಳಿಯ ರಾಮನಾಥ ಮತ್ತು ನರಸಿಂಹ ದೇವರ ಸಮ್ಮುಖದಲ್ಲಿ ಕೊಂಡುಕೊಂಡು ಅದನ್ನು ತುಂಗಭದ್ರ ನದಿ ತೀರದಲ್ಲಿ ಸತ್ರಕ್ಕಾಗಿ ಮತ್ತು ಈಶ್ವರ ಸ್ವರೂಪ ಶ್ರೀಪಾದರಾದ ಎಂಟು ಬ್ರಾಹ್ಮಣರುಗಳಿಗೆ, ಶಿಕ್ಷಕರಿಗೆ ಮತ್ತು ಪಾರುಪತ್ಯಗಾರನಾದ ಶಂಕರ ಭಟ್ಟರಿಗೆ ದಾನ ಕೊಟ್ಟಿರುವುದನ್ನು ಹೇಳುತ್ತದೆ. ಈ ಎರಡು ಶಾಸನಗಳು ತೀರ್ಥಹಳ್ಳಿಯ ಶ್ರೀ ಪುರಿ ಮಠದ ಮೇಲೆ ಬೆಳಕು ಚೆಲ್ಲುವಂತಹುದ್ದಾಗಿದೆ.

ತೀರ್ಥಹಳ್ಳಿ ಕೊಪ್ಪ ರಸ್ತೆಯಲ್ಲಿ ಕೊಪ್ಪ ಸರ್ಕಲ್‌ನಿಂದ ಅಣತಿ ದೂರದಲ್ಲಿ ಮುಖ್ಯ ರಸ್ತೆಯಿಂದ ಪೂರ್ವಕ್ಕಿರುವ ಕುರುವಳ್ಳಿಯಲ್ಲಿ ಈ ಮಠದ ಆಡಳಿತಕ್ಕೊಳಪಟ್ಟಿದ್ದ ಶ್ರೀ ಗಂಗಾ ವಿಶ್ವೇಶ್ವರ ದೇವಾಲಯ ಇದ್ದು ಇದರ ಮುಂಭಾಗದಲ್ಲಿ ಎರಡು ಶಾಸನಗಳಿವೆ. ಶಾಸನದ ಪಾಠ ಈ ರೀತಿ ಇದೆ.

ಶಾಸನಪಾಠ :

ಶ್ರಿವಿಶ್ವೇಶ್ವರ ದೇವಾಲಯದ ಬಾಗಿಲ ಬಳಿ ದಕ್ಷಿಣಕಡೆ ನೆಟ್ಟಿರುವ ಕಲ್ಲು

1. ಶ್ರಿಗಣಾಧಿಪತಾಯೇಂ ನಮಃ॥ ನಿರ್ವಿಘ್ನಮಸ್ತು॥ ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರ
2. ಚಾರವೆ॥ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೆ॥ ಜಯತಿಭುವನ ತ್ರಾತಃ। ಪೋಷಿತ ಪ್ರಾಣಿ ಜಾತಃ ಸ
3. ಕಲ ಹೃದಾಯಯಾತಃಸತ್ಕಟಾಕ್ಷ ಪ್ರಪಾತಃ ಅಮರನಿಕರನಾಥಪ್ರಸ್ತುತೋರುಪ್ರಗಾಥಃ ಶಿರಸಿ
4. ಶಶಿಸನಾಥಸ್ತ್ರಾಯತಾಂ ವಿಶ್ವನಾಥಃ। ಗಂಗಾಧರ ಪುರೀ ಯೋಗೀ ಪುರಾಗಂಗಾಧರೋಪಮಃ। ಗತ್ವಾಕ್ಷೇತ್ರಾ
5. ಣಿ ಕಾಶ್ಯಾದೀನ್ಯಗಾತ್ ಕ್ಷೇತ್ರವರಂ ಕ್ರಮಾತ್।**ತುಂಗಭದ್ರಾ ನದೀ ತ್ತೀರ್ರೆ ತ್ತಿರ್ಥಹಳ್ಳೀತಿ ವಿಶ್ರುತಂ**। ಶ್ರಿ ನ್ರುಶಿಂಹ ಪ್ರತಿಷ್ಠಾಪ್ಯ
6. ತತ್ರವಾತ್ಸೀತ್ತಮರ್ಚಯನ್। ಅಮರೇಂದ್ರಪುರೀ ಯೋಗಿ ತಚ್ಛಿಷ್ಯೋಬ್ರಂಹ್ಮವಿತ್ತಮಃ। ಯಾದವೇಂದ್ರ ಪುರೀಯೋಗಿ ತಸ್ಯ
7. ಶಿಷ್ಯಸ್ತು ಸರ್ವವಿತ್। ತಚ್ಛಿಷ್ಯೋ ವೇದ ಶಾಸ್ತ್ರಾರ್ಥ ತತ್ವಜ್ಞೋ ರಾಜಪೂಜಿತಃ। ಅಮರೇಂದ್ರಪುರೀಯೋ ಬುಧ ಉ್ರಂದ ಸುರದ್ರು
8. ಮಃ। ಶ್ರಿ ದೇವೇಂದ್ರಪುರೀಯೋಗೀಶಿಷ್ಯ ಸ್ತಸ್ಯ ಭವತ್ಕೃತೀ। ಶಮಾದಿ ನಿಲಯೋ ನಿತ್ಯಂ ತಪಸ್ವೀ ಶುದ್ಧ ಮಾನಸಃ।ಕಾಶೀವಾಸೇಪ್ಸಯಾ
9. ಧ್ಯಾತಸ್ತೇನೇತ್ಯಾಹ ಶಿವೋತಥಂ ತುಂಗಾಯಾ ದಕ್ಷಿಣೇ ಕೂಲೇ ಮಲೆಯಾಳಮತೇ ಶುಭೇಶ ಮಾಂ ಪ್ರತಿಷ್ಠಾಪ್ಯ ಸಂಪೂ
10. ಜ್ಯ ಕಾಶೀವಾಸಫಲಂ ಲಭೇ ದಿಷ್ಟ್ವಾಥ ನರ್ಮ್ಮದಾಲಿಂಗಂ ಪ್ರಾಪ್ತಯ್ಯಾತ್ ತಿಂಮಪಂಡಿತಾತ್। ಚಂದ್ರೇಭಾಬ್ಧಿಸು

11. ಧಾಂಶುಸಂಮಿತಶಕೇ ಶ್ರೀಕಾಲಯುಕ್ತಾಬ್ದಕೇ ವಯಿಶಾಖೇ ಸಿತಸಪ್ತಮೀದಿವಸಕೇ ವಾರೇ ರವಉ ಪೌಷ್ಯೇಭೇ ವಿಶ್ವೇಶಸ್ಯ ಚಿರಂ
12. ಸದಾಶಿವಮಹಾರಾಯೇವತಿ ಕ್ಷ್ಮಾತಳಂ ಶ್ರೀದೇವೇಂದ್ರಪುರೀಯತೀಂದ್ರತಿಲಕಃ ಕುತ್ವಾ ಪ್ರತಿಷ್ಠಾಂ ಮುದಾಶ್ರೀಶಾಲಿವಾ
13. ಹನ ಶಕೇ ರುಶೀಭಾಬ್ದ ಸಂಮ್ಮಿತೇ ರಕ್ತಾಕ್ಷ್ಯಬ್ದೇ ಕಾರ್ತ್ತಿಕೀಯೇ ಶುಕ್ಲೀಯೇ ಪ್ರತಿಪದ್ದಿನೇ ವಿಶ್ವೇಶವಿನಿಯೋಗಾರ್ಥಂ ತದ್ಗ್ರಾಮಾಂನ್
14. [ಕ್ರುತ]ವಾಂನ್ ಕ್ರುತೀ। ಯಿಾ ಆರ್ರು ಗ್ರಾಮಗಳು ಅವರ್ರ ಚತುಸ್ಸೀಮೆಗಳ ವಿವಸರ ಪೂರ್ವದಲಿ ನಂಮ ಮಠಕ್ಕೆ --- ಗ್ರಾಮಗಳು
15. ಮೂರ್ರರೊಳಗೆ ಮಲೆಯಾಳಮಠದ ಗ್ರಾಮಕೆ ಚತುಸ್ಸೀಮೆ ಮೂಡಲು ದೇವಸ್ವದಗದ್ದೆಯಿಂದ ಪಡುವಲು ತೆಂಕಲು ಹೆದ್ದಾರಿ
16. ಯಿಂದ ಬಡಗಲು ಪಡುವಲು ಗದ್ದೆಯ ನೀರೇರ್ರಕಲಿಂದ ಲಮೂಡಲು ಬಡಗಲು ತುಂಗಭದ್ರೆಯಿಂದ ತೆಂಕಲು ಮಾನಿ ತಿರಳಿಬಯಲುಗ್ರಾ
17. ಮ 2ಕ್ಕೆ ಚತುಸ್ಸೀಮೆ ಮೂಡಲು ಬುಕ್ಕರಾಯಪುರದವರ ಗದ್ದೆಯವತ್ತುವಿಡಿದು ಹತ್ತಿದಹೊಳೆಯಿಂದ ಪಡುವಲು ತೆಂಕಲು ತ
18. ಳವೆಯ ಅಡ್ಡಗುಡ್ಡೆಯ ನೀರೇರ್ರಕಲಿಂದ ಬಡಗಲು ಪಡುವಲು ಅಡ್ಡಗುಡ್ಡೆಯ ನೀರೇರ್ರಕಲಿಂದ ಮೂಡಲು ಬಡಗಲು ಮಾನಿ
19. ಯ ಅಡ್ಡಗುಡ್ಡೆಯ ನೀರೇರ್ರಕಲಿಂದ ತೆಂಕಲು ಮೂತ್ತೂರ ರಾಮಯಸೇನಬೋವನಿಂದ ಕ್ರಯವಾಗಿ ಬಂದ ಕಉರಿ
20. ಯ ಬಯಿಲಗ್ರಾಮದ ಗದೆ ವಪಿದಸ್ಥಳಕೆಸಹ ಚತುಸ್ಸೀಮೆ ಮೂಡಲು ಕಲುಗುಡ್ಡೆಯ ನೀರೇರ್ರಕಲಿಂದ ಪಡುವಲು
21. ತೆಸಂಕಲು ಸಂಣೆನಾಯಕನ ಮನೆಗೆ ತೆಗದ ಅಗಳಿಂದಂ ಮೂಡಲು ಪಡುವಲು ರಾಮೇ
22. ಬೋವನಗಡಿಯ ನಾರಣತೋಟದಲಿ ತೆಗದಗಳಿಂದಂ ಮೂಡಲು ಬಡಗಲು ತಂಮಯ
23. ನಗದ್ದೆಯ - ಚರಿಯಿಂದಂ ತೆಂಕಲು ಕೊಮರಿ ಚತುಸ್ಸೀಮೆ ಮೂಡಲು ಬ್ರಂಹ್ಮದೇವರ ಸರು -- ನಯಿಾ
24. ಗದೆ ನೀರೇರಕಲಿಂದಂ ಪಡುವಲು ತೆಸಂಕಲು ಪುಣುಸವಳಿಗದೆ ನೀರೇರ್ರಕಲಿಂದಂ ಬಡಗಲು ಪಡುವಲುನೆ---
25. ---ಯಿದಂ---ಬಡಗ-ಗ್ಪದೆಯಿಂದಂ ತೆಂಕಲು ಕೆರೆಕ್ವೋಡ ಚತುಸ್ಸೀಮೆ ಮೂಡ
26. --ದಿಂದಂ ಪಡುವಲು ತೆಂಕಲು ಗುಡೆಕ್ವೋಡದಾರಿಯ ನೀರೇರ್ರಕಲಿಂದಂ ಬಡಗಲು ಪಡುವಲುನೆ---
27. ---ಯಿಂದಂ ಮೂಡಲು ಬಡಗಲು---ದಲಗದೆಯಿಂದಂ ತೆಂಕಲು ಕೆರೆಕ್ವೋಡ ಚತುಸ್ಸೀಮೆ ಮೂಡ
28. --ದಿಂದಂ ಪಡುವಲು ತೆಂಕಲು ಗುಡೆಕ್ವೋಡದಾರಿಯ ನೀರೇರ್ರಕಲಿಂದಂ ಬಡಗಲು ಪಡುವಲು ನೆಟ್ಟ ನೀರೇ
29. ರ್ರಕಲಿಂದಂ ಮೂಡಲು ಬಡಗಲು ನೀರೇರ್ರಕಲಿಂದಂ ತೆಂಕಲು ಯಿಂತೀಚತುಸ್ಸೀಮೆಯೊಳಗಾದ ನಿ
30. ಕ್ಷೇಪಜಲಪಾಷಾಣ ಅಕ್ಷೀಣೀ ಆಗಾಮಿಸಿಧಸಾರ್ಥಯಂಗಳೆಂಬ ಅಷ್ಟಭೋಗತೇಜಸ್ವಾಮ್ಯ---
31. ಳಗಾ---ಗೆ ಅಯನುರ್ರುಅಡಕೇಮರನ ಕ್ಷೇತ್ರ---ಭಟನಿಂದ ಶ್ರೋತ್ರಿಯೆಸಿದ್ಧಾಯವಾಗಿ
32. ಸಲುವದು ಗ 1ವೊಂದು ವರಹನು ಸಹ ಯಿಾ ಆರ್ರುಗ್ರಾಮವನೂ------
33. ಭಂಡಾರಕ್ಕೆ ತೀರ್ಥದಹಳಿ ಅಮರೇಂದ್ರಪುರೀ ವೊಡೆಯರ ಶಿಶ್ಯರು ದೇವೇಂದ್ರಪುರೀವೊಡೆಯ

34. ರು ಧಾರೆಯನೆರದು ಸಮರ್ಪ್ಪಿಸಿಕೊಟ್ಟ ಶಿಲಾಶಾಸನದ ಬಿಂನವತ್ತಳೆಯಾ ಆರ್ರು---

35. –ಕಡ–ಕೆ ಶಂಕರಭಟ್ಟರು ಮಾಡಿದ ಛತ್ರಕೆ ಸಲುವ ಗ್ರಾಮಗಳು ಕಉರಿಯಬಯಿಲು

36. ಯಿದಕೆ ಸಾಕ್ಷಿಗಳು ಆದಿತ್ಯ ಚಂದ್ರಾವನಿಲೋನಲಶ್ಚ ದ್ಯೌರ್ಭೂಮಿರಾ

37. ಪೋ ಹ್ರುದಯಂ ಯಮಶ್ಚ ಅಹಶ್ಚ ರಾತ್ರಿಶ್ಚ ಉಭೇಚ ಸಂಧ್ಯೇ ಧರ್ಮಸ್ಯ ಜಾನಾ

38. ಘ ನರಸ್ಯ ಉ್ರತ್ತಂ। ದಾನಪಾಲನಯೋರ್ಮ್ಮಧ್ಯೇ ದಾನಾಚ್ಛ್ರೇಯೋನುಪಾಲನಂ ದಾನಾತ್ಸ್ವರ್ಗ್ಗಮವಾಪ್ನೋ

39. ಘ ಪಾಲನಾದಚ್ಯುತಂ ಪದಂ --- ರವಪಿತ----

ಅದೇ ದೇವಾಲಯದಲ್ಲಿರುವ ಎರಡನೆ ಶಾಸನ

1. **ಚಿಂನ್ನ ಭಂಢಾರದ ನಾರಾಯಣ ಅಯ್ಯನವರ**

2. **ಮಗ ರಾಯಸದ ಹರಿಯಪಂಗಳು ಮಾಡಿದ ಧರ್ಮ–**

3. ಶ್ರಿಗಣಾಧಿಪತಯೆನಮಃ। ನಿರ್ವಿಘಮ

4. ಸ್ತು ನಮಸ್ತುಂಗ ಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಲೋಕ್ಯನಗರಾ

5. ರಂಭ ಮೂಲ ಸ್ತಂಭಾಯ ಶಂಭವೇ ಸ್ವಸ್ತಿಶ್ರಿ ಜಯಾದ್ಬು

6. ದಯ ಶಾಲಿವಾಹನ ಶಕ ವರುಷ **1506ನೆಯ ಸಲುವವರ್ತ**

7. **ಮಾನ ವೆವಹಾರಿಕೆ ಸ್ವಭಾನು ಸಂವತ್ಸರದ ಆಷಾಡ ಶುದ್ದ 13 ಸ್ತಿ**

8. **ರವಾರದಲ್ಲು** ಶ್ರಿಮತು ತ್ತುಂಗಭದ್ರ ದಕ್ಷಿಣ ಕೂಲವಾ

9. ದ ತ್ತಿರ್ಥಹಳ್ಳಿಯ ಅಮರೇಂದ್ರಪುರಿ ಶ್ರಿಪಾದಂಗಳ ಮಲೆಯಾಳಮಠ

10. ದ ವಿಶ್ವನಾಥದೇವರ ಶ್ರಿಚರಣಾರವಿಂದಕೆ ವಶಿಷ್ಟ ಗೋತ್ರದ ಆ

11. ಶ್ವಲಾಯನ ಸೂತ್ರದ ರುಕು ಶಾಖೆಯ ಚಿಂನ್ನಭಂಡಾರದ ನಾರಾಯಣಪ್ಪ

12. ಯ್ಯನವರ ಮಕ್ಕಳು ರಾಯಸದ ಹರಿಯಪ್ಪಗಳುಧಾರೆಯನೆರದು ಸಮ

13. ರ್ಪ್ಪಿಸಿದ ಭೂಮಿಯ ಧರ್ಮ್ಮಶಾಸನದ ಕ್ರಮವೆಂತ್ತೆಂದರೆ ಗಿಡುವಲನಾಡ

14. ಹರಳಿಯ ಪಾಲೊಳಗೆ ತಿರ್ಥಹಳಿಯ ಅಮರೇಂದ್ರಪುರಿ ಶ್ರಿಪಾದಂ

15. ಗಳ ಮಠಕ್ಕೆ ಏಕ ಭೊಗ ಸರ್ವ್ವಮಾನ್ಯಕ್ಕೆ ಸಲುವ ಹೆಗ್ಗಡತಿಕೊಪ್ಪ

16. ಖ20 ಖಂಡುಗ ಭೂಮಿಯ ಗ್ರಾಮವನು ತ್ತಿರ್ಥಹಳಿ ಅಮರೇಂದ್ರಪುರೀ ಶ್ರಿಪಾ

17. ದಂಗಳ ಕಯಿಂದ ಗ78 ವರಹಗೆ ನಾಲ್ರು ಕ್ರಯ ದಾನವಾಗಿ ತೆಗದು ಕೊಂ

18. ಡು ನಂಮ ತಾಯಿ ತ್ತಿಂಮಂಮನವರಿಗೆ ಶಾಶ್ವತ ಬ್ರಂಹ್ಮಲೊಕ ಪ್ರಾಪ್ತಿಯಾಗಬೆಕೆಂದು

19. ಶನಿತ್ರಯೋದಶಿ ಪ್ರದೋಷ ಪುಂಣ್ಯಕಾಲದಲು ಆ ಹೆಗ್ಗಡತಿಕೊಪ್ಪ 20 ಖಂ

20. ಡುಗ ಭೂಮಿಯ ಗ್ರಾಮವನೂದೇವರ ಅಮ್ರುತಪಡಿ ನಂದಾದೀಪ್ತಿ ಸತ್ರಕ್ಕಾಗಿ

21. ಧಾರೆಯನೆರದು ಸಮರ್ಪಿಸಿದೆವಾಗಿ ಆ ಗ್ರಾಮದ ಚತುಸೀಮೆ ವಿವರ ಹ

22. ದಿನೆಂಟು ಖಂಡುಗಕ್ಕೆ ಚತುಸಿಮೆ ಮೂಡಲು ಬ್ಬುರಾಯಪುರದ ಗ್ರಾಮಕೆ ಸಲುವ ಮುನಿ

23. ಊರ ಗದ್ದೆಗಡಿಯಿಂದ ಪಡುವಲು ತೆಂಕಲು ಗುಡೆ ನಿರೆರಕಲಿಂದ ಬಡಗಲು ಪಡು
24. ವಲು ಗುಡೆ ನೀರೆರಕಲಿಂದ ಮೂಡಲು ಬಡಗಲು ಗುಡ ನಿರೆರಕಲಿಂದರಿಂದ ತೆಂಕಲು ಯಿ
25. ಖಂಡುಗ ಭೂಮಿಯ ಚತ್ತುಸೀಮೆ ಮೂಡಲು ಹರಿವ ಹಳದಿಂ ಪಡುವಲು ತೆಂಕ
26. ಲು ಮುನಿಊರ ಗದ್ದೆಗಡಿಯಿಂ ಬಡಗಲು ಪಡುವಲು ಮುನಿಊರ ಗದ್ದೆಗಡಿಯಿಂ
27. ದ ಮೂಡಲು ಬಡಗಲು ಮುನಿಊರ ಗದ್ದೆಗಡಿಯಿಂದ ತೆಂಕಲು ಯಿಂತೀ ಚಸುಸೀ
28. ಮೆವೊಳಗುಳ ನಿಧಿನಿಕ್ಷೇಪಜಲಪಾಷಾಣಕ್ಷೀಣಿ ಆಗಾಮಿಸಿದ್ದಸಾಧ್ಯ
29. ಗಳೆಂಬ ಅಷ್ಟಭೋಗತೇಜಸ್ವಾಮ್ಯಸಹವಾಗಿ ತ್ತುಂಗಭದ್ರಾದಕ್ಷಿಣಕೂಲವಾ
30. ದ ತೀರ್ಥಹಳಿಯ **ಅಮರೇಂದ್ರಪುರೀಶ್ರೀಪಾದಂಗಳ ಮಲೆಯಾಳಮಠದ ವಿಶ್ವನಾ**
31. **ಥದೇವರ ಶ್ರೀಚರಣಾರವಿಂದಕೆ ವಸಿಷ್ಟಗೋತ್ರದ ಆಶ್ವಲಾಯನ ಸೂತ್ರದ ರುಕುಶಾ**
32. **ಖೆಯ ಚಿಂನಭಂಡಾರದ ನಾರಾಯಣಪ್ಪಯ್ಯನವರ ಮಕ್ಕಳು ರಾಯಸದ**
33. **ಹರಿಯಪ್ಪಗಳು ನಂಮ ತಾಯಿ ತಿಂಮಂಮನವರಿಗೆ ಶಾಶ್ವತ ಬ್ರಹ್ಮಲೋಕವಾಗಬೇ**
34. **ಕೆಂದು ಶನಿತ್ರಯೋದಶೀಪುಣ್ಯಕಾಲದಲ್ಲಿ ಧಾರೆಯನೆರದು ಸಮರ್ಪಿಸಿದೆನಾ**
35. **ಯಿಪ್ಪತ್ತು ಖಂಡುಗ ಭೂಮಿಗೆ ಸಲುವ** ಗಡಿ ಭತ್ತ ಖ 48 ರೊಕ್ಕಸಿದ್ಧಾಯ ಸಲು
36. ವದು ಗ 3 ಮೂರು ವರಹಾ ನಾಲ್ವತ್ತೆಂಟು ಖಂಡುಗ ಭತ್ತಕೆ ವಿನಿಯೋ
37. ಗದೇವರ ಅಮ್ರುತಪಡಿ ಪ್ರತಿ ದಿನ 1ಕ್ಕೆ ಪಡಿಯೂ ನಿ

ಹಿಂಭಾಗ–

38. ವೇದ್ಯದ ಕಟಳೆಗೆ ಭತ್ತ ಖ 12 ಸತ್ರಕೆ ದಿನ 1ಕೆ ಬ್ರಾಹ್ಮರ ಜ
39. ನ ಎರಡಕೆ ವರುಶ 1ಕೆ ಖ 36 ಉಭಯಂ ಖ 48 ನಂದಾದೀಪ್ತಿ
40. 1ಕೆ ಮೂರು ವರಹ ಯೀ ಧರ್ಮ್ಮಉ **ಆಚಂದ್ರಾರ್ಕವಾಗಿ ನ**
41. **ಡವಮುರಿಯಾದೆಯಲ್ಲಿ ತುಂಬಭದ್ರಾದಕ್ಷಿಣಕೂಲವಾದ ತೀ**
42. **ರ್ಥಹಳಿ ಅಮರೇಂದ್ರಪುರೀ ಶ್ರೀಪಾದಂಗಳ ಮಲೆಯಾಳಮಠ**
43. **ದ ವಿಶ್ವನಾಥದೇವರ ಶ್ರೀಚರಣಾರವಿಂದಕೆ ವಸಿಷ್ಟ ಗೋತ್ರ**
44. **ದ ಆಶ್ವಲಾಯನ ಸೂತ್ರದ ರುಕ್ಕು ಶಾಖೆಯ ಚಿಂನಭಂಡಾರ**
45. ದ ನಾರಾಯಣಪ್ಪಯ್ಯನವರ ಮಕ್ಕಳು ರಾಯಸದ ಹರಿಯಪ್ಪಂಗ
46. ಳು ನಾಉ ನಂಮ ಸ್ತ್ರೀಪುತ್ರಗ್ಯಾತಿಸಾವಂತದಾಯಾದಾನುಮತ ಪು
47. ರಸ್ಸರವಾಗಿ ಸಹಿರಂಣ್ಯೋದಕದಾನಧಾರಾಲಪೂರ್ವ್ವಕವಾಗಿ
48. ಧಾರೆಯನೆರದು ಸಮರ್ಪಿಸಿದ ಭೂದಾನಶಿಲಾಶಾಸನ
49. ಯಿಗ್ರಾಮವನು ರೂಢವ ಮಾಡಿ ಯಿಾ ಖ 48 ಖಂಡುಗ ಭತ್ತವನು
50. ಮೂರು ವರಹಂನು ಕಾಲ ಕಾಲಂ ಪ್ರತಿಯಲ್ಲೂ ಕೊಟ್ಟು

51. ಯಿಾ ಧರ್ಮ್ಮಉೂ ನ್ಯೂನಾತಿರಿಕ್ತವಿಲ್ಲದೆ ನಡಸುವವರು ತೀ
52. ರ್ಥಹಳಿಯ ಅಮರೇಂದ್ರಪುರೀ ಶ್ರೀಪಾದಂಗಳೂ ಯಿಂ
53. ತ್ತೊಪ್ಪಿಧಕ್ಕೆ ಸಾಕ್ಷಿಗಳು ಆದಿತ್ಯಚಂದ್ರಾಅನ
54. ಲೋ ಅನಿಲಶ್ಚ ದ್ಯೌರ್ಭೂಮಿರಾಪೋ ಹ್ರದಯಂಂ
55. ಯಮಶ್ಚ ಅಹಶ್ಚ ರಾತ್ರಿಶ್ಚ ಉಭ ಏಚ ಸಂಧ್ಯೇ ಧ
56. ರ್ಮ್ಮಸ್ಯ ಜಾನಾತಿ ನರಸ್ಯ . ಸ ದಾನಪಾಲನ
57. ಯೋರ್ಮ್ಮಧ್ಯೆ ದಾನಾಛ್ರೇಯೋನ್ರುಪಾಲನಂ ದಾನಾಸ್ವರ್ಗ
58. ಮವಾಪ್ನೋತಿ ಪಾಲನಾದಚ್ಚುತಂ ಪದಂ ನರಸಾಕ್ಷಿಗಳು
59. ತೀರ್ಥಹಳಿಯ ಅಮರೇಂದ್ರಪುರೀ ಶ್ರೀಪಾದಂಗಳು
60. ಬುಕ್ಕರಾಯಪುರದ ಮಹಾಜನಂಗಳು ಕರ್ತುಗಳ ವೊ
61. ಪ್ಪಿತ ಹರಿಯಪ್ಪನ ಸ್ವಹಸ್ತದ ಒಪ್ಪಿತದ ಬಿಂನಹ
62. ಸಾಕ್ಷಿಗಳ ವೊಪ್ಪಿತ ---------
63. ಬುಕ್ಕರಾಯಪುರದ ಮಹಾಜನಂಗ
64. ಳ ಸಾಕ್ಷಿ ಶ್ರೀ---ಕಯ

ಮೊದಲ ಶಾಸನದಲ್ಲಿ ಕಂಡುಬರುವ ವಿಶೇಷ ಮಾಹಿತಿಗಳು :

14 ಸಾಲು ಸಂಸ್ಕೃತದಲ್ಲಿ, 23 ಸಾಲುಗಳು ಕನ್ನಡದಲ್ಲಿದೆ. ಗಂಗಾಧರಪುರಿಗಳು ತುಂಗಭದ್ರಾ ತೀರದಲ್ಲಿ ತೀರ್ಥಹಳ್ಳಿಯಲ್ಲಿ ನರಸಿಂಹನನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಾ ಬಂದಿದ್ದರು. ಅವರ ಶಿಷ್ಯರು ಬ್ರಹ್ಮಜ್ಞಾನಿಗಳಾದ ಅಮರೇಂದ್ರಪುರಿಗಳು. ಅವರ ಶಿಷ್ಯರು ಸರ್ವಜ್ಞರೆನಿಸಿದ್ದ ಯಾದವೇಂದ್ರಪುರಿಗಳು ಅವರ ಶಿಷ್ಯರು ಜ್ಞಾನಿಗಳೂ,ಪಂಡಿತರೂ, ರಾಜಪೂಜಿತರೂ ಆಗಿದ್ದ ಅಮರೇಂದ್ರಪುರಿಗಳು. ವಿಜಯನಗರದರಸರ ಸದಾಶಿವರಾಯರ ಕಾಲದ ಶಾಸನ ಇದಾಗಿದೆ. ಕಾಲ ಅಕ್ಟೋಬರ್ 6, 1564.

ಅಮರೇಂದ್ರಪುರಿಗಳ ಶಿಷ್ಯರು ದೇವೇಂದ್ರಪುರಿಗಳು (ಶುದ್ಧ ಮಾನಸಃ)... ಇವರು ತುಂಗಾನದಿಯ ದಕ್ಷಿಣ ತೀರದಲ್ಲಿ ಮತ್ತು ಮಲೆಯಾಳ ಮಠದಲ್ಲಿ, ತಿಮ್ಮ ಪಂಡಿತನೆಂಬುವನು ನರ್ಮದಾ ತೀರದಿಂದ ತಂದುಕೊಟ್ಟ ಲಿಂಗವನ್ನು ಪ್ರತಿಷ್ಠಾಪಿಸಿದರು. ಈ ದೇವಸ್ಥಾನ ಸ್ಥಾಪನೆಯಾದ ಕಾಲ ಅಂದಾಜು ಶಾ.ಶ.1276 – ಕಾಳಿಯುಕ್ತಿ ಸಂವತ್ಸರದ ವೈಶಾಖ ಶುಕ್ಲ ಸಪ್ತಮಿ (ಶಂಕರ ಪಂಚಮಿಯಾಗಿ 2 ದಿನದ ನಂತರ) ಉಪರಿ ಅಷ್ಟಮಿ.

"ರಕ್ತಾಕ್ಷಿ ಸಂವತ್ಸರದ ಕಾರ್ತೀಕ ಶುಕ್ಲ ಪಾಡ್ಯದಂದು ಆರಗ ರಾಜ್ಯದ ರಾಜರು ವಿಶ್ವೇಶ್ವರನ ವಿನಿಯೋಗಕ್ಕಾಗಿ ಶ್ರೀ ಅಮರೇಂದ್ರಪುರಿ ಶ್ರೀಪಾದಂಗಳಿಗೆ ಆರು ಗ್ರಾಮಗಳ ದತ್ತಿಯನ್ನು ಸಮರ್ಪಿಸುತ್ತಾರೆ" ಇದರ ಸ್ಮರಣಪೂರ್ವಕವಾಗಿ ಈ ಶಾಸನವನ್ನು ಹಾಕಲಾಗಿದೆ. ಇದಕ್ಕೆ ಸಾಕ್ಷಿಗಳು ಅಮರೇಂದ್ರಪುರಿ ಶ್ರೀಪಾದಂಗಳು ಹಾಗೂ ಬುಕ್ಕರಾಯ ಮಠದ ಮಹಾಜನಗಳು.

ಎರಡನೆ ಶಾಸನದಲ್ಲಿ ಕಂಡುಬರುವ ವಿಶೇಷ ಮಾಹಿತಿಗಳು :

ತೀರ್ಥಹಳ್ಳಿ ಅಮರೇಂದ್ರಪುರಿ ಶ್ರೀಪಾದಂಗಳ ಮಲೆಯಾಳ ಮಠದ ಶ್ರೀವಿಶ್ವನಾಥ ದೇವರಿಗೆ ವಸಿಷ್ಠಗೋತ್ರದ ಆಶ್ವಲಾಯನ ಸೂತ್ರದ ಋಕ್ ಶಾಖೆಯ ಚಿನ್ನ ಭಂಡಾರದ ನಾರಣಪ್ಪಯ್ಯನವರ ಮಕ್ಕಳು ರಾಯಸದ ಹರಿಯಪ್ಪಗಳು ನೀಡಿದ ಭೂದಾನ ಶಾಸನ– ಕೊಪ್ಪದ ಖಂಡುಗ 20 ಶ್ರೀ ಅಮರೇಂದ್ರಪುರಿ ಶ್ರೀಪಾದರವರಿಂದ 78 ವರಹಾಕ್ಕೆ ಕ್ರಯಕ್ಕೆ ಪಡೆದು

ತಾಯಿ ತಿಮ್ಮಮ್ಮನವರಿಗೆ ಶಾಶ್ವತ ಬ್ರಹ್ಮಲೋಕ ಪ್ರಾಪ್ತಿಯಾಗಲು ದೇವರ ಅಮೃತ ಪಡಿಗೆ ನೀಡಿದ ದಾನ ಶಾಸನ. ಈ ಶಾಸನವು ಜೂನ್ 22, 1583 ರು ಶನಿವಾರದ್ದಾಗಿದೆ.

ಈ ಶಾಸನದಲ್ಲಿ ಉಲ್ಲೇಖನಗೊಂಡ ಬುಕ್ಕರಾಯಪುರ, ಚಿನ್ನ ಭಂಡಾರ ಮನೆತನ ಇತಿಹಾಸ ಅಂಶವನ್ನೊಳಗೊಂಡಿದೆ. ಶಾಸನ ಕಾಲ ಕ್ರಿ.ಶ 1506ನೆ ಸ್ವಭಾನು ಸಂ।ದ ಆಷಾಡ ಶುದ್ಧ 13 ಸ್ಥಿರವಾರ. ಸ್ವಾಮಿ ಕಣ್ಣಪಿಳ್ಳೆರವರ ಎಫಿಮೆರೀಸ್ ಪ್ರಕಾರ ದಿ.22–6–1583 ಆಗುತ್ತದೆ. ಕ್ರಿ.ಶ,1565ರಲ್ಲಿ ವಿಜಯನಗರದ ಪತನದ ನಂತರ ಕೆಳದಿ ಅರಸು ಚಿಕ್ಕ ಸಂಕಣ್ಣನಾಯಕನು ಆಶ್ರಯ ಬೇಡಿ ಬಂದ ಚಿನ್ನ ಭಂಡಾರದ ನಾರಣಪ್ಪಯ್ಯನಿಗೆ ಆಶ್ರಯವಿತ್ತು ಕೆಳದಿ ಅರಮನೆಯ ಚಿನ್ನಭಂಡಾರದ ಅಧಿಕಾರಿಯನ್ನಾಗಿ ನೇಮಿಸಿದನು. ವಿಜಯನಗರ ರಕ್ಕಸಗಿತಂಗಡಗಿ ಯುದ್ಧಕಾಲ 1565ರ 19 ವರ್ಷದ ನಂತರದ ಈ ಶಾಸನ ಇತಿಹಾಸದ ವೈಶಾಲ್ಯತೆಯನ್ನು ಹೆಚ್ಚಿಸುತ್ತದೆ. ಚಿನ್ನಭಂಡಾರದ ಮನೆತನದ ಸುಮಾರು ಒಂದುನೂರಕ್ಕೂ ಹೆಚ್ಚು ನಿರೂಪಗಳು/ಶಾಸನಗಳು ಲಭ್ಯವಿದೆ. ಈ ಮನೆತನದವರು ಇಂದೂ ಕುರುವಳ್ಳಿಯಲ್ಲಿ ವಾಸವಾಗಿದ್ದಾರೆ.

ಈ ಎರಡೂ ಶಾಸನಗಳನ್ನು ಆಧರಿಸಿ ಹೇಳುವುದಾದರೆ ಶ್ರೀ ಗಂಗಾ ವಿಶ್ವೇಶ್ವರ ದೇವಾಲಯದ ನಿರ್ಮಾಣವು ಸುಮಾರು ಶಾ.ಶ. 1276 ಅಂದರೆ ಕ್ರಿ.ಶ. 1354ರ ಕಾಳಿಯುಕ್ತಿ ಸಂವತ್ಸರದ ವೈಶಾಖ ಶುಕ್ಲ ಸಪ್ತಮಿ (ಶಂಕರ ಪಂಚಮಿಯಾಗಿ 2 ದಿನದ ನಂತರ) ಉಪರಿ ಅಷ್ಟಮಿಯಂದು ಆಗಿರಬಹುದೆಂದು ಹೇಳಬಹುದಾಗಿದೆ.

ಶ್ರೀ ಗಂಗಾ ವಿಶ್ವೇಶ್ವರ ದೇವಸ್ಥಾನ

ಈ ದೇವಾಲಯದ ಉಲ್ಲೇಖ ಶಾಸನದಲ್ಲಿದ್ದರೂ ಕಡತದಲ್ಲಾಗಲಿ, ಮುಜರಾಯಿ ಇಲಾಖೆಯ ದಾಖಲೆಗಳಲ್ಲಾಗಲಿ ಇದು ದಾಖಲಾಗಿಲ್ಲ. ಶ್ರೀ ಗಂಗಾ ವಿಶ್ವೇಶ್ವರ ದೇವಾಲಯವು ಎತ್ತರದ ದಿಬ್ಬದ ಮೇಲೆ ಪೂರ್ವಾಭಿಮುಖವಾಗಿ, ಆಯತಾಕಾರದಲ್ಲಿ ನಿರ್ಮಾಣವಾಗಿದೆ. ದೇವಾಲಯಕ್ಕೆ ಹೋಗಲು ಸುಮಾರು ಹದಿನೈದು ಮೆಟ್ಟಿಲುಗಳಿವೆ. ಮುಂಭಾಗದಲ್ಲಿ ಸುಮಾರು 12 ಅಡಿ ಎತ್ತರ ಮತ್ತು 4 ಅಡಿ ಅಗಲದ ಪ್ರವೇಶ ದ್ವಾರ ತೋರಣದ ಬಾಗಿಲ ಚೌಕಟ್ಟಿದೆ. ಅದನ್ನು ದಾಟಿ ಮುಂದಡಿ ಇಟ್ಟರೆ ಸುಮಾರು 50–60 ಅಡಿ ಸುತ್ತಳತೆಯ ಅಂಗಳ ಸಿಗುತ್ತದೆ. ಈ ಅಂಗಳದಲ್ಲಿ ದೇವಾಲಯದ ಮುಖ್ಯ ದ್ವಾರದಲ್ಲಿ ಎರಡು ಶಿಲಾ ಶಾಸನ ಇದೆ. ಇವು ಈ ದೇವಾಲಯದ ಮೇಲೆ ಬೆಳಕು ಚೆಲ್ಲುವಂತಹುದಾಗಿದೆ. ಮುಖ್ಯದ್ವಾರದ ಎದುರಲ್ಲಿ ಸುಮಾರು 3 x 3 ಅಳತೆಯ ಸೂರ್ಯಕಿರಣ ಇದೆ. ಇದನ್ನು ಕ್ಷೇತ್ರಪಾಲನೆಂದು ಕರೆಯುತ್ತಾರೆ. ಹನ್ನೆರಡು ಪದ್ಮಗಳುಳ್ಳ ಇದು ಶೈವ ಪರಂಪರೆಯಲ್ಲಿ ಇರುವ ಪಂಚಾಯತನ ಪೂಜಾ ವ್ಯವಸ್ಥೆಯನ್ನು ತಿಳಿಸುತ್ತದೆ. ಇದರ ಕೆಳಭಾಗದಲ್ಲಿ ಸುತ್ತಲೂ ಇದ್ದ ಬಲಿಕಲ್ಲುಗಳನ್ನು ಶೇಖರಿಸಿಡಲಾಗಿದೆ. ಮುಂಭಾಗದಲ್ಲಿ ಸುಮಾರು 5 ಅಡಿ ಅಗಲದ ಮಂಗಳೂರು ಹಂಚಿನ ಮಾಡು ಇದೆ. ಇದನ್ನು ಸ್ಥಳೀಯವಾಗಿ ದೊರೆಯುವ ಜಂಬಿಟ್ಟಿಗೆಯಿಂದ ನಿರ್ಮಿಸಲಾಗಿದೆ. ಇದನ್ನು ಚಡಿ ಅಥವಾ ಜಗಲಿ ಎಂದು ಸ್ಥಳಿಯರು ಕರೆಯುತ್ತಾರೆ. ಸ್ಥಳೀಯರಿಂದ ಅಡಿಕೆ ಚಪ್ಪರಕ್ಕೆ ಬಳಸುವ ಕಲ್ಲುಕಂಬಗಳಿಂದ ಇತ್ತೀಚೆಗೆ ಇದು ದುರಸ್ತಿಗೊಳಪಟ್ಟಿದೆ. ಮುಖ್ಯದ್ವಾರದ ಒಳ ಹೊಕ್ಕರೆ ಸುತ್ತಲೂ ಸುಮಾರು 8 ಅಡಿ ಅಗಲದ ಪೌಳಿ ಅಥವಾ ಚಂದ್ರಶಾಲೆ ಇದೆ. ಪೌಳಿಯ ಒಂದು ಪಕ್ಕದಲ್ಲಿ ಹಿಂದೆ ಪಾಕಶಾಲೆ ಇದ್ದ ಕುರುಹಾಗಿ ಒರಳುಕಲ್ಲೊಂದಿದೆ. ಇದೇ ಆವರಣದಲ್ಲಿ ಶ್ರೀ ಗಂಗಾ ವಿಶ್ವೇಶ್ವರ ಮತ್ತು ನಂದಿ ಮಂಟಪವಿದೆ. ಈ ದೇವರಿಗೆ ಶ್ರೀ ರಾಮಚಂದ್ರಾಪುರ ಮಠದ ವತಿಯಿಂದ ಪೂಜೆ ನಿರಂತರವಾಗಿ ನಡೆದುಬರುವ ವ್ಯವಸ್ಥೆ ಮಾಡಲಾಗಿದೆ. ದೀಪಾವಳಿ, ಕಾರ್ತೀಕ ಮಾಸದಲ್ಲಿ ವಿಶೇಷ ಪೂಜೆ ನಡೆಯುವುದಾಗಿ ತಿಳಿದುಬರುತ್ತದೆ.

ದೇವಾಲಯವು ಮುಖ ಮಂಟಪ, ಅಂತರಾಳ ಗರ್ಭಗುಡಿಗಳಿಂದ ಕೂಡಿದೆ. ಮುಖ ಮಂಟಪದ ಭುವನೇಶ್ವರಿಯು ಕಲಾತ್ಮಕವಾಗಿದೆ. ಭುವನೇಶ್ವರಿ ಮಧ್ಯದಲ್ಲಿ ಕೆಳಮುಖವಾಗಿರುವ ಕಮಲದಹೂವಿನ ಮೊಗ್ಗಿನ ಆಕಾರದ ಶಿಲ್ಪವಿದೆ. ಚೌಕಾಕಾರದ ಚಪ್ಪಡಿಗಳಿಂದ ಇದು ನಿರ್ಮಿತವಾಗಿದೆ. ಮುಂಭಾಗದಲ್ಲಿ ಮಹಾದ್ವಾರದ ಎರಡೂ ಪಕ್ಕಗಳಲ್ಲಿ ಸುಮಾರು 3 ಅಡಿ ಎತ್ತರದ ಶೈವ ದ್ವಾರಪಾಲಕರ ಮೂರ್ತಿಗಳಿವೆ. ಗರ್ಭಗೃಹದಲ್ಲಿ ನೆಲಕ್ಕೆ ಹಾಸುಗಲ್ಲಿನಿಂದಾವೃತವಾಗಿದ್ದು ಅದು ಸುಮಾರು ಎಂಟು ಅಡಿ ಚಚೌಕದಲ್ಲಿ ನಿರ್ಮಾಣವಾಗಿದೆ. ಅಲ್ಲಿ ಸುಮಾರು 2 x 2 ಅಳತೆಯ ಶಿವ ಲಿಂಗವಿದೆ. ಗರ್ಭಗುಡಿಯ

ಭುವನೇಶ್ವರಿಯಲ್ಲಿಯೂ ಕಮಲದ ಕೆತ್ತನೆ ಇದೆ. ಅಂತರಾಳವು ಸುಮಾರು 25 ಅಡಿ ಉದ್ದ 18 ಅಡಿ ಅಗಲವಿದೆ. ಮುಖ್ಯ ದ್ವಾರದ ಬಲಭಾಗದಲ್ಲಿ ಎರಡು ನಾಗರಕಲ್ಲುಗಳನ್ನು ಹೊರಗಿನಿಂದ ತಂದಿಡಲಾಗಿದೆ. ದೇವಾಲಯದ ಹೊರ ಗೋಡೆಯಲ್ಲಿ ಬಲಭಾಗದಲ್ಲಿ ರಾಹು, ಚಂದ್ರರ ಉಬ್ಬು ಚಿತ್ರವಿದೆ. ಗೋಪುರವು 3 ತಳದಿಂದ ಕೂಡಿದ್ದು ಮಲೆನಾಡ ಶೈಲಿಯನ್ನು ಒಳಗೊಂಡಿದ್ದು. ಇದು ಹಂತ ಹಂತವಾಗಿ ಇಳಿಜಾರಿನಿಂದ ಕೂಡಿದೆ.

ಮುಖ್ಯ ದೇವಾಲಯಕ್ಕೆ ಹೊಂದಿಕೊಂಡಂತೆ ಅದರ ಎದುರಲ್ಲಿ ಹೊರಭಾಗದಲ್ಲಿ ಸುಮಾರು 10 x 10 ಅಳತೆಯಲ್ಲಿ ನಂದಿ ಮಂಟಪ ನಿರ್ಮಿಸಲಾಗಿದೆ. ಭಗ್ನಗೊಂಡಿರುವ ಸುಮಾರು 1.5 ಅಡಿ ಎತ್ತರ ಮತ್ತು 2 ಅಡಿ ಅಗಲದ ನಂದಿ ಶಿಲ್ಪವನ್ನು ಇಲ್ಲಿ ಇಡಲಾಗಿದೆ. ಗುಡಿಯ ಮೇಲ್ಭಾಗದಲ್ಲಿ ಸರ್ವತೋಭದ್ರ ಕೂಟ ಶಿಖರವಿದೆ. ಎರಡೂ ದೇವಾಲಯಗಳು ಸುಮಾರು 3 ಅಡಿ ಎತ್ತರದ ಪ್ರತ್ಯೇಕ ಅಧಿಷ್ಠಾನವನ್ನು ಹೊಂದಿವೆ. ಈ ದೇವಾಲಯ ಚಿಕ್ಕದಿದ್ದರೂ ಚೊಕ್ಕವಾಗಿ ಸುಂದರವಾಗಿವೆ. ದೇವಾಲಯವು ವಿಜಯನಗರ ಮತ್ತು ವಿಜಯನಗರೋತ್ತರ ಶೈಲಿಯನ್ನು ಒಳಗೊಂಡಿದೆ. ವಿಜಯನಗರದ ನಂತರ ಕೆಳದಿ ಕಾಲದಲ್ಲಿ ಇದು ಮತ್ತೊಮ್ಮೆ ಜೀರ್ಣೋದ್ಧಾರಗೊಂಡಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ದೇವಾಲಯದ ಎದುರಲ್ಲಿರುವ ಎರಡೂ ಶಾಸನಗಳ ಆಧಾರದಿಂದ ಶ್ರೀ ಗಂಗಾ ವಿಶ್ವೇಶ್ವರ ದೇವಾಲಯ ನಿರ್ಮಾಣವು ಸುಮಾರು ಶಾ.ಶ. 1276 ಅಂದರೆ ಕ್ರಿ.ಶ. 1354ರ ಕಾಳಿಯುಕ್ತಿ ಸಂವತ್ಸರದ ವೈಶಾಖ ಶುಕ್ಲ ಸಪ್ತಮಿ (ಶಂಕರ ಪಂಚಮಿಯಾಗಿ 2 ದಿನದ ನಂತರ) ಉಪರಿ ಅಷ್ಟಮಿಯಂದು ಆಗಿರಬಹುದೆಂದು ಹೇಳಬಹುದು. ವಿಜಯನಗರ ಕಾಲದ ಈ ದೇವಾಲಯ ಅಷ್ಟಾಗಿ ವಿದ್ವಾಂಸರ ಗಮನ ಸೆಳೆದಿಲ್ಲವೆಂದೇ ಹೇಳಬೇಕು.

ಈ ದೇವಾಲಯದ ಹೊರಭಾಗದಲ್ಲಿ ಮಣ್ಣಿನ ದಿಣ್ಣೆಗಳಿವೆ. ಅಗ್ರಹಾರವಿದ್ದ ಅವಶೇಷ ಇಲ್ಲಿದೆ. ಒಮ್ಮೆ ಉತ್ಖನನವಾದಲ್ಲಿ ಹೆಚ್ಚಿನ ವಿಷಯ ಹೊರಹೊಮ್ಮಬಹುದಾಗಿದೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕೆಲವಿ ಗ್ರಾಮದಲ್ಲಿಯೂ ಶ್ರೀ ಗಂಗಾವಿಶ್ವೇಶ್ವರ ದೇವಾಲಯವೊಂದಿದೆ. ಅದೂ ಇದೇ ಕಾಲಘಟ್ಟಕ್ಕೆ ಸೇರಿದ್ದಿರಬೇಕು ಎಂದೆನ್ನಬಹುದು. ಲಕ್ಷ್ಮೀನರಸಿಂಹ ಆರಾಧ್ಯ ದೈವವಾಗಿರುವ ಮಠ ಗಂಗಾ ವಿಶ್ವೇಶ್ವರ ದೇವಸ್ಥಾನ ಸ್ಥಾಪನೆಗೆ ಮುಂದಾದದ್ದು ವಿಶೇಷ.

ಕ್ಷೇತ್ರ ಕಾರ್ಯಕ್ಕೆ ಸಹಕರಿಸಿ ಮಾಹಿತ ಒದಗಿಸಿದ ಶ್ರೀ ಅಶೋಕ್ ಹೆಗ್ಡೆ, ಛಾಯಾ ಚಿತ್ರ ಒದಗಿಸಿದ ಕುಮಾರಿ ಅರ್ಪಿತ, ಚಿ. ಗುರುಪ್ರಸಾದ್ ಹೆಗ್ಡೆ ಇವರಿಗೆ ನಾನು ಅಭಾರಿಯಾಗಿದ್ದೇನೆ.

ಆಧಾರಸೂಚಿ :

1. ಕರ್ನಾಟಕ ಗೆಝೆಟಿಯರ್, **ಕನ್ನಡ ನಾಡಿನ ಚರಿತ್ರೆ** – ಡಾ॥ ಎಸ್.ಸಿ ನಂದೀಮಠ, ಕ.ಸಾ.ಪ 1975. ಎಪಿಗ್ರಾಫೀಯ ಕರ್ನಾಟಕ ಸಂಪುಟಗಳು 8 ಭಾಗ 1,2
2. ಅವಲೋಕನ 'ಸಂಪುಟ' **ಕರ್ನಾಟಕ ಪರಂಪರೆಯ ಸಮೀಕ್ಷೆ**, 1985, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
3. ಶ್ರೀ ರಾಮಚಂದ್ರಾಪುರ ಮಠದಲ್ಲಿರುವ ಚಾರಿತ್ರಿಕ ದಾಖಲೆಗಳು ಸಂಪುಟ 1. 2013 ಮತ್ತು ಸಂಪುಟ 2 2016
4. ಎಪಿಗ್ರಾಫೀಯ ಕರ್ನಾಟಿಕ ಶಿವಮೊಗ್ಗ ಜಿಲ್ಲೆ (ಶಿವಮೊಗ್ಗ, ತೀರ್ಥಹಳ್ಳಿ ಭದ್ರಾವತಿ ತಾಲ್ಲೂಕು)ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. 2006 ಶಾಸನ ಸಂಖ್ಯೆ 118 (ಪುಟ 367–369) ಸಂ. 8 ತೀರ್ಥ 171 ಮತ್ತು ಶಾಸನ ಸಂಖ್ಯೆ 119, ಪುಟ 370–372 (ಸಂಪುಟ 8 ತೀರ್ಥ 172).

❑

27. ಕಮಲಾಪುರ ಪ್ರದೇಶದಲ್ಲಿರುವ ಬಾಲಕೃಷ್ಣ ದೇವಾಲಯದ ಸಂರಕ್ಷಣಾ ಕಾರ್ಯ

– ಡಾ. ಎಸ್.ಕೆ. ವಾಸುದೇವ

ಕಮಲಾಪುರ ಪಟ್ಟಣವು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಒಂದು ಪಟ್ಟಣ ಇದು ಹೋಬಳಿ ಕೇಂದ್ರವಾಗಿದ್ದು, ಹಂಪಿ ವಿಶ್ವ ಪರಂಪರೆ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ. ಇಂದಿನ ಹಂಪಿ ಮತ್ತು ಅದರ ಸುತ್ತಮುತ್ತಲ ಹಳ್ಳಿಗಳನ್ನು ಒಳಗೊಂಡಿದ್ದ ಅಂದಿನ ರಾಜಧಾನಿ ವಿಜಯನಗರ ಪಟ್ಟಣದಲ್ಲಿ (150, 200 ಉ ಅಕ್ಷಾಂಶ :760, 360 ಪೂ. ರೇಖಾಂಶ) ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದಾಗಿನಿಂದ ವಿವಿಧ ಅರಸು ಮನೆತನಗಳಿಗೆ ಸೇರಿದ ರಾಜರ ಅಕ್ಕರೆ ಮತ್ತು ಆಸಕ್ತಿಯಿಂದ ಬೃಹತ್ ಪ್ರಮಾಣದ ಧಾರ್ಮಿಕ, ಲೌಕಿಕ ಮತ್ತು ರಕ್ಷಣಾ ವಾಸ್ತು ನಿರ್ಮಾಣ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಲೇ ಇದ್ದವು. ದಕ್ಷಿಣ ಭಾರತವು ಈ ಹಿಂದೆ ಕಂಡರಿಯದಷ್ಟು ಪ್ರಮಾಣದ ನಿರ್ಮಾಣ ಚಟುವಟಿಕೆಗಳು ಇಲ್ಲಿ ನಡೆಯಿತು. ಅದರಲ್ಲಿಯೂ ಹಂಪಿಯ ರಮಣೀಯ ಪರಿಸರಕ್ಕೆ ಅನುಗುಣವಾಗಿ ಕಟ್ಟಡಗಳನ್ನು ನಿರ್ಮಿಸಿದರು. ರಾಮಾಯಣದಲ್ಲಿ ಉಲ್ಲೇಖವಾಗಿರುವ ಪ್ರಸಿದ್ಧ ಬೆಟ್ಟಗಳಾದ ಅಂಜನಾದ್ರಿ, ಕಿಷ್ಕಿಂದ, ಮಾತಂಗ, ಮಾಲ್ಯವಂತ, ಋಷ್ಯಮೂಕ, ಹೇಮಕೂಟ ಮತ್ತು ರತ್ನಕೂಟಗಳು ವಿಜಯನಗರ ವಾಸ್ತು ನಿರ್ಮಿತಿಗಳಿಗೆ ಹಿನ್ನೆಲೆಯಾಗಿ ಉತ್ತಮ ನೇಪಥ್ಯವಾಗಿ ಕಾರ್ಯನಿರ್ವಹಿಸುವುದರೊಂದಿಗೆ ಅದರ ಭಾಗವೇ ಆಗಿಹೋಗಿದೆ. ಈ ಪ್ರದೇಶದಲ್ಲಿ ಶಿವ ಮತ್ತು ಗಿರಿಜೆಯರು ವಾಸ ಮಾಡಿ ತಪಸ್ಸು ಆಚರಿಸಿ ಮದುವೆಯಾದ ಕಾರಣ ಇದನ್ನು ಪಂಪಾಕ್ಷೇತ್ರ ಎಂದು ಕರೆಯಲಾಗುತ್ತದೆ. ಪ್ರಾಗಿತಿಹಾಸ ಕಾಲಕ್ಕೆ ಸೇರಿದ ಮಾನವನ ಅವಶೇಷಗಳಾದ ಕಲ್ಲಿನ ವಸ್ತುಗಳು, ಮಡಿಕೆ, ಕುಡಿಕೆಗಳು, ಬಂಡೆಯಲ್ಲಿ ರಚಿಸಿರುವ ವರ್ಣಚಿತ್ರಗಳು, ಇತ್ಯಾದಿಗಳು ಇಲ್ಲಿರುವ ಮಸಲಯ್ಯನಗುಡ್ಡ, ವೆಂಕಟಾಪುರ, ಮುಂತಾದೆಡೆಗಳಲ್ಲಿ ದೊರಕಿವೆ.

ನಿರ್ದಿಷ್ಟ ಕಾಲ ಮತ್ತು ಅಂತರಗಳಲ್ಲಿ ರಚಿಸಿರುವ ಕೌಶಲ್ಯಪೂರ್ಣ ನಿರ್ಮಿತಿಗಳು ವಿಜಯನಗರ ಕಾಲದ ವಾಸ್ತು ಶೈಲಿಯ ಅನನ್ಯತೆ ಮತ್ತು ವಿಶೇಷತೆಯಾಗಿವೆ. ಹಂಪಿಯು ಆದಿ ಶಿಲಾಯುಗದ ಕಾಲದಿಂದ ಹಿಡಿದು ವಿಜಯನಗರ ಕಾಲದವರೆಗಿನ ಸ್ಮಾರಕಗಳ ಸಂಪತ್ತಿನ ಗಣಿಯಾಗಿದೆಯಂದೆ ಹೇಳಬಹುದು. ಕ್ರಿ.ಶ. 1624ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ಅರಸರಿಗೆ ಉಂಟಾದ ಸೋಲಿನಿಂದ ವಿಜಯನಗರ ಸಾಮ್ರಾಜ್ಯದ ಅವನತಿಯೊಂದಿಗೆ ಹಂಪಿಯ ವೈಭವ ನಾಶವಾಯಿತು. ಅಷ್ಟೇ ಅಲ್ಲದೆ ಹಲವಾರು ಸ್ಮಾರಕಗಳು ನಾಶವಾಗಿವೆ. ಅವುಗಳಲ್ಲಿ ಕಮಲಾಪುರ ಗ್ರಾಮದ ಸರ್ವೇ ನಂಬರ್ 24ರಲ್ಲಿರುವ(ಅಹಮದ್ ಖಾನ್ ಧರ್ಮಶಾಲೆಯ ಬಳಿ)ಬಾಲಕೃಷ್ಣ ದೇವಾಲಯದ ಸಂರಕ್ಷಣಾ ಕಾರ್ಯವನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸ್ಮಾರಕಗಳ ಸಂರಕ್ಷಣೆಯ ಅನುದಾನದಲ್ಲಿ ಸಂರಕ್ಷಿಸಲು ಯೋಜನೆಯನ್ನು ಕೈಗೆತ್ತಿಕೊಂಡು ಇದರಲ್ಲಿ ಈ ದೇವಾಲಯದ ಸಂರಕ್ಷಣಾ ಕಾರ್ಯವನ್ನು 2008 ರಿಂದ 2010ರಲ್ಲಿ ಪೂರ್ಣಗೊಳಿಸಲಾಯಿತು.

ಸ್ಮಾರಕದ ವಾಸ್ತವಿಕ ವಿವರ:

ಕಮಲಾಪುರ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಈ ದೇವಾಲಯವು ವಿಜಯನಗರ ಶೈಲಿಯ ದ್ರಾವಿಡ ಸಾಂಪ್ರದಾಯಿಕ ಕೆತ್ತನೆಯಿಂದ ಕೂಡಿದ ಹೆಚ್ಚುಗಡುಸಾದ ಗ್ರಾನೈಟ್(ಕಣಶಿಲೆ)ನಲ್ಲಿ ನಿರ್ಮಾಣಗೊಂಡ ದೇವಾಲಯವಾಗಿದೆ. ದೇವಾಲಯದ ನಿರ್ದಿಷ್ಟ ದಿನಾಂಕವನ್ನು ನೀಡುವ ಯಾವುದೇ ಶಾಸನವು ಲಭ್ಯವಾಗಿಲ್ಲ. ಆದರೂ ದೇವಾಲಯವು 14 ರಿಂದ 16ನೇ ಶತಮಾನದಲ್ಲಿ ನಿರ್ಮಾಣ ಮತ್ತು ವಿಸ್ತರಣೆ ನಡೆದಿರುವುದು ಕಂಡು ಬರುತ್ತದೆ. ದೇವಾಲಯವು ಮುಖ್ಯವಾಗಿ ಪೂರ್ವ ಹಾಗೂ ದಕ್ಷಿಣ ಮುಖವಾಗಿರುವುದು ವಿಶೇಷ ದೇವಾಲಯವನ್ನು ನಿಧಿಗಳ್ಳರು, ನೈಸರ್ಗಿಕ ಪ್ರಭಾವ ಹಾಗೂ ಯುದ್ಧದ ದಾಳಿಯಿಂದ ಶಿಥಿಲತೆಗೆ ಒಳಗಾಗಿವೆ. ಸಂರಕ್ಷಣೆಗೆ ಈ ಸ್ಮಾರಕವು ಕನಿಷ್ಠ ಮಟ್ಟದಲ್ಲಿದ್ದು, ಅತಿ ಜರೂರ ಸಂರಕ್ಷಣೆ ಮಾಡಲೇಬೇಕಾಗಿ ಬಂದಕಾರಣ ಇದನ್ನು ಇಲಾಖೆಯ ಸಂರಕ್ಷಣಾ ಕಾರ್ಯಯೋಜನೆಯಲ್ಲಿ ತೆಗೆದುಕೊಳ್ಳಲಾಯಿತು.

ಸ್ಮಾರಕದಲ್ಲಿನ ಸಂರಕ್ಷಣಾ ಕಾರ್ಯದ ವಿವರ:

ದೇವಾಲಯವನ್ನು ಸಂರಕ್ಷಣೆಗಾಗಿ ತೆಗೆದುಕೊಂಡು, ಸ್ಮಾರಕವನ್ನು ಪೂರ್ಣವಾಗಿ ಸಂರಕ್ಷಿಸುವ ದೃಷ್ಟಿಯಿಂದ ಸ್ಮಾರಕದ ಹಾಗೂ ಹೊರ ಆವರಣದಲ್ಲಿ ಬೆಳೆದ ಗಿಡಗಂಟೆಗಳನ್ನು ತೆಗೆಯುವುದು. ಸ್ಮಾರಕದ ಸಂಪೂರ್ಣ ದಾಖಲೀಕರಣದೊಂದಿಗೆ ಸಂಖ್ಯೆಯನ್ನು ನಮೂದಿಸಿ ಬಿಚ್ಚಿ ಶೇಖರಿಸಿಡಲಾಯಿತು. ಸ್ಮಾರಕದಲ್ಲಿ ಬಿತ್ತಿ, ಅದಿಷ್ಠಾನ ಹಾಗೂ ಶಿಖರದಲ್ಲಿ ಬೆಳೆದ ಗಿಡಗಳನ್ನು ಪೂರ್ಣವಾಗಿ ತೆಗೆದು ಅಡಿಪಾಯವನ್ನು ಭದ್ರಪಡಿಸಲಾಯಿತು. ದೇವಾಲಯದ ಕಲ್ಲುಗಳನ್ನು ಕ್ರಮಾಂಕದ ರೀತಿಯಲ್ಲಿ ಮೂಲ ಸ್ವರೂಪದಂತೆ ಮರುಜೋಡಿಸಿ ಮೊದಲಿನ ರೂಪದಲ್ಲಿ ಹೊಂದಿಸಲಾಯಿತು. ಬಿತ್ತಿಯ ಬಳಿ ಹಾಗೂ ಹೊರ ಪದರದ ಮಧ್ಯದಲ್ಲಿ ಇಟ್ಟಿಗೆಯ ಕಟ್ಟಡದಿಂದ ಸಂದನ್ನು ತುಂಬಲಾಯಿತು (ಕೋರ ಫಿಲ್ಲಿಂಗ್) ಶಿಥಿಲವಾದ, ನಾಶವಾದ ಹಾಗೂ ಕಾಣೆಯಾದ ಕಲ್ಲುಗಳ ಸ್ಥಳದಲ್ಲಿ ಹೊಸದಾಗಿ ಹಳೆಯ ಸ್ವರೂಪಕ್ಕೆ ಹೊಂದುವ ರೀತಿಯಲ್ಲಿ ಕಲ್ಲುಗಳ ಸರಬರಾಜಿನೊಂದಿಗೆ ನಯಗೊಳಿಸಿ ಮರು ಜೋಡಣೆ ಮಾಡಲಾಯಿತು. ಸ್ಮಾರಕದ ಸಂರಕ್ಷಣೆಯು ಒಂದು ವಿಶಿಷ್ಠವಾದ ಕಾಮಗಾರಿಯಾಗಿದ್ದರಿಂದ ಕಾಮಗಾರಿ ಪ್ರಗತಿಯಲ್ಲಿ ಹಿರಿಯ ಅಧಿಕಾರಿಗಳು ಹಾಗೂ ಸಂರಕ್ಷಣಾ ತಜ್ಞರಿಂದ ಸಲಹೆ ಹಾಗೂ ಮೇಲ್ವಿಚಾರಣೆಯಲ್ಲಿ ಕಾರ್ಯ ಅನುಷ್ಠಾನಗೊಳಿಸಲಾಯಿತು. ದೇವಾಲಯದ ಅದಿಷ್ಠಾನ, ಬಿತ್ತಿಯ ಹೊರ ಮತ್ತು ಒಳಪದರದ ಜೋಡಣೆ, ಶಿಖರದ ಜೋಡಣೆ, ಕೋರ ಫಿಲ್ಲಿಂಗ್, ಛಾವಣಿಯ ಜೋಡಣೆ, ಜಲನಿರೋಧಕ ಹೊದಿಕೆಯ ನಿರ್ಮಾಣ, ಮಳೆ ನೀರು ಹರಿದು ಹೋಗಲು ಸೂಕ್ತ ನೀರಿನ ದೋಣಿಗಳ ಜೋಡಣೆ, ನೆಲಹಾಸು ನಿರ್ಮಾಣ ಸೇರಿದಂತೆ ಸ್ಮಾರಕದ ಸಂಪೂರ್ಣ ಸಂರಕ್ಷಣಾ ಕಾರ್ಯ ನಿರ್ವಹಿಸಲಾಯಿತು. ಸ್ಮಾರಕದ ಸುತ್ತಲೂ ಪಾರದರ್ಶಕ ಚೈನಲಿಂಕ್ ಮಷಿನಲ್ಲಿ ಕಾಂಪೌಡ್ ನಿರ್ಮಿಸಲಾಯಿತು. ದೇವಾಲಯದ ಆವರಣದಲ್ಲಿ ಮಣ್ಣನ್ನು ಹರಡಿ ಸಮತಟ್ಟು ಮಾಡಲಾಯಿತು. ದೇವಾಲಯವನ್ನು ಪೂರ್ಣವಾಗಿ ಮೂಲ ಸ್ವರೂಪಕ್ಕೆ ತರಲಾಯಿತು.

ಸ್ಮಾರಕದ ಶಿಥಿಲತೆಗೆ ಕಾರಣಗಳು:

1. ವಿಜಯನಗರದ ತಾಳಿಕೋಟೆ ಯುದ್ಧದ ನಂತರ ಹಂಪಿ ಪ್ರದೇಶದಲ್ಲಿನ ಸ್ಮಾರಕಗಳ ಮೇಲೆ ಉಂಟಾದ ದಾಳಿ
2. ಸ್ಮಾರಕದಲ್ಲಿ ಹಾಗೂ ಸುತ್ತಲೂ ಬೆಳೆದಿರುವ ಗಿಡಗಂಟೆಗಳು
3. ಸ್ಮಾರಕದ ಪಕ್ಕದಲ್ಲಿನ ಜನವಸತಿಯ ನಾಶದಿಂದ ಉಂಟಾದ ಮಣ್ಣಿನ ಜಾರುವಿಕೆ
4. ಮಳೆಗಾಲದಲ್ಲಿ ಸ್ಮಾರಕದ ಪಶ್ಚಿಮ ಹಾಗೂ ದಕ್ಷಿಣ ದಿಕ್ಕಿನಲ್ಲಿ ಹರಿಯುವ ಮಳೆಯ ನೀರಿನಿಂದಾಗಿ ಮಣ್ಣಿನ ಸವೇತದಿಂದ ಉಂಟಾದ ಆಳವಾದ ಕೊರಕಲುಗಳು
5. ಹಲವಾರು ನೈಸರ್ಗಿಕ ಕಾರಣದಿಂದ ಸ್ಮಾರಕದ ಮೇಲೆ ಉಂಟಾದ ಪರಿಣಾಮಗಳು
6. ಸ್ಮಾರಕದಲ್ಲಿ ನಿಧಿ ಆಶೆಗೆ ಮಾಡಿದ ನೆಲಹಾಸಿನ ಹಾನಿಗಳು ಹಾಗೂ ಸ್ಮಾರಕದ ಹತ್ತಿರ ವ್ಯವಸಾಯದ ಸಮಯದಲ್ಲಿ ಶೇಖರಿಸಿದ ಅನುಪಯುಕ್ತ ಸಾಮಾಗ್ರಿಗಳು, ಗಿಡಗಂಟೆಗಳನ್ನು ಸುಡಲು ಹಾಕಿದ ಬೆಂಕಿ

7. ದೇವಾಲಯದಲ್ಲಿ ಮಾನವನಿಂದ ಉಂಟಾದ ಹೊರ ಪದರಿನ ಕಲ್ಲುಗಳ ನಾಶ ಹಾಗೂ ಹೊರ ಪದರದ ಗೋಡೆಗಳಿಂದ ಉಂಟಾದ ಶಿಥಿಲತೆ
8. ಶಿಥಿಲವಾದ ಜಲನಿರೋಧಕ ಹೊದಿಕೆಯಿಂದ ಶಿಖರದಲ್ಲಿ ಗಿಡಗಳು ಬೆಳೆದು ಉಂಟಾದ ಸಂಧುಗಳಿಂದ
9. ಸ್ಮಾರಕದ ನಿರ್ವಹಣಾ ಕೊರತೆಯಿಂದ ಉಂಟಾದ ಹಾನಿಗಳು

ಸ್ಮಾರಕದಲ್ಲಿ ಉಂಟಾಗುವ ಶಿಥಿಲತೆಯ ಅಂಶಗಳು:

1. ಅಡಿಪಾಯದ ಅಭದ್ರತೆಯಿಂದ ಉಂಟಾಗಿರುವ ಕುಸಿತ
2. ಸ್ಮಾರಕದಲ್ಲಿ ಗಿಡಗಂಟೆಗಳು ಬೆಳೆದು ಹೊರ ಮತ್ತು ಒಳ ಗೋಡೆಗಳ ಕಲ್ಲುಗಳು ಸ್ಥಳಾಂತರ ಮತ್ತು ಸ್ಥಾನ ಪಲ್ಲಟ
3. ದೇವಾಲಯದ ಗರ್ಭಗೃಹ ಮತ್ತು ಮುಖ ಮಂಟಪದಲ್ಲಿ ನಿಧಿಗಳ್ಳರು ಉಂಟುಮಾಡಿರುವ ಹಾನಿಯಿಂದ ಉಂಟಾದ ನೆಲಹಾಸಿನ ಶಿಥಿಲತೆ
4. ದೇವಾಲಯದ ಮೇಲ್ಭಾಗದ ಛಾವಣಿ ಕಲ್ಲಿನಲ್ಲಿ ಶಿಥಿಲತೆ ಹಾಗೂ ಜಲ ನಿರೋಧಕ ಹೊದಿಕೆಯಲ್ಲಿ ಉಂಟಾದ ಬಿರುಕುಗಳು
5. ದೇವಾಲಯದ ಸಮೀಪದಲ್ಲಿ ಹಾಕಿದ ಬೆಂಕಿಯಿಂದ ಉಂಟಾದ ಕಲ್ಲುಗಳ ಸಿಡಿಯುವಿಕೆ
6. ಮಳೆಯ ನೀರು ಸೂಕ್ತವಾಗಿ ಹರಿದು ಹೋಗುವ ವ್ಯವಸ್ಥೆ ಇಲ್ಲದ ಕಾರಣ ಉಂಟಾದ ಅಡಿಪಾಯದ ಕುಸಿಯುವಿಕೆ
7. ಅಡಿಪಾಯದ ಮಣ್ಣಿನಲ್ಲಿ ಪ್ರಾಣಿಗಳು ತಮ್ಮ ವಾಸಕ್ಕಾಗಿ ಮಾಡಿಕೊಂಡ ಬಿಲಗಳು

ಸ್ಮಾರಕದ ಸಂರಕ್ಷಣೆಗೆ ತೆಗೆದುಕೊಳ್ಳಲಾದ ಕ್ರಮಗಳು

1. ಸ್ಮಾರಕದ ಅಡಿಪಾಯವನ್ನು ಭದ್ರಪಡಿಸಲು ಸ್ಮಾರಕದ ಕಲ್ಲುಗಳಿಗೆ ವೈಜ್ಞಾನಿಕ ರೀತಿಯಲ್ಲಿ ನಕ್ಷೆ ಸಿದ್ಧಪಡಿಸಿ ಸಂಖ್ಯೆಗಳನ್ನು ನಮೂದಿಸಿ ಪೂರ್ಣವಾಗಿ ಸ್ಮಾರಕವನ್ನು ಬಿಚ್ಚಿ ಕಲ್ಲುಗಳನ್ನು ವ್ಯವಸ್ಥಿತವಾಗಿ ಶೇಖರಿಸಿಡುವುದು
2. ಸ್ಮಾರಕದ ಬುನಾದಿಯ ಭದ್ರತೆಗಾಗಿ ತಳಮಟ್ಟದಲ್ಲಿ ಅವಶ್ಯಕ ಸಿಮೆಂಟ್ ಕಾಂಕ್ರೀಟ್ ಪದರಿನ ನಿರ್ಮಾಣ
3. ಶಿಥಿಲಗೊಂಡ ಹಾಗೂ ನಾಶಗೊಂಡ ಸ್ಮಾರಕದ ಕಲ್ಲುಗಳ ಜಾಗದಲ್ಲಿ ಹೊಸ ಕಲ್ಲುಗಳನ್ನು ಸರಬರಾಜು ಮಾಡುವುದು
4. ಹೊಸ ಕಲ್ಲುಗಳನ್ನು ಸ್ಮಾರಕದಲ್ಲಿ ಶಿಥಿಲವಾದ ಕಲ್ಲುಗಳ ವಿನ್ಯಾಸಕ್ಕೆ ಹೊಂದುವ ರೀತಿಯಲ್ಲಿ ನಯಗೊಳಿಸಿ ಆಕಾರಕ್ಕೆ ತಕ್ಕಂತೆ ಸಿದ್ಧಪಡಿಸುವುದು
5. ಬಿಚ್ಚಿ ಶೇಖರಿಸಿಡಲಾದ ಕಲ್ಲುಗಳನ್ನು ಮೂಲ ಸ್ವರೂಪದಲ್ಲಿ ಮರು ಜೋಡಿಸುವುದು
6. ಒಳ ಮತ್ತು ಹೊರ ಗೋಡೆಗಳ ಪದರುಗಳ ಮಧ್ಯದ ಸಂದುಗಳಿಗೆ ಇಟ್ಟಿಗೆ, ಕಲ್ಲು ಮತ್ತು ಗಾರೆಯನ್ನು ತುಂಬುವುದು (ಕೋರ್ ಫಿಲ್ಲಿಂಗ್)
7. ವಿನ್ಯಾಸಕ್ಕೆ ಹೊಂದುವ ರೀತಿಯಲ್ಲಿ ನೆಲ ಹಾಸನ್ನು ನಿರ್ಮಿಸುವುದು
8. ಸ್ಮಾರಕದ ಛಾವಣಿಯ ಮೇಲ್ಭಾಗದಲ್ಲಿ ಜಲನಿರೋಧಕ ಹೊದಿಕೆಯ ನಿರ್ಮಾಣ
9. ಛಾವಣಿಯ ಮೇಲೆ ಬೀಳುವ ಮಳೆಯ ನೀರು ಹರಿದುಹೋಗಲು ನೀರಿನ ದೋಣಿಗಳನ್ನು ಅಳವಡಿಸುವುದು
10. ಅಡಿಪಾಯದಲ್ಲಿ ಮಳೆನೀರು ಸೇರದಂತೆ ಸ್ಮಾರಕದ ಸುತ್ತಲೂ ನೆಲಹಾಸಿನ ನಿರ್ಮಾಣ
11. ಸಂರಕ್ಷಣಾ ಕಾಮಗಾರಿ ಮುಗಿದ ನಂತರ ಸ್ಮಾರಕವನ್ನು ಶುದ್ಧನೀರಿನಿಂದ ಸ್ವಚ್ಛಪಡಿಸಿ ಶೇಖರಣೆಗೊಂಡ ಅನುಪಯುಕ್ತ ವಸ್ತುಗಳು ವಿಸರ್ಜಿಸಿ ಆವರಣವನ್ನು ಸ್ವಚ್ಛಗೊಳಿಸುವುದು
12. ಸ್ಮಾರಕದ ಸುತ್ತಲು ಪಾರದರ್ಶಕ ಬೇಲಿಯ ನಿರ್ಮಾಣ

ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ :

ಸ್ಮಾರಕದ ಹೆಸರು	:	ಬಾಲಕೃಷ್ಣ ದೇವಾಲಯ
ಸ್ಥಳ	:	ಅಹಮದ್‌ಖಾನ್ ಧರ್ಮಶಾಲೆಯ ಹತ್ತಿರಸರ್ವೇ ನಂಬರ್ 24ರಲ್ಲಿ
ಕಾಲ	:	14–15ನೇ ಶತಮಾನ
ಶೈಲಿ	:	ವಿಜಯನಗರ
ಅಭಿಮುಖ	:	ದಕ್ಷಿಣ
ಮಾಧ್ಯಮ	:	ಕಣಶಿಲೆ(ಗ್ರಾನೈಟ್)
ಅಂದಾಜು ಮೊತ್ತ	:	20.00 ಲಕ್ಷಗಳು
ಗುತ್ತಿಗೆದಾರರು	:	ಆರ್. ರಾಮಸ್ವಾಮಿ, ಕಮಲಾಪುರ, ಹೊಸಪೇಟೆ ತಾಲೂಕು
ಪ್ರಕಟಣೆ ದಾಖಲೆ	:	N N/2 Page-60-61 VIJAYANAGAR ARCHITECTURAL INVENTORY OF THE URBEN CORE GEORGE MICHELL

ತಳವಿನ್ಯಾಸ : ಕಣಶಿಲೆಯಿಂದ ನಿರ್ಮಿಸಿರುವ ಈ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಅರ್ಧಮಂಟಪ ಮತ್ತು ಸಭಾಮಂಟಪವನ್ನು ಹೊಂದಿದೆ. ಏಕಕೂಟ ರಚನೆಯನ್ನು ಹೊಂದಿದ್ದು, ನಿರಂಧಾರ ಮಾದರಿಯ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಚಚ್ಚೌಕಾಕಾರವಾಗಿದ್ದು, ಇದು 2.35 ಮೀಟರ್ ಉದ್ದ ಮತ್ತು 2.35 ಮೀಟರ್ ಅಗಲವನ್ನು ಹೊಂದಿದೆ. ಭುವನೇಶ್ವರಿಯು ಅಷ್ಟಕೋನಾಕಾರದಲ್ಲಿದ್ದು ಮಧ್ಯದಲ್ಲಿ ಅರಳಿದ ಕಮಲವಿದೆ. ಕಮಲವು ಎರಡು ಸುತ್ತುಗಳನ್ನು ಹೊಂದಿದೆ. ಇದರ ಪ್ರವೇಶದ್ವಾರವು (ಬಾಗಿಲುವಾಡವು ಹೊಸದಾಗಿ ಮಾಡಲಾಗಿದೆ) ಸಾಧಾರಣವಾಗಿದ್ದು, ಸ್ತಂಭಶಾಖೆಯನ್ನು ಮಾತ್ರ ಒಳಗೊಂಡಿದೆ.

ಅಂತರಾಳ : ಈ ದೇವಾಲಯದ ಅಂತರಾಳವು 2.35 ಮೀಟರ್ ಉದ್ದ ಮತ್ತು 2.35 ಮೀಟರ್ ಅಗಲವನ್ನು ಹೊಂದಿದೆ. ಇದರ ಮೇಲ್ಛಾವಣಿಯು ಸಾಧಾರಣವಾಗಿದ್ದು ಕಲ್ಲುಚಪ್ಪಡಿಗಳಿಂದ ಮಾಡಲ್ಪಟ್ಟಿದೆ. ಇದರ ಪ್ರವೇಶದ್ವಾರವು (ಬಾಗಿಲುವಾಡವು ಹೊಸದಾಗಿ ಮಾಡಲಾಗಿದೆ) ಸಾಧಾರಣವಾಗಿದ್ದು, ಸ್ತಂಭಶಾಖೆಯನ್ನು ಮಾತ್ರ ಒಳಗೊಂಡಿದೆ.

ಅರ್ಧಮಂಟಪ : ಈ ದೇವಾಲಯದ ಅರ್ಧಮಂಟಪವು 2.70 ಮೀಟರ್ ಉದ್ದ ಮತ್ತು 3.05 ಮೀಟರ್ ಅಗಲವನ್ನು ಹೊಂದಿದೆ. ಇದರ ಮೇಲ್ಛಾವಣಿಯು ಸಾಧಾರಣವಾಗಿದ್ದು ಕಲ್ಲುಚಪ್ಪಡಿಗಳಿಂದ ಮಾಡಲ್ಪಟ್ಟಿದೆ. ಇದಕ್ಕೆ ಬಾಗಿಲುವಾಡವು ಇರುವುದಿಲ್ಲ ಸಭಾಮಂಟಪಕ್ಕೆ ತೆರೆದಿರುತ್ತದೆ. ಇದರ ಎಡ ಮತ್ತು ಬಲಭಾಗದ ಭಿತ್ತಿಗೆ ಹೊಂದಿಕೊಂಡಂತೆ 80 ಸೆಂ.ಮೀ. ಎತ್ತರ ಮತ್ತು 70 ಸೆಂ.ಮೀ. ಅಗಲವುಳ್ಳ ವೇದಿಕೆಯನ್ನು ಒಳಗೊಂಡಿದೆ ಇದು ಸಭಾಮಂಟಪಕ್ಕು ಸಹ ಮುಂದುವರೆಯುತ್ತದೆ.

ಸಭಾಮಂಟಪ : ಸಭಾಮಂಟಪವು 8.20 ಮೀಟರ್ ಉದ್ದ ಮತ್ತು 8.20 ಮೀಟರ್ ಅಗಲವನ್ನು ಹೊಂದಿದೆ. ಇದು 9 ಅಂಕಣಗಳನ್ನು ಹೊಂದಿದ್ದು ಇದರಲ್ಲಿ ಒಟ್ಟು 16 ಕಂಬಗಳಿವೆ ಅವುಗಳಲ್ಲಿ 4 ಕಂಬಗಳು ಅರ್ಧಕಂಬಗಳಿದ್ದು ಮತ್ತೇ ಉಳಿದ 8 ಕಂಬಗಳು ಸ್ವತಂತ್ರ ಕಂಬಗಳಿವೆ. ಇವುಗಳು ಕಾಂಡ ಮತ್ತು ಬೋದಿಗೆಯನ್ನು ಹೊಂದಿವೆ. ಕಾಂಡಭಾಗವು ನಾಲ್ಕು ಮುಖಗಳನ್ನು ಹೊಂದಿದ್ದು ಅದರ ಮೇಲ್ಭಾಗದಲ್ಲಿ ಅಷ್ಟ ಮುಖಗಳನ್ನು ಹೊಂದಿದೆ. ನಂತರ ನಾಲ್ಕು ಮುಖ ಹಾಗೂ ಬೋದಿಗೆಯನ್ನು ಹೊಂದಿವೆ. ಮಧ್ಯದ ನಾಲ್ಕು ಕಂಬಗಳು ವಿಶಿಷ್ಟವಾಗಿದ್ದು ಪೀಠ, ಪಿಂಡಿ, ಕಾಂಡ, ವೃತ್ತಾಬೋದಿಗೆ, ಫಲಕದ ಮೂಲಕ ಮೇಲೆರುತ್ತಾ ಹೋಗಿ ಬೋದಿಗೆಯೊಂದಿಗೆ ಶಿಲಾತೊಲೆಗಳನ್ನು ಹೊಂದಿದೆ. ಕಂಬಗಳ ಪೀಠವು ಚತುರಾಶ್ರಕಾರದಲ್ಲಿದ್ದು ದಂತಪಟ್ಟಿಕೆಗಳನ್ನು ಹೊಂದಿದೆ. ಕಾಂಡ ಭಾಗವು ನಾಲ್ಕು ಮುಖದ ಚೌಕ, ಅದರ ನಾಲ್ಕು

ಮೂಲೆಯನ್ನು ಕತ್ತರಿಸುತ್ತಲೇ ಆದ ಮತ್ತೆ ನಾಲ್ಕು ಮುಖಗಳು ಒಟ್ಟು ಅಷ್ಟಮುಖ ಅದರ ಮೂಲೆ ಕತ್ತರಿಸುತ್ತಲೇ ಆದ ಒಟ್ಟು ಹದಿನಾರು ಮುಖದ ಚೌಕ ಮತ್ತದೆ ಮುಂದುವರಿಯುತ್ತದೆ. ಅದರ ಮೇಲೆ ಮತ್ತೆ ನಾಲ್ಕು ಮುಖದ ಚೌಕ ನಂತರ ಕುಂಭಾಕೃತಿಯನ್ನು ಹೊಂದಿದ್ದು ನಂತರ ವೃತ್ತಬೋದಿಗೆ ಮತ್ತು ಫಲಕವನ್ನು ಒಳಗೊಂಡಿವೆ.ಈ ನಾಲ್ಕು ಕಂಬಗಳ ಮಧ್ಯದಲ್ಲಿನ ಕೆಳಭಾಗದ ನೆಲಹಾಸಿಗೆಯು ವೃತ್ತಾಕಾರದ 10 ಸೆಂ.ಮೀ. ಎತ್ತರವುಳ್ಳ ವೇದಿಕೆಯನ್ನು ಹೊಂದಿದೆ. ಇದರ ಮೇಲ್ಛಾವಣಿಯು ಅಷ್ಟಕೋನಾಕಾರದಲ್ಲಿದ್ದು ಮಧ್ಯದಲ್ಲಿ ಅರಳಿದ ಕಮಲವಿದೆ. ಕಮಲವು ಎರಡು ಸುತ್ತುಗಳನ್ನು ಹೊಂದಿದ್ದು, ಹೊರಸುತ್ತಿನಲ್ಲಿ ಹದಿನಾರು ದಳಗಳನ್ನು ಹೊಂದಿದ್ದು ಒಳಹೋದಂತೆ ಚಿಕ್ಕದಾಗುತ್ತಾ ಹೋಗಿ ಮಧ್ಯದಲ್ಲಿ ಮೊಗ್ಗಿನಂತೆ ಕಾಣಿಸುತ್ತದೆ. ಸಭಾಮಂಟಪದ ಸುತ್ತಲೂ ಭಿತ್ತಿಗೆ ಹೊಂದಿಕೊಂಡಂತೆ 80 ಸೆಂ.ಮೀ. ಎತ್ತರ ಮತ್ತು 70 ಸೆಂ.ಮೀ. ಅಗಲವುಳ್ಳ ವೇದಿಕೆಯನ್ನು ಒಳಗೊಂಡಿದೆ. ಇದಕ್ಕೆ ಪೂರ್ವ ಮತ್ತು ದಕ್ಷಿಣಕ್ಕೆ ಪ್ರವೇಶದ್ವಾರಗಳಿದ್ದು ಪೂರ್ವದ ದ್ವಾರವು ಬಾಗಿಲುವಾಡವನ್ನು ಹೊಂದಿದ್ದು, (ಬಾಗಿಲುವಾಡವು ಹೊಸದಾಗಿ ಮಾಡಲಾಗಿದೆ) ಸಾದಾ ಕೆತ್ತನೆಯಿಂದ ಕೂಡಿದೆ. ಮೇಲ್ಭಾಗದಲ್ಲಿನ ಲಲಾಟದಲ್ಲಿ ಅಬ್ಬೆಗಾಲಿನಲ್ಲಿರುವ ಬಾಲಕೃಷ್ಣನ ಉಬ್ಬುಶಿಲ್ಪವಿದ್ದು, ಇದರ ಕೆಳಭಾಗದಲ್ಲಿ ಅರಳಿದ ಪುಷ್ಪದ ಕೆತ್ತನೆಯಿದೆ. ದಕ್ಷಿಣದ ದ್ವಾರವು ಸಾಧಾರಣವಾಗಿದ್ದು ಬಾಗಿಲುವಾಡವನ್ನು (ಬಾಗಿಲುವಾಡವು ಹೊಸದಾಗಿ ಮಾಡಲಾಗಿದೆ) ಹೊಂದಿದೆ. ಮೇಲ್ಭಾಗದಲ್ಲಿನ ಲಲಾಟದಲ್ಲಿ ಲಕ್ಷ್ಮಿಯ ಉಬ್ಬುಶಿಲ್ಪವಿದೆ ಇದರ ಕೆಳಭಾಗದಲ್ಲಿ ಶ್ರೀಚಕ್ರದ ಕೆತ್ತನೆಯಿದೆ. ಈ ಎರಡು ಪ್ರವೇಶದ್ವಾರಗಳಿಗೂ ಹಸ್ತಿ ಹಸ್ತ ಫಲಕವುಳ್ಳ ಸೋಪಾನಗಳನ್ನು ಒಳಗೊಂಡಿದೆ.


ಈ ದೇವಾಲಯವು ಎತ್ತರವಾದ ವೇದಿಕೆಯ ಮೇಲೆ ನಿರ್ಮಾಣವಾಗಿದ್ದು, ಅಧಿಷ್ಠಾನ, ತ್ರಿಪಟ್ಟ ಕುಮುದ, ಕಂಠ, ಗಳಗಳನ್ನು ಹೊಂದಿದೆ. ಅದರ ಮೇಲ್ಭಾಗದಲ್ಲಿನ ಭಿತ್ತಿಯು ಅಲಂಕಾರಿಕವಾಗಿದ್ದು, ದೇವಕೋಷ್ಠಕ, ಕುಡ್ಯಸ್ತಂಭಗಳು(ಅರ್ಧಗಂಬಗಳು) ಹಾಗೂ ಪೂರ್ಣಕುಂಭದ ಅಲಂಕಾರಿಕ ಕೆತ್ತನೆಯನ್ನು ಒಳಗೊಂಡಿದೆ. ದೇವಕೋಷ್ಠಕಗಳು ವಿಶಿಷ್ಟವಾಗಿದ್ದು ಅವುಗಳು ದೇವಾಲಯದ ಸಂಪೂರ್ಣ ಭಾಗಗಳನ್ನು ಹೊಂದಿರುವ ರೀತಿಯಲ್ಲಿರುವುದು ವಿಶೇಷವಾಗಿದೆ. ಗರ್ಭಗೃಹದ ಮೇಲ್ಭಾಗದಲ್ಲಿರುವ ಶಿಖರವು ದ್ರಾವಿಡ ಶೈಲಿಯಲ್ಲಿದ್ದು, ಮೂರು ಅಂತಸ್ಥಿನಲ್ಲಿದೆ. ಪ್ರತಿ ಅಂತಸ್ಥಿನಲ್ಲಿಯು ಕೀರ್ತಿಮುಖದ ಕೆತ್ತನೆಯು ವಿಶಿಷ್ಟವಾಗಿದೆ. ಅಲ್ಲದೆ ಶಿಖರವು ಪೂರ್ಣವಾಗಿ ಕಲ್ಲಿನಿಂದ ನಿರ್ಮಾಣವಾಗಿರುವುದು ಈ ದೇವಾಲಯದ ಮತ್ತೊಂದು ವೈಶಿಷ್ಟ್ಯವಾಗಿದೆ. ಸ್ಮಾರಕದ ಸುತ್ತಲೂ ಪಾರದರ್ಶಕ ಚೈನಲಿಂಕ್ ಮಷಿನಲ್ಲಿ ಕಾಂಪೌಡ್ ನಿರ್ಮಿಸಲಾಗಿದೆ.

(ಈ ಲೇಖನವನ್ನು ಮಂಡಿಸಲು ಅವಕಾಶ ನೀಡಿದ ಇಲಾಖೆಯ ಆಯುಕ್ತರಿಗೆ ಹಾಗೂ **GEORGE MICHELL** ಅವರ **VIJAYANAGAR ARCHITECTURAL INVENTORY OF THE URBEN CORE** ಎಂಬ ಪುಸ್ತಕವನ್ನು ಇಲಾಖೆಯಿಂದ ಪ್ರಕಟಿಸಿಲಾಗಿದ್ದು, ಈ ಮುಸ್ತಕದಿಂದ ನಕ್ಷೆಗಳನ್ನು ಪಡೆಯಲಾಗಿರುತ್ತದೆ. ಇವರಿಗೂ ಕೃತಜ್ಞತೆಗಳು)


ಆಧಾರ ಸೂಚಿ :

1. ವಸುಂಧರ ಫಿಲಿಯೊಜಾ, 1982, **ಅಳಿದುಳಿದ ಹಂಪೆ,** ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು.
2. ರಾಬರ್ಟ್ ಸೆವೆಲ್, (ಕನ್ನಡಕ್ಕೆ ಅನುವಾದ– ಸದಾನಂದ ಕನವಳ್ಳಿ), 2015, **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ,** ಅಂಕಿತ ಪುಸ್ತಕ, ಬೆಂಗಳೂರು.
3. ಮನೋಜ್ ಜಿ., 2015, ದೇವಾಲಯ ವಾಸ್ತು ವಿಜ್ಞಾನ ಶಾಸ್ತ್ರಗಳ ಹಿನ್ನೆಲೆಯಲ್ಲಿ, ಸುಬೋಧಿನಿ ಬುಕ್ ಪಬ್ಲಿಷರ್ಸ್ ಮತ್ತು ನಾಲೆಡ್ಜ್ ಅಕಾಡೆಮಿ, ಚಿತ್ರದುರ್ಗ.
4. ಮಹದೇವ ಸಿ., 2000, **ವಿಜಯನಗರದ ಗಾರೆಶಿಲ್ಪ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ರಾಮಚಂದ್ರರಾವ್ ಎಸ್.ಕೆ., 1979, **ಭಾರತದ ದೇವಾಲಯ ನೆಲೆ:ಹಿನ್ನೆಲೆ,** ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.
6. ವಸುಂಧರ ಫಿಲಿಯೊಜಾ, 1982, **ಅಳಿದುಳಿದ ಹಂಪೆ,** ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು.
7. George Michell, 1990, **Vijayanagara Architectural Inventory of the Urben Core Vol- I And II**, Directorate of Archaeology and Museums Mysore.

8. Nagaraja Rao, M.S., Vijayanagara Progress of Research 1979-1983, Directorate of Archaeology and Museums Mysore.
9. Devaraj D.V. and Channabasppa S. Patil., Vijayanagara Progress of Research 1984-1987, Directorate of Archaeology and Museums Mysore.
10. Devaraj D.V. and Channabasppa S. Patil., Vijayanagara Progress of Research 1987-1988, Directorate of Archaeology and Museums Mysore.



Section of the Temple




Elevation of Temple



ದೇವಾಲಯದ ಮುಂಭಾಗದ ನೋಟ ಸಂರಕ್ಷಣಾ ಪೂರ್ವದಲ್ಲಿ




ದೇವಾಲಯದ ಹಿಂಭಾಗದ ನೋಟ ಸಂರಕ್ಷಣಾ ಪೂರ್ವದಲ್ಲಿ




ದೇವಾಲಯದ ಪಾರ್ಶ್ವ ನೋಟ ಸಂರಕ್ಷಣಾ ಪೂರ್ವದಲ್ಲಿ



ದೇವಾಲಯದ ಪಾರ್ಶ್ವ ನೋಟ ಸಂರಕ್ಷಣಾ ಕಾರ್ಯ ಪ್ರಗತಿಯಲ್ಲಿ



ದೇವಾಲಯದ ನೋಟ ಸಂರಕ್ಷಣಾ ಕಾರ್ಯ ಪ್ರಗತಿಯಲ್ಲಿ



ದೇವಾಲಯದ ನೋಟ ಸಂರಕ್ಷಣಾ ಪೂರ್ವದಲ್ಲಿ



ದೇವಾಲಯದ ನೋಟ ಸಂರಕ್ಷಣಾ ಪೂರ್ವದಲ್ಲಿ



ದೇವಾಲಯದ ನೋಟ ಸಂರಕ್ಷಣಾ ಪೂರ್ವದಲ್ಲಿ



ದೇವಾಲಯದ ನೋಟ ಸಂರಕ್ಷಣಾ ಕಾರ್ಯ ಪ್ರಗತಿಯಲ್ಲಿ



ದೇವಾಲಯದ ಪಾರ್ಶ್ವ ನೋಟ ಸಂರಕ್ಷಣಾ ಕಾರ್ಯ ಪ್ರಗತಿಯಲ್ಲಿ



ದೇವಾಲಯದ ನೋಟ ಸಂರಕ್ಷಣಾ ಕಾರ್ಯ ಪ್ರಗತಿಯಲ್ಲಿ



ದೇವಾಲಯದ ಪಾರ್ಶ್ವ ನೋಟ ಸಂರಕ್ಷಣಾ ಕಾರ್ಯ ಪ್ರಗತಿಯಲ್ಲಿ



ದೇವಾಲಯದ ನೋಟ ಸಂರಕ್ಷಣಾ ಕಾರ್ಯದ ನಂತರ



ದೇವಾಲಯದ ನೋಟ ಸಂರಕ್ಷಣಾ ಕಾರ್ಯದ ನಂತರ



ದೇವಾಲಯದ ನೋಟ ಸಂರಕ್ಷಣಾ ಕಾರ್ಯದ ನಂತರ



ದೇವಾಲಯದ ನೋಟ ಸಂರಕ್ಷಣಾ ಕಾರ್ಯದ ನಂತರ



ದೇವಾಲಯದ ನೋಟ ಸಂರಕ್ಷಣಾ ಕಾಮಗಾರಿ ಪೂರ್ಣಗೊಂಡ ನಂತರ

28. ಮಗಿಮಾವಿನಹಳ್ಳಿಯ ವಿಜಯನಗರ ಕಾಲದ ದೇವಾಲಯ ಮತ್ತು ಮೂರ್ತಿಶಿಲ್ಪಗಳು

- ಮಂಜನಾಯ್ಕ ಆರ್.

ಕರ್ನಾಟಕವನ್ನು ಆಳ್ವಿಕೆ ಮಾಡಿದ ಅನೇಕ ರಾಜಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯವು ಒಂದು ರಾಜಮನೆತನವಾಗಿದೆ. ಈ ಮನೆತನ ತನ್ನದೇ ಆದ ಕೀರ್ತಿಪತಾಕೆಯನ್ನು ಹಾರಿಸಿ ಇತಿಹಾಸದ ಪುಟಗಳಲ್ಲಿ ಪ್ರಜ್ವಲಿಸುವಂತೆ ಮಾಡಿತು.[1] ದಕ್ಷಿಣ ಭಾರತದಲ್ಲಿ ಹೊಯ್ಸಳರ ಅಧಿಪತ್ಯ ಕೊನೆಗೊಂಡ ನಂತರ ಇಸ್ಲಾಂ ದಾಳಿಯನ್ನು ತಡೆಗಟ್ಟಿ ಹಿಂದೂ ಧರ್ಮವನ್ನು ರಕ್ಷಿಸುವ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯವು ಕ್ರಿ.ಶ. 1336ರಲ್ಲಿ ವಿದ್ಯಾರಣ್ಯಗುರುಗಳ ಮಾರ್ಗದರ್ಶನದಲ್ಲಿ ಸಂಗಮ ವಂಶದ ಹರಿಹರ-ಬುಕ್ಕರಿಂದ ಈ ಸಾಮ್ರಾಜ್ಯ ಸ್ಥಾಪನೆಯಾಯಿತು.[2] ಈ ಶ್ರೇಷ್ಠ ಆದರ್ಶವನ್ನಿಟ್ಟುಕೊಂಡು ಉದಯಿಸಿದ ಈ ಸಾಮ್ರಾಜ್ಯವು ಹದಿನಾಲ್ಕನೆಯ ಶತಮಾನದಲ್ಲಿ ಪ್ರಖ್ಯಾತ ಹಾಗೂ ವಿಶಾಲ ಸಾಮ್ರಾಜ್ಯವೆನಿಸಿ ಬೆಳೆಯಲಾರಂಭಿಸಿತು. ವಿಜಯನಗರ ಸಾಮ್ರಾಜ್ಯವು ಕರ್ನಾಟಕದ ಭವ್ಯಪರಂಪರೆಯನ್ನು ಸಾರಿತು ಅದು ಕನ್ನಡಿಗರ ಸಾಹಿತ್ಯ, ಸಂಸ್ಕೃತಿ, ಸಂಗೀತ, ನೃತ್ಯ, ಜಾನಪದ ಹಾಗೂ ಶಿಲ್ಪಕಲೆಗಳ ಮಹೋನ್ನತಿಯನ್ನು ಸಾರಿದ ಸುವರ್ಣಯುಗ.[3] ವಿಜಯನಗರ ಅರಸರ ಬಗ್ಗೆ ಅನೇಕ ವಿದೇಶಿ ಪ್ರವಾಸಿಗರು ಇವುಗಳನ್ನೆಲ್ಲಾ ನೋಡಿ ಹೊಗಳಿದ್ದಾರೆ.[4] ಸುಮಾರು ಎರಡು ಶತಮಾನಗಳಿಗೂ ಹೆಚ್ಚು ಕಾಲ ರಾಜಕೀಯ ಅಸ್ಥಿರತೆಯನ್ನು ತೊಡೆದುಹಾಕಿ ವಿಜಯನಗರವು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ.[5] ವಿಜಯನಗರ ಸಾಮ್ರಾಜ್ಯದ ಆಡಳಿತವ್ಯಾಪ್ತಿಗೆ ದಕ್ಷಿಣ ಭಾರತದ ಸಾಕಷ್ಟು ಪ್ರದೇಶಗಳು ಸೇರಿದ್ದವು. ಅಲ್ಲೆಲ್ಲಾ ಸಾಕಷ್ಟು ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪದ ಕುರುಹುಗಳನ್ನು ನಾವು ಇಂದಿಗೂ ಕಾಣಬಹುದು.

ಮಗಿಮಾವಿನಹಳ್ಳಿ ಗ್ರಾಮವು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿದೆ. ಇದು ತಾಲೂಕು ಕೇಂದ್ರದಿಂದ ಸುಮಾರು 20 ಕಿ.ಮೀ ದೂರದಲ್ಲಿದೆ. ಈ ಗ್ರಾಮವು ವಿಜಯನಗರ ಕಾಲದಲ್ಲಿ ಅಗ್ರಹಾರವಾಗಿತ್ತೆಂದು ಸದಾಶಿವರಾಯನ ಕಾಲದ ಕ್ರಿ.ಶಕ 1544ರ ಗ್ರಾಮದ ನೀರಿನ ಟ್ಯಾಂಕಿನ ಹತ್ತಿರವಿರುವ ಹೊಲದಲ್ಲಿನ ಶಾಸನವು ತಿಳಿಸುತ್ತದೆ.[6] ಅಲ್ಲದೆ ಈ ಶಾಸನದಲ್ಲಿ ಬಯಕಾರ ರಾಮಪ್ಪಯ್ಯ ತಮ್ಮ ಮಗಳು ಲಖರಸಮ್ಮನಿಗೆ ಪುಣ್ಯವಾಗಲೆಂದು ಚಿಕ್ಕಲಕ್ಕಸಮುದ್ರದ ಕೆರೆಯನ್ನು ಕಟ್ಟಿಸಿದ ವಿವರವಿದೆ. ಮುಂದುವರಿದು ಬಯಕಾರ ರಾಮಪ್ಪಯ್ಯನ ವಂಶಾವಳಿಯನ್ನು ನೀಡಿದ್ದು ಅದರಂತೆ ಕೊಂಡವೀಟಿಯ ಸಿಂಗಯ ಇವನ ಮಗ ಭಾವಯ ಮಂತ್ರಿ. ಇವನ ಮಗ ರಾಮಮಂತ್ರಿ. ಇವನ ಪತ್ನಿ ತೆಲಗಮಾಂಬ. ಇವರ ಮಗ ಪೆದ್ದತಿಮ್ಮಯ್ಯ, ಪತ್ನಿ ಲಕ್ಕಾಂಬಿಕ. ಇವರ ಮಗನೇ ರಾಮಪ್ಪಯ್ಯ ಇವನು ತಿಮ್ಮಾಪುರ, ಚಿನ್ನತಿಮ್ಮಾಪುರ ಮತ್ತು ಮಗಿಮಾವಿನಹಳ್ಳಿ ಅಗ್ರಹಾರಗಳನ್ನೂ ಪೆದತಿಮ್ಮಾಪುರದಲ್ಲಿ ಗೋಪಿನಾಥ, ಬಾಚೇಶ್ವರ, ಕೃಷ್ಣೇಶ, ಅಮ್ಮೇಶ, ಮಲ್ಲಿಕಾರ್ಜುನ, ವೀರಭದ್ರ ಮತ್ತು ವಿಶ್ವನಾಥ ದೇವಾಲಯಗಳ ಪೂಜೆಪುನಸ್ಕಾರಕ್ಕಾಗಿ ಹೊಳಗುಂದಿಯನ್ನು ದಾನ ನೀಡಿದ. ತನ್ನ ಮಗಳ ಹೆಸರಿನಲ್ಲಿ ಅಚ್ಯುತಮ್ಮಾಪುರವನ್ನು ಕಟ್ಟಿಸಿದ. ಅಲ್ಲಿ ಕೃಷ್ಣನ ಪ್ರತಿಷ್ಠೆ ಮಾಡಿದ. ಈತನು ಅಚ್ಯುತಮ್ಮಸಮುದ್ರ, ಬಾಚಸಮುದ್ರ, ರಾಮಸಮುದ್ರ, ಅಕ್ಕಸಮುದ್ರ, ಕಾಮಸಮುದ್ರ, ಅಮ್ಮಸಮುದ್ರ, ವೀರಸಮುದ್ರ, ಅಚ್ಯುತೇಂದ್ರಸಮುದ್ರ, ವೆಂಕಟೇಂದ್ರಸಮುದ್ರ, ಪೆದ್ದಲಕ್ಕಸಮುದ್ರ, ಲಿಂಗಾಲಯತಟಾಕ, ವೆಂಕಟಯ್ಯತಟಾಕ, ಪೆದ್ದತಿಮ್ಮಸಮುದ್ರ ಮತ್ತು ಚಿನಬಾಚಸಮುದ್ರ ಮೊದಲಾದ 16 ಕೆರೆಗಳನ್ನು ಕಟ್ಟಿಸುತ್ತಾನೆ. ಸಂಗೀತದ ಮೇಲೆ ಒಂದು ಕೃತಿಯನ್ನು ರಚಿಸಿರುತ್ತಾನೆ. ತಿಮ್ಮಮಂತ್ರಿ, ಸುರೀಂದ್ರ, ಭಾಸ್ಕರಚಮೂಪತಿ ಮತ್ತು ಭಾವಯ ಇವನ ಚಿಕ್ಕಪ್ಪಂದಿರಾಗಿದ್ದು ರಾಜನ ಕೈಕೆಳಗೆ ಅನೇಕ ಹುದ್ದೆಗಳನ್ನು ಹೊಂದಿದ್ದರು. ಎಂದು ತಿಳಿದುಬರುತ್ತದೆ.

ಒಪ್ಪತ್ತೇಶ್ವರ ಮಠ

ತಳವಿನ್ಯಾಸ : ಕಣಶಿಲೆಯಿಂದ ನಿರ್ಮಿಸಿರುವ ಈ ಮಠವು ಪೂರ್ವಾಭಿಮುಖವಾಗಿದೆ. ಇದರ ತಳವಿನ್ಯಾಸದಲ್ಲಿ ಗರ್ಭಗೃಹ, ಸಭಾಮಂಟಪ, ತೆರೆದ ಮುಖಮಂಟಪ ಮತ್ತು ದ್ವಾರಮಂಟಪವನ್ನು ಹೊಂದಿದೆ. ಏಕಕೂಟ ರಚನೆಯನ್ನು ಹೊಂದಿದ್ದು ನಿರಂದರ ಮಾದರಿ ವ್ಯವಸ್ಥೆಯನ್ನು ಹೊಂದಿರುತ್ತದೆ.[7]

ಗರ್ಭಗೃಹ : ಈ ಮಠದ ಗರ್ಭಗೃಹವು ಚಚೌಕಾಕಾರವಾಗಿದೆ. ಇದು 2.70 ಮೀಟರ್ ಉದ್ದ ಮತ್ತು 3.00 ಮೀಟರ್ ಅಗಲವನ್ನು ಹೊಂದಿದೆ. ಇದರ ಮಧ್ಯದಲ್ಲಿ ಗದ್ದುಗೆಯನ್ನು (ಒಪ್ಪತ್ತೇಶ್ವರ ಸ್ವಾಮಿಯ) ಪ್ರತಿಷ್ಠಾಪಿಸಲಾಗಿದೆ. ಭುವನೇಶ್ವರಿಯು ಅಷ್ಟಕೋನಾಕಾರದಲ್ಲಿದ್ದು ಯಾವುದೇ ಅಲಂಕರಣೆಯನ್ನು ಹೊಂದಿಲ್ಲ. ಇದರ ಪ್ರವೇಶದ್ವಾರವು ಸಾಧಾರಣವಾಗಿದ್ದು ಯಾವುದೇ ಅಲಂಕರಣೆ ಇರುವುದಿಲ್ಲ.

ಸಭಾಮಂಟಪ : ಸಭಾಮಂಟಪವು 9.00 ಮೀಟರ್ ಉದ್ದ ಮತ್ತು 8.40 ಮೀಟರ್ ಅಗಲವನ್ನು ಹೊಂದಿದೆ. ಇದರಲ್ಲಿ ಇಪ್ಪತ್ತು ಕಂಬಗಳಿದ್ದು ಅವುಗಳಲ್ಲಿ ಆರು ಸ್ವತಂತ್ರ ಕಂಬಗಳು ಮತ್ತು ಹದಿನಾಲ್ಕು ಅರ್ಧಗಂಬಗಳಿವೆ. ಈ ಕಂಬಗಳು ಗಾತ್ರದಲ್ಲಿ ದೊಡ್ಡವು ಈ ಕಂಬಗಳನ್ನು ನೇರವಾಗಿ ಎರಡು ಭಾಗಗಳಾಗಿ ವಿಂಗಡಿಸಿ, ಕೆಳಗೆ, ಮೇಲೆ ಚಚ್ಚೌಕ, ಮಧ್ಯ ಭಾಗ ಸುರುಳಿಯಾಕಾರ, ಇವುಗಳ ಕೊನೆಯ ಭಾಗದಲ್ಲಿ ಪುಷ್ಪ ಬೋದಿಗೆಗಳನ್ನು ಹೊಂದಿದೆ. ಕೆಳಭಾಗಗಳಲ್ಲಿ ಯಾಳಿಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಸಭಾಮಂಟಪದ ಮಧ್ಯದ ಅಂಕಣದ ಭುವನೇಶ್ವರಿಯು ಅಷ್ಟಕೋನಾಕಾರದಲ್ಲಿದ್ದು ಮಧ್ಯದಲ್ಲಿ ಅರಳಿದ ಕಮಲವಿದೆ. ಕಮಲವು ಮೂರು ಸುತ್ತುಗಳನ್ನು ಹೊಂದಿದ್ದು, ಹೊರಸುತ್ತಿನಲ್ಲಿ ಇಪ್ಪತ್ತನಾಲ್ಕು ದಳಗಳನ್ನು ಹೊಂದಿದೆ. ಒಳಹೋದಂತೆ ಚಿಕ್ಕದಾಗುತ್ತಾ ಹೋಗಿ ಮಧ್ಯದಲ್ಲಿ ಮೊಗ್ಗಿನಂತೆ ಕಾಣಿಸುತ್ತದೆ. ಉಳಿದ ಅಂಕಣದ ಮೇಲ್ಛಾವಣಿಯು ಸಾಧಾರಣವಾಗಿದ್ದು ಕಲ್ಲುಚಪ್ಪಡಿಗಳಿಂದ ಮಾಡಲ್ಪಟ್ಟಿದೆ. ಭಿತ್ತಿಯ ಭಾಗವನ್ನು ಒಂದರ ಮೇಲೆ ಒಂದರಂತೆ ಚಪ್ಪಡಿಕಲ್ಲುಗಳನ್ನಿಟ್ಟು ನಿರ್ಮಿಸಿರುತ್ತಾರೆ. ಮಠದ ಮೇಲ್ಛಾವಣಿಯು ಸಮತಟ್ಟಾಗಿದೆ. ಇದರ ಪ್ರವೇಶದ್ವಾರವು ಅಗಲವಾಗಿದ್ದು ಅಲಂಕಾರವಾಗಿದೆ. ಇದರಲ್ಲಿ ಲತಾಸುರುಳಿ, ಮೂಲೆಯಲ್ಲಿ ಗಿಳಿಗಳನ್ನು ಕೆತ್ತಿದ್ದು ಬಾಗಿಲುವಾಡದ ಮೇಲ್ಭಾಗದಲ್ಲಿ ಎರಡು ಕಡೆ ಮತ್ತು ಮಧ್ಯದಲ್ಲಿ ದೇವಾಲಯದ ಶಿಖರದಂತೆ ಇದ್ದು ಮಧ್ಯದಲ್ಲಿರುವ ಶಿಖರದ ಮಧ್ಯದಲ್ಲಿ ದೇವಿಯ ಶಿಲ್ಪವನ್ನು ಕೆತ್ತಲಾಗಿದೆ. ಇಕ್ಕೆಲಗಳಲ್ಲಿ ಅಲಂಕೃತವಾದ ನೃತ್ಯಸುಂದರಿಯರು ಇದ್ದು ಇವುಗಳ ಅಕ್ಕ ಪಕ್ಕದಲ್ಲಿ ಸಿಂಹ ಮತ್ತು ಗಿಳಿಗಳನ್ನು ಮತ್ತು ಬಾಗಿಲುವಾಡದ ಹೊಸ್ತಿಲಿನ ಕೆಳಬಾಗದಲ್ಲಿ ಮೂರು ಯಾಳಿಗಳ ಶಿಲ್ಪಗಳನ್ನು ಕೆತ್ತಲಾಗಿದೆ.

ತೆರೆದ ಮುಖಮಂಟಪ : ತೆರೆದ ಮುಖಮಂಟಪವು 4.20 ಮೀಟರ್ ಉದ್ದ ಮತ್ತು 8.40 ಮೀಟರ್ ಅಗಲವನ್ನು ಹೊಂದಿದೆ. ಇದರಲ್ಲಿ ಎರಡು ಸ್ವತಂತ್ರ ಕಂಬಗಳಿವೆ. ಈ ಕಂಬಗಳು ಸಾಧಾರಣವಾಗಿದ್ದು ಕಾಂಡ ಭಾಗದಲ್ಲಿ ಉದ್ದುದ್ದನೇಯ ಸಾದ ಪಟ್ಟಿಕೆಗಳನ್ನು ಹೊಂದಿವೆ. ಇದರ ಶಿಲಾತೊಲೆಗಳಲ್ಲಿ ಅಲಂಕಾರಿಕವಾದ ಪುಷ್ಪದಳಗಳನ್ನು ಸಾಲಾಗಿ ಕೆತ್ತಿರುವುದು ಕಂಡುಬರುತ್ತದೆ. ಇದರ ಮೇಚ್ಛಾವಣಿಯು ಸಾಧಾರಣವಾಗಿದ್ದು ಕಲ್ಲುಚಪ್ಪಡಿಗಳಿಂದ ಮಾಡಲ್ಪಟ್ಟಿದೆ. ಸಭಾಮಂಟಪ ಮತ್ತು ತೆರೆದ ಮುಖಮಂಟಪದ ಮುಂಭಾಗದಲ್ಲಿ ಇಳಿಜಾರಿನ ಚಜ್ಜಾವನ್ನು ಹೊಂದಿದೆ.

ದ್ವಾರಮಂಟಪ : ಈ ಮಠದ ಸುತಲೂ ಪ್ರಾಕಾರಗೋಡೆಯಿದೆ. ಇದರ ಮುಂಭಾಗದಲ್ಲಿ ದ್ವಾರ ಮಂಟಪವಿದೆ. ಇದರಲ್ಲಿ ಹನ್ನೆರಡು ಕಂಬಗಳಿದ್ದು ಈ ಕಂಬಗಳು ಸಾಧಾರಣವಾಗಿವೆ. ಇದರ ಮೇಚ್ಛಾವಣಿಯು ಸಾಧಾರಣವಾಗಿದ್ದು ಕಲ್ಲುಚಪ್ಪಡಿಗಳಿಂದ ಮಾಡಲ್ಪಟ್ಟಿದ್ದು ಇದರ ಮೇಲ್ಭಾಗದಲ್ಲಿ ಇತ್ತೀಚೆಗೆ ದೊಡ್ಡದಾದ ಸಿಮೆಂಟಿನ ಶಿವಲಿಂಗವನ್ನು ಮಾಡಿಸಿರುತ್ತಾರೆ. ಈ ದ್ವಾರಮಂಟಪದ ಪ್ರವೇಶದ್ವಾರವು ಸಾಧಾರಣವಾಗಿದ್ದು ಸ್ತಂಭಶಾಖೆಯೊಂದನ್ನು ಮಾತ್ರ ಒಳಗೊಂಡಿದೆ. ಇಕ್ಕಲೆಗಳಲ್ಲಿ ಶೈವ ದ್ವಾರಪಾಲಕರ ವಿಗ್ರಹಗಳಿವೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ದ್ವಾರದ ಅಕ್ಕಪಕ್ಕದಲ್ಲಿ ಸುಂದರವಾದ ಆನೆಯುಳ್ಳ ಹಸ್ತಿ ಹಸ್ತಗಳಿವೆ. ದೇವಾಲಯದ ಆಗ್ನೇಯ ದಿಕ್ಕಿಗೆ ಪ್ರಾಕಾರಗೋಡೆಗೆ ತಾಗಿಕೊಂಡಂತೆ ಪಾಕಶಾಲೆಯ ಮಂಟಪವಿದೆ.

ವೀರಭದ್ರ ದೇವಾಲಯ

ತಳವಿನ್ಯಾಸ : ಕಣಶಿಲೆಯಿಂದ ನಿರ್ಮಿಸಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಇದರ ತಳವಿನ್ಯಾಸದಲ್ಲಿ ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪವನ್ನು ಹೊಂದಿದೆ. ಏಕಕೂಟ ರಚನೆಯನ್ನು ಹೊಂದಿದ್ದು ನಿರಂದರ ಮಾದರಿ ವ್ಯವಸ್ಥೆಯನ್ನು ಹೊಂದಿರುತ್ತದೆ.[8]

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಚಚೌಕಾಕಾರವಾಗಿದ್ದು ಇದು 2.20 ಮೀಟರ್ ಉದ್ದ ಮತ್ತು 2.20 ಮೀಟರ್ ಅಗಲವನ್ನು ಹೊಂದಿದೆ. ಇದರ ಮಧ್ಯದಲ್ಲಿ ವೀರಭದ್ರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಭುವನೇಶ್ವರಿಯು ಅಷ್ಟಕೋನಾಕಾರದಲ್ಲಿದ್ದು ಮಧ್ಯದಲ್ಲಿ ಅರಳಿದ ಕಮಲವಿದೆ. ಕಮಲವು ಮೂರು ಸುತ್ತುಗಳನ್ನು ಹೊಂದಿದ್ದು, ಹೊರಸುತ್ತಿನಲ್ಲಿ ಇಪ್ಪತ್ತನಾಲ್ಕು ದಳಗಳನ್ನು ಹೊಂದಿದೆ. ಒಳಹೋದಂತೆ ಚಿಕ್ಕದಾಗುತ್ತಾ ಹೋಗಿ ಮಧ್ಯದಲ್ಲಿ ಮೊಗ್ಗಿನಂತೆ ಕಾಣಿಸುತ್ತದೆ. ಇದರ ಪ್ರವೇಶದ್ವಾರವು ಸಾಧಾರಣವಾಗಿದೆ. ಇದರ ಮೇಲ್ಭಾಗದಲ್ಲಿ ಪಿರಮಿಡ್ಡಿನಾಕಾರದಲ್ಲಿ ಶಿಖರವನ್ನು ಸಿಮೆಂಟ್ ಮತ್ತು ಇಟ್ಟಿಗೆ ಬಳಸಿ ಜೀರ್ಣೋದ್ಧಾರಗೊಳಿಸಿದ್ದಾರೆ.

ಸಭಾಮಂಟಪ : ಈ ದೇವಾಲಯದ ಸಭಾಮಂಟಪವು 4.00 ಮೀಟರ್ ಉದ್ದ ಮತ್ತು 5.00 ಮೀಟರ್ ಅಗಲವನ್ನು ಹೊಂದಿದ್ದು ಕೇವಲ ಬುನಾದಿ ಮಾತ್ರ ಇದ್ದು ಇದು ಸಂಪೂರ್ಣವಾಗಿ ಹಾಳಾಗಿದೆ. ಈಗ ಅದರ ಅವಶೇಷಗಳು ಮಾತ್ರ ಸುತ್ತಲೂ ಹರಡಿವೆ.

ಮುಖಮಂಟಪ : ಈ ದೇವಾಲಯದ ಮುಖಮಂಟಪವು 2.30 ಮೀಟರ್ ಉದ್ದ ಮತ್ತು 5.00 ಮೀಟರ್ ಅಗಲವನ್ನು ಹೊಂದಿದ್ದು ಕೇವಲ ಬುನಾದಿ ಮಾತ್ರ ಇದ್ದು ಇದು ಸಂಪೂರ್ಣವಾಗಿ ಹಾಳಾಗಿದೆ. ಈಗ ಅದರ ಅವಶೇಷಗಳು ಮಾತ್ರ ಸುತ್ತಲೂ ಹರಡಿವೆ.

ಮೂರ್ತಿಶಿಲ್ಪಗಳು

ವೀರಭದ್ರ

ವೀರಭದ್ರ ದೇವಾಲಯದ ಗರ್ಭಗುಡಿಯಲ್ಲಿರುವ ವೀರಭದ್ರ ವಿಗ್ರಹವು 83 ಸೆಂ.ಮೀ. ಎತ್ತರ, 40 ಸೆಂ.ಮೀ.ಅಗಲ ಹಾಗೂ 10 ಸೆಂ.ಮೀ. ದಪ್ಪವುಳ್ಳದಾಗಿದೆ. ದ್ವಿಭಂಗದಲ್ಲಿ ನಿಂತಿರುವ ವೀರಭದ್ರನು ಚತುರ್ಭುಜಗಳನ್ನು ಹೊಂದಿದ್ದು, ಬಲಭಾಗದ ಮುಂದಿನ ಕೈಯಲ್ಲಿ ಖಡ್ಗ, ಹಿಂದಿನ ಕೈಯಲ್ಲಿ ಬಾಣ, ಎಡಭಾಗದ ಹಿಂದಿನ ಕೈಯಲ್ಲಿ ಬಿಲ್ಲು, ಮತ್ತು ಮುಂದಿನ ಕೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ತಲೆಯಲ್ಲಿ ಕರಂಡ ಮುಕುಟ ಧರಿಸಿದ್ದಾನೆ. ಕಟಿಯಲ್ಲಿ ಕಠಾರಿ ಇದೆ. ಕಿವಿಯಲ್ಲಿ ಕುಂಡಲಾಭರಣ, ಅಗಲವಾದ ಕಂಠಹಾರ, ರುಂಡ ಮಾಲೆಯನ್ನು ಧರಿಸಿದ್ದಾನೆ. ಶಿಲ್ಪದ ಹಿಂಭಾಗದಲ್ಲಿ ಸ್ತಂಭ ಚಿತ್ರದ ಪ್ರಭಾವಳಿ ಇದ್ದು, ಪ್ರಭಾವಳಿ ಮೇಲೆ ಕೀರ್ತಿಮುಖವಿದೆ. ಪ್ರಭಾವಳಿಯೂ ಅರ್ಧ ಸುರುಳಿಗಳಿಂದಲಂಕೃತವಾಗಿವೆ. ಪ್ರತಿ ಸುರುಳಿಯಲ್ಲಿ ಪುಷ್ಪಗಳಿವೆ. ವೀರಭದ್ರನ ಎಡಭಾಗದಲ್ಲಿ ಕುರಿ ತಲೆಯ ದಕ್ಷಬ್ರಹ್ಮನಿದ್ದಾನೆ. ವೀರಭದ್ರನು ಕಾಲಿಗೆ ಕಾಲ್ಕಡಗ ಧರಿಸಿದ್ದು ಪಾದದ ಕೆಳಗಡೆ ಪಾದರಕ್ಷೆಗಳಿವೆ.

ಗಣಪತಿ

ವೀರಭದ್ರ ದೇವಾಲಯದ ಗರ್ಭಗೃಹದಲ್ಲಿ ವೀರಭದ್ರ ಮೂರ್ತಿಯ ಪಕ್ಕದಲ್ಲಿರುವ ಈ ಮೂರ್ತಿಯು 70 ಸೆಂ.ಮೀ.ಎತ್ತರ, 45 ಸೆಂ.ಮೀ.ಅಗಲ ಹಾಗೂ 25 ಸೆಂ.ಮೀ. ದಪ್ಪವುಳ್ಳದಾಗಿದೆ. ಲಲಿತಾಸನದಲ್ಲಿ ಕುಳಿತಿರುವ ಗಣಪತಿಯು ಚತುರ್ಭುಜದಾರಿಯಾಗಿದೆ. ಕೀರಿಟಧಾರಿಯಾದ ಈ ಮೂರ್ತಿಯ ಕೊರಳಲ್ಲಿ ಅಲಂಕಾರಿಕವಾದ ಹಾರಗಳು, ಕಾಲಿನಲ್ಲಿ ಕಾಲ್ಗಡಗ, ಉದರಬಂಧ, ಯಜ್ಞೋಪವೀತವಿದ್ದು, ಹೊಟ್ಟೆಯ ಮೇಲೆ ಸರ್ಪವನ್ನು ಸುತ್ತಲಾಗಿದೆ. ಭುಜಕೀರ್ತಿ, ಕೇಯೂರ ಹಾಗೂ ಕೈಗಡಗಗಳಿವೆ. ಮೇಲಿನ ಕೈಯಲ್ಲಿ ಅಂಕುಶ, ಪಾಶವಿದ್ದು ಕೆಳಗಿನ ಬಲಗೈಯಲ್ಲಿ ದಂತ ಎಡಗೈಯಲ್ಲಿ ಮೋದಕ ಪಾತ್ರೆ, ಆ ಪಾತ್ರೆಯಲ್ಲಿರುವ ಸಿಹಿಯನ್ನು ಸೊಂಡಿಲಿನಿಂದ ತಿನ್ನುವಂತೆ ತೋರಿಸಲಾಗಿದೆ. ಮೂರ್ತಿಯ ಸುತ್ತಲು ಅಲಂಕಾರಿಕವಾದ ಪ್ರಭಾವಳಿಯಿದೆ.

ನಂದಿ

ವೀರಭದ್ರ ದೇವಾಲಯದ ಗರ್ಭಗೃಹದಲ್ಲಿ ವೀರಭದ್ರ ಮೂರ್ತಿಯ ಪಕ್ಕದಲ್ಲಿ ಈ ನಂದಿಯ ಶಿಲ್ಪವು 50 ಸೆಂ.ಮೀ.ಉದ್ದ, 20 ಸೆಂ.ಮೀ.ಅಗಲ ಮತ್ತು 35 ಸೆಂ.ಮೀ. ಎತ್ತರವುಳ್ಳದಾಗಿದೆ. ಮುಂದಿನ ಎರುಡು ಕಾಲುಗಳನ್ನು ಮಡಚಿಕೊಂಡು ಕತ್ತನ್ನು

ನೇರವಾಗಿಸಿಕೊಂಡು ಕುಳಿತಭಂಗಿಯಲ್ಲಿದೆ. ಆಭರಣ ಭೂಷಿತವಾಗಿರುವ ಇದು ಕೊರಳಲ್ಲಿ ಸರಪಳಿ, ಘಂಟೆಯ ಹಾರಗಳು ಇವೆ. ಹಾಗೂ ಭುಜದ ಮೇಲೆ ಅಲಂಕಾರಿಕ ಕೆತ್ತನೆಯನ್ನು ಕಾಣಬಹುದು.

ಒಟ್ಟಾರೆಯಾಗಿ ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಈ ಪ್ರಾಂತ್ಯದಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಪಾರಂಪರಿಕವಾಗಿ, ಧಾರ್ಮಿಕ ಸಾಮರಸ್ಯದ ನಿಲುವಿಗೆ ಒಳಪಟ್ಟ ಸಾಕಷ್ಟು ಅಂಶಗಳು ಸಂಶೋಧನಾತ್ಮಕ ಅಧ್ಯಯನದ ದೃಷ್ಟಿಯಿಂದ ಹೆಚ್ಚಿನ ಮಹತ್ವವನ್ನು ಹೊಂದಿದೆ. ಈ ಗ್ರಾಮವು ವಿಜಯನಗರ ಕಾಲದಲ್ಲಿ ಮಹತ್ವದ ಸ್ಥಾನವನ್ನು ಹೊಂದಿತ್ತು ಎಂಬುದಕ್ಕೆ ಇಲ್ಲಿಯ ಶಾಸನ, ದೇವಾಲಯಗಳು, ಮೂರ್ತಿಶಿಲ್ಪಗಳು ಹಾಗೂ ಇನ್ನಿತರ ಪ್ರಾಚ್ಯಾವಶೇಷಗಳು ಸಾಕ್ಷಿಯಾಗಿವೆ.

ಅಡಿ ಟಿಪ್ಪಣಿಗಳು

1. ದೇಸಾಯಿ ಪಿ.ಬಿ., **ಹಿಸ್ಟರಿ ಆಫ್ ಕರ್ನಾಟಕ,** ಪು.75.
2. ಸೂರ್ಯನಾಥ ಕಾಮತ್ ಯು., **ಹಿಸ್ಟರಿ ಆಫ್ ಕರ್ನಾಟಕ,** ಪು.156.
3. ಸೀವೆಲ್ ರಾಬರ್ಟ್, **ಎ ಫರಗಾಟನ್ ಎಂಪೈರ್,** ಪು.122.
4. ಅದೇ, ಪು.130.
5. ಅದೇ, ಪು.122.
6. ದೇವರಕೊಂಡಾರೆಡ್ಡಿ (ಸಂ), ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ, ಪರಮಶಿವಮೂರ್ತಿ ಡಿ.ವಿ, (ಸ.ಸಂ), **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1 ಬಳ್ಳಾರಿ ಜಿಲ್ಲೆ,** ಪು.301.
7. ಸುರೇಶ್. ಕೆ.ಎಂ, ವಾಸುದೇವ ಬಡಿಗೇರ, ಮಾಡಲಗೇರಿ ಕೊಟ್ರೇಶ್, ಸೋಮಶೇಖರ್.ಎಸ್.ವೈ, **ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ,** ಪು.280.
8. ಅದೇ, ಪು.181.

ಛಾಯಾಚಿತ್ರಗಳು




ವೀರಭದ್ರೇಶ್ವರ ದೇವಾಲಯದ ಬಳಿಯಿರುವ ಶಾಸನ



ಒಪ್ಪತ್ತೇಶ್ವರ ಮಠದ ಮುಂಭಾಗದ ಪ್ರವೇಶದ್ವಾರ



ಒಪ್ಪತ್ತೇಶ್ವರ ಮಠದ ಸಭಾಮಂಟಪದಲ್ಲಿರುವ ಕಂಬಗಳು



ಒಪ್ಪತ್ತೇಶ್ವರ ಮಠದ ಸಭಾಮಂಟಪದ ಭುವನೇಶ್ವರಿ



ಒಪ್ಪತ್ತೇಶ್ವರ ಮಠದ ಸಭಾಮಂಟಪದ ಬಾಗಿಲುವಾಡ



ವೀರಭದ್ರೇಶ್ವರ ದೇವಾಲಯ





ವೀರಭದ್ರೇಶ್ವರ ದೇವಾಲಯದ ಗರ್ಭಗೃಹದಲ್ಲಿರುವ ಗಣಪತಿ, ವೀರಭದ್ರ ಮತ್ತು ನಂದಿಶಿಲ್ಪಗಳು

29. ಹಂಪಿ ಪರಿಸರದ ಕವಿ : ಪರ್ವತದೇವ

– ಡಾ. ಎಫ್.ಟಿ. ಹಳ್ಳಿಕೇರಿ

ಕನ್ನಡ ಸಾಹಿತ್ಯ ಸಂಸ್ಕೃತಿಗೆ ಪೋಷಣೆ–ಪ್ರೋತ್ಸಾಹ ನೀಡಿದ ಸ್ಥಳಗಳಲ್ಲಿ ಹಂಪೆಯೂ ಒಂದು. ಹರಿಹರ–ರಾಘವಾಂಕ–ಚಾಮರಸ–ಲಕ್ಕಣ್ಣದಂಡೇಶ ಮೊದಲಾದ ಕವಿಗಳು ಇಲ್ಲಿದ್ದುಕೊಂಡು ತಮ್ಮ ಸಾಹಿತ್ಯ ಕೃಷಿಯನ್ನು ಮಾಡಿದವರು. ಅಷ್ಟೇ ಏಕೆ, ನೂರೊಂದು ವಿರಕ್ತರು ಹಂಪಿಯ ಸುತ್ತಮುತ್ತಲ ಪ್ರದೇಶದಲ್ಲಿದ್ದುಕೊಂಡು ವಚನ ಸಾಹಿತ್ಯ ಸಂವರ್ಧನೆಯಲ್ಲಿ ತೊಡಗಿಕೊಂಡಿದ್ದರು. ಅಲ್ಲದೇ ಈ ಪರಿಸರದಲ್ಲಿದ್ದುಕೊಂಡು ಕೃತಿರಚನೆ ಮಾಡಿದವರು ಅದೆಷ್ಟೋ ಕವಿಗಳು. ಅಂಥವರಲ್ಲಿ "ಪರ್ವತದೇವ"ನೂ ಒಬ್ಬ. ಕನ್ನಡ ಸಾಹಿತ್ಯದಲ್ಲಿ ಪರ್ವತದೇವ, ಪರ್ವತ ಶಿವಯೋಗಿ, ಸಂಪಾದನೆಯ ಪರ್ವತದೇವ, ಪರ್ವತೇಶ ಹೆಸರಿನ ಕವಿಗಳು ಕಂಡುಬರುತ್ತಾರೆ. ಹಂಪಿ ಪರಿಸರದ ಕವಿ "ಪರ್ವತದೇವ"ನ ಬಗ್ಗೆ ಕೆಲವು ಸಂಗತಿಗಳನ್ನು ತಿಳಿದುಕೊಳ್ಳುವ ಪ್ರಯತ್ನ ಈ ಸಂಪ್ರಬಂಧದ ಆಶಯವಾಗಿದೆ.

ಪರ್ವತದೇವ ಕವಿಯು ನನ್ನಯ್ಯ ಚಾರಿತ್ರ ಎಂಬ ಕೃತಿಯನ್ನು ರಚನೆ ಮಾಡಿದ್ದಾನೆ. 14 ಸಂಧಿ 1750 ಸಾಂಗತ್ಯ ಪದ್ಯಗಳನ್ನು ಒಳಗೊಂಡ ದೇಸೀ ಕೃತಿ. ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರ ಸಮಕಾಲೀನನಾದ ನನ್ನಯ್ಯ ಎಂಬ ಶಿವಶರಣರ ಚರಿತ್ರೆಯನ್ನು ನಿರೂಪಿಸುವ ಮೊದಲ ಕಾವ್ಯ. ಈತನನ್ನು ಅನುಸರಿಸಿ ಮುಂದೆ ಮಾದಣ್ಣ(1650), ಭೂಕಾಂತ ಮೇದಿನಿರಾಯ, ಉದ್ದಂಡ(1700)ಕವಿಗಳು ನನ್ನಯ್ಯನ ಕುರಿತು ಸ್ವತಂತ್ರ ಕಾವ್ಯಗಳನ್ನು ಬರೆದಿದ್ದಾರೆ.

ಕವಿಯ ಕಾಲ "ಶಕ 1499ನೆಯ ಈಶ್ವರ ಸಂವತ್ಸರದ ಫಾಲ್ಗುಣದಲ್ಲಿ ಅಂದರೆ 1578" ಎಂದು ಆರ್. ನರಸಿಂಹಾಚಾರ್ ಅಭಿಪ್ರಾಯಪಟ್ಟಿರುವರು(ಪುಟ:255). ಇನ್ನು ಎಂ.ಪಿ.ಮಂಜಪ್ಪಶೆಟ್ಟಿ ಅವರು "ತನ್ನ ಕಾವ್ಯದಲ್ಲಿ ಚಾಮರಸನನ್ನು ಸ್ಮರಿಸಿರುವುದರಿಂದ ಪರ್ವತದೇವನು ಸು 1430ರಿಂದ ಈಚಿನವನೆಂಬುದು ನಿರ್ವಿವಾದ"ಎಂದಿದ್ದಾರೆ(ಪ್ರಸ್ತಾವನೆ ಪುಟ:14). ಹೀಗಾಗಿ ಕವಿ ಪರ್ವತೇಶನು 15ನೆಯ ಶತಮಾನದ ಕವಿಯೆಂದು ಸ್ಪಷ್ಟವಾಗಿ ಹೇಳಬಹುದು. ಆ ಕಾವ್ಯದ ಮೊದಲ ಸಂಧಿಯಲ್ಲಿ ತನ್ನ ಬಗ್ಗೆ ಹೀಗೆ ಹೇಳಿಕೊಂಡಿದ್ದಾನೆ :

ಉತ್ತರ ದೇಶದೊಳಗೆ ವಿದ್ಯಾನಗರವು
ಅತ್ಯಂತ ಸೌಭಾಗ್ಯದಿಂದ
ನಿತ್ಯದ ಸುಖಭೋಗವಿತ್ತು ಸರ್ವರಿಗೆಲ್ಲ
ಕರ್ತೃಹರನು ನೆಲಸಿಹನು 1–33
ಇಂತಪ್ಪ ನಗರದ ಮಧ್ಯದೊಳೊಪ್ಪುವ
ನಂತು ಒಂಟೆತ್ತಿನ ಮಠದಿ
ಸಂತತ ಸ್ಥಿರಪೀಠ ಚರಲಿಂಗಮೂರ್ತಿ ನಿ
ಶ್ಚಿಂತ ನಿರ್ಮಳ ವಿರುಪಾಕ್ಷ 1–34
ವರಗುರು ವಿರುಪಾಕ್ಷದೇವರ ಕರಪದ್ಮ
ದಿರದುದ್ಭವಿಸಿ ಮರ್ತ್ಯದಲ್ಲಿ

ಚರಲಿಂಗದೊಳಗೊಪ್ಪಿ ಪರ್ವತದೇವರು
ಒರೆದ ಸತ್ಕೃತಿಯ ಲಾಲಿಪುದು 1–35

ಮೇಲಿನ ಈ ಮೂರು ಪದ್ಯಗಳು ಪರ್ವತದೇವನ ಗುರು ವಿರುಪಾಕ್ಷನ ಬಗ್ಗೆ ಹೇಳುತ್ತವೆ. "ಉತ್ತರದೇಶದೊಳಗೆ ವಿದ್ಯಾನಗರವು" ಎಂಬ ಹೇಳಿಕೆಯು ವಿಜಯನಗರವನ್ನು ನೆನಪಿಸುತ್ತದೆ. ವಿಜಯನಗರಕ್ಕೆ "ವಿದ್ಯಾನಗರ, ವಿದ್ಯಾನಗರ ಸರಕಾರದಿಂದ, ವಿದ್ಯಾನಗರ ಸಂಸ್ಥಾನದಿಂದಾ" ಎಂದು ಶಾಸನಗಳಲ್ಲಿ ವಿವಿಧ ರೀತಿಯಾಗಿ ಕರೆಯಲಾಗಿದೆ(ವಿಜಯನಗರ ಅಧ್ಯಯನ ಸಂ:13). ಹೀಗಾಗಿ ವಿದ್ಯಾನಗರ ಅಂದರೆ ಅದು ವಿಜಯನಗರ ಎಂಬುದು ಖಚಿತ. ಈ ನಗರದ ಮಧ್ಯದಲ್ಲಿರುವ ಒಂಟೆತ್ತಿನ ಮಠದ ಪೀಠಾಧಿಪತಿಯಾಗಿದ್ದವನು ವಿರೂಪಾಕ್ಷ. ಆತನ ಶಿಷ್ಯನೇ ಪರ್ವತದೇವ.

ನನ್ನಯ್ಯ ಚಾರಿತ್ರದ ಪ್ರತಿಯೊಂದು ಸಂಧಿಯ ಆರಂಭದಲ್ಲಿ ಕವಿಯು ತನ್ನ ಗುರು ವಿರೂಪಾಕ್ಷನನ್ನು ಕೊಂಡಾಡಿದ್ದಾನೆ. ಗಿರಿಜಾವರ ಕರುಣಾಕರ(2–1), ಹೇಮಾದ್ರಿಚಾಪ ಪಾವನರೂಪ(3–1), ಕಂತುಮರ್ದನ(4–1), ಸಗುಣ ನಿರ್ಗುಣ ಜಗದಾತ್ಮ(5–1), ಮೂದೇವರೊಂದಿತ ಮುನಿಪ್ರಿಯ(6–1), ಶರಣಜನಮ್ಮುನಿವಂದ್ಯ(7–1), ನೆನೆವರ ಕಾವನೆ(8–1), ಸದ್ಭಕ್ತರ ಮನಃಪ್ರಿಯನೆ(9–1), ಮೃಡಮೂರ್ತಿ(10–1), ಕಾಮಿತಫಲವ ಭಕ್ತರ್ಗೀವ(11–1), ಹರಿವಂದ್ಯ ಹರಿಭೂಷಣ(12–1), ಭಕ್ತರ ಸಲಹುವ(13–1), ಸಾಗರಧರನಗಜೇಶನೆ(14–1) –ಹೀಗೆ ನಾನಾ ರೀತಿಯಾಗಿ ಪರ್ವತದೇವನು ತನ್ನ ಗುರು ವಿರೂಪಾಕ್ಷನನ್ನು ಸ್ತುತಿ ಮಾಡಿದ್ದಾನೆ.

ಇಲ್ಲಿ ಉಕ್ತಗೊಂಡ ಒಂಟೆತ್ತಿನ ಮಠವು ಒಂದು ಕಾಲಕ್ಕೆ ಹಂಪಿಯ ಪ್ರಸಿದ್ಧ ಮಠಗಳಲ್ಲಿ ಒಂದಾಗಿತ್ತು. ಈಗ ಆ ಮಠದ ಕುರುಹು ಒಂದೂ ಇಲ್ಲ. ಆದರೆ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ(1450)ಯಲ್ಲಿ

ನಂದಿವಾಹನನಾಗಿ ಕೈಲಾಸದಿಂದಲೆ
ಯ್ತಂದು ಪಂಪಾಪತಿಯ ರಥವೀಥಿಯಲ್ಲಿ ಮುದ
ದಿಂದೊಂದು ಮಂದಿರವ ರಚಿಸಿ ಸೋಹಂಭಾವವಳಿದು ದಾಸೋಹಮೆನುತಾ
ಸಂದಳಿಪ ಚರಲಿಂಗದಲ್ಲಿ ತೆರಹಿಲ್ಲದಾ
ನಂದದಿಂದಮೃತಾನ್ನ ಪಾನವಸ್ತ್ರಮನಿತ್ತು
ವಂದಿಸುವ ಗುರುಮೂರ್ತಿ ಒಂದೆತ್ತಿನಯ್ಯಗಳ ಚರಣಾಂಬುಜಕ್ಕೆ ಶರಣು (38–224)

ಪಂಪಾಪತಿಯ ರಥಬೀದಿಯಲ್ಲಿ ಒಂದು ಮಂದಿರವನ್ನು ಕಟ್ಟಿಸಿ, ಬಂದಂಥ ಭಕ್ತಸಮೂಹಕ್ಕೆ ಅನ್ನ ವಸ್ತ್ರಗಳನ್ನಿತ್ತು ದಾಸೋಹ ಮಾಡುತ್ತಿದ್ದ ಚರಲಿಂಗ ಗುರುಮೂರ್ತಿ "ಒಂದೆತ್ತಿನಯ್ಯ"ನೇ ಒಂಟೆತ್ತಿನಮಠದ ಅಧಿಪತಿಯಾದ ವಿರೂಪಾಕ್ಷನಾಗಿರಬೇಕು. ಒಂದೆತ್ತು > ಒಂಟೆತ್ತು ಆಗಿರುವ ಸಾಧ್ಯತೆಯಿದೆ. ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಹಾಗೂ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಗಳಲ್ಲಿ ಒಂಟೆತ್ತಿನಮಠಗಳು ಇದ್ದು, ಅವುಗಳಿಗೂ, ಹಂಪೆಯ ಒಂಟೆತ್ತಿನಮಠಕಮಿರುವ ಸಂಬಂಧದ ಬಗ್ಗೆಯೂ ಗಮನಿಸಬೇಕಾಗಿದೆ. ಈ ಬಗ್ಗೆ ಇನ್ನಷ್ಟು ಶೋಧ ಆಗಬೇಕಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು:

1. ಎಂ.ಪಿ. ಮಂಜಪ್ಪ ಶೆಟ್ಟಿ (ಸಂ), **ಪರ್ವತದೇವ ವಿರಚಿತ ನನ್ನಯ್ಯ ಚಾರಿತ್ರ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1978
2. ಎಸ್. ಬಸಪ್ಪ (ಸಂ), **ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ,** ಪ್ರಾಚ್ಯವಿದ್ಯಾ ಸಂಶೊಧನಾಲಯ, ಮೈಸೂರು ವಿಶ್ವವಿದ್ಯಾಲಯ ಮೈಸೂರು, 1960
3. ಆರ್. ನರಸಿಂಹಾಚಾರ್, **ಕರ್ನಾಟಕ ಕವಿಚರಿತೆ ಸಂ:2,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1973
4. ಆರ್. ಗೋಪಾಲ್, **ವಿಜಯನಗರ ಅಧ್ಯಯನ ಸಂ:13,** ಪುರಾತತ್ವ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2008

30. ತಾರೀಖ–ಎ–ಫರಿಶ್ತಾ ಗ್ರಂಥದಲ್ಲಿ ವಿಜಯನಗರದ ಉಲ್ಲೇಖ

– ಡಾ. ಕೆ. ರವೀಂದ್ರನಾಥ

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಯಪುರದ ಆದಿಲ್‌ಶಾಹಿಗಳ ಚರಿತ್ರೆ ಮಹತ್ವವಾದದ್ದು. ಏಕಕಾಲಕ್ಕೆ ಉತ್ತರದ ಮೊಗಲ್ ಸಾಮ್ರಾಟರೊಂದಿಗೆ, ದಕ್ಷಿಣದ ವಿಜಯನಗರದೊಂದಿಗೆ ಸಂಘರ್ಷ ಹಾಗೂ ಸಮನ್ವಯದಿಂದ 1489ರಿಂದ 1686ರ ವರೆಗೆ ಅಂದರೆ 197 ವರ್ಷಗಳ ಕಾಲ ಭಾರತದ ನೆಲದಲ್ಲಿ ಆಳ್ವಿಕೆ ನೆಡೆಸಿದರು. 'ದಾದೇ ಇಲಾಹೀ' ನಾಮವೆತ್ತ ಆದಿಶಾಹಿ ಮನೆತನದಲ್ಲಿ ಎರಡನೇ ಇಬ್ರಾಹಿಂ ಆದಿಯಾಗಿ 8 ಜನ ಅರಸರು ಸಾಹಿತ್ಯ ಸಂಸ್ಕೃತಿ ಪ್ರಿಯರಾಗಿದ್ದರು. ಇವರ ಆಸ್ಥಾನದಲ್ಲಿ 20 ಇತಿಹಾಸ ಕೃತಿಗಳು ಹುಟ್ಟಿಕೊಂಡಿರುವುದನ್ನು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ಆದಿಲ್‌ಶಾಹಿ ಕಾಲದ ಕೃತಿಗಳನ್ನು ಅದರಲ್ಲೂ ಫರಿಶ್ತಾ ರಚಿಸಿದ ಗ್ರಂಥವನ್ನು ಕ್ಯಾಪ್ಟನ್ ಬ್ರಿಕ್ಸ್ ಇಂಗ್ಲೀಷ್‌ಗೆ ಅನುವಾದಿಸಿದ್ದಾನೆ. 2014ರಲ್ಲಿ ತಾರೀಖ–ಫರಿಶ್ತಾ ಗ್ರಂಥವನ್ನೊಳಗೊಂಡಂತೆ ಆದಿಲ್‌ಶಾಹಿ ಕಾಲದ ಒಟ್ಟು ಸಾಹಿತ್ಯವನ್ನು 18 ಸಂಪುಟಗಳಲ್ಲಿ ಕನ್ನಡ ಅನುವಾದ ಮಾಡಿಸಿದ ಚಾರಿತ್ರಿಕ ಸಂದರ್ಭಕ್ಕೆ ವಿಜಯಪುರದ ಬಿ.ಎಲ್.ಡಿ.ಇ ಸಂಸ್ಥೆಯ ವಚನ ಪಿತಾಮಹ ಫ.ಗು ಹಳಕಟ್ಟಿ ಸಂಶೋಧನಾ ಕೇಂದ್ರ ಕಾರಣವಾಗಿರುವುದು ಇತಿಹಾಸ ತಜ್ಞರಾದ ಇಲ್ಲಿಯ ಕೆಲವರಿಗಾದರೂ ತಿಳಿದಿರಬಹುದೆಂದು ಭಾವಿಸುತ್ತೇನೆ.

1570ರಲ್ಲಿ ಜನಿಸಿರಬಹುದೆಂದು ಹೇಳಲಾಗುತ್ತಿರುವ ಮಹ್ಮದ್ ಖಾಸಿಂ ಫರಿಶ್ತಾ "ತಾರೀಖ–ಎ–ಫರಿಶ್ತಾ" ಎನ್ನುವಂತೆ 12 ಅಧ್ಯಾಯವನ್ನೊಳಗೊಂಡ ಕೃತಿಯನ್ನು 25 ಬೇರೆ ಬೇರೆ ಇತಿಹಾಸ ಗ್ರಂಥಗಳನ್ನು ಆಕರಗಳನ್ನಾಗಿ ಬಳಸಿಕೊಂಡು ತಾನು ಕಣ್ಣಾರೆ ಕಂಡ ಘಟನೆಗಳನ್ನು ಆಧರಿಸಿ ಈ ಕೃತಿಯನ್ನು ರಚಿಸಿದ್ದಾನೆ. ಇದರಲ್ಲಿ ರಾಮಾಯಣ ಮಹಾಭಾರತಗಳಂಹ ಪೌರಾಣಿಕ ಕೃತಿಗಳ ಬಗ್ಗೆ ಇರಬಹುದಾದ ಹಿಂದೂಗಳ ಭಾವನೆ, ಅವರ ಪುರಾಣ ಪ್ರಜ್ಞೆ, ಮುಸ್ಲಿಮರ ಆಗಮನ, ಅವರ ವಂಶಾವಳಿ ಜೊತೆಗೆ ಭಾರತದಲ್ಲಿರುವ ಸಣ್ಣ ಪುಟ್ಟ ಸಂಸ್ಥಾನಗಳ ವಿವರವನ್ನು ಫರಿಶ್ತಾ ಪರಿಚಯಿಸುತ್ತಾನೆ.

ಫರಿಶ್ತಾನ 'ತಾರೀಖ–ಎ–ಫರಿಶ್ತಾ' ಗ್ರಂಥದಲ್ಲಿ ವಿಜಯನಗರದ ಉಲ್ಲೇಖಗಳ ಚಾರಿತ್ರಿಕ ಘಟನೆಗಳು, ಅವುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವುದು ನನ್ನ ಪ್ರಬಂಧದ ಉದ್ದೇಶವಾಗಿದೆ.

1. ವಿಜಯನಗರದ ಉಲ್ಲೇಖ : ಹಿಜರಿ 764ಕ್ಕೆ ಅಂದರೆ 1386ರಲ್ಲಿ ಮಹ್ಮದ್‌ಶಾಹ ತೆಲಂಗಾಣದ ಮೇಲೆ ಜಯಗಳಿಸಿದನು. ಈ ಯುದ್ಧದಲ್ಲಿ ವಿಜಯನಗರದ ಸಹಾಯವನ್ನು ತೆಲಂಗಾಣದ ಅರಸನಿಗೆ ಪಡೆಯಲಾಗಲಿಲ್ಲ. ಏಕೆಂದರೆ ವಿಜಯನಗರದ ರಾಜ ಮೃತಪಟ್ಟಿದ್ದನು. ಆತನ ತಮ್ಮನ ಮಗ ಪಟ್ಟಾಭಿಷೇಕಗೊಂಡಿದ್ದನು. ಹೀಗಾಗಿ ವಿಜಯನಗರದ ಸಹಾಯವಿಲ್ಲದೆ ಯುದ್ಧಮಾಡಲು ಧೈರ್ಯ ಮಾಡದೆ ಅರಣ್ಯ–ಗುಡ್ಡಗಳಲ್ಲಿ ಅಡಗಿ ಕುಳಿತನು ಎಂಬ ಉಲ್ಲೇಖ ಬರುತ್ತದೆ. ಈ ಉಲ್ಲೇಖದಿಂದ ಒಂದನೆಯ ಹರಿಹರನ ತಮ್ಮನಾದ ಬುಕ್ಕರಾಯ ತೀರಿಕೊಂಡು ಬುಕ್ಕರಾಯನ ಮೊದಲನೆಯ ಮಗ ಎರಡನೆಯ ಹರಿಹರ ರಾಜ್ಯಭಾರ ಮಾಡುತ್ತಿದ್ದಾನೆಂಬುವುದಾಗಿ ತಿಳಿದುಬರುತ್ತದೆ. ಫರಿಶ್ತಾ ಹೇಳುವ ಕಾಲಮಾನ ಎರಡನೆ ಹರಿಹರನ ಕಾಲಕ್ಕೆ ಅಂದರೆ 1377ರಿಂದ 1404 ರವರೆಗೆ ಎರಡನೆ ಹರಿಹರನ ಆಳ್ವಿಕೆ ಸರಿಹೊಂದುತ್ತದೆ.

2. ವಿಜಯನಗರದ ಉಲ್ಲೇಖ : ಮಹ್ಮದ್‌ಶಾಹ ನವರೋಜ ಹಬ್ಬದ ದಿವಸ ಹಸನ್ ಬಾದ್ ಅಂದರೆ ಗುಲಬರ್ಗಾ ತಲುಪಿದನು. ಅಲ್ಲಿಯ ಸಿಂಹಾಸನಕ್ಕೆ ಫೈರೋಜ ಸಿಂಹಾಸನವೆಂದು ನಾಮಕರಣ ಮಾಡಿದನು. ಅದರ ಮೇಲೆ ವಿರಾಜಮಾನನಾಗಿ ಸಂತೋಷಕೂಟ ಏರ್ಪಡಿಸಿದನು. ನಲವತ್ತು ದಿನಗಳ ಸಂತೋಷಕೂಟದಲ್ಲಿ ದೆಹಲಿಯಿಂದ 200 ಜನ ಕವಾಲಿ ಹಾಡುವವರನ್ನು ಕರೆಸುತ್ತಾನೆ. ಇವರಿಗೆ ಗೌರವಧನ ಕೊಡಲು ವಿಜಯನಗರದ ಅರಸನಿಗೆ ಪತ್ರ ಬರೆಯಲು ಮಲ್ಲಿಕ್ ಸೈಫುದ್ದೀನ್ ಗೋರಿಗೆ ಸೂಚಿಸುತ್ತಾನೆ. ಬಾದುಶಾಹ ನಿಶೆಯಲ್ಲಿ ಈ ಮಾತನ್ನು ಹೇಳಿರಬೇಕೆಂದು ಮಲ್ಲಿಕ್ ಸೈಫುದ್ದೀನ್ ಅಪೇಕ್ಷಿಸುತ್ತಾನೆ. ಬಾದುಶಾಹ ಸಾಮಾನ್ಯ ಸ್ಥಿತಿಯಲ್ಲಿದ್ದಾಗ ಮತ್ತೆ ವಿಜಯನಗರಕ್ಕೆ ಪತ್ರ ಬರೆಯುವ ಪ್ರಸ್ತಾಪ ಮಾಡುತ್ತಾನೆ. ಈತನ ಆದೇಶದಂತೆ ಮಲ್ಲಿಕ್ ಸೈಫುದ್ದೀನ್ ಧೂತನೊಬ್ಬನ ಕೂಡ ಕವ್ವಾಲಿ ಹಾಡುಗಾರರಿಗೆ ಸಂಭಾವನೆ ಕೊಡುವಂತೆ ವಿಜಯನಗರದ ಅರಸನಿಗೆ ಪತ್ರವನ್ನು ಕಳಿಸುತ್ತಾನೆ. ವಿಜಯನಗರದ ರಾಜನೇನು ಕಡಿಮೆ ಗರ್ವಿಷ್ಟನಿರಲಿಲ್ಲ. ಸಂದೇಶ ತಂದವನನ್ನು ಕತ್ತೆಯಮೇಲೆ ಕೂರಿಸಿ ಊರು ಸುತ್ತಿಸಿದನು. ಅಲ್ಲದೇ 20 ಸಾವಿರ ಸವಾರರು, 80 ಲಕ್ಷ ಕಾಲ್ದಳದವರು, 3 ಸಾವಿರ ಆನೆಗಳನ್ನು ಹೊಂದಿದ ಸೈನ್ಯ ತೆಗೆದುಕೊಂಡು ಆಧೋನಿ ಕೋಟೆಯಲ್ಲಿ ಸೇರಿ ಮುಸ್ಲಿಂ ರಾಜ್ಯಗಳನ್ನು ನಾಶಮಾಡಲು ಚರ್ಚಿಸಿದನು. ಅಂದು ಮಳೆಗಾಲ ಕೃಷ್ಣಾನದಿ ತುಂಬಿಹರಿಯುತ್ತಿತ್ತು ಆದರೂ ವಿಜಯನಗರದ ಅರಸನು ಅತ್ಯಂತ ಶಾಂತ ರೀತಿಯಿಂದ ಮುದುಗಲ್ ಕೋಟೆ ಸಮೀಪ ಬಿಡಾರ ಹೂಡಿದನು. ಕೋಟೆಯನ್ನು ವಶಪಡಿಸಿಕೊಳ್ಳಲು ಬಹಳ ಪ್ರಯತ್ನಿಸಿದನು. 800 ಮುಸಲ್ಮಾನ ಧೈರ್ಯಶಾಲಿ ಸೈನಿಕರು ಕೋಟೆಯ ರಕ್ಷಣೆಗೆ ತೊಡಗಿದರು. ಆದರೆ ಕೋಟೆಯ ಜವಾಬ್ದಾರಿ ಹೊತ್ತಿರುವ ಮಲ್ಲಿಕ್ ಸೈಫುದ್ದೀನ್ ಕೋಟೆಯ ಜನರೊಂದಿಗೆ ಒರಟಾಗಿ ವರ್ತಿಸಿದ್ದರಿಂದ ಒಡಕು ಉಂಟಾಯಿತು. ಕೋಟೆಯ ರಕ್ಷಣೆಯಲ್ಲಿ ಆಲಸ್ಯ ತೋರಿದರು. ಇದರಿಂದ ವಿಜಯನಗರದ ರಾಜನು ಕೋಟೆಯನ್ನು ಗೆದ್ದುಕೊಂಡನು. ಫರಿಶ್ತಾ ತಿಳಿಸುವ ಈ ಉಲ್ಲೇಖದಲ್ಲಿ ಮುದುಗಲ್ ಕೋಟೆಯ ಬಗ್ಗೆ ವಿವರಣೆಯಿದೆ. ಮುದುಗಲ್ ಕೋಟೆಗೆದ್ದ ವಿನಯನಗರದ ಅರಸ ಯಾರೆಂಬುದು ತಿಳಿದುಬರುವುದಿಲ್ಲ. ಕೃಷ್ಣಾತೀರದ ಯುದ್ಧದ ಬಗ್ಗೆ ಫರಿಶ್ತಾನ ವರದಿಯಲ್ಲಿ ರಾಯಚೂರು ಕೋಟೆ ಮುತ್ತಿಗೆಯ ಪ್ರಸ್ತಾಪವಿಲ್ಲ.

3. ವಿಜಯನಗರದ ಉಲ್ಲೇಖ : ಮುದುಗಲ್ ಹುತಾತ್ಮರ ಪ್ರತೀಕ ತೀರಿಸಿಕೊಳ್ಳುವುದು ನನ್ನ ಕರ್ತವ್ಯವೆಂದು ಘೋಷಿಸಿಕೊಂಡ ಸುಲ್ತಾನ್ ಮಹ್ಮದ್ ಶಾಹನು 9 ಸಾವಿರ ಸವಾರರೊಂದಿಗೆ ತಣ್ಣನೆಯ ಗಾಳಿ, ಏರುತ್ತಿರುವ ಕೃಷ್ಣಾನದಿ, ಜೋರಾದ ಮಳೆಯ ಪ್ರಕ್ಷುತ್ತ ವಾತಾವರಣದಲ್ಲೂ 3 ದಿನಗಳಲ್ಲಿ ಕೃಷ್ಣಾನದಿಯನ್ನು ದಾಟಿದನು. ವಿಜಯನಗರದ ಅರಸ ಇದರಿಂದ ದಿಗ್ಭ್ರಾಂತನಾಗಿ ಖಜಾನೆ, ಸಾಮಾನು ಸರಂಜಾಮುಗಳನ್ನು, ಆನೆ ಇತ್ಯಾದಿಗಳನ್ನು ವಿಜಯನಗರಕ್ಕೆ ಕಳಿಸಲು ಸಿದ್ಧತೆ ಮಾಡಿಕೊಂಡನು. ಭಾರಿಮಳೆಯಿಂದ ಅದು ಸಾಧ್ಯವಾಗಲಿಲ್ಲ. ಬೆಳಗಾಗುವುದರೊಳಗಾಗಿ ಹಿಂದೂಗಳ ಮೇಲೆ ಮಹ್ಮದ್ ಶಾಹಿ ಸೈನ್ಯವು ಹಠೋಟಿ ಸಾಧಿಸಿತು. ಸಲಾತೀನ ಎಂಬ ಗ್ರಂಥದಲ್ಲಿ ಬರೆದ ಪ್ರಕಾರ 70 ಸಾವಿರ ಹಿಂದೂಗಳನ್ನು ಕೊಲ್ಲಲಾಯಿತು. 2 ಸಾವಿರ ಆನೆ, 3 ಸಾವಿರ ತೋಪುಗಳು, 700 ಅರಬ್ಬೀ ತಳಿಯ ಕುದುರೆಗಳು, ಒಂದು ಜೋಡು ಸಿಂಹಾಸನ ಬಾದಶಾಹನ ವಶಕ್ಕೆ ಬಂದಿತು.

ಮಹ್ಮದನ ಈ ಗೆಲುವು ಮುಂದೆ ಆಗಬಹುದಾದ ಎಲ್ಲಾ ಗೆಲುವುಗಳಿಗೆ ನಾಂದಿಯೆಂದು ಭಾವಿಸಿದನು. ತುಂಗಾಭದ್ರ ನದಿದಾಟಿ ವಿಜಯನಗರ ರಾಜಧಾನಿ ಪ್ರವೇಶಿಸಿದನು. ವಿಜಯನಗರದ ವಿರುದ್ಧ ಗೆಲುವನ್ನು ಸಾಧಿಸಿದನು. "ವಿಜಯನಗರದ ರಾಜನು ದಿಲ್ಲಿಯ ಕವ್ವಾಲಿ ಹಾಡುಗಾರರಿಗೆ ಕೊಡಬೇಕಾದ ಗೌರವಧನ ಕೊಡದೇ ಇದ್ದಲ್ಲಿ ಉಳಿದವರನ್ನು ಕೊಲ್ಲುವುದಾಗಿ ಸಂದೇಶ ಕಳಿಸಿದನು" ವಿಜಯನಗರದ ಖಜಾನೆಯಿಂದ ಹಣಕೊಡಲಾಯಿತು.

ಸಮಾರೋಪ : ಈ ಮೇಲಿನ ಮೂರು ಉಲ್ಲೇಖಗಳನ್ನು ಗಮನಿಸಿದರೆ

1. ಫರಿಶ್ತಾನ ಕೃತಿಯಲ್ಲಿ ಕೃಷ್ಣತೀರದ ಮುದುಗಲ್ ಯುದ್ಧದ ಪ್ರಸ್ತಾಪವಿದೆಯೇ ಹೊರತು ರಾಯಚೂರಿನ ಮುತ್ತಿಗೆಯ ಪ್ರಸ್ತಾಪ ಬರುವುದಿಲ್ಲ.
2. 1570ರಲ್ಲಿ ಜನಿಸಿದ ಫರಿಶ್ತಾ – 1386ರ ಚರಿತ್ರೆಯನ್ನು ಜನವದಂತಿ ಅಥವಾ ಅವನೇ ಹೇಳುವಂತೆ ಸಲಾತೀನಗಳಂತಹ ಗ್ರಂಥಗಳ ಉಲ್ಲೇಖಿತ ಸಂಗತಿಗಳನ್ನು ಬಳಸಿಕೊಂಡಿದ್ದಾನೆ.

3. ಫರಿಶ್ತಾನ ಕಾವ್ಯೋಕ್ತ ಉಲ್ಲೇಖಗಳು ವಿಜಯನಗರ ಕುರಿತಾಗಿ ನ್ಯೂನಿಜ್ ಹಾಗೂ ಸಿವಿಲ್ ಅವರ ವರದಿಗಳೊಂದಿಗೆ ತಾಳೆ ಹಾಕಿದರೆ ಅನೇಕ ಭಿನ್ನಾಭಿಪ್ರಾಯಗಳು ಗೋಚರಿಸುತ್ತವೆ.

   ಉದಾ: ಯುದ್ಧಕ್ಕೆ ಕಾರಣ ಭಾಗವಹಿಸಿದ ಸೈನ್ಯದಳಗಳ ಸಂಖ್ಯೆ ಇತ್ಯಾದಿ..

4. ಈ ಭಿನ್ನಾಭಿಪ್ರಾಯಗಳನ್ನು ಈಗಾಗಲೇ ತೆಲುಗು ಮೂಲದ ಡಾ. ಓರುಗಂಟಿ ರಾಮಚಂದ್ರಯ್ಯನಂತಹ ವಿದ್ವಾಂಸರು ಚರ್ಚಿಸಿದ್ದಾರೆ.

5. ಪೂರ್ಣಪ್ರಮಾಣದ ಗದ್ಯದಿಂದ ಕೂಡಿದ 'ತಾರೀಖ–ಎ–ಫರಿಶ್ತಾ' ಕೃತಿಯು ಆದಿಲ್‌ಶಾಹಿ ಆಸ್ಥಾನ ಸಾಹಿತ್ಯವಾದರಿಂದ ಅವರ ವೈಭವೀಕರಣಕ್ಕೆ ಹೆಚ್ಚು ಒತ್ತುಕೊಟ್ಟಿರುವುದು ಕಂಡುಬರುತ್ತದೆ.

   ಉದಾ : ಬಾದಶಾಹನ ಸಣ್ಣಪುಟ್ಟ ಅಧಿಕಾರಿಗಳನ್ನು ಹೆಸರಿಸುವ ಫರಿಶ್ತಾ ಕೃಷ್ಣಾತೀರದ ಮುದುಗಲ್ ಕೋಟೆ ಮುತ್ತಿಗೆಯಲ್ಲಿ ವಿಜಯನಗರದ ರಾಜನ ಹೆಸರನ್ನೇ ಉಲ್ಲೇಖಿಸುವುದಿಲ್ಲ.

6. ಈ ಹೊತ್ತು ಆಕರಗಳ ಸರ್ವೇಕ್ಷಣೆ–ಸಂಗ್ರಹ ತುಂಬಾ ತೀವ್ರವಾಗಿ ಮತ್ತು ವೈಜ್ಞಾನಿಕವಾಗಿ ಲಭ್ಯವಾಗುವ ಸಾಧ್ಯತೆ ಇರುವುದರಿಂದ ಈ ಹಿಂದೆ ಆಗಿರುವ ಸಂದೇಹ ಹಾಗೂ ಸಮಸ್ಯೆಗಳನ್ನು ಸರಿಪಡಿಸಿ ಕೊಳ್ಳುವುದರ ಮೂಲಕ ವಿಜಯನಗರದಂತಹ ಐತಿಹಾಸಿಕ ಸಾಮ್ರಾಜ್ಯದ ನಿಜದ ನೆಲೆಯನ್ನು ದಾಖಲಿಸುವ ಅಗತ್ಯವನ್ನು ಈ ಪ್ರಬಂಧದ ಮೂಲಕ ಹೇಳಬಯಸುತ್ತೇನೆ.

❑

31. ಹಂಪಿ ವಿರೂಪಾಕ್ಷ ದೇವಾಲಯದಲ್ಲಿರುವ ಗಣಪತಿ ಕಥಾನಕ ಶಿಲ್ಪಗಳು

– ಶ್ರೀಶೈಲ ಮನಗುತ್ತಿ

ಗಣಪತಿಯು ಹಿಂದೂ ಧರ್ಮದ ಪ್ರಮುಖ ದೇವತೆಗಳಲ್ಲಿ ಒಬ್ಬನಾಗಿದ್ದಾನೆ. ವಿಘ್ನಗಣಗಳಿಗೆ ನಾಯಕನಾದ ಗಣೇಶನನ್ನು ವಿಘ್ನನಿವಾರಕ, ಸಿದ್ಧಿದಾಯಕ ಎಂದು ಪ್ರಾಚೀನ ಕಾಲದಿಂದಲೂ ಪೂಜಿಸಲಾಗುತ್ತಿದೆ. ಶಿವಪುರಾಣದ ಪ್ರಕಾರ ಗಣೇಶನು ಪಾರ್ವತಿ–ಪರಮೇಶ್ವರರ ಮಗ. ಪಾವತಿಯು ತನ್ನ ದೇಹದ ಕೊಳೆ, ಜಿಡ್ಡು ಸೇರಿಸಿಗೊಂಬೆಯನ್ನು ಮಾಡಿ ಅದಕ್ಕೆ ಜೀವ ನೀಡಿದಳು. ತಾನು ಸ್ನಾನ ಮಾಡಿ ಬರುವವರೆಗೆ ಬಾಗಿಲು ಕಾಯುತ್ತಿರಬೇಕೆಂದು ತಿಳಿಸಿದಳು. ಇದಾದ ಸ್ವಲ್ಪ ಸಮಯದ ನಂತರ ಬಂದಪರಮೇಶ್ವರನು ಮನೆಯೊಳಗೆ ಹೋಗಲು ಯತ್ನಿಸಿದಾಗ ಗಣಪತಿಯು ತಡೆಯುತ್ತಾನೆ. ಇದರಿಂದ ಕುಪಿತನಾದ ಶಿವನು ಗಣಪತಿಯ ರುಂಡವನ್ನು ಕತ್ತರಿಸುತ್ತಾನೆ. ಸ್ನಾನಮುಗಿಸಿಕೊಂಡು ಹೊರಗೆ ಬಂದ ಪಾರ್ವತಿಯು ತನ್ನ ಮಗನಿಗಾದ ಸ್ಥಿತಿ ಕಂಡು ಮರುಗುತ್ತಾಳೆ. ಶಿವನು ಅವಳನ್ನು ಸಮಾಧಾನಪಡಿಸಿ, ತನ್ನ ಗಣಗಳಿಗೆ ಉತ್ತರ ದಿಕ್ಕಿನಲ್ಲಿತಲೆಯಿಟ್ಟು ಮಲಗಿರುವ ಜೀವಿಯ ಶಿರವನ್ನು ಕತ್ತರಿಸಿ ತರಲು ಆಜ್ಞೆ ಮಾಡುತ್ತಾನೆ.ಗಣಗಳು ತಂದುಕೊಟ್ಟ ಆನೆಯೊಂದರ ತಲೆಯನ್ನು ಗಣಪತಿಗೆ ಕೂಡಿಸಿ ಜೀವದಾನಮಾಡುತ್ತಾನೆ. ಹೀಗಾಗಿ ಉಮಾಸುತನಾಗಿದ್ದ ಗಣಪತಿಯು ಗಜಾನನನೂ, ಶಿವಸುತನೂ ಆಗುತ್ತಾನೆ. ಅವನನ್ನು ಶಿವನು ಪ್ರಮಥ ಗಣಗಳ ಗುಂಪಿಗೆ ಅಧಿಪತಿಯಾಗಿ ಮಾಡಿದ್ದರಿಂದ ಗಣಪತಿಯು 'ಪ್ರಮಥ ಪತಿ' ಎನಿಸಿದನು.

ಸನ್ನಿವೇಶ : ಕಲ್ಯಾಣಮಂಟಪ ಕಥಾನಕ ಶಿಲ್ಪಗಳಿರುವ ಸ್ತಂಭ





ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿರುವ 2 ನೇ ಪ್ರಾಕಾರದ ಕಲ್ಯಾಣ ಮಂಟಪದಲ್ಲಿ 108 ಸ್ತಂಭಗಳಿವೆ. ಮಂಟಪವನ್ನು ಈಶಾನ್ಯ ದಿಕ್ಕಿನಲ್ಲಿರುವಮೆಟ್ಟಿಲುಗಳನ್ನು ಬಳಸಿ ಪ್ರವೇಶಿಸಿದ ನಂತರ ಕ್ರಮವಾಗಿ ದಕ್ಷಿಣದ 5ನೇ ಸ್ತಂಭದದಕ್ಷಿಣದ ಬದಿಯಲ್ಲಿ ಗಣೇಶನ ಮೂರು ಉಬ್ಬು ಶಿಲ್ಪಗಳಿವೆ. ಇವು ಗಣೇಶನ ಕಥಾನಕಉಬ್ಬು ಶಿಲ್ಪಗಳಾಗಿದ್ದು, ಸ್ತಂಭದ ದಂಡಾಗ್ರ ಭಾಗ, ದಂಡಭಾಗ ಹಾಗೂ ಪಾದಭಾಗದಲ್ಲಿವೆ.

ಪ್ರತಿಮಾಶಾಸ್ತ್ರದ ವಿವರಣೆ :

'ಮಾನಸೋಲ್ಲಾಸ'ವು – ಗಣಪತಿ ಶಿಲ್ಪದ ಲಕ್ಷಣಗಳನ್ನು ಹೀಗೆ ತಿಳಿಸಿದೆ. ಆನೆಯ ಮುಖದಲ್ಲಿ ಮೂರು ಕಣ್ಣು, ಎರಡು ಅಗಲವಾದ ಸ್ತಬ್ಧವಾದಂತಿರುವ ಕಿವಿಗಳು, ಚತುರ್ಭುಜಗಳು ಇರಬೇಕೆಂದಿದೆ. ಬಲಗೈಯಲ್ಲಿ ತುಂಡಾದ ದಂತ ಮತ್ತು ಕಮಲವಿದ್ದು, ಎಡಗೈಯಲ್ಲಿ ಪರಶು ಮತ್ತು ಉಂಡೆ ಇರುತ್ತದೆ. ಸಕಲ ಆಭರಣಗಳನ್ನು ಧರಿಸಿದ ಇವನಿಗೆ ನಾಗಯಜ್ಞೋಪವೀತ ಇರುತ್ತದೆ. ಪಕ್ಕದಲ್ಲಿ ಸಿದ್ಧಿ ಬುದ್ಧಿಯರು ಕುಳಿತಿದ್ದು, ಉತ್ತಮಪೀಠದ ಮೇಲೆ ಆಸೀನನಾದಂತೆ ಬಿಡಿಸಬೇಕು ಇವನ ವಾಹನ ಇಲಿ ಎಂದು ತಿಳಿಸಿದೆ'. 'ಮಯಮತ'ದ ಪ್ರಕಾರ – "ಏಕದಂತವುಳ್ಳ ಆನೆಯ ಶಿರವನ್ನು ಹೊಂದಿದ ಗಣೇಶನಿಗೆ ತ್ರಿನೇತ್ರ, ಚತುರ್ಭುಜಗಳಿರುತ್ತವೆ. ಕುಬ್ಜಾಕಾರದ ಗಣೇಶನು ಉಬ್ಬಿದಹೊಟ್ಟೆಯುಳ್ಳವನು (ಲಂಬೋದರ). ನಾಗಯಜ್ಞೋಪವೀತ, ನಾಗ ಉದರಬಂಧಗಳನ್ನುಧರಿಸಿದ್ದು, ಶಿರದಲ್ಲಿ ಚಂದ್ರಲಾಂಛನವುಳ್ಳ ಗಣಪತಿಗೆ ಕಟಿವಸ್ತ್ರದಿಂದ ಕೆಳಭಾಗದಲ್ಲಿ ಪೀತಾಂಬರವೂ ಇರುತ್ತದೆ. ಕಾಲುಗಳಲ್ಲಿ ಕಡಗ, ಪಾದಜಾಲಕವಿದ್ದು, ಪಾದದ ಬಳಿ ಅವನವಾಹನದ ಇಲಿಯನ್ನು ಬಿಡಿಸಬೇಕು. ಗಣಪತಿಯ ಬಲಗೈಗಳಲ್ಲಿ ದಂತ, ಅಂಕುಶವೂ,ಎಡಗೈಗಳಲ್ಲಿ ಅಕ್ಷಮಾಲೆ, ಮೋದಕವೂ ಇರಬೇಕು. ಗಣಪತಿಯ ಸೊಂಡಿಲು ಎಡಗಡೆಗೆತಿರುಗಿದ್ದು, ಮೋದಕದ ಪಾತ್ರೆಯ ಬಳಿ ಇರುತ್ತದೆ. ಅಲ್ಲದೇ ಗಣಪತಿ ಮೂರ್ತಿಯನ್ನು

ಕುಳಿತಂತೆ ಅಥವಾ ನಿಂತ ಭಂಗಿಯಲ್ಲಿ ಇಲ್ಲವೇ ನೃತ್ಯಭಂಗಿಯಲ್ಲಿ ಬಿಡಿಸಬೇಕು".ಸಾಮಾನ್ಯವಾಗಿ ಗಣಪತಿಯ ಶಿಲ್ಪವು ಆಸೀನ ಮೂರ್ತಿಯಾಗಿದ್ದು, ಚತುರ್ಭುಜಯಾಗಿರುತ್ತದೆ. ಸುಮಾರು 10ನೇ ಶತಮಾನದವರೆಗೆ ಗಣಪತಿಯ ಶಿಲ್ಪವನ್ನು ಶಿವಾಲಯದಲ್ಲಿ ಪರಿವಾರ ದೇವತೆಯಾಗಿಯೇ ರೂಪಿಸುತ್ತಿದ್ದರು. ಅಲ್ಲದೇ ಊರ ಮುಂದೆ ಹೆಬ್ಬಾಗಿಲು ಬಳಿ, ಕೋಟೆ ಬಾಗಿಲು ಬಳಿ, ಊರ ರಕ್ಷಕ ದೇವತೆಯಂತೆ ಗಣಪತಿ ಗುಡಿಗಳನ್ನು ನಿರ್ಮಿಸುತ್ತಿದ್ದರು. ಇಲ್ಲೆಲ್ಲ ಗಣಪತಿ ಶಿಲ್ಪಗಳ ಲಕ್ಷಣಗಳು ಇಂತಿವೆ. ಪೀಠದ ಮೇಲೆ ಸುಖಾಸೀನ ಭಂಗಿಯಲ್ಲಿ ಕುಳಿತ ಗಣಪತಿಯ ಸೊಂಡಿಲು ಎಡಗಡೆಗೆ ಚಾಚಿರುತ್ತದೆ. ಶಿರದಲ್ಲಿ ಚಿಕ್ಕದಾದ ಕರಂಡಮುಕುಟವಿದ್ದು, ಕೈಗಳಲ್ಲಿ ಕ್ರಮವಾಗಿ ಅಭಯ, ಪರಶು, ಪಾಶ ಮತ್ತು ಮೋದಕನ ಪಾತ್ರೆ ಇರುತ್ತದೆ. ಈ ಗಣಪತಿಯ ಸೊಂಡಿಲು ಎಡಗಡೆಗೆ ಸುತ್ತಿಕೊಂಡಿದ್ದರೆ ಎಡಮುರಿ ಗಣಪತಿ ಎಂದೂ, ಸೊಂಡಿಲು ಬಲಗಡೆಗೆಸುತ್ತಿಕೊಂಡಿದ್ದರೆ, ಬಲಮುರಿ ಗಣಪತಿ ಎಂದೂ ಕರೆಯುವರು. ಬಲಮುರಿ ಗಣಪತಿಯು ಶೀಘ್ರ ವರಪ್ರದಾಯಕನೆಂಬ ನಂಬಿಕೆ ಇದೆ.

ಕಥಾನಕ ಶಿಲ್ಪ ಕುರಿತು ಪುರಾಣ ಕಥೆ:

ಕೈಲಾಸದಲ್ಲಿ ಶಿವ–ಪಾರ್ವತಿಯರು ತಮ್ಮ ಪುತ್ರರಾದ ಗಣೇಶ ಮತ್ತು ಕಾರ್ತಿಕೇಯರೊಂದಿಗೆ ಕಾಲ ಕಳೆಯುತ್ತಿದ್ದರು. ಒಂದು ದಿನ ಶಿವ–ಪಾರ್ವತಿಯರು ತಮ್ಮ ಪುತ್ರರಿಗೆ ಎರಡು ಸುಂದರ ಹಣ್ಣುಗಳನ್ನು ತೋರಿಸಿ, ಇವುಗಳನ್ನು ಸೇವಿಸಿದವರಿಗೆ ವಿಶೇಷವಾದ ಜ್ಞಾನ ಪ್ರಾಪ್ತಿಯಾಗುತ್ತದೆ ಎಂದು ಹೇಳಿದರು. ಇವುಗಳನ್ನುಪಡೆಯಬೇಕಾದರೆ ತಾವು ಏರ್ಪಡಿಸುವ ಸ್ಪರ್ಧೆಯಲ್ಲಿ ವಿಜೇತರಾಗಬೇಕೆಂದರು. ಪ್ರಪಂಚವನ್ನು ಮೂರು ಬಾರಿ ಪ್ರದಕ್ಷಿಣೆ ಹಾಕಿ ಮೊದಲಿಗರಾಗಿ ಬಂದವರಿಗೆ ಹಣ್ಣುಗಳನ್ನು ನೀಡುವುದಾಗಿ ಹೇಳಿದರು. ಕಾರ್ತಿಕೇಯನು ತನ್ನ ವಾಹನವಾದ ನವಿಲನ್ನು ಏರಿ ಪ್ರಪಂಚ ಪ್ರದಕ್ಷಿಣೆ ಹಾಕಲು ಹೊರಟೇ ಬಿಟ್ಟನು. ಆದರೆ ಗಣೇಶನಿಗೆ ತನ್ನ ದೇಹದ್ದೇ ಚಿಂತೆಯಾಗಿತ್ತು. ತನ್ನ ಡೊಳ್ಳು ದೇಹವನ್ನಿಟ್ಟುಕೊಂಡು ನಿಧಾನವಾಗಿ ಸಾಗಿದರೆ ಯಾವುದೇ ರೀತಿಯಲ್ಲೂ ತಾನು ಕಾರ್ತಿಕೇಯನನ್ನು ಹಿಂದಿಕ್ಕಲಾರೆನೆಂಬುದು ಅವನಿಗೆ ಚೆನ್ನಾಗಿ ತಿಳಿದಿತ್ತು. ಆದರೆ ಅವನ ಬುದ್ಧಿಯು ಅವನ ಸಮಸ್ಯೆಗೆ ಸೂಕ್ತ ಪರಿಹಾರಸೂಚಿಸಿತ್ತು. ಅವನು ಮರುಯೋಚಿಸದೇ ತನ್ನ ಜನ್ಮದಾತರಾದ ಪಾರ್ವತಿ–ಪರಮೇಶ್ವರರಿಗೆ ಪ್ರದಕ್ಷಿಣೆ ಹಾಕಿ ನಿಂತನು. ತನ್ನ ಮಾತಾಪಿತರಾದ ಶಿವ–ಪಾರ್ವತಿಯರಲ್ಲಿ ಇಡೀ ಜಗತ್ತೇ ಮೈದುಂಬಿರಲು, ಅವರೇ ಸರ್ವಸ್ವವಾಗಿರುವಾಗ ನಾನುಬೇರೆಲ್ಲೂ ಹೋಗಬೇಕಾದ ಅವಶ್ಯಕತೆಯಿಲ್ಲ ಎಂದು ಗಣೇಶನು ತನ್ನ ನಿಲುವನ್ನು ಸಮರ್ಥಿಸಿಕೊಂಡನು. ಕೊನೆಗೆ ಗಣೇಶನೇ ಪಂದ್ಯ ಗೆದ್ದು ಆ ಸುಂದರ ಹಣ್ಣುಗಳನ್ನು ತನ್ನದಾಗಿಸಿಕೊಂಡು ಸೇವಿಸಿ ವಿಶೇಷ ಜ್ಞಾನ ಪಡೆದನು.

ಕಥಾನಕ ಶಿಲ್ಪಗಳ ವಿವರ :

1. ಸ್ತಂಭದ ಪಾದ ಭಾಗದಲ್ಲಿರುವ ಗಣಪತಿ ಉಬ್ಬು ಶಿಲ್ಪ :




ಈ ಉಬ್ಬು ಶಿಲ್ಪವು ಭದ್ರಪೀಠದ ಮೇಲೆ ನೃತ್ಯ ಭಂಗಿಯಲ್ಲಿದೆ. ಶಿಲ್ಪದ ಅಗಲ 1ಅಡಿ ಇದ್ದು, ಎತ್ತರ 1.5 ಅಡಿ ಇದೆ. ಗಣಪತಿ ಕರಂಡಮಕುಟಧಾರಿಯಾಗಿದ್ದಾನೆ. ಇದು ಎಡಮುರಿ ಗಣಪತಿ ಶಿಲ್ಪವಾಗಿದ್ದು ನಾಲ್ಕು ಕೈಗಳಿವೆ. ಮೇಲಿನ ಬಲಗೈಯಲ್ಲಿ ಪಾಶ ಹಾಗೂ ಎಡಗೈಯಲ್ಲಿ ಅಂಕುಶಗಳಿವೆ. ಕೆಳಗಿನ ಬಲಗೈಯಲ್ಲಿ ದಂತವಿದ್ದು, ಎಡಗೈ ದಂಡಹಸ್ತವಾಗಿದೆ. ಕಟಿಭಾಗದಲ್ಲಿ ಉರಧಾಮವಿದೆ.

2. ಸ್ತಂಭದ ದಂಡಭಾಗದಲ್ಲಿರುವ ಗಣಪತಿ ಉಬ್ಬು ಶಿಲ್ಪ:



ಈ ಶಿಲ್ಪವು ಸಾದಾಪೀಠದ ಮೇಲೆ ಸುಖಾಸನದಲ್ಲಿದೆ. ಇಲ್ಲಿ ಗಣಪತಿಯವಾಹನವಾದ ಇಲಿಯನ್ನು ಕಾಣಬಹುದು, ಕರಂಡಮಕುಟವಿದೆ. (ಸರಳ) ಈ ಶಿಲ್ಪವು1 ಅಡಿ ಅಗಲವಿದ್ದು, 1.5 ಅಡಿ ಎತ್ತರವಿದೆ. ಇದು ಕೂಡ ಎಡಮುರಿ ಗಣಪತಿಶಿಲ್ಪವಾಗಿದ್ದು ನಾಲ್ಕು ಕೈಗಳಿವೆ. ಮೇಲಿನ ಬಲಗೈಯಲ್ಲಿ ಪಾಶ ಹಾಗೂ ಎಡಗೈಯಲ್ಲಿ ಅಂಕುಶಗಳಿವೆ. ಕೆಳಗಿನ ಬಲಗೈಯಲ್ಲಿ ದಂತವಿದ್ದು, ಎಡಗೈಯಲ್ಲಿ ಮೋದಕವಿದೆ. (ಭಗ್ನ)

3. ಸ್ತಂಭದ ದಂಡಾಗ್ರ ಭಾಗದಲ್ಲಿರುವ ಗಣಪತಿ ಉಬ್ಬು ಶಿಲ್ಪ:



ಈ ಶಿಲ್ಪವು ತುಂಬಾ ವಿಶೇಷವಾಗಿದ್ದು, ಗಣೇಶನು ತನ್ನ ವಾಹನವಾದ ಇಲಿಯ ಮೇಲೆ ಕುಳಿತು, ವಿಶ್ವ ಪರ್ಯಟನೆ (ತಂದೆ–ತಾಯಿ ಸುತ್ತ) ಮಾಡುತಿದ್ದಾನೆ. ಶಿರಭಾಗದಲ್ಲಿ ಕರಂಡಮಕುಟವಿದ್ದು ಸರಳವಾಗಿದೆ. ಈ ಶಿಲ್ಪದ ಅಳತೆ ಸುಮಾರು 1ಅಡಿ ಅಗಲ ಹಾಗೂ 1 ಅಡಿ ಎತ್ತರ ಇದೆ.ಗಣಪತಿಯು ಚತುರ್ಭುಜಗಳನ್ನು ಹೊಂದಿದ್ದು, ಮೇಲಿನ ಬಲಗೈಯಲ್ಲಿ ಪಾಶಹಾಗೂ ಎಡಗೈಯಲ್ಲಿ ಅಂಕುಶಗಳಿವೆ. ಕೆಳಗಿನ ಬಲಗೈಯಲ್ಲಿ ದಂತವಿದ್ದು, ಎಡಗೈಯಲ್ಲಿ ಮೋದಕವಿದೆ. ಹಂಪಿ ಪರಿಸರಲ್ಲಿರುವ ಎರಡು ಬೃಹತ್ ಗಾತ್ರದ ಶಿಲ್ಪಗಳಾದ ಕಡಲೆಕಾಳು ಗಣೇಶ ಹಾಗೂ ಸಾಸಿವೆಕಾಳು ಗಣೇಶ ಶಿಲ್ಪಗಳು ಭವ್ಯತೆಯನ್ನು ತೋರಿಸಿದರೆ, ವಿರೂಪಾಕ್ಷ ದೇವಾಲಯದಲ್ಲಿರುವ ಈ ಕಥಾನಕ ಶಿಲ್ಪವು ಪುರಾಣ ಪ್ರಸಂಗವಾದ ಗಣೇಶ–ಕಾರ್ತಿಕೇಯರ ವಿಶ್ವ ಪರ್ಯಟನೆಯನ್ನು ವಿವರಿಸುವ ಅನನ್ಯ ಕಥಾನಕ ಶಿಲ್ಪವಾಗಿದೆ ಎಂದುಹೇಳುವುದು ನನ್ನ ಪ್ರಬಂಧದ ಮೂಲ ಆಶಯವಾಗಿದೆ. ಇದೇ ತೆರನಾದ ಶಿಲ್ಪವು ತಲಕಾಡಿನವೈದ್ಯೇಶ್ವರ ದೇವಾಲಯದಲ್ಲಿಯೂ ಇದೆ.

ಆಕರಸೂಚಿ :

1) ಡಾ॥ ಎಂ. ಎನ್. ಕಡಪಟ್ಟಿ – **'ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ'**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ–ಧಾರವಾಡ
2) **'ಕನ್ನಡ ವಿಷಯ ವಿಶ್ವಕೋಶ' – ಇತಿಹಾಸ ಮತ್ತು ಪುರಾತತ್ವ'**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.– ಮೈಸೂರು.
3) ಡಾ॥ (ಶ್ರೀಮತಿ) ಕೆ. ವಸಂತಲಕ್ಷ್ಮೀ– **'ಕರ್ನಾಟಕದ ಶೈವ ಶಿಲ್ಪಗಳು'**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ–ಧಾರವಾಡ
4) ಕೂ.ಸ. ಅಪರ್ಣ – **'ದೇವಾಲಯ ವಾಸ್ತುಶಿಲ್ಪ ಪರಿಚಯ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ – ಹಂಪಿ
5) ಎಸ್.ಕೆ. ರಾಮಚಂದ್ರರಾವ್ – **'ಮೂರ್ತಿಶಿಲ್ಪದ ನೆಲೆ–ಹಿನ್ನೆಲೆ'**
6) ಡಾ॥ ಮೈಸೂರು ನಾಗರಾಜ ಶರ್ಮಾ – **'ಹೊಯ್ಸಳ ಶಿಲ್ಪದಲ್ಲಿ ಶಿವ'**, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು.

❑

ಭಾರತೀಯ ಸಂಸ್ಕೃತಿ, ಧರ್ಮ, ಸಮಾಜೋದ್ಧಾರ, ಜನಪದದ ರಕ್ಷಣೆಯಂತಹ ಮಹಾನ್ ಧ್ಯೇಯಗಳೊಡನೆ ಸ್ಥಾಪನೆಯಾದ ಮಹಾಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯ. ಸುಮಾರು 400 ವರ್ಷಗಳು ಅತ್ಯಂತ ವೈಭವದಿಂದ ಮೆರೆದ ಸಾಮ್ರಾಜ್ಯವು ರಕ್ಕಸ–ತಂಗಡಗಿಯ ಯುದ್ಧದಲ್ಲಿ ಹಾಳಾಗಿ, ರಾಜಧಾನಿಯಾಗಿದ್ದ ಹಂಪೆಯು ಹಾಳು ಹಂಪೆಯಾದದ್ದು ಇತಿಹಾಸದ ದುರಂತಗಳಲ್ಲಿ ಒಂದು.

ಈ ಮಹಾನ್ ಸಾಮ್ರಾಜ್ಯದ ಅವಶೇಷಗಳು, ಸ್ಮಾರಕಗಳು ಅನೇಕ ಚದರ ಕಿಲೋಮೀಟರ್‌ಗಳಷ್ಟು ಪ್ರದೇಶದಲ್ಲಿ ವ್ಯಾಪಿಸಿವೆ. ಈ ಸಾಮ್ರಾಜ್ಯದ ಇತಿಹಾಸ, ಸಂಸ್ಕೃತಿ ಇತ್ಯಾದಿಗಳ ಅಧ್ಯಯನವು 150 ವರ್ಷಗಳಷ್ಟು ಹಿಂದೆಯೇ ಆರಂಭಗೊಂಡು, ಇಂದಿಗೂ ಸತತವಾಗಿ ನಡೆಯುತ್ತಲೇ ಇದೆ. ಶಾಸನಗಳು, ನಾಣ್ಯಗಳು, ದೇವಾಲಯಗಳು, ವಾಸ್ತುಶಿಲ್ಪ, ಶಿಲ್ಪಕಲೆ, ಸಾಹಿತ್ಯ ಮುಂತಾದ ವಿಷಯಗಳಲ್ಲಿ ನಡೆಯುತ್ತಿರುವ ಹೊಸ ಶೋಧಗಳು, ಹಿಂದಿನ ಅಧ್ಯಯನಗಳ ಪುನರ್ ವಿಮರ್ಶೆಗಳು ಅಧ್ಯಯನದ ವಿಶಾಲವಾದ ಹರವನ್ನು ತೋರುತ್ತಿವೆ.

ಈ ಹಿನ್ನೆಲೆಯಲ್ಲಿ ರಾಜ್ಯ ಪುರಾತತ್ತ್ವ ಇಲಾಖೆಯ ವಿಜಯನಗರ ಅಧ್ಯಯನವೆಂಬ ವಿಚಾರ ಸಂಕಿರಣವು ಮಹತ್ತ್ವದಾಗಿದ್ದು, ಅನೇಕ ಸಂಶೋಧಕರು ತಮ್ಮ ಸಂಪ್ರಬಂಧಗಳನ್ನು ಇಲ್ಲಿ ಮಂಡಿಸಿ, ನೂತನ ವಿವರಗಳನ್ನು ಪ್ರಸ್ತುತಪಡಿಸುತ್ತಿದ್ದಾರೆ. ಈ ಸಂಪ್ರಬಂಧಗಳ ಸಂಪುಟವೇ ವಿಜಯನಗರ ಅಧ್ಯಯನವೆಂಬ ಹೆಸರಿನಿಂದ ಪ್ರತಿವರ್ಷವೂ ಪ್ರಕಟವಾಗುತ್ತಿದ್ದು, ಪ್ರಸ್ತುತ ಸಂಪುಟವು ಈ ಮಾಲಿಕೆಯ 22 ನೆಯ ಸಂಪುಟವಾಗಿದ್ದು, ಇದರಲ್ಲಿ ಅನೇಕ ಮೌಲಿಕ ಬರಹಗಳು ಎಡೆವಡೆದಿದ್ದು, ಸಂಶೋಧಕರಿಗೆ ಪ್ರಮುಖವಾದ ಆಕರ ಸಂಪುಟವಾಗಿ ರೂಪುಗೊಂಡಿದೆ.



ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

2020